ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು: ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ

ಸಂಶೋಧಕ

ವೆಂಕನಗೌಡ

ಮಾರ್ಗದರ್ಶಕರು

ಡಾ ಕೆ ಕೇಶವನ್‌ಪ್ರಸಾದ್

ಪ್ರವಾಚಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ, ೫೮೩ ೨೭೬

೨೦೦೨

28

28

ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು: ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ಮಹಾಪ್ರಬಂಧ

ಸಂಶೋಧಕ
ವೆಂಕಟಗೌಡ

ಮಾರ್ಗದರ್ಶಕರು
ಡಾ ಕೆ ಕೇಶವನ್‌ಪ್ರಸಾದ್
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೨



ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು: ಒಂದು ಅಧ್ಯಯನ

ಸಂಶೋಧಕ
ವೆಂಕನಗೌಡ

ಪ್ರಮಾಣ ಪತ್ರ

"ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು: ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ.ಕೆ. ಕೇಶವನ್‌ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು, ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೦.೯.೦೨
ಸ್ಥಳ : ವಿದ್ಯಾರಣ್ಯ

ವೆಂಕನಗೌಡ
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಶ್ರೀ ವೆಂಕನಗೌಡ ಇವರು "ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು: ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು, ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30.09.02
ಸ್ಥಳ : ವಿದ್ಯಾರಣ್ಯ

ಡಾ.ಕೆ. ಕೇಶವನ್‌ಪ್ರಸಾದ್
ಮಾರ್ಗದರ್ಶಕರು ಹಾಗೂ ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮನತುಂಬಿದವರಿಗೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಇಂದಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರಿಗೆ, ಹಾಗೂ ಕುಲಸಚಿವರಾದ ಡಾ.ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ನನ್ನ ಅಧ್ಯಯನದುದ್ದಕ್ಕೂ ಮಾರ್ಗದರ್ಶನ ನೀಡಿ ನನ್ನ ಹಿರಿಯಣ್ಣನಂತೆ ಸಹಕರಿಸಿದ ಡಾ.ಕೆ. ಕೇಶವನ್ ಪ್ರಸಾದ್ ಅವರಿಗೆ, ನನಗೆ ಸೂಕ್ತ ಸಲಹೆ ಮತ್ತು ಆಕರಗಳನ್ನು ಒದಗಿಸಿದ ಡಾ.ಕೆ.ಎಂ. ಮೈತ್ರಿ ಮತ್ತು ಶ್ರೀ.ಎ.ಎಸ್. ಪ್ರಭಾಕರ್ ಅವರಿಗೆ, ಮತ್ತು ನನ್ನ ಅಧ್ಯಯನದ ಚೌಕಟ್ಟನ್ನು ನಿರ್ಮಿಸಿಕೊಳ್ಳಲು ಸೂಕ್ತ ಸಲಹೆ ನೀಡಿದ ಹಿರಿಯರಾದ ಜೆ. ರಾಮಮೂರ್ತಿ ಮತ್ತು ಡಾ. ಹಿ.ಚಿ. ಬೋರಲಿಂಗಯ್ಯ, ಚೆಲುವರಾಜು, ಗಂಗಾಧರ ದೈವಜ್ಞ, ಡಾ.ಕೆ.ರವೀಂದ್ರನಾಥ್ ಅವರಿಗೆ ಕೃತಜ್ಞತೆಗಳು.

ವ್ಯವಸಾಯ ಹಾಗೂ ಕುಟುಂಬದ ಸಂಕಷ್ಟಗಳನ್ನು ಸಹಿಸಿಕೊಂಡು ತಮ್ಮ ಜೀವನವನ್ನೇ ತೇದು ನನ್ನ ಅಧ್ಯಯನಕ್ಕೆ ಜೀವತುಂಬಿದ ನನ್ನ ತಂದೆ ಮಲ್ಲನಗೌಡ ತಾಯಿ ಗೌರಮ್ಮ ಅವರಿಗೆ ಅಭಾರಿಯಾಗಿದ್ದೇನೆ. ಹಾಗೆಯೇ ಅಕ್ಕ ಎರೆಮ್ಮ, ಅಣ್ಣ ಸಿದ್ಧರಾಮನಗೌಡ, ತಂಗಿ ರಿಂದಮ್ಮ, ಸೊಸೆ ರತ್ನ ಮತ್ತು ಪುಟಾಣಿ ಸಂಧ್ಯಾ, ನನ್ನ ಅಕ್ಕಂದಿರಂತೆ ಆತ್ಮೀಯತೆಯಿಂದ ಕಂಡ ಶ್ರೀಮತಿ ಭಾಗ್ಯಪ್ರಭಾಕರ್, ಶಾಂತಾಕೇಶವನ್‌ಪ್ರಸಾದ್ ಅವರನ್ನು, ಸದಾ ಜೀವನದುದ್ದಕ್ಕೂ ನನ್ನನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದ ಬಸಮ್ಮ, ಚೆನ್ನಯ್ಯಸ್ವಾಮಿ ಅವರಿಗೆ, ಆಂಧ್ರಪ್ರದೇಶದ ಕೆಲವು ಕಡೆ ಕ್ಷೇತ್ರಕಾರ್ಯಕ್ಕೆ ಹೋದಾಗ ನನಗೆ ಹಲವಾರು ರೀತಿಯಲ್ಲಿ ನೆರವಾದ ಆರ್.ವೆಂಕಟಲಕ್ಷ್ಮಿ ಮತ್ತು ಅವರ ಪುತ್ರಿ ಆರ್.ರಾಜಲಕ್ಷ್ಮಿಯರಿಗೆ, ಬುಡಗಜಂಗಾಲರ ಸಮುದಾಯದ ಶ್ರೀನಿವಾಸ, ಕೊಡಪಲ್ಲಿ ವೀರಭದ್ರಪ್ಪ, ಪ್ರತಾಪ, ಮತ್ತು ನನಗೆ ಮಾಹಿತಿ ನೀಡಿದ ಎಲ್ಲಾ ವಕ್ತೃಗಳಿಗೂ ನನ್ನ ತುಂಬ ಹೃದಯದ ಕೃತಜ್ಞತೆಗಳು.

ಅಧ್ಯಯನದ ಹಾಗೂ ಪ್ರಬಂಧದ ರಚನೆಯ ಸಂದರ್ಭದಲ್ಲಿ ಸಹಕಾರ ನೀಡಿದ ಹಿರಿಯ ಸಂಶೋಧಕ ಮಿತ್ರರೂ ಹಾಗೂ ಆತ್ಮೀಯರಾದ ವಿ.ಸೀ. ಮಾರುತಿ, ಚೆನ್ನಪ್ಪ, ಜಿ.ಉಮೇಶ್, ಯರ‍್ರಿಸ್ವಾಮಿ ಮತ್ತು ನಾಗಭೂಷಣಪಾಟೀಲ್, ನಿಂಗಪ್ಪ, ಕೇಶವಮೂರ್ತಿ, ನಾಗಭೂಷಣ, ಬೈರಾಪುರ, ಯರ‍್ರಿಸ್ವಾಮಿ, ರಾಜೇಗೌಡ, ವೀರನಗೌಡ, ಶಿವ ಮತ್ತು ವಿ.ಆರ್.ಎಲ್.ನ ಎಲ್ಲಾ ಗೆಳೆಯರನ್ನು ವಿಶೇಷವಾಗಿ ಸ್ಮರಿಸುವೆ.

ಸೂಕ್ತ ಸಮಯದಲ್ಲಿ ನನ್ನ ಅಧ್ಯಯನಕ್ಕೆ ರಜೆ ನೀಡಿ ಸಹಕರಿಸಿದ ಎ.ಬಸವನಗೌಡ, ಮತ್ತು ವಿ.ಆರ್.ಎಲ್. ಮಾಲೀಕರಾದ ವಿಜಯಸಂಕೇಶ್ವರ್ ಅವರ ಸಹಾಯವನ್ನು ಎಂದಿಗೂ ಮರೆಯಲಾರೆನು.

ಗ್ರಂಥಾಲಯದಲ್ಲಿ ಪರಮಾರ್ಶನ ನಡೆಸಲು ಸಹಕರಿಸಿದ ಗ್ರಂಥಾಲಯದ ಸಿಬ್ಬಂಧಿ ವರ್ಗದವರಿಗೆ ಮತ್ತು ಗಣಕಯಂತ್ರದಲ್ಲಿ ಸುಂದರವಾಗಿ ವಿಷಯವನ್ನು ಸಿದ್ಧಪಡಿಸಿದ ವೈ.ಎಂ. ಶರಣಬಸವ ಅವರನ್ನು ಆತ್ಮೀಯತೆಯಿಂದ ನೆನೆಯುತ್ತೇನೆ.

ವೆಂಕನಗೌಡ

ಪರಿವಿಡಿ

ಅಧ್ಯಾಯ ೧

೧.೧. ಅಧ್ಯಯನದ ಉದ್ದೇಶ ೧-೧೦

೧.೨. ವ್ಯಾಪ್ತಿ

೧.೩. ಅಧ್ಯಯನ ವಿಧಾನ

ಅಧ್ಯಾಯ ೨

ಭೌಗೋಳಿಕ ಹಿನ್ನೆಲೆ ೧೧-೩೯

೨.೧. ಪರಿಸರ

೨.೨. ಪ್ರದೇಶ

೨.೩. ಜನಸಂಖ್ಯೆ

೨.೪. ಮೂಲ ಮತ್ತು ಪ್ರಸಾರ

೨.೫. ಇತರ ಬುಡಕಟ್ಟುಗಳೊಡನೆ ಇವರ ಸಾಮ್ಯತೆ

೨.೬. ಹಗಲು ವೇಷಗಾರರ ಬಳಿಗಳು ಮತ್ತು ಸಂಬಂಧ

ಅಧ್ಯಾಯ ೩

ಪದ ನಿಷ್ಪತ್ತಿ ಪ್ರಾಚೀನತೆ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ೪೦-೮೨

೩.೧. ಪದನಿಷ್ಪತ್ತಿ

೩.೨. ಐತಿಹಾಸಿಕ ಹಿನ್ನೆಲೆ

೩.೩. ಪೌರಾಣಿಕ ಹಿನ್ನೆಲೆ

೩.೪. ಸಾಹಿತ್ಯ ಸಮೀಕ್ಷೆ

೩.೫. ಶಾಸನಗಳ ಸಮೀಕ್ಷೆ

ಅಧ್ಯಾಯ ೪

ಸಾಮಾಜಿಕ ಸ್ಥಿತಿಗತಿ ೮೩-೯೬

೪.೧. ಸ್ವಾತಂತ್ರ್ಯ ಪೂರ್ವದಲ್ಲಿ

೪.೨. ಸ್ವಾತಂತ್ರ್ಯ ನಂತರ

೪.೩. ಕೇಂದ್ರ ಸರ್ಕಾರ ರಾಜ್ಯ ಸರ್ಕಾರ

೪.೪. ಅಭಿವೃದ್ಧಿ ಯೋಜನೆಗಳು

೪.೫. ಶೈಕ್ಷಣಿಕ ಯೋಜನೆಗಳು

೪.೬. ಮೀಸಲಾತಿ ಸಂಬಂಧ ಮತ್ತು ವಿಲೀನಿಕರಣ

ಅಧ್ಯಾಯ ೫

ಸಮುದಾಯದ ನ್ಯಾಯತೀರ್ಮಾನ ವ್ಯವಸ್ಥೆ ೯೭-೧೧೩

೫.೧. ಕುಲಪಂಚಾಯಿತಿ ತೀರ್ಮಾನ

೫.೨. ಕಡ್ಡಿ ಪಂಚಾಯಿತಿ

೫.೩. ಕಳ್ಳು ಪಂಚಾಯಿತಿ

೫.೪. ಇತರ ಸಂಬಂಧ ನ್ಯಾಯತೀರ್ಮಾನ

೫.೫. ಕುಲಬಹಿಷ್ಕಾರ ಮತ್ತು ಸೇರಿಸಿಕೊಳ್ಳುವುದು

೫.೬. ಕಳ್ಳರನ್ನು ಹಿಡಿಯುವ ಬಗೆ

ಅಧ್ಯಾಯ ೬

ಹಗಲುವೇಷಗಾರರ ಸಾಂಸ್ಕೃತಿಕ ಕೊಡುಗೆ ೧೧೪-೧೪೯

೬.೧. ವೇಷಭೂಷಣಗಳು

೬.೨. ಬುರ್‍ರ ಕಥೆಗಳು

೬.೩. ಭಾಷೆ

ಅಧ್ಯಾಯ ೭

ಹಗಲು ವೇಷಗಾರರ ಆಚರಣೆಗಳು ೧೫೦-೨೧೫

೭.೧. ಜನನ

೭.೨. ಋತುಮತಿ

೭.೩. ವಿವಾಹ

೭.೪. ಮರಣ

೭.೫. ಧರ್ಮಗಳು

೭.೬. ವೈದ್ಯ

೭.೭. ನಂಬಿಕೆ ನಿಷೇಧಗಳು

ಅಧ್ಯಾಯ ೮

ವೃತ್ತಿ ಮತ್ತು ಕುಲಕಸುಬು ೨೧೬-೨೫೧

೮.೧. ವೇಷಗಾರಿಕೆ

೮.೨. ಬೇಟೆ

೮.೩. ಸಣ್ಣ ಕೈಗಾರಿಕೆ

೮.೪. ಗೃಹ ಕೈಗಾರಿಕೆ

೮.೫. ಭಿಕ್ಷೆ

೮.೬. ವ್ಯಾಪಾರ

ಅಧ್ಯಾಯ ೯

ಉಪಸಂಹಾರ ೨೫೨-೨೫೬

ಅನುಬಂಧ ೨೫೭-೨೭೫

ಪರಮಾರ್ಶನಗ್ರಂಥ

ಹಾಡುಗಳು

ಅರ್ಥಕೋಶ

ಗಾದೆಮಾತುಗಳು

ಒಡಪುಗಳು

ವಕ್ತೃವಿವರ

ವ್ಯಕ್ತಿ ಪರಿಚಯ

ಛಾಯಚಿತ್ರಗಳು

ಅಧ್ಯಾಯ ೧

ಅಧ್ಯಯನದ ಉದ್ದೇಶ

೧.೨. ವ್ಯಾಪ್ತಿ
೧.೩. ಅಧ್ಯಯನ ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪ್ರಪಂಚ ಇಂದು ಮಾನವ ಸಂಸ್ಕೃತಿಯ ಏಕೀಕರಣದ ಕಡೆಗೆ ಸಾಗುತ್ತಿದೆ. ಅಂದರೆ ಈ ಪ್ರಾಪಂಚಿಕ ಸಂಸ್ಕೃತಿಯಲ್ಲಿ ಪ್ರಧಾನವಾಗಿ ಮಾನವನ ವೈವಿಧ್ಯಮಯ ಸಂಸ್ಥೆಗಳು ಏಕಸೂತ್ರವನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಚಿಂತನಾಶಕ್ತಿ ಇರುವ ಮನುಷ್ಯ ತನ್ನ ಅಸಮಾನಗಳ ಬೌದ್ಧಿಕ ಸಾಮರ್ಥ್ಯದಿಂದ ವೈವಿಧ್ಯಮಯ ಆಯಾಮಗಳನ್ನು ತನಗಾಗಿ ಸೃಷ್ಟಿಸಿಕೊಂಡಿದ್ದಾನೆ. ಈ ಆಯಾಮಗಳು ಜನಾಂಗ, ಭಾಷೆ, ಪ್ರದೇಶಗಳಿಗೆ ಅನುಗುಣವಾಗಿ ಭಿನ್ನವೂ, ವೈವಿಧ್ಯಮಯವೂ ಆಗಿವೆ. ಗ್ರೀಕ್ ಸಂಸ್ಕೃತಿಗೂ ಮತ್ತು ರೋಮ್ ಸಂಸ್ಕೃತಿಗೂ ಇರುವ ವ್ಯತ್ಯಾಸ ಯಾರು ಅಲ್ಲಗಳೆಯಲಾರರು. ಹೀಗೆ ಪಾಶ್ಚಾತ್ಯ ಸಂಸ್ಕೃತಿ, ಪ್ರಾಚ್ಯ ಸಂಸ್ಕೃತಿಗೂ ಅನೇಕ ಭಿನ್ನತೆಗಳಿವೆ. ಭಿನ್ನತೆಯಲ್ಲಿಯೇ ಏಕತೆಯಂತೆ ಭಾಸವಾಗುವ ಭಾರತೀಯ ಸಂಸ್ಕೃತಿಯಲ್ಲಿಯೂ ಆರ್ಯ ದ್ರಾವಿಡ ಸಂಸ್ಕೃತಿಯನ್ನು ಹಿಂದೂ, ಮುಸ್ಲಿಂ, ಕ್ರೈಸ್ತ ಮೊದಲಾದ ವಿಭಿನ್ನ ಸಂಸ್ಕೃತಿಯನ್ನು ಗುರುತಿಸಿದಂತೆ ಹಿಂದೂ ಮತದಲ್ಲಿಯೇ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂದು ಬೇರೆ ಬೇರೆ ವೈಚಾರಿಕ ನೆಲೆಗಳನ್ನು ನೋಡುತ್ತೇವೆ. ಇದೇ ರೀತಿಯಾಗಿ ಒಂದೊಂದು ಕುಲ ಅಥವಾ ಸಮುದಾಯಗಳನ್ನು ತೆಗೆದುಕೊಂಡರೂ ಒಂದೊಂದು ವಿಧವಾದ ಸಂಸ್ಕೃತಿ ಕಾಣಿಸುತ್ತದೆ. ಅಷ್ಟೇ ಏಕೆ ಒಂದೇ ಸಮುದಾಯದಲ್ಲಿಯೂ ಭಿನ್ನ ಭಿನ್ನ ಪ್ರದೇಶಗಳಲ್ಲಿ ಭಿನ್ನ ಭಿನ್ನ ಸಂಸ್ಕೃತಿಯನ್ನು ಕಾಣಸಿಗುತ್ತವೆ. ವಾಸ್ತವದಲ್ಲಿ ಇಂತಹ ಸಂಸ್ಕೃತಿಗಳ ಅಧ್ಯಯನಗಳು ಅಕಾಡೆಮಿಕ್ ಮತ್ತು ಅಕಾಡಮಿಕೇತರ ವಲಯದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಈ ಅರಿವಿನಲ್ಲಿ **ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರನ್ನು** ಕುರಿತಾದ ಅಧ್ಯಯನ ಇದಾಗಿದೆ.

ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಶತಮಾನಗಳು ಕ್ರಮಿಸಿದಂತೆ ಮಾನವ ಜೀವನದ ಸಾಮಾಜಿಕ ಮೌಲ್ಯಗಳು ಬದಲಾಗುತ್ತಾ ಹೊರಟಂತೆ ಶಾಶ್ವತ ಮೌಲ್ಯಗಳು ಹೊಸ ಹೊಸ ಸ್ವರೂಪವನ್ನು ಪಡೆದುಕೊಳ್ಳುತ್ತೇವೆ. ಹೀಗಾಗಿ ಇತ್ತೀಚಿನ ಅಧ್ಯಯನಗಳು ಸಮಾಜವಿಜ್ಞಾನಗಳ ಕಡೆ ವಾಲುತ್ತಿವೆ. ಒಂದು ದೇಶದ ಪರಂಪರೆ, ಚರಿತ್ರೆ ಮತ್ತು ಸಂಸ್ಕೃತಿಯನ್ನು ಅರಿಯಬೇಕಾದರೆ ಭೌಗೋಳಿಕ ಹಿನ್ನೆಲೆಯಲ್ಲಿ

ಜನಾಂಗ, ಸಮುದಾಯ, ಆದಿವಾಸಿ, ಬುಡಕಟ್ಟು ಎನಿಸಿಕೊಂಡ ಜನರನ್ನು ಸಮಗ್ರವಾಗಿ ಅಧ್ಯಯನಿಸಬೇಕಾಗುತ್ತದೆ. ಒಂದು ದೇಶದ ಸಮಗ್ರ ಸಮುದಾಯಗಳ ಜೀವನ ವಿಧಾನವೇ ಆ ದೇಶದ ಸಮಷ್ಠಿ ಸಂಸ್ಕೃತಿಯೆನಿಸಿಕೊಳ್ಳುತ್ತದೆ. ಮಾನವ ಸಮಾಜವನ್ನು ಅಧ್ಯಯನ ಮಾಡುವಾಗ ಒಂದೊಂದು ಭೌಗೋಳಿಕ ಪರಿಸರದಲ್ಲಿ ಜೀವನ ನಡೆಸುವ ಜನಸಮುದಾಯವೂ ಒಂದೊಂದು ಸಮಾಜವೆನಿಸಿಕೊಳ್ಳುತ್ತದೆ. ಇಂತಹ ಒಂದು ಜನ ಸಮುದಾಯದಲ್ಲಿ ಒಂದು ನಿರ್ದಿಷ್ಟ ಬಗೆಯ ಸಂಸ್ಕೃತಿ, ಧರ್ಮ, ಕುಟುಂಬ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಮೌಲ್ಯಗಳು, ನೀತಿ ಮುಂತಾದ ಎಲ್ಲಾ ಬಗೆಯ ಜೀವನ ನಿರ್ವಹಣೆಯ ವಿಧಾನಗಳು ಉಂಟಾಗಿರುತ್ತವೆ. ಇಂತಹ ಅಧ್ಯಯನಗಳು ಈಗ ಹೆಚ್ಚು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಈ ಅಧ್ಯಯನ ಹೆಚ್ಚು ಮಹತ್ವವನ್ನು ಪಡೆಯಬಲ್ಲದಾಗಿದೆ.

"ಬುಡಕಟ್ಟು ಸಮುದಾಯಗಳು ಪರಂಪರೆಯಿಂದ ದೇಶೀ ಬೌದ್ಧಿಕ ಜ್ಞಾನದಿಂದ ತುಂಬ ಸಂಪದ್ಭರಿತವಾದಂತವು. ಅವುಗಳ ಸಂಸ್ಕೃತಿಯ ವಿವೇಕ ಪೋಲಾಗಿಲ್ಲ. ಜೊತೆಗೆ ಅದನ್ನು ಸೂಕ್ತವಾಗಿ ಬಳಸಿಕೊಂಡಿಲ್ಲ. ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಬುಡಕಟ್ಟುಗಳು ನಾಗರಿಕತೆಯ ಅವಿಷ್ಕಾರಗಳಲ್ಲಿ ಮಾತ್ರ ಹಿಂದುಳಿದಿವೆ."[೧] ಹೀಗೆ ಬುಡಕಟ್ಟು ಸಮುದಾಯಗಳು ನಾಗರಿಕ ಸಮಾಜದಿಂದ ದೂರವಾಗಿ ಜೀವಿಸುವುದರಿಂದಲೇ ತಾವು ತಮ್ಮ ಅನನ್ಯತೆಯನ್ನು ಬಿಟ್ಟು ಕೊಡದೆ ತಮ್ಮ ಮೂಲ ಜೀವಂತಿಕೆಯ ಸಾಮಗ್ರಿಯನ್ನು ತಮ್ಮ ಒಡಲೊಳಗೆ ಬಚ್ಚಿಟ್ಟುಕೊಂಡು ಸದಾ ಎಚ್ಚರಿಕೆಯಿಂದ ತಮ್ಮ ಅದಮ್ಯ ಚಹರೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಹಿಂದೆ ದಕ್ಷಿಣಾತ್ಯರು ತಂದ ಕಾಡು, ನದಿ, ಬೆಟ್ಟ ಗುಡ್ಡ ವಶೀಕರಣ ಕಾನೂನುಗಳು ಹಲವಾರು ಬುಡಕಟ್ಟುಗಳ ಮೂಲ ಸ್ವರೂಪದ ದಕ್ಕೆಯಾಗುವಂತೆ ಮಾಡಿದವು.

"ಮಧ್ಯಯುಗೀನ ಸ್ಥಳೀಯ ಅರಾಜಕ ಆಡಳಿತದ ಕಾರಣಕ್ಕಾಗಿ ರಾಜಶಾಹಿಯನ್ನು ಅವಲಂಬಿಸಿದ್ದ ಕರಕುಶಲ ಕರ್ಮಿಗಳು, ಪ್ರದರ್ಶನ ಕಲೆಗಳನ್ನು ನಂಬಿಯೇ ಬದುಕುತ್ತಿದ್ದ ಸಮುದಾಯಗಳು ಈ ಕಾಲಘಟ್ಟದಲ್ಲಿ ಕೈಚೆಲ್ಲಿ ಕುಳಿತವು. ಇದೇ ಕಾಲಘಟ್ಟದಲ್ಲಿ ಇನ್ನೊಂದು ಮಹತ್ವದ ಬೆಳವಣಿಗೆ ಎಂದರೆ ವೈದಿಕ ಧರ್ಮ ತನ್ನ ವಿಸ್ತರಣೆಗೆ ತೊಡಗಿದ್ದು, ಭಕ್ತಿ ಪಂಥದ ಮತ ಪ್ರಚಾರಕರಿಗೆ ಸ್ಥಳೀಯ ರಾಜರುಗಳು ಮತ್ತು ವಸಾಹತುಶಾಹಿಯ ಆಶ್ರಯ ದೊರಕಿ ಹೋಗಿತ್ತು. ಕರ್ನಾಟಕದ ಮಟ್ಟಿಗೆ ಶ್ರೀ ವೈಷ್ಣವ ಮತ ಪ್ರಚಾರಕರು ಕೆಳಜಾತಿ ಮತ್ತು ಆದಿವಾಸಿಗಳ ಮೂಲಕ್ಕೆ ಕೈಹಾಕಿದರು."[೨] ೧೨ನೇ ಶತಮಾನದಲ್ಲಿ ಶೈವ ವೈಷ್ಣವ ಧರ್ಮಗಳು ಎರಡೂ ಪ್ರಬಲಧರ್ಮಗಳಾಗಿ ತಲೆ ಎತ್ತಿ ಕರ್ನಾಟಕದ ಚರಿತ್ರೆಯನ್ನು ಬದಲಾಯಿಸಿದವು. ಒಂದು ಸಲ ಶೈವ ಧರ್ಮ ಮಿಂಚಿನಂತೆ ಬೆಳಗಿ ಎಲ್ಲಾ ಸೋತ ಸಮುದಾಯಗಳನ್ನು ಹುರಿದುಂಬಿಸುವುದರ ಮೂಲಕ ಧಾರ್ಮಿಕ ಒತ್ತಡಗಳನ್ನು ಹೇರಿ ಸಾಂಸ್ಕೃತಿಕ ಸಮಾನತೆಗಾಗಿ ಹೆಣಗಾಡಿ ಹಲವಾರು ವೃತ್ತಿ ಕಲಾವಿದರನ್ನು, ವೃತ್ತಿ ಸಮುದಾಯಗಳನ್ನು ದುಡಿಸಿಕೊಂಡು ಮೇಲೆ ಬಂದು ಮತ್ತೆ ಮಾಯವಾಗಿರುವುದು.

ಹಗಲುವೇಷಗಾರರ ಸಮುದಾಯದ ಪ್ರಾಚೀನತೆ ಹನ್ನೊಂದನೆಯ ಶತಮಾನದ ಪೂರ್ವಕ್ಕೂ ಹೋಗುತ್ತದೆ. ಇವರು ಮೊದಲು ರಾಜ್ಯಶಾಹಿಯ ಆತ್ಮತೃಪ್ತಿಗೋಸ್ಕರ ಹಲವಾರು ಬುಡಕಟ್ಟು ಸಮುದಾಯಗಳಿಗೆ ಧರ್ಮ ಪ್ರಚಾರದ ಒತ್ತಡಗಳನ್ನು ಹೇರುತ್ತಿದ್ದರು. ಸೋತ ಇಂತಹ ಸಮುದಾಯಗಳು ಕಾಡಿನಿಂದ ನಾಡಿಗೆ ಬಂದು ಜೀವನಕ್ಕಾಗಿ ತಡಕಾಡುತ್ತಿದ್ದ ಸಮಯದಲ್ಲಿ ಮಧ್ಯಯುಗೀನ ಸ್ಥಳೀಯ ಅರಾಜಕರು ಇಂತಹ ಒತ್ತಡ ಹೇರಿದರು. ಒಂದು ರೀತಿಯ ಇಂತಹ ಒತ್ತಡಗಳೇ ಇಂದಿನ ಹಲವಾರು ಕಲೆಗಳ ಉಳುವಿಗೆ ನಾಂದಿಯಾಗಿದೆ.

ಭಾರತದ ಹಲವಾರು ರಾಜ್ಯಗಳಲ್ಲಿ ವಾಸಮಾಡುತ್ತಿರುವ ಹಗಲುವೇಷಗಾರರ ಮೂಲ ಮಾತ್ರ ಅಷ್ಟು ಸುಲಭವಾಗಿ ದೊರಕುವ ರೀತಿಯಲ್ಲಿಲ್ಲ. ಇಂದು ೪-೫ ರಾಜ್ಯಗಳಲ್ಲಿ ವಾಸವಾಗಿದ್ದರೂ ಇವರು ತಮ್ಮ ಕೌಟುಂಬಿಕ ಸಂದರ್ಭದಲ್ಲಿ ಮಾತ್ರ ತೆಲುಗನ್ನೇ ಬಳಸುತ್ತಿದ್ದಾರೆ. ಅಲ್ಲದೇ ಇವರ ಬಳ್ಳಿಗಳ ಹೆಸರುಗಳು ಹಲವಾರು ಆಂಧ್ರಪ್ರದೇಶದ ಪ್ರಾದೇಶಿಕ ನಾಮಗಳನ್ನೇ ಹೊಂದಿರುವುದರಿಂದ ಮತ್ತು ಜೀವನದ ಹಲವಾರು ಮುಖ್ಯ ಸಂದರ್ಭಗಳಲ್ಲಿ ಬಳಸುವ ಬೇರೆ ಬೇರೆ ಭಾಷೆಯಲ್ಲಿಯೂ ತೆಲುಗು ಶಬ್ದಗಳನ್ನೇ ಬಳಸುತ್ತಿದ್ದಾರೆ. ಮದುವೆಯ ಸಂದರ್ಭದಲ್ಲಿ ಹಲವಾರು ಇಂತಹ ಶಬ್ದಗಳು ಬಳಕೆಯಾಗುತ್ತವೆ. ಅನುಬಂಧದಲ್ಲಿ ಇವರ ದಿನನಿತ್ಯದ ಬಳಕೆಯ ಶಬ್ದಗಳನ್ನು ನೀಡಲಾಗಿದೆ. ಈ ಸಮುದಾಯದ ಹಲವಾರು ಜನರ ಹೇಳಿಕೆ ಕೇಳಿಕೆಯಿಂದ ಪರಿವೀಕ್ಷಿಸಲಾಗಿ ನಾವು ಮೂಲದಲ್ಲಿ ಆಂಧ್ರದಲ್ಲಿಯೇ ಇದ್ದೇವೆ. ರೆಡ್ಡಿರಾಜರ ಯುಗದಲ್ಲಿ ಹಲವಾರು ಕಲೆಗಾರರಿಗೆ ವೈಷ್ಣವ ಧರ್ಮದ ಧಾರ್ಮಿಕ ಒತ್ತಡವನ್ನು ತಾಳಲಾರದೆ. ಕೆಲವು ವೇಷಗಾರರು ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರದ ಹಾದಿ ಹಿಡಿಯಬೇಕಾದ ಪ್ರಸಂಗ ಬಂದಿತು ಎಂದು ಹೇಳುತ್ತಾರೆ. ಈ ಬದಲಾವಣೆಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಬಸವಣ್ಣನವರ ಶೈವಧರ್ಮದ ಪ್ರಭಾವ ಕರ್ನಾಟಕದಲ್ಲಿ ದಟ್ಟವಾಗಿರುವುದರಿಂದ ಹೆಚ್ಚಿನ ಸಂಖ್ಯೆಯ ವೇಷಗಾರು ಕರ್ನಾಟಕದಲ್ಲಿ ಹರಡಿರುವುದು ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲಿಯೂ ಬಳ್ಳಾರಿ ಮತ್ತು ಅದಕ್ಕೆ ಹೊಂದಿಕೊಂಡಂತಹ ಆಂಧ್ರ ಗಡಿಭಾಗಗಳಲ್ಲಿಯೂ ಬಹಳಷ್ಟು ಕುಟುಂಬಗಳು ಅಲೆಮಾರಿಗಳಾಗಿ ಕೆಲವೊಂದು ಊರುಗಳನ್ನು ಆಸ್ತಿಯ ರೂಪದಲ್ಲಿ ಹಂಚಿಕೊಂಡು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾ ಜೀವನ ನಡೆಸುತ್ತಿದ್ದಾರೆ. ಮೇಲ್ನೋಟಕ್ಕೆ ಹಲವಾರು ರಾಜ್ಯಗಳಲ್ಲಿ ವಾಸಿಸುತ್ತಿರುವ ವೇಷಗಾರರ ಜೀವನ ಒಂದೇ ರೀತಿಯಾಗಿ ಕಂಡರೂ ಭೌಗೋಳಿಕವಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಾಸಗಳಿವೆ.

ಬ್ರಿಟಿಷರು ಬಂದನಂತರ ಅನೇಕ ಬುಡಕಟ್ಟುಗಳು ಅನೇಕ ರೂಪಾಂತರಗಳಿಗೆ ಒಳಗಾದವು. ಆದರೆ ಹಗಲುವೇಷಗಾರರ ಮೇಲೆ ಯಾವ ಪರಿಣಾಮ ಬೀರಿರುವುದು ಕಂಡುಬರುವುದಿಲ್ಲ. ಆದರೆ ಇವರೇ ಹಲವಾರು ಸ್ವತಂತ್ರ ವೀರರ ಕಥೆಗಳನ್ನು ಹೇಳುವುದರ ಮೂಲಕ ಭಾರತೀಯರನ್ನು ಜಾಗೃತಗೊಳಿಸಲು ನೆರವಾಗಿದ್ದಾರೆ. ಕ್ರಿಶ್ಚಿಯನ್ ಧರ್ಮದವರೂ ಸಹ ಹಲವಾರು ಬುಡಕಟ್ಟುಗಳನ್ನು ಆಕರ್ಷಿಸಿಕೊಂಡಿದ್ದರೂ, ಈ ಸಮುದಾಯದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಿರುವುದಿಲ್ಲ. ೨೦ನೇ ಶತಮಾನದ

ಕೊನೆಯಲ್ಲಿ ಹೆಚ್ಚು ಪ್ರಚಾರಕ್ಕೆ ಬಂದ ಉಪಗ್ರಹ, ದೂರದರ್ಶನ ಚಾಲನ್‌ಗಳು ಮಾಡಿದ ದಾಳಿಯಿಂದ ಈ ಮಾಯಾಲೋಕ ಹಳ್ಳಿಯ ಮೂಲೆಮೂಲೆಗಳಲ್ಲಿ ಮುಟ್ಟಿ ಹಗಲುವೇಷಗಾರರ ಕಲಾಭಿಮಾನಿಗಳನ್ನೆಲ್ಲಾ ತನ್ನತ್ತ ಆಕರ್ಷಿಸಿಕೊಂಡು, ಇವರ ಕಲೆಗೆ ಮಾನ್ಯತೆ ಕಳೆದುಕೊಳ್ಳುವಂತೆ ಮಾಡಿತು.

ಈವತ್ತು ಬುಡಕಟ್ಟುಗಳು ಪ್ರತ್ಯೇಕ ಮೀಸಲಾತಿಯನ್ನು ಪಡೆದಿವೆ. ಆದರೆ ಶಾಶ್ವತವಾಗಿ ಊರೊಳಗಿದ್ದ ಅಸ್ಪೃಶ್ಯರಿಗಿಂತ ಇಂತಹ ಅಲೆಮಾರಿಗಳನ್ನು ಕಂಡಿರುವ ರೀತಿಯೇ ಬೇರೆ. ಇವರು ಮೀಸಲಾತಿಯನ್ನು ಹಲವಾರು ಸಮುದಾಯಗಳು ದುರ್ಬಳಕೆ ಮಾಡಿಕೊಂಡಿವೆ. ಇತ್ತ ಊರಲ್ಲಿ ಅತ್ತ ಕಾಡಲ್ಲಿ ಎರಡೂ ಕಡೆ ಪರ್ಯಾಯ ವ್ಯವಸ್ಥೆ ಇಲ್ಲದೆ ಕಂಗೆಟ್ಟು ಹೋಗಿದ್ದಾರೆ.

ಈ ಸಮುದಾಯದಲ್ಲಿರುವ ನ್ಯಾಯಪದ್ಧತಿ ಬಹಳ ವಿಶಿಷ್ಟವಾದುದಾಗಿದೆ. ತಪ್ಪು ಮಾಡುವುದು ಮಾನವನ ಗುಣ. ಅದನ್ನು ತಿದ್ದಿ ನಡೆಯಬೇಕಾದುದು ಅವನ ಸಹಜ ಧರ್ಮ. ಇಂತಹ ಮೌಲ್ಯಗಳಿಗಾಗಿಯೇ ಬದುಕಿದವರು ಇವರು. ಇವರಲ್ಲಿ ನ್ಯಾಯ ನಿರ್ಣಯಗಳು ಮತ್ತು ಒಳ ಆಡಳಿತ ವ್ಯವಸ್ಥೆ ಬಿಗಿಯಾಗಿರುವುದರಿಂದ ಇವರ ಸಮುದಾಯ ಇದುವರೆಗೂ ಉಳಿದುಕೊಂಡು ಬಂದಿದೆ. ಇಲ್ಲದಿದ್ದರೆ ಪೂರ್ವದಲ್ಲಿಯೇ ಇವರ ಜಾತಿ ಬೇರೆ ಬೇರೆ ಜಾತಿಯಲ್ಲಿ ಸೇರಿ ಹಂಚಿ ಹೋಗುತ್ತಿತ್ತು. ಇವರಲ್ಲಿ ಕಟ್ಟುನಿಟ್ಟಿನ ನ್ಯಾಯಪದ್ಧತಿ ಇರುವುದರಿಂದ ಬೇರೆಯವರನ್ನು ಪಕ್ಕದಲ್ಲಿಯೂ ಸಹ ಬಿಟ್ಟುಕೊಳ್ಳುವುದಿಲ್ಲ. ಅದಕ್ಕಾಗಿಯೇ ಈ ಸಮುದಾಯ ತಮ್ಮ ವಿಶಿಷ್ಟತೆಯನ್ನು ಇಂದಿಗೂ ಉಳಿಸಿಕೊಳ್ಳಲು ಸಹಕಾರಿಯಾಗಿದೆ.

ಇವರು ಪ್ರದರ್ಶಕ ಕಲೆಯಾದ ವೇಷಗಾರಿಕೆಯ ಮೂಲಕ ಸಮಾಜದ ಹುಳುಕನ್ನು ತಿದ್ದುವ ಕೊಂಡಿಯಂತೆ ಕೆಲಸಮಾಡುತ್ತಿದ್ದಾರೆ. ತಮ್ಮ ಗುರಿ ಜನರನ್ನು ಮನರಂಜಿಸಿ ಹಣ ಪಡೆಯುವುದು ಒಂದೇ ಅಲ್ಲ. ಸಮಾಜದಲ್ಲಿ ದುರ್ನೀತಿ, ಅಜ್ಞಾನ, ಅಂಧಕಾರವನ್ನು ತೊಲಗಿಸುವ ಸಮಾಜದ ಕನ್ನಡಿಯಂತೆ ಇವರು ಕೆಲಸ ಮಾಡುತ್ತಾರೆ. ಇವರು ತಮ್ಮ ಗುರಿ ಅದೇ ಎಂದು ಹೇಳುತ್ತಾರೆ. ಇವರಲ್ಲೇ ಬುರ್ರಕಥೆ ಎನ್ನುವ ಜನಪದ ಕಾವ್ಯಪ್ರಕಾರವೂ ಇದೆ. ಅರವತ್ಮೂರು ಬೃಹತ್ ಕಥನಗಳನ್ನು ಈ ಪ್ರಕಾರದಲ್ಲಿ ಹಾಡಲಾಗುತ್ತದೆ. ಈಗಾಗಲೇ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಕೆಲವು ಕಥೆಗಳ ಸಂಗ್ರಹ ಕಾರ್ಯ ನಡೆದಿದ್ದರೂ ಇನ್ನೂ ಹಲವಾರು ಕಥನಗಳನ್ನು ಸಂಗ್ರಹಿಸಬೇಕಿದೆ. ದೈವಿಕ ಶ್ರದ್ಧೆ ಇವರ ಬದುಕಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇವರು ಸರ್ವಚೇತನವಾದಿಗಳು, ಶಕ್ತಿರೂಪದ ಆತ್ಮಗಳಲ್ಲಿ ಭೂತ ಪಿಶಾಚಿಗಳಲ್ಲಿ ನಂಬಿಕೆಯುಳ್ಳವರು. ಸತ್ತಮೇಲೆ ಆತ್ಮಗಳು ಶರೀರ ರಹಿತವಾಗಿ ತಮ್ಮ ಸುತ್ತಲೂ ಬಂದು ಅಲೆಯುತ್ತವೆ ಎಂಬ ನಂಬಿಕೆಯುಳ್ಳವರು. ಆದ್ದರಿಂದ ಇವರು ಆತ್ಮಗಳನ್ನು ಗೌರವಿಸಿ, ಸಮಾಧಾನಪಡಿಸಿ ಕಳುಹಿಸುತ್ತಾರೆ. ಗಿಡ, ಮರ, ಪ್ರಾಣಿ, ಪಕ್ಷಿ, ನದಿಗಳನ್ನು ದೇವರೆಂದು ಪೂಜಿಸುತ್ತಾರೆ. ಕೆಲವು ಪ್ರಾಣಿಗಳನ್ನು ಮನೆದೇವರೆಂದು ಭಕ್ಷಿಸುವುದಿಲ್ಲ. ಕೆಲವು ಗಿಡಮರಗಳನ್ನು ಸಹ ಪೂಜಿಸುತ್ತಾರೆ. ಅವುಗಳಲ್ಲಿ ಬೇವಿನ ಗಿಡ, ಜಂಬೆಯ ಗಿಡ ಅತಿ ಪ್ರಾಮುಖ್ಯತೆಯನ್ನು ವಹಿಸುತ್ತವೆ. ಇತ್ತೀಚಿಗೆ ಶೈವ, ವೈಷ್ಣವ, ಮುಸ್ಲಿಂ ಧರ್ಮಗಳ ಪ್ರಭಾವವೂ ಇವರ ಮೇಲೆ ಆಗಿರುವುದನ್ನು ಗುರುತಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಇವರಲ್ಲಿ ವಿಶಿಷ್ಟವಾಗಿರುವ ಕಲೆಯು ನಶಿಸಿ ಹೋಗುತ್ತಿರುವ ಇಂತಹ ಸಂದರ್ಭದಲ್ಲಿ ಪರ್ಯಾಯ ಉದ್ಯೋಗವಾಗಿ ಹಲವಾರು ಬಂಡವಾಳವಿಲ್ಲದ ಉದ್ಯೋಗಗಳನ್ನು ಅರಸಿ ಪಟ್ಟಣಗಳಿಗೆ ಹೋಗುತ್ತಿದ್ದಾರೆ. ಇಂದಿನ ಸಮಾಜದಲ್ಲಿ ಅವರಿಗೆ ಸಮಾನತೆ ಕೊಡಬೇಕೆಂದರೆ ಇವರಿಗಾಗಿ ಕೆಲವು ವಿಶೇಷ ಸವಲತ್ತುಗಳನ್ನು ಜಾರಿಗೆ ತರುವ ಅವಶ್ಯಕತೆ ಇದೆ. ಇವರಿಗೆ ಯಾವುದೇ ಭದ್ರತೆಗಳಿಲ್ಲದೆ ಸಾಲಸೌಲಭ್ಯ ನೀಡುವ ಅವಶ್ಯಕತೆ ಇದೆ. ರೈಲ್ವೇ ಮತ್ತು ಬಸ್ಸುಗಳಿಗೆ ಅಡ್ಡಾಡಲು ಪಾಸ್ ವ್ಯವಸ್ಥೆ, ಇವರ ವಾಸಸ್ಥಾನಗಳಲ್ಲಿ ವಿದ್ಯಾಭ್ಯಾಸಕ್ಕೆ ಶಾಲೆಗಳು, ವಸತಿ ವ್ಯವಸ್ಥೆ, ವಿಶೇಷ ಯೋಜನೆಯಲ್ಲಿ ಪ್ರತಿಯೊಬ್ಬ ವೃದ್ಧರಿಗೂ ವೃದ್ಧಾಪ್ಯ ವೇತನ, ಮೀಸಲಾತಿಯ ವ್ಯವಸ್ಥೆಯಲ್ಲಿ ಬುಡ್ಗ, ಬೇಡ ಜಂಗಮ ಎಂದಿರುವ ಗೊಂದಲವನ್ನು ಬಗೆಹರಿಸಬೇಕು.

ಸುಮಾರು ಮೂರು ಮಿಲಿಯನ್ ವರ್ಷಗಳ ಹಿಂದಿನಿಂದಲೂ ಹುಟ್ಟಿಕೊಂಡು ಬಂದಿರುವ ಬೇಟೆ ವ್ಯವಸ್ಥೆ ಇಂದಿಗೂ ಇವರಲ್ಲಿ ಮುಂದುವರಿದುಕೊಂಡು ಬಂದಿರುವುದು ವಿಶೇಷ. ಪ್ರಾಣಿಗಳನ್ನು ಹೇಗೆ ಹಿಡಿಯಬೇಕು ಎನ್ನುವ ವಿಶೇಷ ಕಲೆಯನ್ನು ಇವರು ಬಲ್ಲವರಾಗಿದ್ದಾರೆ. ಇದು ಸರಕಾರದ ಬಿಗಿ ನಿಲುವಿನಿಂದ ಇಂತಹ ಬೇಟೆಯ ಸಂಪ್ರದಾಯವನ್ನು ಅನಿವಾರ್ಯವಾಗಿ ಕೈ ಬಿಡಬೇಕಾಯಿತು ಎಂದು ಹೇಳುತ್ತಾರೆ.

ನದಿಗಳ ನೀರು ಸದಾ ಹರಿಯುವಂತೆ ಮಾನವ ಸಮುದಾಯಗಳು ಪ್ರತಿ ಕ್ಷಣವೂ ಬದಲಾವಣೆ ಹೊಂದುತ್ತಲೇ ಇರುತ್ತವೆ. ಕಾಲಮಾನಗಳಿಗೆ ತಕ್ಕಂತೆ ತನ್ನನ್ನ ತಾನು ರೂಪಿಸಿಕೊಳ್ಳುತ್ತಾ ಹೋಗುವ ಸಮುದಾಯ ಯಾವತ್ತೂ ತನ್ನ ಚಹರೆಗಳನ್ನು ಕಾಪಾಡಿಕೊಳ್ಳುತ್ತಲೇ ಇರುತ್ತದೆ. ಇಂದು ಪಾಶ್ಚಿಮಾತ್ಯ, ಸಂಸ್ಕೃತಿಯ ಪ್ರಭಾವ ದಿಂದ ಹಲವಾರು ಸಂಸ್ಕೃತಿಗಳು ತಮ್ಮ ಗುರುತುಗಳನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಇಂತಹ ಸಮುದಾಯಗಳ ಅಧ್ಯಯನ ಅತ್ಯವಶ್ಯಕವಾಗಿದೆ.

ಈ ಅಧ್ಯಯನ ಬಳ್ಳಾರಿ ಮತ್ತು ಆಂಧ್ರಗಡಿಭಾಗದಲ್ಲಿನ ಹಗಲುವೇಷಗಾರರ ವರ್ತಮಾನದ ಬದುಕಿನ ಜೊತೆಗೆ ಅವರ ಚಾರಿತ್ರಿಕ ಬೆಳವಣಿಗೆಯನ್ನು ಅನಾವರಣಗೊಳಿಸುವ ಪ್ರಯತ್ನವಾಗಿದೆ. ನೇರ ಸಂದರ್ಶನದ ಮೂಲಕ ಸಂಗ್ರಹಿಸಿದ ಸಮಗ್ರ ಮಾಹಿತಿಯನ್ನು ಆಧರಿಸಿ ಈ ಅಧ್ಯಯನವು ಇವರ ನೈಜ ಬದುಕಿನ ಚಿತ್ರಣವನ್ನು ದಾಖಲಿಸುತ್ತದೆ. ಇವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ಚಟುವಟಿಕೆಗಳ ವಿಫಲ ಮಾಹಿತಿ ಇಲ್ಲಿ ಲಭ್ಯವಾಗುತ್ತದೆ. ಈ ಅಧ್ಯಯನ ಕೇವಲ ಶೈಕ್ಷಣಿಕ ಕಾಯಣಕ್ಕಾಗಿ ರೂಪಗೊಂಡಿದ್ದೆನಲ್ಲ. ಒಂದು ಶೈಕ್ಷಣಿಕವಲ್ಲದ ನಿರ್ಲಕ್ಷಿಸಿ ಸಮುದಾಯವೊಂದರ ಅಭಿವೃದ್ಧಿಯ ಉದ್ದೇಶವನ್ನು ಹೊಂದಿದೆ. ಸಮುದಾಯಗಳ ಅಧ್ಯಯನಗಳು ಆಯಾ ಸಮುದಾಯಗಳ ಕಷ್ಟ, ಸುಖಗಳು ಒಂದು ಭಾಗವಾಗಿ ರೂಪಗೊಳ್ಳಬೇಕೆಂಬ ಶೈಕ್ಷಣಿಕೇತರ ಆಶಯ ಇಲ್ಲಿ ಕೆಲಸಮಾಡಿದೆ.

ನಾನು ಸಂದರ್ಶನಕ್ಕೆ ಹೋದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಬಂದ ಪ್ರಶ್ನೆಗಳು ಇಷ್ಟೆ. "ಸ್ವಾಮಿ ನೀವು ನಮ್ಮ ಬಗ್ಗೆ ಅಧ್ಯಯನ ಮಾಡುತ್ತೇನೆ ಎಂದು ಹೇಳುತ್ತೀರಿ ಇದರಿಂದ ನಮಗೆ ನಮ್ಮ

ಸಮುದಾಯಕ್ಕೆ ಏನು ಉಪಯೋಗ" ಎನ್ನುವ ಪ್ರಶ್ನೆಗಳು ಎದುರಾದವು. ನಿಮ್ಮ ಅಧ್ಯಯನಗಳಿಂದ ನಮಗೆ ಒಂದು ಹೊತ್ತು ಊಟ ಸಿಗಬಲ್ಲುದೆ? ಎಂದು ಉತ್ತರಕ್ಕಾಗಿ ನಾನು ತಡಕಾಡಬೇಕಾಯಿತು. ಊಟ ನೀಡುವುದಿಲ್ಲ, ನಿಮ್ಮ ಬದುಕನ್ನು ಕಟ್ಟಿಕೊಡುತ್ತದೆ ಎಂದಾಗ, ಏನು ಉಪಯೋಗವಿಲ್ಲ ಎಂದಾಗ ಮೇಲೆ ನಮ್ಮ ಅಧ್ಯಯನ ನೀವು ಏಕೆ ಮಾಡಬೇಕು? ಇಂತಹ ಸಂದಿಗ್ಧತೆಯಲ್ಲಿ ನನ್ನ ಮನಸ್ಸು ಸತ್ತು ಹುಟ್ಟಿದ್ದುಂಟು. ಹೀಗಾಗಿ ಈ ಪ್ರಬಂಧದಲ್ಲಿ ಇವರ ಹಲವಾರು ಸಮಸ್ಯೆಗಳನ್ನು ಸಂದರ್ಭ ಬಂದಾಗಲೆಲ್ಲ ಚರ್ಚಿಸಿದ್ದೇನೆ.

ಅಧ್ಯಯನ ವ್ಯಾಪ್ತಿ

ಹಗಲುವೇಷಗಾರರು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳಲ್ಲಿ ವಾಸಿಸುತ್ತಿದ್ದು, ಅಧ್ಯಯನದಿಂದ ಇವರು ಮೂಲತಃ ಆಂಧ್ರಪ್ರದೇಶದವರು ಎಂದು ಗೊತ್ತಾಗುತ್ತದೆ. ಇವರು ತಮ್ಮ ಕಲೆಯನ್ನು ಪ್ರಚಾರಮಾಡುತ್ತಾ ರೈಲ್ವೇ ಸಾಲು ಮತ್ತು ಬಸ್ಸುಗಳ ಸಾಲು ಎಲ್ಲಿ ಎಲ್ಲಿ ಅನುಕೂಲ ಸಿಕ್ಕಿರುತ್ತದೆಯೋ ಅಲ್ಲಲ್ಲೆಲ್ಲಾ ಪಸರಿಸಿ ವಿವಿಧ ರಾಜ್ಯಗಳಲ್ಲಿ ಚದುರಿದ್ದಾರೆ. ಬಳ್ಳಾರಿ ಮತ್ತು ಆಂಧ್ರಗಡಿಭಾಗವನ್ನು ನನ್ನ ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ವೆಂಕಟಾಪುರ, ದರೋಜಿ, ತೆಕ್ಕಲಕೋಟೆ, ಪೋತ್ನಾಳು, ಸಿರುಗುಪ್ಪ, ಗಂಗಾವತಿ, ಕೊಪ್ಪಳ, ಕುಟಗಿನಹಾಳು, ಹನುಮನಹಳ್ಳಿ, ಹಗರಿಬೊಮ್ಮನಹಳ್ಳಿ, ಸಿದ್ದಾಪುರ, ಹಳೇಕೋಟೆ, ಸಿರಗೇರಿ, ಕುರುಗೋಡು, ಬಲಕುಂದಿ, ಎಲೆರಾಂಪುರ, ಚೋರುನೂರು, ಕುದುರೆಮೂತಿ, ಕಂಪ್ಲಿ, ಮರಿಯಮ್ಮನಹಳ್ಳಿ, ಸೋಮಲಾಪುರ, ಮಾಳಾಪುರ ಇಷ್ಟು ಊರುಗಳನ್ನು ಅಧ್ಯಯನಕ್ಕೊಳಪಡಿಸಿದರೆ ಆಂಧ್ರ ಗಡಿಭಾಗದಲ್ಲಿ ರಾಯದುರ್ಗ, ಆಲೂರು, ಉರುವಕೊಂಡ, ಗುಂತಕಲ್ಲು, ಅನಂತಪುರ, ಕರ್ನೂಲು, ಓಬಳಾಪುರ, ಗುತ್ತಿ, ಪ್ರದ್ದಟೂರು, ಮೈದಕೂರು, ಪಾರ್ವತಿನಗರ, ಕಡಪ, ಈ ನೆಲೆಗಳನ್ನು ನನ್ನ ಅಧ್ಯಯನದ ವ್ಯಾಪ್ತಿಯಾಗಿರಿಸಿಕೊಂಡಿದ್ದೇನೆ.

ಅಧ್ಯಯನ ವಿಧಾನ

ಸಮಾಜವಿಜ್ಞಾನಗಳ ಸಂಶೋಧನೆಯ ಕ್ಷೇತ್ರ ಬಹಳ ವಿಶಾಲವಾದದ್ದರಿಂದ ಅಲ್ಲಿರುವ ಪ್ರತಿಯೊಂದು ಅಂಶವನ್ನು ಅಧ್ಯಯನ ಮಾಡುವುದು ಅಷ್ಟು ಸುಲಭವಲ್ಲ. ಆದ್ದರಿಂದ ನನಗೆ ದೊರಕಿರುವ ಕಾಲವನ್ನು ಸೂಕ್ತವಾಗಿ ಬಳಸಿಕೊಂಡು ಅಧ್ಯಯನವನ್ನು ನಡೆಸಿದ್ದೇನೆ.

ಮಾನವನ ಸಮಾಜವನ್ನು ವಸ್ತುವಿಷಯವಾಗಿ ಹೊಂದಿರುವ ಸಾಮಾಜಿಕ ಸಂಶೋಧನೆ ಬಹಳ ಕಷ್ಟ ಸಾಧ್ಯವಾದಂತಹದ್ದು, ಏಕೆಂದರೆ ಈ ಸಂಶೋಧನೆ ಸದಾಕಾಲವು ಬದಲಾಗುವುದರಿಂದ ಅನೇಕ ಎಡರುತೊಡರು ಅನುಭವಿಸಬೇಕಾಗುತ್ತದೆ. ಅದಕ್ಕಾಗಿ ಹಲವಾರು ಸ್ಥಳಗಳಲ್ಲಿ ಪ್ರತ್ಯಕ್ಷವಾಗಿ ನೋಡಿ ಅವರ ಜೊತೆಯಲ್ಲಿಯೇ ಬಹಳ ಕಾಲ ಕ್ಷೇತ್ರದಲ್ಲಿ ವಾಸಿಸಿ ಇವರ ಸಾಮಾಜಿಕ ಜೀವನವನ್ನು ಅರ್ಥಮಾಡಿಕೊಂಡು ವಿಚಾರ ಸಂಸ್ಕೃತಿಯನ್ನು ಗ್ರಹಿಸಿರುತ್ತೇನೆ.

ಎಷ್ಟೋ ಸಲ ಕ್ಷೇತ್ರಕಾರ್ಯಕ್ಕೆ ಹೋಗಿ ಯಾವುದೇ ಮಾಹಿತಿ ನೀಡದೆ ನಿರಾಶನಾದ ಸಂದರ್ಭಗಳೂ ಇವೆ. ನಾವು ನೇರವಾಗಿ ಈ ಸಮುದಾಯದ ವಕ್ತೃಗಳ ಹತ್ತಿರ ಹೋದರೆ ಮಾಹಿತಿ ನೀಡಲಿಲ್ಲ. ನಂತರ ಈ ಸಮುದಾಯದ ಮುಖ್ಯಸ್ಥನನ್ನು ಭೇಟಿ ಮಾಡಿ ಅವರಿಗೆ ನನ್ನ ಕಾರ್ಯದ ಬಗ್ಗೆ ವಿವರಿಸಿ, ನನಗೆ ತಿಳಿದ ಮಾಹಿತಿಯನ್ನು ದುರುಪಯೋಗಿಪಡಿಸಿಕೊಳ್ಳುವುದಿಲ್ಲವೆಂದು ಆಶ್ವಾಸನೆ ನೀಡಿದೆ. ಮತ್ತು ನನ್ನ ಅಧ್ಯಯನದ ಧ್ಯೇಯ ಉದ್ದೇಶಗಳನ್ನು ಅವರಿಗೆ ಅವರಿಗೆ ತಿಳುಹಿಸಿ ಅವರಿಂದ ನಂಬುಗೆ ಪಡೆದೆ. ಏಕೆಂದರೆ ಹೊರಗಿನ ಜನರನ್ನು ಯಾವಾಗಲೂ ಅನುಮಾನದಿಂದಲೇ ನೋಡುವ ಸ್ವಬಾವ ಅವರದು. ವಕ್ತೃಗಳು ಸಹ ನಾವು ನೇರವಾಗಿ ಹೋದರೆ ಸರಿಯಾದ ಮಾಹಿತಿ ನೀಡುವುದಿಲ್ಲ. ತಮ್ಮ ಸಮುದಾಯದ ಮುಖ್ಯಸ್ಥನಿಗೆ ಭಯ ಬೀಳುತ್ತಾರೆ. ಅವರ ಅನುಮತಿ ಪಡೆದಿದ್ದೇವೆ ಎಂದು ಹೇಳಿದರೆ ಸ್ವಲ್ಪ ನಿರ್ಭಯವಾಗಿ ಮಾಹಿತಿ ನೀಡುತ್ತಾರೆ. ಮುಖ್ಯವಾಗಿ ಅವರಿಗೆ ನಮ್ಮ ಮೇಲೆ ನಂಬಿಕೆ ಬರಬೇಕು.

ಭಾವನಾಮಯರಾದ ಮನುಷ್ಯರೊಡನೆ ವ್ಯವಹರಿಸುವುದರಿಂದ ಅವರು ಎಂತಹ ಸಂದರ್ಭದಲ್ಲಿ ಹೇಗಿರುತ್ತಾರೆಂದು ಹೇಳುವುದು ಕಷ್ಟ. ಕೆಲವು ಆಚರಣೆಗಳ ಸಂದರ್ಭಗಳಲ್ಲಿ ಅನ್ಯರನ್ನು ಪಕ್ಕಕ್ಕೆ ಸಹ ಬಿಟ್ಟುಕೊಳ್ಳುವುದಿಲ್ಲ. ಒಂದು ಸಲ ಕುದುರೆಮೋತಿಯಲ್ಲಿ ಪೀರಲ ಹಬ್ಬಕ್ಕೆ ಎರಡು ವರ್ಷಕ್ಕೆ ಒಂದು ಸಲ ಈ ಜನಾಂಗದವರೆಲ್ಲರೂ ಸೇರುತ್ತಾರೆ. ಅಲ್ಲಿಗೆ ನಾನು ಕ್ಷೇತ್ರಕಾರ್ಯಕ್ಕೆ ಹೋಗಿದ್ದೆ ಒಬ್ಬ ವಕ್ತೃವಿನ ಹತ್ತಿರ ಚರ್ಚಿಸುತ್ತಿದ್ದೆ ಅದೆ ಸಮುದಾಯದ ಬೇರೆ ವ್ಯಕ್ತಿ ಬಂದು, ನೀವು ನಮ್ಮ ವಿಷಯವನ್ನು ರೆಕಾರ್ಡ್ ಮಾಡಿಕೊಂಡು ಏನು ಮಾಡುತ್ತಿ...? ಎಂದು ನನ್ನ ಟೇಪ್‌ರಿಕಾರ್ಡರ್‌ನ್ನು ಕಸಿದುಕೊಂಡಿದ್ದುಂಟು. ಪರಿಚಯವಿದ್ದ ಆ ಸಮುದಾಯದ ಬೇರೆ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ಪಡೆದೆ. ಇಂತಹ ಸಂದರ್ಭದಲ್ಲಿ ಬಹಳ ಸೂಕ್ಷ್ಮವಾಗಿ ವ್ಯವಹರಿಸಬೇಕಾಗುತ್ತದೆ ಮತ್ತು ಜಾಗರೂಕನಾಗರಿಬೇಕು. ವಿವಿಧ ನೆಲೆಯಲ್ಲಿ ನಡೆಯುವ ಅಧ್ಯಯನಗಳು ವಿವಿಧ ರೀತಿಯ ಬದುಕನ್ನು ಕಟ್ಟಿಕೊಡುತ್ತವೆ. ಸಿದ್ಧಮಾದರಿಯ ಪ್ರಶ್ನಾವಳಿಗಳ ಮೂಲಕ ಹಗಲುವೇಷಗಾರರನ್ನು ಬೇಟೆಮಾಡಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಇವರ ಸಾಂಸ್ಕೃತಿಕ ಮಹತ್ವದ ಕೇಂದ್ರಗಳಿಗೆ ಭೇಟಿಕೊಟ್ಟು ವಿವರ ಸಂಗ್ರಹಿಸಿದ್ದಲ್ಲದೆ ವ್ಯಾಪಕವಾದ ಛಾಯಾಚಿತ್ರ ತೆಗೆಯಲಾಗಿದೆ. ಅಲ್ಲದೆ ಸಮುದಾಯದ ಜೊತೆಗೆ ನಿರಂತರ ನಾಲ್ಕು ವರ್ಷದ ಒಡನಾಟದಲ್ಲಿ ಅನೇಕ ಮಾಹಿತಿಗಳನ್ನು ವಕ್ತೃಗಳಿಂದ ನೇರ ಆಡಿಯೋ ಕ್ಯಾಸೆಟ್‌ಗಳಲ್ಲಿ ಧ್ವನಿಮುದ್ರಿಸಿ ಕೊಳ್ಳಲಾಗಿದೆ. ಹೀಗಾಗಿ ಸಾಕಷ್ಟು ಮಾಹಿತಿ ಆಡಿಯೋ ಕ್ಯಾಸೆಟ್ ಮತ್ತು ಛಾಯಾಚಿತ್ರಗಳ ಮೂಲಕ ಸಂಗ್ರಹಿಸಲಾಗಿದೆ.

ಈ ಅಧ್ಯಯನ ಉದ್ದಕ್ಕೂ, ನಾನು ಹೆಚ್ಚಾಗಿ ಪ್ರಾಥಮಿಕ ಆಕರಗಳನ್ನೇ ನೆಚ್ಚಿಕೊಂಡಿದ್ದೇನೆ, ಎರಡನೇ ವರ್ಗದ ಆಕರಗಳನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದೇನೆ. ಈ ಅಧ್ಯಯನಕ್ಕೆ ಪೂರಕವಾದ ಬಳ್ಳಾರಿ ಮತ್ತು ಆಂಧ್ರದ ಗಡಿಭಾಗವನ್ನೇ ಅಧ್ಯಯನಕ್ಕೊಳಪಡಿಸಿ ಇನ್ನಾವುದೇ ಭಾಷೆಯಲ್ಲಿ ಅಧ್ಯಯನಗಳು ನಡೆದಿಲ್ಲ. ಇದರಿಂದಾಗಿ ಈ ಅಧ್ಯಯನದ ಉದ್ದಕ್ಕೂ ಕ್ಷೇತ್ರಕಾರ್ಯದಲ್ಲಿ ಪಡೆದ ಪ್ರತ್ಯಕ್ಷ ಅನುಭವಗಳೇ ನಿಮ್ಮ ಮುಂದಿಟ್ಟಿದ್ದೇನೆ. ಆ ಕಾರಣಕ್ಕಾಗಿ ಈ ಮಹಾಪ್ರಬಂಧದಲ್ಲಿ ಅಷ್ಟಾಗಿ ಅಡಿಟಿಪ್ಪಣಿಗಳಿರುವುದಿಲ್ಲ.

. ಹಲವಾರು ಬುಡಕಟ್ಟು ಸಮುದಾಯಗಳು ಪರಿವರ್ತನೆಯ ಪ್ರಕೃತಿಯ ನಿಯಮಗಳಡಿ ಜಗತ್ತು ಮತ್ತು ಜಗತ್ತಿನ ಸಕಲ ವಿದ್ಯಮಾನಗಳೂ ಈ ನಿಯಮಕ್ಕೆ ಒಳಪಟ್ಟಿವೆ. ಸಮಾಜ ಹಾಗೂ ಸಮಾಜಿಕ ಜೀವನಗಳು ಸಹ ಈ ನಿಯಮದ ವ್ಯಾಪ್ತಿಗೆ ಒಳಪಟ್ಟಿವೆ. ಆ ಪರಿವರ್ತನೆಯ ವೇಗ ಅದು ಹಿಡಿಯುವ ದಿಕ್ಕು ಇದನ್ನು ಅನುಸರಿಸಿ ನಾಗರಿಕ ಬುಡಕಟ್ಟು, ಅರೆನಾಗರಿಕ ಬುಡಕಟ್ಟು, ಮೂಲ ಬುಡಕಟ್ಟು ಎಂದು ಮೂರು ವಿಧವಾಗಿ ವಿಂಗಡಿಸಬಹುದಾಗಿದೆ. ಈ ಸಮುದಾಯದಲ್ಲಿಯೂ ಪೂರ್ಣ ನಾಗರೀಕರಂತೂ ಆಗಿಲ್ಲ. ಆದರೆ ಎರಡು ರೀತಿಯ ಪರಿಣಾಮವಂತೂ ಬೀರಿರುವುದು ಸತ್ಯ.

ಹಗಲುವೇಷಗಾರರನ್ನ ಭೇಟಿಯಾದಾಗ ಜನರಲ್ಲಿ ಪ್ರಕ್ರಿಯೆ ಕಂಡುಬಂದಿತು. ಅಲೆಮಾರಿಗಳು ಮತ್ತು ಅರೆ ಅಲೆಮಾರಿಗಳು ಅರೆ ಅಲೆಮಾರಿಗಳು ಸ್ವಲ್ಪ ಮಟ್ಟಿಗೆ ನನ್ನನ್ನು ಪಕ್ಕಕ್ಕೆ ಸೇರಿಸಿದರಾದರೂ ಅರೆಅಲೆಮಾರಿಗಳೂ ಇಂದಿಗೂ ನೇರವಾಗಿ ಪಕ್ಕಕ್ಕೆ ಬಿಡುಕೊಡುವುದಿಲ್ಲ. ಧರ್ಮ ಸಂಪ್ರದಾಯದಂತೆ ಸಂದರ್ಭ ಬಂದರೆ ಇಬ್ಬರೂ ಸೇರಿಸುವುದಿಲ್ಲ. ಕೆಲವು ಮುಖ್ಯ ಸಂದರ್ಭಗಳಲ್ಲಿ ನನ್ನನ್ನು ಕರೆದು ಮತ್ತೇ ಏನೋ ನೆನಸಿಕೊಂಡು ಮಾಹಿತಿ ನೀಡಿದ ಸಂದರ್ಭಗಳೂ ಇವೆ.

ಕೆಲವು ಸಲ ನಾನು ತಯಾರಿಸಿಕೊಂಡು ಹೋದ ಪ್ರಶ್ನಾವಳಿಗಳಿಗೂ ಮೀರಿ ಅಕಾಡೆಮಿಕೇತರ ಪ್ರಶ್ನೆಗಳು ಅಲ್ಲಿ ಉದ್ಭವವಾಗಿರುವುದೂ ಉಂಟು. ಆದರೆ ಆ ವಿಷಯಗಳೆಲ್ಲಾ ಅನಾವಶ್ಯಕವಾದವಲ್ಲ. ಅಕಾಡೆಮಿಕ್ ನಿಯಮಗಳಿಗಿಂತಲೂ ಪರಿಣಾಮಕಾರಿಯಾದ ಫಲಿತಾಂಶವನ್ನು ಈ ಪ್ರಶ್ನೆಗಳು ನೀಡಿವೆ. ನಾನು ಸಿದ್ಧ ಪ್ರಶ್ನೆಗಳನ್ನು ಕೇಳಿದ ಸಂದರ್ಭಗಳಲ್ಲಿ ಅವರಿಂದ ಅಪಹಾಸ್ಯಕ್ಕೆ ಒಳಗಾಗಿಯೂ ಇದ್ದೇನೆ... ಅಂತಹ ಸಂದರ್ಭದಲ್ಲಿ ಅವರ ಮನೋಭಾವನೆಗೆ ತಕ್ಕಂತೆ ವಿಷಯಗಳನ್ನು ಪ್ರಸ್ತಾಪಿಸುತ್ತಾ ಹೋದಾಗ ವಿಷಯದ ಹರಿವು ಹೆಚ್ಚು ವೈಶಾಲ್ಯತೆಯನ್ನು ಪಡೆಯಿತು. ಇಂತಹ ಅಕಾಡೆಮಿಕ್ ಸಿದ್ಧಾಂತಗಳು ಕೆಲಸ ಮಾಡದಿದ್ದಾಗ ಇವರ ಸಮಸ್ಯೆಗಳನ್ನು ಆಗಾಗ ವಿಚಾರಿಸುತ್ತಾ ಈ ಸಮುದಾಯಕ್ಕೆ ಒಬ್ಬ ಉಪಯುಕ್ತ ವ್ಯಕ್ತಿಯಂತೆ ಸದಾ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ನನ್ನ ಕೆಲಸವನ್ನು ಸಾಧಿಸಿಕೊಂಡೆ ಮೊದ ಮೊದಲಲ್ಲಿ ಇಂತಹ ಅಧ್ಯಯನ ಬೇಡವೆಂದಿನಿಸಿದ್ದು ನಿಜ. ಆದರೆ ಈಗ ಇನ್ನು ಹೆಚ್ಚಿನ ಅಧ್ಯಯನಗಳಿಗೆ ಪ್ರೇರೇಪಿಸುತ್ತವೆ.

ಅದಕ್ಕಾಗಿ ಇಂತಹ ಅಧ್ಯಯ ಮೊದಲು ಕಲೋನಿಯಲ್ ಮಾದರಿಯಲ್ಲಿ ನಡೆದು ಇತ್ತೀಚಿನ ಸಮಾಜ ವಿಜ್ಞಾನದಂತಹ ಅಧ್ಯಯನಗಳು ಸಬ್ಯಾಲ್ಟನ್ ಪದ್ಧತಿ "ಕನ್ನಡದಂತಹ ಅಧ್ಯಯನಗಳು ಮೊದಲಿನಿಂದಲೂ ಹೆಚ್ಚಾಗಿ ನಡೆಯುತ್ತಿವೆ. ಅಕಾಡೆಮಿಗಳ ಸಂಸ್ಕೃತಿ ಇಲಾಖೆ, ವಿಶ್ವವಿದ್ಯಾಲಯದ ಸಮುದಾಯಗಳ ಅಧ್ಯಯನಗಳಲ್ಲಿ ತೊಡಗಿಕೊಂಡಿವೆ."[5] ಈ ವಿಧಾನದಲ್ಲಿ ತೊಡಗಿ ವರ್ತಮಾನದ ಬದುಕಿನಲ್ಲಿ ವಿಷಮ ಆರ್ಥಿಕ ವ್ಯವಸ್ಥೆಯೊಳಗೆ ನಲುಗುತ್ತಿರುವ ಸಮುದಾಯಗಳಿಗೆ ಈ ಅಧ್ಯಯನಗಳು ಭರವಸೆಗಳನ್ನು ಹುಟ್ಟಿಸಿವೆ. ಹಗಲುವೇಷಗಾರರ ಕುರಿತು ಈಗಾಗಲೇ ಅಧ್ಯಯನ ನಡೆದಿದ್ದರೂ ಭೌಗೋಳಿಕ ಓನ್ನೆಲೆಯಾಗಿಟ್ಟಿಕೊಂಡು ನಡೆಸಿದ ಅಧ್ಯಯನ ಇದಾಗಿದೆ. ಇವರ ಹಬ್ಬ ಬದುಕನ್ನು ಇಷ್ಟು ದಿನ ನಡೆಸಿದ

ಸಂಶೋಧನೆಯ ಹಿನ್ನೆಲೆಯಲ್ಲಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ನನ್ನ ಅವಧಿಯಲ್ಲಿ ಸಾಧ್ಯವಿದ್ದಷ್ಟು ಶೋಧನೆಯಲ್ಲಿ ತೊಡಗಿಸಿಕೊಂಡು ಪ್ರಮಾಣಿಕವಾದ ಪ್ರಯತ್ನ ಮಾಡಿದ್ದೇನೆ. ಈ ಅಧ್ಯಯನದಲ್ಲಿ ನನ್ನ ಗಮನಕ್ಕೆ ಬಾರದ ಹಾಗೂ ವ್ಯಕ್ತಪಡಿಸಲಾಗದ ಎಷ್ಟೋ ವಿಷಯಗಳು ಉಳಿದಿವೆ. ಈ ಅಧ್ಯಯನ ಮುಂದಿನ ತೌಲನಿಕ ಅಧ್ಯಯನಗಳಿಗೆ ಸಹಕಾರಿಯಾಗಬಲ್ಲದೆಂಬ ಆಪೇಕ್ಷೆ ಈ ಅಧ್ಯಯನಕ್ಕಿದೆ. ಒಟ್ಟಿನಲ್ಲಿ ಒಂದು ಅಲೆಮಾರಿ ಬುಡಕಟ್ಟಿನ ವಾಸ್ತವ ಬದುಕನ್ನು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನ ಇದಾಗಿದೆ.

ಅಡಿಟಿಪ್ಪಣಿಗಳು

೧. ದಲಿತರು ಮತ್ತು ಜಾಗತೀಕಕರಣ, ಮೊಗಳ್ಳಿ ಗಣೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪುಟ: ೧೦೩

೨. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ ಎಸ್ ಪ್ರಭಾಕರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦, ಪುಟ:೭

೩. ಅದೇ. ಪುಟ: ೧೮

¤ ¤ ¤ ¤ ¤

ಅಧ್ಯಾಯ ೨

ಭೌಗೋಳಿಕ ಹಿನ್ನೆಲೆ

೨.೧. ಪರಿಸರ
೨.೨. ಪ್ರದೇಶ
೨.೩. ಜನಸಂಖ್ಯೆ
೨.೪. ಮೂಲ ಮತ್ತು ಪ್ರಸಾರ
೨.೫. ಇತರ ಬುಡಕಟ್ಟುಗಳೊಡನೆ ಇವರ ಸಾಮ್ಯತೆ
೨.೬. ಹಗಲು ವೇಷಗಾರರ ಬಳಿಗಳು ಮತ್ತು ಸಂಬಂಧ

ಭೌಗೋಳಿಕ ಹಿನ್ನಲೆ

ಕಾಲದಿಂದ ಕಾಲವನ್ನು ವಿವೇಚಿಸುತ್ತಾ ಬಂದರೆ ಕಲೆ ಮತ್ತು ಸಂಸ್ಕೃತಿಯ ಪ್ರತಿಯೊಂದು ಬೇರಿನ ಮಜಲುಗಳು ಭೌಗೋಳಿಕ ಪರಿಸರದ ಹಿನ್ನೆಲೆಯ ಚೌಕಟ್ಟಿನಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು. ಹಲವಾರು ಜನಪದ ಕಲೆಗಳು ದೇಶದಿಂದ ವಿದೇಶಕ್ಕೆ ಪಸರಿಸಿ ಪ್ರಸಾರ ಹೊಂದಿ ಬೆಳೆದವೆಂದರೂ, ಎಲ್ಲೋ ತಮ್ಮ ಮೂಲ ನೆಲೆಯು ಆ ನೆಲದ ಮಣ್ಣಿನ ವಾಸನೆ ತಲೆ ಎತ್ತಿ ನಿಂತು ಬಿಡುತ್ತದೆ. ಇದೇ ವಿಶೇಷ. ಯಾವುದೇ ಜೀವಿ ಪ್ರಪಂಚದ ಎಷ್ಟೇ ಜ್ಞಾನವನ್ನು ಹೊಂದಿದ್ದರೂ ತನ್ನ ಭೌಗೋಳಿಕತೆ ಎಲ್ಲೆ ಒಂದೆಡೆ ಬೆಳಕು ಚದುರಿಸುತ್ತದೆ. ಇದನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲವೆಂದೆನಿಸುತ್ತದೆ. ಅದೇ ರೀತಿ ಈ 'ಹಗಲುವೇಷಗಾರರು' ಸಹ ಭಾರತದ ಐದು ರಾಜ್ಯಗಳಲ್ಲಿ ನೆಲಸಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾ ಚದುರಿದ್ದರೂ ಅವರ ಮೂಲ ನೆಲೆಯನ್ನು ಇನ್ನೂ ಬಿಟ್ಟುಕೊಟ್ಟಿಲ್ಲ.

ಇತಿಹಾಸವನ್ನು ಬಿಚ್ಚಿಡುವ ಪ್ರಮುಖ ಆಕರಗಳಾಗಿ ಸಾಂಸ್ಕೃತಿಕ ಅಂಶಗಳು ದೊರೆಯುತ್ತವೆ. ಈ ಸಾಂಸ್ಕೃತಿಕ ಅಂಶಗಳಿಗೆ ಪ್ರೇರಣೆ ಧಾರ್ಮಿಕ ಅಂಶಗಳಾಗಿ ಹುಟ್ಟಿಕೊಂಡ ಕಲೆಗಳು ಮತ್ತು ಜೀವನಾಧಾರಕ್ಕಾಗಿ ರೂಢಿಸಿಕೊಂಡು ಬಂದ ಕಲೆಗಳೇ ಪ್ರೇರಣೆ. ಪ್ರಪಂಚದಲ್ಲಿ ವಾಸವಾಗಿರುವ ಎಷ್ಟೋ ಬುಡಕಟ್ಟು ಸಮುದಾಯಗಳು ತಮ್ಮ ನಾಗರಿಕತೆ ಬೆಳದಂತೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡು ಹೊಸ ಹೊಸ ಕಲೆಗಳನ್ನು, ಜೀವನ ವಿಧಾನವನ್ನು ಬೆಳೆಸಿಕೊಂಡು ಬಂದಿದ್ದಾನೆ. ಇದಕ್ಕೆಲ್ಲ ಪ್ರೇರಣೆ ಮತ್ತು ಪೋಷಣೆ ಆ ಕಾಲದ ಪರಿಸರ ಮತ್ತು ಅಂದಿನ ಜೀವನಕ್ರಮ. ಇದಕ್ಕಾಗಿಯೇ ಒಂದು ಸಮುದಾಯದ, ಪ್ರಾಂತ್ಯದ ಪರಂಪರೆಯನ್ನು ಗುರುತಿಸಲು, ನಿರ್ಧರಿಸುವ ಅವರವರ ಸಾಂಸ್ಕೃತಿಕ ನೆಲೆಗಳು ಮುಖ್ಯವಾಗುತ್ತವೆ. ಇಂತಹ ಅನುಭವ ಸಾರದಿಂದ ಬೆಳೆದು ಬಂದಂತಹ ನಮ್ಮ ಸಾಂಸ್ಕೃತಿಕತೆ ಒಮ್ಮೆಲೆ ಉದ್ಭವಿಸಿದ್ದಲ್ಲ. ಅದಕ್ಕೆ ತನ್ನದೇ ಆದ ಚರಿತ್ರೆ ಇತಿಹಾಸ ಎಲ್ಲದಕ್ಕೂ ಮಿಗಿಲಾಗಿ ಆ ಮಣ್ಣಿನ ಸೊಗಡಿದೆ, ಸಾಗಿಬಂದ ಕ್ರಮವಿದೆ.

ಯಾವುದೇ ಒಂದು ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಾಗ ಆ ಪ್ರದೇಶದ ಹಿನ್ನಲೆ ತಿಳಿಯಬೇಕಾದುದು ಬಹಳ ಮುಖ್ಯ. ಅದೇ ರೀತಿ ಬಳ್ಳಾರಿ ಮತ್ತು ಅದಕ್ಕೆ ಹೊಂದಿಕೊಂಡಂತಹ ಆಂಧ್ರ ಗಡಿಭಾಗವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಆ ಪ್ರದೇಶದ ಪರಿಚಯ ಇಲ್ಲಿದೆ.

'ಬಳ್ಳಾರಿ ಮತ್ತು ಆಂಧ್ರಗಡಿಭಾಗ' ಈ ಪ್ರದೇಶ ಅನಾದಿ ಕಾಲದಿಂದಲೂ ಕೊಳು-ಕೊಡು ಸಂಬಂಧವನ್ನು ಹೊಂದಿ ನಮ್ಮ ಸಾಂಸ್ಕೃತಿಕ ಮತ್ತು ಕಲಾಪರಂಪರೆಗೆ ಅನನ್ಯ ಕೊಡುಗೆಯನ್ನು ನೀಡಿದೆ. ಶಾತವಾಹನರ ಕಾಲದಿಂದಲೂ, ಇಂದಿನವರೆಗೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಯತೇಚ್ಛವಾದಂತಹ ಸಂಬಂಧ ಹೊಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

೨.೧. ಭೌಗೋಳಿಕ ಪರಿಚಯ

ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆ ಒಂದು. ಒಂದು ಸಾಂಸ್ಕೃತಿಕ ಕೇಂದ್ರ. ಪ್ರಸಿದ್ಧ ರಾಜಮನೆತನಗಳು ಆಳಿದ ಈ ನಾಡು ಐತಿಹಾಸಿಕತೆಗೆ ಹೆಸರಾಗಿದೆ. ಬಳ್ಳಾರಿ ಎಂಬ ಹೆಸರು ಹೇಗೆ ಬಂದಿತೆಂದರೆ ಬಳರಿ, ಬಲ್ಲಹರಿ, ಬಳ್ಳಾರಿ ಇತ್ಯಾದಿಯಾಗಿ ಅನೇಕ ಕಡೆ ಬಳಕೆಗೊಂಡಿದ್ದು, ಇಲ್ಲಿಯ 'ಬಳರಿ' ಎಂಬುದು ಕಾಳಿಯ ಮತ್ತೊಂದು ಹೆಸರು. ಬನದ ಬಳ್ಳಾರಿ, ಬನದ ಬಳರಿ ಎಂದು ಕರೆಯಿಸಿಕೊಳ್ಳುವುದರಿಂದ, ಬನದಲ್ಲಿ ಅಂದರೆ ಅಡವಿಯಲ್ಲಿ ಸ್ಥಾಪಿಸಲ್ಪಡುವ ದೇವತೆಯಾಗಿರಬಹುದೆಂದು ಡಾ.ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ.

ಬಳರಿಯೇ ಬಳ್ಳಾರಿಯ ಪ್ರಸಿದ್ಧ ದುರ್ಗಮ್ಮ ದೇವತೆಯಾಗಿರಬಹುದೆಂದು, ಈ ಮಕಾಳಿ ಅಥವಾ ಬಳರಿ ಇಲ್ಲಿರುವುದರಿಂದ 'ಬಳ್ಳಾರಿ' ಎಂಬ ಹೆಸರು ಈ ಜಿಲ್ಲೆಗೆ ಅನ್ವರ್ಥವಾಗಿ ಬಂದಿರಬಹುದೆಂದು ಅಭಿಪ್ರಾಯ ಕೆಲವರದು. ಡಾ. ಎಂ.ಎಂ. ಕಲಬುರ್ಗಿಯವರು ಕೋಲಾರದಲ್ಲಿ ಕೇಲಾರಮ್ಮ ಎಂಬ ಹೆಸರಿನ ದೇವತೆ ಇರುವುದರಿಂದ ಕೋಲಾರ ಎಂಬ ಹೆಸರು ಬಂದಂತೆ ಬಳ್ಳಾರಿಯಲ್ಲಿ ಬಳಾರಿಯಮ್ಮ ಇರುವುದರಿಂದ ಬಳ್ಳಾರಿ ಎಂಬ ಹೆಸರು ಏಕೆ ಬಂದಿರಬಾರದು ಎಂದು ಪ್ರಶ್ನಿಸುತ್ತಾರೆ.

ಬಳ್ಳಾರಿ ಎಂದು ಹೆಸರು ಬಂದಿರುವ ಬಗ್ಗೆ ಎರಡು ದಂತಕಥೆಗಳನ್ನು ಸಹ ಹೇಳುತ್ತಾರೆ. ಬಲ ಎನ್ನುವ ರಾಕ್ಷಸ ದೇವಕನ್ನಿಕೆಯರನ್ನು ಪೀಡಿಸುತ್ತಿದ್ದ ಸಂದರ್ಭದಲ್ಲಿ ದುರ್ಗಮ್ಮ ಪ್ರತ್ಯಕ್ಷಳಾಗಿ ಬಲ ಎಂಬ ಆ ರಾಕ್ಷಸನನ್ನು ಸಂಹರಿಸಿ ದೇವಕನ್ನಿಕೆಯರನ್ನು ಕಾಪಾಡಿದಳಂತೆ. ಆ ಬಲ ಎನ್ನುವ ರಾಕ್ಷಸನನ್ನು ಕೊಂದ ಸ್ಥಳವೇ ಬಲ + ಹರಿ = ಬಲ್ಲಾರಿ, ಬಳ್ಳಾರಿ ಎಂದಾಗಿದೆ ಎಂದು ಒಂದು ಕಥೆ. ಎರಡನೆಯದು: ಮಲ್ಲಯ್ಯನೆಂಬ ಶಿವಭಕ್ತ ಎಲ್ಲಿಯೇ ಇರಲಿ ಶಿವಪೂಜೆ ಮಾಡದೆ ಆಹಾರ ಸೇವಿಸುತ್ತಿರಲಿಲ್ಲ. ಒಮ್ಮೆ ವ್ಯಾಪಾರ ಮಾಡುತ್ತಾ ಊರುರು ಅಲೆಯುತ್ತಿರುವಾಗ ಆತನಿಗೆ ಕಣ್ಣು ಬೇನೆಯಿಂದ ಕಣ್ಣು ಕಾಣದಂತಾಗಲು ಲಿಂಗಪೂಜೆ ನಿಂತಿತು ಇದನ್ನರಿತ ಆತನ ಭಾವ ಮೈದನನು, ಜೀವಮಂ ತ್ಯಜಿಸು ನಂಗಡ ಭಾವ ಎಂದು ಕಿಟಕಿಯಡಿ ಒಂದು ಹುಲ್ಲು ಮಂಟಪವನ್ನು ಕಟ್ಟಿ ಅದರಲ್ಲಿ ಅಳೆಯುವ ಬಳ್ಳ (ಸೇರು) ತಂದಿರಿಸಿ ಶಿವಮಂದಿರ ಇಲ್ಲಿದೆ ಬನ್ನಿ ಎಂದು ಕರೆತರಲು ಮಲ್ಲಯ್ಯ ಭಕ್ತಿಯಿಂದ ನಮಃ ಶಿವಾಯ ಎಂದು ಬಳ್ಳವನ್ನು ಲಿಂಗವೆಂದು ಪೂಜಿಸಿ ಪ್ರಸಾದ ಸೇವಿಸಿದ. ಆತನ ಭಾವಮೈದನ ಮಲ್ಲಯ್ಯ ಭಾವಲಿಂಗವೆಂದು ಬಳ್ಳವನ್ನು ಪೂಜಿಸಿ ಹೊಟ್ಟೆಯಲ್ಲಿರಿಯುವಂತೆ ಉಂಡ, ಹುಲ್ಲು ಗುಡಿಸಲಲ್ಲಿಯ ಬಳ್ಳ ತನ್ನಿರೋ ಅಳೆಯಲಿಕ್ಕೆ ಹಸಿವಿಗೆ, ಆಪತ್ತಿಗೆ ಅದುವೇ ದೈವ ಎಂದು ಅಪಹಾಸ್ಯ ಮಾಡಿದನಂತೆ ಅದನ್ನು ಕೇಳಿ

ಎಲವೋ ಅದು ಬಳ್ಳವಲ್ಲ ಸಾಕ್ಷಾತ್ ಶಿವಲಿಂಗ ನಡೆಯಿರಿ ತೋರಿಸುವೆ ಎಂದು ಮಲ್ಲಯ್ಯ ಅವರೊಂದಿಗೆ ಅಲ್ಲಿಗೆ ಬಂದನು. ಆ ಹುಲ್ಲು ಮಂಟಪ, ದಿವ್ಯ ಮಂಟಪ ದಿವ್ಯ ಮಂದಿರವಾಗಿತ್ತು. ಬಳ್ಳ ಲಿಂಗವಾಗಿತ್ತು. ಆ ಲಿಂಗವೇ ಬಳ್ಳೇಶ್ವರ ಲಿಂಗ ಎಂದು ಹೆಸರು ಪಡೆಯಿತು. ಈ ಪವಾಡ ನಡೆದ ಬಳ್ಳ + ಅರೆಯಾದ ಸ್ಥಳವೇ ಬಳ್ಳಾರಿಯಾಯಿತು ಎಂಬ ವದಂತಿ ಇದೆ.”[೧]

ಬಳ್ಳಾರಿ ಜಿಲ್ಲೆಯು ೧೫° ರಿಂದ ೩೦°ವರೆಗೆ ರೇಖಾಂಶ ಕರ್ನಾಟಕದ ಪೂರ್ವಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ೧೪°-೩೦° ಮತ್ತು ಉತ್ತರ ಅಕ್ಷಾಂಶ ಹಾಗೂ ೭೫° ರಿಂದ ೪೦° ವರೆಗೆ ಮತ್ತು ೭೭° ರಿಂದ ೧೧° ವರೆಗೆ ರೇಖಾಂಶ ಇವುಗಳ ಮಧ್ಯದಲ್ಲಿದೆ. ಈ ಜಿಲ್ಲೆಯ ಉತ್ತರದಲ್ಲಿ ರಾಯಚೂರು ಜಿಲ್ಲೆ ಪಶ್ಚಿಮದಲ್ಲಿ ಧಾರವಾಡ ಜಿಲ್ಲೆ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆ ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ, ಅನಂತಪುರ ಜಿಲ್ಲೆ ಮತ್ತು ಕಡಪಾ ಜಿಲ್ಲೆಗಳನ್ನು ಸುತ್ತುವರಿದಿದೆ. ತುಂಗಭದ್ರ ನದಿಯು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಮೇರೆಯಾಗಿ ಹರಿಯುತ್ತಿದೆ. ಸಾಮಾನ್ಯವಾಗಿ ಈ ಜಿಲ್ಲೆಯಲ್ಲಿ ಕಪ್ಪುಮಣ್ಣಿನ ಪ್ರದೇಶವೇ ಹೆಚ್ಚಾಗಿದೆ. ಜೊತೆಗೆ ಕಲ್ಲು ಮತ್ತು ಬೆಣಚು ಕಲ್ಲುಗಳಿಂದ ಮಿಶ್ರಗೊಂಡಿರುತ್ತದೆ. ಅಲ್ಲದೆ ಈ ಜಿಲ್ಲೆ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಂದ ವಿಶ್ವವಿಖ್ಯಾತಿಗಳಿಸಿದೆ. ಈ ಜಿಲ್ಲೆಯಲ್ಲಿ ಇನ್ನೂ ಅನೇಕ ಲೋಹ ಮತ್ತು ಲೋಹೇತರ ಖನಿಜಗಳು ಲಭ್ಯವಿದೆ. ಕಬ್ಬಿಣದ ಅದಿರಿನ ನಿಕ್ಷೇಪ ಪ್ರಮಾಣ ೧೮.೮೧ ದಶಲಕ್ಷ ಟನ್ ಎಂದು ಅಂದಾಜು ಮಾಡಲಾಗಿದೆ. ಇಲ್ಲಿ ಉತ್ಪಾದನೆಯಾಗುವ ಕಬ್ಬಿಣದ ಅದಿರು ಅರ್ಧಕ್ಕಿಂತ ಹೆಚ್ಚು ಭಾಗವು ವಿದೇಶಿಗಳಿಗೆ ರಫ್ತಾಗುತ್ತಿದೆ. ಇದು ಸಂಡೂರು ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು ಜಿಲ್ಲೆಯಲ್ಲಿ ಇದು ಪ್ರಥಮ ಸ್ಥಾನದಲ್ಲಿದೆ. ಹೊಸಪೇಟೆ ಎರಡನೆ ಸ್ಥಾನ ಪಡೆದುಕೊಂಡಿದೆ.”

ಈ ಜಿಲ್ಲೆಯ ಪ್ರಮುಖ ನದಿ ತುಂಗಭದ್ರ, ಅದರ ಉಪನದಿ ವೇದಾವತಿ ಅಥವಾ ಹಗರಿ. ಈ ಜಿಲ್ಲೆಯು ಅಧಿಕ ಉಷ್ಣಾಂಶದಿಂದ ಕೂಡಿರುವುದಾಗಿರುತ್ತದೆ. ಚಳಿಗಾಲದಲ್ಲಿ ಕನಿಷ್ಠ ೧೫° ಸೆಂಟಿಗ್ರೇಡ್‌ನಷ್ಟು ಹೊಂದಿದ್ದರೆ, ಮಾರ್ಚ್‌ನಿಂದ ಮೇ ತಿಂಗಳವರೆಗಿನ ಬೇಸಿಗೆಯ ಬಿಸಿಲಿನ ತಾಪವು ಗರಿಷ್ಟ ಉಷ್ಣಾಂಶ ೪೩°ಸೆ.ವರೆಗೂ ಇರುತ್ತದೆ. ಇಲ್ಲಿರುವುದು ಎರಡೇ ಕಾಲ ಬೇಸಿಗೆ, ಅತಿ ಬೇಸಿಗೆ ಎಂದು ಎಲ್ಲರೂ ಹೇಳುತ್ತಾರೆ.

ಜಿಲ್ಲೆಯ ವಿಸ್ತೀರ್ಣ ೯೮೮೫ ಚದುರ ಕಿಲೋಮೀಟರ್‌ಗಳಷ್ಟಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ ೫.೧೬ ರಷ್ಟಿದ್ದು, ೧೧ನೇ ಸ್ಥಾನದಲ್ಲಿದೆ. ಜಿಲ್ಲೆಯ ವಿಸ್ತೀರ್ಣದಲ್ಲಿ ಬಳ್ಳಾರಿ ತಾಲೂಕು ಹೆಚ್ಚಿನ ವಿಸ್ತೀರ್ಣ ೧೯೮೯ ಚ.ಕಿ.ಮೀ ಅತಿ ಕಡಿಮೆ ಎಂದರೆ ಹೊಸಪೇಟೆ ತಾಲೂಕು ೯೪೩ ಚ.ಕಿ.ಮೀ ಹೊಂದಿರುತ್ತದೆ. ಈ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ. ೧. ಬಳ್ಳಾರಿ, ೨. ಹೊಸಪೇಟೆ, ೩. ಹೂವಿನಹಡಗಲಿ, ೪. ಹಗರಿಬೊಮ್ಮನಹಳ್ಳಿ, ೫. ಕೂಡ್ಲಿಗಿ, ೬. ಸಂಡೂರು ಮತ್ತು ೭. ಶಿರಗುಪ್ಪ. ಜಿಲ್ಲೆಯ ಕೇಂದ್ರಾಡಳಿತ ಪ್ರದೇಶ ಬಳ್ಳಾರಿ ಅದು ರಾಜಧಾನಿಯಿಂದ ಸುಮಾರು ೩೦೯ ಕಿ.ಮೀ. ದೂರದಲ್ಲಿದೆ. ಜಿಲ್ಲೆಯಲ್ಲಿ ೬೧೭ ಗ್ರಾಮಗಳಿವೆ.

ಈ ಜಿಲ್ಲೆಯಲ್ಲಿ ಪ್ರತಿಯೊಂದು ಲಕ್ಷ ಜನಸಂಖ್ಯೆಗೆ ೨೪ ವೈದ್ಯಕೀಯ ಸಂಸ್ಥೆಗಳಿವೆ. ಪ್ರತಿಯೊಂದು ಲಕ್ಷ ಜನಸಂಖ್ಯೆಗೆ ೬೩ ಹಾಸಿಗೆಗಳಿವೆ. ಪ್ರತಿಯೊಂದು ಲಕ್ಷ ಜನಸಂಖ್ಯೆಗೆ ೬ ಸರಕಾರಿ ವೈದ್ಯರಿದ್ದಾರೆ. ಬಳ್ಳಾರಿ ಜಿಲ್ಲೆಯು ಬರಗಾಲಕ್ಕೆ ಹೆಸರುವಾಸಿಯಾಗಿರುವ ಪ್ರದೇಶ. ಹಿಂಗಾರು ಮತ್ತು ಮುಂಗಾರು ಎರಡೂ ಕಾಲಗಳಲ್ಲೂ ಬೇಸಾಯ ಮಾಡುತ್ತಾರೆ. ನೀರಾವರಿ ಭೂಮಿಗಿಂತ ಮಳೆ ಆಶ್ರಿತ ಭೂಮಿ ಹೆಚ್ಚು. ಇಲ್ಲಿಯ ಪ್ರಧಾನ ಬೆಳೆಗಳೆಂದರೆ ಜೋಳ, ಭತ್ತ, ಕಬ್ಬು, ಸೂರ್ಯಕಾಂತಿ, ಬಾಳೆ, ಮೆಣಸಿನಕಾಯಿ, ನವಣೆ, ಸಜ್ಜೆ, ಹತ್ತಿ, ಶೇಂಗಾ, ಈರುಳ್ಳಿ, ತೊಗರಿ, ಹೆಸರು, ಹಲಸಂದಿ ಬೆಳೆಯುತ್ತಾರೆ.”[೨]

ಕರ್ನಾಟಕ ರಾಜ್ಯದ ಹಾಗೂ ಬಳ್ಳಾರಿ ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ ಇರುವ ಆಂಧ್ರಪ್ರದೇಶ ಕುರಿತು ಹೇಳುವುದಾದರೆ, ‘ಆಂಧ್ರ’ ಎಂಬ ಪದ ಒಂದು ಪ್ರದೇಶದ ನಾಡು, ನುಡಿ ಮತ್ತು ಜನಾಂಗ ಈ ಮೂರನ್ನು ಪ್ರತಿನಿಧಿಸುತ್ತದೆ. ಪ್ರಚಲಿತವಾಗಿರುವ ಮತ್ತೊಂದು ಹೆಸರೆಂದರೆ ತೆಲುಗು. ಭಾರತದಲ್ಲಿ ಈ ಪ್ರದೇಶ ೨,೭೫,೦೬೮ ಚ.ಕಿ.ಮೀಗಳಲ್ಲಿ ವ್ಯಾಪಿಸಿದೆ. ಇದು ಕನಿಷ್ಟ ೧೩° ಗರಿಷ್ಟ ೧೪° ಹಾಗೂ ೨೦° ಗರಿಷ್ಟ ರೇಖಾಂಶದಲ್ಲೂ ೭೭ ಕನಿಷ್ಠ ಹಾಗೂ ೮೪° ಗರಿಷ್ಠ ೪೦° ಕನಿಷ್ಟ ಅಕ್ಷಾಂಶ ರೇಖೆಯಲ್ಲೂ ಹರಡಿಕೊಂಡಿದೆ. ಇದರ ಮೂಡಲ ದಿಕ್ಕಿನಲ್ಲಿ ೬೦೦ ಮೈಲಿಗಳ ತೀರ ಪ್ರದೇಶವಿದೆ. (ಒಟ್ಟು ೯೮೨ ಕಿ.ಮೀ ನಷ್ಟಿದೆ) ಆಂಧ್ರಭೂಮಿ ಬಂಗಾಳಕೊಲ್ಲಿಗೆ ಪಡುವಣ ದಿಕ್ಕಿನಲ್ಲಿದೆ. ಉತ್ತರದಲ್ಲಿ ಒರಿಸ್ಸಾ ಮತ್ತು ಮಧ್ಯಪ್ರದೇಶ, ದಕ್ಷಿಣ ದಿಕ್ಕಿನಲ್ಲಿ ತಮಿಳುನಾಡು ಇದಕ್ಕೆ ಗಡಿಪ್ರದೇಶಗಳಾಗಿವೆ. ಪಶ್ಚಿಮದಲ್ಲಿ ಉತ್ತರಕ್ಕೆ ಮಹಾರಾಷ್ಟ್ರವೂ ದಕ್ಷಿಣಕ್ಕೆ ಕರ್ನಾಟಕವೂ ಇದೆ.

ಆಂಧ್ರಪ್ರದೇಶದಲ್ಲಿ ಮುಖ್ಯವಾಗಿ ಮೂರು ಪ್ರಾಂತ್ಯಗಳಿವೆ. ೧. ಕೋಸ್ತಾ ಜಿಲ್ಲಾ, ೨. ರಾಯಲಸೀಮೆ ಜಿಲ್ಲೆಗಳು ೩. ತೆಲಂಗಾಣ ಜಿಲ್ಲೆಗಳು, ಕೋಸ್ತಾ ಜಿಲ್ಲೆಗಳು ಶ್ರೀ ಕಾಕುಳಂ, ವಿಜಯ ನಗರಂ, ವಿಶಾಕಪಟ್ನಂ, ತೂರ್ಪು ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣ, ಗುಂಟೂರು, ಪ್ರಕಾಶಂ, ನೆಲ್ಲೂರು, ರಾಯಲಸೀಮೆ ಜಿಲ್ಲೆಗಳು ಚಿತ್ತೂರು, ಕಡಪ, ಕರ್ನೂಲು, ಅನಂತಪುರಂ, ತೆಲಂಗಾಣ ಜಿಲ್ಲೆಗಳು, ಮಹಬೂಬ್ ನಗರ, ಹೈದರಾಬಾದ್, ರಂಗಾರೆಡ್ಡಿ, ಮೆದಕ್, ನಿಜಾಮಾಬಾದ್, ಆದಿಲಾಬಾದ್, ಕರಿಂನಗರ, ವಾರಂಗಲ್, ಕಮ್ಮಂ, ನಲ್ಗೊಂಡ. ಒಟ್ಟು ೨೩ ಜಿಲ್ಲೆಗಳಿವೆ. ಆಂಧ್ರದ ಒಟ್ಟು ವಿಸ್ತೀರ್ಣ ೨,೭೫,೦೬೮ ಚ.ಕಿ.ಮೀಗಳು ಜನಸಂಖ್ಯೆ ೬,೬೫,೦೮,೦೦೮ (೧೯೯೧) ಭಾರತದ ರಾಜ್ಯಗಳಲ್ಲಿ ವಿಸ್ತೀರ್ಣ ಹಾಗೂ ಜನಸಂಖ್ಯೆಯಲ್ಲಿ ಆಂಧ್ರಪ್ರದೇಶ ಐದನೆ ಸ್ಥಾನದಲ್ಲಿದೆ. ಪುರುಷರ ಅಕ್ಷರಸ್ಥರ ಸಂಖ್ಯೆ ೩,೩೬,೨೩೭೩೮ ಮಹಿಳೆಯರ ಸಂಖ್ಯೆ ೩೩೧೮೪೨೭೦ ವಾರ್ಷಿಕ ಬೆಳವಣಿಗೆ ೨% ಪುರುಷರ ಸಂಖ್ಯೆ ೫೬.೨೪% ಮಹಿಳೆಯರ ಅಕ್ಷರಸ್ಥರ ಸಂಖ್ಯೆ ೩೩.೭೧% ರಾಜ್ಯಸಭೆಯ ಸ್ಥಾನಗಳು ೧೮ ಲೋಕಸಭೆಯ ಸ್ಥಾನಗಳು ೪೨, ವಿಧಾನಸಭಾ ಸ್ಥಾನಗಳು ೨೯೪ ಗ್ರಾಮಗಳ ಸಂಖ್ಯೆ ೨೯೩೭೯ ಅತಿದೊಡ್ಡ ಜಿಲ್ಲೆ ಹೈದ್ರಾಬಾದ್ ಅತ್ಯಂತ ಸಣ್ಣ ಜಿಲ್ಲೆ ಅನಂತಪುರಂ.

ಈ ರಾಜ್ಯದಲ್ಲಿ ಹಿಂಗಾರು ಮತ್ತು ಮುಂಗಾರು ಎರಡೂ ಕಾಲದಲ್ಲಿಯೂ ಬೇಸಾಯ ಮಾಡುತ್ತಾರೆ. ಈ ರಾಜ್ಯಕ್ಕೆ ವ್ಯವಸಾಯವೇ ಪ್ರಧಾನ. ನೂರಕ್ಕೆ ೭೦ ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಇಲ್ಲಿ

ಬೆಳೆಯುವ ಮುಖ್ಯ ಬೆಳೆಗಳೆಂದರೆ ಭತ್ತ, ಜೋಳ, ಸಜ್ಜೆ, ಮೆಕ್ಕೆ ಜೋಳ, ರಾಗಿ, ಹೆಸರು, ಹಲಸಂದಿ, ಶೇಂಗಾ, ಮೆಣಸು, ಎಣ್ಣೆಕಾಳುಗಳು, ಕಬ್ಬು, ತೆಂಗು, ಕುಸುಬೆ, ತಂಬಾಕು, ಹತ್ತಿ, ಮೆಣಸಿನಕಾಯಿ, ಹರಿಷಿಣಕೊಂಬು, ಹುರುಳಿ ಪ್ರಮುಖವಾದವುಗಳು. ಮಾವಿನ ಹಣ್ಣಿಗೆ ಬಹಳ ಪ್ರಸಿದ್ಧಿ ಹೊಂದಿದೆ. ಇಲ್ಲಿಯ ಭೂಮಿ ಕೆಂಪು ಮಿಶ್ರಿತ ಮತ್ತು ಕೆಂಪು, ಕಪ್ಪು, ಎರೆಭೂಮಿಯನ್ನು ಹೊಂದಿದೆ. ಹೆಚ್ಚು ಕೆಂಪು ಭೂಮಿಯನ್ನು ಹೊಂದಿದ್ದು ಅದು ಗ್ರಾನೈಟ್ ಶಿಲೆಯಿಂದ ಕೂಡಿದೆ. ಆಂಧ್ರಪ್ರದೇಶದಲ್ಲಿ ೬೪,೧೫೪ ಚ.ಕಿ.ಮೀನಷ್ಟು ಅರಣ್ಯವಿದೆ. ದೇಶದಲ್ಲಿ ಐದನೆಯ ಸ್ಥಾನದಲ್ಲಿದ್ದು ಹಲವಾರು ರೀತಿಯ ಬೆಲೆಬಾಳುವ ಗಿಡಮರಗಳನ್ನು ಹೊಂದಿ ಆರ್ಥಿಕ ಸಂಪತ್ತನ್ನು ಹೆಚ್ಚಿಸಿದೆ.

ಆಂಧ್ರಪ್ರದೇಶದ ಭೂಭಾಗವು ವಾಯುವ್ಯ ದಿಕ್ಕಿಗೆ ಎತ್ತರವಾಗಿದ್ದು ಆಗ್ನೇಯ ದಿಕ್ಕಿನ ಕಡೆಗೆ ಇಳಿಜಾರಿದೆ. ಆದುದರಿಂದ ಇಲ್ಲಿ ಹರಿಯುವ ನದಿಗಳೆಲ್ಲಾ ವಾಯುವ್ಯ ದಿಕ್ಕಿನಿಂದ ಆಗ್ನೇಯ ದಿಕ್ಕಿಗೆ ಹರಿಯುತ್ತವೆ. ಇಲ್ಲಿನ ಮುಖ್ಯ ನದಿಗಳೆಂದರೆ ಗೋದಾವರಿ, ಕೃಷ್ಣ, ಪೆನ್ನಾ, ತುಂಗಭದ್ರ, ಭೀಮ, ಮಂಜಿರ. ಪ್ರಾಣಹಿತ, ಮೂಸಿನದಿ, ಬಂಡಿನದಿ, ಪಾಲೇರು, ಮುನ್ನೇರು, ವಂಶಧಾರ, ನಾಗಾವಳಿ, ಮಾಚ್‌ಖಂಡ್ ನದಿ, ಗುಂಡ್ಲಕಮ್ಮ, ಸರಸ್ವಲು ಇಷ್ಟು ನದಿಗಳು ಈ ರಾಜ್ಯದಲ್ಲಿ ಹರಿಯುವ ಇತರೆ ಉಪನದಿಗಳು.[೩]

ಆಂಧ್ರಪ್ರದೇಶದ ಉತ್ತರ ದಿಕ್ಕಿನಿಂದ ದಕ್ಷಿಣದ ಕಡೆಗೆ ಪರ್ವತದ ಸಾಲುಗಳಿವೆ. ಇವು ರಾಜ್ಯದ ಮಧ್ಯದಲ್ಲಿದ್ದು ಪಶ್ಚಿಮಾಂಧ್ರ ಮತ್ತು ಪೂರ್ವಾಂಧ್ರ ಅಥವಾ ಆಂಧ್ರ ಕರಾವಳಿಯನ್ನಾಗಿ ವಿಭಜಿಸಿವೆ. ಆಂಧ್ರದ ಇತಿಹಾಸ ಮತ್ತು ಜನಜೀವನದಲ್ಲಿ ಈ ಪರ್ವತಗಳು ಪ್ರಮುಖ ಪಾತ್ರವಹಿಸಿವೆ. ಉತ್ತರದಲ್ಲಿ ಸಿಂಹಾಚಲ ಮತ್ತು ಅನ್ನವರಂ ಪರ್ವತಗಳು. ಮಧ್ಯಭಾಗದಲ್ಲಿ ಶ್ರೀಶೈಲ ಪರ್ವತಶ್ರೇಣಿ ಹಾಗೂ ದಕ್ಷಿಣದಲ್ಲಿ ತಿರುಪತಿ ತಿರುಮಲ ಪರ್ವತಗಳಿವೆ. ಈ ಪರ್ವತ ಪ್ರದೇಶದಲ್ಲಿರುವವರು ಕೋಯ, ಚೆಂಚು, ಸವರ ಮುಂತಾದ ಬುಡಕಟ್ಟು ಜನಾಂಗಗಳಿಗೆ ಸೇರಿದ್ದಾರೆ. ಆಂಧ್ರಕ್ಕೆ ಸಂಬಂಧಿಸಿದ ಜನಸಮುದಾಯ ಇತಿಹಾಸವನ್ನು ಅತ್ಯಂತ ಪ್ರಾಚೀನ ಕಾಲಕ್ಕೆ ಕರೆದೊಯ್ಯಬಹುದು. ವೇದ, ಪುರಾಣ, ಬೌದ್ಧ ಗ್ರೀಕ್ ಸಾಹಿತ್ಯ ಮುಂತಾದವುಗಳಲ್ಲಿ ಆಂಧ್ರರನ್ನು ಕುರಿತು ಉಲ್ಲೇಖಗಳಿವೆ. ಐತೀಯ ಬ್ರಾಹ್ಮಣದಲ್ಲಿ ವಿಂಧ್ಯೆಗೆ ಆಗ್ನೇಯದಲ್ಲಿ ವಾಸಮಾಡುತ್ತಿದ್ದ ಆಂಧ್ರರನ್ನು ಪುಂಡ್ರ, ಪುಳಿಂದ, ಶಬರ ಮತ್ತು ಮಾತಿಬರೆಂಬ ಬುಡಕಟ್ಟು ಜನಾಂಗಕ್ಕೆ ಸೇರಿದವರೆಂದು ತಿಳಿಸಲಾಗಿದೆ. ನಂತರ ಗೋದಾವರಿ ತೀರಾ ಪ್ರಾಂತ್ಯದ ಆಂಧಕರಟ್ಟವೆಂದು ಹೇಳಲಾಗಿದೆ.

ಆಂಧ್ರಪ್ರದೇಶದಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಇದ್ದಿಲು, ಸುಣ್ಣದ ಕಲ್ಲು, ಕರಿಯ ಕಲ್ಲು, ಸೀಸ, ಮ್ಯಾಂಗನೀಸ್, ಗ್ರಾನೈಟ್ ಕಲ್ಲಿಗೆ ಬಹಳ ಹೆಸರುವಾಸಿಯಾದಂತಹ ನಾಡಾಗಿದೆ.

'ಗಡಿ' ಎಂದರೆ ಗಡಿ ಹಡಗಿನ ಗಡ, A Term, A limit (ಅನ್ತರ, ಅವಧಿ) ರಾಷ್ಟ್ರದ ಕಡೆ, A place and abode ಇಮ್ಮುಗೊತ್ತು ನೆಲೆ to go beyound the common limits.[೪] ಗಡಿ-ಗಡೆ,

ಗಳೆ, ಗಡು (ಮಿತಿ, ಸಮಯದ ಮಿತಿ, ಅವಧಿ) ನಾಡಗಡಿ, ಒಂದು ನೆಲೆ, ನೆತಾಣ.[೫] ಗಡಿ=A Small fort ಪೊಮೇರ, ಯಗುಚು ನದಿ ಗಡಿ, ಅಂತು, ಮೇರ, ಗಡಿಮೆರ, ಕೂಟಗಿತ್ತ, ಕೊಡೆದುಟ[೬] ಎಂದು ಮೇಲಿನಂತೆ ಗಡಿಗೆ ಅರ್ಥ ಸೂಚಿಸಿದ್ದಾರೆ. (ಈ ಕೊನೆಯ ಸಾಲಿನಲ್ಲಿ ತೆಲುಗಿನ ಅಕ್ಷರಗಳನ್ನು ಕನ್ನಡದಲ್ಲಿ ಬರೆದಿದ್ದೇನೆ.) ಒಟ್ಟಿನಲ್ಲಿ ಗಡಿ ಎಂದರೆ ರಾಷ್ಟ್ರದ ಕಡೆ, ರಾಜ್ಯದ ಕಡೆ, ಕೊನೆ ಎಂಬ ಅರ್ಥವಿದೆ. ಗಡಿಯ ಕಲ್ಪನೆ ಈಚಿನದಾಗಿದೆ. ಮೊದಲೆಲ್ಲಾ ನಾಡಿನ ಕಲ್ಪನೆಯಿದ್ದುದು ಕಂಡುಬರುತ್ತದೆ. ಅಂತು ಮೇರೆ, ಗಡಿಮೇರೆ ಕೊನೆಯತಾಣ ಎಂಬುದಾಗಿ ತೋರಿಸುತ್ತದೆ. ನಮ್ಮ ವಿಷಯಕ್ಕೆ ಹೊಂದಿಕೊಂಡಂತೆ 'ಬಳ್ಳಾರಿ ಮತ್ತು ಆಂಧ್ರ ಗಡಿಭಾಗ' ಎಂದರೆ ಬಳ್ಳಾರಿ ಜಿಲ್ಲೆಯನ್ನು ಹೊಂದಿಕೊಂಡಂತಹ ಆಂಧ್ರ ಗಡಿಭಾಗವನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

ಬಳ್ಳಾರಿಯು ರಾಜ್ಯದ ಮಧ್ಯದಲ್ಲಿದ್ದು ಹೃದಯದಂತಿದೆ. ಈ ಪ್ರದೇಶವು ಕರ್ನಾಟಕದ ಸಂಸ್ಕೃತಿಯೆಲ್ಲವನ್ನು ಅಡಗಿಸಿಕೊಂಡಿದೆ. ಕರ್ನಾಟಕದಲ್ಲಿ ಬಳ್ಳಾರಿ ಮತ್ತು ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಂತಹ ಆಂಧ್ರ ಗಡಿಭಾಗಕ್ಕೆ 'ರಾಯಲಸೀಮೆ' ಎಂದು ಕರೆಯುತ್ತಾರೆ. ಈ ಪ್ರದೇಶವು ಆಂಧ್ರ ಮತ್ತು ಕರ್ನಾಟಕದ ಮಧ್ಯದಲ್ಲಿದ್ದು ಆಂಧ್ರಕರ್ನಾಟಕದ ಸಂಸ್ಕೃತಿಯೆಲ್ಲವನ್ನು ತನ್ನೊಡಲಲ್ಲಿ ಅಡಗಿಸಿಕೊಂಡಿದೆ. ಈ ಪ್ರದೇಶದಲ್ಲಿ (ಬಳ್ಳಾರಿ ಆಂಧ್ರಗಡಿಭಾಗದಲ್ಲಿ) ಹಗಲುವೇಷಗಾರರು ಹೆಚ್ಚು ವಾಸಿಸುತ್ತಿದ್ದು, ಅವರು ಇಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಛಾಪವನ್ನು ಬೀರಿದ್ದಾರೆ. ಪ್ರಸ್ತುತ ಸಂಶೋಧನೆಯ ಪ್ರದೇಶವು ಎರಡೂ ರಾಜ್ಯದ ಗಡಿಭಾಗದ ಎಲ್ಲಾ ಅಂಶಗಳನ್ನು ಒಳಗು ಮಾಡಿಕೊಂಡಿದೆ. ಈ ಪ್ರದೇಶವನ್ನು ಅಧ್ಯಯನಕ್ಕೆ ಒಳಪಡಿಸುವುದರ ಮೂಲಕ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿಯ 'ಹಗಲುವೇಷಗಾರ'ರ ಅಥವಾ 'ಬುಡಗಜಂಗಾಲ'ರ ಇತ್ತೀಚಿಗೆ ಬದುಕು ಬವಣೆ ಹಾಗೂ ಆಧುನಿಕ ಬದುಕಿಗೆ ಹೊಂದಿಕೊಳ್ಳಲಾಗದ ಹಳೆಬದುಕನ್ನು ಬಡರೊಲ್ಲದ ಗೊಂದಲಮಯ ಬದುಕಿನ ಚಕ್ರವನ್ನು ಸಮಗ್ರವಾಗಿ ಪರಿಚಯಿಸಿವುದು ಸಾಧ್ಯವಿದೆ. ಈ ಪ್ರದೇಶ ಕಾಲಕಾಲಕ್ಕೆ ಸಮೃದ್ಧವಾದ ಕಲೆ, ಸಾಹಿತ್ಯ, ಸಾಂಸ್ಕೃತಿಕ ಅಂಶಗಳನ್ನು ಉಳಿಸಿ, ಬೆಳೆಸಿಕೊಂಡು ಸಾಂಸ್ಕೃತಿಕ ಪರಂಪರೆಗೆ ಸಲ್ಲಿಸಿದ ಸೇವೆ ಅಪಾರವಾದದ್ದು.

ಹಿಂದಿನಿಂದಲೂ ಬಳ್ಳಾರಿ ಮತ್ತು ಅದಕ್ಕೆ ಹೊಂದಿಕೊಂಡಂತಹ ಗಡಿಭಾಗಕ್ಕೆ ಅವಿನಾಭಾವ ಸಂಬಂಧವಿದ್ದು, ಒಂದೇ ತೋಳಿನ ತೆಕ್ಕೆಯಲ್ಲಿ ಬೆಳೆದಂತಹ ಪ್ರದೇಶಗಳಾಗಿವೆ. ಶಾತವಾಹನರ ಏಳಿಗೆಯೊಂದಿಗೆ ಆಂಧ್ರರ ಇತಿಹಾಸ ಪ್ರಾರಂಭವಾಗುತ್ತದೆ. ಇವರ ಕಾಲದಲ್ಲಿ ಆಂಧ್ರರು ಕುದುರೆಯ ಮೇಲೆ ಬಳ್ಳಾರಿಗೆ ವ್ಯಾಪಾರಕ್ಕೆ ಬಳ್ಳ ತೆಗೆದುಕೊಂಡು ಬರುತ್ತಿದ್ದರೆಂದು ಹೇಳುತ್ತಾರೆ. ಏಳನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರು ಅಧಿಕಾರಕ್ಕೆ ಬಂದಾಗ ಇಮ್ಮಡಿ ಪುಲಕೇಶಿಯ ತಮ್ಮನಾದ ಕುಬ್ಜ ವಿಷ್ಣುವರ್ಧನನು ಮಾಡಿದ ಯುದ್ಧ ಸಹಾಯವನ್ನು ಗುರುತಿಸಿ, ಇಮ್ಮಡಿ ಪುಲಕೇಶಿ ಕುಬ್ಜ ವಿಷ್ಣುವರ್ಧನನ್ನು ಕಳಿಂಗದಿಂದ ನೆಲ್ಲೂರಿನವರೆಗೆ ವ್ಯಾಪಿಸಿರುವ ಮೂಡಲ ಸಮುದ್ರ ತೀರಪ್ರದೇಶದ ಸಾಮಂತನನ್ನಾಗಿ ಮಾಡಿದನು. ಪ್ರತಾಪರುದ್ರನು ಆಳುತ್ತಿದ್ದ ಓರಂಗಲ್ಲಿನ ಕಾಕತೀಯ ಸಾಮ್ರಾಜ್ಯದ ಪತನಾನಂತರ ೧೩೨೩ರಲ್ಲಿ ಅವನ

ಬಳಿ ಮುಖ್ಯ ಉದ್ಯೋಗಿಗಳಾಗಿದ್ದ ಹರಿಹರ ಮತ್ತು ಬುಕ್ಕ ಉತ್ತರದ ಆಕ್ರಮಣಕಾರರನ್ನು ತಡೆಯುವ ಉದ್ದೇಶದಿಂದ ವಿಜಯನಗರವನ್ನು ಸ್ಥಾಪಿಸಿದರು. ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರ ರಾಜ್ಯ ಪತನವಾದ ನಂತರ ತೆಲುಗು ದೇಶವೆಲ್ಲಾ ನಿಧಾನವಾಗಿ ಗೋಲ್ಕೊಂಡದ ಕುತುಬ್‌ಶಾಹಿಗಳ ಅದೀನವಾಯಿತು. ಪಶ್ಚಿಮಾಂಧ್ರದ ಬಳ್ಳಾರಿ, ಅನಂತಪುರ, ಕರ್ನೂಲು, ಕಡಪ ಹಾಗೂ ಚಿತ್ತೂರುಗಳನ್ನು ಇಂಗ್ಲೀಷರಿಗೆ ದತ್ತಿಯಾಗಿ ಕೊಡಲಾಯಿತು.[೬] ಶಿವಾಜಿಯು ಅನೇಕ ಸಾರಿ ಈ ಪ್ರದೇಶದ ಮೇಲೆ ದಾಳಿ ನಡೆಸಿ 'ಚೌತ್' ಎನ್ನುವ ತೆರಿಗೆ ವಸೂಲಿಯ ಹಕ್ಕನ್ನು ಹೊಂದಿದ್ದನು. ಮೊಗಲರ ದೊರೆ ಔರಂಗಜೇಬನು 'ಈ ದತ್ತ ಮಂಡಲಂ' ಎನ್ನುವ ಪ್ರದೇಶವನ್ನು ಹೈದ್ರಾಬಾದ್ ಆಡಳಿತದಲ್ಲಿ ಸುಬಾಲೋ ಒಂದು ಭಾಗವಾಗಿ ಸೇರಿಸಿದ್ದಾನೆ. ಹೈದ್ರಾಬಾದಿನ ನವಾಬರ ದೌರ್ಜನ್ಯದಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ಮಹಾರಾಷ್ಟ್ರದವರು ಮತ್ತು ನವಾಬರು ಹೊಡೆದಾಡುವಾಗ ಮೈಸೂರಿನ ಹೈದರಾಲಿ ದಾಳಿನಡೆಸಿ ರಾಯದುರ್ಗ, ಬಳ್ಳಾರಿ, ಉರವಕೊಂಡ, ಸಿದ್ದವಟಂ ಕೋಟೆಗಳನ್ನು ವಶಪಡಿಸಿಕೊಂಡು ನಂತರ ಆತನ ಪುತ್ರನಾದ ಟಿಪ್ಪುಸುಲ್ತಾನ್‌ನನ್ನು ರಾಜ್ಯಾಧಿಪತಿಯನ್ನಾಗಿ ಮಾಡಿದನು. ಈತನು ಪಾಳೆಯಗಾರರ ದೌರ್ಜನ್ಯವನ್ನು ಅಡಗಿಸಿದನು. ಕ್ರಿ.ಶ. ೧೮೦೦ರಲ್ಲಿ ಹೊಸ ಒಂಡಂಬಡಿಕೆಯಂತೆ ನಿಜಾಮರು ಗೆದ್ದ ಈ ಪ್ರದೇಶಗಳನ್ನು ಆಂಗ್ಲರಿಗೆ ದತ್ತು ನೀಡಿದರು. ಈ ಪ್ರದೇಶದ ಅಧಿಕಾರವು ಆಂಗ್ಲರ ಕಂಪನಿಯ ಅಧಿಕಾರದ ಅಧೀನದಲ್ಲಿ ಸೇರಿದವು. ಅದಕ್ಕಾಗಿ ಈ ಪ್ರದೇಶಗಳನ್ನು ಸೀಡೆಡ್ ಅಥವಾ ದತ್ತೆಮಂಡಂಲಂ ಜಿಲ್ಲೆಗಳೆಂದು ಕರೆಯುತ್ತಾರೆ.[೭]

ಭಾರತೀಯ ಸಾಹಿತ್ಯದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಈ ಪ್ರಾಂತ್ಯದ ಉಲ್ಲೇಖವಿದೆ. ಇಲ್ಲಿ ದೊರೆತ ಶಿಲಾಶಾಸನಗಳು ಹಾಗೂ ಹಳೆ ಶಿಲಾಯುಗದ ವಸ್ತುಗಳಿಂದ ಇಲ್ಲಿ ಶಿಲಾಯುಗದ ಜನ ವಾಸಿಸುತ್ತಿದ್ದರೆಂದು, ಇವರಿಗೆ ಲೋಹದ ಬಳಕೆ ಗೊತ್ತಿದ್ದಿತೆಂದು ದೊರೆತ ಆಧಾರಗಳಿಂದ ತಿಳಿಯಬಹುದಾಗಿದೆ. ಆಂಧ್ರ ಗಡಿಭಾಗದ ಅನಂತಪುರಂ ಜಿಲ್ಲೆಯ ಪೆನಕೊಂಡ ಗ್ರಾಮ ಹಿಂದೆ ಜೈನರ ಪವಿತ್ರ ತೀರ್ಥ ಕ್ಷೇತ್ರವಾಗಿತ್ತು ಮತ್ತು ಸಾಂಸ್ಕೃತಿಕ ಕೇಂದ್ರವೂ ಆಗಿತ್ತು. ಈ ಸ್ಥಳದಲ್ಲಿ ಏಳುನೂರ ಎಪ್ಪತ್ತು ಬಸದಿಗಳು ಆ ಪ್ರದೇಶದ ಸುತ್ತಮುತ್ತ ಇದ್ದವೆಂದು ಪ್ರತೀತಿ ಇದೆ. ಇಂದಿಗೂ ಈ ಸ್ಥಳದಲ್ಲಿ ಅಜೀರ್ಣಗೊಂಡಿರುವ ಎರಡು ಮೂರು ದೇವಾಲಯಗಳನ್ನು ನೋಡಬಹುದಾಗಿದೆ.

"ಕಾವೇರಿಯಿಂದ ಮಾ ಗೋ
ದಾವರಿವರ ಮಿರ್ದ ನಾಡದಾ ಕನ್ನಡದೋಳ್ ||"[೮]

ಒಂಬತ್ತನೆಯ ಶತಮಾನದ ನಡುಗಾಲದಲ್ಲಿ ರಚಿತವಾದ ಈ ಪದ್ಯದಲ್ಲಿ ಅಂದಿನ ಕನ್ನಡನಾಡು ಎರಡು ಗಡಿಗಳಾದ ಕಾವೇರಿ ಮತ್ತು ಗೋದಾವರಿ ನದಿಗಳವರೆಗೂ ಹಬ್ಬಿತ್ತೆಂದು ಹೇಳಿದೆ. ಇವುಗಳ ನಡುವಣ ನಾಡು, ಈ ಕನ್ನಡ ನಾಡು. ತರುವಾಯದಲ್ಲಿ ಹರಿದು-ಹಂಚಿ ಹೋದಾಗ ಕೊಂಚ ಭಾಗ ಆಂಧ್ರಕ್ಕೆ ಹೋಯಿತು. ಈ ಮೇಲಿನ ಪದ್ಯದಲ್ಲಿ ಹೇಳಿರುವ ನದಿಗಳೇ ಕನ್ನಡನಾಡು ಚಲ್ಲಾಪಿಲ್ಲಿಯಾದುದಕ್ಕೆ ಸಾಕ್ಷಿ ಹೇಳುತ್ತಿವೆ.

ಪ್ರಸ್ತುತ ಅಧ್ಯಯನದ ಪ್ರದೇಶವು ಅನೇಕ ಆಳರಸರ ಆಳ್ವಿಕೆಗೆ ಒಳಪಟ್ಟರೂ ಧಾರ್ಮಿಕ ಸಾಮರಸ್ಯತೆಯಲ್ಲಿ ಯಾವ ರೀತಿಯ ವ್ಯತ್ಯಾಸ ಕಂಡುಬರುವುದಿಲ್ಲ. ಭಾರತೀಯ ಧಾರ್ಮಿಕ ಪರಂಪರೆಯ ಅವಿಭಾಜ್ಯ ಅಂಗಗಳಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಹೇಗೆ ಬೆಳೆದುಕೊಂಡು ಬಂದವೋ, ಅದೇ ರೀತಿಯಲ್ಲಿ ಈ ಅಧ್ಯಯನದ ಪ್ರದೇಶವು ಅದೇ ಧಾರ್ಮಿಕ ಪರಂಪರೆಯನ್ನು ಅನುಸರಿಸಿಕೊಂಡು ಬಂದಿದೆ. ಭಾರತೀಯ ಎಲ್ಲಾ ಧರ್ಮಗಳು ಸಮಾನವಾದ ಪ್ರೋತ್ಸಾಹವನ್ನು ಪಡೆದಿದ್ದವು. ಅಲ್ಲದೆ ಅನ್ಯ ಧರ್ಮಗಳೂ ಇಲ್ಲಿ ನೆಲೆಯೂರಿದ್ದವು. ಆಯಾ ರಾಜವಂಶಗಳು ತಮ್ಮ ತಮ್ಮ ಧರ್ಮಗಳಿಗೆ ವಿಶೇಷ ಪ್ರೋತ್ಸಾಹ ಕೊಟ್ಟರೂ, ಇತರ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದರು ಹಾಗೂ ಸರ್ವಧರ್ಮ ಸಮನ್ವಯತೆ ಎನ್ನುವ ಆದರ್ಶ ಭಾವನೆಯನ್ನು ಹೊಂದಿದ್ದರು. ಉದಾತ್ತ ತತ್ವಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಶರಣರು, ದಾಸರು, ವಚನ ಮತ್ತು ಕೀರ್ತನೆಗಳ ಮುಖಾಂತರ ಧರ್ಮವನ್ನು ಮನೆ ಮನೆಗೆ ಕೊಂಡೊಯ್ಯುವ ಕೆಲಸ ಮಾಡಿ ಧಾರ್ಮಿಕ ಪರಿಸರದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸಂಶೋಧನೆಗೆ ಆಯ್ಕೆಮಾಡಿಕೊಂಡಿರುವ ಪ್ರದೇಶವು ಇಂದಿಗೂ ಸ್ವಲ್ಪಪ್ರಮಾಣದಲ್ಲಿ ಸನಾತನ ವರ್ಣ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಬಂದಿದೆ. ವ್ಯವಸಾಯವೇ ಮುಖ್ಯ ಕಸುಬು. ಅದಕ್ಕೆ ಪೂರಕವಾದ ಇತರ ಕೈಗಾರಿಕೆಗಳು ಇತರ ಕಸುಬುಗಳು ಬೆಳೆದು ಬಂದಿವೆ. ಅವಿಭಕ್ತ ಕುಟುಂಬ ವ್ಯವಸ್ಥೆ ಜಾರಿಯಲ್ಲಿದೆ. ಮೊದಲು ಸ್ತ್ರೀಯರ ಸ್ಥಾನ ಬಹು ಪರಿಮಿತವಾಗಿತ್ತು. ಆಕೆ ಗೃಹಕೃತ್ಯಗಳಲ್ಲೇ ತೊಡಗಿರುತ್ತಿದ್ದಳು. ಬಾಲ್ಯವಿವಾಹ, ಬಹುಪತ್ನಿತ್ವ, ದೇವದಾಸಿ ಪದ್ಧತಿ ರೂಢಿಯಲ್ಲಿದ್ದವು. ಈ ದೇವದಾಸಿ ಪದ್ಧತಿಯು ಮೇಲ್ವರ್ಗದವರಲ್ಲಿ ಕಡಿಮೆಯಿದ್ದು ಕೆಳವರ್ಗದವಲ್ಲಿ ಮಾತ್ರ ಕಂಡುಬರುತ್ತಿತ್ತು. ಈ ಹಿನ್ನೆಲೆಯಲ್ಲಿ ಬಹುಮಾಧ್ಯಮಗಳಿಂದ ತಿಳವಳಿಕೆ ಪಡೆದು ಇಂತಹ ಅನಿಷ್ಟ ಪದ್ಧತಿಗಳು ಕಡಿಮೆ ಮಾಡಿದ್ದಾರೆ. ಹಾಗೂ ಅದರ ವಿರುದ್ಧ, ಸಂಘಸಂಸ್ಥೆಗಳು ದುಡಿಯುತ್ತವಾದ್ದರಿಂದ ಕ್ರಮೇಣ ಅನಿಷ್ಟ ಪದ್ಧತಿಗಳು ಕಡಿಮೆಯಾಗುತ್ತಿರುವುದು ಕಂಡುಬಂದಿದೆ.

ಕಲೆಯ ವೈಭವವನ್ನು ನೋಡಿದಲ್ಲಿ ಪ್ರಮುಖ ಅರಸು ಮನೆತನದ ಆಳ್ವಿಕೆಗಳಿಗೆ ಒಳಪಟ್ಟು ಗಾಂಧಾರ, ದ್ರಾವಿಡ ಮತ್ತು ವೇಸರ ಈ ಮೂರು ರೀತಿಯ ವಾಸ್ತುಶಿಲ್ಪ ಮತ್ತು ನಾಜೂಕಿನ ಕುಸುರಿ ಶಿಲ್ಪಕಾರರಿಂದ ತರತರವಾದ ಶಿಲ್ಪಕಲೆಗಳು ಮೈಲರಳಿ ನಿಂತಿವೆ. ಶಿಲ್ಪಕಲೆಗಳು ಈ ಪ್ರದೇಶದಾದ್ಯಂತ ಬೆಳೆದಿವೆ. ಹಂಪಿ, ಸಂಡೂರು, ಬಳ್ಳಾರಿ ಕೋಟೆ, ಕುರುಗೋಡು, ಲೇಪಾಕ್ಷಿ, ಶ್ರೀಶೈಲಂ ಇನ್ನು ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತದೆ.

ಸಂಗೀತವೂ ಈ ಅಧ್ಯಯನ ಪ್ರದೇಶದಲ್ಲಿ ವಿಫಲವಾಗಿ ಬೆಳೆದಿದೆ. ಸಂಗೀತಕ್ಕೆ ಸಂಬಂಧಪಟ್ಟ ಗಮಕಿಗಳು, ಇಲ್ಲಿ ಹುಟ್ಟಿ ಬಾಳಿದ್ದಾರೆ. ಸ್ವತಃ ಶ್ರೀಕೃಷ್ಣದೇವರಾಯನಿಗೂ ಸಂಗೀತದಲ್ಲಿ ವಿದ್ವತ್ತು ಇತ್ತು ಎಂದು ತಿಳಿದುಬರುತ್ತದೆ.

ಇಲ್ಲಿಯು ಚಿತ್ರಕಲೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳು ಸರಿಸಮಾನವಾಗಿ ಬೆಳೆದುಕೊಂಡು ಬಂದಿವೆ.

ಇದಕ್ಕೆ ವಿಜಯನಗರ ಕಾಲದ ಚಿತ್ರಕಲೆಯೇ ಸ್ಪಷ್ಟ ಚಿತ್ರಣ. ಈ ಮನೆತನವು ಇತಿಹಾಸದಲ್ಲಿಯೇ ಸುವರ್ಣಯುಗವನ್ನು ನಿರ್ಮಿಸಿದೆ. ಹಂಪೆ, ಆನೆಗುಂದಿ, ಲೇಪಾಕ್ಷಿ, ಕಾಳಹಸ್ತಿ, ತಂಜಾವೂರು, ಕಾಂಚಿಪುರಂಗಳಲ್ಲಿನ ಚಿತ್ರಗಳು ಅಂದಿನ ಪ್ರಬುದ್ಧ ಕಲೆಗೆ ಸಾಕ್ಷಿಯಾಗಿ ಇಂದಿಗೂ ಉಳಿದಿವೆ.

ಈ ಪರಿಸರದಲ್ಲಿ ಅಸಂಖ್ಯಾತ ಸಾಹಿತಿಗಳು ಬಾಳಿ ಬದುಕು ಹೋಗಿದ್ದಾರೆ. ವಿಜಯನಗರ ಕಾಲದಲ್ಲಿಯಂತೂ ಕನ್ನಡ ಮತ್ತು ತೆಲುಗು ಸಾಹಿತ್ಯ ಒಂದೇ ರಾಜಮನೆತನದ ರಾಜಾಶ್ರಯದಲ್ಲಿ ಬೆಳೆದಿದ್ದನ್ನು ಕಾಣಬಹುದು. ಸ್ವತಃ ಕೃಷ್ಣದೇವರಾಯನೇ ಉದ್ದಾಮ ಕವಿಯಾಗಿದ್ದು, ತೆಲುಗಿನಲ್ಲಿ 'ಅಮುಕ್ತಮೌಲ್ಯ' ಎಂಬ ಚಂಪೂ ಕಾವ್ಯವನ್ನು ಬರೆದನು. ಹಾಗೆ ಆತನು ಅಷ್ಟದಿಗ್ಗಜರೆಂಬ ಪಂಡಿತ ಮಂಡಳಿಗೆ ಆಶ್ರಯವಿತ್ತದ್ದನು. ಶ್ರೇಷ್ಟ ನಟ, ನಾಟಕಕಾರ, ಗಮಕ ಕಲಾನಿಧಿ ಜೋಳದರಾಶಿ ದೊಡ್ಡನಗೌಡರು ಇದೇ ಪ್ರದೇಶದವರೇ. ಕನ್ನಡ, ತೆಲುಗು, ಸಂಸ್ಕೃತಗಳಲ್ಲಿ ಅಪಾರ ಪಾಂಡಿತ್ಯವಿದ್ದ ಕರಿಬಸವ ಶಾಸ್ತ್ರಿಗಳು ಪ್ರಪಥಮವಾಗಿ ಆಂಧ್ರಕರ್ನಾಟಕ ಭಾಷೆ ಗ್ರಂಥಮಾಲಿಕೆಯನ್ನು ನಡೆಸುತ್ತಿದ್ದು, ಅಪೂರ್ವವಾದ ಸಾಹಿತ್ಯ ಸಂಶೋಧನೆಯನ್ನು ನಡೆಸಿದರು. ಭಾಸ್ಕರಾಚಾರ್ಯರು ತೆಲುಗಿನಲ್ಲಿ ಬರೆದಿರುವ 'ಯಾತ್ರಿಕ' ಎಂಬ ಅಮೋಘವಾದ ಅನುಭವ ಕಾವ್ಯವನ್ನು ದೊಡ್ಡನಗೌಡರು ಕನ್ನಡಕ್ಕೆ ಭಾಷಾಂತರ ಮಾಡಿ ಕನ್ನಡದ ಅನುಭವ ಸಾಹಿತ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ಕೋಲಾಚಲ ಶ್ರೀನಿವಾಸರಾಯರು 'ಸಾಯಣ' ಭಾಷ್ಯವನ್ನು 'ವೇದಾರ್ಥ ಚಂದ್ರಿಕೆ' ಎಂದು ಭಾಷಾಂತರಿಸಿದರು. ಅಲ್ಲದೆ ಇಂಗ್ಲೀಷಿನಲ್ಲಿ 'ಡ್ರಮಾಟಿಕ್ ಹಿಸ್ಟರಿ ಆಫ್ ದಿ ವರ್ಲ್ಡ್' ಎಂಬ ಹೆಸರಿನ ನಾಟಕ ಚರಿತ್ರೆಯನ್ನು ತೆಲುಗಿನಲ್ಲಿ ಅನೇಕ ನಾಟಕಗಳನ್ನು ಬರೆದಿದ್ದಾರೆ. ಅವರ ಸಮಕಾಲೀನ ಸಾಹಿತಿಗಳೂ 'ಆಂಧ್ರಕರ್ನಾಟಕ' ಪಿತಾಮಹಾರೆಂದು ಪ್ರಖ್ಯಾತರಾದ ಕೃಷ್ಣಮಾಚಾರ್ಯರು ಕನ್ನಡ ತೆಲುಗಿನಲ್ಲಿ ಅನೇಕ ನಾಟಕಗಳನ್ನು ಬರೆದು ಆಂಧ್ರ ನಾಟಕ ಸಾಹಿತ್ಯಕ್ಕೆ ಆದ್ಯ ಆಚಾರ್ಯರೆನಿಸಿಕೊಂಡರು. ಪೊಳ ಕೃಷ್ಣಮಾಚಾರ್ಯರು ಕನ್ನಡ-ಆಂಧ್ರ-ಸಂಸ್ಕೃತಗಳಲ್ಲಿ ಪ್ರಕಾಂಡ ಪಂಡಿತರು, ಶ್ರೇಷ್ಟ ಸಾಹಿತಿಗಳೂ ಆಗಿದ್ದರೆಂದು ತಿಳಿದುಬರುತ್ತದೆ. ಜಾನ್ ರೀಡನು ೧೭೩೫ರಲ್ಲಿ ಕನ್ನಡದ ಕೆಲ ಮತಧರ್ಮಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ತೆಲುಗಿಗೆ ಅನುವಾದ ಮಾಡಿದನು.[೧೦]

ಈ ಗಡಿನಾಡುಗಳಲ್ಲಿ ನಾಟಕವಂತೂ ಬಹು ಸಮೃದ್ಧವಾಗಿ ಬೆಳೆದಿದೆ. ಬಳ್ಳಾರಿಯ ಧರ್ಮಾವರಂ ಕೃಷ್ಣಮಾಚಾರ್ಯರು ಮತ್ತು ಕೋಲಾಚಲಂ ಶ್ರೀನಿವಾಸರಾವ್ ಅವರ ಕನ್ನಡ ನಾಟಕಗಳು ಆಂಧ್ರ ಮತ್ತು ಕರ್ನಾಟಕ ಎರಡು ರಾಜ್ಯಗಳಲ್ಲೂ ಪ್ರಸಿದ್ಧಿ ಹೊಂದಿವೆ. ಆಂಧ್ರದ ಕೆಲವು ಪ್ರದೇಶಗಳಲ್ಲಿ ಕನ್ನಡ ನಾಟಕಗಳು ಬಳ್ಳಾರಿಯ ಕೆಲವು ಪ್ರದೇಶಗಳಲ್ಲಿ ತೆಲುಗು ನಾಟಕಗಳು ಪ್ರದರ್ಶನಗೊಂಡಿವೆ. ಟಿ. ರಾಘವ ಮತ್ತು ಜೋಳದ ರಾಶಿ ದೊಡ್ಡನಗೌಡರು ಈ ಎರಡೂ ಭಾಷೆಯ ರಂಗಭೂಮಿಯಲ್ಲಿ ವಿಹರಿಸಿ ಕನ್ನಡ ತೆಲುಗು ಸಂಬಂಧವನ್ನು ಹೆಚ್ಚಿಸಿದ್ದಾರೆ.

ಜನಪದ ಸಾಹಿತ್ಯ ಕೃಷಿಯನ್ನು ಗಮನಿಸಿದಲ್ಲಿ ಇಲ್ಲಿನ ಜನರ ಬಾಳಿನ ಬಹುತೇಕ ಸಂದರ್ಭಗಳಲ್ಲಿ ಗಳಿಸಿದ ಪ್ರೇರಣೆ. ಅಂತರಂಗದ ತುಡಿತಗಳು ಗಾದೆ, ಒಡಪು, ಕೋಲಾಟ ಪದಗಳು, ಲಾವಣಿ ಪದಗಳು

ಮುಂತಾದವುಗಳು ಬೆಳೆದರೆ ಆಂಧ್ರದ ಗಡಿಯಲ್ಲಿ ಕನ್ನಡ ಹಾಡು, ಗಾದೆ, ಲಾವಣಿ, ಒಡಪು, ಕೋಲಾಟ ಪದಗಳು ಮುಂತಾದ ಕಲಾ ಪ್ರಕಾರಗಳು ಸಾಮ್ಯತೆಯನ್ನು ಪಡೆದು ಬೆಳೆದಿರುವುದು ಹೆಮ್ಮೆಯ ಸಂಗತಿ.

ಈ ರಾಜ್ಯಗಳ ಭಾಷೆಯ ನಡುವಿನ ಹೆಚ್ಚಿನ ಹೊಂದಾಣಿಕೆಗೆ ಕಾರಣ ಒಂದೇ ಮೂಲ ಜನಾಂಗಕ್ಕೆ ಅಂದರೆ ದ್ರಾವಿಡ ಜನಸಮುದಾಯವನ್ನು ಜನಾಂಗಕ್ಕೆ ಸೇರಿದವರಾಗಿದ್ದಾರೆ. ಈ ಶಾಖೆಗಳು ಬಹಳ ಹಿಂದೆಯೇ ಕವಲೊಡೆದಂತೆ ಕಾಣುತ್ತದೆ. ಆದರೂ ಇವರಿಬ್ಬರಲ್ಲಿ ಒಂದು ಭಾಷೆಯ ಪರಿಚಯ ಇದ್ದವರಿಗೆ ಇನ್ನೊಂದು ಭಾಷೆಯ ಕಲಿಕೆ ಸುಲಭ ಕಾರಣ ಇವೆರಡೂ ಒಂದೇ ಭಾಷಾ ಪರಿವಾರಕ್ಕೆ ಸೇರಿವೆ ಮತ್ತು ಇವೆರಡೂ ಭಾಷೆ, ಸಾಹಿತ್ಯಗಳು ಸಮಾನ ಆದರ್ಶಗಳ ವಾತಾವರಣದಲ್ಲಿ ಬೆಳೆದಿವೆ.

ಆಂಧ್ರ ಗಡಿಭಾಗದಲ್ಲಿ ಇಂದು ವಾಸಿಸುವ ಕನ್ನಡಿಗರ ಸಂಖ್ಯೆ ಹಿಂದಿನ ಕಾಲದಷ್ಟಿಲ್ಲ. ಆದರೆ ಬಳ್ಳಾರಿ ಪ್ರದೇಶದಲ್ಲಿ ತೆಲುಗರ ಸಂಖ್ಯೆಯೂ ದೊಡ್ಡದಿದೆ. ಮುಖ್ಯವಾದ ದೊಡ್ಡ ದೊಡ್ಡ ವ್ಯಾಪಾರಿಗಳು ಅವರೇ ಆಗಿದ್ದಾರೆ. ಅಲ್ಲದೆ ಇಂದು ಬಳ್ಳಾರಿ ಜಿಲ್ಲೆಯ ರಾಜಕೀಯ ಕ್ಷೇತ್ರವು ಅವರ ಕೈಯಲ್ಲಿಯೇ ಕೇಂದ್ರೀಕೃತವಾಗಿದೆ. ಕನ್ನಡ ಪತ್ರಿಕೆಗಳಿಗಿಂತ ತೆಲುಗು ದಿನಪತ್ರಿಕೆಗಳೆ ಹೆಚ್ಚು ಪ್ರಸಾರದಲ್ಲಿವೆ. ಬಳ್ಳಾರಿ ಜಿಲ್ಲೆಯಲ್ಲಿ ಮಲಕನಾಡಿನವರು, ವೈಶ್ಯರು, ಕೆಲಸಿಗರು, ಭಟ್ಟರಾಜರು, ರೆಡ್ಡಿಗಳು, ನಾಯಕರು ಮೊದಲಾದವರು ಕನ್ನಡ ಮಿಶ್ರಿತ ತೆಲುಗು ಭಾಷೆ ಮಾತನಾಡುತ್ತಾ ಬೆಳೆದಿದ್ದಾರೆ. ಇದಕ್ಕೆ ಕಾರಣ ಪ್ರಕೃತಿ ವಿಕೋಪ 'Radicals' ಎನ್ನುವ ಭಯೋತ್ಪಾದಕರ ಹಾವಳಿ ತಾಳಲಾರದೆ ಅಲ್ಲಿ ತಮ್ಮ ಆಸ್ತಿಪಾಸ್ತಿಯನ್ನು ಮಾರಾಟಮಾಡಿ ಬಂದು ಬೇಸಾಯದ ವಿವಿದ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿಕೊಂಡು ಬೆಳೆದು ಎಲ್ಲರಲ್ಲಿ ಒಂದಾಗಿ ಬಂದಾಗಿದ್ದಾರೆ.

"ಜಿಲ್ಲೆಯ ಗಡಿಪ್ರದೇಶದ ಹೆಚ್ಚಿನ ಭಾಗವು ಆಂಧ್ರದ ತೆಲುಗು ಭಾಷಿಕ ಪ್ರದೇಶಗಳೊಡನೆ ತಾಗಿಕೊಂಡಿದೆ. ಈ ಜಿಲ್ಲೆಯ ಕೆಲವು ತಾಲ್ಲೂಕುಗಳ ಗಡಿಯನ್ನು ಆಂಧ್ರಪ್ರದೇಶ ಎನ್ನಬೇಕೋ ಅಥವಾ ಕರ್ನಾಟಕ ಎನ್ನಬೇಕೋ ಎನ್ನುವುದೇ ಮುಖ್ಯ ಪ್ರಶ್ನೆಯಾಗಿದೆ." "ತೆಲುಗು ಭಾಷಿಕರು ಕನ್ನಡ ಕಲಿಯುವ ಅವಶ್ಯಕತೆಗಿಂತ ಕನ್ನಡ ಭಾಷಿಕರು ತೆಲುಗನ್ನು ಕಲಿಯುವಂತೆ ಒತ್ತಾಯಿಸುವ ಸನ್ನಿವೇಶವಿದೆಯೆಂದೋ ಕನ್ನಡ ಭಾಷಿಕರ ಒಲವು ಹೆಚ್ಚಾಗಿ ತೆಲುಗಿನ ಕಡೆಗಿದೆ."

ಆಂಧ್ರ ಕರ್ನಾಟಕದಲ್ಲಿ ಸಂಚರಿಸುವ ಸಂಚಾರಿ ಬುಡಕಟ್ಟುಗಳೆಂದರೆ ಪಿಚ್ಚುಗುಂಟ್ಲು ಬಾಲಸಂತರು, ಶಾರದ ಕಾಂಡ್ರು, ವೀರಮುಷ್ಟಿವಾರು, ಬವನೀಲು, ಜೀರನ್ನಲವಾರು, ಗೊಲ್ಲಸದ್ದುಲು, ದಾಸರೂಲು, ಜಂಗಮು, ಕೊಮ್ಮವಾರುಲು ಸಾಮಾನ್ಯವಾಗಿ ಇವರು ಭಿಕ್ಷುಕರಾದರೂ, ಕೆಲವು ಜಾತಿಗಳ ಕೌಟುಂಬಿಕ ದಾಖಲೆಗಳನ್ನು ಭದ್ರಪಡಿಸಿ, ಗತ ವೈಭವವನ್ನು ಹಾಡುವುದರಿಂದ ಆ ಜಾತಿಯವರು ಇವರನ್ನು ಪೋಷಿಸುವರು. ಅವರಲ್ಲಿ ಕೆಲವರು ಸಂಚಾರಿ ವ್ಯಾಪಾರವನ್ನು ಮಾಡಿದರೆ, ಮಹಿಳೆಯರು ಗೊಂಬೆ, ಬುಟ್ಟಿ, ಚಾಪೆ, ಜಪದ ಮಣಿ ಮತ್ತು ಅಲಂಕಾರ ವಸ್ತುಗಳನ್ನು ವ್ಯಾಪಾರಮಾಡುತ್ತಾ ಸಂಚರಿಸುವರು.

ಒಟ್ಟಿನಲ್ಲಿ ಈ ಪ್ರದೇಶಗಳು ರಾಜಕೀಯವಾಗಿ, ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ ಹಲವಾರು ಸಾಮ್ಯತೆಗಳನ್ನು ಹೊಂದಿದ್ದು ಲಗಾಯಿತಿನಿಂದಲೂ ನೋವು ನಲಿವುಗಳಲ್ಲಿ ಸಮೀಪದ ಬಂಧುಗಳಾಗಿದ್ದಾರೆ. ಮೊದಲಿನಿಂದಲೂ ಒಂದೇ ಹೃದಯದ ಎರಡು ಶ್ವಾಸಕೋಶಗಳಂತೆ ಈ ಎರಡೂ ಪ್ರದೇಶಗಳು ಒಂದಕ್ಕೊಂದು ಅಂಟಿಕೊಂಡು ದ್ವಿಭಾಷಾ ದ್ವೀಪಗಳಂತಿವೆ. ಕನ್ನಡ ಕಸ್ತೂರಿ ತೇಟ ತೆನುಗು ಮತ್ತು ಕನ್ನಡನಾಡು ತೆಲುಗುನಾಡು ಎಂಬ ನಾಮಫಲಕಗಳು ರಾರಾಜಿಸುತ್ತಿವೆ.

೨.೨. ಪ್ರದೇಶ

ಅಧ್ಯಯನಕ್ಕೆ ಒಳಪಡಿಸಿದ ಕ್ಷೇತ್ರವನ್ನು ಇಲ್ಲಿ 'ಪ್ರದೇಶ' ಎಂದು ಗುರುತಿಸಲಾಗಿದೆ. ಈ ಮಹಾಪ್ರಬಂಧದ ಶೀರ್ಷಿಕೆ "ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲು ವೇಷಗಾರರು; ಒಂದು ಅಧ್ಯಯನ" ಎಂದಿದ್ದು ಇದಕ್ಕೆ ಪೂರಕವಾಗಿ ಬಳ್ಳಾರಿ ಜಿಲ್ಲೆಯನ್ನು ಮತ್ತು ಅದಕ್ಕೆ ಹೊಂದಿಕೊಂಡಂತಹ ಆಂಧ್ರ ಗಡಿಭಾಗವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

ಬಳ್ಳಾರಿ ಜಿಲ್ಲೆಯಲ್ಲಿ ನಾನು ಸಂದರ್ಶಿಸಿದ ಪ್ರದೇಶಗಳೆಂದರೆ ಬಳ್ಳಾರಿ, ಕುರುಗೋಡು, ಹಗರಿಬೊಮ್ಮನಹಳ್ಳಿ, ನಾಣ್ಯಾಪುರ, ಹೊಸಪೇಟೆ, ಕಂಪ್ಲಿ, ಮರಿಯಮ್ಮನಹಳ್ಳಿ, ಸೋಮಲಾಪುರ, ವೆಂಕಟಾಪುರ, ದರೋಜಿ, ಬಲಕುಂದಿ, ಹಳೆಕೋಟೆ, ಹೆಚ್.(ಹೊಸಳ್ಳಿ, ಮಾಳಾಪುರ, ಸಿರುಗುಪ್ಪ, ಸಿರಿಗೇರಿ, ಕೂಡ್ಲಿಗಿ ಈ ಪ್ರದೇಶಗಳಿಗೆ ಖುದ್ದಾಗಿ ಹೋಗಿ ಹಲವಾರು ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ.

ಆಂಧ್ರಪ್ರದೇಶದ ಗಡಿಭಾಗಕ್ಕೆ ಸಂಬಂಧಿಸಿದಂತೆ ಮೈದುಕೂರು, ಪಾರ್ವತಿನಗರ, ಪ್ರದ್ದಟೂರು, ಆದವಾನಿ, ಉರಕುಂದಿ, ಯರಗೇರಿ, ಗುಂತಕಲ್ಲು, ಉರವಕೊಂಡ, ರಾಯದುರ್ಗ, ಕಾಮವಾರ, ಅನಂತಪುರ, ಓಬಳಾಪುರ. ಇಲ್ಲಿಯ ವೇಷಗಾರರನ್ನು ಸಂದರ್ಶಿಸಿ ನನ್ನ ವಿಷಯಕ್ಕೆ ಪೂರಕವಾದ ಹಲವಾರು ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ.)

೨.೩. ಜನಸಂಖ್ಯೆ

ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಹಗಲುವೇಷಗಾರರ ಪ್ರದೇಶ ಮತ್ತು ಜನಸಂಖ್ಯೆ

ತಾಲೂಕು	ವಾಸದ ನೆಲೆ	ಕುಟುಂಬ	ಜನಸಂಖ್ಯೆ
ಬಳ್ಳಾರಿ	ರಾಜೇಶ್ವರಿ ನಗರ	೬೫	೨೮೬
	ಕುರುಗೋಡು	೩೨	೧೮೦
ಹಡಗಲಿ	ರಾಜೀವ್‌ನಗರ	೪	೩೨
ಹಗರಿಬೊಮ್ಮನಹಳ್ಳಿ	ಹಂಪಾಪಟ್ನ	೫	೩೯
	ಹ.ಬೊ.ಹಳ್ಳಿ, ಬೋವಿಕಾಲೋನಿ	೩	೧೮
	ಮರಬಿಹಾಳ್	೮	೩೯

	ನಾಣ್ಯಾಪುರ	೧೦	೯೬
ಹೊಸಪೇಟೆ	ಅರವಿಂದನಗರ, ಹೊಸಪೇಟೆ	೧೮	೧೦೩
	ಕಂಪ್ಲಿ, ಸತ್ಯನಾರಾಯಣಪೇಟೆ	೧೩	೬೭
	ಮರಿಯಮ್ಮನಹಳ್ಳಿ	೦೩	೧೯
	ಸೋಮಲಾಪುರ	೨೧	೧೬೩
	ವೆಂಕಟಾಪುರ ಕ್ಯಾಂಪ್	೧೫	೬೯
ಸಿರುಗುಪ್ಪ	ಬಲಕುಂದೆ	೧೭	೮೦
	ಹಳೆಕೋಟೆ	೧೫	೬೯
	ಹೆಚ್.ಹೊಸಳ್ಳಿ	೫	೨೮
	ಮಾಳಾಪುರ	೭	೩೦
	ಸಿರುಗುಪ್ಪ	೪೬	೨೨೫
	ಸಿರಿಗೇರಿ	೫	೩೪
	ಹಳೆದರೋಜಿ	೧೮	೮೭
	ಒಟ್ಟು	೩೧೦	೧,೬೫೯

ಬಳ್ಳಾರಿ ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಇವರು ವಾಸವಾಗಿದ್ದು ಬದುಕು ಸಾಗಿಸುತ್ತಿದ್ದಾರೆ. ಬಳ್ಳಾರಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ, ಸಂಡೂರು ಇಲ್ಲಿಯ ಒಟ್ಟು ಜನಸಂಖ್ಯೆ ೧,೬೫೯ ಇರುತ್ತದೆ. ಕರ್ನಾಟಕದಲ್ಲಿಯ ವೇಷಗಾರರ ಜನಸಂಖ್ಯೆ ೧೩,೦೦೦ ಆಗಿದೆ. ಅದೇ ರೀತಿ ಆಂಧ್ರಪ್ರದೇಶದಲ್ಲಿಯೂ ೨೦,೦೦೦ ಜನಸಂಖ್ಯೆಯನ್ನು ಹೊಂದಿರುವ ಅಂದಾಜಿದೆ.

೨.೪. ಹಗಲುವೇಷಗಾರರ ಮೂಲ ಪ್ರಸಾರ ಮತ್ತು ವಲಸೆ

ಹಗಲುವೇಷಗಾರರಿಗೆ ಸಂಬಂಧಿಸಿದಂತೆ ಇತಿಹಾಸ ಪ್ರಾರಂಭವಾಗುವುದು ೧೧ನೇ ಶತಮಾನದಿಂದ ಈಚೆಗೆ. "ಸಂಗೀತದ ಸ್ವರಗಳಿಂದ ಕಥನ ಮಾಡುವುದು ರಾಮಾಯಣ ಪೂರ್ವಕಾಲದಿಂದಲೂ ಇತ್ತು. ಮಹಾಕಾವ್ಯಗಳ ಪಾಠ ಮಾರ್ಗೀಯ ಶೈಲಿಯಲ್ಲಿದ್ದು ಅಭಿಜಾತ ಸ್ಥಿತಿಯನ್ನು ಹೊಂದಿದ್ದರೂ ಅವರ ಪ್ರಚಾರ ದೇಶೀ ಮಾಧ್ಯಮದಲ್ಲಿತ್ತು. ಅನಂತರದ ಕಾಲದಲ್ಲಿ ಕ್ರಮೇಣ ಗಮಕ ಸಂಪ್ರದಾಯ ಅನೇಕ ಪ್ರಾದೇಶಿಕ ರೂಪಗಳನ್ನು ಪಡೆದು ಮುಂದುವರೆಯಿತು. ಅದರ ಮುಖ್ಯ ಉದ್ದೇಶ, ಜನರಿಗೆ ಬೋಧನೆ, ವಿನೋದ ಹಾಗೂ ವೈವಿಧ್ಯವನ್ನು ಕೊಡುವುದು. (ವೃತ್ತಿಗಾಯಕರ ಈ ಮನರಂಜನೆ ಜನರ ಮೇಲೆ ತುಂಬಾ ಪ್ರಭಾವ ಬೀರಿತ್ತು. ಕಾಕತೀಯರ ಹಾಗೂ ಅವರ ಅನಂತರದ ಕಾಲದಲ್ಲಿ ಶೈವರು ಧಾರ್ಮಿಕ ಪ್ರಚಾರದ ಉದ್ದೇಶದಿಂದ ಇದನ್ನು ಪೂರ್ತಿಯಾಗಿ ವಶಪಡಿಸಿಕೊಂಡರು. ಶೈವ ಧರ್ಮದ ಪ್ರಬಲ ಶಾಖೆಯಾದ ವೀರಶೈವ ಧರ್ಮದ ಪ್ರಚಾರಕ್ಕಾಗಿ ಮತ್ತು ಆಂಧ್ರದಲ್ಲಿ ಜೈನಧರ್ಮದ ವ್ಯಾಪ್ತಿಯನ್ನು ವಿರೋಧಿಸಲು ಇದನ್ನು ಬಳಸಲಾಯಿತು."

ಅವರ ವೇಷಗಾರಿಕೆಯ ವಸ್ತು ಭಂಡಾರದಲ್ಲಿ ಪರಮೇಶ್ವರನ ಕಥೆಗಳೇ ಮುಖ್ಯವಾಗಿದ್ದವು. ಈ ಶೈವ ಕಥನಗಳಿಗೆ ಹೊಂದಿಕೆಯಾಗುವಂತೆ ಹಾಗೂ ಪ್ರತಿಸ್ಪರ್ಧಿಗಳಂತೆ ವಿಷ್ಣುಭಕ್ತರು ಇಂತಹ ವಾಚನಗಳನ್ನು ಪ್ರಾರಂಭಿಸಿದರು. ಈ ವಿಷಯವನ್ನು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಕಾವ್ಯದಿಂದ ಸ್ಪಷ್ಟವಾಗುತ್ತದೆ.

ಈ ಸಮುದಾಯದವು ತೀರ ಹಿಂದುಳಿದ ಅಲೆಮಾರಿಗೆ ಸೇರಿದ ಜನಸಮುದಾಯವಾಗಿದೆ. ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ನಿಯಮದಂತೆ ಸದಾ ಊರೂರು ಅಲೆದು ಊರಿನ ಹೊರಗಡೆ ಡೇರೆಗಳನ್ನು ನಿರ್ಮಿಸಿಕೊಂಡು ಆಧುನಿಕ ಬದುಕಿನ ವ್ಯಾಮೋಹವಿಲ್ಲದೆ ಬೆಳದವರಾಗಿದ್ದಾರೆ. ಪೂರ್ವದಲ್ಲಿ ಒಂದು ಊರಲ್ಲಿ "ಮೂವತ್ತು ಮೂರು ವೇಷಗಳನ್ನು ಹಾಕಿ ಮೂರು ತಿಂಗಳ ಕಾಲ ವಾಸವಾಗಿರುತ್ತಿದ್ದರು. ಇದು ಇವರ ಪದ್ಧತಿಯಾಗಿದ್ದಿತು. ಈಗ ಆಯಾ ಗ್ರಾಮಗಳ ಜನತೆ ತೋರುವ ಆಸಕ್ತಿಗನುಗುಣವಾಗಿ ವೇಷ, ಹಾಕುವುದು ಗಣನೀಯವಾಗಿ ಕಡಿಮೆಯಾಗಿದೆ. ಹೀಗಾಗಿ ಇವರು ಮುಂದುವರಿದ ಜಾತಿ-ಜನಾಂಗಗಳಿಂದ ತಿರಸ್ಕೃತರಾಗಿ ಅಲೆಮಾರಿಗಳಾಗಿ ಸಂಚಾರದಲ್ಲಿಯೇ ಬದುಕನ್ನು ಮುಂದುವರಿಸಿದರು. ತಮ್ಮದೇ ಯಾದ ವಿಶಿಷ್ಟ ಸಂಸ್ಕೃತಿಯ ಹಿನ್ನೆಲೆಯೊಳಗೆ ಬದುಕಲು ತೊಡಗಿದರು.

ದ್ರಾವಿಡ ಜನಸಮುದಾಯಕ್ಕೆ ಸೇರಿದ ಇವರು ಎಣ್ಣೆವರ್ಣದವರಾಗಿದ್ದಾರೆ. ಎತ್ತರವಾದ ದೇಹಾಕೃತಿ ಹೊಂದಿದ್ದು ಧೈರ್ಯಶಾಲಿಗಳಾಗಿದ್ದಾರೆ. ಕುದುರೆಯ ನಡೆಗೆಯುಳ್ಳವರಾಗಿದ್ದು, ವೇಷಗಾರಿಕೆಯನ್ನೇ ಕಲಾವೃತ್ತಿಯನ್ನಾಗಿ ರೂಢಿಸಿಕೊಂಡು ಅದರಲ್ಲಿಯೇ ಬದುಕು ಸಾಗಿಸುತ್ತಿದ್ದಾರೆ. ಅಲ್ಲದೆ ಇವರು ಈ ಕಲೆಯನ್ನು ರಕ್ತಗತವಾಗಿ ಸಿದ್ಧಿಸಿಕೊಂಡು, ಇದರಲ್ಲಿಯೇ ಜೀವಮಾನದ ಕಾಲವನ್ನೆಲ್ಲಾ ಕಳೆದವರಾಗಿದ್ದಾರೆ. ವೇಷಗಾರರು ತಮ್ಮ ವೃತ್ತಿಯನ್ನು ಮತ್ತು ತಮ್ಮನ್ನು ತಾವು ಬಹಳ ಗೌರವದಿಂದ ಕಾಣುತ್ತಾರೆ.

ಆಂಧ್ರಪ್ರದೇಶದಲ್ಲಿ ಆಗಾಗ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ತಿನ್ನಲು ಕೂಳು ಸಿಗದೇ ಇರುವುದರಿಂದ ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಗೆ ವಲಸೆ ಹೋಗಿರುವುದಕ್ಕೆ ಮಾಹಿತಿಗಳು ದೊರೆಯುತ್ತವೆ. ಒಬ್ಬ ವಕ್ತೃ ಹೇಳುವಂತೆ ಆಂಧ್ರದಲ್ಲಿ ಒಂದು ಸಮಯದಲ್ಲಿ (ಹಿಂದೆ) ಸಿಕ್ಕ ಭಿಕ್ಷೆ ಹೊಟ್ಟೆಗೆ ಕೂಡ ಸಾಲುತ್ತಿರಲಿಲ್ಲ. ಕೇವಲ ಅರಿಷಿಣ ಜೋಳದ ಬೆಳೆ ಮಾತ್ರ ಇದ್ದವು. ಅನ್ನ ಹೆಚ್ಚಾಗಿ ಲಭ್ಯವಿರಲಿಲ್ಲ. ಈ ಸಮಸ್ಯೆಯನ್ನು ತಾಳಲಾರದೆ ಊರೂರು ಅಲೆಯುತ್ತಾ ಕರ್ನಾಟಕಕ್ಕೆ ಬಂದೆವು" ಎಂಬುದಾಗಿ ತಿಳಿದುಬರುತ್ತದೆ.

೨.೪.೧. ಮೂಲ

ಅಲೆಮಾರಿಗಳ ಮೂಲಸ್ಥಾನವೆಂದೇ ಹೆಸರು ಪಡೆದಿರುವ (ಸುಮಾರು ೬೦ ಲಕ್ಷ ಅಲೆಮಾರಿಗಳನ್ನು ಹೊಂದಿದೆ) ಆಂಧ್ರಪ್ರದೇಶವೇ ಹಗಲುವೇಷಗಾರರ ಬುಡುಗಜಂಗಾಲರ ಅಥವಾ ಬುರ‍್ರಕಥೆಯವರ ಮೂಲಸ್ಥಾನವಾಗಿದೆ. ಮುಲಕಸೀಮವೇ ಕೇಂದ್ರಸ್ಥಾನವೆಂದು ಗುರುತಿಸಬಹುದು. ವಾಕ್ಯದ ಅರ್ಥ ಏನು

ಸರಿಪಡಿಸಿರಿ ಏಕೆಂದರೆ ಕರ್ನಾಟಕ ಮತ್ತು ಆಂಧ್ರದ ವೇಷಗಾರರನ್ನೆಲ್ಲಾ ಮೂಲ ಎಲ್ಲಿ ಎಂದು ಕೇಳಿದರೆ, ವನಪರ್ತಿ, ಕೃಷ್ಣಾರೆಡ್ಡಿಪೇಟೆ, ತೆಲಂಗಾಣ, ಗದ್ವಾಲ, ರಂಗಾರೆಡ್ಡಿ ಜಿಲ್ಲೆ, ಮೆಹಬೂಬ್ ನಗರ ಇವುಗಳಲ್ಲಿ ನಮ್ಮ ಕುಲಗುರುವಿದ್ದಾನೆ. ನಾವು ಮೂಲದಲ್ಲಿ ಇಲ್ಲಿಯೇ ಇದ್ದೇವೆಂದು ನಮ್ಮ ತಂದೆಯವರು ಹೇಳುತ್ತಿದ್ದರು ಎಂದು ಹೇಳುತ್ತಾರೆ.

"ಇವರು ನಮ್ಮ ರಾಜ್ಯದ ಯಾವುದೇ ಭಾಗದಲ್ಲಿ ನೆಲಸಿದ್ದರೂ ಮನೆಮಾತು ತೆಲುಗು ಕರ್ನಾಟಕಾಂಧ್ರ ಸೀಮಾರೇಖೆಯಲ್ಲಿ ದಟ್ಟವಾಗಿ ನೆಲಸಿರುವುದು ಅಂಗರಚನೆ ಮತ್ತು ಬಣ್ಣ ತೆಲುಗರನ್ನು ಹೋಲುವುದು ಈ ಅಂಶವನ್ನು ಬೆಂಬಲಿಸುತ್ತದೆ."[೧೮]

ಇವರು ಶ್ರೀಶೈಲವನ್ನೇ ಮೂಲ ಧಾರ್ಮಿಕ ಕೇಂದ್ರವನ್ನಾಗಿ ತೋರಿಸುತ್ತಾರೆ. ಇಂದಿಗೂ ಶ್ರೀಶೈಲ ಮಠದ ಪರವಾಗಿ ಮುಡುಪನ್ನು ತೆಗೆದಿರಿಸಿ ಕಳುಹಿಸುತ್ತಾರೆ. ಈ ವಿಷಯವನ್ನು ಗಮನಿಸಿದರೆ, ಹಲವಾರು ಜನಸಮುದಾಯಗಳ ಮೂಲಸ್ಥಾನವಾದ ಶ್ರೀಶೈಲದ ತಪ್ಪಲು ಪ್ರದೇಶವೇ ಇವರ ಮೂಲವಾಗಿರುವ ಸಾಧ್ಯತೆ ಇದೆ. ನಂತರ ಹಲವು ಪ್ರದೇಶಗಳಿಗೆ ಹರಿದು ಹಂಚಿ ಹೋಗಿವೆ. ಮೆಹಬೂಬ್ ನಗರ ರಂಗಾರೆಡ್ಡಿ, ಕೃಷ್ಣಾರೆಡ್ಡಿ, ತೆಲಂಗಾಣ, ಕರ್ನೂಲು, ಅನಂತಪುರ ಜಿಲ್ಲೆಯ ಗಡಿಭಾಗದಲ್ಲಿ ಹೇರಳವಾಗಿ ಸಿಗುತ್ತಾರೆ. ಮೇಲೆ ಹೆಸರಿಸಿದ ಈ ಜಿಲ್ಲೆಗಳಲ್ಲಿ ವಾಸವಾಗಿದ್ದು ಕ್ರಮೇಣ ಹೊರ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರಗಳಿಗೆ ವಲಸೆ ಹೋಗಿರುವುದು ಕಂಡುಬರುತ್ತದೆ.

"ಪ್ರತಾಪರುದ್ರನ ಆಳ್ವಿಕೆಯ ಕಾಲದಲ್ಲಿ ಧರ್ಮ ಪ್ರಚಾರದ ನಿಮಿತ್ತ ರಾಜಾಶ್ರಯದಲ್ಲಿ ವೀರಶೈವ ಧರ್ಮವನ್ನು ಪ್ರಚಾರ ಮಾಡಲು ಹಲವಾರು ಸಮುದಾಯಗಳಿಗೆ ಕರೆಕೊಟ್ಟು ಒಬ್ಬೊಬ್ಬರಿಗೆ ಒಂದೊಂದು ವೃತ್ತಿಯನ್ನು ನೀಡಿದರು. ವೇಷಗಾರರು ಅಥವಾ ಬುಡಗಜಂಗಾಲರು ಎಂದು ಕರೆಯಿಸಿಕೊಳ್ಳುವ ನಮಗೆ ವೇಷ ಮತ್ತು ಕತೆಗಳ ಮೂಲಕ ಧರ್ಮಪ್ರಚಾರವನ್ನು ಕೈಗೊಳ್ಳುವಂತೆ ಮಾಡಿದರು. ಅಂದಿನಿಂದ ಇಂದಿನವರೆಗೆ ನಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದೇವೆಂದು ಹೇಳುತ್ತಾರೆ."[೧೯] ಆದರೆ ಸ್ಪಷ್ಟ ರೂಪ ದೊರೆಯುವುದು ೧೨ನೇ ಶತಮಾನದ ಶರಣರ ವಚನಗಳಿಂದ. ರೆಡ್ಡಿರಾಜರ ಯುಗದಲ್ಲಿ ವೈಷ್ಣವ ಧರ್ಮದ ಪ್ರಚಾರಕ್ಕೆ ರಾಜಮನೆತನದ ಬೆಂಬಲ ಸಿಕ್ಕಿದ್ದರಿಂದ ಶೈವಧರ್ಮ ಪ್ರಚಾರ ಕುಂಟುತ್ತಾ ಸಾಗಿತು. ಮುಂದೆ ವಿಜಯನಗರ ಅರಸರೂ ಸರ್ವಧರ್ಮವನ್ನು ಅನುಸರಿಸಿದರು. ಆ ಸಮಯದಲ್ಲಿ ಶೈವ ಮತ್ತು ವೈಷ್ಣವ ಧರ್ಮ ಪ್ರಚಾರದಲ್ಲಿ ಸ್ಪರ್ಧಾತ್ಮಕ ಭಾವನೆ ಏರ್ಪಟ್ಟಿರುವ ಸಾಧ್ಯತೆ ಇದೆ.

೨.೪.೨. ಪ್ರಸಾರ

ಆಂಧ್ರಪ್ರದೇಶದ ಗುಡ್ಡಗಾಡುಗಳಲ್ಲಿ ಹಲವಾರು ಅಲೆಮಾರಿ ಸಮುದಾಯಗಳು ವಾಸವಾಗಿದ್ದುಕೊಂಡು ಜೀವನ ಸಾಗಿಸಿವೆ. ತರುವಾಯ ಹಲವಾರು ಶತಮಾನಗಳು ಕಳೆಯುತ್ತಿದ್ದಂತೆ ಅಲೆಮಾರಿ ಜನಸಮುದಾಯದ ಜನಸಂಖ್ಯೆ ಬೆಳೆಯುತ್ತಾ ಹೋಗಿ ಆಹಾರದ ಕೊರತೆ ಮತ್ತು ಪ್ರಕೃತಿ ವಿಕೋಪದಿಂದ ಜೀವನೋಪಾಯಕ್ಕೆ

ಕ್ಷೇತ್ರಕಾರ್ಯ ನಡೆಸಿದ
ಕರ್ನಾಟಕ ಮತ್ತು ಆಂಧ್ರಗಡಿಭಾಗದ ನಕಾಶೆ



ಕೆಲಸ ದೊರೆಯದೆ ಸಮೀಪದ ರಾಜ್ಯಗಳಿಗೆ ವಲಸೆ ಹೋಗುವುದು ಅನಿವಾರ್ಯವಾಯಿತು. ಅಂತಹ ವಲಸೆ ಬಂದಿರುವ ಅಲೆಮಾರಿಗಳಲ್ಲಿ 'ಹಗಲುವೇಷಗಾರರು' ಒಬ್ಬರಾಗಿದ್ದಾರೆ. ಮೊದಲು ಶ್ರೀಶೈಲ ಪರ್ವತ ಪ್ರದೇಶದಲ್ಲಿ ವಾಸವಾಗಿದ್ದು, ತರುವಾಯ ಆಂಧ್ರದ ಅನಂತಪುರ, ಕರ್ನೂಲು, ಮೆಹಬೂಬ್‌ನಗರ, ತೆಲಂಗಾಣ, ರಂಗಾರೆಡ್ಡಿ ಜಿಲ್ಲೆಗಳಿಂದ ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರಗಳಿಗೆ ವಲಸೆ ಹೋಗಿದ್ದಾರೆ.

ಕರ್ನಾಟಕದಲ್ಲಿ ಇವರ ಇತಿಹಾಸ ೧೨ನೇಯ ಶತಮಾನದಿಂದ ಆರಂಭವಾಗುತ್ತದೆ. ಹಾಗಾದರೆ ಇವರು ಒಂದು ಶತಮಾನದ ಹಿಂದೆಯೇ ಕರ್ನಾಟಕಕ್ಕೆ ಬಂದು ಇಲ್ಲಿಯ ಭಾಷೆ ಕಲಿತು ಪ್ರಾದೇಶಿಕವಾಗಿ ಹೊಂದಿಕೊಂಡಿರಬಹುದೆಂದು ಊಹಿಸಲಾಗಿದೆ.

ಹಗಲುವೇಷಗಾರರು ಕರ್ನಾಟಕಕ್ಕೆ ವಲಸೆ ಬರಲು ಮುಖ್ಯವಾಗಿ ನಾಲ್ಕು ಜಿಲ್ಲೆಗಳಿಂದ ಪ್ರಸಾರವಾಗಿದ್ದಾರೆ. ಇದಕ್ಕೆ ಕಾರಣ ಇವರಿಗೆ ಸುಲಭವಾಗಿ ಅಡ್ಡಾಡಲು ರೈಲ್ವೆ ವ್ಯವಸ್ಥೆ ಒಂದು ಕಡೆಯಾದರೆ ಬಸ್ ಸಾರಿಗೆ ಒಂದು ಕಡೆ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣ ಮಾಡಿಕೊಟ್ಟವೆಂದು ಹೇಳಬಹುದು. ಮುಖ್ಯವಾಗಿ ಕರ್ನಾಟಕಕ್ಕೆ ಪಶ್ಚಿಮ ಆಂಧ್ರದಿಂದ ಹೊಲಸೆ ಬಂದಿದ್ದಾರೆ. ಅದನ್ನು ಈ ರೀತಿಯಲ್ಲಿ ಪಟ್ಟಿಮಾಡಿ ಗುರುತಿಸಬಹುದು.

ಕೇಂದ್ರ ಸ್ಥಾನಗಳು

ಅನಂತಪುರ	**ಕರ್ನೂಲು**	**ಮೆಹಬೂಬ್‌ನಗರ**	**ಕರೀಂನಗರ**
ಚಿತ್ರದುರ್ಗ	ಬಳ್ಳಾರಿ	ರಾಯಚೂರು	ಬೀದರ
ತುಮಕೂರು	ಕೊಪ್ಪಳ	ಬಾಗಲಕೋಟೆ	ಗುಲ್ಬರ್ಗಾ
ಕೋಲಾರ	ದಾವಣಗೆರೆ	ಬೆಳಗಾಂ	ಬಿಜಾಪುರ
ಬೆಂಗಳೂರು	ಹಾವೇರಿ		
	ಗದಗ		
	ಧಾರವಾಡ		

ಕೆಲವು ಕುಟುಂಬಗಳು ಅನಂತಪುರದಿಂದ ಚಿತ್ರದುರ್ಗದ ಗುಡ್ಡಗಾಡು ಬೆಟ್ಟಗಳ ಪ್ರದೇಶದ ಕಡೆ ಬಂದಿದ್ದಾರೆ. ಅಲ್ಲಿಂದ ಚಳ್ಳಕೆರೆ, ಹೊಳಲ್ಕೆರೆ, ಮೊಳಕಾಲ್ಮೂರು, ವಾಗಿಪಲ್ಲಿ, ಚಿಕ್ಕಬಳ್ಳಾಪುರ, ಗೌರಿಬಿದನೂರು, ದೇವನಹಳ್ಳಿ, ದೊಡ್ಡಬಳ್ಳಾಪುರಕ್ಕೆ ಪ್ರಸಾರವಾಗಿದ್ದಾರೆ.

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಿಂದ ಬಳ್ಳಾರಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗ, ದಾವಣಗೆರೆ, ಹರಿಹರ, ಹಂಗಲ್, ರಾಣಿಬೆನ್ನೂರು, ಶಿರಹಟ್ಟಿ ಹೀಗೆ ಪ್ರಸಾರ ಹೊಂದಿದ್ದಾರೆ.

ಮೆಹಬೂಬ್‌ನಗರ ಜಿಲ್ಲೆಯಿಂದ ರಾಯಚೂರು, ದೇವದುರ್ಗ, ಲಿಂಗಸೂಗೂರು, ಮಾನ್ವಿ, ಸಿಂಧನೂರು, ಅಥಣಿ, ಬೈಲಹೊಂಗಲ, ರಾಯಾಬಾಗ್ ಈ ಪ್ರದೇಶಗಳಿಗೆ ಪಸರಿಸಿದ್ದಾರೆ.

ಕರೀನಗರ ಜಿಲ್ಲೆಯಿಂದ ಬೀದರ್, ಔರದ್, ಕಲ್ಯಾಣ, ಬಾಲ್ಕಿ, ಹುಮನಾಬಾದ್, ಅಫ್ಜಲ್‌ಪುರ, ಚಿಂಚೋಳಿ, ಜೀವರ್ಗಿ, ಸುರಪುರ, ಬಿಜಾಪುರ, ಇಂಡಿ, ಸಿಂಧಗಿ ಇಲ್ಲಿಂದ ಮುಂದೆ ಮಹಾರಾಷ್ಟ್ರಕ್ಕೆ ವಲಸೆ ಹೋಗಿರುತ್ತಾರೆ.

ಹೀಗೆ ಹಗಲುವೇಷಗಾರರು ಪ್ರಸಾರ ಹೊಂದಿರುವುದನ್ನು ಸ್ಪಷ್ಟವಾಗಿ ತಾಳೆ ನೋಡಿ ಗುರುತಿಸಬಹುದಾಗಿದೆ. ಈ ಮೇಲೆ ಕೊಟ್ಟಿರುವ ಹೆಸರುಗಳು ಕೇವಲ ತಾಲೂಕುವಾರು ಪಟ್ಟಿಯನ್ನು ಮಾತ್ರ ಕೊಡಲಾಗಿದೆ. ಕರ್ನಾಟಕದ ಸ್ಪಷ್ಟ ಕೋಷ್ಟಕವನ್ನು ಅನುಬಂಧದಲ್ಲಿ ಕೊಡಲಾಗಿದೆ. ಹೀಗೆ ತಮ್ಮ ಅನುಕೂಲಕ್ಕೆ ತಕ್ಕಂತೆ ವೇಷಗಾರರು ವಲಸೆ ಹೋಗಿರುವುದು ತಿಳಿದುಬರುತ್ತದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಆಂಧ್ರಗಡಿಭಾಗದಲ್ಲಿಯ ವೇಷಗಾರರು ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿದ್ದಾರೆ. ಏಕೆಂದರೆ ಕರ್ನಾಟಕ ಮತ್ತು ಆಂಧ್ರಪ್ರದೇಶದ ಸಂಸ್ಕೃತಿಗಳೆರಡನ್ನು ರೂಢಿಸಿಕೊಂಡವರಾಗಿದ್ದಾರೆ. ಆ ಸ್ಪಷ್ಟತೆಯನ್ನು ಪ್ರಬಂಧದಲ್ಲಿ ಗುರುತಿಸಬಹುದಾಗಿದೆ.

ಮೂಲತಃ ಹಗಲುವೇಷಗಾರರು ವರ್ಷವಿಡೀ ಸಂಚಾರದಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಂಡವರಾಗಿದ್ದಾರೆ. ತಮ್ಮ ತಮ್ಮ ಕಾಗದ ಪತ್ರಗಳಲ್ಲಿ ಇರುವಂತೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಭಿಕ್ಷೆ ಬೇಡಿ ಜೀವಿಸುತ್ತಾರೆ. ಇವರಿಗೆ ಮನೆ, ಮಠ, ಹೊಲಗದ್ದೆ ಎಲ್ಲವೂ ಜನರೇ, ಅವರೇ ದೇವರು. ಅವರ ವಿಶ್ವಾಸವೇ ಇವರ ಆಸ್ತಿ. ತಮಗೆ ಅನುಕೂಲವಾಗುವಂತಹ ಸ್ಥಳಗಳನ್ನು ಆರಿಸಿಕೊಂಡು ಎಲ್ಲಾ ವೇಷಗಾರರು ಒಂದೊಂದು ಪ್ರದೇಶದಲ್ಲಿ ವಲಯಗಳಾಗಿ ಮಾಡಿಕೊಂಡು ನೆಲೆನಿಂತಿದ್ದಾರೆ,

೩.೫. ಹಗಲುವೇಷಾಗರರು ಮತ್ತು ಇತರ ಬುಡಕಟ್ಟುಗಳಿಗಿರುವ ಸಾಮ್ಯತೆ

ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಹಲವಾರು ಬುಡಕಟ್ಟು ಜನಸಮುದಾಯಗಳು ವಾಸಿಸುತ್ತಿವೆ. ಇದರಲ್ಲಿ ಕೆಲವು ಬುಡಕಟ್ಟುಗಳು ಸಂಪೂರ್ಣ ಅಲೆಮಾರಿಗಳಾಗಿದ್ದು ಸಂಚಾರದಲ್ಲಿಯೇ ನಿರತವಾಗಿರುತ್ತವೆ. ಇಂತಹ ಸಮುದಾಯಗಳು ಇನ್ನೊಂದು ಸಮುದಾಯದೊಡನೆ ರಕ್ತಸಂಬಂಧ ಮತ್ತು ಸಾಮ್ಯತೆ ಇರುವುದನ್ನು ಗುರುತಿಸುತ್ತೇವೆ. ಬುರ್ರಕಥೆಗಾರರು, ಕೊಂಡಮಾಮರು, ಬಾಲಸಂತರು ಅಥವಾ ಶಂಖ ಜಂಗಮರು ಸುಡುಗಾಡು ಸಿದ್ಧರು ಇವರ ಮದುವೆ, ಹಬ್ಬ ಹರಿದಿನ ಅಲ್ಲದೆ ಬೇಟೆಗೆ ಸಂಬಂಧಿಸಿದ ಸಾಮ್ಯತೆಗಳು ಇವೆ. ಈ ಸಮುದಾಯಗಳು ಮೂಲದ ಒಂದೇ ತಾಯಿ ಬೇರಿನ ಕವಲುಗಳಾಗಿವೆ.

ಶೀಘ್ರ ಗತಿಯಲ್ಲಿ ಬದಲಾಗುತ್ತಿರುವ ನಾಗರಿಕತೆಯಲ್ಲಿಯೂ ಕೆಲವು ಅಲೆಮಾರಿ ಸಮುದಾಯಗಳು ತಮ್ಮ ಆಚಾರ-ವಿಚಾರ, ನಂಬಿಕೆ-ಸಂಪ್ರದಾಯ, ಹಬ್ಬ-ಹರಿದಿನ, ಜಾತ್ರೆ-ಉತ್ಸವದ ಜೊತೆಗೆ ತಮ್ಮದೇಯಾದ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು, ಬರುತ್ತಿರುವುದು ಸೋಜಿಗವೆನಿಸಿದರು ಸತ್ಯ ಸಂಗತಿಯಾಗಿದೆ.

೨.೫.೧. ವೇಷಗಾರರು ಮತ್ತು ಬುರ‍್ರಕಥೆಯವರು : ವೇಷಗಾರರು ಮತ್ತು ಬುರ‍್ರಕಥೆಯವರು ಆಂಧ್ರಪ್ರದೇಶದವರಾಗಿದ್ದಾರೆ. ಈರ್ವರ ಮೂಲ ಒಂದೇ ಆಗಿರುತ್ತದೆ. ಈರ್ವರ 'ಬಳಿ' ಅಥವಾ 'ಬೆಡಗು'ಗಳು ಒಂದೇ ಆಗಿರುತ್ತವೆ. ಮದುವೆ, ಹಬ್ಬ, ಸಂಪ್ರದಾಯಗಳು ಒಂದೇ ತೆರನಾಗಿದ್ದು ವೃತ್ತಿ ಮಾತ್ರ ಬೇರೆ ಬೇರೆಯಾಗಿವೆ. ಹಗಲುವೇಷಗಾರರು ಹೆಸರೇ ಸೂಚಿಸುವಂತೆ ಹಗಲು ಹೊತ್ತಿನಲ್ಲಿ ವೇಷವನ್ನು ಧರಿಸುವುದಾಗಿದೆ. ಬುರ‍್ರಕಥೆಯವರು ತಮ್ಮದೇಯಾದಂತಹ ಬುರ‍್ರಕಥೆಯ ಉಡುಪಿನೊಂದಿಗೆ ರಾತ್ರಿಯ ಹೊತ್ತು ನಿರ್ಧಿಷ್ಟ ಸಂಭಾವನೆಯೊಂದಿಗೆ ಕಥೆಗಳನ್ನು ಹೇಳುತ್ತಾರೆ.

೨.೫.೧.೧. ಭಾಷೆ ಪ್ರಾದೇಶಿಕ ಹಿನ್ನೆಲೆ : ಎರಡೂ ಜನ ಸಮುದಾಯಗಳ ಮೂಲವಂಶಜರು ಆಂಧ್ರಪ್ರದೇಶಕ್ಕೆ ಸೇರಿದವರಾಗಿದ್ದಾರೆ. ಸಹಜವಾಗಿಯೇ ಇವರ ಮಾತೃ ಭಾಷೆ ತೆಲುಗು ವಲಸೆ ಹೋದ ಆಯಾ ಪ್ರದೇಶಗಳಲ್ಲಿ ಮಾತನಾಡುವ ಭಾಷೆಗಳನ್ನು ಇವರು ಮಾತನಾಡುತ್ತಾರೆ. ಎರಡೂ ಅಲೆಮಾರಿಗಳು ಹೈದರಾಬಾದ್, ನಿಜಾಮಾಬಾದ್, ಮೆಹಬೂಬ್‌ನಗರ, ಶ್ರೀಶೈಲ, ಕರ್ನೂಲು, ಅನಂತಪುರಂ, ಕಡಪ, ಚಿತ್ತೂರು ಜಿಲ್ಲೆಗಳಿಂದ ವಲಸೆ ಹೋಗಿದ್ದಾರೆ. ಮತ್ತು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಪಸರಿಸಿದ್ದಾರೆ. "ಬಳ್ಳಾರಿ, ಬಾಗಲಕೋಟೆ, ಬೆಂಗಳೂರು, ಬೆಳಗಾಂ, ಬೀದರ್, ಬಿಜಾಪುರ ಚಿತ್ರದುರ್ಗ, ದಾವಣಗೆರೆ, ಗದಗ, ಗುಲ್ಬರ್ಗಾ, ಹಾವೇರಿ, ಕೋಲಾರ, ಕೊಪ್ಪಳ, ರಾಯಚೂರು, ಬಳ್ಳಾರಿ ಇತ್ಯಾದಿ ಕಡೆ ಇವರು ಹೆಚ್ಚಾಗಿ ಕಾಣಸಿಗುತ್ತಾರೆ. ಇವರು ಆಡುವ ಭಾಷೆಗಳಲ್ಲಿ ಉತ್ತರ ಕರ್ನಾಟಕದ ಪ್ರಾದೇಶಿಕ ಭಾಷೆಯ ಛಾಯೆ ನಿಚ್ಚಳವಾಗಿ ಕಾಣಿಸುತ್ತದೆ. ಇವರು ಮಾತನಾಡುವ ತೆಲುಗಿನಲ್ಲಿ ಕನ್ನಡ ಶಬ್ದಗಳು ಸರಾಗವಾಗಿ ಮೂಡಿಬರುವುದು ಕೇಳುಗರಿಗೆ ಆಶ್ಚರ್ಯವನ್ನುಂಟುಮಾಡುತ್ತದೆ.

ಇವರು ಊರ ಮುಂದಿನ ಗುಡಿ ಇಲ್ಲವೇ ಊರ ಹೊರಗೆ ಗುಡಾರಗಳನ್ನು ಹಾಕಿಕೊಂಡು ವಾಸಿಸುತ್ತಾರೆ. ಎರಡು ಅಲೆಮಾರಿಗಳು ಹಿಂದಿನ ದಿನದಲ್ಲಿ ಕುದುರೆಯನ್ನು ಸಂಚಾರದಲ್ಲಿ ಸಾಮಾನು ಒಯ್ಯಲು ಬಳಸುತ್ತಿದ್ದರೆ ಈಗ ಎತ್ತು ಇಲ್ಲವೆ ಹಸುಗಳನ್ನು ಬಳಸುತ್ತಾರೆ.

೨.೫.೧.೨. ಕೂದಲು ಬಿಡುವುದು : ಹಗಲುವೇಷಗಾರರು ಮತ್ತು ಬುರ‍್ರಕಥೆಗಾರರು ತಮ್ಮ ತಲೆಕೂದಲು ಕತ್ತರಿಸಿಕೊಳ್ಳದೆ ಹಾಗೆಯೇ ಬಿಡುತ್ತಾರೆ. ಯಾವ ಕಾರಣಕ್ಕೂ ಕೂದಲನ್ನು ಕತ್ತರಿಸಿಕೊಳ್ಳುವುದಿಲ್ಲ. ಕೂದಲು ಕತ್ತರಿಸಿಕೊಂಡರೆ ಅಂತಹ ವ್ಯಕ್ತಿಗಳನ್ನು ಹಿಡಿದುತಂದು ಪಂಚಾಯಿತಿ ಕಟ್ಟೆಯಲ್ಲಿ ನ್ಯಾಯ ಮಾಡಿ ಶಿಕ್ಷೆ ಹಾಗೂ ದಂಡವನ್ನು ವಿಧಿಸುತ್ತಾರೆ.

೨.೫.೧.೩. ಕುಟುಂಬ ಪದ್ಧತಿ : ಎರಡೂ ಅಲೆಮಾರಿ ಸಮುದಾಯಗಳಲ್ಲಿ ಒಳಪಂಗಡಗಳಿದ್ದು ಅವುಗಳನ್ನು ಬೆಡಗುಗಳಿಂದ ಗುರುತಿಸಲ್ಪಡುತ್ತಾರೆ. ಬೆಡಗುಗಳಿಂದಲೇ ರಕ್ತಸಂಬಂಧ ಬೆಳೆಸುವುದು ಇವರ ಸಂಪ್ರದಾಯ ಒಂದೇ ಬೆಡಗಿನವರಾದರೆ ಅವರಿಗೆ ಸಂಬಂಧ ಏರ್ಪಡುವುದಿಲ್ಲ ಅಣ್ಣತಮ್ಮಂದಿರಾಗುತ್ತಾರೆ. ಇವರಿಬ್ಬರ ಬೆಡಗುಗಳು ಒಂದೇ ಆಗಿರುತ್ತವೆ.

ಇವರು ಬೆಡಗುಗಳ ಮುಖ್ಯಸ್ಥನನ್ನು ಅಥವಾ ಸಮುದಾಯದ ಹಿರಿಯರನನ್ನು 'ಕುಲಪೆದ್ದ' ಎಂದು ಕರೆಯುತ್ತಾರೆ. ಆ ಕುಲಪೆದ್ದ 'ವಿಭೂತಿ' ಬೆಡಗಿಗೆ ಸೇರಿದವನಾಗಿರುತ್ತಾನೆ. ನ್ಯಾಯ ತೀರ್ಮಾನದ ಹಕ್ಕು ಇವನಿಗೆ ಸೇರಿರುತ್ತದೆ. ಇಬ್ಬರಲ್ಲಿಯೂ ಅವಿಭಕ್ತ ಕುಟುಂಬ ಪದ್ಧತಿ ಹೆಚ್ಚಾಗಿರುತ್ತದೆ. ವೃದ್ಧರಾದ ತಂದೆತಾಯಿಗಳು ಮಕ್ಕಳ ಆಶ್ರಯದಲ್ಲಿ ಬದುಕುತ್ತಾರೆ. ಹಿರಿಯರಂತೆ ಕಿರಿಯರು ನಡೆದುಕೊಳ್ಳುವುದು ಇವರ ಧರ್ಮ, ಇಬ್ಬರಲ್ಲಿಯೂ ಪ್ರತಿಯೊಂದು ಸಂತೋಷದ ಸಮಯದಲ್ಲಿಯೂ ಹೆಂಡ, ಸರಾಯಿ ಕುಡಿಯುವ ಪದ್ಧತಿ ಇದೆ. ಊರುಗಳೇ ಇವರ ಆಸ್ತಿ. ಊರಲ್ಲಿರುವ ಜನರೇ ಇವರ ಆಶ್ರಯದಾತರು. ವೇಷಗಾರಿಕೆಯಿಂದ ಇವರು ಹಣವನ್ನು ಬೇಡಿದರೆ, ಬುರ್ರಕಥೆಯವರು ಕಥೆ ಹೇಳುವುದರ ಮುಖಾಂತರ ಹಣವನ್ನು ಬೇಡುತ್ತಾರೆ. ಯಾವ ಕಾರಣಕ್ಕೂ ಜಗಳವಾದರೆ ಎರಡೂ ಅಲೆಮಾರಿಗಳು ಕೋರ್ಟು ಕಛೇರಿಗೆ ಹೋಗುವುದಿಲ್ಲ. ಬೈದವನಿಗೆ, ಹೊಡೆದಾಡಿದವರಿಗೆ, ಅನೈತಿಕ ಸಂಬಂಧ ಹೊಂದಿದವರಿಗೆ, ದ್ರೋಹ ಬಗೆದವನಿಗೆ ದಂಡ ವಿಧಿಸುತ್ತಾರೆ. ಎಂತಹ ಸಮಸ್ಯೆ ಇದ್ದರೂ ಕೂಡ ತಮ್ಮ ಕುಲಪಂಚಾಯಿತಿಯಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಇವರಿಬ್ಬರಲ್ಲಿಯೂ ಅರೆ ಉದ್ಯೋಗವಾಗಿ ಬೇಟೆ ಆಡುವ ಪದ್ಧತಿ ರೂಢಿಯಲ್ಲಿದೆ.

ಆಸ್ತಿಯಾಗಿ ಊರುಗಳನ್ನೇ ಹಂಚಿಕೊಳ್ಳುತ್ತಾರೆ. ಒಬ್ಬರ ಎಲ್ಲೆಯಲ್ಲಿ ಇನ್ನೊಬ್ಬರು ಬಂದು ಬೇರೆ ಪದ ಬಳಸುವ ಹಾಗಿಲ್ಲ. ಹಾಗೇನಾದರೂ ಆಡಿದರೆ ನ್ಯಾಯ ನಡೆದ ಸಂದರ್ಭಗಳೂ ಉಂಟು. ಎರಡೂ ಸಮುದಾಯದವರು ತಮ್ಮ ಸಮಾಜಿಕ ಕಟ್ಟುಪಾಡುಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರುತ್ತಿದ್ದಾರೆ. ತಮಗಿಂತ ಕೀಳುಜಾತಿಯವರನ್ನು ತಮ್ಮ ಜನಾಂಗಕ್ಕೆ ಸೇರಿಸಿಕೊಳ್ಳುವುದಿಲ್ಲ. ಹಾಗೇನಾದರೂ ಸೇರಿಸಿಕೊಂಡರೆ ಅಂಥಹವರನ್ನು ಕುಲದಿಂದ ಹೊರಹಾಕುತ್ತಾರೆ. ಇವರ ದೃಷ್ಟಿಯಲ್ಲಿ 'ಕಾಯಕವೇ ಕೈಲಾಸ' ಇದನ್ನ ತೊರೆಯುವಹಾಗಿಲ್ಲ. ಅಲ್ಲದೆ ವರ್ಷಕ್ಕೆ ಇಂತಿಷ್ಟು ಎಂದು ಗುರುಕಾಣಿಕೆ ಶ್ರೀಶೈಲಕ್ಕೆ ಕಳುಹಿಸಿಕೊಡುವ ಪದ್ಧತಿ ಎರಡೂ ಜನಸಮುದಾಯದಲ್ಲಿ ರೂಢಿಯಿದೆ.

ಎರಡೂ ಅಲೆಮಾರಿಗಳಲ್ಲಿ ಜನನ ಸಂದರ್ಭದಲ್ಲಿ ಒಂದೇ ತೆರನಾದ ಆಚರಣೆಯನ್ನು ಆಚರಿಸುತ್ತಾರೆ. ಹೆರಿಗೆಗೆ ಹೆಣ್ಣನ್ನು ತವರು ಮನಗೆ ಕಳುಹಿಸುವುದಿಲ್ಲ. ಪ್ರಸವಕಾರ್ಯವನ್ನು ಸೂಲುಗಿತ್ತಿ ಅಥವಾ ಮಂತ್ರಸಾನಿಯೇ ನೆರವೇರಿಸುತ್ತಾಳೆ. ಒಂಬತ್ತನೇ ದಿನದಲ್ಲಿ ಸೂತಕ ಕಳೆದು ಗಂಗಾ ಪೂಜೆಯನ್ನು ಮಾಡುತ್ತಾರೆ. ಮದುವೆಯಲ್ಲಿ ಇಬ್ಬರಲ್ಲಿಯೂ ತೆರ ಮತ್ತು ಬಾಲ್ಯವಿವಾಹ ಪದ್ಧತಿ ಹೆಚ್ಚು ರೂಢಿಯಲ್ಲಿದೆ. ಈ ಮದುವೆ ಬಳಿಯನ್ನು ನೋಡಿ ಮಾಡುತ್ತಾರೆ. ಮದುವೆಯಾಗುವವರು ಒಂದೇ ಬಳಿ ಇರಬಾರದು. ಸತತ ಮೂರುದಿನ ಮದುವೆ ನಡೆಯುತ್ತದೆ. ಇಬ್ಬರಲ್ಲಿಯೂ ಬಸವಿ ಬಿಡುವ ಪದ್ಧತಿ ಇಲ್ಲ. ಹಬ್ಬಜಾತ್ರೆಗಳನ್ನು ವಿಶೇಷವಾಗಿ ಯಲಬುರ್ಗಾ ತಾಲೂಕು ಕುದುರೆಮೋತಿಯಲ್ಲಿ ಪೀರಲ ಹಬ್ಬದಲ್ಲಿ ಎರಡು ವರ್ಷಕ್ಕೆ ಒಂದು ಸಾರಿ ಆಚರಿಸುತ್ತಾರೆ. ಇವರಿಬ್ಬರ ಮನೆ ದೇವರು ಜಂಬಲಮ್ಮ, ಸುಂಕಲಮ್ಮ ಒಟ್ಟಿನಲ್ಲಿ ಹೆಣ್ಣು ದೇವತೆಯಾಗಿರುತ್ತಾಳೆ. ಹಗಲುವೇಷಗಾರರಲ್ಲಿ ಮತ್ತು ಬುರ್ರಕಥೆಗಾರರಲ್ಲಿ ಇಬ್ಬರಲ್ಲಿಯೂ ಸತ್ತ ವ್ಯಕ್ತಿಯನ್ನು ಹೂಳುವ ಪದ್ಧತಿ ಇದು ಸಂಸ್ಕಾರದ ಕ್ರಮ ಒಂದೇ ತೆರನಾಗಿರುತ್ತದೆ. ಸಂಚಾರಿ

ಜನಸಮುದಾಯವಾದ ಈ ಎರಡೂ ಅಲೆಮಾರಿಗಳ ಉಡುಗೆ ತೊಡುಗೆಗಳಲ್ಲಿ ಹೆಚ್ಚಿನ ಸಾಮ್ಯತೆ ಕಂಡುಬರುತ್ತದೆ. ಜನನ, ಮದುವೆ ಮತ್ತು ಮರಣ ಸಂಪ್ರದಾಯಗಳಿಗೆ ಸಂಬಂಧಿಸಿದ ನಂಬಿಕೆ, ಆಚರಣೆಗಳಲ್ಲಿಯೂ ಹೆಚ್ಚಿನ ಸಾಮ್ಯತೆಯಿದೆ. ನ್ಯಾಯನಿರ್ಣಯದಲ್ಲಿ ಎರಡೂ ಅಲೆಮಾರಿಗಳು ಬಿಗಿಕ್ರಮ ಅನುಸರಿಸುವುದು ಕಂಡುಬರುತ್ತದೆ. ಒಟ್ಟಿನಲ್ಲಿ ವೇಷಗಾರರು ಮತ್ತು ಬುರ್ರಕಥೆಗಾರರಿಗೆ ಹೆಚ್ಚಿನ ಸಾಮ್ಯತೆಗಳು ಕಂಡುಬರುತ್ತವೆ.

೨.೫.೨. ಹಗಲುವೇಷಗಾರರು ಮತ್ತು ಕೊಂಡಮಾಮಗಳು : ಹಗಲುವೇಷಗಾರರು ಮತ್ತು ಕೊಂಡಮಾಮಗಳು ಮೂಲತಃ ಆಂಧ್ರಪ್ರದೇಶದವರಾಗಿದ್ದಾರೆ. ಕೊಂಡಮಾಮ ಹೆಸರು ಬರುವುದಕ್ಕಿಂತ ಮುಂಚಿತವಾಗಿ ಸಿರಿಜಂಗಾಲು ಎಂದು ಕರೆಯುತ್ತಿದ್ದರು ಎಂದು ಹೇಳುತ್ತಾರೆ. ಇವರ ಮುಖ್ಯ ವೃತ್ತಿ ಹಸ್ತ ಮತ್ತು ಮುಖ ನೋಡಿ ಶಾಸ್ತ್ರ ಹೇಳಿ, ಬಂದ ಭಿಕ್ಷೆಯಿಂದ ಜೀವನ ಸಾಗಿಸುವುದು ಶಾಸ್ತ್ರ ಹೇಳುವಾಗ ಪ್ರತಿಯೊಂದು ಸಾಲಿನ ಕೊನೆಯಲ್ಲಿ ಕುರ್ರ... ಮಾಮ ಎಂದು ಹೇಳುವುದರಿಂದ ಇವರಿಗೆ ಕುರ್ರಮಾಮ ಎಂದು ಕರೆಯುತ್ತಿದ್ದಾರೆ. ಆದರೆ ವೇಷಗಾರರು ವೇಷ ಹಾಕುವುದರಿಂದ ವೇಷಗಾರರು ಎಂದು ಕರೆಯಿಸಿಕೊಂಡಿದ್ದಾರೆ. ಈ ವೇಷಗಾರಿಕೆಯಿಂದ ಭಿಕ್ಷೆ ಬೇಡುತ್ತಾರೆ. ಒಟ್ಟಿನಲ್ಲಿ ಇಬ್ಬರ ವೃತ್ತಿ ಭಿಕ್ಷೆ ಬೇಡುವುದಾಗಿದ್ದರು ಅವುಗಳ ವಿಧಾನ ಮಾತ್ರ ಬೇರೆ ಬೇರೆಯಾಗಿವೆ.

೨.೫.೨.೧. ಶಕುನ ನೋಡುವ ಕಲೆ : ಕೊಂಡಮಾಮಗಳು ಶಕುನ, ಸಂಕೇತ, ಹಸ್ತಸಾಮಗ್ರಿ, ಭವಿಷ್ಯಗಳನ್ನು ಜನರಿಗೆ ಹೇಳುವವರಾಗಿದ್ದಾರೆ. ವೇಷಗಾರರು ಅವುಗಳ ಬಗ್ಗೆ ಅಪಾರ ನಂಬಿಕೆ ಇಟ್ಟವರಾಗಿದ್ದಾರೆ. ಅಪಶಕುನಗಳನ್ನು ಇಬ್ಬರೂ ನಂಬುತ್ತಾರೆ. ಕೊಂಡಮಾಮಗಳು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿಯ ಪ್ರಸಿದ್ಧ ಭವಿಷ್ಯಗಾರಾರರಲ್ಲಿ ಒಬ್ಬರು, ವೇಷಗಾರರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳಲ್ಲಿ ವಿವಿಧ ವೇಷಗಳನ್ನು ಹಾಕಿ ರಂಜಿಸುವುದರಲ್ಲಿ ಇವರು ಪ್ರಸಿದ್ಧರು. ಒಟ್ಟಿನಲ್ಲಿ ಎರಡೂ ಅಲೆಮಾರಿಗಳಲ್ಲಿಯೂ ಸನಾತನ ಕಾಲದಿಂದಲೂ ಬಹುಕಾಳಜಿಯಿಂದ ತಮ್ಮ ವೃತ್ತಿಯನ್ನು ಕಾಪಾಡಿಕೊಂಡು ಬಂದಿರುವುದು ಸುಸ್ಪಷ್ಟವಾಗಿದೆ.

೨.೫.೩. ಹಗಲುವೇಷಗಾರರು ಮತ್ತು ಬಾಲಸಂತರು ಅಥವಾ ಸುಡುಗಾಡು ಸಿದ್ಧರು

ಮೂಲತಃ ಸುಡುಗಾಡು ಸಿದ್ಧರು ಕಾಡು ಕಾಯುವ ಕೆಲಸದಲ್ಲಿ ನಿರತರಾದವರು ಮತ್ತು ಅಲ್ಲಿಯೇ ಜೀವನ ಸಾಗಿಸುತ್ತಾ ಬಂದವರು. ಕ್ರಮೇಣ ಕಾಡು ನಶಿಸಿಹೋಗಲು, ಇವರು ಕಾಡು ಬಿಟ್ಟು ನಾಡಿಗೆ ಬರಲು ಪ್ರಾರಂಭಿಸಿದವರು. ಹೀಗಾಗಿ ಜನ ಇವರನ್ನು ಕಾಡುಸಿದ್ಧರೆಂದು ಕರೆಯುತ್ತಾರೆ. ಇವರನ್ನು ಮಾಲ ಜಂಗಮರೆಂತಲೂ, ನಿರಂಜಯ್ಯಗಳೂ ಎಂದು ಸಹ ಕರೆಯುತ್ತಾರೆ. ಇದು ಸುಡುಗಾಡು ಸಿದ್ಧರ ಬೆಡಗುಗಳಲ್ಲಿ ಒಂದಾಗಿದೆ. ಈತನ ವೇಷಭೂಷಣ ಶಿವನ ಪ್ರತಿರೂಪದಂತಿರುತ್ತದೆ. ಈ ನಿರಂಜಯ್ಯನು ಶಿವನ ಸಹಸ್ರ ನಾಮಾವಳಿಗಳನ್ನು ಕೊಂಡಾಡಿ ಶಂಖನಾದ ಮಾಡಿದರೆ ಮನೆಗಳಿಗೆ ಬಡಿದುಕೊಂಡಿರುವ ದುಷ್ಟ ಶಕ್ತಿಗಳೆಲ್ಲಾ ದೂರಾಗುತ್ತವೆಂಬುದು ಜನರ ನಂಬಿಕೆಯಾಗಿದೆ. ಇವರನ್ನು ತೆಲುಗು ಜಂಗಮರು,

ಸಿರಿಜಂಗಾಲರು ಎಂತಲೂ ಕರೆಯುತ್ತಾರೆ. ಇವರ ವೃತ್ತಿ ಊರಾಡುವುದು, ಕಾವಿ ವೇಷದ ಜಂಗಮರ ರೂಪದಲ್ಲಿ ಭಿಕ್ಷೆ ಬೇಡುತ್ತಾರೆ. ಆದರೆ ವೇಷಗಾರರು ವೇಷ ಪ್ರದರ್ಶನದ ಮೂಲಕ ಭಿಕ್ಷೆಯನ್ನು ಬೇಡುತ್ತಾರೆ. ಇಬ್ಬರ ಮೂಲ ಬೆಡಗು. ಕೌಟುಂಬಿಕ ಪದ್ಧತಿ ಒಂದೇ ಆಗಿರುತ್ತದೆ.

೨.೫.೩.೧. ಬೆಡಗು : ವೇಷಗಾರರು ಮತ್ತು ಸುಡುಗಾಡುಸಿದ್ಧರಿಗೆ ಒಂದೇ ರೀತಿಯ ಬೆಡಗುಗಳಿವೆ. ಆದರೆ ವೇಷಗಾರರಲ್ಲಿ ೧೫೦ ಬೆಡಗುಗಳು ಕಂಡುಬಂದರೆ ಸುಡುಗಾಡು ಸಿದ್ಧರಲ್ಲಿ ಕೇವಲ ಮುಖ್ಯ ಬೆಡಗುಗಳು ಸಿಗುತ್ತವೆ. ಇಬ್ಬರಲ್ಲಿಯೂ ಸಾಮ್ಯವಿರುವ ಬೆಡಗುಗಳೆಂದರೆ ಉದಂಡಿ, ವಿಭೂತಿ ಒಂಟೆತ್ತಿನವರು, ಕಿನ್ನೂರಿ, ಸಂಖಿನವರು, ಪರಿಯವರು, ಘಂಟಿಯವರು, ಕೊಮಾರಿಯವರು, ಕೆಲವು ಕಡೆ ಈರ್ವರ ನಡುವೆ ರಕ್ತಸಂಬಂಧವೇರ್ಪಟ್ಟಿರುವುದು ಕಂಡುಬರುತ್ತದೆ. ಈ ಬೆಡಗುಗಳಿಂದಲೇ ರಕ್ತಸಂಬಂಧವನ್ನು ಗುರುತಿಸುತ್ತಾರೆ. ಒಂದೇ ಬೆಡಗಿನವರು ಅಣ್ಣತಮ್ಮಂದಿರಾಗುತ್ತಾರೆ. ಸುಡುಗಾಡು ಸಿದ್ಧರಲ್ಲಿ ಕಟ್ಟೆಗಳಿಂದ ಗುರುತಿಸುತ್ತಾರೆ. ಅಂತಹ ಪದ್ಧತಿ ವೇಷಗಾರರಲ್ಲಿ ಇರುವುದಿಲ್ಲ.

೨.೫.೩.೨. ಕೌಟುಂಬಿಕ ಪದ್ಧತಿ : ಕುಟುಂಬದ ಯಜಮಾನನಾದ ತಂದೆಯು ಜೀವಿಸಿರುವವರೆಗೂ ಗುಡಿಸಿಲಿನಲ್ಲಿ ಭಾಗವಾಗಲು ಸಾಧ್ಯವಿಲ್ಲ. ಹೊಸದಾಗಿ ಮದುವೆಯಾದ ಮಗನಿಗೆ ಹೊಸ ಡೇರ ಹಾಕಿ ಅವಕಾಶ ಮಾಡಿಕೊಡುತ್ತಾರೆ. ಕುಟುಂಬದ ಸಂಪೂರ್ಣ ಜವಾಬ್ದಾರಿ ಗಂಡುಮಕ್ಕಳ ಮೇಲೆಯೇ ಇರುತ್ತದೆ. ಹಿರಿಯರ ಮಾತುಗಳಿಗೆ ಎದುರುತ್ತರ ಕೊಡದೆ ಗೌರವಿಸುತ್ತಾರೆ. ತಂದೆ ಸಾವನ್ನಪ್ಪಿದ ಮೇಲೆ ಹಿರಿಯ ಮಗನೆ ಡೇರದ ಸಂಪೂರ್ಣ ಜವಾಬ್ದಾರಿಯನ್ನು ಪಡೆದುಕೊಳ್ಳುತ್ತಾನೆ. ಈ ವ್ಯವಸ್ಥೆ ಎರಡು ಸಮುದಾಯದವರಲ್ಲಿದೆ.

ಬಹುಪತ್ನಿತ್ವ ರೂಢಿಯಲ್ಲಿದೆ, ಹೆಂಡತಿಗೆ ಮಕ್ಕಳಾಗದಿದ್ದರೆ ಮಹಾರೋಗಕ್ಕೆ ಬಲಿಯಾದರೆ ಎರಡನೆ ಮದುವೆ ಮಾಡಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ. ಈ ರೂಢಿ ಎರಡೂ ಸಮುದಾಯಗಳಲ್ಲಿ ಕಂಡುಬರುತ್ತದೆ.

ಎರಡೂ ಸಮುದಾಯಗಳಲ್ಲಿ ಹೆರಿಗೆಯನ್ನು ಬಾಣಂತಿಯಿಂದಲೇ ನೆರವೇರಿಸುತ್ತಾರೆ. ಬಾಣಂತಿಗೆ ಹೆಂಡ ಕುಡಿಸುವ ಪದ್ಧತಿಯೂ ಇದೆ. ಐದನೆಯ ದಿನ ಇಲ್ಲವೆ ಒಂಬತ್ತನೆಯ ದಿನ ಗಂಗೆ ಪೂಜೆಯೊಂದಿಗೆ ಸೂತಕ ಕಳೆಯುತ್ತಾರೆ. ಮದುವೆಯನ್ನು ಬೆಡಗು ನೋಡಿ ಮಾಡುತ್ತಾರೆ. ಒಂದು ಬೆಡಗಿನವರು ಇನ್ನೊಂದು ಬೆಡಗಿನವರ ಜೊತೆ ರಕ್ತ ಸಂಬಂಧವನ್ನು ಬೆಳೆಸುತ್ತಾರೆ. ಸುಡುಗಾಡು ಸಿದ್ಧರು ಒಂದು ಊರಿನಲ್ಲಿ ಮೂರು ದಿನಳಿದ್ದು ಭಿಕ್ಷೆ ಬೇಡುತ್ತಾರೆ. ವೇಷಗಾರರು ಊರಿನ ಗಾತ್ರ ಮತ್ತು ವೇಷಗಳನ್ನು ಅವಲಂಬಿಸಿ ಮೂವತ್ತು ದಿನಗಳವರೆಗೂ ಇದ್ದ ಪ್ರಸಂಗಗಳಿವೆ. ವಿಧವಾ ವಿವಾಹ ಪದ್ಧತಿಯು ಎರಡೂ ಸಮುದಾಯದಲ್ಲಿಯೂ ರೂಢಿಯುಲ್ಲಿವೆ. ಇವರಿಗೆ ಜೆಸಸಂಖ್ಯೆಯೇ ಒಳ್ಳೆಯದು. ಮದುವೆಯಲ್ಲಿ ಹೆಣ್ಣಿಗೆ ತೆರ ಕೊಡುವ ಪದ್ಧತಿ ಇಬ್ಬರಲ್ಲಿಯೂ ಇದೆ. ಆದರೆ ಸುಡುಗಾಡು ಸಿದ್ಧರಲ್ಲಿ ಹದಿನಾರು ರೂಪಾಯಿ, ಒಂದು ಜೊತೆ ಸೀರೆ

ಕುಪ್ಪಸ, ಇಪ್ಪತ್ತೈದು ಪೈಸೆ ತೂಕದ ಬಂಗಾರ ಇದ್ದರೆ ವೇಷಗಾರರಲ್ಲಿ ಒಂಬತ್ತು ರೂಪಾಯಿ ಕೊಟ್ಟು ಇದೇ ಒಂಬತ್ತು ಲಕ್ಷ ಎಂದು ತಿಳಿಯಿರಿ ಎಂದು ಹೇಳುತ್ತಾರೆ.

ಸತ್ತ ವ್ಯಕ್ತಿಯನ್ನು ಇಬ್ಬರಲ್ಲಿಯೂ ಊಳುವ ವ್ಯವಸ್ಥೆ ಇದ್ದು ವೀರಶೈವ ಸಂಪ್ರದಾಯಗಳು ಸ್ಪಷ್ಟವಾಗಿ ಕಾಣುತ್ತವೆ. ಸಮಾಧಿಯ ಮೇಲೆ ಮಾಂಸದ ಸಾರು ಅನ್ನ ಹುಗಿಯುವ ಪದ್ಧತಿ ಇದೆ. ಇಬ್ಬರೂ ಶಕುನಗಳನ್ನ ನಂಬಿದವರಾಗಿದ್ದಾರೆ. ಹೀಗೆ ವೇಷಗಾರರು ಮತ್ತು ಸುಡುಗಾಡು ಸಿದ್ಧರ ನಡುವೆ ಸಾಮ್ಯತೆಗಳು ಕಂಡುಬರುತ್ತವೆ.

೨.೬. ಹಗಲುವೇಷಗಾರರ ಬಳಿಗಳು

ಪ್ರತಿಯೊಂದು ಬುಡಕಟ್ಟುಗಳ ಸಂಸ್ಕೃತಿ ಆಚಾರ-ವಿಚಾರ, ವಿಧಿ-ವಿಧಾನವನ್ನು ಅರಿಯಬೇಕಾದರೆ ಬಳಿಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಪ್ರತಿಯೊಂದು ಮನೆತನದ ಚರಿತ್ರೆಯನ್ನೇ ಈ ಬೆಡಗುಗಳು ಹೇಳುತ್ತವೆ. ಬುಡಕಟ್ಟು ಸಮುದಾಯವು ತಮ್ಮ ರಕ್ತ ಸಂಬಂಧವನ್ನು ಏರ್ಪಡಿಸಕೊಳ್ಳಬೇಕೆಂದರೆ, ಬೆಡಗು, ಬಳಿ, ಪಂಗಡಗಳೇ ಆಧಾರವಾಗುತ್ತವೆ. 'ಬಳಿ' ಎಂಬುದನ್ನು ಅವರು ಬೆಡಗು, ಕುಲ, ಗುಂಪು, ಮನೆತನ, ವಂಶ, ಸುಳಿ ಎಂದು ಪರ್ಯಾಯ ನಾಮಗಳಿಂದ ಕರೆಯುತ್ತಾರೆ. ಒಂದೇ ಬಳಿಗಳಿಗೆ ಸೇರಿದವರು ಸೋದರರಾಗುತ್ತಾರೆ. ಇನ್ನುಳಿದ ಬಳಿಗಳ ಜೊತೆ ಸಂಬಂಧ ಬೆಳೆಸುತ್ತಾರೆ. ಸಾಮಾನ್ಯವಾಗಿ ಇದು ಎಲ್ಲಾ ಸಮುದಾಯಗಳಲ್ಲೂ ಕಂಡುಬರುತ್ತದೆ.

ಕರ್ನಾಟಕ ಮತ್ತು ಆಂಧ್ರ ಗಡಿಭಾಗದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಗಲು ವೇಷಗಾರರಲ್ಲಿ ಇರುವ ಬೆಡಗುಗಳ ಸಮಗ್ರ ಸಂಗ್ರಹ ಮಾಡಲಾಗಿದ್ದು, ಒಂದು ನೂರಾ ಐವತ್ತೊಂಬತ್ತು ಬಳಿಗಳನ್ನು ಗುರುತಿಸಲಾಗಿದೆ. ಈ ಬೆಡುಗಗಳೆಲ್ಲಾ ತೆಲುಗು ಭಾಷೆಯನ್ನೇ ಹೋಲುತ್ತದೆ. ಆದ್ದರಿಂದ ಇವರು ಆಂಧ್ರ ಮೂಲದವರೆಂದು ಸ್ಪಷ್ಟವಾಗುತ್ತದೆ. ಅವು ಈ ಕೆಳಗಿನಂತಿವೆ.

೧. ಅಶ್ವೋಳ್ಳು
೨. ಅಗಸ್ತಲೋಳ್ಳು
೩. ಅನಾರಾಪಿ (ಅನಾರಾಶಿ, ವನರಾಶಿ)
೪. ಆಂದುಳು (ಹಂದೋಳ್ಳು)
೫. ಆಲೇಧೂಟು
೬. ಅವಧೂತ
೭. ಆಲೇಟಿ - ಗ್ರಾಮ
೮. ಅಲ್ಲಂ - ವೃಕ್ಷದ ಹೆಸರು
೯. ಅಸಿಪೋಳ್ಳು
೧೦. ಇಪ್ಪೋಳ್ಳು - ವೃಕ್ಷಸೂಚಿ
೧೧. ಇಂಗುವ - ವೃಕ್ಷ
೧೨. ಈರ್ಲಪಲ್ಲಿ - ಪೌರುಷನಾಮ
೧೩. ಈರ್ನಾಲು - ಬಿರುದು ನಾಮಸೂಚಿ
೧೪. ಊರ - ಊರ ವಾಸಿಗಳು
೧೫. ಊಪತಿ
೧೬. ಊಬಿದಿ - ವಿಭೂತಿ
೧೭. ಎದುರುಗಟ್ಲ
೧೮. ಎಡಮುಲೋರು
೧೯. ಎಣ್ಣೆ
೨೦. ಒಂಟಿ ಎದ್ದುಲೋಳ್ಳು
೨೧. ಕರ್ನೋಳ್ಳು
೨೨. ಕಡಿಯಂ

೨೩. ಕರ್ರೆ
೨೪. ಕಂಪಾಟಿ
೨೫. ಕಿನ್ನರೋಳ್ಳು
೨೬. ಕೊಂಡಪಲ್ಲಿ
೨೭. ಕೋನ್ರೋಳ್ಳು
೨೮. ಕೊಂಡೋಳ್ಳು
೨೯. ಕಡಮಂಚಿ
೩೦. ಕಲ್ಯಂ
೩೧. ಕಲ್ಯಾಣಂ
೩೨. ಕೋಮರೋಳ್ಳು
೩೩. ಕಂದಗೂರು
೩೪. ಕಪ್ಪೇರ
೩೫. ಕಮಾಂಡ್ಲಪಲ್ಲಿ
೩೬. ಕಿರೀಟ ಮೋಳ್ಳು
೩೭. ಕೋದಂಡಂ
೩೮. ಕೊಳ್ಳ
೩೯. ಕೋಡಿಗಂಟೆ
೪೦. ಕನ್ನಾಟಿ
೪೧. ಗಂಧಂ
೪೨. ಗಗನಂ
೪೩. ಗಾನುಗ
೪೪. ಗುಪ್ಪೋಳ್ಳು
೪೫. ಗಡ್ಡಮೋಳ್ಳು
೪೬. ಗಂಟ್ಯೋಳ್ಳು
೪೭. ಗಂಜಾಡಿ
೪೮. ಗಂದೋಟಿ
೪೯. ಗುಪಾಕ
೫೦. ಚರ್ಲ
೫೧. ಚರ್ಲಪಲ್ಲಿ
೫೨. ಚಿಂತ (ಸಿತ) ನೂರೋಳ್ಳು
೫೩. ಚಿತ್ತಾರಿ
೫೪. ಚೆನ್ನೂರು
೫೫. ಚೆಲಿಮಂಡ್ಲ (ಸಸಮಂಡ್ಲ)
೫೬. ಚಡಂತ್ರಿ
೫೭. ಜೇಡಿಮಟ್ಲ
೫೮. ಜಾತ ಕಡತೋಳ್ಳು
೫೯. ಜಾತಿಕರ್ಕ ಪೋಳ್ಳು
೬೦. ಜಾತು ಕಲ್ಲೇಳು
೬೧. ಟೇಕಿ
೬೨. ಡೊಕ್ಕೋಳ್ಳು
೬೩. ಡೆಕ್ಕನ್ನವರ
೬೪. ಡಮೋಳ್ಳು
೬೫. ತಿರುಪತೋಳ್ಳು
೬೬. ತೇರುವೋಳ್ಳು
೬೭. ತೂರ್ಪಾಡಿ
೬೮. ತಾಟಿಕೊಂಡೋಳ್ಳು
೬೯. ತಿರುಗುಬಾತ ಕಂಪೋಳ್ಳು
೭೦. ತ್ರಿಶಂಕು
೭೧. ತಿರುಡಿಕೋಳ್ಳು
೭೨. ತಾಟಕಿಟು
೭೩. ಧೂಪಂ
೭೪. ದುರ್ಕಿ (ದುದ್ದುಕೂರಿ)
೭೫. ದೇವಪೋಳ್ಳು
೭೬. ನಾಲಕಂಟೇರು
೭೭. ನಾರ್ಲ
೭೮. ನಿಡಗೊಂಡ (ನಿರುಕಂಡ)
೭೯. ನಾಗುಲ
೮೦. ನರಿಕೋಟಿ
೮೧. ನುಣಿಯೋಳ್ಳು
೮೨. ನಿಧಾನಕವಿ
೮೩. ನೂನೇಳ್ಳು
೮೪. ನೀಲಕಂಠೋಳ್ಳು
೮೫. ನಾಟಿವಾಳ್ಳು
೮೬. ಪತ್ತಿ
೮೭. ಪರ್ತಂ
೮೮. ಪರ್ವತಂ
೮೯. ಪಸ್ತಂ
೯೦. ಪಾಲಂಕಿ (ಪಾಲೆಂಕಪೋಳ್ಳು)

೯೧. ಪತ್ರಿಕೋಳ್ಳು
೯೨. ಪತ್ರೋಳ್ಳು
೯೩. ಪೊನ್ನಕಂಟೆ
೯೪. ಪವಣಪೋಳ್ಳು
೯೫. ಪೋಟಿವಿದ
೯೬. ಪೋನೇಟಿ
೯೭. ಪೋಲೋಪೋಳ್ಳು
೯೮. ಪೆಲ್ಲೂರಿ
೯೯. ಪ್ರಸಾದಂ
೧೦೦. ಪೂವ್ವಾಣಂ
೧೦೧. ಪಡಿಗಲ್ಲೋಳ್ಳು
೧೦೨. ಪಾಲುಪಾಟಿ
೧೦೩. ಪೋಪೋ ಪೋಳ್ಳು
೧೦೪. ಪಾರ್ಲ
೧೦೫. ಬೆಂಗೋಳ್ಳು
೧೦೬. ಬೇಜಾಡಿ
೧೦೭. ಬಾದಿಗೋಳ್ಳು (ಬಾದಿಗೆ)
೧೦೮. ಬೈಲು ಪಾಟೋಳ್ಳು (ಬೈಲ್ವಾಡಿ)
೧೦೯. ಭಂಡಾರಿ ಪೋಳ್ಳು
೧೧೦. ಬೊಮ್ಮಿಲ
೧೧೧. ಬಾಜೋಳ್ಳು
೧೧೨. ಬಾಜಿ
೧೧೩. ಬಲಗಲ್ಲೋಳು (ಬಲ್ಲೋಲ)
೧೧೪. ಭಾರತಿ (ಕೋಳ್ಳು) ಕವಿ
೧೧೫. ಭಂಡತ್ರಿ
೧೧೬. ಬೂತಂ
೧೧೭. ಬೋಡಪರ್ತಿ (ಬೋಡಪುರ್ತಿ)
೧೧೮. ಮದನಮೋಳ್ಳು
೧೧೯. ಮಿಟಿಪಲ್ಲಿ
೧೨೦. ಮಿರ್ಯಾಲ್ಲೋಳ್ಳು - ಮೆಣಸು
೧೨೧. ಮುಗ್ಗೋಳ್ಳು
೧೨೨. ಮೊಗಟಂ (ಮೋಟಂ)
೧೨೩. ಮೋತೆ (ಮೋಲೆ)
೧೨೪. ಮೋಡಿನೋಳ್ಳು (ಮೋಡಿ ಪೋಳ್ಳು)
೧೨೫. ಮಶೋಳ್ಳು (ಮಸೋಳ್ಳಿ)
೧೨೬. ಮೊದೆನಂ
೧೨೭. ಮೋಡೆಮ್ಮ
೧೨೮. ಮೀರ್ನಾಲ
೧೨೯. ಮಾಮಿಡಿ
೧೩೦. ಮ್ಯಾಕಲ
೧೩೧. ಯಡವಲ್ಲಿ
೧೩೨. ಯಲಪರ್ತಿ
೧೩೩. ರುದ್ರಾಕ್ಷಿಲ
೧೩೪. ರೇವಲ್ಲೋಳು
೧೩೫. ರಾಚಟೋಳ್ಳು (ರಾಚೂಟಿ)
೧೩೬. ರಾಸಸುರಿ (ರಾಸನೂರಿ)
೧೩೭. ಮಿನುಕೊಂಡ (ಇನುಕುಂಡ)
೧೩೮. ವದ್ದಿ (ಒದ್ದಿ)
೧೩೯. ವಾಣಪ
೧೪೦. ವೇಮುಲ ಯೋಯೆಲ
೧೪೧. ವರಧಾನಂ (ವರ್ಧನಮೋಳ್ಳು)
೧೪೨. ವಿಭೂತಿ
೧೪೩. ಶೆರ್ಲ
೧೪೪. ಶಂಖ
೧೪೫. ಸಂಕುಲ
೧೪೬. ಸದುಲ
೧೪೭. ಸಲ್ಲ
೧೪೮. ಸಿರಿಗಿರ (ಶ್ರೀಗಿರಿ)
೧೪೯. ಸಿರಿಸ್ಯಾಲ
೧೫೦. ಸಿರುವಾಟಿ
೧೫೧. ಸಿತ್ನೋರೋಳ್ಳು
೧೫೨. ಸೂಲಮುಪೋಳ್ಳು
೧೫೩. ಸಿಲಂಗಿಮೋಳ್ಳು (ಶಿವಲಿಂಗ ಮೋಳ್ಳು)
೧೫೪. ಸಿತಾರೆ
೧೫೫. ಸಿಂಗಿರೋಳ್ಳು
೧೫೬. ಸನ್‌ಮನ್‌ಲೋಳ್ಳು
೧೫೭. ಹನದುಲೇರು
೧೫೮. ಹದುತೋಳ್ಳು
೧೫೯. ಹಿಪ್ಪರಣಿ

ಮಾನವನ ಅಸ್ತಿತ್ವಕ್ಕೆ ವ್ಯಕ್ತಿಯ ಹೆಸರು ಇರುವಂತೆ, ಸಮಾಜದಲ್ಲಿ ಕುಟುಂಬದ ಅಸ್ತಿತ್ವಕ್ಕೆ ಮನೆಯ ಹೆಸರು ಇರಬೇಕು. ಸಮಾಜದಲ್ಲಿ ಕುಟುಂಬ ಅತ್ಯಂತ ಸಣ್ಣ ಘಟಕ. ಒಂದು ಕುಟುಂಬವು ಬೆಳೆದು ಅನೇಕ ಕುಟುಂಬಗಳಾಗಿ ವೃದ್ಧಿ ಹೊಂದುತ್ತವೆ. ಹಾಗೆ ಬೆಳೆದ ಕುಟುಂಬಗಳೆಲ್ಲಾ ಒಂದೇ ವಂಶಕ್ಕೆ ಸೇರುತ್ತವೆ. ಅಂತಹ ವಂಶದ ಕುಟುಂಬಗಳಿಗೆಲ್ಲಾ ಒಂದೇ ಮನೆ ಹೆಸರು ಇರುತ್ತದೆ. ಆ ವಂಶದ ಮೂಲ ಪುರುಷನ ಹೆಸರೇ ಬಳಿನಾಮವಾಗಿರುತ್ತದೆ. ಕ್ರಮೇಣ ಅನೇಕ ಕಾರಣದಿಂದ ಮನೆಯ ಹೆಸರು ಬದಲಾದರೂ ಬಳಿನಾಮ ಮಾತ್ರ ಬದಲಾಗುವುದಿಲ್ಲ. ಈ ಕುರಿತು ಅಧ್ಯಯನ ಮಾಡಿದ ಡಾ. ತೆಳ್ಳು ಸತ್ಯವತಿಯವರು "೧. ಗ್ರಾಮಸೂಚಿ, ೨. ವ್ಯಕ್ತಿನಾಮಸೂಚಿ, ೩. ಪೌರುಷ ಅಥವಾ ಬಿರುದುನಾಮಸೂಚಿ ಎಂದು ಮೂರು ಭಾಗಗಳಾಗಿ ಮಾಡಿದ್ದಾರೆ. ಮೂರನೆ ಭಾಗದಲ್ಲಿ ಆಯುಧ ಸೂಚಿ, ಕುಲಸೂಚಿ, ಜಂತುಸೂಚಿ, ವಾದ್ಯಸೂಚಿ, ವೃಕ್ಷಗಳ ಸೂಚಿ, ವೃತ್ತಿ ಸೂಚಿ, ಸಂಸ್ಕೃತಿ ಸೂಚಿ ಇನ್ನು ಮುಂತಾದವುಗಳನ್ನು ಹೆಸರಿಸಿ ಪರಿಶೀಲಿಸಿದ್ದಾರೆ."[೧೮]

ಅಪರಿತಮಿತವಾದ ಹಗಲುವೇಷಗಾರರ ಮನೆಹೆಸರು ಅಥವಾ ಬಳಿಗಳನ್ನು ಪರಿಶೀಲಿಸಿ ಅವುಗಳನ್ನು ಈ ರೀತಿಯಾಗಿ ವಿಭಜಿಸಲಾಗಿದೆ.

೧. ಮತ ಸಂಬಂಧ ಮತ್ತು ಗೃಹನಾಮಗಳ ಬಳಿಗಳು
೨. ಸಂಸ್ಕೃತಿ ಸಂಬಂಧ ಬಳಿಗಳು
೩. ಗ್ರಾಮನಾಮ ಸಂಬಂಧ ಬಳಿಗಳು
೪. ವೃಕ್ಷ ಸಂತತಿ ಸಂಬಂಧ ಬಳಿಗಳು
೫. ಜಂತು, ಪಕ್ಷಿ ಸಂಬಂಧ ಬಳಿಗಳು
೬. ಆಯುಧ, ಆವಯವ, ಆಭರಣ ಸಂಬಂಧ ಬಳಿಗಳು
೭. ಇತರ ಬಳಿಗಳು ಎಂದು ಏಳು ಭಾಗಗಳಾಗಿ ವಿಭಜಿಸಿ ಗುರುತಿಸಿದ್ದಾರೆ.

೨.೬.೧. ಮತ ಸಂಬಂಧ ಬಳಿಗಳು : ಶೈವ ಮತಾವಲಂಬಿಗಳಾದ ಹಗಲುವೇಷಗಾರರ ಸಮುದಾಯವು ಕಾಲಕ್ರಮೇಣ ಪ್ರತ್ಯೇಕ ಗುಂಪುಗಳಾಗಿದ್ದಾರೆ. ಈ ಕೆಳಗಿನ ಬಳಿಗಳವರು ನಮ್ಮ ಸಮುದಾಯವು ಪ್ರತ್ಯೇಕವಾಗಿ ಬೇರೆ ಬೇರೆ ಹೆಸರುಗಳನ್ನು ಇಟ್ಟುಕೊಂಡಿರುವ ನಾವು ಮೂಲ ಶೈವ ಧರ್ಮದ ಹೆಸರುಗಳನ್ನೇ ಇಟ್ಟುಕೊಂಡಿದ್ದೇವೆ ಎನ್ನುತ್ತಾರೆ. ಅಂತಹ ಬಳಿಗಳೆಂದರೆ ಸಿರಿಗಿರಿ, ವಿಭೂತಿ, ಪ್ರಸಾದಂ, ರುದ್ರಾಕ್ಷಿ, ಕಪ್ಪೇರ ಅದೇ ರೀತಿ ಮತ್ತು ಸಂಬಂಧ ಬಳಿಗಳಲ್ಲಿ ಪರ್ವತಂ, ಬಂಟೆದ್ದು, ಸಂಕು, ದೂಪಂ, ಸಿರಸಾಲ, ಸಿರಿವಾಟಿ ಮುಖ್ಯವಾದವು.

೨.೬.೨. ಸಂಸ್ಕೃತಿ ಸಂಬಂಧ ಬಳಿಗಳು : ತಮ್ಮ ಕಲಾಸಂಸ್ಕೃತಿಯ ಭಾಗವಾದ ಕವಿತೆಗಳಿಗೆ ಸಂಬಂಧಿಸಿದ ಬಳಿಗಳೆಂದರೆ ಚಿತ್ತಾರಿ, ಬೊಮ್ಮಲ ಚಿತ್ತಾರಿ>ಚಿತ್ರಕಾರ ಬೊಮ್ಮಲ>ಬೊಂಬೆಕಾರ ಚಿತ್ತಾರಿ ಚಿತ್ರ ಪ್ರದರ್ಶನಕಾರ ಬೊಮ್ಮಲ ಬೊಂಬೆ ಪ್ರದರ್ಶಿಸುವ ಎನ್ನುವ ಅರ್ಥ ಬರುತ್ತದೆ.

೨.೬.೩ ಗ್ರಾಮ ನಾಮ ಸಂಬಂಧ ಬಳಿಗಳು : ಗ್ರಾಮಕ್ಕೆ ಸಂಬಂಧಿಸಿದ ವಸ್ತುಗಳ ಬಗ್ಗೆ ಹೇಳುವ

ನಾಮಗಳಿಗೆ ಗ್ರಾಮನಾಮಗಳೆಂದು ಕರೆಯುತ್ತಾರೆ. ಚೆನ್ನೂರಿ, ದುದ್ದುಕೂರಿ, ಪೆಲ್ಲೂರಿ, ರಾಸುಸೂರಿ, (ರಾಸೂರಿ) = ರಾಚೂಟಿ ಊರು ಪೊನ್ನಗಂಟೆ, ಕೋಡಿಗಂಟೆ = ಕಂಟಿಗಂಟೆ

ತಾಟಿಕೊಂಡ, ಮಿನುಕೊಂಡ, ನಿಡುಗೊಂಡ, ನಿಂಡುಗೊಂಡ, ಗಿರಿ ಸಿರಿಗಿರಿ = ಕೊಂಡ ಗೊಂಡ ಕೊಂಡಪಲ್ಲಿ, ಕೊಷಿಹಿಂಡ್ಲಪಲ್ಲಿ, ಚರ್ಲಪಲ್ಲಿ, ಎಡುವಲ್ಲಿ, ರೇವಲ್ಲೆ = ಪಲ್ಲಿ ವಲ್ಲಿ ಪಲ್ಲೆ

ಎದುರುಗಟ್ಟ = ಗಟ್ಟು ಗಟ್ಟು + ಲು

ಜೇಡಿಮಟ್ಲು = ಮಟ್ಲ

ಕನ್ನಾಟಿ, ತೂರ್ಪಾಟಿ, ಬೈಲ್ಪಾಟಿ, ಪಾಲಪಾಟಿ = ಪಾಡು

ಸಿರುವಾಟಿ = ಪಾಟಿ/ವಾಟಿ

ಆಲೇಟಿ, ಪಾನೇಟಿ = ಏರು (ಎರಿ)

ಚೆರ್ಲ, ಶೇಜರ್ಲ = ಚೆರ್ಲ

ಬೋಡು ಪರ್ತಿ, ಎಲವರ್ತಿ = ಪಟ್ಟು>ಪರ್ತಿ>ವರ್ತಿ

ಸಿರಿಸ್ಯಾಲ = ಸಾಲ

ಪಾಟಿ ಮೀದ = ಮೀದ

ಕೊಂಡ್ರ, ಮೋತೆ, ವೇಮುಲ ಮುಂತಾದವು ಸಹ ಏಕಪದಗಳಾಗಿ ಗ್ರಾಮನಾಮದಲ್ಲಿ ಬಳಿಗಳಾಗಿ ಸೇರುತ್ತವೆ.

೨.೬.೪. ವೃಕ್ಷ ಸಂತತಿ ಸಂಬಂಧ ಬಳಿಗಳು : ವೃಕ್ಷಕ್ಕೆ ಸಂಬಂಧಿಸಿದ ಎಲೆ, ಮಿಡಿ, ಚಿಗುರು ಮೊದಲಾದ ವಿಷಯಗಳು ಆಧಾರವಾಗಿ ಬಳಿಗಳ ನಾಮಗಳಾಗಿವೆ. ಇಪ್ಪ, ಗಂಧಂ, ಟೇಕಿ, ಮಾಮಿಡಿ, ಬಲ್ಲೋಲ= ಮರಗಳ ಜಾತಿ

ಕಲ್ಲೆಂ, ಗಂಜಾಯಿ = (ಮೊಕ್ಕಲು)

ಅಲ್ಲಂ - (ದುಂಪಲು)

ಇಂಗುವ (ಜಿಗುರು) - ಚಿಗುರು

ಪತ್ರಿ - (ಆಕುಲ) ಎಲೆಗಳ ಬಗ್ಗೆ

ಪತ್ತಿ, ಮಿರಿಯಾಮಿ, ರುದ್ರಾಕ್ಷಲ = ಕಾಯಿಗಳು, ಮಿಡಿಗಳು

ವನಂ = ತೋಟ, ತೋಪು ಎನ್ನುವ ಅರ್ಥದಲ್ಲಿ ವನಂ ಎಂಬ ಹೆಸರು ಬರುತ್ತದೆ.

೨.೬.೫. ಪ್ರಾಣಿ ಸಂಬಂಧ ಬಳಿಗಳು

ಪ್ರಾಣಿಗಳು ಅಶ್ವ, ಒಂಟೆದ್ದು, ಮ್ಯಾಕಲ ಮೇಕೆ

ಜಂತುಸಂಬಂಧ = ಚಲ್ಲ ಮಜ್ಜಿಗೆ

ಸರೀಸೃಪನಾಗುಲ - ಹಾವು

೨.೬.೬. ಆಯುಧ ಅವಯುವ, ಆಭರಣ ಸಂಬಂಧ ಬಳಿಗಳು

ಆಯುಧಗಳು - ಕೋದಂಡಂ, ವನರಾಶಿ (ಅನರಾಸಿ)

ಆವಯುವಗಳು - ಗಡ್ಡಂ, ಡೊಕ್ಕ, ಕಪ್ಪೇರ

ಆಭರಣಗಳು - ಕಡೆಂ

೨.೬.೭. ಇತರ ಸಂಬಂಧಿ ಬಳಿಗಳು : ಗಗನಂ, ಭೂತಂ, ಮೊದೆನಂ, ಮೋಟಂ, ಕೊಮಾರಿ, ಚೆಲಿಮಂಡ್ಲ, ನರಿಕೋಟಿ, ನೂನೆ, ಕರ್ರೆ, ಉಪ್ಪ, ಗುಪ್ಪ ಮೊದಲಾದ ಬಳಿಗಳು ಈ ಭಾಗದಲ್ಲಿ ಸೇರುತ್ತವೆ.

ಈ ಬಳಿಗಳು ವ್ಯಕ್ತಿಗಳನ್ನು ಗುರುತಿಸುವಲ್ಲಿ ಸಹಾಯವಾಗುತ್ತವೆ. ಇವುಗಳಿಂದ ಹಿಂದಿನ ಪರಿಸರ, ಧರ್ಮ, ಸಾಕುಪ್ರಾಣಿಗಳು, ಸಂಚಾರ ಜೀವನ, ಕಲೆ, ವೃತ್ತಿ, ಬದಲಾವಣೆ, ಕುಲಾಂತರ ಸಂಪರ್ಕ, ಪ್ರದೇಶ ಅಪಾರ ಮಾಹಿತಿಯನ್ನು ತಿಳಿಯುವುದು ಸಾಧ್ಯವಿದೆ.

ಎಲ್ಲಾ ಬಳಿಗಳನ್ನು ಸೂಕ್ಷ್ಮವಾಗಿ ಅಧ್ಯಾಯನ ಮಾಡಿದ ಇವರ ಮೂಲ ಆಂಧ್ರವೆಂದು ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಬಳ್ಳಾರಿ ಜಿಲ್ಲೆಯ ಶಿವಶರಣರು, ಶಾಂತರಸರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,೧೯೭೫, ಪುಟ: ೧೩-೧೪

೨. ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪಿ. ಮಹದೇವಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪುಟ: ೧ ರಿಂದ ೩

೩. ಅರಚೇತಿಲೋ ಆಂಧ್ರಪ್ರದೇಶ, ಎ.ಪಿ. ವಿಜ್ಞಾನ ನಿಧಿ, ವಿಕ್ಟರಿ ಪಬ್ಲಿಕೇಷನ್ಸ್, ವಿಜಯವಾಡ, ೨೦೦೨

೪. ಕಿಟ್ಟೆಲ್‌ರವರ ಕನ್ನಡ ಇಂಗ್ಲೀಷ್ ಅರ್ಥಕೋಶ, ಮರಿಯಪ್ಪ ಭಟ್ಟ, ಮದ್ರಾಸ್ ವಿಶ್ವವಿದ್ಯಾಲಯ, ೧೮೯೪, ಪುಟ: ೧೮೩೧

೫. ಅಚ್ಚಗನ್ನಡ ನುಡಿಕೋಶ, ವಿದ್ವಾನ್ ಕೊಳಂಬೆ ಪುಟ್ಟಣ್ಣಗೌಡರು, ಪುಸ್ತಕ ಪ್ರಕಾಶನ ಸರಸ್ವತಿಪುರಂ, ಮೈಸೂರು, ೧೯೯೨ ಪುಟ ೩೦೬

೬. ವಾಳ್ಳವಿ ನಿಘಂಟವು ಸಂಪುಟ: ೨, ಶ್ರೀಪಾದ ಲಕ್ಷ್ಮೀಪತಿಶಾಸ್ತ್ರಿ, ವಾವಿಳ್ಳರಾಮಸ್ವಾಮಿಶಾಸ್ತ್ರಿ ಅಂಡ್ ಸನ್ಸ್ ತಂಡಯೋರ್ಪಾಟು ಚೆನ್ನಾಪುರಂ

೭. ಆಂಧ್ರಪ್ರದೇಶ ಜಾನಪದ: ಅನು: ಅರ್‍ವಿಯಸ್ ಸುಂದರಂ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ಹೊಸದೆಹಲಿ ೧೯೭೮, ಪುಟ: ೩-೪-೬-೭

೮. ಆಧುನಿಕ ಆಂಧ್ರಪ್ರದೇಶದ ಚರಿತ್ರೆ, ಪಠ್ಯಪುಸ್ತಕ, ತೆಲುಗು ಅಕಾಡೆಮಿ ಹೈದ್ರಾಬಾದ್, ೧೯೮೭

೯. ಕವಿರಾಜಮಾರ್ಗ, ಶತಮಾನದ ಕನ್ನಡ ಸಾಹಿತ್ಯ, ಸಂ. ಜಿ.ಹೆಚ್. ನಾಯಕ ರಾಘವೇಂದ್ರ ಪ್ರಕಾಶನ, ಅಂಕೋಲ ೨೦೦೦, ಪುಟ: ೨೯೨

೧೦. ಬಳ್ಳಾರಿ ಜಿಲ್ಲೆಯ ಸಮಕಾಲೀನ ಕಾವ್ಯ, ವೆಂಕಟಗಿರಿ ದಳವಾಯಿ, ಗೌತಮ ಪ್ರಕಾಶನ, ಬಳ್ಳಾರಿ ೧೯೯೭, ಪುಟ: ೧೩, ೧೪, ೧೫

೧೧. ಕನ್ನಡಾಂಧ್ರ ಸಾಹಿತ್ಯ ಬಾಂಧವ್ಯ, ವೈ. ವೃಷಬೇಂದ್ರಾಚಾರ್ ವಾಙ್ಞಯ ಪ್ರಚಾರ ಪುಸ್ತಕ ಮೇಲೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩

೧೨. ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪಿ. ಮಹದೇವಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪುಟ: ೮

೧೩. ಕನ್ನಡ ತೆಲುಗು ದ್ವಿಭಾಷಿಕ ಅಧ್ಯಯನ, ಡಾ. ಪರಮೇಶ್ವರ ಭಟ್ಟ, ಪುಟ: ೩೧, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೫

೧೪. ಆಂಧ್ರಪ್ರದೇಶದ ಜಾನಪದ, ಅನು: ಅರ್ಬಿಯಾಸ್ ಸುಂದರಂ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಹೊಸದೆಹಲಿ, ೧೯೭೮, ಪುಟ: ೧೫೭

೧೫. ಸುಂಕಮ್ಮ ದರೋಜಿ, ವಯಸ್ಸು ೬೦

೧೬. ಜನಪದ ಸಾಹಿತ್ಯ ದರ್ಶನ, ಭಾಗ ೬, ಲೇ ಎಂ.ಎಂ. ಕಲಬುರ್ಗಿ,ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪, ಪುಟ: ೩೦೧

೧೭. ಕೊಂಡಪಲ್ಲಿ ವೀರಭದ್ರಯ್ಯ, ವಯಸ್ಸು ೬೫, ಪಾರ್ವತಿನಗರ, ಕಡಪ ಜಿಲ್ಲೆ,

೧೮. ಡಾ. ತೆಳ್ಳಿ ಸತ್ಯವತಿಗಾರು, ತೆಲುಗುವಾರಿ ಇಂಟಿ ಪೇರ್ಲು, ಎಸ್.ಆರ್. ವೆಂಕಟೇಶಂ, ದಿವ್ಯದೀಪ್ತಿ ಪ್ರಚುರಣಾ ಹೈದರಾಬಾದ್, ಬುಡಿಗೆ ಜಂಗಾಲು ಭಾಷಾ, ಸಾಹಿತ್ಯ, ಸಾಂಸ್ಕಕಾಂಶಾಲ ಪರಿಶೀಲನೆ, ಪುಟ: ೨೫೫, ೧೯೯೫

೧೯. ಅದೇ. ಪುಟ: ೨೫೬

¤ ¤ ¤ ¤ ¤

ಅಧ್ಯಾಯ ೩

ಪದ ನಿಷ್ಪತ್ತಿ, ಪ್ರಾಚೀನತೆ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೩.೧. ಪದನಿಷ್ಪತ್ತಿ

೩.೨. ಐತಿಹಾಸಿಕ ಹಿನ್ನೆಲೆ

೩.೩. ಪೌರಾಣಿಕ ಹಿನ್ನೆಲೆ

೩.೪. ಸಾಹಿತ್ಯ ಸಮೀಕ್ಷೆ

೩.೫. ಶಾಸನಗಳ ಸಮೀಕ್ಷೆ

ಪದ ನಿಷ್ಪತ್ತಿ, ಪ್ರಾಚೀನತೆ ಮತ್ತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಹಗಲುವೇಷಗಾರ ಸಮುದಾಯವು ಕರ್ನಾಟಕದಲ್ಲಿ ವಾಸವಾಗಿರುವ ಹಲವಾರು ಅಲೆಮಾರಿಗಳಲ್ಲಿ ಒಬ್ಬರಾಗಿದ್ದಾರೆ. ತಲ-ತಲಾಂತರದಿಂದ ವೇಷಗಾರಿಕೆಯನ್ನೇ ಬದುಕಾಗಿಸಿಕೊಂಡು ಕಲೆಯನ್ನೇ ಸರ್ವಸ್ವವೆಂದು ನಂಬಿಕೊಂಡು ಅದರ ಬೆಳಕಿನಲ್ಲಿಯೇ ಬಾಳಿ ಬದುಕಿದವರು.

ಈ ಸಮುದಾಯದ ಕುರಿತು ಹೇಳುವುದಾದರೆ ಚರಿತ್ರೆ ಇವರ ಹೆಸರೇ ಸೂಚಿಸುವಂತೆ ಹಗಲು ಹೊತ್ತಿನಲ್ಲಿ ದಿನಕ್ಕೊಂದರಂತೆ ವಿವಿಧ ವೇಷಗಳನ್ನು ತೊಟ್ಟು, ವೇಷಕ್ಕೆ ತಕ್ಕ ಅಭಿನಯ ಮತ್ತು ಸಂಭಾಷಣೆ ಮಾಡುತ್ತಾ ಜನರ ಮನಸ್ಸನ್ನು ಸುರೆಗೊಂಡಿದ್ದರಿಂದ ಇವರಿಗೆ ಆ ಹೆಸರು ಪ್ರಾಪ್ತವಾಗಿದೆ. ಕಿಟೆಲ್ ಅವರು ತಮ್ಮ ಶಬ್ಧಕೋಶದಲ್ಲಿ ಈ ರೀತಿ ಅರ್ಥೈಸಿದ್ದಾರೆ

ವೇಷ - Vesha ಯಾಸ, (ವೇಶ) ವೇಸ

ವೇಷಗಾರ - Vesha - ghara = A masquerader (c)

ವೇಷಧಾರಿ - Vesha - dhari = one that assumes the grab (ವೇಷ) (ಕಾಲ್ಪನಿಕ) a hypocrite, one who is disquised

ವೇಷಿ - Veshi = Having a dress, dressed, - Assuming a particular grabof Form[೧] ಎಂಬ ಅನೇಕ ಅರ್ಥಗಳಿವೆ.

ವೇಷ = (ನಾ)೧. ಉಡುಗೆ, ಪೋಷಾಕು
೨. ಗುರುತು ತಿಳಿಯದಂತೆ ರೂಪ ಬದಲಾವಣೆ ಮಾಡಿಕೊಳ್ಳುವುದು.
೩. ಅಲಂಕಾರ
೪. ಬೂಟಾಟಿಕೆ, ಸೋಗು
೫. ನಾಟಕದಲ್ಲಿಯ ಪಾತ್ರ

ಕಟ್ಟು = ೧. ನಾಟಕದಲ್ಲಿ ಪಾತ್ರವಹಿಸು
೨. ಸೋಗು ಹಾಕು = ವೇಷ ಕಟ್ಟು

ವೇಷಧಾರಿ (ನಾ) ೧. ಅಭಿನಯಕಾರ, ನಟ

೨. ವೇಷವನ್ನು ಮರೆಸಿಕೊಂಡವನು

೩. ಬೂಟಾಟಿಕೆ ಮಾಡುವವನು; ಆಷಾಡಭೂತಿ[೨] ಎಂದು ವಿವರಣೆ ನೀಡಿದ್ದಾರೆ.

Masquerader = Mas-ker-ader N.S.

ಮಾರು ವೇಷವನ್ನು ಹಾಕಿಕೊಂಡವನು, ಮಾರು ಮುಖವನ್ನು ಕಟ್ಟಿಕೊಂಡವನು, ವೇಷಧಾರಿ.

Masquerader = Mas-ker-ade or Masquerading N.S.

ಮಾರು ಮುಖಗಳನ್ನು ಕಟ್ಟಿಕೊಂಡು ಆಡುವ ಆಟ. ವೇಷವನ್ನು ಹಾಕಿಕೊಂಡು ಆಡುವ ಆಟ[೩] (ತೆಲುಗು ಅನುವಾದ) ಎಂದು ಅರ್ಥೈಸಿದ್ದಾರೆ.

ವೇಷಗಾರ ಎಂಬ ಹೆಸರಲ್ಲದೆ ಇನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಅವುಗಳೆಂದರೆ, ಯಾಸಗಾರ, ಬಹುರೂಪಿ, ಭೈರೂಪಿ, ಜಾತಿಕಾರ, ಹಗಲುವೇಷಗಾರ, ಬಿಂಗೇರ, ಬುಡಗ, ಜಂಗಮ, ಇತ್ಯಾದಿ. ಈ ಅಧ್ಯಯನದಲ್ಲಿ ಇವರ ವೃತ್ತಿಯನ್ನು ಗಮನಿಸಿ ಹಗಲುವೇಷಗಾರ ಎಂದು ಗುರುತಿಸಲಾಗಿದೆ. ವೇಷಗಾರ ಎಂದು ಉಚ್ಚರಿಸಿದಲ್ಲೆಲ್ಲಾ ಬುಡುಗಜಂಗಮ ಎಂದು ಅರ್ಥೈಸಬೇಕು.

'ಬೇಡ' ಎಂಬ ಶಬ್ದಕ್ಕೆ ತೆಲುಗಿನಲ್ಲಿ ವದ್ದು ಹಾಗೂ ಎರಡು ಆಣೆ (೧೨ ಪೈಸೆ) ಎಂದಾಗುತ್ತದೆ. ಉತ್ತರ ಕರ್ನಾಟಕದಲ್ಲಿ 'ಬೇಡ' ಎಂದರೆ ಭಿಕ್ಷೆಯನ್ನು ಕೇಳು, ಸತ್ತ ದಿನ ಕಾರ್ಯ ಮಾಡುವಾಗ ಬೇಡಿ ಪಡೆಯುವುದು. ಈ ಮೂಲಾರ್ಥದಿಂದ 'ಬೇಡ' ಎಂಬ ಪದ ಪ್ರಯೋಗವಾಗಿದೆ.[೪] 'ಜಂಗಮ' ಎಂದರೆ ಸದಾ ಸುತ್ತವವ ಎನ್ನುವ ಅರ್ಥ ಬರುತ್ತದೆ. ಬೇಡುತ್ತಾ ಸದಾ ಸುತ್ತುವವ ಎಂದು ಅರ್ಥೈಸಬಹುದಾಗಿದೆ.

ಬುಡಗ ಜಂಗಮ ಎನ್ನುವ ಪದ ಕನ್ನಡದಲ್ಲಿ ಅಷ್ಟು ಚರ್ಚೆಯಾಗಿಲ್ಲವೆಂದು ಹೇಳಬಹುದು. ಆದರೆ ತೆಲುಗು ಭಾಷಯೆಲ್ಲಿ ಹೆಚ್ಚಿನ ಚರ್ಚೆ ನಡೆದಿದೆ. ಈ ಹೆಸರಿನ ನಿಷ್ಪತ್ತಿಯನ್ನು ಕುರಿತ ಚರ್ಚೆ ಕೆಳಗಿನಂತಿದೆ.

ಪ್ರೊ. ಬಿ.ಭೀಮರಾಜು ಅವರು ತಮ್ಮ ತೆಲುಗು 'ಜಾನಪದ ಗೇಯ ಸಾಹಿತ್ಯಂ' ಎನ್ನುವ ಕೃತಿಯಲ್ಲಿ "ಬುಡಿಗೆ (Lather Mouthed pot) ಎನ್ನುವ ಮಡಿಕೆಯ ಸಂಗೀತ ಸಾಧನದೊಂದಿಗೆ ತಂಬೂರಿ ನುಡಿಸುತ್ತಾ ಕಥೆ ಹೇಳುವ ಜನರನ್ನು 'ಬುಡ್ಗ ಜಂಗಾಲು' ಎಂದು ಕರೆದಿದ್ದಾರೆ."[೫] ಈ ಅಂಶವನ್ನು ಗಮನಿಸಿದರೆ ಇವರು ವೇಷಗಾರರಿರಲ್ಲವೇ ಇನ್ನೊಂದು ಗುಂಪಾದ ಬುರ್ರ ಕಥೆಗಾರರ ಬಗ್ಗೆ ಹೇಳಿದಂತಿದೆ.

ಮರವೂರು ಕೋದಂಡರಾಮರೆಡ್ಡಿ ಅವರು ಬರೆದ 'ಮಾಂಡಲೀಕ ಪದಕೋಶಂ' ಎನ್ನುವ ಕೃತಿಯಲ್ಲಿ ಈ ಜನಾಂಗವನ್ನು ಕುರಿತು "ತಂದಾನ ಕಥೆಗಳನ್ನು ಹೇಳಿ ಭಿಕ್ಷೆ ಬೇಡುವವರನ್ನು ಬುರ್ರ 'ಕಥೆಗಾರರು' ಬುಡಗೇಲು ವಾದ್ಯವನ್ನು ನುಡಿಸುತ್ತಾ ಭಿಕ್ಷೆ ಎತ್ತುವವರನ್ನು 'ಬುಡ್ಗ ಜಂಗಾಲು' ಎಂದು ತಿಳಿಸಿರುತ್ತಾರೆ."[೬] ಬುರ್ರ ಕಥೆಯವರು ಹೇಳುವ ಕಥೆಗಳನ್ನೇ ತಂದಾನ ಕಥೆಗಳೆಂದು ಕರೆಯುತ್ತಾರೆ. ಕಥೆ ಹೇಳುವಾಗ

ಪ್ರತಿಪಾದದ ಕೊನೆಯಲ್ಲಿ ತಂದನಾನಾ ಎಂದು ಹೇಳುವುದರಿಂದ ಹೀಗೆ ಹೇಳಿದ್ದಾರೆ. ಅದು ಸ್ಪಷ್ಟ ಉತ್ತರ ನೀಡಲಾರದು.

ಮಿಕ್ಕಲಿನೇನಿ ರಾಧಾಕೃಷ್ಣಮೂರ್ತಿ ಅವರು ತಾವು ರಚಿಸಿರುವ 'ಆಂಧ್ರ ನಾಟಕರಂಗ ಚರಿತ್ರೆ' ಎನ್ನುವ ಗ್ರಂಥದಲ್ಲಿ ಈ ಜನಾಂಗವನ್ನು ಕುರಿತು "ಪೂರ್ವಕಾಲದಿಂದ ತೆಲುಗು ದೇಶದಲ್ಲಿ ಬಹಳ ಪ್ರಚಾರ ಹೊಂದಿದ್ದ ಚರಿತ್ರೆ, ಇತಿಹಾಸವನ್ನೇ ಹೇಳುವ ಕಥೆಗಳನ್ನು ಹೇಳುತ್ತಾರೆ. ಆ ಕಥೆಗಳಿಗೆ ಬುರ್ರಕಥೆಗಳು ಎಂದು ಕರೆಯುತ್ತಾರೆ. ಪೂರ್ವ ಪ್ರಭೇದಕ್ಕೆ, ದೇಶಭಕ್ತಿಗೆ, ಪ್ರತಿಬಿಂಬಿತವಾಗಿ ನಿಂತಿರುವ ಈ ಕಥೆಗಳು ಕ್ರಮವಾಗಿ ಉದರ ಪೋಷಣೆಗೆ ಉಪಯೋಗವಾಗುತ್ತಿವೆ. ಜಂಗಾಲು ಸಮುದಾಯ ವಂಶ ಪಾರಂಪರ್ಯವಾಗಿ ಹೇಳುವ ಈ ಕಥೆಗಳಿಗೆ ಜಂಗಾಲು ಕಥೆಗಳು ಎಂದು ಹೆಸರಿಸಿದ್ದಾರೆ. ಇವರು ಕಥೆಗಳನ್ನು ಹೇಳುವಾಗ 'ಬುಡಿಗೆ' ಎನ್ನುವ ವಾದ್ಯವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಅದಕ್ಕಾಗಿ ಇವರಿಗೆ 'ಬುಡ್ಗ ಜಂಗಾಲು' ಎನ್ನುವ ಹೆಸರು ಸಾರ್ಥಕವಾಗಿದೆ. ಇವರು ಉಪಯೋಗಿಸುವ 'ಬುಡಿಗೆ'ಯನ್ನು ಡಿಂಕಿ, ಗುಮ್ಮಟ ಎಂದು ಕೂಡ ಕರೆಯುತ್ತಾರೆ[೨] ಎಂದು ಬರೆದಿದ್ದಾರೆ. ಒಟ್ಟಾರೆಯಾಗಿ ಬುರ್ರಕಥೆಗಳು ಯಾವ ವಿಷಯ ವಸ್ತುಗಳನ್ನು ಒಳಗೊಂಡಿವೆ ಮತ್ತು ಆ ಕಥೆಗಳನ್ನು ಹೇಳಲು ಯಾವ ವಾದ್ಯಗಳನ್ನು ಬಳಸುತ್ತಾರೆ ಎಂದು ಹೇಳಿದ್ದಾರೆ. ಆದರೆ ಇವರ ಇನ್ನೊಂದು ವೃತ್ತಿ ವೇಷಗಾರಿಕೆಯ ಬಗ್ಗೆ ಸ್ಪಷ್ಟವಾಗಿ ಬೆಳಕು ಚೆಲ್ಲುವುದಿಲ್ಲವೆಂಬುದು ತಿಳಿದುಬರುತ್ತದೆ.

"ಹೈದ್ರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಆಂಧ್ರದ ಈಗಿನ ತೆಲಂಗಾಣ ಮತ್ತು ರಾಯಲಸೀಮ ಪ್ರದೇಶದಲ್ಲಿ ಕಾಡಿನಲ್ಲಿ ವಾಸಮಾಡುವ ಹಾಗೂ ಸದಾ ಸುತ್ತುವ ಜನರನ್ನು 'ಜಂಗಾಲು' ಎಂದು ಕರೆಯುವುದು ವಾಡಿಕೆಯಲ್ಲಿದೆ. ಆ ಪ್ರದೇಶದಲ್ಲಿ ಹಿಂದೆ ಮುಸ್ಲಿಂ ಆಡಳಿತವಿದ್ದುದೆ. ಅಲ್ಲಿನ ಆಡಳಿತ ಭಾಷೆ ಉರ್ದು ಆಗಿದ್ದುದರಿಂದ; 'ಜಂಗಲ್' ಎಂದರೆ ಕಾಡು ಎನ್ನುವ ಅರ್ಥವಿರುವುದರಿಂದ; 'ಜಂಗಾಲು' ಎನ್ನುವ ಪದ ಸದಾ ಸುತ್ತುವ ಎನ್ನುವ ಅರ್ಥದ ಜೊತೆಗ ಕಾಡುಗಳಲ್ಲಿ ವಾಸಿಸುವವ ಅರ್ಥವನ್ನು ಪಡೆದುಕೊಂಡಿರಬಹುದೆಂದು ಊಹಿಸಿದ್ದಾರೆ."[೩] ವೇಷಗಾರರು ಕಾಡಿನಲ್ಲಿ ವಾಸಿಸುತ್ತಾರೆ. ಎಂದು ಅವರ ವಾಸಸ್ಥಳದ ಬಗ್ಗೆ ಹೆಚ್ಚು ಮಹತ್ವ ನೀಡಿರುತ್ತಾರೆ.

"ಬಳೆಗಾರ, ಮದ್ದಳೆಗಾರ, ಹೂಗಾರ ಎಂಬ ವೃತ್ತಿ ಸೂಚಕ ಪದಗಳಂತೆ ಈ ಒಂದು ಹೆಸರು ಬಂದಿರಬೇಕು. ವೇಷ ಎಂಬ ನಾಮಪದಕ್ಕೆ ಧರಿಸು, ಸೋಗು ಹಾಕು ವೇಷವನ್ನು ಮರೆಸಿಕೊಂಡವನು, ತೊಡುವವನು 'ಗಾರ' ಎಂಬ ತದ್ಧಿತ ಪ್ರತ್ಯಯ ಸೇರಿ 'ವೇಷಗಾರ' ಎಂಬ ರೂಪ ಸಿದ್ಧಗೊಂಡಿದೆ."[೪] ಎಂದು ಅಭಿಪ್ರಾಯಪಡುತ್ತಾರೆ. 'ವೇಷಗಾರ' ಎಂಬ ಶಬ್ದ ಹೇಗೆ ಬಂದಿರುವುದೆಂದು ಹೇಳುವ ಪ್ರಯತ್ನ ಮಾಡಿದ್ದಾರೆ.

"ಇವರಿಗೆ ಬಹುರೂಪಿ, ವೇಷಧಾರಿ, ಜಾತಿಗಾರ ಎಂಬ ಪರ್ಯಾಯ ನಾಮಗಳು ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರ ರತ್ನಾಕರವು ಬಹುರೂಪಿ ಚೌಡಯ್ಯನಿಗೆ ಜಾತಿಕಾರ ಎಂದು ಕರೆದು, ಅವನು

ಹದಿನೆಂಟು ಜಾತಿಯ, ನೂರೆಂಟು ಕುಲದ ವೇಷವಂ ತೊಟ್ಟು ನಟಿಸುತ್ತಿದ್ದನೆಂದು ಹೇಳುತ್ತದೆ. ಹೀಗೆ ಅನೇಕ ಜಾತಿಯವರನ್ನು ಅಭಿನಯಿಸಿ ತೋರುತ್ತಲಿದ್ದ ಕಾರಣ ಇವರಿಗೆ 'ಜಾತಿಕಾರ' ಎಂಬ ಹೆಸರು ರೂಢವಾಗಿರಬೇಕೆಂದು, 'ಜಾತಿಗಾರ' ಎಂಬುದರ ಪ್ರಾಚೀನ ಸಂವಾದಿ ಪದ, 'ಜಾತಿಡಂಬ' ಡಂಬ ಎಂದರೆ ನಟನೆ ಇದನ್ನು ಗಮನಿಸಿದರೆ ೧೨ನೇ ಶತಮಾನದಲ್ಲಿ ಇವರಿಗೆ 'ಜಾತಿಡಂಬರು' ಎಂದು ಕರೆಯುತ್ತಿದ್ದರೆಂದು ಹೇಳಬೇಕಾಗುತ್ತದೆ.''[೧೦] ಅಲ್ಲದೆ ವೇಷಗಾರಿಕೆಯ 'ಡಂಬರೇ' ಬೇರೆ ಅಂಗಸಾಧನೆಯ 'ಡೊಂಬರೇ' ಬೇರೆ ಎಂದು ಹೇಳಿದ್ದಾರೆ. ಇವರು ವೇಷಗಾರರನ್ನು ಸ್ಪಷ್ಟವಾಗಿ ಜಾತಿಕಾರ ಎಂದು ಕರೆದಿರುವುದರ ಬಗ್ಗೆ ಸ್ಪಷ್ಟತೆ ನೀಡಿದ್ದಾರೆ.

ಸೂರ್ಯ ಪ್ರಕಾಶ್‌ರಾವ್ ಅವರು ತಮ್ಮ 'ರೂಪಕಳ' ಗ್ರಂಥದಲ್ಲಿ 'ಜಂಗಂ' ಕಥೆಗಳನ್ನು ಕುರಿತು ವಿವರಿಸುತ್ತಾ ''ಜಂಗಂ ಕಥೆಗಳನ್ನು ಪ್ರತ್ಯೇಕವಾಗಿ 'ಜಂಗಾಲು' ಅನ್ನುವ ಒಂದು ಪ್ರತ್ಯೇಕ ಕುಲದವರು ಹೇಳುತ್ತಿರುವುದರಿಂದ ಈ ಕಥಾ ಪ್ರಕ್ರಿಯೆಗೆ 'ಜಂಗಂ ಕಥೆ' ಅನ್ನುವ ಹೆಸರಿನ ಮೂಲಕ ಪ್ರಖ್ಯಾತಿ ಹೊಂದಿದೆ. ಇವರು ಬಾರಿಸುವ 'ಗುಮ್ಮಟೆ' ಎನ್ನುವ ವಾದ್ಯವನ್ನು 'ಬುಡಿಗೆ ಎನ್ನುತ್ತಾರೆ. ಅದಕ್ಕಾಗಿ ಇವರನ್ನು 'ಬುಡಗ ಜಂಗಾಲರು' ಎಂದು ಕೂಡ ಕರೆಯುತ್ತಾರೆ.''[೧೧] ಎಂದು ಹೇಳುತ್ತಾರೆ. ಇವರು ಬುಡಗೆ ಮತ್ತು ತಂಬೂರಿಗಳನ್ನು ಉಪಯೋಗಿಸುವುದರಿಂದಲೇ ಇವರಿಗೆ ಈ ಹೆಸರು ಬಂದಿದೆ ಅನ್ನಿಸುತ್ತದೆ.

ಹಗಲುವೇಷಗಾರರು ಮೂಲದಲ್ಲಿ ಆಂಧ್ರದಲ್ಲಿರುವಾಗ 'ಬುಡಗಜಂಗಾಲರು, ಬಿಂಗೇರರು, ಎಂಬ ಹೆಸರುಗಳಿಂದ ಕರೆಯುತ್ತಿದ್ದು ನಂತರದಲ್ಲಿ ಹಗಲು ಹೊತ್ತಿನಲ್ಲಿ ಮಾತ್ರ ವೇಷ ಧರಿಸುತ್ತಿದ್ದುದರಿಂದ 'ಹಗಲುವೇಷಗಾರರು' ಎಂದು ಗುರುತಿಸಿಕೊಂಡಿರಬೇಕು. ಇದನ್ನೇ ತಮಿಳುನಾಡಿನಲ್ಲಿ 'ಪಗಲ್ ವೇಷಂ' ಆಂಧ್ರದಲ್ಲಿ ಪಗಟಿ ವೇಷಗಾರ್ಲು, ಕರ್ನಾಟಕದಲ್ಲಿ ಹಗಲುವೇಷಗಾರರು ಎನ್ನುವ ಈ ಮಾತುಗಳು ಅದನ್ನು ಪುಷ್ಟೀಕರಿಸುತ್ತವೆ. ಜನ ಜನಿತವಾದ ಬೃಂಗಿಯ ಕಥೆಗಳನ್ನು ವೇಷಕಟ್ಟಿ ಆಡುವುದರಿಂದ 'ಬಿಂಗೇರ', 'ಬುಡುಗೆ' ಎನ್ನುವ ವಾದ್ಯವನ್ನು ಬಳಸಿ ಹಾಡುಗಳನ್ನು ಹಾಡುತ್ತಾ ವೇಷಗಳನ್ನು ಪ್ರದರ್ಶಿಸುತ್ತಾ ಅಡ್ಡಾಡುವ ಅಥವಾ ಚಲಿಸುವ ಇವರನ್ನು 'ಬುಡಗ ಜಂಗಮರು' ಪ್ರಾಚೀನದಲ್ಲಿ ಕಾಡುಗಳಲ್ಲಿ ವಾಸಿಸುವುದರಿಂದ ಜಂಗಾಲರು ಎಂದು ಕರೆದಿರುವ ಸಾಧ್ಯತೆ ಇದೆ. ಅದೇ ರೀತಿ ವಿವಿಧ ಜಾತಿಯವರ ವೇಷ ಕಟ್ಟಿ ಆಡಿ ತೋರಿಸುವುದರಿಂದ ಜಾತಿಗಾರರು ಎಂದು ಕರೆದಿರುವ ಸಾಧ್ಯಗಳಿವೆ. ಈ ಹೆಸರುಗಳೆಲ್ಲಾ ಕಾಲಮಾನಕ್ಕೆ, ಪ್ರದೇಶಕ್ಕೆ ಅನುಗುಣವಾಗಿ ಕರೆದಿರುವಂತಹ ಪರ್ಯಾಯ ನಾಮಗಳೇ ಹೊರತು ಬೇರೆಯವುಗಳಲ್ಲ.

೩.೧ ಐತಿಹಾಸಿಕ ಹಿನ್ನೆಲೆ.

''ಯಾವುದೇ ಬುಡಕಟ್ಟು ಸಮುದಾಯವನ್ನು ಅಧ್ಯಯನ ಮಾಡಿದರೂ, ಅವರ ಈಗಿನ ಜೀವನ ವಿಧಾನದಿಂದಲೇ ಆ ಬುಡಕಟ್ಟಿನಲ್ಲಿ ಆಗಿರಬಹುದಾದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಅನಿವಾರ್ಯವಾಗಿ ನಾವು ಆ ಬುಡಕಟ್ಟು ಸಮುದಾಯದ ಮಾಹಿತಿಗಾಗಿ ತಡಕಾಡುತ್ತಾ,

ಆ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಪರಿಶೀಲಿಸುವುದರ ಜೊತೆಗೆ ಐತಿಹಾಸಿಕ ಹಾಗೂ ಪೌರಾಣಿಕ ಐತಿಹ್ಯಗಳೇನಾದರೂ ದೊರೆತಲ್ಲಿ ಅವುಗಳನ್ನು ಕೂಡ ಅನುಲಕ್ಷಿಸದೇ ಆಕರಗಳಾಗಿ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳುವ ಅಗತ್ಯವಿದೆ."[೧೨]

ಈ ಜನಾಂಗ ವೇಷಗಾರಿಕೆಯನ್ನು ಯಾವ ಉದ್ದೇಶಕ್ಕೋಸುಗ, ಯಾವ ಕಾಲದಲ್ಲಿ ತೊಟ್ಟಿತು? ಎಂಬ ಪ್ರಶ್ನೆಗಳಿಗೆ ನಮ್ಮಲ್ಲಿ ಸ್ಪಷ್ಟ ಉತ್ತರಗಳಿಲ್ಲ. ಇವರ ಜೀವನ ಕ್ರಮ ಇಂದಿಗೂ ಅಲೆಮಾರಿ ರೂಪದಲ್ಲಿರುವುದರಿಂದ ಇವರ ಮೂಲ ಎಲ್ಲೋ ಮರೆಮಾಚಿದಂತೆ ತೋರುತ್ತದೆ. ಈ ಸಮುದಾಯಕ್ಕೂ ಸಹ ಒಂದು ಪ್ರಾಚೀನ ಇತಿಹಾಸ ಇರಲೇಬೇಕು.

ಆಂಧ್ರದ ಕೆಲವು ವೇಷಗಾರರನ್ನು ಕೇಳಿದರೆ "ಒಂಬತ್ತನೆ ಶತಮಾನದ ತರುವಾಯ ಬಂದ ಪ್ರತಾಪರುದ್ರನ ಕಾಲಕ್ಕೆ, ಧರ್ಮ ಪ್ರಚಾರಕ್ಕೋಸ್ಕರ ಹಲವಾರು ಚಾಂಡಾಲ, ಚಚಾತಿ ಜಾತಿಗೆ ಸೇರಿದ ಸಮುದಾಯವನ್ನು ಕೂಡಿಸಿ ಒಬ್ಬೊಬ್ಬರಿಗೆ ಒಂದೊಂದು ಸಂಗೀತ ವಾದ್ಯವನ್ನು ನೀಡಿ ಧರ್ಮ ಪ್ರಚಾರಕ್ಕೆ ಕಳುಹಿಸಿದನೆಂದು, ಅದರಲ್ಲಿ ವೇಷಗಾರರಾದ ನಾವು ಒಬ್ಬರೆಂದು ಹೇಳುತ್ತಾರೆ."[೧೩]

ಮೂಲ ತಿಳಿಯದ ಕೆಲವು ವೇಷಗಾರರು ಶಿವಾಜಿಯ ಕಾಲದಲ್ಲಿ ತಮ್ಮ ವೇಷಗಾರಿಕೆ ಪ್ರಾರಂಭವಾಯಿತೆಂದು ಹೇಳುತ್ತಾರೆ. "ಬಹುಶಃ ಶಿವಾಜಿಯು ಗುಪ್ತವೇಷ ಮೊದಲಾದ ರೋಚಕ ಘಟನೆಗಳಿಗೆ ಹೆಸರಾಗಿರುವುದನ್ನು ಗಮನಿಸಿಯೇ ಈ ವೇಷಗಾರ ಕಲಾವಿದರನ್ನು ಶಿವಾಜಿಯು ರಾಜಕೀಯ ಗುಪ್ತ ಚಲನ-ವಲನಗಳಿಗೆ ಬಳಸುತ್ತಿದ್ದುದರಿಂದಲೇ ಈ ಕಲಾವಿದರು ತಮ್ಮ ಪ್ರಾಚೀನತೆಯನ್ನು ಇಲ್ಲಿಂದಲೇ ತಪ್ಪಾಗಿ ಹೇಳುತ್ತಿರಬೇಕು. ಇನ್ನು ಕೆಲವು ವೇಷಗಾರರು ತಮ್ಮದು ಕ್ಷತ್ರಿಯವಂಶವೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ಪೂರ್ಣವಾಗಿ ಹುಟ್ಟಿ ಕುಲವಾಗಿ ಬೆಳೆದಿದ್ದ ಕ್ಷತ್ರಿಯ ಸಮುದಾಯ ಒಂದು ಕಾಲಕ್ಕೆ ಯಾವುದೋ ಕಾರಣದಿಂದ ಮಾಯವಾಗಿ, ಇಂದು ವೇಷಗಾರರು, ರಾಮಕೊಂಡರು, ಸುಡುಗಾಡಸಿದ್ದರು ಒಂದೇ ಮೂಲದವರಾಗಿದ್ದು ವೃತ್ತಿ ಕಾರಣವಾಗಿ ಭಿನ್ನವಿಸಿದ್ದಾರೆ. ಇವರಲ್ಲಿ ಪರಸ್ಪರ ರಕ್ತ ಸಂಬಂಧವೇರ್ಪಟ್ಟಿರುವುದು ಈ ಅಂಶವನ್ನು ಬೆಂಬಲಿಸುತ್ತದೆ."[೧೪]

೩.೨ ಪೌರಾಣಿಕ ಹಿನ್ನೆಲೆ

"ಬೃಂಗಿಯು ಪರಮೇಶ್ವರ - ಪಾರ್ವತಿ ಕುಳಿತಿರಬೇಕಾದರೆ ಅವರ ಮುಂದೆ ಪ್ರತಿದಿನ ಒಂದೊಂದು ವೇಷ ಧರಿಸಿ ನೃತ್ಯ ಮಾಡಿ ತೋರಿಸುವುದು, ಈತನ ಜೊತೆ ನಂದೀಶ್ವರನೂ ಸಹ ಇರುತ್ತಾನೆ. ಹೀಗೆ ಬೃಂಗಿ ದಿನಾಲು ಒಂದೊಂದು ಪ್ರವೇಶ ಮಾಡಿ ತೋರಿಸುತ್ತಿರಬೇಕಾದರೆ ಒಂದು ದಿನ ಬೇಸತ್ತು ಭೂಲೋಕಕ್ಕೆ ಬಂದು ವೇಷಗಾರರಿಗೆ ಬ್ರಹ್ಮಕಪಾಲಿ ಕೊಟ್ಟು (ಜೋಳಿಗೆ) ನಿಮಗೆ ಯಾರೇ ಏನು ಹೇಳಿದರೂ ನಿಮ್ಮ ವೃತ್ತಿಯನ್ನು ಬಿಡಬೇಡಿ. ಮುಂಜಾನೆ ಎದ್ದಾಗಿನಿಂದ ರಾತ್ರಿ ಮಲಗುವವರಿಗೆ ನನ್ನ ನಾಮದ ಜಾತಿಯಲ್ಲಿ, ವಿವಿಧ ವೇಷಗಳನ್ನು ಹಾಕುತ್ತಾ ಭಿಕ್ಷೆ ಬೇಡುತ್ತಾ ಕಾಲ ಕಳೆಯಿರಿ ಎಂದು

ಹೇಳಿದನಂತೆ"[೧೫] ಅದಕ್ಕಾಗಿ ಇವರನ್ನು ಬಾಂಗೇರ ಎಂದು ಕರೆಯುತ್ತಾರೆ. ಇವರು ಹೇಳಿದ ಕಥೆಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ಇದು ಕೇವಲ ಬಾಯಿಂದ ಬಾಯಿಗೆ ಬಂದಂತಹ ಕಥೆ. ಇದನ್ನು ನಾವು ಯಾವುದೇ ರೀತಿ ಪ್ರಶ್ನೆ ಮಾಡುವಹಾಗಿಲ್ಲ.

೩.೩. ದಂತ ಕಥೆ- ೧

ಪ್ರತಿಕುಲ, ಜಾತಿಗಳು ಹುಟ್ಟುವುದಕ್ಕೆ ಒಂದೊಂದು ದಂತ ಕಥೆಗಳಿರುತ್ತವೆ. ಅದನ್ನೇ ಕುಲ ಪುರಾಣ ಎನ್ನುತ್ತಾರೆ. 'ಬುಡಗ ಜಂಗಾಲರ' ಕುಲವನ್ನು ಕುರಿತು ಇಂತಹ ಒಂದು ಕಥೆ ಇದೆ. ಇದು ಹೆಚ್ಚು ಆಂಧ್ರ ಪ್ರದೇಶದಲ್ಲಿ ಪ್ರಚಾರದಲ್ಲಿದೆ.

ಈ ಕುಲದ ನಾಲ್ವರು ಮೂಲ ಪುರುಷರು ಅಡವಿಯಲ್ಲಿ ಇಲಿಗಳನ್ನು ಹಿಡಿಯಲು ಬಿಲಗಳನ್ನು ಅಗೆಯುತ್ತಿರುತ್ತಾರೆ. ಆ ಸಮಯದಲ್ಲಿ ಭೂಲೋಕ ವಿಹಾರಕ್ಕಾಗಿ ಬಂದ ಪಾರ್ವತಿ ಪರಮೇಶ್ವರರು ಬಂದಿರುತ್ತಾರೆ. ಇವರನ್ನು ನೋಡುತ್ತಾರೆ. ಇವರ ಬದುಕಿನ ಹೀನವಾದ, ಧೀನವಾದ ಮಕ್ಕಳ ಆಟದಂತಿರುವ ಇವರ ಸ್ಥಿತಿಯನ್ನು ನೋಡಿ ನಕ್ಕು ಪಾರ್ವತಿದೇವಿ ಇವರಿಗೆ ಸುಖವಾದ ಜೀವನ ನಿಡೋಣವೆಂದು ಪರಿಪರಿಯಾಗಿ ಗಂಡನನ್ನು ಬೇಡಿಕೊಳ್ಳುತ್ತಾಳೆ. ಇವರ ದುಷ್ಟ ಬುದ್ಧಿ, ಅವಿವೇಕ ಎಂದಿಗೂ ಸರಿ ಹೋಗುವುದಿಲ್ಲವೆಂದು ಪರಮೇಶ್ವರ ಹೇಳುತ್ತಾನೆ. ಅದನ್ನು ಕೇಳದೆ ನೀವು ಮನಸ್ಸು ಮಾಡಿದರೆ ಅದೇನು ದೊಡ್ಡ ಕೆಲಸವಲ್ಲವೆಂದು ಪಟ್ಟು ಹಿಡಿಯುತ್ತಾಳೆ. ಮೊದಲು ಇವರನ್ನು ಪರೀಕ್ಷಿಸಿ ನೋಡೋಣ ನಿನಗೆ ತಿಳಿಯುತ್ತದೆ ಎಂದು ಪರಮೇಶ್ವರನು ವೃದ್ಧ ವೇಷದಲ್ಲಿ, ಪಾರ್ವತಿ ಯೌವನದ ಹುಡುಗಿಯ ವೇಷದಲ್ಲಿ ಅವರಿಗೆ ಹಿತ ಹೇಳಲು ಹೋಗುತ್ತಾರೆ. ಪಾರ್ವತಿ ಪರಮೇಶ್ವರರ ಮಾತು ಕೇಳದೆ, ವೃದ್ಧನ ವೇಷದಲ್ಲಿದ್ದ ಪರಮೇಶ್ವರನನ್ನು ಹಿಗ್ಗಾ ಮುಗ್ಗಾ ಎಳೆದಾಡಿ ಪಕ್ಕಕ್ಕೆ ದೂಕಿ, ಹುಡಿಗಿ ರೂಪದಲ್ಲಿದ್ದ ಪಾರ್ವತಿಯ ಮೇಲೆ ಕಾಮಾಂದರಾಗಿ ಹೋಗುತ್ತಾರೆ. ಆಗ ಪಾರ್ವತಿದೇವಿ ಶಪಿಸಿ, ನಿಮ್ಮ ಸುಖ ಶಾಂತಿಯೆಲ್ಲ ಸುಟ್ಟು ಹೋಗಿ, ಸ್ಥಿರ ನಿವಾಸವಿಲ್ಲದೆ ಊರೂರು ತಿರುಗುತ್ತ ಹೀನವಾದ, ಧೀನವಾದ ಬದಕನ್ನು ನೆಡಿಸಿರಿ ಎಂದು ಶಪಿಸಿ ಪಾರ್ವತಿ, ಪರಮೇಶ್ವರ ಮಾಯವಾಗುತ್ತಾರೆ. ಅದಕ್ಕಾಗಿ ಈ ಕುಲಸ್ಥರು ಅಡವಿಯಲ್ಲಿ ಅನಾಗರಿಕವಾಗಿ, ಸಂಚಾರ ಜೀವಿಗಳಾಗಿ ಕಾಲ ಕಳೆಯುತ್ತಿದ್ದೇವೆ ಎಂದು ಹೇಳುತ್ತಾರೆ.

ದಂತ ಕಥೆ - ೨

"ಇವರ ಭಾಷೆಯಲ್ಲಿ 'ಬಿಂಗಿ' ಎಂದರೆ ಸಣ್ಣ ಕಿವಿ ಎಂಬ ಅರ್ಥವಿದೆ. ಸಣ್ಣ ಕಿವಿ ಇರುವ ಪ್ರಾಣಿ ಮೇಕೆ. ಗೊಲ್ಲರು ಹಸುಗಳ ಹಿಂಡಿನಲ್ಲಿ ಕೆಲವು ಮೇಕೆಗಳನ್ನು ಸಾಕುತ್ತಿದ್ದರಂತೆ, ಆ ಸಣ್ಣ ಕಿವಿ ಇರುವ ಪ್ರಾಣಿಯನ್ನು ನಮಗೆ 'ಬೇಟೆ'[೧೬] ಮಾಡಿಕೊಳ್ಳಲು ಕೊಡಿ ಎಂದು ಕೇಳಿ ಪಡೆದರಂತೆ. ಒಂದು ಸಲ ಕೊಟ್ಟರೆ ಯಾವಾಗಲೂ ಇದೇ ಕೆಲಸವನ್ನು ಮಾಡ ಹತ್ತಿದರಂತೆ ಅದಕ್ಕೆ ಗೊಲ್ಲರು ಇವರು ದೂರದಲ್ಲಿ ತಮ್ಮ ಹಟ್ಟಿ ಕಡೆಗೆ ಬರುವುದನ್ನು ನೋಡುತ್ತಿದ್ದಂತೆಯೇ 'ಬಿಂಗಿವಾಳ್ಳು' ಬಂದರು

ಎಂದು ಮಾತನಾಡಿಕೊಳ್ಳ ಆರಂಭಿಸಿದರು. ಕ್ರಮೇಣ ಇದೇ ಹೆಸರೇ ಇವರಿಗೆ ಪ್ರಾಪ್ತಿಯಾಯಿತು ಎಂದು ಹೇಳುತ್ತಾರೆ."[೧೭] ಇಂದಿಗೂ ಸಹ ಬಳ್ಳಾರಿ ತಾಲೂಕು ಆಂಧ್ರಗಡಿ ಭಾಗದಲ್ಲಿ ಇವರನ್ನು 'ಬಿಂಗಿವಾಳ್ಳು' (ಕನ್ನಡದ ಬಿಂಗೇರ) ಎಂದು ಕರೆಯುತ್ತಾರೆ.

೩.೪ ಸಾಹಿತ್ಯ ಸಮೀಕ್ಷೆ

ಹಗಲುವೇಷಗಾರರ ಬಗ್ಗೆ ಸಾಹಿತ್ಯಿಕ ಆಧಾರಗಳು ಸಂಪೂರ್ಣವಾಗಿ ಅವರ ಮಾಹಿತಿ ನೀಡದಿದ್ದರೂ, ಅವರ ವೃತ್ತಿ ಮತ್ತು ಧರ್ಮ ಪ್ರಚಾರದ ಬಗ್ಗೆ, ಅವರ ಜೀವನ ಕ್ರಮದ ಬಗ್ಗೆ ಅಲ್ಲಲ್ಲಿ ಸುಳಿವುಗಳನ್ನು ನೀಡುತ್ತವೆ. ಆದ್ದರಿಂದ ಅವುಗಳ ಸಮೀಕ್ಷೆ ಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಲೇಖನಗಳು, ಕೃತಿಗಳು, ಶಾಸನಗಳು ಎಂದು ವಿಭಾಗಿಸಿಕೊಳ್ಳಲಾಗಿದೆ.

೩.೪.೧ ಲೇಖನಗಳು

ಈಗಾಗಲೇ ದೇಶ-ವಿದೇಶಗಳಲ್ಲಿ ಅನೇಕ ವಿದ್ವಾಂಸರು ಬಹಳಷ್ಟು ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿ ಕೆಲವೊಂದು ಅಂಶಗಳನ್ನು ದಾಖಲಿಸಿದ್ದಾರೆ. ಈ ಅಂಶಗಳ ಆಧಾರದಿಂದ ನಮಗೆ ಬುಡಕಟ್ಟು ಸಂಸ್ಕೃತಿಗಳು ಬೆಳೆದು ಬಂದ ದಾರಿಯ ಒಳಪದರುಗಳನ್ನು ಅಭ್ಯಸಿಸಲು ಸಾಧ್ಯವಾಗುತ್ತದೆ. ಹಗಲುವೇಷಗಾರರು, ಬುಡಗ ಜಂಗಾಲರು, ಜಾತಿಗಾರರು, ಬಹುರೂಪಿಗಳು, ಬುರ್ರ ಕಥೆಗಾರರು, ಬಿಂಗಿವಾಳ್ಳು, ಇವರೆಲ್ಲಾ ಒಂದೇ ಸಾಂಸ್ಕೃತಿಕ ಗುಣಲಕ್ಷಣಗಳನ್ನು ಹೊಂದಿದವರು ಎಂಬರ್ಥದಲ್ಲಿ ಇದೂವರೆಗೆ ನಡೆದಿರುವ ಅಧ್ಯಯನಗಳ ಮುಖ್ಯ ಅಂಶಗಳನ್ನು ನಾವು ಇಲ್ಲಿ ಗಮನಿಸುತ್ತಲೇ, ಆ ಅಂಶಗಳಲ್ಲಿನ ಕೆಲ ವೈರುಧ್ಯಗಳನ್ನೂ ಕೂಡ ಗುರುತಿಸಬಹುದು.

ಥರ್‍ಸ್ಟನ್ ಅವರು ಹಗಲುವೇಷದವರನ್ನು ಕುರಿತು (Pagathi Vesham) A class of Telugu beggers, who put in disguises (Vesham) while begging. At the anmeal festival at thirupathi in honour of the godess Gangamma, custom requires the people to appear in a different disguise every morning and evening. These disguises include those of a Bairagi, serpent etc[೧೮] 'ಹಗಲುವೇಷಗಾರರು' ತೆಲುಗು ಭಿಕ್ಷುಕ ಜನವರ್ಗ ಯವಾಗ ಭಿಕ್ಷೆ ಬೇಡಬೇಕೋ ಆಗ ಏನು ವೇಷ ಹಾಕಬೇಕೆಂದು ಚರ್ಚಿಸುತ್ತಾರೆ. ತಿರುಪತಿಯಲ್ಲಿ ನಡೆಯುವ ಗಂಗಮ್ಮ ದೇವತೆಯ ವಾರ್ಷಿಕ ಉತ್ಸವದಲ್ಲಿ ಮುಂಜಾನೆಯಿಂದ ಸಾಯಂಕಾಲದವರೆಗೆ ವಿಧ ವಿಧ ಪದ್ಧತಿಯಲ್ಲಿ ವೇಷಗಳನ್ನು ಧರಿಸಿ ತೋರಿಸುತ್ತಿದ್ದರು. ಅದರಲ್ಲಿ ಭೈರಾಗಿ ಮತ್ತು ಸರ್ಪ ವೇಷಧಾರಿಗಳೂ ಸೇರಿದ್ದರು ಎಂದು ಹಗಲುವೇಷದವರನ್ನು ಸೂಚಿಸಿದ್ದಾರೆ.

ಶ್ರೀ ಹೆಚ್.ವಿ.ನಂಜುಂಡಯ್ಯ ಮತ್ತು ಶ್ರೀ ಎಲ್.ಕೆ.ಅನಂತಕೃಷ್ಣ ಐಯ್ಯರ್‌ರವರು ತಮ್ಮ "The mysore Tribes and Castes' ಎಂಬ ಗ್ರಂಥದಲ್ಲಿ ವೇಷಗಾರರನ್ನು 'ಜಂಗಾಲು' ಎಂದು ಗುರುತಿಸಿ

Jangale (low-Caste)[೧೯] "Jangalue is the Telugu word for Kandrada Jangalu. In the Tamilu countries, They are called Jangam Ardies and in religion, the Jangalas are saivas, the Jangalas are Orginally beggers 'ಜಂಗಾಲು' ಎಂಬ ಶಬ್ಧ ತೆಲುಗು ಅದು ಕನ್ನಡದಿಂದ ಬಂದಿದೆ. ತಮಿಳು ದೇಶದಲ್ಲಿ ಆಂಧ್ರ ಜಂಗಮರು ಎಂದು ಕರೆಯುತ್ತಾರೆ. ಜಂಗಮರು ಶೈವರು. ಜಂಗಾಲರೇ ನಿಜವಾದ ಭಿಕ್ಷುಕರು ಎಂದು ಹೇಳಿರುತ್ತಾರೆ.

ಭಾರತದ ಪುರಾತನ ವಿಷಯಗಳನ್ನು ಕಟ್ಟಿಕೊಡುವ 'The Indian Antiquary ಯಲ್ಲಿ ಬಹುರೂಪಿಗಳನ್ನು ಕುರಿತು ಹೀಗೆ ಹೇಳಿದ್ದಾರೆ.'Bahurupies, or men of many faces of characters. These actors are generally marathas. They carry no cloths or there-age property; But one day come dressed as a god, the next as a milk maid, and again as a Rishi. The last of the scenes is generally the murali or female-devotee, who comes provided with a vessed for collecting money. The number of these representations is not fixed, but they do not generally exceed fifteen. Where these beggers have done with one part of the town, they commence representations in another. In about a fort night they collect in this way, In well to-do localities, from five to ten and twnety rupees and receive old clothes also. These beggers are excellent dancers and singers, some of them are eunuches.[೨೦] 'ಬಹುರೂಪಿಗಳು' ಅಥವಾ ಮನುಷ್ಯನ ಹಲವು ಮುಖ ಮತ್ತು ವೇಷಗಳನ್ನು ತೋರಿಸುವ ಈ ನಟರು ಸಾಮಾನ್ಯವಾಗಿ ಮರಾಠಿ ಮೂಲದವರು ಬಟ್ಟೆ ಮತ್ತು ಇತರ ಆಸ್ತಿಯನ್ನು ತರುವುದಿಲ್ಲ; ಆದರೆ ಒಂದು ದಿನ ದೇವರಂತೆ ಅಲಂಕರಿಸಿಕೊಂಡು, ಮರುದಿನ ಹಾಲು ಮಾರುವವರ ಹಾಗೆ, ಪುನಃ ಋಷಿಯ ರೂಪದಲ್ಲಿ. ಕೊನೆಯಲ್ಲಿ ಕೃಷ್ಣನ ಸನ್ನಿವೇಶ ಅಥವಾ ಹೆಣ್ಣು-ದೇವತೆಯ ವೇಷಗಳನ್ನು ಪ್ರದರ್ಶಿಸಿ ಭಿಕ್ಷಾ ಪಾತ್ರೆಯಲ್ಲಿ ಹಣ ವಸೂಲಿ ಮಾಡಿಕೊಂಡು ಹೋಗುತ್ತಾರೆ. ಈ ಕೊಡುಗೆ ಸೀಮಿತವಾದುದಲ್ಲ. ಸಾಮಾನ್ಯವಾಗಿ ೧೫ ರೂಪಾಯಿಗಳಿಗಿಂತ ಹೆಚ್ಚು ವಸೂಲಿ ಮಾಡುತ್ತಾರೆ. ಈ ಭಿಕ್ಷುಕರು ಪಟ್ಟಣದ ಯಾವುದಾದರೂ ಒಂದು ಮೂಲೆಯಿಂದ ಪ್ರಾರಂಭಿಸುತ್ತಾರೆ. ಸುಮಾರು ೧೫ ದಿನಗಳ ಕಾಲ ವೇಷಗಳನ್ನು ಪ್ರದರ್ಶಿಸುತ್ತಾರೆ. ಸ್ಥಳೀಯ ಜನರಿಂದ ೫, ೧೦, ೨೦ ರೂಗಳನ್ನು ಮತ್ತು ಕೆಲವು ಬಟ್ಟೆಗಳನ್ನು ಸ್ವೀಕರಿಸುತ್ತಾರೆ. ಈ ಭಿಕ್ಷುಕರು ನೃತ್ಯ ಮಾಡುವುದರಲ್ಲಿ, ಹಾಡು ಹೇಳುವುದರಲ್ಲಿ ಬಹಳ ಪರಿಣಿತ ಹೊಂದಿದವರು. ಎಂದು ಇವರ ಬಗ್ಗೆ ವಿವರಣೆ ನೀಡಿದ್ದಾರೆ. ಆದರೆ ಮರಾಠಿ ಮೂಲದವರು ಎನ್ನುವುದಕ್ಕೆ ಯಾವುದೇ ಆಧಾರಗಳಲ್ಲಿ.

Dr|| A.N.Perumal ರವರ "Folk Arts of the Tamils" ಎಂಬ ಕೃತಿಯಲ್ಲಿ 'Pagal Vesham' ಹಗಲುವೇಷದವರ ಬಗ್ಗೆ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. 'It is an

accupational dance of ordinary people. Mostly it is played in northern districts of Tamil Nadu. Poor people would move wandering from house to house in different disquise to get gifts and materials. Their dances would take place before shops to be witnessed by many persons around. Men would disquise themselves as woman and praise the gift givers. They are called multi- rolers. The art has altained its diminishing stage."[೨೧] ತಮಿಳುನಾಡಿನ ಉತ್ತರದ ಜಿಲ್ಲೆಗಳಲ್ಲಿ ವೇಷಗಳನ್ನು ಆಡುವ ವೃತ್ತಿಯಾಗಿಸಿಕೊಂಡಿರುವ ಸಾಮಾನ್ಯ ವರ್ಗಕ್ಕೆ ಸೇರಿದ್ದಾರೆ. ಇವರು ಬಹಳ ಬಡವರಾಗಿದ್ದು ಮನೆಯಿಂದ ಮನೆಗೆ ಹಲವಾರು ವೇಷ ಮತ್ತು ಸಂಭಾಷಣೆಯ ಮೂಲಕ ಪ್ರದರ್ಶನ ನೀಡಿ ಅವರಿಂದ ಕಾಣಿಕೆ ಪಡೆಯುತ್ತಾರೆ. ಹಲವಾರು ಜನರು ಮೆಚ್ಚತಕ್ಕಂತ ವೇಷ ಭೂಷಣವನ್ನೇ ಧರಿಸುತ್ತಾರೆ. ಪುರುಷರೂ ಸ್ತ್ರೀ ವೇಷಧಾರಿಗಳಾಗಿ ಜನರನ್ನು ಮೆಚ್ಚಿಸಿ ಅವರಿಂದ ಕಾಣಿಕೆ ಪಡೆಯುತ್ತಾರೆ. ಇವರನ್ನು ಹಲವು ವೇಷಧಾರಿಗಳು ಎಂದು ಕರೆಯುತ್ತಾರೆ. ಈ ಕಲೆ ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳುತ್ತಿರುವುದರಿಂದ ನಾಗರಿಕರು ಈ ಕಲೆಯನ್ನು ಉಳಿಸಿಕೊಳ್ಳಬೇಕಾಗಿದೆ.

'Belgaum district' 'Gazetter of India' ಬಹುರೂಪಿಗಳು ಅಥವಾ ವೇಷಗಾರರು ಎಂದು ಗುರುತಿಸಿ ಅವರನ್ನು ಈ ರೀತಿ ಗುರುತಿಸಿದ್ದಾರೆ. "Bahurupigalu or Veshagararu who are wanderers are found in vakkund, Arabhavi, and other villages of the district. Originally they seem to be shaivas by faith, they end horses and cows, they are divided in to exogamous bedagas. Tera is in practice Brahmins officiate in marraiges. Widow marraige is allowed. The children learn the trade of art at the age of eight years, for which in initiation ceremony is celeberated, the dead are buried. They are strolling actors and enact drama"[೨೨] ಮೂಲತಃ ವೇಷಗಾರರು ಅಥವಾ ಬಹುರೂಪಿಗಳು ಶೈವರು. ಇವರು ತಮ್ಮನ್ನು ಬೆಡಗುಗಳಿಂದ ಗುರುತಿಸಿಕೊಳ್ಳುತ್ತಾರೆ. ಹೆಣ್ಣನ್ನು ವರಿಸುವಾಗ 'ತೆರ' ಕೊಡುವ ಪದ್ಧತಿ ಇದೆ. ವಿಧವ ವಿವಾಹ ಪದ್ಧತಿ ಇದೆ. ಬ್ರಾಹ್ಮಣರ ಹಾಗೆ ಮದುವೆಯಲ್ಲಿ ಇವರೇ ಪೌರೋಹಿತ್ಯ ವಹಿಸುತ್ತಾರೆ. ಎಂಟು ವರ್ಷದ ವಯಸ್ಸಿರುವಾಗಲೇ ಇವರ ಮಕ್ಕಳು ಈ ವೇಷಗಾರಿಕೆಯ ಕಲೆಯಲ್ಲಿ ಭಾಗವಹಿಸಿ ಕಲೆಯುತ್ತಾರೆ. ಸತ್ತವರನ್ನು ಊಳುವ ಪದ್ಧತಿ ಇವರ ಸಮುದಾಯದಲ್ಲಿದೆ. ಇವರು ಅದ್ಭುತವಾದ ಕಲಾ ಪ್ರದರ್ಶನದ ಮೂಲಕ ಜನರಿಂದ ಮೆಚ್ಚುಗೆ ಪಡೆಯುತ್ತಾರೆ ಎಂದು ಈ ಸಮುದಾಯವನ್ನು ಗುರುತಿಸಿದ್ದಾರೆ.

ಡಾ. ದೇವೇಂದ್ರಕುಮಾರ್ ಹಕಾರಿಯವರು ವೇಷಗಾರರನ್ನು ಕುರಿತು ಹೀಗೆ ಹೇಳಿದ್ದಾರೆ. "ಬಹುರೂಪಿಗಳ ಮತ್ತೊಂದು ಹೆಸರು 'ವೇಷಗಾರರು' ಯಾವುದೇ ಊರಿಗೆ, ಹೋಗಲಿ ಊರ ಮಸೀದಿ, ಗುಡಿ ಮುಂತಾದ

ಸ್ಥಳಗಳಲ್ಲಿ ಕೆಲವು ದಿನಗಳವರೆಗೆ ನೆಲೆಯೂರುವ ವೇಷಗಾರರು-ಬಹುರೂಪಿಗಳು ಹುಟ್ಟಾ ಕಲಾವಿದರು. ದಿನಕ್ಕೊಂದು ವೇಷ ಹಾಕಿ ಮನೆ ಮನೆಯ ಅಂಗಳಕ್ಕೆ ಹೋಗಿ ಹಾಡಿ, ಕುಣಿದು ತಮ್ಮ ಸಂಭಾಷಣೆ ಅಭಿನಯಗಳಿಂದ ಜನಮನರಂಜನೆ ಮಾಡುತ್ತಾರೆ. ಇವರು ಸಾಮಾನ್ಯವಾಗಿ ಬಳಸುವ ವಾದ್ಯ ತಂಬೂರಿ, ತಾಳ, ಕಾಲಿಗೆ ಗೆಜ್ಜೆ, ತಾವೇ ಬಣ್ಣ ಸಿದ್ಧಗೊಳಿಸಿಕೊಂಡು ಪಾತ್ರಕ್ಕೆ ತಕ್ಕ ಸೋಗು ಹಾಕುತ್ತಾರೆ. ಇದೊಂದು ವೃತ್ತಿ ಕಲೆ ೧೨ನೇ ಶತಮಾನದ ಶರಣರ ಕಾಲ, ಇವರ ಪುನರುಜ್ಜೀವನ ಕಾಲ''[೨೩] ಎಂದು ಗುರುತಿಸಿದ್ದಾರೆ.

ಎಂ.ಎಂ.ಕಲಬುರ್ಗಿಯವರು 'ಜನಪದ ಸಾಹಿತ್ಯ ದರ್ಶನ' ಭಾಗ-೬ ರಲ್ಲಿ ವೇಷಗಾರರನ್ನು ಕುರಿತು ಬಹಳ ಸ್ಪಷ್ಟವಾದ ಬೆಳಕು ನೀಡುವಂತಹ ಅಧ್ಯಯನ ನಡೆಸಿದ್ದಾರೆ. ಇವರಿಗೆ ಬಹುರೂಪಿಗಳು, ವೇಷಧಾರಿ, ಜಾತಿಗಾರ, ಜಾತಿ ಡಂಬ ಎಂದು ಕರೆಯಬಹುದೆಂದು, ಕೆಲವು ಜನಪದ ಕಲೆಗಾರರಂತೆ ವೇಷಗಾರರ ಮೂಲ ಸ್ಥಾನವೂ ಆಂಧ್ರಪ್ರದೇಶ. ಇಂದಿನ ಬಹುರೂಪಿಗಳ ವೇಷಗಾರಿಕೆ ಪ್ರಾಚೀನ ಕಾವ್ಯಗಳು ಉಲ್ಲೇಖಿಸಿರುವ 'ಪಗರಣ' ವರ್ಗಕ್ಕೆ ಸೇರುತ್ತದೆ. ಈಗ ತಿಳಿದ ಮಟ್ಟಿಗೆ ಕನ್ನಡದಲ್ಲಿ ಈ ವೇಷಗಾರಿಕೆಯ 'ಪಗರಣ'ದ ಉಲ್ಲೇಖ ಕವಿರಾಜಮಾರ್ಗ, ವಡ್ಡಾರಾಧನೆಗಳಷ್ಟು ಪ್ರಾಚೀನ, ನಮ್ಮಲ್ಲಿ ದೃಶ್ಯ, ಹಗಲು ಅಭಿನಯಿಸುವ ಮತ್ತು ರಾತ್ರಿ ಅಭಿನಯಿಸುವವ ಅಭಿನಯ. ಆ ಕಾರಣಕ್ಕಾಗಿಯೇ ತಮಿಳಿನಲ್ಲಿ 'ಪಗಲವೇಷಕ್ಕಾರನ್' ಎಂದು ಕರೆದಿದ್ದಾರೆ.

ವೇಷಗಾರರಲ್ಲಿ ವಿಭೂತಿ, ರುದ್ರಾಕ್ಷಿ, ಗಂಟೆ, ಶಂಖ, ಈಬತೋಳು, ರುದ್ರಾತೋಳು, ಗಂಟ್ಯೋಳು, ಸಂಕಲೋಳು, ಪಸ್ತದೋಳು ಮುಂತಾದ ಬೆಡಗುಗಳಿದ್ದು, ಒಂದೇ ಬೆಡಗಿಗೆ ಸಂಬಂಧಪಟ್ಟವರು ಸೋದರರೆನಿಸುವರು. ಇವರ ಆಚರಣೆಯಲ್ಲಿ ವೀರಶೈವದ ದಟ್ಟ ಪ್ರಭಾವ ಕಂಡುಬರುತ್ತದೆ. ಪ್ರತಿ ವರ್ಷ ಇವರ ಗುರುಗಳ ಪ್ರತಿನಿಧಿಯು ಆಗಮಿಸಿ ಇವರಿಂದ ಕಪ್ಪಕಾಣಿಕೆಯನ್ನು ಒಯ್ಯುತ್ತಾನೆ. ಇವರಲ್ಲಿ ಕಟ್ಟೆ ಮನೆಯವರೇ ಮುಖ್ಯವಾಗುತ್ತಾರೆ. ಸಾಮಾಜಿಕ ವ್ಯವಸ್ಥೆಗಳಾದ ನ್ಯಾಯ ತೀರ್ಪು, ದಂಡನೆ ಇವರ ನೇತೃತ್ವದಲ್ಲಿ ನಡೆಯುತ್ತವೆ. ನ್ಯಾಯದಾನಕ್ಕೋಸುಗ ಒಮ್ಮೆಯೂ ಕೋರ್ಟಿಗೆ ಹೋಗಿಲ್ಲ. ಮದುವೆಯಾಗುವ ಗಂಡು ಹೆಣ್ಣಿಗೆ ಒಂಬತ್ತು ರೂಪಾಯಿ 'ತೆರ'ಕೊಡುವ ವ್ಯವಸ್ಥೆ ಇದೆ. ಹೆಂಗಸರು ಸೋಗು ಧರಿಸುವ ಹಾಗಿಲ್ಲ. ದೃಶ್ಯವು ಅಂಗೋಪಾಂಗ ಚಲನೆ ರೂಪದ 'ಆಂಗಿಕ' ಮಾತು-ಗೀತ, ರೂಪದ 'ವಾಚಿಕೆ' ವೇಷಭೂಷಣ ರೂಪದ 'ಆಹಾರ್ಯ' ಭಾವಗಳ ಪ್ರಕಟಣೆ ರೂಪದ 'ಸಾತ್ವಿಕ' ಎಂಬ ಅಭಿನಯ ಚತುರ್ಥವನ್ನೊಳಗೊಂಡಿರುತ್ತದೆ. ಹೆಂಗಸರು ವೈಯಕ್ತಿಕವಾಗಿ ಮನೆ ಮನೆಗಳ ಮುಂದೆ ಹಾಡು ಹೇಳಿ ಭಿಕ್ಷೆ ಪಡೆಯುತ್ತಾರೆ. ಇವರ ಕಲೆ ಇಂದು ಎಲ್ಲಾ ಜನಪದ ಕಲೆಗಳಂತೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತಲಿದೆ. ಸಾರ್ವಜನಿಕ ಪೋಷಣೆಯೆಂಬ ವರ್ಷಾಧಾರೆ ಮಾತ್ರ ಈ ಕಲೆಯನ್ನು ಉಳಿಸಬಲ್ಲದು; ಬೆಳೆಸಬಲ್ಲದು[೨೪] ಎಂದು ಎಚ್ಚರಿಸಿದ್ದಾರೆ.

K.S.Singh ಅವರು ತಮ್ಮ 'The Scheduled Casts' ಎನ್ನುವ ಗ್ರಂಥದಲ್ಲಿ ಈ ಸಮುದಾಯವನ್ನು ಕುರಿತು ಹೀಗೆ ಹೇಳಿದ್ದಾರೆ. 'The Budiga Jangam and the Beda jangam, they are

distributed in coastal Andhra, and the Rayal seema and a Telangana regions of Andhra pradesh. They are notified as a Beda jangam and the Budga Jangam. They speak in Telugu the Budga Jangams are non-vegetarians. Alcoholic drinks are consumed. They have different surnames, like gandham, Bhoota, Toorapati, Pasthamvallu, Kallenmvallu, muggolu, chirapati, Bail padollu etc. These surnames regulate marriage alliances. The marriageble age for boys is twenty years and for girl sit is fourteen years. The 'kulapedda' officiates at the marriage proceedings. They are mainly a landless community. Budaga Jangams are Hindu. Their caste leaders (Kula peddalu) function as priests and perform the birth, marriage and death rituals they are expert in mat-weaving. Their folk-songs and folk-tales are partly community-specific. Folk-songs are sung by both men and women. They use percussion musical instruments”[illegible] ಬುಡಗ ಜಂಗಮ ಅಥವಾ ಬೇಡ ಜಂಗಮರು ಆಂಧ್ರಪ್ರದೇಶದ ಕರಾವಳಿ ಆಂಧ್ರ ಮತ್ತು ರಾಯಸೀಮ ಮತ್ತು ತೆಲಂಗಾಣಗಳಲ್ಲಿ ಚದುರಿದ್ದಾರೆ. ಇವರನ್ನು ಬೇಡಜಂಗಮ ಮತ್ತು ಬುಡಗಜಂಗಮ ಹೆಸರಿನಿಂದ ಗುರುತಿಸಿದ್ದಾರೆ. ತೆಲುಗು ಭಾಷೆ ಮಾತನಾಡುತ್ತಾರೆ. ಮಾಂಸಹಾರಿಗಳು, ಮಧ್ಯಪಾನಿಗಳು. ಇವರಲ್ಲಿ ಹಲವಾರು ಬಳಿಗಳಿವೆ. ಇವುಗಳಿಂದಲೇ ಮದುವೆಯ ಸಂಬಂಧಗಳನ್ನು ಬೆಳೆಸುತ್ತಾರೆ. ಅಂತಹ ಬಳಿಗಳೆಂದರೆ ಗಂಧಂ, ಭೂಪಂ, ತೂರಪತಿ, ಪಸ್ತಮೋಳ್ಳು, ಕಲ್ಯಾಣಮೋಳ್ಳು, ಮುಗ್ಗೋಳ್ಳು, ತಿರಪಾಟಿ, ಬೈಲುಪಾಡೋಳ್ಳು, ಮುಂತಾದವುಗಳು. ಇವರಲ್ಲಿ ಮದುವೆಯ ವಯಸ್ಸು ಹುಡುಗನಿಗೆ ಸುಮಾರು ೨೦ ಹುಡುಗಿಯ ವಯಸ್ಸು ೧೪ ಎಂದು ಗುರುತಿಸಲಾಗಿದೆ. ಇವರು ಕುಲದ ಹಿರಿಯನನ್ನು 'ಕುಲ ಪೆದ್ದ' ಎಂದು ಕರೆಯುತ್ತಾರೆ. ನ್ಯಾಯ ಪಂಚಾಯಿತಿ ಎಲ್ಲವೂ ಇವರ ಸಮ್ಮುಖದಲ್ಲಿಯೇ ಜರುಗುತ್ತವೆ. ಈ ಸಮುದಾಯಕ್ಕೆ ಯಾವುದೇ ತರಹದ ಸ್ಥಿರ ಆಸ್ತಿಗಳಿಲ್ಲ. ಇವರು ಹಿಂದೂ ಪದ್ಧತಿಗಳನ್ನೇ ಆಚರಿಸುತ್ತಾರೆ. ವೃತ್ತಿ, ಚಾಪೆ ಎಣೆಯುವುದು ಮತ್ತು ಹೆಣ್ಣು ಮಕ್ಕಳು ಹುಡುಗರು ಜನಪದ ಗೀತೆಗಳನ್ನು ಹಾಡುತ್ತಾ ಭಿಕ್ಷೆ ಬೇಡುತ್ತಾರೆ ಎಂದು ಹೇಳಿ ಇವರು ಸಮಾಜದ ಅತ್ಯಂತ ಹಿಂದುಳಿದ ಜನಾಂಗವಾಗಿದ್ದು, ಸರಕಾರ ಇವರಿಗೆ ಸಾಮಾಜಿಕ ಸೌಲಭ್ಯ ನೀಡಬಹುದೆಂದು ಸೂಚಿಸಿದ್ದಾರೆ.

ಕೆ.ಎಂ.ಮೈತ್ರಿಯವರು ತಮ್ಮ "Caste certificate problems of Budga Jangamas" ಎಂಬ ಲೇಖನದಲ್ಲಿ ಈ ಸಮುದಾಯವನ್ನು ಕುರಿತು Now they are famous as 'Hagalu Veshagararu' The term 'Beda' is the symbol of hunting stage. The initial hunters are 'Budas'. Budas became 'Budgas'. The meaning of 'Buda' is root, start, oborigin, clan[illegible] etc. But in Rev, Kettels Dictonary, it means 'Damaru'[illegible] It is the musical instument

of Lord Shiva. The early hunters (Budas) later used the Damaru and then 'Dimki' for worshipping their deities. The term Beda and Buda are derived from Kannada Language. So Beda or Budga Jangamas are Originally Kannadigas, their nomadic condition helps them to learn Telugu (Dravidian Langguage) for their living. It become their mother tongue, and till then they had their own 'BUDGA' language. But it is missing it status slowly."[೨೮] ಈಗ ಹಗಲುವೇಷಗಾರರೆಂದೇ ಪ್ರಸಿದ್ಧ ಹೊಂದಿದ ಇವರ ಮೂಲ 'ಬೇಡ' ಎನ್ನುವುದು ಬೇಟೆಯ ಚರಮ ಸ್ಥಿತಿಯನ್ನು ಸೂಚಿಸುತ್ತದೆ. ಮೂಲ ಬೇಟೆಗಾರರೆಲ್ಲ ಬುಡದವರು. ಬುಡ ಅಂದರೆ ಬುಡಗರು ಎಂದು 'ಬುಡ' ಎಂದರೆ ಮೂಲ, ಬೇರು, ಮುಂತಾಧ ಅರ್ಥವಿದೆ. ಡಾ. ಕಿಟೆಲ್ ಅವರ ಅರ್ಥಕೋಶದಲ್ಲಿ ಬುಡ ಎಂದರೆ 'ಡಮರು' ಇದು ಒಂದು ಸಂಗೀತ ಸಾಧನ. ಶಿವನು ಬಳಸುವ ಇಂತಹ ಡಮರನ್ನು, ಈ ವೇಷಗಾರರು 'ದಿಮಿಕಿ' ಎಂದು ತಮ್ಮ ನಿತ್ಯ ಕಾಯಕಕ್ಕೆ ಬಳಸುತ್ತಾರೆ. ಬೇಡ ಬುಡ ಎನ್ನುವ ಶಬ್ಧಗಳು ಕನ್ನಡದಿಂದ ಹುಟ್ಟಿದ ಶಬ್ದಗಳು. ಆದಕಾರಣ ಅವರು ಮೂಲತಃ ಕನ್ನಡಿಗರು. ಆದ್ದರಿಂದ ಬೇಡ ಅಥವಾ ಬುಡಗ ಜಂಗಮರು ಮೂಲತಃ ಕನ್ನಡಿಗರು ಅವರ ಅಲೆಮಾರಿ ಬದುಕೇ ಅವರನ್ನು ತೆಲುಗು ಮತ್ತು ಮುಂತಾದ ದ್ರಾವಿಡ ಭಾಷೆಗಳನ್ನು ಕಲಿಯಲು ಪ್ರೇರೇಪಿಸಿದೆ. ಅವರ ಅಲೆಮಾರಿ ಬದುಕಿಗೆ ಈ ಬಗೆಯ ಭಾಷಾಕಲಿಕೆ ಅನಿವಾರ್ಯವೂ ಹೌದು. ತೆಲುಗು ಭಾಷಿಕ ಪರಿಸರದಲ್ಲಿ ಇವರು ಹೆಚ್ಚಾಗಿ ವಾಸಿಸುತ್ತಿರುವುದರಿಂದ ತೆಲುಗು ಮನೆ ಭಾಷೆಯಾಗಿದೆ. ಆದರೂ ಅವರು ತಮ್ಮದೇ ಆದ ಬುಡಗ ಭಾಷೆಯನ್ನು ಹೊಂದಿದ್ದರೂ ಅದರ ಬಳಿಕ ಕಡಿಮೆಯಾಗುತ್ತಿದೆ.

ವಿಭೂತಿ ಭವಾನಿ ಲಿಂಗಂ ಅವರ ತೆಲುಗು ಕೃತಿ 'ಪಗಟಿ ವೇಷಾಲು ವಾಟಿ ಪ್ರಾಚೀನತೆ' ಎನ್ನುವ ಕೃತಿಯಲ್ಲಿ ತಾವು ವೃತ್ತಿ ಕಲೆಗಾರರು ಎಂದು ಆಂಧ್ರಪ್ರದೇಶದಲ್ಲಿ ತಾವು ಪ್ರಾಚೀನ ಕಾಲದಲ್ಲಿ ೩೧ ವೇಷಗಳನ್ನು ಧರಿಸುತ್ತಿದ್ದುದಾಗಿ ಮತ್ತು ಆ ವೇಷಗಳ ಅಹಾರ್ಯ ವೇಷ-ಭೂಷಣದ ಉಡುಪಿನ ರೀತಿ ಸಂಭಾಷಣೆಯ ವಿವರಣೆಯೆಲ್ಲವನ್ನು ನೀಡಿದ್ದಾರೆ.

೧. ಆದಿ ಬೈರಾಗಿ ವೇಷಂ(ಬಾಲ್ಕಿ ಬೈರಾಗಿ ವೇಷಂ)
೨. ಬುಡು ಬುಕ್ಕಲವಾರಿ ವೇಷಂ
೩. ಚಾತಾದಿ ವೈಷ್ಣವುಲ ವೇಷಂ
೪. ಮಂದಲ ವಾಳ್ಳ ವೇಷಂ
೫. ಸೋಮಯಾಜಲು ಸೋವಿ ದೇವಮ್ಮ ವೇಷಂ
೬. ಫಕೀರ್ ಸಾಯಿಬುಲು ವೇಷಂ
೭. ಲಂಬಾಡಿಲ ವೇಷಂ
೮. ಬೋಡಿ ಬ್ರಾಹ್ಮಣ ಸ್ತ್ರೀಲ ವೇಷಂ
೯. ವೀರಬಾಹು ವೇಷಂ (ಮಾದಿಗ ವೇಷಂ)
೧೦. ಗೊಲ್ಲಬೋಯುಡು ವೇಷಂ
೧೧. ಭಟ್ರಾಜಲು ವೇಷಂ
೧೨. ಕೋಮಟಿ ಲಿಂಗಬಲ್ಜಿ ವೇಷಂ
೧೩. ದೇವರ ಪೆಟ್ಟ ವೇಷಂ
೧೪. ದೇವಾಂಗುಲ ವೇಷಂ
೧೫. ಅತ್ತರು ಸಾಂಬುಲ ವೇಷಂ
೧೬. ಶಿದ್ದಿ ಕಂಚಿನ ವೇಷಂ

೧೭. ಕಾರುವಾ ಸೋಮಯಾಜುಲು ವೇಷಂ
೧೮. ಎರಕುಲ ಸೋದಿ ವೇಷಂ
೧೯. ಪಿಟ್ಟಲದೊರೆ ವೇಷಂ
೨೦. ವಡ್ಡೆ ಉಪ್ಪರ ವೇಷಂ
೨೧. ಕೊಮ್ಮುದಾಸರಿ ವೇಷಂ
೨೨. ಕಾಶಿಕಾವಳ್ಳ ವೇಷಂ
೨೩. ಚಿಟ್ಟಿ ಪಂತುಲು - ಪಠಾನ್ ವೇಷಂ
೨೪. ಹರಿದಾಸು ವೇಷಂ
೨೫. ಕನ್ನಕೈರುಡು ವೇಷಂ (ಬೇತಾಳ)
೨೬. ಜಂಗಂ ದೇವರ ವೇಷಂ
೨೭. ಪಾಮುಲ ವಾಳ್ಳ ವೇಷಂ
೨೮. ಗಂಗಿರೆದ್ದುಲ ವೇಷಂ
೨೯. ಅರ್ಧನಾರೀಶ್ವರ ವೇಷಂ
೩೦. ಪಠಾನ್ ವೇಷಂ
೩೧. ರಾಮ ಲಕ್ಷ್ಮಣಲು ಶೂರ್ಪಣಖಿ ವೇಷಂ
೩೨. ರಂಭಾ ಶುಕ ಮಹಾ ಋಷಿ ವೇಷಂ
೩೩. ಶಾರದಾ ವೇಷಂ

ಇಂತಹ ಮೂವತ್ತುಮೂರು ವೇಷಗಳು ಅವುಗಳ ಅಲಂಕಾರ ಮಾಡಿಕೊಳ್ಳುವುದು ಹೇಗೆ? ಯಾವ ಯಾವ ಬಣ್ಣ. ಯಾವ ಯಾವ ಭಾಗದಲ್ಲಿ ಹಚ್ಚಿಕೊಳ್ಳಬೇಕು? ಕಥೆಯ ಸಾರಂಶವನ್ನು ಸಂಭಾಷಣೆ ಸಹಿತ ನೀಡಿದ್ದಾರೆ."[೨೯] ಒಟ್ಟಿನಲ್ಲಿ ಹಗಲುವೇಷಗಾರರ ವೇಷಗಳ ಬಗ್ಗೆ ಬಹಳ ಸ್ಪಷ್ಟವಾದ ವಿವರಣೆಯನ್ನು ನೀಡುತ್ತದೆ.

'ಇಂಡಿಯನ್ ಎಕ್ಸಪ್ರೆಸ್' ದಿನಪತ್ರಿಕೆಯ ಭಾನವಾರದ ವಿಶೇಷ ಪುರವಣೆಯಲ್ಲಿ ಕೆ.ವಿ.ಜಯರಾಮ್ ಅವರ 'ದಿ ವರ್ಲ್ಡ್ ಈಸ್ ಎ ಸ್ಟೇಜ್' ಎಂಬ ಲೇಖನದಲ್ಲಿ ಹಗಲುವೇಷಗಾರರನ್ನು ಕುರಿತು ಹೇಳಿದ್ದಾರೆ. 'The World is a Stage' (ಜಗತ್ತೇ ಒಂದು ರಂಗ ಸಜ್ಜಿಕೆ) Once upon a time the players of the theatre genre "pakati vesha garlu" lived near the town of Eralu in the west godavari district in Andhra Pradesh. They moved around in a band of three or four families related by blood or marriage, with a head man leading each band. Their patrons were the royally of the region and they were summoned during festive occasions to perform in Royal house-holds. All that its part of history now, although they still depend for their livelihood on the patronge which is extended to them by the local lords and rich bussinessmen.

strangely enough, although the world around them has undergone such a radical change. The lives of these theatre people have remained remarkably untouched. In a world where every one seems in a hurry to shed the old and get on, the pakati vesha garlu still live and die by the ethic of their ancestors: they need no home, no land, no money and riches. They are truly the last tribe that time has forgotten to taint.

For some 800 years, the pakati vesha garalu have performed on the streets. Theatre is a way of life for them, and this is probably why their performances have a sencerity and vibrancy that has sadly gone out of much of our theatre in the towns. The stories they enact are the time-worm tales from the epics, and the Audience and players have a touching faith in them that keeps them alive after all these years.

performing is an act of worship. And for the few hours that he plays. He transforms himself in to the character he is dressed up as. The Jewellery is dramatic-with, towering Jewelled Crowns, elaborate necklaces, armlets, anklets and epaulets, the cortumes are equally elaborate with folds and pleats in their colourful drapes. The faces of the main characters are treated with a lavish use of colour, but where once this was done with natural pigments, today these have been replaced by synthetic colours. The base still remains coconut oil, though, marks and wigs are not used so much now.

To this day, they pakati have followed the life-style of their once storys. They belonging to the Sangamadevera (Jangamadevara) by caste a sect of lingayats- and belive in the Shaivite doctrines. Each group is generally related to the other. As nomads, they move from place to place and all their marriages, festivals and the cermonies related to births and death are performed while they move from one camp to another. all they want is two sqare meals a day and their house hold goods are a few a luminum pots and some bits of pottery. even though they are so poor. They have an impeccable reputation for honesty and are law-obiding and peace-leaving"[೬೦] ಒಂದಾನೊಂದು ಕಾಲದಲ್ಲಿ ಹಗಲುವೇಷಗಾರರು ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ 'ಇರಲು' ಎಂಬ ಪಟ್ಟಣದಲ್ಲಿ ಇದ್ದರು. ಮೂರು ಅಥವಾ ನಾಲ್ಕು ಕುಟುಂಬಗಳಲ್ಲಿ ರಕ್ತ ಸಂಬಂಧ ಬೆಳಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು. ಪಿತೃ ಪ್ರಧಾನ ಕುಟುಂಬ ಪದ್ಧತಿ ಇವರಲ್ಲಿದೆ. ಇವರ ಸಮುದಾಯದ್ದೇ ಆದ ವಾರ್ಷಿಕ ಆಚರಣೆ, ಧಾರ್ಮಿಕ ಆಚರಣೆಯಲ್ಲಿ ತಮ್ಮ ಸಮುದಾಯದ ಎಲ್ಲಾ ಕುಟುಂಬದ ಯಜಮಾನರು ಭಾಗವಹಿಸುತ್ತಾರೆ. ಇದೆಲ್ಲವೂ ಇತಿಹಾಸವೇ. ಈ ಎಲ್ಲರೂ ಸ್ಥಳೀಯರ-ಜಮೀನ್ದಾರರ. ವ್ಯಾಪಾರಸ್ಥರ ಮೇಲೆ ಆಧಾರಪಟ್ಟಿರುತ್ತಿದ್ದರು.

ವೈಪರಿತ್ಯವೆಂದರೆ, ದಿನಮಾನಗಳು ಕಳೆದಂತೆ ಎಲ್ಲವೂ ಬದಲಾವಣೆ ಆಗುತ್ತಲೇ ಇವೆ. ಊರ ಜನ ಇವರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆ. ಇವರದೇ ಆದಂತಹ ಹೊಲ, ಮನೆ ಆಸ್ತಿ-ಅಂತಸ್ತುಗಳಿಲ್ಲ ಗಳಿಸುವ ಆಸೆಯೂ ಇವರಿಗಿಲ್ಲ. ಇವರ ಪೂರ್ವಜರು ಹೇಗೆ ಬದುಕಿ ಬಾಳಿದ್ದರೋ ಹಾಗೆಯೇ ತಾವೂ ಬಾಳಬೇಕೆಂಬ ಆಸೆ ಹೊಂದಿದ್ದಾರೆ. ಇಂದಿಗೂ ಈ ಬುಡಕಟ್ಟು ಜನರು ತಮ್ಮ ಆದಿಮ ಸಂಸ್ಕೃತಿಯನ್ನು ಉಳಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ.

ಸುಮಾರು ೮೦೦ ವರ್ಷಗಳಿಂದಲೂ ಬೀದಿಗಳಲ್ಲೇ ತಮ್ಮ ವೇಷಗಾರಿಕೆಯನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಇವರು ಯಾವ ಬೀದಿಗೆ ಹೋಗುತ್ತಾರೆಯೋ ಅದೇ ರಂಗ ಸಜ್ಜಿಕೆ. ಮೂಲತಃ ಕಥಾ ವಸ್ತುಗಳಾಗಿ ರಾಮಾಯಣ, ಮಹಾಭಾರತಗಳಿಂದ ಆಯ್ದು ಸನ್ನಿವೇಶಗಳನ್ನು ಪ್ರೇಕ್ಷಕರಿಗೆ ಅದ್ಭುತವಾದ ಮನರಂಜನೆಯನ್ನು ಕೊಡುವುದರ ಮೂಲಕ ತಮ್ಮ ಸೇವೆಯನ್ನು ಸಲ್ಲಿಸಿ ಕೃತಾರ್ಥರಾಗುತ್ತಾರೆ. ವೇಷ ಪ್ರದರ್ಶಿಸುವುದನ್ನೇ ತಮ್ಮ ಕಾಯಕವೆಂದು ತಿಳಿದಿದ್ದಾರೆ. ಕೆಲವು ಗಂಟೆಗಳ ಕಾಲ ಪ್ರದರ್ಶನ ನೀಡುತ್ತಾರೆ. ಪಾತ್ರಗಳಿಗನುಗುಣವಾಗಿ ತಾವೇ ಸಂಭಾಷಣೆ ರಚಿಸಿಕೊಳ್ಳುತ್ತಾರೆ. ಪ್ರದರ್ಶನ ಸಂದರ್ಭದಲ್ಲಿ ತರ ತರದ ಆಭರಣಗಳನ್ನು ಧರಿಸುತ್ತಾರೆ. ಕತ್ತಿನ ಸರ, ತೋಳು ಬಂದಿ, ಡಾಬು ಇವರ ಉಡುಪುಗಳು ಸಾಮಾನ್ಯವಾಗಿ ವೇಷಕ್ಕೆ ಅನುಗುಣವಾಗಿರುತ್ತವೆ. ಮುಖ್ಯ ಪಾತ್ರಗಳಿಗೆ ಅನುಗುಣವಾಗಿ ಬಣ್ಣ ಬಳಿದುಕೊಳ್ಳುತ್ತಾರೆ. ಕಾಲ ಕ್ರಮೇಣ ನಾನಾ ಬಗೆಯ ಅತ್ಯಾಧುನಿಕ ಬಣ್ಣ-ವಿನ್ಯಾಸಗಳಿಂದ ಆಲಂಕೃತರಾಗುತ್ತಾರೆ. ಕೊಬ್ಬರಿ ಎಣ್ಣೆಯಿಂದ ಬಣ್ಣ ತಯಾರಿಸಿಕೊಳ್ಳುತ್ತಾರೆ. ಇತ್ತೀಚಿಗೂ ಕೃತಕ ಮುಖವಾಡ ಮತ್ತು ತಲೆಗೂದಲನ್ನು ಧರಿಸುವುದಿಲ್ಲ. ತಾವು 'ಸಂಗ ದೇವರ' (ಜಂಗಮ ದೇವರ ಅನ್ನುವ ಬದಲು ಸಂಗಂ ದೇವರು ಎಂದಿದ್ದಾರೆ.) ಗುಂಪಿಗೆ ಸೇರಿದವರೆಂದು, ಲಿಂಗಾಯತ ಉಪ ಗುಂಪಿನಲ್ಲಿ ಸೇರಿದ್ದೇವೆಂದು, ಮೂಲತಃ ಶಿವನ ಆರಾಧಕರೆಂದು ಹೇಳುತ್ತಾರೆ. ಅಲೆಮಾರಿಗಳಾಗಿದ್ದರೂ ಹುಟ್ಟು, ಸಾವು, ಮದುವೆ, ಹಬ್ಬ ಆಚರಣೆ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಸೇರುತ್ತಾರೆ.

ಇವರು ತಮ್ಮ ವೃತ್ತಿ ಎರಡು ಹೊತ್ತು ಊಟ ನೀಡಿದರೆ ಸಾಕು ನಮಗೆ ವೈಭವ ಜೀವನ ಬೇಕಿಲ್ಲ ಎಂದು ಹೇಳುತ್ತಾರೆ. ಇವರ ಮನೆಯ ಸಾಮಾನು ಹಗುರ ಮತ್ತು ಸಾಗಿಸಲು ಸುಲಭವಾದಂತಹವುಗಳು. ಇವರು ಬಡತನ ರೇಖೆಗಿಂತ ಕೆಳಗಿದ್ದಾರೆ. ತಾವು ಎಲ್ಲಿ ಬೀಡು ಬಿಟ್ಟಿರುತ್ತಾರೆಯೇ ಅದೇ ಪರಿಸರವನ್ನು ಪ್ರೀತಿಸುತ್ತಾರೆ ಮತ್ತು ಶಾಂತಿ ಜೀವನ ನಡೆಸುತ್ತಾರೆ. ಇವರು ಬಯಲಿನಲ್ಲಿಯೇ ವಾಸಿಸಿ ತಮ್ಮ ವೇಷಗಾರಿಕೆಯ ಸಾಮಾನುಗಳನ್ನು ಇಡಲು ಮಾತ್ರ ಗುಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಹೀಗೆ ಇವರ ಸಂಕ್ಷಿಪ್ತ ಜೀವನ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಬಸವರಾಜ ಮಲಶೆಟ್ಟಿಯವರು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ 'Masters of Parod' ಎಂಬ ಲೇಖನದ ಮೂಲಕ ಈ ಸಮುದಾಯದ ಒಟ್ಟಂದವನ್ನು ಪರಿಚಯಿಸಿದ್ದಾರೆ. "It is common for folk theatre groups to perform during the night. However, the Hagalu Veshagararu

(Literally “Day time performers”) are an exception, scattered over many parts of the country, Hagalu Veshagararu are also called Bahuroopies.

Baharoopi chowdayya, a contemporary of the 12th century saint-poet Basavanna, was a master who used his art for the propagation of the Veerashiava faith. There are reference to the Bahuroopis in Harihar's works, Kanteerav's Narasaraja Kavya and in vachana literature.

Passages in classical Kannada poety discribe the Bahuroopis as Jatigaras (“Cast Experts”) who can imitate “The 18 Castes and hundreds of creeds”. Indeed, the Bahuroopi can caricature the gestures and diction of many castes. Even today, Hagalu Veshagararu are called Jaatigaras in Belgaum, Bijapur and Dharwad districts. In recent years, Some muslims families have also take up their profession.

The Hagalu Veshagararu are of Andhra Origion. They speak a dialect of Telugu called maraghubhashe. The Telugu name of them is Jangalu. They arte classified as budga Jangamas in the list of sheduled castes. They have adapted local castoms, and rituals. They worship Kannad deties like galemma, thayamma, maremma and sunklamma, Interestingly, the god they worship in their homes is a clay pot, which they fill with water and adorn with flowers, there have been instances when rich people have gifted them some land.

Three to four Hagalu Veshagara families usually come together and form a group for touring, they carry the barest minimum of luggage. Some vessels, pots, mats and quilts. Their only property is cattle acouple of goats an Bullocks.

There is a Kannad proverb muvattu mooru vesha, Ondu tingalu vasa which indicates that a Hagalu Veshagara group stays in a place for a month. Their make up is very simple. They rub some stones together and apply a thick layer of the paste on their faces. They use pieces of charcoal to draw a moustache and beard. Coconut fibre is painted black and worn as beard and hari. However, some artists wear regular draw style make-up these days.

The artists are good at mythological, Historical and social rools. The popular mythological themes are the battle of wits between mohini and Bhasmasura, the Valour of Bhima and Anjaneya. The war of vali and sugreeva, the Killing of Jatayu, the stead fast honesty of Harichandra and the disturbance of sage Vishwamitra's penance. The lives of great men like Basavanna, Kanakadasa, Kabirdas and Purandaradas are commonly taken up. The frequently parodied types are the brahmins, police men, women who have just given birth, thieves, fortune tellers, monks and washermen.

The Hagalu Veshagararu use whatever materials they can get locally to contrive stage proprities lick bows, arrows, maces, daggers and swords. They apply make up and set off by eight in the morning. The first stop is usually the house of a rich pattern. If the pattern is in the right mood, the team puts of a full show, involving the enactment of several lives. After this show, they go from house to house enact part of the show in serial order.

The Hagalu Veshagararu are very keen judges of audience responce. They lengthen or cut short episode depending on how much time their audience can spare. They also perform at public squares where their shows ecquire an altogether different vitality.

The Artists do not ask for money every day. The last three are four days of their visit are reserved for mythological and religious shows like Mohini Bhasmasura and Ardha Nareeshwara. On these days. They speak flatteringly of the people in each house and persuade their month-long audience to give them a generous contribution.

The performances of the Hagalu Veshagararu have all characterstics of one-act plays. The young artists get to learn their lines and songs as they watch their elders, performances. The earlier songs were based on the Karnatik vagas. In recent days. The influence of Hindustani music and film music has been powerful.

When they are not performing, some artists seek, alms as they sing the phoristic three lines poems of the Kannad poet sarvajana. They know hundreds of his poems by heart. in a sense, the credit for keeping sarvajna's poems alive among the people must go to them.

No History of our dramatic tradition can be complete without a mention of their contribution"[೬೧] ಜನಪದ ರಂಗಭೂಮಿಯಲ್ಲಿ ಪ್ರದರ್ಶನ ಕಲೆಗಳು ಸಾಮಾನ್ಯವಾದವು. ಏನೇ ಆದರೂ ಹಗಲುವೇಷಗಾರರು ಇದರಿಂದ ಹೊರತಾಗಿದ್ದಾರೆ. ದೇಶಾದ್ಯಂತ ಹೆಸರುವಾಸಿಯಾದ ಇವರು ಬಹುರೂಪಿಗಳೆಂತಲೂ ಕರೆಯಿಸಿಕೊಳ್ಳುತ್ತಾರೆ. ೧೨ನೇ ಶತಮಾನದಲ್ಲಿ ಬಹುರೂಪಿ ಚೌಡಯ್ಯನೆಂಬ ವಚನಕಾರ ಬರುತ್ತಾನೆ. ಈತನು ವೀರಶೈವ ಮತಪ್ರಚಾರಕ್ಕಾಗಿ ಅನೇಕ ವೇಷಗಳನ್ನು ಧರಿಸುತ್ತಿದ್ದನೆಂದು ತಿಳಿದು ಬರುತ್ತದೆ. ಬಹುರೂಪಿಗಳನ್ನು 'ಜಾತಿಗಾರ'ರೆಂತಲೂ ಕರೆಯುತ್ತಾರೆ. ಇಂದಿಗೂ ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿಯೂ ಹೀಗೆ ಕರೆಯುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಮುಸ್ಲಿಂ ಕುಟುಂಬಗಳೂ ಕೂಡ ಈ ವೃತ್ತಿಯನ್ನು ಮಾಡುತ್ತಿದ್ದಾರೆ. ಮುಸ್ಲಿಂ ಕುಟುಂಬಗಳನ್ನು ಡೊಂಬರು ಎಂದು ಕರೆಯುತ್ತಾರೆ. ಇವರು ಧರಿಸುವ ವೇಷಗಳು ಬೇರೆಬೇರೆಯಾಗಿವೆ.

ಇವರ ಮೂಲ ಆಂಧ್ರಪ್ರದೇಶ. ಮಾತೃ ಭಾಷೆ ತೆಲುಗು. ಇವರ ಉಪಭಾಷೆಯೂ ಒಂದಿದೆ ಅದನ್ನು 'ಮರಗು'[೬೨] ಭಾಷೆ ಎಂದು ಕರೆಯುತ್ತಾರೆ. ತೆಲುಗಿನಲ್ಲಿ ಇವರನ್ನು ಜಂಗಾಲು ಎಂದು ಕರೆಯುತ್ತಾರೆ. ಬುಡಗ ಜಂಗಮರನ್ನು ಪರಿಶಿಷ್ಟ ಜಾತಿಗೆ ಸೇರಿಸಿರುತ್ತಾರೆ. ಇವರು ಗಾಳೆಮ್ಮ, ತಾಯಮ್ಮ ಮಾರೆಮ್ಮ, ಸುಂಕ್ಲಮ್ಮ ಎಂಬ ಹೆಣ್ಣು ದೇವತೆಗಳನ್ನು ವಿಶೇಷವಾಗಿ ಪೂಜಿಸುತ್ತಾರೆ. ಈ ದೇವಿಯ ಪ್ರತೀಕವಾಗಿ ಒಂದು ಕೊಡದಲ್ಲಿ ನೀರು ತುಂಬಿ ಅದರಲ್ಲಿ ಹೂಗಳನ್ನು ಹಾಕಿ ಪೂಜಿಸುತ್ತಾರೆ.

ಇವರು ಮೂಲತಃ ಅಲೆಮಾರಿಗಳು. ಕೆಲವು ಶ್ರೀಮಂತರು ಇವರ ಕಲೆಯನ್ನು ಮೆಚ್ಚಿ ಭೂಮಿಯನ್ನು ಬಳುವಳಿಯಾಗಿ ನೀಡಿದ್ದಾರೆ. ಮೂರು-ನಾಲ್ಕು ಕುಟುಂಬಗಳು ಜೊತೆ-ಜೊತೆಯಾಗಿ ಗುಂಪು-ಗುಂಪಾಗಿ ಸಂಚರಿಸುತ್ತಾರೆ. ಇವರು ದನ-ಕರುಗಳನ್ನು ಸಾಕಿರುತ್ತಾರೆ. ಅವುಗಳ ಮೇಲೆ ಸಾಮಾನುಗಳನ್ನು ಹೇರಿಕೊಂಡು ಊರಿಂದ-ಊರಿಗೆ ವಲಸೆ ಹೋಗುತ್ತಾರೆ. ಇವರ ಸಾಮಾನುಗಳು ಕನಿಷ್ಟ ಜೀವನ ಸಾಗಿಸಲು ಸಾಕಾಗುವಷ್ಟಿರುತ್ತವೆ. ಅವುಗಳಲ್ಲಿ ಕೆಲವು ಪಾತ್ರೆ ಮಣ್ಣಿನವು ಮತ್ತು ಅಲ್ಯುಮಿನಿಯಂನವು, ಕೊಡೆ, ಚಾಪೆ, ಡೇರೆ ನಿರ್ಮಿಸಿಕೊಳ್ಳಲು ಕಟ್ಟಿಗೆ 'ಕೌದಿ'[೬೩] ಇಷ್ಟೆ ಅವರ ಸಾಮಾನುಗಳು. ಇವರ ಮುಖ್ಯ ಆಸ್ತಿ ಜೋಡು ಮೇಕೆ ಮತ್ತು ದನಕರುಗಳು.

ಕನ್ನಡದ ಗಾದೆ ಮಾತಿನಂತೆ "ಮೂವತ್ತು ಮೂರು ವೇಷ ಒಂದು ತಿಂಗಳ ವಾಸ" ಎಂಬಂತೆ ಈ ತಂಡ ನಿರ್ಧಿಷ್ಟ ಪ್ರದೇಶದಲ್ಲಿ ಒಂದು ತಿಂಗಳ ಕಾಲ ನಿಲ್ಲುತ್ತಾರೆ. ಅವರ ವೇಷ ಭೂಷಣ ತುಂಬಾ ಸರಳವಾಗಿರುತ್ತವೆ. ಇವರು ಅಗತ್ಯಕ್ಕೆ ತಕ್ಕಂತೆ ತಮ್ಮ ಬಣ್ಣ ತಾವೇ ತಯಾರಿಸಿಕೊಳ್ಳುತ್ತಾರೆ. ಕೆಲವು

ಕಲ್ಲುಗಳನ್ನು ಉಜ್ಜಿ ಅದರಿಂದ ಹೊರಡುವ ಬಣ್ಣಗಳಿಂದ ಮುಖವನ್ನು ಅಲಂಕರಿಸಿಕೊಳ್ಳುತ್ತಾರೆ. ಇದ್ದಿಲನ್ನು ಬಳಸಿ ಕರಿಯಬಣ್ಣವನ್ನು ತಯಾರಿಸಿ ಕೊಳ್ಳುತ್ತಾರೆ. ತೆಂಗಿನನಾರಿಗೆ ಬಣ್ಣ ಹಚ್ಚಿಕೊಂಡು ಗಡ್ಡ, ಮೀಸೆ, ಕೂದಲು ತಯಾರಿಸಿಕೊಳ್ಳುತ್ತಾರೆ. ಕೆಲವು ವೇಷಗಾರರು ಅತ್ಯಾಧುನಿಕ ಬಣ್ಣಗಳಿಂದ ಅಲಂಕೃತರಾಗುತ್ತಾರೆ.

ಈ ಕಲಾವಿದರು ಪುರಾಣೇತಿಹಾಸಗಳ ಬಗ್ಗೆ ಚೆನ್ನಾಗಿ ಬಲ್ಲವರಾಗಿದ್ದಾರೆ. ಅದರಲ್ಲಿಯ ಪಾತ್ರಗಳನ್ನೇ ಆಯ್ದುಕೊಳ್ಳುತ್ತಾರೆ. ಮತ್ತು ಜನ ಸಾಮಾನ್ಯರಿಗೆ ಹತ್ತಿರವಾದಂತಹ, ಮೆಚ್ಚುಗೆಗೆ ಪಾತ್ರವಾದಂತಹ ಪಾತ್ರಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಪ್ರಖ್ಯಾತವಾದ ಪುರಾಣ ಕಥಾವಸ್ತುವನ್ನೇ ಅದರಲ್ಲೂ ಮೋಹಿನಿ ಬಸ್ಮಾಸುರ ಯುದ್ಧ, ಭೀಮಾಂಜನೆಯ ಯುದ್ಧ, ವಾಲಿ-ಸುಗ್ರೀವರ ಕಾಳಗ, ಜಟಾಯುಧನ ಸಾವು, ಸತ್ಯ ಹರಿಶ್ಚಂದ್ರ ಕಥೆ. ವಿಶ್ವಾಮಿತ್ರನ ತಪೋ ಭಂಗ, ಪುರಾಣ ಪುರುಷರಾದ ಬಸವಣ್ಣ, ಕನಕದಾಸ, ಕಬೀರ್‌ದಾಸ್ ಮತ್ತು ಪುರಂದರದಾಸರ ಜೀವನ ಚರಿತ್ರೆಯನ್ನು ಅಭಿನಯಿಸುತ್ತಾರೆ. ಆಧುನಿಕವಾಗಿ ಸಾಮಾಜಿಕ ಪಾತ್ರಗಳಾದ ಬ್ರಾಹ್ಮಣರು, ಪೋಲಿಸರು, ಬಾಣಂತಿ, ಕಳ್ಳರು, ಕಾಲಜ್ಞಾನಿಗಳು, ಸಾಧು-ಸಂತರು ಇವರ ಬಗ್ಗೆ ಅಭಿನಯಿಸಿ ತೋರಿಸುತ್ತಾರೆ. ಇವರು ವೇಷಕ್ಕೆ ತಕ್ಕಂತೆ ಕೈಯಲ್ಲಿ ಬಿಲ್ಲು, ಬಾಣ, ಖಡ್ಗ, ಖಠಾರಿ ಇರುತ್ತವೆ. ಮುಂಜಾನೆ ಎಂಟು ಗಂಟೆಗೆ ಇವರು ವೇಷ ಧರಿಸಿ ಬೀದಿಗೆ ಬಂದಿರುತ್ತಾರೆ. ಮೊದಲು ಶ್ರೀಮಂತರ ಮನೆಯಿಂದಲೇ ಪ್ರಾರಂಭಿಸುವುದು ರೂಢಿ. ಅವರಿಗೆ ಅಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆತರೆ ಇಡೀ ಪ್ರದರ್ಶನ ಅಲ್ಲಿಯೇ ನಡೆಸುತ್ತಾರೆ. ತರುವಾಯದ ಪ್ರದರ್ಶನದಲ್ಲಿ ಮನೆಯಿಂದ ಮನೆಗೆ ಹೋಗಿ ಮುಂದುವರೆದು ಭಾಗವನ್ನು ಪ್ರದರ್ಶಿಸುತ್ತಾರೆ. ಇವರು ವೇಷಗಳನ್ನು ಪ್ರದರ್ಶಿಸಿಸಬೇಕಾದರೆ ಪ್ರೇಕ್ಷಕರ ಗಮನವನ್ನು ವೀಕ್ಷಿಸುತ್ತಿರುತ್ತಾರೆ. ಪ್ರೇಕ್ಷಕರು ಒಂದಕ್ಕಿಂತ ಹೆಚ್ಚು ಸಾರಿ ಬಯಸಿದರೆ, ಮರು ಪ್ರದರ್ಶನ ನೀಡುತ್ತಾರೆ. ಜನರು ಗುಂಪು-ಗುಂಪಾಗಿರುವಲ್ಲಿ ಮಾತ್ರ ವೈವಿಧ್ಯಮಯ ಪ್ರದರ್ಶನ ನೀಡುತ್ತಾರೆ.

ಇವರು ಪ್ರತಿನಿತ್ಯವೂ ಹಣ ಸಂಗ್ರಹಿಸುವುದಿಲ್ಲ. ಕೊನೆಯ ಮೂರು ಅಥವಾ ನಾಲ್ಕು ದಿನ ಮುಂಚೆ, ಹಿಂದಿನ ವೇಷಗಳನ್ನೇ ಮರು ಪ್ರದರ್ಶಿಸುತ್ತಾರೆ. ಆಗ ಅವರಿಗೆ ಆಕರ್ಷಕವಾದ ಮಾತುಗಳನ್ನಾಡಿ, ನಿಮ್ಮ ಮನೆಯ ಮುಂದೆ ತಿಂಗಳಕಾಲ ವೇಷ ಪ್ರದರ್ಶಿಸಿದ್ದೇವೆ. ಏನಾದರೂ ಜ್ಞಾಪಕ ಇರುವಂತಹ ಕೊಡುಗೆ ನೀಡಿ ಎಂದು ಕೇಳುತ್ತಾರೆ. ಸಾಮಾನ್ಯವಾಗಿ ಇವರ ಎಲ್ಲಾ ಪಾತ್ರ ಏಕಾಂಕಗಳಾಗಿರುತ್ತವೆ. ಯುವ ವೇಷಗಾರರು ಹಾಡುಗಳನ್ನು, ಸಂಭಾಷಣೆಯನ್ನು ಹಿರಿಯರಿಂದ ನೋಡಿ ಕಲಿತು ಪ್ರದರ್ಶನ ನೀಡುತ್ತಾರೆ. ಸಂಗೀತಗಾರಿಕೆಯ ಹಾಡುಗಳು ದಿನದಿಂದ ದಿನಕ್ಕೆ ಬದಲಾಗುತ್ತವೆ. ಮುಂಚಿನ ದಿನಮಾನಗಳಲ್ಲಿ ಬಳಸುತ್ತಿದ್ದ ಹಾಡುಗಳು ಕರ್ನಾಟಕ ಸಂಗೀತದಲ್ಲಿ ಹಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಹಿಂದುಸ್ತಾನಿ ಸಂಗೀತ, ಚಲನಚಿತ್ರ ಸಂಗೀತದ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಪ್ರದರ್ಶನ ನೀಡದೆ ಇರುವ ಸಂದರ್ಭದಲ್ಲಿ ಕೆಲವು ಕಲಾವಿದರು ಸರ್ವಜ್ಞನ ತ್ರಿಪದಿಗಳನ್ನು ಹಾಡಿಕೊಳ್ಳುತ್ತಿರುತ್ತಾರೆ. ನೂರಾರು ತ್ರಿಪದಿಗಳನ್ನು ಕಲಿತಿರುತ್ತಾರೆ. ಈ ರೀತಿಯಾಗಿ ಸರ್ವಜ್ಞನ ವಚನಗಳು

ಜನಸಾಮಾನ್ಯರಿಗೆ ತಲುಪುವಲ್ಲಿ ಇವರ ಪಾತ್ರ ಪ್ರಮುಖ ಎಂದು ಹೇಳಬಹುದು. ಏನೇ ಆದರೂ ಜನಪದ ರಂಗಭೂಮಿಗೆ ಇವರ ಸೇವೆ ಅಪಾರವಾದದ್ದು.

ನೂಕಾರಾಂ ಪ್ರಸಾದ್ ರೆಡ್ಡಿಯವರು ತೆಲುಗು 'ವಾರ್ತ' ಪತ್ರಿಕೆಯಲ್ಲಿ ಈ ವೇಷಗಾರರನ್ನು ಕುರಿತು ವಿಶ್ಲೇಷಿಸಿದ್ದಾರೆ. ಅದನ್ನು ಕನ್ನಡ ಅನುವಾದದಲ್ಲಿ ಮುಖ್ಯ ಸಾರದೊಂದಿಗೆ ನೀಡಲಾಗಿದೆ. 'ಹಸಿರು ಗಿಡಗಳ ಮಧ್ಯ ಇಂಪಾದ ಕೋಗಿಲೆ ಹಾಡು' ಇದು ಶೀರ್ಷಿಕೆ ರಾಯಲ್ ಸೀಮೆಯ ವಿವಿಧ ಪ್ರಾಂತ್ಯಗಳಿಗೆ ಸೇರಿದ ಹರಿಕಥೆ, ಬುರ್ರಕಥೆ, ಹಗಲುವೇಷಗಳು, ಯಕ್ಷಗಾನದಂತಹ ಕಲಾರೂಪಗಳನ್ನು ಪ್ರದರ್ಶಿಸುವ ಕಲಾಕಾರರೆಲ್ಲ ಇಲ್ಲಿದ್ದಾರೆ. ಈ ಕಲಾಕಾರರಿಗೆ ಘನವಾದ ಪ್ರಾಚೀನ ಚರಿತ್ರೆಯೇ ಇದೆ. ಇವರ ಪೂರ್ವಿಕರು ಮೆಹಬೂಬ್ ನಗರ ಜಿಲ್ಲೆಗೆ ಸೇರಿದವರೆಂದು ಮತ್ತು ತೆಲಂಗಾಣ 'ಜಂಗಮ ದೇವರುಲ' ವಂಶಕ್ಕೆ ಸೇರಿದವರೆಂದು ಹೇಳುತ್ತಾರೆ. ಜೀವನದ ಬದುಕಿಗೆ ನಾಟಕಗಳನ್ನು, ಕಲಾ ರೂಪಗಳನ್ನು ಗ್ರಾಮಗಳಲ್ಲಿ ಪ್ರದರ್ಶಿಸುತ್ತಾ ಸಂಚರಿಸುವರು. ಈ ಸಂಚಾರದಲ್ಲಿ ಕೂಚಿಪುಡಿ ಬ್ರಾಹ್ಮಣರ ಶಿಷ್ಯತ್ವ ದೊರೆತುದರಿಂದ ಯಕ್ಷಗಾನ ಕಲಾರೂಪವನ್ನು ಕಲಿತಿದ್ದಾರೆ. ಕಾಲ ಕಳೆದಂತೆ ಇವರ ಕುಟುಂಬಗಳು ರಾಷ್ಟ್ರದಾದ್ಯಂತ ವ್ಯಾಪಿಸಿದ್ದಾರೆ. ಹರಿಕಥೆಗಳು, ಬೀದಿ ನಾಟಕಗಳು, ಕೊರವಂಜಿಯಂತಹ ಹಗಲುವೇಷಗಳು ಪ್ರದರ್ಶಿಸುತ್ತಾ ಸಂಚಾರ ಮಾಡುತ್ತಾ ಬಂದಿದ್ದಾರೆ. ಹೀಗೆ ಗ್ರಾಮಗಳಲ್ಲಿ ಪ್ರದರ್ಶಿಸುತ್ತಾ ಕರ್ನೂಲು ಜಿಲ್ಲಾ ಆತ್ಮಕೂರು, ಕೊತ್ತ ಬನಕ ಚರ್ಲ, ಪೊನ್ನಾಪುರಂ, ನಂದಿ ಕೊಟ್ಕೂರು, ಬಿಜಿ ವೇಮುಲ, ಕಡಪಾ ಜಿಲ್ಲಾದಲ್ಲಿ ಪ್ರದ್ದಟೂರು, ದುವ್ವೂರು, ಮಿರ್ಜಾಗಾನಿ ಪಲ್ಲೆ, ಅನಂತಪುರ ಜಿಲ್ಲೆಯಲ್ಲಿ ಹಿಂದೂಪರುಂ, ತುಕುಂಟ, ಕೊತ್ತ ಚಿರುವತೋಪಾಟು, ಕರ್ನಾಟಕ ರಾಜ್ಯದಲ್ಲಿ ಚಿಕ್ಕ ಬಳ್ಳಾಪುರ, ಬಾಗೆಪಲ್ಲಿಗಳಲ್ಲಿಯೂ ಇದ್ದಾರೆ.

ವಿನೋದವನ್ನು ನೀಡುವುದು, ನಗಿಸುವುದು, ಪರಿಹಾಸ್ಯ ಮಾಡುವುದು, ಜನರಲ್ಲಿರುವ ದುರಾಚಾರ, ದುರ್ನೀತಿಯನ್ನು ವಿಮರ್ಶಿಸುತ್ತಾ ಈ ಕಲೆಯನ್ನು ಸಾಯದಂತೆ ಉಳಿಸುವುದು, ದೇಶದ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುವುದೇ ಈ ಹಗಲುವೇಷಗಾರರ ಕರ್ತವ್ಯವೆಂದು ರಾಮಕೋಟಯ್ಯ ಒಂದು ಸ್ಥಳದಲ್ಲಿ ಹೇಳಿದ್ದಾರೆ. ಮೂಲ ತೆಲುಗಿನಲ್ಲಿಯೇ ಹುಟ್ಟಿದಂತಹ ಈ ಕಲೆ ವಿಧಿಯಿಲ್ಲದಂತಹ ಪರಿಸ್ಥಿತಿಯಲ್ಲಿ ಯಕ್ಷಗಾನಗಳನ್ನು ಹಗಲುವೇಷಗಳಾಗಿ ಪ್ರದರ್ಶಿಸುತ್ತಿದ್ದೇವೆಂದು ರಾಯಲಸೀಮ ಯಕ್ಷಗಾನ, ಬುರ್ರಾಕಥಾ, ಹರಿಕಥೆ ಕಲಾಕಾರರ ಸಂಘದ ಅಧ್ಯಕ್ಷ ಕೊಂಡಪಲ್ಲಿ ವೀರಭದ್ರಯ್ಯ ಅವರು ಅಭಿಪ್ರಾಯ ಪಡುತ್ತಾರೆ.

ಇವು ವಿನೋದ, ಅಭ್ಯುದಯ, ತಾಮಸಂ ಎನ್ನುವ ಮೂರು ರೀತಿಯಾದಂತಹ ಪರಿಣಾಮ ಬೀರುತ್ತದೆ. ಈ ಹಗಲುವೇಷಗಳು ೩೩ ರೀತಿಯಲ್ಲಿರುತ್ತವೆ. ಲಂಬಾಡಿ, ಅಗಸರ, ಔಷಧಿ ಮಾರುವವರ, ಬುಡು-ಬುಡುಕಿ, ಪಠಾಣ್ ಪಂತಲು, ಫಕೀರು, ಅರ್ಧನಾರೀಶ್ವರ, ಕೋಮಟಿಗರು ಲಿಂಗ ಬಲಿಜು, ಬೋಡಿ ಬ್ರಾಹ್ಮಣ, ವಡ್ಡರು, ದನಕಾಯುವವರು, ಮಹದೇವ, ಬೀದಿ ಬ್ರಾಹ್ಮಣ, ಜೋಗ ವೇಷ, ವೈಷ್ಣವ, ಜಂಗಮ ದೇವರ, ಸೋಮಾಯಾಜಿ ಸೋಮಿ ದೇಮಮ್ಮ, ಕಾಶಿಯವರು, ಕೊಜ್ಞಾ, ದೇವರಪೇಟ, ಮಾದಿಗ, ಸುಂಕಲಮ್ಮ, ಕೊಮ್ಮದಾಸರಿ, ಕಳ್ಳರದೊರೆ, ಸಿದ್ಧಿ, ಎರುಕುಲ, ಭೈರಾಗಿ, ಕೋಮಟಿಗ,

ಕಾಡುಪಾಪರು, ಪಠಾಣ್ ಪಂತಲು, ಬಾಣಂತಿ, ಕಳ್ಳ ಬೇಟೆಗಾರ, ಬಫೂನ್ ವೇಷಗಳು ಆದರೆ ೧೫ ವೇಷಗಳು ಮಾತ್ರವೇ ಪ್ರಸಿದ್ಧವಾಗಿವೆ. ಇನ್ನು ಉಳಿದ ೩೦ ವೇಷಗಳ ಕುರಿತು ಕೆಲವರಿಗೆ ಮಾತ್ರವೇ ಗೊತ್ತು. ಯಕ್ಷಗಾನಗಳನ್ನೇ ಹಗಲುವೇಷಗಳಾಗಿ ಮಾಡಿಕೊಂಡಿರುವವುಗಳಲ್ಲಿ ಪರ್ಣಶಾಲೆ, ಸೌಗಂಧಿಕ, ಭೀಮಾಂಜನೆಯ ಯುದ್ಧ. ಶ್ರೀಕೃಷ್ಣ ಜಾಂಬವತರ ಯುದ್ಧ, ನಾರದ ಗರ್ವಭಂಗ, ಶ್ರೀಕೃಷ್ಣರುಕ್ಮಿಣಿ ಪ್ರಣಯ ಕಲಹ, ಅರ್ಧನಾರೀಶ್ವರ, ತ್ರಿಪುರ ಸಂಹಾರ, ದೇವರ, ತಾಕಿಡಿ ವಧೆ, ಸುಂಕರ ಸಂವಾದದಂತಹ ೧೫ ಹಗಲುವೇಷಗಳು ಪ್ರಸ್ತುತ ಕಲಾಕಾರರು ಪ್ರದರ್ಶಿಸುತ್ತಿದ್ದಾರೆ. ಈ ಹಗಲುವೇಷಗಳನ್ನು ಹಾಕುವ ಕಲಾಕಾರರಿಗೆ ಕೆಲವು ಗ್ರಾಮಗಳು ವಾರ್ಷಿಕವಾಗಿವೆ. ಆ ಗ್ರಾಮಗಳಿಗೆ ಇತರ ಹಗಲುವೇಷದ ಕಲಾಕಾರರು ಬಂದು ಪ್ರದರ್ಶಿಸದ ಹಾಗೆ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಹಾಗೇನಾದರೂ ಯಾರಾದರೂ ಒಬ್ಬರ ಗ್ರಾಮದಲ್ಲಿ ಇನ್ನೊಬ್ಬರು ಹೋದರೆ ಘರ್ಷಣೆ ನಡೆಯುವ ಸಂದರ್ಭಗಳೂ ಉಂಟು ಅಂತಹ ನ್ಯಾಯ ಕುಲ ಪಂಚಾಯಿತಿಗೆ ಬರುತ್ತವೆ.

ದಾತರೇ ಇವರ ಆಸ್ತಿಗಳು, ಇವರು ಹೊಲ ಗದ್ದೆಗಳು, ಬಂಗಾರದ ಉಂಗುರಗಳು, ಬಂಗಾರದ ಸರ, ಬೆಳ್ಳಿಯ ಕಡಗ, ಬೆಳ್ಳಿ ಚಂಬು, ಬೆಳ್ಳಿ ಗಂಗಾಳ, ಉಟ್ಟ ಪಂಚೆಗಳು ಕೊಟ್ಟವರಿದ್ದಾರೆ. ಇಂದಿಗೂ ಕೂಡ ಹಣದ ರೂಪದಲ್ಲಿ ಸಹಾಯ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಕೆಲವರು ತಮ್ಮ ವೃತ್ತಿಯಲ್ಲಿ ಸ್ವಲ್ಪ ಬದಲಾವಣೆಯಾಗಿ, ಕೆಲವರು ಹಗಲು ವೇಷದ ಸಂಪ್ರದಾಯಗಳನ್ನು ಪ್ರಸ್ತುತ ಜಂಗಮ ದೇವರುಲು ಎನ್ನುವ ಜಂಗಾಲು ಕುಲ ಪ್ರಚಾರ ಮಾಡುತ್ತಾ ಆ ಕಲೆಯನ್ನು ಬದುಕಿಸುತ್ತಿದ್ದಾರೆ.

ಇವರಿಗೆ ಅವರದೇ ಆದಂತಹ ಸ್ವಂತ ಮನೆಗಳಿಲ್ಲ. ಇವರ ಈ ವೃತ್ತಿ ಉಪವೃತ್ತಿಯಿಲ್ಲ. ಜೀವನ ಸಾಗಿಸಲು ಈ ಕಲಾ ಪ್ರದರ್ಶನವೇ ಆಧಾರವಾಗಿದೆ. ಆ ಸಮುದಾಯವು ಇಂದಿಗೂ ದುರ್ಬರ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಕಲೆಗಾರ ಹೊಟ್ಟೆ ಹಸಿವಾದಾಗಲೂ ಕೂಡ ಕಲೆಗಾಗಿಯೇ ಅಂಕಿತವಾಗಿದ್ದೇವೆಂಬ ಸತ್ಯವನ್ನು ಹೇಳುತ್ತಿದ್ದಾರೆ. ಈ ಕಲಾಕಾರರು ಬಸ್ಸು, ರೈಲು ಪ್ರಯಾಣದಲ್ಲಿ ರಿಯಾಯಿತಿ ನೀಡಬೇಕೆಂದು ಕೋರುತ್ತಿದ್ದಾರೆ. ಆದರಣ ಪದಕದ ಕೆಳಗೆ ವಾದ್ಯ ಪರಿಕರಗಳಿಗೆ ಆರ್ಥಿಕ ಸಹಾಯ ನೀಡಬೇಕೆಂದು ತಮ್ಮ ವಸತಿಗಳ ಹತ್ತಿರ ಪಾಠಶಾಲೆಯ ವ್ಯವಸ್ಥೆ, ನಮ್ಮ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಸಹಾಯ ಮಾಡಿ ಕಲಾವೃತ್ತಿಯನ್ನು ಉಳಿಸಿಕೊಳ್ಳಬೇಕೆಂದು ಅಂಗಲಾಚುತ್ತಿದ್ದಾರೆ.

ಕಲಾಕಾರರ ಸುಧೀರ್ಘ ಕನಸಾದ 'ಪ್ರಪಂಚ ತೆಲುಗು ಮಹಾಸಭೆ'ಯ ವೇದಿಕೆಯ ಮೇಲೆ ತಮ್ಮ ಕಲೆಯು ಪ್ರದರ್ಶಿಸುವಂತೆ ಆಗಿ ತಮ್ಮ ಕೀರ್ತಿಯು ದಿಕ್ಕೂ ದಿಕ್ಕುಗಳಲ್ಲಿ ಪರಸರಿಸುವ ದಿನ ಬರಬೇಕೆಂದು ಆಶಿಸುತ್ತಿದ್ದಾರೆ.''[೪೪] ಇಂದಿಗೂ ಸಹ ಮೂಲೆ ಗುಂಪಾಗುತ್ತಿರುವ ಈ ಕಲೆಯನ್ನು ಉಳಿಸಿಕೊಳ್ಳಲು ಇನ್ನೂ ಹೋರಾಡುವ ಆಸೆ ಇದೆ ಎಂದು ಹೇಳುತ್ತಾರೆ. ಅದಕ್ಕೆ ಅಧ್ಯಯನ ಮತ್ತು ಸಂಶೋಧನ ಕೇಂದ್ರಗಳು ಸ್ವಯಂ ಸೇವಾಸಂಸ್ಥೆಗಳು ಸರ್ಕಾರಗಳು ಈ ಬಗ್ಗೆ ಗಮನಹರಿಸಿ ಅಗತ್ಯ ಸಹಕಾರ ನೀಡಬೇಕಾಗಿದೆ.

೩.೪.೨ ಕೃತಿಗಳು

ಪಗರಣದ ಕುರಿತು ಕನ್ನಡದಲ್ಲಿ ಉಪಲಬ್ಧ ಮೊದಲ ಗ್ರಂಥ ಕವಿರಾಜಮಾರ್ಗದಲ್ಲಿ 'ಪಗರಣ' ಇದೊಂದು ಹಾಸ್ಯ ಪ್ರಧಾನ ಕಲಾ ಪ್ರಕಾರ ಎಂದು ಹೇಳಿರುವುದು ಕುತೂಹಲಕ್ಕೆ ಎಡೆಮಾಡಿಕೊಡುತ್ತದೆ.

> "ಮಿಗೆ ದುಷ್ಕರ ಕ್ಯಾಂಗಳೂ
> ಳಗರ್ಹಿತ ಪರಾಯಮ್ಮಕ್ಕುಮಾ ಶೃತಿ ಕಷ್ಟಂ
> ಪಗರಣದೊಳುಪಿದ ಮೂಟುಂ
> ನಗಿಸುಗು ಮುಪ್ಪುದಟೆನಲ್ಲಿಗಂತವ ದೋಷಂ"[೩೫]

ಶೃತದುಷ್ಟ, ಅರ್ಧದಷ್ಟು, ಶೃತಿ ಕಷ್ಟ, ಕಲ್ಪನೋತ್ತ ಕಷ್ಟ ಎಂಬ ದೋಷಗಳು ಕಾವ್ಯದಲ್ಲಿ ಬರಕೂಡದು. ಆದರೆ ಶೃತಿ ಕಷ್ಟವನ್ನುಳಿದು ಮೂರು ದೋಷಗಳು ನಗೆಯನ್ನು ಹುಟ್ಟಿಸುವ 'ಪಗರಣ'ವೆಂಬ ಪ್ರಕಾರದಲ್ಲಿ ಕೂಡುವುದರಿಂದ ದೋಷಗಳಾಗುವುದಿಲ್ಲ ಎಂದಿದ್ದಾರೆ. ಎಂ.ಎಂ.ಕಲಬುರ್ಗಿಯವರು ಬೀದಿಯ ಆಟವು ಜಾನಪದೀಯವು ಆಗಿರುವ ಇಂದಿನ ಬಹುರೂಪಿಗಳ ವೇಷಗಾರಿಕೆ, ಪ್ರಾಚೀನ ಕಾವ್ಯಗಳು ಉಲ್ಲೇಖಿಸುವ 'ಪಗರಣ' ವರ್ಗಕ್ಕೆ ಸೇರುತ್ತದೆ. ಈಗ ತಿಳಿದ ಮಟ್ಟಿಗೆ ಕನ್ನಡದಲ್ಲಿ ಈ ವೇಷಗಾರಿಕೆಯ 'ಪಗರಣ'ದ ಉಲ್ಲೇಖ ಕವಿರಾಜಮಾರ್ಗ, ವಡ್ಡಾರಾಧನೆಗಳಷ್ಟು ಪ್ರಾಚೀನ"[೩೬] ಎಂದಿದ್ದಾರೆ.

ವಡ್ಡಾರಾಧನೆಯಲ್ಲಿ ಬರುವ 'ಕಾರ್ತಿಕೇಯ ಮುನಿಗಳ ಕಥೆಯಲ್ಲಿ' 'ಪಗರಣ'ದ ಪ್ರಸ್ತಾಪ ಬಂದಿದೆ. ಆ ಕಥೆಯಲ್ಲಿ ವೀರಶ್ರೀ ಎಂಬ ರಾಣಿಯು ತನ್ನ ಅಣ್ಣನನ್ನು ಕಳೆದುಕೊಂಡು ದುಃಖತಪ್ತಳಾಗಿರುತ್ತಾಳೆ. ಅದನ್ನು ಕಂಡ ರಾಜನು ಇವಳನ್ನು ನಗಿಸಿದವರಿಗೆ ಬಹುಮಾನ ಕೊಡುವುದಾಗಿ ಡಂಗುರ ಸಾರುತ್ತಾನೆ. 'ಆದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆರೆದ ರೂಪಗಳಂ ಕೈಕೊಂಡು ಮರೆಮಾಗಂಗಳನಿಟ್ಟು ಬಂದು ಮುಂದೆ ಅಡಿಯುಂ ಪಾಡಿಯುಂ ನಗಿಸಿಯುಂ ಎಂತು ಅಳ್ಕೆ ಮಳ್ಗದಿರ್ದೊಡೆ ಒರ್ವಂ ಕರಿಯ ಕಚ್ಚುಟಮನುಟ್ಟು ಮೈಯೆಲ್ಲಂ ಮಸಿಯಂ ಪೂಸಿ ಬೋಳೆದಲೆವರಸು ಬಾಯೋ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮಂ ಗುಂಡಿಗೆಯಮಂ ಪಿಡಿದು ಒರ್ಪೊನನ್ ಅರಸಂ ಇಂತೆಂದನ್, ಎಲೆ 'ಅರಸಿ ನಿನ್ನ ಸಹೋದರಂಗಳಪ್ಪ ಬಟಾರನ ಆ ಬರ್ಪೊರ್' ಎಂದು ಪೇಳ್ದಾಗಳ್ 'ಎಲ್ಲಿರ್ದರ್' ಎಂದು ಎಳ್ದು ನೋಡಿ ಕಾಣದೆ ಆ ರೂಪಂ ಕಂಡು ನಕ್ಕು ದುಃಖಮಂ ಮರೆದೊಳ್, ಆಗಳಂ ಆನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನ್. ಅಂದರೆ ಇತ್ತ ಬಾದುಬ್ಬೆಯ ಪರ್ವಮುಂ ಪಗರಣದ ಪಾಟಮುಂ ಆದವು"[೩೭] ಅಂದರೆ ವೆಷಗಾರರು ಎನಿಸಿಕೊಂಡ ಪಗರಣಿಗರು ವಿಕೃತ ವೇಷಗಳಿಂದ ಜನರನ್ನು ನಗಿಸುತಿದ್ದರು. ಈ ಸಾಹಿತ್ಯವನ್ನು ಆಧರಿಸಿ ನೋಡಿದರೆ ಇವರ ಪ್ರಾಚೀನತೆ ೯ನೇ ಶತಮಾನಕ್ಕೆ ಹೋಗುತ್ತದೆ.

ನಯ ಸೇನನ 'ಧರ್ಮಾಮೃತ'ದಲ್ಲಿಯೂ ಈ ಪಗರಣದ ಪ್ರಸ್ತಾಪ ಅಲ್ಲಲ್ಲಿ ಕಂಡುಬರುತ್ತದೆ.

'ಪಗರಣಿಗನಂತೆ ವಿಪರೀತನಾಗಿ' (ಪದ್ಯ-೧೦೨)[೩೮]

ಪಗರಣಮಂ ನೋಡುವಂತೆ ನಗುತ್ತಂ, (ಪದ್ಯ-೭೭)[೩೯]

ಕಂಡು ವರ್ನಗುವರಲ್ಲದೆಯವರಾಟಕ್ಕೆ ಲಕ್ಷಣಂ ನೋಡರ್ (ಪದ್ಯ-೧೦೩)[೪೦]

ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ಮುಂಡೆಯುಂ ಬೋಳಿಸಿಕೊಳ್ವಂತೆ (ಪದ್ಯ-೭೭)[೪೧]

ಈ 'ಪಗರಣ'ವೆಂಬುದು ಪ್ರಹಸನದ ರೀತಿ ಕಾಣುತ್ತದೆ. ಈ ಪಗರಣಕ್ಕೆ ಖಾಯಂ ಕಲೆಗಾರರಿದ್ದಿಲ್ಲವೆಂದು ತೋರುತ್ತದೆ. ಈ ಪಗರಣದ ನಟರು ಹವ್ಯಾಸಿಗಳಾಗಿದ್ದರು. ಏಕೆಂದರೆ ಮೂರು ದಿನದ ಪಗರಣಕ್ಕೆ ಗಡ್ಡ ಮೀಸೆ ತಲೆ ಬೋಳಿಸಿಕೊಳ್ಳುವಂತೆ ಎನ್ನುವ ನುಡಿ ಖಚಿತಪಡಿಸುತ್ತದೆ. ಬಹುಶಃ ಇಂತಹ ಸಂದರ್ಭಗಳು ಹಬ್ಬ, ಹುಣ್ಣಿಮೆಯ ವಿಶೇಷ ಸಂದರ್ಭದಲ್ಲಿ ಹವ್ಯಾಸಿ ಕಲಾವಿದರು ಅಭ್ಯಾಸಮಾಡಿ ಪ್ರದರ್ಶಿಸುತ್ತಿದ್ದರೆಂದು, ವೇಷಗಳನ್ನು ಈ ಕಲೆ ಹಾಸ್ಯದ ಮೂಲಕ ಜನರನ್ನು ರಂಜಿಸುವುದೇ ಇದರ ಉದ್ದೇಶವಾಗಿದೆ. ಇಲ್ಲವೇ ಇಂತಹ ಒಂದು ಜಾತಿಯೇ ಇದ್ದು ಮುಂದೆ ೧೨ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ವೃತ್ತಿ ಕಲೆಯಾಗಿ ಮಾರ್ಪಟ್ಟಿರುವ ಸಾಧ್ಯತೆ ಇದೆ.

ಊರುಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ಮತ್ತೆ ಮನೆಗಳಲ್ಲಿ, ವಿಶೇಷ ಕಾರ್ಯಕ್ರಮ ಇರುವಾಗ ಖಾಸಗಿಯಾಗಿ ಇಂದೂ ಪಗರಣಿಗರನ್ನು ಆಹ್ವಾನಿಸಲಾಗುವುದು. ಅವು ಪೌರಾಣಿಕ ವಿಷಯಗಳನ್ನು ಒಳಗೊಂಡಿರುತ್ತವೆ. ಈ ಕೀಳು ಅಭಿರುಚಿಯ ಪ್ರದರ್ಶನ ಬರೀ ಗಲಾಟೆಯಿಂದ ತುಂಬಿಕೊಂಡಿರುತ್ತದೆ. ಹಾಡು-ಮಾತುಗಳು ಆ ಜನರ ಅಭಿರುಚಿಗೆ ತಕ್ಕಂತೆ ಅಶ್ಲೀಲವಿರುವುದು ಸಾಮಾನ್ಯ ಸಂಗತಿಯಾಗಿದೆ. ವಡ್ಡಾರಾಧನೆಯ ಕಾಲಕ್ಕೆ ಒಂದು ಹಾಸ್ಯ ಪ್ರಧಾನ ವೇಷ ಎಂಬ ಅರ್ಥ ಪಡೆದಿದ್ದ ಪಗರಣವು ಅರ್ಥ ವ್ಯತ್ಯಾಸ ಹೊಂದುತ್ತಾ ಬಂದು ಈಗ ಗದ್ದಲ, ಅವ್ಯವಸ್ಥೆ ಎಂಬಲ್ಲಿಗೆ ಬಂದು ನಿಂತಿದೆ.”[೪೨]

ನಾವು ಕಂಡಂತೆ ವೇಷಗಾರರು ಕಥಾ ಪ್ರಸಂಗಕ್ಕೆ ತಕ್ಕಂತೆ ಅಲ್ಲಲ್ಲಿ ಹಾಸ್ಯವನ್ನು ಪ್ರಯೋಗಿಸುತ್ತಾರಾದರೂ, ಅದು ಅಶ್ಲೀಲತೆಯಿಂದ ಕೂಡಿರುವುದಿಲ್ಲ. ಹಾಗೇನಾದರೂ ಅಶ್ಲೀಲವಾಗಿದ್ದರೆ ಈ ವೇಷಗಾರಿಕೆಯ ಕಲಾ ಪ್ರದರ್ಶನ ಇಂದಿಗೂ ಉಳಿದುಕೊಂಡು ಬರುತ್ತಿದ್ದಿಲ್ಲ. ರಸ್ತೆಗಳಲ್ಲಿ, ಬೀದಿಗಳಲ್ಲಿ ಪ್ರದರ್ಶನವಾಗುವ ಈ ಕಲೆ ಬೀದಿಯಲ್ಲೇ ಜನರಿಂದ ತಿರಸ್ಕೃತವಾಗುತ್ತಿತ್ತು. ಇವರು ಹೇಳಿದಂತೆ ಜಾತ್ರೆ ಉತ್ಸವಗಳಲ್ಲಿ ಕರೆಗೆ ಓಗೊಟ್ಟು ಈ ಕಲೆಯನ್ನು ಪ್ರದರ್ಶಿಸಬಹುದು. ಆದರೆ ವೈಯಕ್ತಿಕವಾದ ಮನೆಯ ಕಾರ್ಯಕ್ಕೆ ಈ ವೇಷಗಾರರು ಹೋಗುವುದಿಲ್ಲವೆಂದು ಹೇಳುತ್ತಾರೆ.

ಚೆನ್ನ ಬಸವಣ್ಣನವರ ವಚನದಲ್ಲಿ 'ಹಗರಣ'ದ ಉಲ್ಲೆಖವಿದೆ.

> ಕೇಶಕಾಷಾಯಾಂಬರ ವೇಷ ಲಾಂಛನ ವಾದಡೇನೋ!
> ಗ್ರಾಸಕ್ಕೆ ಭಾಜನರಲ್ಲದೆ ಲಿಂಗಕ್ಕೆ ಭಾಜನರಲ್ಲ
> ಈ ಆಸೆಯ ವೇಷವ ಕಂಡಡೆ
> ಕಾರ ಹುಣ್ಣಿಮೆಯ ಹಗರಣವೆಂಬೆ ಕಾಣಾ
> ಕೂಡಲ ಚೆನ್ನ ಸಂಗಮ ದೇವಾ.[೪೩]

ಈ ವೇಷಗಳನ್ನು ವಿಶೇಷ ಸಂದರ್ಭದ ಹಬ್ಬ, ಹುಣ್ಣಿಮೆಗಳಲ್ಲಿ ಧರಿಸುತ್ತಿದ್ದರೆಂದು ಹೇಳಬಹುದು. ಏಕೆಂದರೆ ಆಸೆಯಿಂದ ವೇಷವನ್ನು ಕಾಣುವುದಾದರೆ, ಕಾರಣ ಹುಣ್ಣಿಮೆಯಲ್ಲಿ ಹಗರಣವನ್ನು ಕಾಣಬಹುದು ಎಂದಿದ್ದಾರೆ. ಅಲ್ಲದೆ ಈ ಕಲೆಯು ಹಾಸ್ಯಭರಿತವಾದುದೆಂದು ಕೂಡ ಗ್ರಾಸವಾಗುತ್ತದೆ.

"ಅಚಗಣ್ಣ ಕವಿಯು 'ಬಹುರೂಪ ವಿಕೃತಮಂ ಪಲತೆರದಿಂ ತೋರುವ ಹಗರಣಂ'"[೪೪] ಎಂದು ಒಂದು ಪ್ರಸಂಗದಲ್ಲಿ ಬಂದಿದೆ. ಈ ಸನ್ನಿವೇಷವನ್ನು ನೋಡಿದರೆ ಬಹುರೂಪದಲ್ಲಿ ವಿಕೃತ ವೇಷ ಧರಿಸಿ ನಗಿಸುವ ಹಾಸ್ಯ ಸನ್ನಿವೇಷವನ್ನು ಪಗರಣವೆಂದು ಕರೆದಿದ್ದಾರೆ. ಅಂದರೆ ಬಹುರೂಪದಲ್ಲಿ ಪಗರಣವೂ ಒಂದು ಭಾಗವಿರಬಹುದೇ...? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಬಸವಣ್ಣನವರ ವಚನದಲ್ಲಿ 'ಎಂಬಂತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ'[೪೫] ಎಂಬತ್ತೆಂಟು ಪವಾಡ ಮೆರೆದು ಪಗರಣಗರಂತೆ ಅಪಹಾಸ್ಯಕ್ಕೆ ಗುರಿಯಾದಂತೆ ಅಂದರೆ ವಿಕೃತ ರೂಪಗಳನ್ನು ಸೂಚಿಸುತ್ತದೆ. ಹೀಗೆ ಹಗರಣ ಪ್ರಸ್ತಾಪ ಪ್ರಾಚೀನ ಸಾಹಿತ್ಯದಲ್ಲಿಯೇ ದೊರಕುವುದರಿಂದ ಅವರ ಪ್ರಾಚೀನತೆಯನ್ನು ಎಂಟನೇ ಶತಮಾನಕ್ಕೆ ಕೊಂಡೊಯ್ಯುತ್ತದೆ.

ವಚನ ಸಾಹಿತ್ಯದಲ್ಲಿ

ಕರ್ನಾಟಕದ ಪರಂಪರೆಯಲ್ಲಿ ಪ್ರಾಚೀನ ಕಲೆಯನ್ನು ಉಳಿಸಿಕೊಂಡು ಬಂದಿರುವಂತಹ ವೇಷಗಾರರು ತಮ್ಮದೇಯಾದಂತಹ ಸಂಸ್ಕೃತಿಯ ಆರಾಧಕರಾಗಿದ್ದಾರೆ. ಇವರ ಮೂಲದ ಬಗ್ಗೆ ಸ್ಪಷ್ಟವಾದ ಕುರುಹುಗಳು ೧೨ನೇ ಶತಮಾನದಲ್ಲಿ ಸಿಗುತ್ತವೆ. "ಸರ್ವ ಜನಪದ ವರ್ಗಗಳನ್ನು ಮೇಲೆತ್ತುವುದರ ಮೂಲಕ ಬಸವಣ್ಣನವರು ಅವರವರ ಸಾಹಿತ್ಯ ಸಂಗೀತ, ಕಲೆಗಳಿಗೆ ಕಾಯಕದ ತಿರುವುಕೊಟ್ಟು ಅಪ್ರತ್ಯಕ್ಷವಾಗಿ ಜಾನಪದ ಕಲೆಗಳನ್ನೇ ಪುನರುಜ್ಜೀವನಗೊಳಿಸಿದರು. ಹೀಗಾಗಿ ಕರ್ನಾಟಕದ ಜಾನಪದ ಪುನರುಜ್ಜೀವನಕ್ಕೆ ಸಂಬಂಧಪಟ್ಟಂತೆ ನಮ್ಮದು ಪ್ರತ್ಯಕ್ಷ ಪ್ರಯತ್ನವಾದರೆ ಅಂದಿನ ಬಸವಣ್ಣನದು ಅಪ್ರತ್ಯಕ್ಷ ಪ್ರಯತ್ನ; ಇದು ದ್ವಿತೀಯ ಪ್ರಯತ್ನ, ಅದು ಪ್ರಥಮ ಪ್ರಯತ್ನ, ಹೀಗೆ ಅಂದು ಉದ್ದೀಪನಗೊಂಡ ಕಲೆಗಳಲ್ಲಿ ವೇಷಗಾರಿಕೆಯೂ ಒಂದು. ಆ ಕಾಲದ ಶರಣರಾದ ಕಲಕೇತ ಬ್ರಹ್ಮಯ್ಯ, ನಗೆಯ ಮಾರಿತಂದೆ ಮೊದಲಾದ ಜನಪದ ಕಲಾವಿದರಲ್ಲಿ ಬಹುರೂಪಿ ಚೌಡಯ್ಯನೂ ಒಬ್ಬ."[೪೬] ಆದರೆ ಇವರೊಂದಿಗೆ ಇಂದಿನ ವೇಷಗಾರರನ್ನು ಹೋಲಿಸಿ ನೋಡುವುದು ಕಷ್ಟವೆನ್ನಬಹುದು.

ಇಡೀ ಮಾನವ ಜನಾಂಗವೆಲ್ಲಾ ಒಂದು ಕುಟುಂಬ, ಅಲ್ಲಿ ಜಾತಿ ಮತ ಬೇಧಗಳ ಕಲ್ಪನೆ ಕೃತಕವಾದದ್ದು ಎಂಬ ಸಂದೇಶವನ್ನು ಸಾರಿದ ವಚನಕಾರರು ಕಾಲದ ದೃಷ್ಟಿಯಿಂದ ಪ್ರಾಚೀನವಾಗಿರುವಂತೆ, ಪ್ರಭಾವದ ದೃಷ್ಟಿಯಿಂದ ವ್ಯಾಪಕವಾಗಿವೆ. ೧೨ನೇ ಶತಮಾನದಲ್ಲಿ ಕರ್ನಾಟಕ ಕಂಡ ಈ ಯುಗ ಅದ್ವಿತೀಯವಾದುದು. ಇಡೀ ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿಯೇ ಅಪೂರ್ವವಾದದು. ಏಕೆಂದರೆ ಇಡೀ ಕರ್ನಾಟಕದ ಸಂಸ್ಕೃತಿಯನ್ನು ಹಲವಾರು ಜನಪದ ಕಲಾವಿದರನ್ನು ಪೋಷಿಸಿದೆ ಅಂತಹದರಲ್ಲಿ ಈ ವೇಷಗಾರರ ಬಗ್ಗೆ ಸಂಪೂರ್ಣವಾಗಿ ಬೆಳಕು ಚೆಲ್ಲುವುದು ೧೨ನೇ ಶತಮಾನದ ವಚನದಲ್ಲಿಯೇ ಎಂಬುದು ಸ್ಪಷ್ಟವಾಗುತ್ತದೆ. ಈ ಅಂಶವನ್ನು ಕೆಳಗಿನ ವಚನಗಳ ಮೂಲಕ ಗುರುತಿಸಲಾಗಿದೆ.

ಆದ್ಯ ವಚನಕಾರರೆನಿಸಿಕೊಂಡ ಜೇಡರ ದಾಸಿಮಯ್ಯನ ವಚನಗಳಲ್ಲಿ ವೇಷಗಾರರ ವಿಷಯ ಪ್ರಸ್ತಾವ

ವೇಷವ ಹೊತ್ತ ಹಿರಿಯರು ಈಶ್ವರ ಧ್ಯಾನದಲ್ಲಿರಬೇಕು
ವೇಷವ ತೋರಿ ಗ್ರಾಸಕ್ಕಾಗಿ ಆಸೆ ಮಾಡಿ
ಲೋಗರ ಮನೆಯ ಕಾದು
ಗ್ರಾಸವ ಪಡೆದು ಉದರವ ಹೊರುವ ವೇಷವು
ವೇಶಿಯಿಂದವು ಕರಕಷ್ಟ ಕಾಣಾ ರಾಮನಾಥ.[೪೭]

ವೇಷವ ಧರಿಸಿದವರ ಮನಸ್ಸು ಶುದ್ಧವಾಗಿರಬೇಕು. ಹಣದ ಆಸೆಗಾಗಿ ವೇಷಗಳನ್ನು ಧರಿಸಬಾರದು. ಹಣದ ಆಸೆಗಾಗಿ ಆಡುವ ವೇಷ ವೇಶಿಯಂತೆ ಎಂದು ತೆಗಳಿದ್ದಾನೆ. ಅಂದರೆ ವೇಷಗಾರರ ಮನಸ್ಸು ನಿಷ್ಕಲ್ಮಶವಾಗಿರಬೇಕು. ವೇಷದ ಉದ್ದೇಶ ಸ್ಪಷ್ಟವಾಗಿ ತಿಳಿದಿರಬೇಕು ಇದು ಧರ್ಮ ಪ್ರಚಾರದ ದೃಷ್ಟಿಯನ್ನು ಸೂಚಿಸುತ್ತದೆ.

ವೇಷದ ಕೂಡೆ ವಾಸಿಗೆ ಹೊರುವವನು ಈಶ್ವರ ದ್ರೋಹಿ
ವೇಷವ ಈಶ್ವರನೆಂದು ತಿಳಿಳಿಯದವ
ಪಾಶಕ್ಕೆ ಸಿಕ್ಕಿದ ಪಶುವಿನಂತೆ ಕಾಣಾ ರಾಮನಾಥ.”[೪೮]

ವೇಷಗಾರರೇ ಧರ್ಮದ ಉಳುವಿಗಾಗಿ ಧಾರ್ಮಿಕ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಆದ್ದರಿಂದ ವೈಷ್ಣವ ಧರ್ಮ ಪ್ರಚಾರದ ವೇಷಗಾರರು ಬೇರೆ ವೀರಶೈವ ಧರ್ಮ ಪ್ರಚಾರದ ವೇಷಗಾರರು ಬೇರೆ ಇದ್ದರು. ಅದಕ್ಕಾಗಿಯೇ ದಾಸಿಮಯ್ಯನು ಈಶ್ವರನ ಅಂದರೆ ಶೈವ ಮತ ಪ್ರಚಾರ ಮಾಡದ ವೇಷಗಾರ ಹಗ್ಗಕ್ಕೆ ಸಿಕ್ಕಿದ ಪಶುವಿನಂತೆ ಎಂದು ವಿಡಂಬಿಸಿದ್ದಾರೆ.

ಬಸವಣ್ಣನವರ ವಚನದಲ್ಲಿ ವೇಷದವರನ್ನು ಕುರಿತು ಕೆಲವು ವಚನಗಳ ಪ್ರಸ್ತಾಪವಾಗಿದೆ.

....
ವೇಷಧಾರಿಯಾನು ಉದರ ಪೋಷಕ ನಾನಲ್ಲವಯ್ಯಾ
.... ಕೂಡಲ ಸಂಗಮದೇವ.”[೪೯]

ನಾನು ಹೊಟ್ಟೆಗೋಸ್ಕರ ವೇಷ ಧರಿಸಿದವನು ನಾನಲ್ಲ ನಾನು ನಿಜವಾದ ವೇಷಧಾರಿ ಎಂದಿದ್ದಾನೆ. ಡಾಂಭಿಕ ಭಕ್ತಿ ನನ್ನಲಿಲ್ಲ. ನಾನು ಬಹಿರಂಗದಲ್ಲಿ ಹೇಗಿದ್ದೇನೆಯೋ ನನ್ನ ಆತ್ಮದಲ್ಲಿಯೂ ಅದೇ ಇದೆ. ಅಂದರೆ ಇವರ ಸಮಕಾಲದಲ್ಲಿ ಶೈವ ವೇಷಗಾರರಿಗೆ ಮತ್ತು ವೈಷ್ಣವ ವೇಷಗಾರರಿಗೆ ಜಿದ್ದು ಇದ್ದಿತೆಂದು ತೋರುತ್ತದೆ. ಶೈವರೆಂದು ನಟಿಸಿ ವೈಷ್ಣವ ಧರ್ಮದ ಪ್ರಚಾರದಲ್ಲಿ ಎಷ್ಟೋ ಮಂದಿ ತೊಡಗಿದ್ದರು ಎಂದು ಸೂಚಿಸುತ್ತದೆ.

‘ವಿಕೃತ ವೇಷಧಾರಿಯನು; ಭಂಡನು ಲಜ್ಜೆ ಭಂಡನು.”[೫೦]
‘ಆನು ಭಕ್ತನಲ್ಲಯ್ಯ; ಆನು ವೇಷಧಾರಿಯಯ್ಯಾ.”[೫೧]
‘ನಿಮ್ಮ ವೇಷಧಾರಿಯ ಪಂಗುಳ ನಾನಯ್ಯ.”[೫೨]

ಈ ವಚನದ ಸಾಲುಗಳೆಲ್ಲವೂ ಮೇಲಿನ ಅರ್ಥವನ್ನೇ ಸೂಚಿಸುತ್ತವೆ. ‘ತನ್ನ ವಚನದಲ್ಲಿ ಬಳಸಿದ

'ವೇಷಧಾರಿ' ಪದಕ್ಕೆ ಟೀಕಿನ ವಚನದಲ್ಲಿ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿ ಮಾಲೆ ಅಂಗದ ಮೇಲೆ ಶಿವಲಿಂಗ ಮುಂತಾದ ಭಕ್ತಿ ಧರಿಸಿಕೊಂಡಿಪ್ಪಾತ"[೫೩] ಎಂದಿದೆ.

ಚನ್ನ ಬಸವಣ್ಣನವರ ವಚನಗಳಲ್ಲಿ ವೇಷಗಾರರನ್ನು ಕುರಿತು ಉಕ್ತವಾಗಿರುವ ಸಾಲುಗಳು ಈ ಕೆಳಗಿನಂತಿವೆ.

> ಧರೆಯ ಮೇಲೆ ಸುಳಿವ ವೇಷ ಲಾಂಛನಧಾರಿಗಳೆಯ್ದೆ
> ಹದಿನೆಂಟು ಜಾತಿಯ ಭಿಕ್ಷವನುಂಡು ಕೆಟ್ಟರು."[೫೪]

ಭೂಮಿಯ ಮೇಲೆ ವೇಷಧರಿಸಿ ಓಡಾಡುವ ಶಿವನ ಭಕ್ತರು ಕುಲ ಹದಿನೆಂಟು ಜಾತಿಯವರನ್ನು ಬೆರೆತು ಅವರ ಮಾತು ಕೇಳಿ ಕೆಟ್ಟರು. ಅವರ ತೋರಿಕೆಯ ಭಕ್ತಿ ಬೇರೆ ಮನದಾಳದಲ್ಲಿರುವ ಭಕ್ತಿ ಬೇರಾಗಿದೆ ಎಂದು ಡಾಂಭಿಕ ಭಕ್ತರನ್ನು ಸೂಚಿಸಿದ್ದಾರೆ.

> ವೇಷಧಾರಿ ಮಾತು ಕಲಿತು ಅಭಿಮಾನಕ್ಕೆ ಪರೀಕ್ಷೆಯ ಕೊಡುವಂತೆ
> ಕೂಡಲ ಸಂಗನ ನಿಲುವನರಿಯದೆ ಉಲಿಯದಿರಾ
> ಲೀಲೆಯ ಪಶುವೆ...?"[೫೫]

ವೇಷಧಾರಿಗಳು ನಾನಾಕು ಜನದ ಹತ್ತಿರ ಮಾತನಾಡಿ ಒಳ್ಳೆಯ ವಾಕ್ ಚಾತುರ್ಯವನ್ನು ಪಡೆದಿರುತ್ತಾನೆ. ಬಸವಣ್ಣನ ನಿಲುವನರಿಯದ ಅನ್ಯ ಧರ್ಮದ ವೇಷಗಾರರನ್ನು ಜರಿದಿದ್ದಾನೆ.

> ತಂಬೂರಿ ಕಿನ್ನರಿ ವಿಡಿದು ಮನೆ ಮನೆಯ ಬೇಡುವಾತ
> ಹಲವು ವೇಷವ ತೊಟ್ಟು ಆಡುವಾತ
> ನಗಾರಿ ಸಮ್ಮೇಳ ಕರ್ಣ ಕಹಳೆ ಶಂಖ ಬಾರಿಸುವಾತ
> ಅಷ್ಟಾವರಣ ಪಂಚಚಾರದಲ್ಲಿ ಅಹಂಕರಿಸುವಾತ ಅನಾಚಾರಿ"[೫೬]

ವೇಷಗಾರರು ಯಾವ ಸಂಗೀತದ ಪರಿಕರಗಳನ್ನು ಬಳಸುತ್ತಿದ್ದರೆಂದು ಈ ವಚನದಿಂದ ಮನನವಾಗುತ್ತದೆ. ಆದರೆ ವೇಷಗಾರರು ಶಂಖಾ ಊದುವುದಿಲ್ಲ. ವೈಷ್ಣವರು ಈ ಶಂಖವನ್ನು ಊದುವುದು ಹೆಚ್ಚು ಕಂಡು ಬರುತ್ತದೆ.

> ಐಶ್ವರ್ಯವುಳ್ಳವಂಗೆ ನಿಜಭಕ್ತಿ ಇಲ್ಲ
> ಡಂಬಕದ ವೇಷಧಾರಿಗೆ ನಿಜತತ್ವದ ಜ್ಞಾನವಿಲ್ಲ
> ಕುಟಿಲರ ನೆಮ್ಮದಿಗೆ ಘನಲಿಂಗದ ನೆಮ್ಮಿಗೆಯಿಲ್ಲ
> ಐಘಟದೂರ ರಾಮಲಿಂಗಲೇಶ್ವರ ಲಿಂಗ."[೫೭]

ಸಂಪತ್ತಿನ ಮದ ಇರುವವರಿಗೆ ನಿಜವಾದ ಭಕ್ತಿ ಇರುವುದಿಲ್ಲ. ಡಾಂಭಿಕವಾಗಿ ವೇಷ ಧರಿಸುವ ವೇಷಧಾರಿಗೆ ನಿಜವಾದ ಶೈವ ಭಕ್ತಿಯ ತತ್ವಜ್ಞಾನವಿಲ್ಲ. ಇಂತಹ ಆಡಂಬರದಿಂದ ಸಮಾಜದ ನೆಮ್ಮದಿ ಹೇಗೆ ಸಾಧ್ಯವೆಂಬ ನೋವು ಇವರಲ್ಲಿದೆ.

ಬಹುರೂಪ : ಅಂದರೆ ನಾನಾ ವೇಷ ಧರಿಸುವವರು ಎಂದರ್ಥವಾಗುತ್ತದೆ. ಕೆಲವು ವಚನಗಳಲ್ಲಿ 'ಬಹುರೂಪ'ದ ಬಗ್ಗೆ ಉಲ್ಲೇಖವಿದೆ. ಬಹುರೂಪಿಗಳು ಸಹ ಇಡೀ ಭಾರತದಲ್ಲಿ ಇಂದಿಗೂ ವಾಸಿಸುತ್ತಿದ್ದು, ಬಹುರೂಪಿಗಳಿಗೂ ಮತ್ತು ಬುಡಗಜಂಗಾಲರಿಗೂ ಕೆಲವು ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಬಹುರೂಪಿಗಳು ಹಾಸ್ಯಭರಿತವಾದಂತಹ ಸನ್ನಿವೇಶಗಳನ್ನು ಮಾತ್ರ ನಟಿಸುತ್ತಾರೆ. ಆದರೆ ಪ್ರಾಚೀನದಲ್ಲಿ ಇವರೆಲ್ಲ ಒಂದೇ ಆಗಿದ್ದರು.

ನುಲಿಯ ಚಂದಯ್ಯನ ವಚನದಲ್ಲಿ ಕಾಣಬಹುದು
ಗುರುವಾದಡೊ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೊ ಕಾಯಕದಿಂದಲೇ ಶಿಲೆಯ ಕುಲ ಹರಿಯುವುದು
ಜಂಗಮವಾದಡೊ ಕಾಯಕದಿಂದಲೇ **ವೇಷದ ಪಾಶ** ಹರಿಯುವುದು
ಇದು ಚೆನ್ನ ಬಸವಣ್ಣ ಪ್ರಿಯ ಚಂದ್ರೇಶ್ವರ ಲಿಂಗದ ಅರಿವು!"[೫೮]

ಕಾಯಕದಿಂದಲೇ ಡಾಂಬಿಕ ಭಕ್ತಿಯ ಕುರುಹುಗಳು ಹೊರ ಬೀಳುವವು ಎಂದು ಹೇಳಿದ್ದಾನೆ. ಅಂದರೆ ಪ್ರತಿಯೊಂದನ್ನೂ ವೇಷಕ್ಕೆ ಹೋಲಿಸುವುದನ್ನು ನೋಡಿದರೆ ವೇಷಗಾರರ ಕಲೆ ಎಷ್ಟು ಪ್ರಸಿದ್ಧವಾಗಿತ್ತು ಎಂದು ತಿಳಿಸುತ್ತದೆ.

ಬಿಚ್ಚಿ ಬಾಚಯ್ಯನ ವಚನದಲ್ಲಿ ಈ ವೇಷಗಾರರ ಪ್ರಸ್ತಾಪ:

ನಾನಾ ವೇಷವ ತೊಟ್ಟು ಆಡುವವನಂತೆ
ಬಹುರೂಪ ಬೇರಲ್ಲದೆ; ಆಡುವ ತಾನೊಬ್ಬನೆ
ಎಲ್ಲಾ ಅರ್ಪಿತ ಮುಖ ಅಲ್ಲಿಯೂ ನೀನೇ
ಏಣಾಂಕದರ ಸೋಮೇಶ್ವರ ಲಿಂಗವೇ"[೫೯]

ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ವೇಷಗಾರರು ಬಹುರೂಪಿಗಳು ಬೇರೆ ಬೇರೆ ಅಲ್ಲ ಅವರಿಬ್ಬರು ಒಂದೇ ಎಂದು. ವೇಷಗಾರನು ವಿವಿಧ ವೇಷಗಳನ್ನು ತೊಟ್ಟು ಆಡುವವನಂತೆ ಬಹುರೂಪವು ಬೇರೇ ಅಲ್ಲ ವೇಷಗಳನ್ನು ಹಾಕುವವರು ತಾವೆ ಬಹುರೂಪವನ್ನು ಧರಿಸುವರೂ ತಾವೇ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆಂದರೆ ವೇಷಗಾರರು ಬಹುರೂಪಗಳು ಒಬ್ಬರೆ ಎಂದು ನಿರ್ಧಾರವಾದಂತಾಗಿದೆ.

ಮಣಿ ಮಾಲೆಗಳ ಹಾರ ಹೊಳೆವ ಮುತ್ತಿನ ದಂಡೆ
ಎಳೆಯ ನೀಲದ ತೊಡಿಗೆಯೆನೆ ತೊಟ್ಟಿರು
ಸುಳಿದು ಮದ್ದಳೆಗಾರರೊಳಗೆ ದಂಧಳವೆನಲು
ಕುಣಿವ ಪಾಡುವ **ಬಹುರೂಪಿಗಳ** ನಾಟಕ[೬೦]

ವೇಷಗಾರರು ಹೇಗೆ ಅಲಂಕರಿಸಕೊಳ್ಳುತ್ತಿದ್ದರು ಎಂದು ವಿವರಿಸಿದ್ದಾರೆ. ಹಾಡುಗಳ ಮೂಲಕ ನಾಟ್ಯಮಾಡಿ ಆಡಿ ತೋರಿಸುವ ನಾಟಕ ಬಹುರೂಪಿಗಳದು ಎಂದು ಹೇಳಿದ್ದಾರೆ. ಬಹುರೂಪಿಗಳ ನಾಟಕ ಅಂದರೆ ನಾನಾ ವೇಷ ತೊಡುವವರು ಎಂಬರ್ಥ ನೀಡುತ್ತದೆ.

ಇಂದು ಬಂದ ಬಹುರೂಪವ ನೋಡಿರಯ್ಯ
ಗತಿಯ ಹೊದ್ದರೆ, ಮತಿಯ ಹೊದ್ದರೆ, ಸ್ಥಿತಿಯ ಹೊದ್ದರೆ
ಸ್ಥಾನವ ಹೊದ್ದರೆ, ಐವರು ಕಟ್ಟಿದ ಕಟ್ಟಳೆಯ ಮೀರಿ
ನಾನಾಡುವೆ ಬಹುರೂಪವರೇ ಕಣಪ್ರಿಯ ನಾಗಿನಾಥ
ಬಸವಣ್ಣನಿಂದ ಬದುಕಿದೆ.[೬೧]

ಇಂದು ನಾವು ಆಡುವ ವೇಷಗಳನ್ನು ನೋಡಿರಿ ಕೆಲವರ ಮಾತನ್ನು ಮೀರಿ ವೇಷಗಳನ್ನು ಆಡುತ್ತಿದ್ದೇನೆ. ಅದು ಬಸವಣ್ಣನವರ ಪ್ರಭಾವದಿಂದ ಶೈವ ಧರ್ಮವನ್ನು ಪ್ರಸಾರಮಾಡಲು ಎಂದು ಬಹುರೂಪಿ ಚೌಡಯ್ಯ ಹೇಳಿದ್ದಾನೆ.

ಇನ್ನಾಡುವೆ ಜಂಗಮ ಬಹುರೂಪ, ಅಲ್ಲಮನಂತೆ ಆಡುವೆ ಬಹುರೂಪ
ಅಜಗಣ್ಣನಂತೆ ಆಡುವೆ ಬಹುರೂಪ
ಮುಖವಾಡದಯ್ಯಗಳಂತೆ ಆಡುವೆ ಬಹುರೂಪ
ಪುರುಷಾಂಗಣದ ಮೆಟ್ಟಿ ಆಡುವೆ ಬಹುರೂಪ
ರೇಕಣಪ್ರಿಯ ನಾಗಿನಾಥ ಬಸವನಿಂದ ಬದುಕಿತೀ ಲೋಕವೆಲ್ಲಾ[೬೨]

ಇವನ ವಚನವೆಲ್ಲವೂ ಬಹುರೂಪದ ಬಗ್ಗೆಯೇ ಈ ಕಾಯಕದಿಂದಲೇ ಶರಣರ ತತ್ವಗಳನ್ನು ಪ್ರಸಾರ ಮಾಡುತ್ತಿದ್ದುದಾಗಿ ಹೇಳಿದ್ದಾನೆ. ಅಲ್ಲಮನಂತೆ, ಅಜಗಣ್ಣನಂತೆ, ಮುಖವಾಡದಯ್ಯಗಳಂತೆ ನನ್ನ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ ಎನ್ನುವ ರೀತಿಯಲ್ಲಿ ಹೇಳಿದ್ದಾನೆ.

ಎಂಬತ್ತು ನಾಲ್ಕು ಲಕ್ಷ ಬಹುರೂಪ ಚಂದ ಚಂದದಲ್ಲಿ ಆಡಿ
ಬಂಧುಗಳ ಮೆಚ್ಚಿಸ ಬಂದೆ,
ಅವರು ಬಹುರೂಪ ದಂದವನರಿಯರು
ರೇಕಣ್ಣ ಪ್ರಿಯ ನಾಗಿನಾಥನಲ್ಲಿ
ಬಹುರೂಪದಿಂದ ವಿಚ್ಚಂದವಾಯಿತ್ತು.[೬೩]

ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳ ವೇಷವನ್ನು ಚಂದ ಚಂದದಲ್ಲಿ ಆಡಿ ತೋರಿಸಿ ಅವರನ್ನು ಮೆಚ್ಚಿಸಿದೆ. ಅವರಿಗೆ ಬೇರೆ ಧರ್ಮದ ಸಾರ ಅರಿಯರು ನಾನು ಅವರಿಗೆ ಶೈವ ಧರ್ಮದ ಕುರುಹುಗಳಚನ್ನು ತಿಳಿಸಿದ್ದೇನೆ ಎನ್ನುವ ಅರ್ಥದಲ್ಲಿ

'ಇನ್ನಾಡುವೆ ಜಂಗಮ ಬಹುರೂಪ
ಕಲ್ಯಾಣವೆಲ್ಲಾ ಅರಿಯಬೇಕು
ಎನ್ನ ಬಹುರೂಪ ಕಾಮ ಹೊಯ್ದು ಕೊಂಡಿಯೆಂದಡೆ
ಪ್ರಸಾದವ ಮಾಡಿ ಕೊಟ್ಟಡೆ
ಇದು ಬಸವನ ಪ್ರಸಾದವೆಂದು ಕೈಕೊಂಡೆ ಕಾಣಾ
ರೇಕಣಪ್ರಿಯನಾಥ, ಬಸವನಿಂದ ಬದುಕಿತೀ ಲೋಕವೆಲ್ಲಾ."[೬೪]

'ಷಡು ಚಕ್ರವಳಯದೊಳಗೆ ನಾನಾಡುವೆ ಬಹುರೂಪ
ಭೂಮಧ್ಯ ಮಂಡಲ ಹೃದಯ ಕಮಲ ಮಧ್ಯದ
ಅಬ್ಜ ಸ್ವರದ ಮಣಿ ಪೂರಕದ ಮೇಲೆ ನಾಗಾಡುವೆ ಬಹುರೂಪ
ಉರಿಯುಂಡ ಕರ್ಪೂರದಂತೆ ನಾನಾಡುವೆ ಬಹುರೂಪ
ರೇಕಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆನು."[೬೫]

ಒಟ್ಟಿನಲ್ಲಿ ಇವರ ಜೀವವೇ ಬಹುರೂಪವಾಗಿದೆ. ಇಲ್ಲಿ ಬಹುರೂಪದ ಕಲೆ ಮತ್ತು ಬಹುರೂಪದ ಒಳತಿರುಳು ತನ್ನ ಬಹುರೂಪ ಉರಿಯುವ ಕರ್ಪೂರದಂತೆ ಎಂದು ಹೇಳಿದ್ದಾರೆ. ಹೀಗೆ ಬಹುರೂಪದ ಕಲೆಯನ್ನು ಶರಣರ ತತ್ವ ಪ್ರಸಾರಕ್ಕೆ ಮಾಧ್ಯಮವನ್ನಾಗಿ ಮಾಡಿಕೊಂಡುದು ಕರ್ನಾಟಕದ ಜನಪದ ಸಂಸ್ಕೃತಿಯ ಇತಿಹಾಸದಲ್ಲಿ ಒಂದು ಅಪೂರ್ವ ದಾಖಲೆಯೇ ಸರಿ.[೬೬] ಎಂದಿರುವುದು ಬಹಳ ಅರ್ಥಪೂರ್ಣವಾದಂತಮಾತಾಗಿದೆ. ೧೨ನೇ ಶತಮಾನದ ಶರಣರ ಕಾಲ ಜನಪದ ಕಲೆಗಳ ಪುನರುಜ್ಜೀವನದ ಕಾಲ. ಉಪ ಜೀವನಕ್ಕೆ ಆಧಾರವಾಗಿದ್ದ ವೃತ್ತಿ ಕಲೆಗಳನ್ನು ಅವಲಂಬಿಸಿದ ಶರಣರು, ಶರಣರ ವಿಚಾರಧಾರೆಗಳ ಸಾಮಾಜಿಕ ಪರಿವರ್ತನೆಯ ಕಾಯಕ ತತ್ವದ ಪ್ರಭಾವಕ್ಕೆ ಒಳಗಾಗಿ ಧರ್ಮಪ್ರಚಾರ ಕಾರ್ಯದಲ್ಲಿ ಭಾಗಿಗಳಾದುದು ಒಂದು ಗಮನಾರ್ಹ ಸಂಗತಿ. ಇವರ ಬಹಳಷ್ಟು ವಚನ ಬಹುರೂಪಿ ಕಾಯಕದ ಬಗ್ಗೆಯೇ ಇವೆ.

'ಜಾತಿಕಾರ' ಕುರಿತು ವಚನಗಳು : ಕುಲಕ್ಕೊಂದು ವೇಷ ಹಾಕುವುದರಿಂದ 'ಜಾತಿಗಾರರು' ಎಂದು ಕರೆದಿರುವ ಸಾಧ್ಯತೆ ಇದೆ. ಈ ಕುರಿತಾದ ವಚನಗಳ ಬಗ್ಗೆ

ಮಡಿವಾಳ ಮಾಚಿದೇವರ ವಚನ:
ಮೂರು ಮುರು ಜಡೆ ಗಡ್ಡಗಳ ಬಿಟ್ಟುಕೊಂಡು
ಡೊಂಬ **ಜಾತಿಕಾರರಂತೆ** ವೇಷವ ತೊಟ್ಟು
ಸಂಸ್ಕೃತಾದಿ, ಪ್ರಾಕೃತಾಂತ್ಯಮಾದ ನಾನಾ ಶಾಸ್ತ್ರವ ಹೇಳಿ,
ಸುಡುಗಾಡ ಸಿದ್ದಯ್ಯಗಳಂತೆ ಕುಟಿಲ ಕುಹುಕಯಂತ್ರ ತಂತ್ರಗಳ ಕಟ್ಟುತ
ಪುರಜನರ ಮೆಚ್ಚಿಸಬೇಕೆಂದು.[೬೭]

ಡೊಂಬ ಜಾತಿಕಾರರದು ಅಣಕು ಮನೋರಂಜನೆ ರೂಪದ ಅಭಿನಯ. ಇಂತಹ ಕೃತಕವಾದಂತಹ ಭಕ್ತಿಯನ್ನು ವಿಡಂಬಿಸಲು ಮೂರು ಮೂರು ಜಡೆ ಗಡ್ಡ ಬಿಟ್ಟುಕೊಂಡು ಡೊಂಬ ಜಾತಿಯ ವೇಷಹಾಕಿ ಸಂಸ್ಕೃತಿ, ಪ್ರಾಕೃತ, ನಾನಾಶಾಸ್ತ್ರವ ಹೇಳಿ ಸುಡುಗಾಡು ಸಿದ್ದಯ್ಯಗಳಂತೆ ಯಂತ್ರ ಮಂತ್ರ ಕಟ್ಟಿ ಪುರಜನಯ್ಯ ಮೆಚ್ಚಿಸುತ್ತಾ ಹೋದಂತೆ ಎಂದು ಡಾಂಬಿಕ ಭಕ್ತಿಯನ್ನು ಚಿತ್ರಿಸಿದ್ದಾನೆ.

ಮೋಳಿಗೆ ಮಾರಯ್ಯನ ವಚನ:

ಹಾಂಗಲ್ಲದೆ ಜಾತಿಕಾರನ ಕೈಯ ದೀಹದಂತೆ
ಬಾಲೆಯರ ಮನದ ಸೋಲುವೆಯಂತೆ
ಇಂತವರಾಳವಾಡಿ ಸಿಕ್ಕಿಸುವ, ಸೋಲುಗಾರರಿಗೆಲ್ಲಿದೆಯೊ ಸತ್ಯ
ನಿಃಕಳಂಕ ಮಲ್ಲಿಕಾರ್ಜುನಾ...?[೬೮]

ಬೇಟೆಗಾರನ ಕೈಯಲ್ಲಿರುವ ಆಕರ್ಷಣೆಯ ದೀಪದ ಪ್ರಾಣೆಯಂತೆ ಬಾಲೆಯ ಮನದ ಅಪಜಯದಂತೆ, ಜಾತಿಗಾರರು ಅಂದಿನ ಸಮಾಜದ ವಿಶೇಷ ಆಕರ್ಷಕರಾಗಿದ್ದರು. ಅಂದು ಮತ, ಧರ್ಮಗಳ ಬದಲಾವಣೆಯ ಕಾರ್ಯ ಈ ಜಾತಿಗಾರರು ನಿರ್ವಹಿಸುತ್ತಿದ್ದರು. ಶೈವ-ವೈಷ್ಣವ ಎರಡೂ ಧರ್ಮದಲ್ಲಿಯೂ ಇಂತಹ ಜಾತಿಗಾರರು ಇದ್ದರು ಇವರಿಬ್ಬರ ನಡುವೆ ವಾಗ್ವಾದ ನಡೆಯುತ್ತಿದ್ದಿತೆಂದು ತಿಳಿದುಬರುತ್ತದೆ.

ಕಾಡಸಿದ್ದೇಶ್ವರ ವಚನ (ವೀರಶೈವ ಷಟ್‌ಸ್ಥಲ):

ಒಬ್ಬಾನೊಬ್ಬ ಜಾತಿಹಾಸ್ಯಗಾರನು ವೇಷವ ಧರಿಸಿಕೊಂಡು
ಪುರಜನರ ಮೆಚ್ಚಿಸಿ, ತನ್ನ ಒಡಲ ಒರೆವಂತೆ
ವಿಭೂತಿ ರುದ್ರಾಕ್ಷಿ ಕಾವಿ ಕಾಷಾಂಬರ ಮುಂತಾಗಿ ವೇಷವ ಧರಿಸಿ
ಗುರು-ಹಿರಿಯರು ಜಂಗಮ ಲಿಂಗಿಗಳೆಂದು
ನಾಮವ ತಾಳಿ, ಭಕ್ತರಿಗೆ ಸದಾಚಾರ ಮಾರ್ಗವ ಹೇಳೇವು
ಸದಮಲದ ಬೆಳೆಗ ತೋರೇವು ಎಂದು
ಧನಿಕರಿದ್ದಡೆಗೆ ಬಂದು, ನಿಮಗೆ ಉಪದೇಶವ ಹೇಳಿ,
ಆ ಭಕ್ತರ ಕೈಯಲ್ಲಿ ಅನ್ನ ಅಚ್ಚಡ ಹೊನ್ನು ವಾಸ್ತವ ತೆಗೆದುಕೊಂಡು
ಆ ಜಾತಿಕಾರನ ಹಾಗೆ ಇವರು ತಮ್ಮ ಉದರಾಗ್ನಿ ಅಡಗಿಸಿಕೊಂಬುವರಲ್ಲದೆ
ಇಂತಪ್ಪ ಗುರು ಶಿಷ್ಯದ, ದೇವ ಭಕ್ತರೆಂಬು ಭಯದ
...................................ನಿರ್ಮಾಯ ಪ್ರಭವೆ[೨೮]

ವಿವಿಧ ಜಾತಿಗಳನ್ನು ಹಾಸ್ಯಮಾಡಿ ಧರ್ಮ ಪ್ರಚಾರದ ಕಾರ್ಯದಲ್ಲಿ ತೊಡಗಿದ್ದ ಬಗ್ಗೆ ಮೇಲಿನ ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಜಾತಿಹಾಸ್ಯಗಾರನು ಜಾತಿಕಾರನ ಹಾಗೆ ಶೈವ ಧರ್ಮದ ಕುರುಹಿನ ವೇಷವ ಧರಿಸಿಕೊಂಡು ಪ್ರದರ್ಶಿಸಿದಂತೆ, ಜಾತಿಕಾರರು, ಜಾತಿ ಹಾಸ್ಯಗಾರರು ಬೇರೆ ಬೇರೆ ಎಂದು ಗೊತ್ತಾಗುತ್ತದೆ. ಜಾತಿಕಾರರ ಹಾಗೆ ಬೇರೆಯವರು ಜಾತಿಹಾಸ್ಯಕಾರರು ವೇಷ ಧರಿಸುತ್ತಿದ್ದರೆಂದು ಈ ಮೇಲಿನ ವಚನದಿಂದ ಗೊತ್ತಾಗುತ್ತದೆ.

ವೇಷದ ಗುಣವನರಿಯದ ಹಾಸ್ಯಗಾರನ ಹಾಗೆ
ವಿಭೂತಿ ರುದ್ರಾಕ್ಷಿ ಕಾವಿ ಲಾಂಛನವ ಧರಿಸಿ
ತಿರುಗವರೆಲ್ಲಾ ಜಂಗಮರಲ್ಲ[೨೯]

ಜಾತಿ ಹಾಸ್ಯಗಾರರೆಂದು ಬರುವವರೆಲ್ಲ ಮೂಲ ವೇಷಗಾರರಲ್ಲ ಅವರು ವೇಷಗಾರರ ಹಾಗೆ ನಟಿಸಲು ಬಂದವರು ಅವರು ವೇಷಗಳನ್ನು ಸರಿಯಾಗಿ ನಿರ್ವಹಿಸಿದೆ ಹಾಸ್ಯಗಾರರಾಗಿರುವ ಸಂದರ್ಭಗಳೂ ಉಂಟು ಎಂಬುದಕ್ಕೆ ಮೇಲಿನ ವಚನ ಸಾಕ್ಷಿಯಾಗುತ್ತದೆ

'ಗ್ರಾಮದ ಮಧ್ಯದಲ್ಲಿ ಅವನೊಬ್ಬ,
ಜಾತಿ ಹಾಸ್ಯಕಾರನು ಬಂದು
ಡೋಲು ರಮಾವಿಯ ಹೊಡೆದು
ಜೊಬ್ಬಿಯ ರವಸದಿಂದ ಮಣ್ಣವರಿಸಿ

ರಟ್ಟೆ ಮಂಡಿಯ ತಿಕ್ಕಿ, ತೊಡೆಯ ಚಪ್ಪರಿಸಿ
ಕೋ ಎಂದು ಕೂಗಿ
ಭೂವಿಗೆ ಕೈ ಹಚ್ಚಿ, ಲಾಗದ ಮೇಲೆ ಲಾಗ ಹೊಡೆದು,
ಅಂತರ ಪುಟಕಿಯಲ್ಲಿ ಮೂರು ಹೊರಳಿಕೆಯ ಹೊರಳಿ,
ಮುಂದೆ ಬಂದು ನಿಂತು
ಮುಜುರೆಯ ಮೇಲೆ ಮುಜುರೆಯ ಹೊಡೆದು,
ಅವರ ಭಾಗಕ್ಕೆ ಮೆಚ್ಚಿ
ಶಾಲು ಶಕಲಾತಿ ಮೊದಲಾದ ವಸ್ತ್ರವಕೊಟ್ಟು,
ಕಾಲ ತೊಡರು ಮುಂಗೈ ಸರಪಳಿ
ಛತ್ರ, ಚಾಮರ, ಜಲ್ಲಿ ಮೊದಲಾದ ಚಾಜವಕೊಟ್ಟು
ಸಂತೋಷ ಪಡಿಸುವುರಲ್ಲದೆ ಇಲ್ಲೆಂಬರೆ? ಇಲ್ಲೆನ್ನರಯ್ಯ
............................ನಿರ್ಮಾಯ ಪ್ರಭುವೆ.[೨೧]

ಈ ವಚನದಲ್ಲಿ ಜಾತಿಹಾಸ್ಯಕಾರನ ಸ್ಪಷ್ಟ ನಿಲುವು ಮತ್ತು ವೇಷ ಭೂಷಣಗಳೇನೆಂಬುದನ್ನು ಹೇಳಿದ್ದಾನೆ. ಇಲ್ಲಿ ಜಾತಿಕಾರನೇ ಬೇರೆ ಜಾತಿಹಾಸ್ಯಕಾರನೇ ಬೇರೆ. ಜಾತಿಕಾರನು ಧರ್ಮ ಪ್ರಚಾರಕ್ಕಾಗಿ ವಿವಿಧ ವೇಷಗಳನ್ನು ಹಾಕುವವನು. ಜಾತಿಹಾಸ್ಯಕಾರನು ಅಂಗಸಾಧನೆಯಿಂದ ಹೀಗೆ ಡೋಲು ಡುಮಿಕಿಯ ಹೊಡೆದು, ಬೊಬ್ಬೆ ಹಾಕಿ, ಮಣ್ಣ ತಿಕ್ಕಿಕೊಂಡು, ತೊಡೆಯ ಚಪ್ಪರಿಸಿ ಲಾಗ ಹೊಡೆದು, ಲಾಗವ ಮೆಚ್ಚಿ ಹಲವಾರು ಜನರು ವಿವಿಧ ರೀತಿಯ ಉಡುಗೊರೆ ಕೊಟ್ಟ ಸಂದರ್ಭಗಳು ಇವೆ. ಆದರೆ ಜಾತಿಗಾರರ ವೇಷಭೂಷಣದ ಉದ್ದೇಶವೇ ಬೇರೆ. ಹೀಗೆ ಕಾಡಸಿದ್ದೇಶ್ವರನ ಹಲವಾರು ವಚನದಲ್ಲಿ ಜಾತಿಕಾರ-ಜಾತಿಹಾಸ್ಯಗಾರರ ಬಗ್ಗೆ ಬೆಳಕು ಚೆಲ್ಲುತ್ತದೆ.

“ಬಹುರೂಪ ಕಲೆಯ ಮೂಲ ಸ್ವರೂಪವನ್ನು, ಪ್ರವೃತ್ತಿಯನ್ನು ಕಾಯಕದ ಔನತ್ಯಕ್ಕೆ ಏರಿಸಿ. ಪರಿವರ್ತನೆಗೊಳಿಸಿದ್ದು ಶರಣರ ಸಾಂಸ್ಕೃತಿಕ ಚರಿತ್ರೆಯ ಒಂದು ಮೈಲಿಗಲ್ಲು. ಇಂಥ ವಿರಳ ವಸ್ತುಸಂಗತಿಗಳು, ಸಾಧನೆಗಳು ಕಾಲಗರ್ಭದಲ್ಲಿ ಕಾಯಕದ ಪರಿಕಲ್ಪನೆಯಿಂದ ವಿಚ್ಛೇದಿತಗೊಂಡು ಮತ್ತೆ ಭಿಕ್ಷಾವೃತ್ತಿ ಅಥವಾ ಕೇವಲ ಹೊಟ್ಟೆ ಹೊರೆಯುವ ವೃತ್ತಿಗಳಾಗಿ ಕಂಡುಬರುತ್ತಿರುವುದು ನಮ್ಮ ಆಧುನಿಕ ಬದುಕಿನ ದುರಂತಕ್ಕೆ ಒಂದು ಬಹು ದೊಡ್ಡ ಸಾಕ್ಷಿ.”[೨೨]

ಬಿಂಗೇರ ಎನಿಸಿಕೊಂಡ ವೇಷಗಾರರು : ಬೃಂಗಿ ವಂಶ ಎನ್ನುವುದಕ್ಕೆ ವೇಷಗಾರರ ವೇಷಗಳ ಹೋಲಿಕೆ ಇರುವ ಬೃಂಗಿಯ ನೃತ್ಯದ ಬಗ್ಗೆ ಹರಿಹರನ ರಗಳೆಯಲ್ಲಿ ಬಂದಿದೆ.

ಇರಲೊಪ್ಪಿತು ಬೃಂಗಿಯ ಶೃಂಗಾರಮಂ
ಸಿರಮದ್ಯದ ಲಿಂಗದ ವಿಸ್ತಾರ
ಭಾಳಂ ತೀವಿದ ಬಸಿತದ ತಿಳಕಂ
ತಾಳಕ್ಕೊಲೆದಾಡುವ ಕೈಚಳಕಂ
ಫಣಿ ಕುಂಡಲ ಮುತ್ತಿನ ಹಾರಂಗಳ

ಮಣಿ ಖಚಿತದ ರತ್ನದ ಮುದ್ರಿಕೆಗಳ
ಕೆಯ್ಯೂರಂ ಹೊಸ ವಜ್ರದ ಕಂಕಣ
ಬಯ್ಯಾರಂ ಮಿಗೆ ಗೆಜ್ಜೆಯ ಚಲ್ಲಣಂ
ವೆಸೆಯಲ್ ಸರ್ವಾಂಗದ ಹೊಸ ಬಸಿತಂ
ಮಸಗಲ್ ಕಾಲ್ತೊಡರು ಝಣ ಝಣಿತಂ
ಕೆಯ್ಯ್‌ಳಗೊಪ್ಪಲ್ ನರ್ತನ ದಂಡಂ
ಮೆಯ್ಯೊಳ ಹೊಳೆಯಲ್ ಗತಿಗಳ ತಂಡಂ
ಮೊಳೆಯಲ್ ಸರ್ವಾಂಗದೊಳೆ ಸುಗತಿಗಳ್
ಬೆಳೆಯಲ್ ತ್ರಿಭಂಗಿ ಗೊಂಡಾಕೃತಿಗಳ್
ಮುಂದುವರಿಯೆ ಮೆಚ್ಚುಗಳೋಲಗದೋಳ್[೭೩]

ಹೀಗೆ ಬೃಂಗಿಯು ಶಿವ ಪಾರ್ವತಿಯರ ಮುಂದೆ ಅಲಂಕರಿಸಿಕೊಂಡು ದಿನನಿತ್ಯ ವಿಧ ವಿಧ ವೇಷಗಳಿಂದ ಸಂತೃಪ್ತಿ ಪಡಿಸುತ್ತಿದ್ದನು ಎಂದು ಹೇಳಿದ್ದಾನೆ. ಆ ಅಲಂಕಾರವನ್ನು ನೋಡಿದರೆ ಹರಿಹರನು ವೇಷಗಾರರ ವೇಷಗಳನ್ನು ಕಂಡಿರುವಂತೆ ತೋರುತ್ತದೆ. ಈ ಸಮಯದಲ್ಲಿಯೂ ಇನ್ನೂ ಧರ್ಮ ಪ್ರಚಾರ ಬರದಿಂದ ಸಾಗಿತ್ತು ಎಂದು ಹೇಳಬಹುದು.

'ಬೃಂಗಿ'ಯು ಧರಿಸಿದ ವೇಷಗಳು ದಕ್ಷಯಜ್ಞ ಪ್ರಸಂಗ, ಗಿರಿಜೆಯ ತಪಸ್ಸಿನಲ್ಲಿದ್ದ ರೀತಿ, ಕಾಮನನ್ನು ಕಳೆದುಕೊಂಡು ರತಿಯ ಪ್ರಲಾಪ, ಹೀಗೆ ಹಲವಾರ ಶಿವಭಕ್ತರ ಕಥೆಗಳನ್ನು ಆಡಿ ತೋರಿಸಿದ್ದಾನೆ. ಈ ವೇಷಗಳನ್ನು ನೋಡಿದರೆ ವೇಷಗಾರರ ವೇಷಗಳಂತೆ ಭಾಸವಾಗುತ್ತದೆ. ಇವರು ಹೇಳುವ ಬೃಂಗಿಯ ದಂತಕಥೆಯೂ ಈ ಸತ್ಯಕ್ಕೆ ಪುಷ್ಟಿ ನೀಡುತ್ತದೆ.

ಕುಮಾರ ವ್ಯಾಸನ ಕಾವ್ಯದಲ್ಲಿ ನಾಡಾಡಿಗಳ ನಾಟಕ ಎಂದು ಪ್ರಸ್ತಾಪವಾಗಿದೆ. ನಾಡಾಡಿಗಳೆಂದರೆ ನಮ್ಮ ನಾಡಿನವರೇ ಆಡುವ ನಾಟಕ ದೇಶೀಯ ರೂಪದಲ್ಲಿರುವ ನಾಟಕ ಈ ನಾಟಕ ವೇಷಗಳನ್ನು ನೆನಪಿಗೆ ತರುತ್ತದೆ.

ನೋಡಲೀ ವ್ಯಥೆಯುಂಟೆ ಭುವನದ
ಗೂಡು ಕೃಷ್ಣನ ದೇಹವಿದು ನಾ
ಡಾಡಿಗಳ ನಾಟಕವಲ್ಲೆ ನರನಾಥ ಕೇಳೆಂದ"[೭೪]

ಖೇಡ ನಾದನ ಜಾತರಿಪು ಮಾ
ತಾಡಿಸಿದನಹಿ ಪತಿಯನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ[೭೫]

೧೭ನೇ ಶತಮಾನದಲ್ಲಿಯೂ ಈ ವೇಷಗಾರರು ಇದ್ದರು ಎನ್ನುವುದಕ್ಕೆ ಪುರಾವೆ. ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯ ಕಾವ್ಯದಲ್ಲಿ ಬಹುರೂಪಕಲೆಯ ಬಗೆಗೆ ಪ್ರಸ್ತಾಪವಾಗಿದೆ.

ಭೈರೂಪ ದಾಟಗಳ
ಸಂದಣಿ ಹಾಸ್ಯ ರಸಗಳಿಂದ ಮೆರೆದು
ದಂದಿನ ಸಭೆಯರ್ತಿಯಲಿ[೬೬]

ವಿವಿಧ ವೇಷಗಳೆನಿಸಿಕೊಂಡ ಬಹುರೂಪ ಕಲೆಯು ಹಾಸ್ಯ ರಸಗಳಿಂದ ಕೂಡಿಸಿ ರಾಜಸಭೆಯನ್ನು ತೃಪ್ತಿಪಡಿಸುತ್ತಿದ್ದರು ಎಂದು ಹೇಳಿರುವುದನ್ನು ಗಮನಿಸಿದರೆ ಒಂದು ಕಾಲದಲ್ಲಿ ಈ ಕಲೆ ರಾಜ ಮಹಾರಾಜರ ಆಶ್ರಯ ಪಡೆದಿರುವುದೂ ತಿಳಿದುಬರುತ್ತದೆ. ಕಾಲಮಾನದ ಗತಿಯಲ್ಲಿ ಜನರನ್ನು ಮೆಚ್ಚಿಸುತ್ತಾ ತಮ್ಮ ವೇಷಗಾರಿಕೆಯ ವೃತ್ತಿಯನ್ನು ಬದುಕಿಸುತ್ತಾ ತಾವು ಬದುಕುತ್ತಾ ಬಂದಿದ್ದಾರೆ ಎಂದು ಹೇಳಬೇಕಾಗುತ್ತದೆ.

ಇತರೆ ಕಡೆ ವೇಷಗಾರರ ಪ್ರಸ್ತಾಪ :

ನಟನೆ, ಹಾಡುಗಾರಿಕೆ, ವಾಚಿಕಾಭಿವ್ಯಕ್ತಿಯಲ್ಲಿ ನುರಿತ ಒಬ್ಬ ನಟ ಅನೇಕ ಪಾತ್ರಗಳನ್ನು ಧರಿಸಿ ಪ್ರೇಕ್ಷಕರಿಗೆ ಮನರಂಜನೆಯನ್ನು ನೀಡುತ್ತಾನೆ. ನೃತ್ಯ ಶಾಸ್ತ್ರವನ್ನು ಬರೆದವರು ಬಹುರೂಪ ಒಂದು ಜನಪದ ನೃತ್ಯ ರೂಪವೆಂದು ವರ್ಗೀಕರಿಸಿದ್ದಾರೆ. ಕಾಕತೀಯರ ಕಾಲದ ಜಾಯ ಸೇನಾನಿ ತನ್ನ 'ನೃತ್ಯ ರತ್ನಾವಳಿ' ಎಂಬ ನೃತ್ಯ ಶಾಸ್ತ್ರ ಗ್ರಂಥದಲ್ಲಿ ಬಹುರೂಪಿಗಳ ಲಕ್ಷಣಗಳನ್ನು ಹೇಳಿದ್ದಾರೆ. (ಇದರ ಕಾಲ ೧೨೫೩) ಈ ಕೃತಿಯ ಕನ್ನಡ ಅನುವಾದ ಹೀಗಿದೆ.

"ಲೋಕವು ಬಹುರೂಪಿಯಾಗಿದೆ. ವೇಷ, ಚೇಷ್ಟೆ, ಭಾಷೇ ಮುಂದಾವುಗಳಿಂದ ಆಯಾಯ
ರೂಪವನ್ನು ಪ್ರದರ್ಶಿಸುವುದರಿಂದಾಗಿ ಬಹುರೂಪವೆಂದು ಕರೆಯಲ್ಪಡುತ್ತದೆ. ॥೧೪೯॥
ರಂಜಿಸುವವನೂ, ಮಂಜುಲವಾದ ಮಾತನಾಡುವವನು? ಯುಕ್ತಿಯುತವಾದ ಮಾತು ॥೧೫೦॥
ಗಳನ್ನು ಕಲಿಸುವವನೂ ಹಾಗೂ ಆರೋಗ್ಯವಂತನೂ ಕೈವಾರದಲ್ಲಿ ಕೋವಿದನಾದವನು ॥೧೫೧॥
ಒಳ್ಳೆಯ ಹಸ್ತರೇಖೆಯುಳ್ಳವನೂ, ರಸಿಕನೂ, ರೂಪವಂತನೂ, ಭಾವನಾ ಶಕ್ತಿಯುಳ್ಳ
ವನೂ, ಯುವಕನೂ, ಅತಿ ಎತ್ತರವಿಲ್ಲದವನೂ, ಅತಿ ಗಿಡ್ಡನಲ್ಲದವನೂ ॥೧೫೧॥
ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಮತ್ತು ಇತರ ದೇಶ ಭಾಷೆಗಳಲ್ಲಿ ದಕ್ಷನಾದವನೂ, ಸಭ್ಯತೆ
ಯನ್ನು ತಿಳಿದವನೂ, ಬಲಿಷ್ಠನೂ, ಶ್ರಮವನ್ನು ಗೆದ್ದವನೂ ॥೧೫೨॥

ಬಹು ಬೇಗ ವೇಷ ಬದಲಿಸುವವನೂ, ಸಂದರ್ಭಕ್ಕೆ ತಕ್ಕ ಹಾಗೆ ಮಾತನಾಡುವವನೂ, ಓದುವವನೂ, ತನಗೆ ಸಮಾನರಾದ ಅನುಚರರಿಂದ ಕೂಡಿದವನೂ, ವಿವಿಧ ಪಾತ್ರಗಳನ್ನು ಧರಿಸುವವನೂ ಮೀಸೆಯನ್ನು ತಲೆಯನ್ನು ಬೋಳಿಸಿಕೊಂಡವನೂ. ॥೧೫೩॥

ಮಧುರವಾದ ಧ್ವನಿ ಶರೀರವುಳ್ಳವನು, ಈ ಎಲ್ಲಾ ಗುಣಗಳುಳ್ಳವನು ಬಹುರೂಪಿಯೆಂದು ಕರೆಯಲ್ಪಡುತ್ತಾನೆ. ಈ ಗುಣಗಳೆಲ್ಲವು-ಕ್ಷಾರವು ಬಿಟ್ಟು-ಇದ್ದ ಸ್ತ್ರಿ ಕೂಡ ಆಗಬಹುದು. ॥೧೫೪॥

ಸ್ವಾತಿಕಾಭಿನಯವನ್ನು ಬಿಟ್ಟು, ಲೋಕಧರ್ಮವನ್ನು ಆಶ್ರಯಿಸಿ ಮೂರು ವಿಧವಾದ ಅಭಿನಯದಿಂದ, ಹಾವಭಾವಗಳಿಂದ ಅಲಂಕೃತವಾದ ॥೧೫೫॥

ಎರಡು ಕಾಲಿನ, ನಾಲ್ಕು ಕಾಲಿನ, ಕಾಲು ಇಲ್ಲದ ಸಜೀವ ವಸ್ತುಗಳ ಅಭಿನಯದಿಂದ ಎಲ್ಲಾ ವ್ಯಾದಗಳ ಜೊತೆಗೂ ಪಾತ್ರವು ಮೊದಲು ಪ್ರವೇಶ ಮಾಡಬೇಕು. ||೧೪೬||

ವಾದ್ಯ ಸಹಿತವಾದ ಪಾಠಗಳಿಂದಲೂ, ನೃತ್ಯಗಳಿಂದಲೂ ಆಟ ಮನೋಹರವಾಗಿರಬೇಕು; ರಾಜವಂಶದ ಬಗ್ಗೆ ಆಗಲಿ(?) ಲೋಕ ಪ್ರಸಿದ್ಧನಾದ ಚರಿತ್ರೆಯೇ ಆಗಲಿ ಅಭಿನಯಿಸಬೇಕು. ||೧೪೭||

ನಾಟ್ಯದಲ್ಲಿ ಪ್ರತ್ಯೆಕ್ಷವಾಗಿ ತೋರಿಸಲಾಗದ ವಸ್ತುವನ್ನು ಇಲ್ಲಿ ಕೃತ್ರಿಮವಾಗಿ ಮಾಡಬೇಕು(?) ಅತ್ಯಂತ ಗ್ರಾಮ್ಯವಾದ ಭಾಷೆಯಿಂದ ಕೂಡಿದ, ಸಭ್ಯ ಜನರಿಗೆ ಇಷ್ಟವಾಗದ ವಿಷಯವುಳ್ಳ, ಬಹುರೂಪ ಸಮ್ಮತವಾದುದ್ದಲ್ಲ(?) ||೧೪೮||[೭೭]

ಬಹುರೂಪಿಯೆನಿಸಿಕೊಂಡ ವೇಷಗಾರನು ಹೇಗಿರಬೇಕು, ಬಹುರೂಪ ಎಂದರೆ ಹೇಗಿರಬೇಕು. ಬಹುರೂಪಿಯ ಅರ್ಹತೆ, ಲಕ್ಷಣ, ಅವನು ತೋರಿಸುವ ವೇಷದ ವಸ್ತು ಯಾವುದಿರಬೇಕೆಂದು ಬಹಳ ವಿವರವಾಗಿ ವಿಶ್ಲೇಷಿಸಿದ್ದಾನೆ. ಅತ್ಯಂತ ಗ್ರಾಮ್ಯ ಭಾಷೆಯಿಂದ ಕೂಡಿದ, ನೆರೆದ ಜನರಿಗೆ ಇಷ್ಟವಾಗದ ಕಥಾ ಭಾಗಗಳನ್ನು ಪ್ರದರ್ಶಿಸಬಾರದೆಂದು ಬಹುರೂಪಗಾರರಿಗೆ ಕಿವಿ ಮಾತೊಂದನ್ನು ಕೊನೆಗೆ ಹೇಳಿದ್ದಾನೆ. ಈ ವೇಷಗಾರಿಗೆ ಕಲೆ ಎನ್ನುವುದು ಒಂದು ತಪಸ್ಸು ಇದ್ದಂತೆ ಎಂದು ಗೊತ್ತಾಗುತ್ತದೆ. ಇದರ ಜೊತೆಗೆ ನೃತ್ಯ ಗ್ರಂಥದಲ್ಲಿ ಇತರ ದೇಶೀ ರೂಪದ ಜನಪದ ಪ್ರಭೇದಗಳನ್ನೂ ಹೆಸರಿಸಿ ವಿವರಿಸಿದ್ದಾನೆ.

‘ಕರ್ನಾಟಕಾಂಧ್ರ ಯಕ್ಷಗಾನ ಸಮೀಕ್ಷೆ’ಯಲ್ಲಿ ಆಂಧ್ರಪ್ರದೇಶದಲ್ಲಿ ಹಲವಾರು ಜಾನಪದ ಕಲಾ ಪ್ರಕಾರಗಳು ಜೀವಂತವಾಗಿದ್ದರ ಬಗ್ಗೆ ವಿವರಿಸಿದ್ದಾನೆ. ಪಾಲ್ಕುರಿಗೆ ಸೋಮನಾಥನ ಬಸವ ಪುರಾಣ ಮತ್ತು ಪಂಡಿತಾರಾಧ್ಯ ಚರಿತ್ರೆಯಲ್ಲಿ ಸಮಕಾಲೀನ ಕಾಲದಲ್ಲಿ ಆಂಧ್ರದಲ್ಲಿ ಪ್ರಚಾರದಲ್ಲಿದ್ದ ಜಾನಪದ ಕಲೆಗಳ ಬಗ್ಗೆ ಅಲ್ಲಲ್ಲಿ ಪ್ರಸ್ತಾಪವಾಗಿದೆ. ಅದರಲ್ಲಿ ಈ ಬಹುರೂಪ, ಹಗಲುವೇಷ, ಗೊಂಬೆಯಾಟಗಳ ಬಗ್ಗೆ ಹೇಳಿರುವದಲ್ಲದೆ, ಆ ಕಾಲದಲ್ಲಿ ತ್ರಿಪುರ ವಿಜಯ, ಕಾಮ ದಹನ, ಅರ್ಧನಾರೀಶ್ವರ, ಅಂಧಕ ಗಂಧ, ಗಜಾಸುರ ವಧೆ, ದಕ್ಷಾಧ್ವರ ಧರಿಂಸ, ಕ್ಷೀರ ಸಾಗರ ಮಂಥನ, ಸಿರಿಯಾಳ ಚರಿತ್ರೆಗಳನ್ನು ಅಭಿನಯಿಸುತ್ತಿದ್ದರೆಂದು ಹೇಳಿದ್ದಾನೆ. ಶಿವರಾತ್ರಿಯ ದಿನ ಶ್ರೀ ಶೈಲದಲ್ಲಿ ಪ್ರವಾಸಿಗರ ವಿನೋದಕ್ಕಾಗಿ ಗಂಧರ್ವ ಯಕ್ಷ, ವಿಧ್ಯಾದರ ವೇಷಗಳನ್ನು ಧರಿಸಿ ಹಾಡುವವರು, ಪ್ರಚನ್ನ ವೇಷಗಳನ್ನು ಧರಿಸಿ ಅಭಿನಯಿಸುವರು ಇದ್ದರೆಂದು ಸೋಮನಾಥ ಪಂಡಿತಾರಾಧ್ಯ ಚರಿತ್ರೆಯ ಪ್ರಕರಣದಲ್ಲಿ ಹೇಳಿದ್ದಾನೆ.[೭೮]

ಹನ್ನೆರಡು, ಹದಿಮೂರನೆಯ ಶತಮಾನದ ಕಾಲಕ್ಕೆ ಸೇರಿದ ಈ ಕವಿಯ ಗ್ರಂಥಗಳಿಂದ ಆ ಕಾಲದಲ್ಲಿ ದೇಸಿ ನಾಟಕ, ವೇಷದಂತಹ ಕಲೆಗಳು ಪ್ರಚಲಿತದಲ್ಲಿದ್ದುವೆಂದು ಸ್ಪಷ್ಟವಾಗುತ್ತದೆ. ಆಂಧ್ರಪ್ರದೇಶದಲ್ಲಿಯೂ ವೇಷಗಾರರು ಇದ್ದರೆಂಬುದಕ್ಕೆ ಇದು ಸ್ಪಷ್ಟ ನಿದರ್ಶನ.

ಡಾ ಬಸವರಾಜ ಮಲಶೆಟ್ಟಿಯವರು ‘ಉತ್ತರ ಕರ್ನಾಟಕದ ಬಯಲಾಟಗಳು’ ಎಂಬ ಕೃತಿಯಲ್ಲಿ ವೇಷಗಾರರು-ಬಹುರೂಪಿಗಳು ಬೇರೆ ಬೇರೆ ಎಂದು ಹೇಳಿದ್ದಾರೆ. “ಹೊರ ನೋಟಕ್ಕೆ ವೇಷಗಾರರು ಮತ್ತು ಬಹುರೂಪಿಗಳು ಒಂದೇ ವೃತ್ತಿಯವರಾಗಿ ಕಂಡರೂ ಅವರಿಬ್ಬರ ವೃತ್ತಿ ಪರಂಪರೆಗಳಲ್ಲಿ ಸಾಕಷ್ಟು

ವ್ಯತ್ಯಾಸಗಳಿವೆ. ಕರ್ನಾಟಕದಲ್ಲಿ ಒಂದು ಕಾಲಕ್ಕೆ ಸಾಕಷ್ಟು ಪ್ರಮಾಣದಲ್ಲಿದ್ದ ಬಹುರೂಪಿಗಳು ವೇಷಗಾರರಷ್ಟು ಸಾಧಾರಣ ವರ್ಗದವರಲ್ಲ. ಇಂದು ಬಹುರೂಪಿಗಳು ತಮ್ಮ ವೃತ್ತಿ ವೈಶಿಷ್ಟ್ಯ ಕಳೆದುಕೊಂಡು ವೇಷಗಾರರ ಸಂಪ್ರದಾಯದಲ್ಲಿ ಬೆರೆತಿರುವ ಸಾಧ್ಯತೆಯೂ ಇದೆ" ಎಂದು ಹೇಳಿದ್ದಾರೆ. ಆದರೆ ನಾವು ಈ ಹಿಂದೆ ಎಲ್ಲಾ ಸಾಹಿತ್ಯಗಳನ್ನು ಅವಲೋಕಿಸಲಾಗಿ ಪ್ರಾದೇಶಿಕವಾಗಿ, ಕಾಲಮಾನಕ್ಕೆ ತಕ್ಕಂತೆ ಕರೆದಿರಬಹುದಾದ ಪರ್ಯಾಯ ನಾಮಗಳೇ ಹೊರತು ಬಹುರೂಪಿಗಳು-ವೇಷಗಾರರು ಬೇರೆ ಬೇರೆ ಅಲ್ಲ.

ದಾಸನೂರು ಕೂಸಣ್ಣನವರ 'ಶೋಷಿತ ಜಂಗಮರ ಮೀಸಲಾತಿ' ಈ ಹೊತ್ತಿಗೆಯಲ್ಲಿ 'ಬುಡಗ ಜಂಗಮ'ರೆಂದು ಕರೆಯಿಸಿಕೊಳ್ಳುವ ವೇಷಗಾರರ ಬಗ್ಗೆ ಮತ್ತು ಇಂದು ಲಿಂಗಾಯತರಗಿಂತಲೂ ಆಗ್ರಸ್ಥಾನದಲ್ಲಿರುವ ಅಯ್ಯಾಚಾರದ ಜಂಗಮರಲ್ಲಿರುವ ಮೀಸಲಾತಿಯ ದುರ್ಬಳಿಕೆಯ ಬಗ್ಗೆ ಬಹು ಕಾಳಜಿಯಿಂದ ಮೀಸಲಾತಿ ಯಾರಿಗೆ ಸಿಗಬೇಕು ಎನ್ನುವುದರ ಸ್ಪಷ್ಟ ವಿವರಣೆಯನ್ನು ಆಧಾರಗಳ ಸಹಿತ ನೀಡಲು ಪ್ರಯತ್ನಿಸಿದ್ದಾರೆ.

ಕರ್ನಾಟಕ ಜಾನಪದ ವಿಶ್ವಕೋಶದಲ್ಲಿ 'ಬಹುರೂಪಿಗಳು' ಮತ್ತು 'ಬುರ್ರಾ ಕಥೆಗಾರರು' ಎಂಬ ಶಿರೋನಾಮೆಯೊಡನೆ ಇರುವ ಲೇಖನವು ವೇಷಗಾರರು ಅಲೆಮಾರಿ ಬುಡಕಟ್ಟಿನ ಜನ. ಇವರನ್ನು ವೇಷಗಾರರೆಂತಲೂ ಕರೆಯುತ್ತಾರೆ. ಇವರು ಆಂಧ್ರ ಮತ್ತು ಕರ್ನಾಟಕದ ಗಡಿಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಇವರ ವೇಷ ಭೂಷಣ ಮತ್ತು ಸಂಗೀತ ವಾದ್ಯಗಳನ್ನು ಹೇಗೆ ತಯಾರಿಸಿಕೊಳ್ಳುತ್ತಾರೆ. ಇವರ ಉಡುಪು ಹೇಗಿರುತ್ತದೆ. ಒಟ್ಟಿನಲ್ಲಿ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸುತ್ತದೆ.

ಬುರ್ರಾಕಥಾ ಮೇಳದವರ ಬಗ್ಗೆಯೂ ಸಂಕ್ಷಿಪ್ತವಾದ ವಿವರಣೆಯ ಮೂಲಕ ಇವರನ್ನು ಪರಿಚಯಿಸಿದ್ದಾರೆ. ಈ ಕಲೆಯ ಮೂಲ ಆಂಧ್ರಪ್ರದೇಶ. ಬುಡಗ ಜಂಗಾಲರ ಒಂದು ಉಪ ಪಂಗಡ. ಬುರ್ರ ಎಂದರೆ ಬುರುಡೆ ದುಂಡಾಗಿ ಟೊಳ್ಳಾಗಿರುವ ವಸ್ತುವನ್ನು ಬುರಡೆ ಎನ್ನುತ್ತಾರೆ. ಈ ಮೇಳಕ್ಕೆ ತಂಬೂರಿ, ಗಮ್ಮಟೆ ಮುಖ್ಯ. ಈ ಕಲಾವಿದರು ಇಬ್ಬರು ಅಥವಾ ಮೂವರು ಇರುತ್ತಾರೆ. ಮುಖ್ಯ ಕಥೆಗಾರ ಮಾತ್ರ ಶೃಂಗಾರವಾಗಿರುತ್ತಾನೆ. ಈ ಕಥೆಗಳನ್ನು ತಂದಾನ ಕಥಲು ಎಂತಲೂ ಕರೆಯುತ್ತಾರೆ.

ಕರ್ನಾಟಕ ಅಕಾಡೆಮಿಯ ಹೊರತಂದಿರುವ ಉಪ ಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ ಹಗಲುವೇಷದವರ ಸಂಸ್ಕೃತಿ ಸೇರಿದ್ದು, ಈ ಪುಸ್ತಕದಲ್ಲಿ ಈ ಜನಾಂಗದ ಹಿನ್ನೆಲೆ. ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಆಚರಣೆ ಮತ್ತು ಕಲೆ ಪ್ರದರ್ಶನಾತ್ಮಕ ಕಲೆಗಳು, ಧಾರ್ಮಿಕ ಆಚರಣೆಗಳು, ಕೌಟುಂಬಿಕ ವ್ಯವಸ್ಥೆ, ಭಾಷೆ, ಸಾಹಿತ್ಯ, ಕ್ರೀಡೆ...ಹೀಗೆ ಕೆಲವು ವಿಷಯಗಳ ಕುರಿತು ಮಾಹಿತಿಯನ್ನು ನೀಡಿದ್ದು ಇನ್ನೂ ಮುಖ್ಯವಾದ ಎಷ್ಟೋ ವಿಷಯಗಳು ನುಸುಳಿ ಹೋಗಿದ್ದರೂ, ಇವರಿಗೆ ಸಿಕ್ಕ ಸಮಯ ಮತ್ತು ಈ ಜನಾಂಗವನ್ನು ಗುರುತಿಸಿರುವುದು ಅಪರೂಪ ಮತ್ತು ಮಹತ್ವದ್ದಾಗಿದೆ.

೩.೫.೬ ಸಂಶೋಧನೆ ಪ್ರಬಂಧ

ಎಂ.ಬಿ. ಹೊಸಮನಿಯವರು 'ಕರ್ನಾಟಕದಲ್ಲಿ ವೇಷಗಾರರು' ಎನ್ನುವ ವಿಷಯದ ಮೇಲೆ ನಡೆಸಿದ ಅಧ್ಯಯನ ಬಹಳ ಮಹತ್ವದ್ದು, ಈ ಹೊತ್ತಿಗೆಯು ಆ ಕುರಿತು ದೀರ್ಘವಾಗಿ ಅಧ್ಯಯನ ನಡೆಸಿದ ಮೊದಲನೆಯ ಕೃತಿಯಾಗಿದೆ. ಕರ್ನಾಟಕ ರಾಜ್ಯದಲ್ಲಿರುವ ವೇಷಗಾರರನ್ನು ಕಂಡು ಸಂದರ್ಶಿಸುವ ಮೂಲಕ ಮಾಹಿತಿ ಸಂಗ್ರಹಿಸಿ ಸಿದ್ಧಪಡಿಸಿದ ಮಹಾಪ್ರಬಂಧವಾಗಿದೆ. ಸಮುದಾಯದ ಅಧ್ಯಯನದ ಅಗತ್ಯ ಮತ್ತು ಮಹತ್ವ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಜನಾಂಗದ ಮೂಲ, ಜೀವನ ವಿಧಾನ, ವಿಧಿ ವಿಧಾನಗಳು, ಕಲೆ, ಸಮಾರೂಪ ಮತ್ತು ಅನುಬಂಧ ಜೊತೆಗೂಡಿದೆ. ಎಲ್ಲಿಯೂ ಪ್ರಕಟವಾಗದ, ಯಾರೂ ಸಂಶೋಧನೆ ಮಾಡದ ಅನೇಕ ವಿಷಯಗಳು ಅವರಿಂದ ಬೆಳಕು ಕಂಡಿವೆ. ಮತ್ತು ಇವರ ಸಾಂಸ್ಕೃತಿಕ ಅಂಶಗಳ ಸ್ಥೂಲ ಪರಿಚಯವಾದಂತಾಗಿದೆ. ಈ ಜನಾಂಗದ ಕುರಿತು ಬಳ್ಳಾರಿ ಮತ್ತು ಆಂಧ್ರ ಗಡಿಭಾಗದಲ್ಲಿ ಪ್ರಾದೇಶಿಕವಾಗಿ ಅಧ್ಯಯನ ನಡೆದಿಲ್ಲದಿರುವುದು ಕಂಡು ಬಂದಿತು. ಮತ್ತು ವಿಶಿಷ್ಟವಾಗಿ ಈ ಪ್ರದೇಶದಲ್ಲಿಯೇ ಈ ಜನಾಂಗ ಹೆಚ್ಚು ವಾಸಿಸುವುದರಿಂದ ಈ ಪ್ರದೇಶದಲ್ಲಿ ಅಧ್ಯಯನ ನಡೆಸಿದರೆ ಎರಡೂ ರಾಜ್ಯದಲ್ಲಿ ಸಾಂಸ್ಕೃತಿಕವಾಗಿ ಈ ಸಮುದಾಯದ ಅಧ್ಯಯನ ನಡೆಸಿದಂತಾಗುತ್ತದೆಂದು **ಬಳ್ಳಾರಿ ಮತ್ತು ಆಂಧ್ರ ಗಡಿಭಾಗದ ಹಗಲುವೇಷಗಾರರು; ಒಂದು ಅಧ್ಯಯನ** ಎಂಬ ವಿಷಯ ಕೈಗೆತ್ತಿಕೊಂಡು ಕ್ಷೇತ್ರಕಾರ್ಯ ಕೈಗೊಂಡು, ಸಂಶೋಧನೆಯಲ್ಲಿ ತೊಡಗಬೇಕಾಯಿತು, ಆದರ ಫಲಶೃತಿಯೇ ಈ ಮಹಾಪ್ರಬಂಧವಾಗಿದೆ.

೩.೬. ಶಾಸನಗಳು

ಪ್ರಾಚೀನ ವಿಷಯವನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಾಗ ಶಾಸನಗಳು ಬಹು ಮುಖ್ಯವಾದ ಆಧಾರವಾಗುತ್ತದೆ. ಅದೇ ರೀತಿ ಈ ಸಮುದಾಯದ ಅಧ್ಯಯನ ಕೈಗೊಂಡಾಗ ಶಾಸನ ಅಲ್ಪ ಮಟ್ಟಿಗಿನ ಆಧಾರವನ್ನು ನೀಡ ಬಲ್ಲುವಾಗಿವೆ. ಪ್ರಸ್ತುತ ಲಭ್ಯವಿರುವ ಕೆಲವು ಶಾಸನಗಳು.

ಶಿಲಾ ಶಾಸನ : ಪಟ್ಟದಕಲ್ಲಿನ ಶಾಸನವೊಂದು ಹೀಗೆ ತಿಳಿಸುತ್ತದೆ. ವಿಜಯಾದಿತ್ಯ ಭಟಾರರಾಗಾನ್ಧರ್ವರ್ಗ್ಗೆ ನಿರಿಸಿದ ಪೂರ್ವ ಮರ್ಯ್ಯಾದೆಗಳಾನ್ ಶ್ರೀವಿಕ್ರಮಾದಿತ್ಯ ಭಟರಾರಾಲೋಕ ಮಹದೇವಿಯರ್ ಗಾನ್ಧರ್ವ್ವರ್ಗ್ಗೆ ನಿತ್ತರ್ ಇದಾನಳಿವೊನ್ ಕೊನ್ಧಲೋಕಕ್ಕೆ ಸನ್ದೋನಕ್ಕು ಎರೆಯಿಡಿ ಶ್ರೀಗುಪ್ಪ ದುಗ್ಗಡಿ ದುಗ್ಗಮಾರ ಇದಾಪಡೆದೋರ್ ಎಂದಿದೆ. ಸೀತಾರಮ್ ಜಾಗೀರದಾರ್ ಅವರು "ಇಲ್ಲಿನ ಗಾನ್ಧರ್ವ್ವರೆಂದರೆ ನಾಡಿನ ಈ ಭಾಗದಲ್ಲಿ ಇಂದಿಗೂ ವೇಷ ಕಟ್ಟಿ ಆಟವಾಡುವ ವೇಷಗಾರರು, ಬೀದಿ ನಾಟಕಗಾರರು, ಈ ಸಮುದಾಯವರನ್ನು ಗಾಂಧರ್ವರೆಂದು ಇಂದಿಗೂ ಹೇಳಲಾಗುತ್ತದೆ."[೬೦] ಎಂದಿದ್ದಾರೆ. ಆದರೆ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ.

ತಾಮ್ರ ಶಾಸನ :

ಪರ್ವತ ಸಿಂಹಾಸನಂ
ಶ್ರೀ ಜಯ ವತ್ಸದಾರಯ ತುರಾಮ ವೆ
ರಾಗ್ಯ ಸಿಂಗಾನನಾದ ಸ್ಕಾರ ಜಗದ್ಗುರು
ಚರ ಪಟ್ಟಾಧ್ಯಕ್ಷ ಬಿಧ್ಸನ ಲಿಂಗ ಶಿವಾ
ಚಾರ್ಯಯ ದಾಸ್ಕಯುಲೂರಿ ಅಧಿಕಾರ
ಸ್ಥಾನಮುನುಂಚಿ
ನಿಜಾಂಯಿಲಾಕ ವನಪರ್ತಿ ಸಂಸ್ಥಾನ್ ಕ್ರಿಷ್ಣಾರೆಡ್ಡಿ
ಪ್ಯಾಟ ಗ್ರಾ | ಮ ಮುಂದುವುಂಡು ಗಣಾಯಿತಿ ಜಂಗಾಲು
ಕಲ್ಯಾಣಂ ರಾ | ಮಲಿಂಗಂಕು ಯಿಚ್ಚಿನ

(ಹುಕ್ಕುಂ)

ಯಿಮ್ಮೆಂತ್ಕೇಲಯಟಂ ಷಂಬಾದ್ ಬಂಗಾರಿ ನೀಲಕಂಟ
ವು ಸ್ವಾಮಿ ಇಚ್ಚಿನ ಬಿರುದಲು ರೂಪು ರುದ್ರಾಕ್ಷಿ ಕುಂಕು
ಮ ಪಸುಪು ಬಸ್ಮಂ ಅಡ್ಡಬೊಟ್ಟು ವೀರಗಂಧಂ ಮೀರ್ನ
ಮುನಗಾರ ತೋಲಂಗುರ್ಬ ವೇಷಂ ಧರಿಂಚಿನಯಿಜ್ಞಿಯೆವರ್ನು
ಆಕ್ಷೇಪಿಂಚ ಕೂಡದು ಅಟ್ಲು ಅಕ್ಷೇಪನ ಚೇಸಿನಟ್ಲು ಆ
ಯಿತೆ ಸಮ(ಂ) ಸ್ಥಾನ ಮುನಕು ತೆಲಪವೆಲೆನ್ನು
ಕುರುವಾಳ್ಳುಗಾನಿ ಗೊಲ್ಲುಳ್ಳುಗಾನಿ ಬಿಂಗಿಯಾಳ್ಳನುಯಯ್ಯವಲೆನು ||೮

ಈ ತಾಮ್ರ ಶಾಸನ ಅಧಿಕಾರ ಪತ್ರವಾಗಿದೆ. ತೆಲುಗು ಭಾಷೆಯಲ್ಲಿದೆ. ಅದರ ವಿವರಣೆ ಹೀಗಿದೆ.

ಶ್ರೀ ಜಯವತ್ಸ ದಾರಾಯ ತುರಾಮ ವೈರಾಗ್ಯ ಸಿಂಹಾಸನ ನಾದ ಸ್ಕಾರ ಜಗದ್ಗುರು ಚರ ಪಟ್ಟಾಧ್ಯಕ್ಷ ಬಿಧ್ಸನಲಿಂಗ ಶಿವಾಚಾರ್ಯಯ ದಾಸ್ಕಾಯ ಲೂರಿ ಅಧಿಕಾರ ಸ್ಥಾನದಿಂದ. ನಿಜಾಂ ಇಲಾಖೆಯ ವನಪರ್ತಿ ಸಂಸ್ಥಾನದ ಕ್ರಿಷ್ಣಾರೆಡ್ಡಿ ಪೇಟೆ ಅಥವಾ ಗ್ರಾಮದಲ್ಲಿರುವ ಗಣಾಯಿತಿ 'ಜಂಗಾಲು' ಕಲ್ಯಾಣಂ ರಾಮಲಿಂಗಂಗೆ ಕೊಟ್ಟ ಹಕ್ಕು. ಯಿಮ್ಮಂತ್ಕೇಲಯ ಮಠದಿಂದ ಷಂಬಾದ್ ಬಂಗಾರಿ ನೀಲಕಂಠಸ್ವಾಮಿ ಕೊಟ್ಟ ಬಿರುದು, ರೂಪು, ರುದ್ರಾಕ್ಷಿ, ಕುಂಕುಮ, ಅರಿಷಿಣ, ವಿಭೂತಿ, ಅಡ್ಡಬೊಟ್ಟು, ವೀರ ಗಂಧ, ಮಿಂಚು, ನಗಾರಿ, ತಾಳ, ಸೇರಿ ವೇಷ ಧರಿಸಿದಾಗ ಇವರನ್ನು ಯಾರು ಆಪೇಕ್ಷಿಸಬಾರುದು. ಹಾಗೆ ಆಕ್ಷೇಪಣೆ ಮಾಡಿದ್ದಾದರೆ ಸಂಸ್ಥಾನಕ್ಕೆ ತಿಳಿಸಬೇಕು. ಹೀಗೆ ಮುಂದುವರೆದು ಕುರುಬರಾಗಲಿ, ಗೊಲ್ಲರಾಗಲಿ, ಬಿಂಗಿಯವರು ಆಗಬಹುದು ಎನ್ನುವುದನ್ನು ನಂತರ ಕೆತ್ತಿರುವುದು ಸೇರಿಸಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

೧೭೩೪ ರಲ್ಲಿ ಕೆತ್ತಿಸಿದಂತಹ ಈ ಶಾಸನ ಇವರು ೧೭೩೪ರಲ್ಲಿ ಚಾಲನೆಯಲ್ಲಿ ಇದ್ದರು ಎಂದು ಸ್ಪಷ್ಟವಾಗುತ್ತದೆ. ಊರುಗಳನ್ನು ಹಂಚಿಕೊಂಡಿದ್ದರು ಎನ್ನುವುದಕ್ಕೆ ಈ ಹುಕ್ಕುಂ ಪತ್ರ ದಾಖಲಿತ ಆಧಾರ ಒದಗಿಸಬಲ್ಲದು. ಈ ಗಂಧ, ವಿಭೂತಿ, ರುದ್ರಾಕ್ಷಿ ಇವರಲ್ಲಿರುವ ದಟ್ಟ ಶೈವ ಪ್ರಭಾವವನ್ನು ಸ್ಪಷ್ಟಪಡಿಸುತ್ತದೆ. ಹೀಗೆ ಇವರ ಬಗ್ಗೆ ಹಲವಾರು ದಾಖಲೆಗಳು ಮಾಹಿತಿ ನೀಡುತ್ತವೆ.

ಅಡಿಟಿಪ್ಪಣಿಗಳು

೧. Kettle F (Rev) B.GEM 'A' Kannada English Disctonery page-1413 Mangalore Basel mession Book and tract Dipository 1894

೨. ಸಂಕ್ಷಿಪ್ತ ಕನ್ನಡ ನಿಘಂಟು: ಅಧ್ಯಕ್ಷರು ಎಂ.ಮರಿಯಪ್ಪ ಭಟ್ಟ, ಕನ್ನಡ ಸಾಹಿತ್ಯ ಪರಿಷತ್, ಚಾಮರಾಜ ಪೇಟೆ, ಬೆಂಗಳೂರು ೧೯೭೫, ಪುಟ: ೬೯೧

೩. ಚೌಡಣ್ಣ ಇಂಗ್ಲೀಷ್-ತೆಲುಗು ನಿಘಂಟವು ಉಪಾಧ್ಯಕ್ಷರು ನಾಯನಿ ಕೃಷ್ಣ ಕುಮಾರಿಗಾರು, ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯ ಪಬ್ಲಿಕ್ ಗಾರ್ಡನ್ ಹೈದ್ರಾಬಾದ್ ೧೯೯೭, ಪುಟ: ೭೧೫

೪. ಶೋಷಿತರ ಜಂಗಮರ ಮೀಸಲಾತಿ: ದಾಸನೂರು ಕೂಸಣ್ಣ ಮಾತಂಗ ಪ್ರಕಾಶನ ಮೈಸೂರು ೧೯೯೮, ಪುಟ: ೧೫೩

೫. ತೆಲುಗು ಜಾನಪದ ಗೇಯ ಸಾಹಿತ್ಯಂ ರಾಮರಾಜು ಬಿರುದುರಾಜು, ಜಾನಪದ ವಿಜ್ಞಾನ ಪ್ರಚುರಣಲು, ಹೈದ್ರಾಬಾದ್ ೧೯೯೦, ಪುಟ: ೮೦೫

೬. ಮರವೂರು ಕೋದಂಡರಾಮ ರೆಡ್ಡಿ: ಮಾಂಡಲೀಕ ಪದಕೋಶಂ ಅದ್ಧೃತಿ ಹಗಲುವೇಷದವರ ಸಂಸ್ಕೃತಿ

೭. ಆಂಧ್ರ ನಾಟಕ ರಂಗ ಚರಿತ್ರೆ: ಮಿಕ್ಕಿಲಿನೇನಿ ರಾಧಾಕೃಷ್ಣ ಮೂರ್ತಿ, ರೇಣುಕ ಗ್ರಂಥಮಾಲ, ಮದ್ರಾಸ-೨೪, ೧೯೬೬, ಪುಟ: ೨೦೫

೮. ಹಗಲುವೇಷದವರ ಸಂಸ್ಕೃತಿ ಯಳನಾಡ ಅಂಜನಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು, ೧೯೯೩, ಪುಟ: ೧೪

೯. ಕರ್ನಾಟಕದಲ್ಲಿ ವೇಷಗಾರರು: ಬಿ.ಎಂ. ಹೊಸಮನಿ, ಪಿ.ಎಚ್.ಡಿ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩, ಪುಟ: ೧೪

೧೦. ಜನಪದ ಸಾಹಿತ್ಯ ದರ್ಶನ ಭಾಗ: ೬ :ಸಂ: ಎಂ.ಎಸ್. ಸುಂಕಾಪುರ ಲೇ: ವೇಷಗಾರರು: ಎಂ.ಎಂ ಕಲಬುರ್ಗಿ, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪, ಪುಟ: ೩೦೧

೧೧. **ರೂಪಕಳ** : ಸೂರ್ಯಪ್ರಕಾಶ್‌ರಾವ್, ಎಸ್.ಆರ್. ವೆಂಕಟೇಶ್, ಉಧೃತಿ ಬುಡಿಗೆ ಜಂಗಾಲು ಭಾಷಾ ಸಾಹಿತ್ಯ ಸಂಸ್ಕೃತಿಕಾಂಶಾಲ ಪರಿಶೀಲನ ದಿವ್ಯದೀಪ್ತಿ ಪ್ರಚುರಣಲ ಹೈದರಾಬಾದ್, ೧೯೯೫, ಪುಟ: ೮೦೫

೧೨. ಕೊರಚರು ಒಂದು ಸಾಂಸ್ಕೃತಿಕ ಅಧ್ಯಯನ: ಗಿರಿಧರ್‌ರಾವ್ ಹವಾಲ್ದಾರ್, ಪಿಎಚ್.ಡಿ ಪ್ರಬಂಧ, ಕನ್ನಡ ವಿ.ವಿ. ಹಂಪಿ, ಪುಟ: ೨೪

೧೩. ಕೊಂಡಪಲ್ಲಿ ವೀರಭದ್ರಯ್ಯ ವಯಸ್ಸು ೬೫ ಪಾರ್ವತಿ ನಗರ ಕಡಪ ಜಿಲ್ಲೆ ೭:೭:೨೦೦೦

೧೪. ಜನಪದ ಸಾಹಿತ್ಯ ದರ್ಶನ ಭಾಗ: ೬, :ಸಂ: ಎಂ.ಎಸ್. ಸುಂಕಾಪುರ ಲೇ: ಎಂ.ಎಂ.ಕಲಬುರ್ಗಿ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ ೧೯೯೪, ಪುಟ: ೩೦೧, ೩೦೨, ೩೦೩

೧೫. ಜಯರಾಮ ವಯಸ್ಸು ೫೦ ಬಲಕುಂದಿ ಸಿರುಗುಪ್ಪ ತಾಲೂಕು ೪:೪:೨೦೦೧

೧೬. ಬೇಟೆ ಮಾಡುವುದು: ಕುರಿ, ಮೇಕೆ, ಕೋಣವನ್ನು ಜಂಬಲಮ್ಮ, ಸುಕ್ಷಮ್ಮ, ಮಾರೆಮ್ಮ ಇವರ ಎದುರಿಗೆ ಪೂಜೆ ಮಾಡಿ ಕಡಿದರೆ ಅದನ್ನು ಬೇಟೆ ಮಾಡುವುದು ಎನ್ನುತ್ತಾರೆ

೧೭. ಯಡಪಲ್ಲಿ ವಿಶ್ವನಾಥ ವಯಸ್ಸು ೭೦ ಪಾರ್ವತಿನಗರ ಪ್ರದ್ದುಟೂರು ತಾಲೂಕು ೮:೭:೨೦೦೦

೧೮. Caste and tribes of Sourthern India- by Edgar Thurston page-454, Vol-V, Govt Press Madrass, 1909

೧೯. The Mysore Tribes and Caste: By H.V. Nanjudaih, K.Ananth Krishna Ayer Vol-

III page 468-471

೨೦. The Indian Antiquary- A Journal of Oriantal Research Bombay beggers and criers-by- Raghunathji 1872 to 1933 in Archacology Vol IX X page-280-71

೨೧. Folk Arts of the Tamils- Dr. A.N. Perumal (Pagal Veshan) International Instute of Tamil Studies Taramani Madras 1983 page 51, 52

೨೨. Gazetter of India: Govt of Karnataka (Belgaum district) Ed: Suryanath Kamath.V. Tribes and Castes 1987, page: 196, 221, 160

೨೩. ಕರ್ನಾಟಕ ಜಾನಪದ :ಸಂ: ಡಾ.ಕೆ.ಎಸ್. ಕರೀಂಖಾನ್ ಲೇಖಿನ ದೇವೇಂದ್ರ ಕುಮಾರ್ ಹಕಾರಿ: ಜನಪದ ಪ್ರದರ್ಶನಾತ್ಮಕ ಕಲೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೯, ಪುಟ: ೧೦೬, ೧೦೭

೨೪. ಜನಪದ ಸಾಹಿತ್ಯ ದರ್ಶನ: ಭಾಗ: ೬, :ಸಂ: ಎಂ.ಎಸ್. ಸುಂಕಾಪುರ ಲೇ ಎಂ.ಎಂ. ಕಲಬುರ್ಗಿ ಲೇ: ಎಂ.ಎಂ.ಕಲಬುರ್ಗಿ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪, ಪುಟ: ೩೦೦,೩೦೮

೨೫. The Scheduled Caste: K.S.Singh page: 202, 207, Indian Communities A.C, 1998

೨೬. ಕನ್ನಡ ಕಸ್ತೂರಿ ಅರ್ಥಕೋಶ, ಸಂಕೇಶ್ವರ ಪ್ರಕಾಶನ ಗದಗ

೨೭. Kettle F (Rev) B.Gem 'A' Kannada-English Dictonery, Mangalore Basel Mession Book and tract Dipository 1894

೨೮. Caste Certificate Problems of Budga Jangama's: Del K.M.Metry 1999, page: 5.

೨೯. ಪಗಟಿವೇಷಾಲು ವಾಟಿ ಪ್ರಾಚೀನತೆ :ಸಂ: ವಿಭೂತಿ ಭವಾನಿ ಲಿಂಗಂ (ತೆಲುಗು) ಪುಟ: ೧, ೨೫೫, ಪೊಟ್ಟಿ ಶ್ರೀರಾಮುಲು ತೆಲುಗು ವಿಶ್ವವಿದ್ಯಾಲಯ ಹೈದರಾಬಾದ್, ೧೯೯೯

೩೦. Indian Express (Daily News paper) 'Master of Stage' K.V. Jayaram Suday Magazine Andhr Edition 29.11.1992, page: II

೩೧. 'Deccan Herald' (English Daily News Paper) 'Master of Parody' Basvaraj malashetty Date 16.1093 page: 6

೩೨. **ಮರಗು :** ಸಂಚಾರಿ ಸಮುದಾಯಗಳೆಲ್ಲವುಗಳಲ್ಲಿ ಇರಬಹುದಾದಂತಹ ಭಾಷೆ. ಈ ಭಾಷೆ ಒಂದೊಂದು ಸಮುದಾಯಕ್ಕೆ ಬೇರೆ ಬೇರೆಯಾಗಿರುತ್ತದೆ. ಇದು ಸಂಪೂರ್ಣವಾದ ಬಾಷೆಯಲ್ಲ. ಕೆಲವು ಬಾರಿ ನಾಗರಿಕರ ಹತ್ತಿರ ಇವರ ಸಮುದಾಯದವರು ಕೂಡಿದಾಗ ಮಾತನಾಡುತ್ತಾರೆ. ಇದು ಕೆಲವು ಶಬ್ದಗಳು ಮಾತ್ರವೇ ಇವೆ

೩೩. ಕೌದಿ ಹರಿದ ಹಳೆಯ ಬಟ್ಟೆ, ಸೀರೆ ದೋತರಗಳನ್ನು ಒಂದರ ಮೇಲೊಂದು ಹಾಕಿ ಮೇಳದ ಲೆಕ್ಕದಲ್ಲಿ ಕೂಡಿಸಿ ಒಲಿದಂತಹ ಒಂದು ರೀತಿಯ ಹಾಸಿಗೆ ಅಥವಾ ಹೊದಿಕೆ

೩೪. 'ವಾರ್ತ' (ತೆಲುಗು ದಿನಪತ್ರಿಕೆ) 'ಪಚ್ಚನ ಚಟ್ಲ ಮಧ್ಯ ಕಮ್ಮನಿ ಕೋಯಿಲ ಪಾಟ' ಲೇಖಿನ: ನೂಕಾರಾಂ ಪ್ರಸಾದ್ ರೆಡ್ಡಿ ಆದಿವಾರದ ವಿಶೇಷ ಪುರಾವಣೆ ದಿನಾಂಕ ೩೧.೧.೨೦೦೦, ಪುಟ: ೧೪, ೧೫

೩೫. ಕವಿರಾಜ ಮಾರ್ಗ :ಸಂ: ಎಂ.ವಿ. ಸೀತರಾಮಯ್ಯ ಪರಿಚ್ಛೇದ-೧, ಪದ್ಯ-೬೮, ಪುಟ: ೧೪, ಕರ್ನಾಟಕ ಸಂಘ ಸಹಕಾರಿ ಸೈನ್ಸ್ ಮತ್ತು ಆರ್ಟ್ಸ್ ಕಾಲೇಜು ಬೆಂಗಳೂರು-೧೯೬೮

೩೬. ಜನಪದ ಸಾಹಿತ್ಯ ದರ್ಶನ ಭಾಗ-೬, :ಸಂ: ಎಂ.ಎಸ್. ಸುಂಕಾಪುರ, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪, ಪುಟ: ೩೦೨

೩೭. ವಡ್ಡಾರಾಧನೆ :ಸಂ: ಡಿ.ಎಲ್. ನರಸಿಂಹಾಚಾರ್ ಪುಟ: ೧೮, ಶಾರದಾ ಮಂದಿರ ಮೈಸೂರು-೧೯೭೦.

೩೮. ಧರ್ಮಾಮೃತಂ :ಸಂ: ಆರ್. ಶಾಮ ಶಾಸ್ತ್ರಿ ಪದ್ಯ: ೧೦೫ ಆಶ್ವಾಸ: ೨ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೨೬

೩೯. ಅದೇ. ಮೈಸೂರು ವಿಶ್ವವಿದ್ಯಾಲಯ ಮೈಸೂರು-೧೯೨೬ ಪದ್ಯ: ೭೭ ಆಶ್ವಾಸ: ೪

೪೦. ಅದೇ. ಮೈಸೂರು ವಿಶ್ವವಿದ್ಯಾಲಯ ಮೈಸೂರು-೧೯೨೬ ಪದ್ಯ: ೧೦೩ ಆಶ್ವಾಸ: ೫

೪೧. ಅದೇ. ಮೈಸೂರು ವಿಶ್ವವಿದ್ಯಾಲಯ ಮೈಸೂರು-೧೯೨೬ ಪದ್ಯ: ೬೭ ಆಶ್ವಾಸ: ೧೦

೪೨. ಪ್ರಭುದ್ಧ ಕರ್ನಾಟಕ ಡಾ.ಎಂ. ಚಿದಾನಂದ ಮೂರ್ತಿ ಸಂಪುಟ: ೫೫ ಸಂಚಿಕೆ: ಪುಟ: ೬೧-೬೨-೬೪

೪೩. ಚನ್ನ ಬಸವಣ್ಣನವರ ವಚನಗಳು: ಸಂ: ಡಾ.ಆರ್.ಸಿ. ಹಿರೇಮಠ ವಚನ ಸಂಖ್ಯೆ ೨೦೦ ಪುಟ: ೯೧, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧

೪೪. ವರ್ಧಮಾನ ಪುರಾಣ ಸಂ: ಎ. ಮರಿಯಪ್ಪ ಭಟ್ಟ ಮತ್ತು ಎಂ. ಗೋಪಾಲ್ ರಾವ್ (ಅಚಗಣ್ಣನನ್ನು ಕುರಿತು) ಆಶ್ವಾಸ: ೭, ಪದ್ಯ ಸಂಖ್ಯೆ: ೫೭

೪೫. ಬಸವಣ್ಣನವರ ವಚನಗಳು ಸಂ: ಡಾ. ಆರ್.ಸಿ. ಹಿರೇಮಠ ವಚನ ಸಂಖ್ಯೆ: ೮೯೧, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪, ಪುಟ: ೩೬೬,

೪೬. ಜನಪದ ಸಾಹಿತ್ಯ ದರ್ಶನ ಭಾಗ: ೬ ಸಂ: ಎಂ.ಎಸ್. ಸುಂಕಾಪುರ, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೪, ಪುಟ: ೩೦೨

೪೭. ಜೇಡರ ದಾಸಿಮಯ್ಯನ ವಚನ, ಅದ್ಯತಿ, ಶೋಷಿತ ಜಂಗಮರ ಮೀಸಲಾತಿ, ದಾಸನೂರು ಕೂಸಣ್ಣ, ಮಾತಂಗ ಪ್ರಕಾಶನ, ಮೈಸೂರು, ೧೯೯೮, ಪುಟ: ೩೩

೪೮. ಅದೇ. ಪುಟ: ೩೪

೪೯. ಭಕ್ತಿ ಬಂಢಾರಿ ಬಸವಣ್ಣನ ವಚನಗಳು ಸಂ: ಆರ್.ಸಿ. ಹಿರೇಮಠ ಪುಟ: ೪೨ ವ.ಸಂ: ೮೫, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೧

೫೦. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ ೧೩೨ ವ.ಸಂ: ೩೩೧

೫೧. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ: ೧೩೩ ವ.ಸಂ: ೩೩೫

೫೨. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಪುಟ: ೧೩೫ ವ.ಸಂ: ೩೪೧

೫೩. ಬಸವಣ್ಣನವರ ಟೀಕಿನ ವಚನಗಳು (ಸಂಪುಟ: ಒಂದು) ಸಂ: ಎಂ.ಎಂ. ಕಲಬುರ್ಗಿ, ಶ್ರೀ ನಿ. ಪ್ರಮಹಾಂತ ಶಿವಯೋಗೀಶ್ವರ ಸ್ಮಾರಕ ಬಸವೇಶ್ವರ ಪೀಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೯, ಪುಟ: ೮೦

೫೪. ಚನ್ನಬಸವಣ್ಣನವರ ವಚನ (ಸಂಕೀರ್ಣ ವಚನ ಸಂಪುಟ-೮) ವ.ಸಂ: ೫೭೪, ೧೯೭೧, ಪುಟ: ೧೮೦

೫೫. ಸಂ ಆರ್.ಸಿ. ಹಿರೇಮಠ (ಸಂಕೀರ್ಣ ವಚನ ಸಂಪುಟ-೮) ವ.ಸಂ: ೫೦೨, ೧೯೭೧, ಪುಟ: ೨೨೮

೫೬. ಸಂ ಆರ್.ಸಿ. ಹಿರೇಮಠ (ಸಂಕೀರ್ಣ ವಚನ ಸಂಪುಟ-೮) ವ.ಸಂ: ೬೦೭, ೧೯೭೧, ಪುಟ: ೨೮೪

೫೭. ಸಂ: ಆರ್.ಸಿ. ಹಿರೇಮಠ (ಸಂಕೀರ್ಣ ವಚನ ಸಂಪುಟ-೮) ವ.ಸಂ: ೧೩೧೪, ೧೯೭೧, ಪುಟ: ೪೬೭

೫೮. ನುಲಿಯ ಚಂದಯ್ಯನ ವಚನ, ಆದ್ಯತಿ, ಶೋಷಿತ ಜಂಗಮ ಮೀಸಲಾತಿ, ಲೇ ದಾಸನೂರು ಕೂಸಣ್ಣ, ಮಾತಂಗ ಪ್ರಕಾಶನ, ಪುಟ: ೩೩, ೧೯೯೮

೫೯. ಅದೇ. ಪುಟ

೬೦. ಚನ್ನಬಸವಣ್ಣನವರ ವಚನಗಳು ಸಂ: ಆರ್.ಸಿ. ಹರಿವಿಮಠ ವ.ಸಂ: ೯೨೨, ಸಂಕೀರ್ಣ ವಚನ ಸಂಪುಟ-೮, ಪುಟ: ೪೩೭.

೬೧. ಸಕಲ ಪುರಾತನರ ವಚನಗಳು :ಸಂ: ಎಂ.ಎಸ್. ಸುಂಕಾಪುರ ಸಂಪುಟ-೨ ವ.ಸಂ: ೧೫೩೦, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬, ಪುಟ: ೫೩೮

೬೨. ಸಕಲ ಪುರಾತನರ ವಚನಗಳು :ಸಂ: ಎಂ.ಎಸ್. ಸುಂಕಾಪುರ ಸಂಪುಟ-೨ ವ.ಸಂ: ೧೫೫೦, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೬, ಪುಟ: ೫೪೫

೬೩. ಬಹುರೂಪಿ ಚೌಡಯ್ಯನ ವಚನ ಸಂಕೀರ್ಣ ವಚನ ಸಂಪುಟ-೮, ಸಂ: ಆರ್.ಸಿ. ಹಿರೇಮಠ, ವಚನ ಸಂಖ್ಯೆ: ೧೩೭, ಜನಪ್ರಿಯ ಆವೃತ್ತಿ, ೧೯೭೧, ಪುಟ: ೧೩೪

೬೪. ಬಹುರೂಪಿ ಚೌಡಯ್ಯನ ವಚನ ಸಂಕೀರ್ಣ ವಚನ ಸಂಪುಟ-೮, ಸಂ: ಆರ್.ಸಿ. ಹಿರೇಮಠ, ವಚನ ವ.ಸಂ: ೧೮೦, ಜನಪ್ರಿಯ ಆವೃತ್ತಿ, ೧೯೭೧, ಪುಟ: ೭೧

೬೫. ಬಹುರೂಪಿ ಚೌಡಯ್ಯನ ವಚನ ಸಂಕೀರ್ಣ ವಚನ ಸಂಪುಟ-೮, ಸಂ: ಆರ್.ಸಿ. ಹಿರೇಮಠ, ವಚನ ವ.ಸಂ: ೧೮೨, ಜನಪ್ರಿಯ ಆವೃತ್ತಿ, ೧೯೭೧, ಪುಟ: ೭೧

೬೬. ಕರ್ನಾಟಕದಲ್ಲಿ ವೇಷಗಾರರು: ಎಂ.ಬಿ. ಹೊಸಮನಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೩, ಪುಟ: ೫೮

೬೭. ಸಂಕೀರ್ಣ ವಚನ ಸಂಪುಟ-೮, ಸಂ: ಆರ್.ಸಿ. ಹಿರೇಮಠ ವ.ಸಂ: ೪೬೭, ಜನಪ್ರಿಯ ಆವೃತ್ತಿ, ೧೯೭೧, ಪುಟ: ೧೮೦

೬೮. ಸಂಕೀರ್ಣ ವಚನ ಸಂಪುಟ-೮, ಸಂ: ಆರ್.ಸಿ. ಹಿರೇಮಠ ವ.ಸಂ: ೨೧೩೧, ಜನಪ್ರಿಯ ಆವೃತ್ತಿ, ೧೯೭೧, ಪುಟ: ೭೧೩

೬೯. ಸಂಕೀರ್ಣ ವಚನ ಸಂಪುಟ-೫, ವಚನ ಸಂಪುಟ-೧೦, ವ.ಸಂ: ೪೫, ಸಂ: ಡಾ. ವೀರಣ್ಣ ರಾಜೂರ್ ಜನಪ್ರಿಯ ಆವೃತ್ತಿ, ೧೯೭೧, ಪುಟ: ೭೧೩

೭೦. ಸಂಕೀರ್ಣ ವಚನ ಸಂಪುಟ-೫, ವಚನ ಸಂಪುಟ-೧೦, ವ.ಸಂ: ೯೨, ಸಂ: ಡಾ. ವೀರಣ್ಣ ರಾಜೂರ್ ಜನಪ್ರಿಯ ಆವೃತ್ತಿ, ೧೯೭೧, ಪುಟ: ೬೭

೭೧. ಸಂಕೀರ್ಣ ವಚನ ಸಂಪುಟ-೫, ವಚನ ಸಂಪುಟ-೧೦, ವ.ಸಂ: ೧೯೯, ಸಂ: ಡಾ. ವೀರಣ್ಣ ರಾಜೂರ್ ಜನಪ್ರಿಯ ಆವೃತ್ತಿ, ೧೯೭೧, ಪುಟ: ೧೩೧, ೧೩೨

೭೨. ಕರ್ನಾಟಕದಲ್ಲಿ ವೇಷಗಾರರು: ಎಂ.ಬಿ. ಹೊಸಮನಿ, ಪಿ.ಎಚ್.ಡಿ. ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೩, ಪುಟ: ೬೧

೭೩. ಹರಿಹರನ ರಗಳೆಗಳು (ಸಮಗ್ರ ರಗಳೆ ಸಂಕಲನ) ಸಂ: ಫ.ಗು ಹಳಕಟ್ಟಿ, ಸಮಾಜ ಪುಸ್ತಕಾಲಯ ಧಾರವಾಡ, ೧೯೯೩, ಪುಟ: ೪೬೫

೭೪. ಕರ್ನಾಟಕ ಭಾರತ ಕಥಾ ಮಂಜರಿ :ಸಂ: ಕುವೆಂಪು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಕರ್ಣಪರ್ವ ಸಂದಿ:೨೪, ಪದ್ಯ: ೩

೭೫. ಕರ್ನಾಟಕ ಭಾರತ ಕಥಾ ಮಂಜರಿ :ಸಂ: ಕುವೆಂಪು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಕರ್ಣಪರ್ವ ಸಂದಿ: ೧೩, ಪದ್ಯ: ೧೪೧

೭೬. ಕಂಠೀರವ ನರಸರಾಜ ವಿಜಯ ಸಂ: ಡಾ. ಆರ್.ಶಾಮಶಾಸ್ತ್ರಿ ಸಂದಿ-೨೧ ಪದ್ಯ-೧೧೭, ಕನ್ನಡ ಅಧ್ಯಯನ

ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಧಾರವಾಡ, ೧೯೭೧

೨೭. ಕರ್ನಾಟಕದಲ್ಲಿ ವೇಷಗಾರರು: ಎಂ.ಬಿ. ಹೊಸಮನಿ, ಪಿ.ಎಚ್.ಡಿ. ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೩, ಪುಟ: ೭೧, ೭೨

೨೮. ಉಧೃತಿ: ಡಾ. ಆರ್ವಿಯಸ್ ಸುಂದರಂ 'ಯಕ್ಷಗಾನ ಸಮೀಕ್ಷೆ', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೮೫, ಪುಟ: ೧೧

೨೯. ಉತ್ತರ ಕರ್ನಾಟಕದ ಬಯಲಾಟಗಳು: ಬಸವರಾಜ್ ಮಲಶೆಟ್ಟಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೩, ಪುಟ: ೨೦, ೨೨

೩೦. ಕಬ್ಬಿನ ಹಾಲು, ಶ್ರೀ ಶಂಕರಗೌಡ ಅಭಿನಂದನ ಗ್ರಂಥ ಲೇ: ಸೀತಾರಾಮ ಜಾಗಿರದಾರ ಶಾಸನಗಳು ಮತ್ತು ನಾಟಕ ಸಂ: ಪ್ರೊ ದೇ. ಜವರೇ ಗೌಡ ಪುಟ: ೧೧೫

೩೧. ಕಲ್ಯಾಣಂ ಬಲರಾಮಯ್ಯ ವಯಸ್ಸು ೬೨ ರಾಜೇಶ್ವರಿ ನಗರ ಬಳ್ಳಾರಿ

¤ ¤ ¤ ¤ ¤

ಅಧ್ಯಾಯ ೪

ಸಾಮಾಜಿಕ ಸ್ಥಿತಿಗತಿ

೪.೧. ಸ್ವಾತಂತ್ರ್ಯ ಪೂರ್ವದಲ್ಲಿ

೪.೨. ಸ್ವಾತಂತ್ರ ನಂತರ

೪.೩. ಕೇಂದ್ರ ಸರ್ಕಾರ ರಾಜ್ಯ ಸರ್ಕಾರ

೪.೪. ಅಭಿವೃದ್ದಿ ಯೋಜನೆಗಳು

೪.೫. ಶೈಕ್ಷಣಿಕ ಯೋಜನೆಗಳು

೪.೬. ಮೀಸಲಾತಿ ಸಂಬಂಧ ಮತ್ತು ವಿಲೀನಿಕರಣ

ಸಾಮಾಜಿಕ ಸ್ಥಿತಿಗತಿ

ಒಂದು ಸಮುದಾಯದ ಜೀವನ ಶೈಲಿ ಆ ಸಮುದಾಯದ ಸಂಸ್ಕೃತಿ ಮತ್ತು ಪರಂಪರಾಗತವಾಗಿ ಆಧರಿಸಿ ರೂಪುಗೊಂಡಿರುವ ಮೌಲ್ಯಗಳನ್ನು ಸಮಾಜ ಎಂದು ಕರೆಯುತ್ತಾರೆ. ಸಮಾಜ ಮಾನವ ಜೀವನದ ಒಂದು ಅಂಗ. ಅದನ್ನು ನಿರಾಕರಿಸಿ ಬಾಳುವೆ ನಡೆಸಲು ಯಾವೊಬ್ಬ ವ್ಯಕ್ತಿಗೂ ಸಾಧ್ಯವಿಲ್ಲ. ನಿರಾಕರಿಸಿ ನಡೆದರೆ ಒಂದು ಜೀವಿಗೆ ಮೂಗು ಬಾಯಿ ಮುಚ್ಚಿದರೆ ಯಾವ ಅನುಭವವಾಗುತ್ತದೆಯೋ ಅಂತಹ ಅನುಭವವಾಗುತ್ತದೆ. ವ್ಯಕ್ತಿಯ ವ್ಯವಹಾರಿಕ ಜೀವನ ಸಮಾಜದಲ್ಲಿಯೇ ಬೇರು ಬಿಟ್ಟಿರುತ್ತವೆ. ಅದಕ್ಕಾಗಿಯೇ ವ್ಯಕ್ತಿ ಬಿಟ್ಟು ಸಮಾಜ, ಸಮಾಜ ಬಿಟ್ಟು ವ್ಯಕ್ತಿ ನಿರಾಕರಿಸಿ ನಡೆಯುವುದು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ಮಾನವನನ್ನು ಸಮಾಜ ಜೀವಿ ಎನ್ನುವುದು.

ಹಗಲುವೇಷಗಾರರು ಸಹ ಇದರಿಂದ ಹೊರತಾಗಿಲ್ಲ. ತಮ್ಮದೇಯಾದ ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ ಮತ್ತು ಸರಳ ಸಮಾಜದ ಲಕ್ಷಣಗಳ ಪರಿಧಿಯಲ್ಲಿಯೇ ಬಾಳುತ್ತಿದ್ದಾರೆ. ಹಲವಾರು ಸಮುದಾಯಗಳು ಸಮಾಜವನ್ನು ದುಡಿಸಿಕೊಂಡು ಮುಂದೆ ಬಂದರು ಆದರೆ ಇವರಿಗೆ ಅದು ಸಾಧ್ಯವಾಗಿಲ್ಲ. ಏಕೆಂದರೆ ಅಂದಿನಿಂದ ಇಂದಿನವರೆಗೆ ಜನರ ಪ್ರೀತಿ, ಪ್ರೇರಣೆ, ವಿಶ್ವಾಸವನ್ನು ನಂಬಿ ಅದರಲ್ಲಿಯೇ ತೃಪ್ತಿಪಟ್ಟು, ಸಮಾಜದ ಅಂಗವಾದ ಸರಕಾರದ ಯೋಜನೆಗಳಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ. ಸ್ಥಿರವಾಗಿ ನೆಲೆ ಇಲ್ಲದಿದ್ದರೂ ಅದರ ಚಿಂತೆ ಮಾಡಲಿಲ್ಲ. ತಾವು ವಿದ್ಯಾಭ್ಯಾಸದಿಂದ ವಂಚಿತರಾಗಿ ಮಕ್ಕಳನ್ನು ಸಹ ಅದೇ ಮಾರ್ಗದಲ್ಲಿ ನಡೆಸಿದರು. ಇಂದು ಅಂತಹ ಕೊರತೆಗಳನ್ನು ನೋಡಿ ಬಾಧೆ ಪಡುತ್ತಿದ್ದಾರೆ. ಅಂದು ಕನಿಷ್ಟ ಸೌಲಭ್ಯಗಳ ಕಡೆಗೂ ಸಹ ನಿರ್ಲಕ್ಷ್ಯಹೊಂದಿ ಇಂದು ಜೀವನದ ನೆಲೆಯೇ ಕಷ್ಟವಾಗಿದೆ. ಈ ಸಂಗತಿಗಳನ್ನು ಪರಿಗಣಿಸಿ ಪ್ರಸ್ತುತ ಅಧ್ಯಯನದಲ್ಲಿ ಈ ಸಮುದಾಯದ ಸಾಮಾಜಿಕ ಸ್ಥಿತಿಗತಿಯನ್ನು ಕುರಿತು ಚರ್ಚಿಸಲಾಗಿದೆ.

೪.೧. ಸ್ವತಂತ್ರ ಪೂರ್ವದಲ್ಲಿ

"ಸಂಗೀತದ ಸ್ವರಗಳಿಂದ ಕಥನ ಮಾಡುವುದು ರಾಮಾಯಣದ ಪೂರ್ವ ಕಾಲದಲ್ಲೂ ಇತ್ತು. ಮಹಾಕವಿ ವಾಲ್ಮೀಕಿ ತನ್ನ ಮಹಾಕಾವ್ಯದ ಕಥೆಯನ್ನು ಲವ-ಕುಶರ ಮೂಲಕ ಪ್ರಕಟಪಡಿಸಿದನು. ರಾಮ

ಕಥೆಯನ್ನು ಅವರು ತಮ್ಮ ಜನರ ಮುಂದೆ ಹಾಡಿ ಕೊನೆಗೆ ಚಕ್ರವರ್ತಿಯ ಮುಂದೆಯೂ ಹಾಡಿದರು. ಮಹಾಕಾವ್ಯದ ಪಾಠ ಮಾರ್ಗೀಯ ಶೈಲಿಯಲ್ಲಿದ್ದ ಅಭಿಜಾತ ಸ್ಥಿತಿಯನ್ನು ಹೊಂದಿದ್ದರೂ ಅವರ ಪ್ರಚಾರ ದೇಸೀ ಮಾಧ್ಯಮದಲ್ಲಿತ್ತು. ಕ್ರಮೇಣ ಗಮಕ ಸಂಪ್ರದಾಯ ಹಾಗೂ ಅನೇಕ ಪ್ರಾದೇಶಿಕ ರೂಪಗಳನ್ನು ಪಡೆದು ಮುಂದುವರಿಯಿತು. ಅದರ ಮುಖ್ಯ ಉದ್ದೇಶ, ಜನಪದರಿಗೆ ಭೋಧನೆ, ವಿನೋದ ಹಾಗೂ ವೈವಿಧ್ಯವನ್ನು ಕೊಡುವುದು, ವೃತ್ತಿಗಾಯಕರ ಈ ಮನರಂಜನೆ ಜನರ ಮೇಲೆ ತುಂಬಾ ಪ್ರಭಾವ ಬೀರಿತ್ತು. ಕಾಕತೀಯರ ಹಾಗೂ ಅನಂತರದ ಕಾಲದಲ್ಲಿ ಶೈವರು ಧಾರ್ಮಿಕ ಪ್ರಚಾರದ ಉದ್ದೇಶದಿಂದ ಈ ಕಲೆಯನ್ನು ಪೂರ್ತಿಯಾಗಿ ವಶಪಡಿಸಿಕೊಂಡರು. ಶೈವ ಧರ್ಮದ ಪ್ರಬಲ ಶಾಖೆಯಾದ ವೀರಶೈವ ಧರ್ಮದ ಪ್ರಚಾರಕ್ಕಾಗಿ ಮತ್ತು ಆಂಧ್ರದಲ್ಲಿ ಜೈನ ಧರ್ಮದ ವ್ಯಾಪ್ತಿಯನ್ನು ವಿರೋಧಿಸಲು ಇದನ್ನು ಬಳಸಲಾಯಿತು.”[೧] ಪೂರ್ವದಲ್ಲಿ ಹೊಟ್ಟೆ ಪಾಡಿಗಾಗಿ ಪೌರಾಣಿಕ ಕಥೆಗಳನ್ನು ವೇಷಗಳ ಮೂಲಕ ಪ್ರದರ್ಶಿಸುತ್ತಿದ್ದಿರಬೇಕು, ನಂತರ ಕಾಕತೀಯರ ಕಾಲದಲ್ಲಿ ಈ ವೇಷಗಾರರ ವೇಷಗಳಿಗೆ ಧರ್ಮ ಲೇಪನ ಹಚ್ಚಿ ಧಾರ್ಮಿಕ ಕತೆಗಳ ಮೂಲಕ ಪ್ರಚಾರ ಮಾಡಿದಂತೆ ತೋರುತ್ತದೆ.

ವೇಷಗಾರರೆನಿಸಿಕೊಂಡ ಈ ಬುಡುಗಜಂಗಮರು ವೇಷಗಾರಿಕೆಯ ಜೊತೆ ಹಾಡುಗಾರಿಕೆಯನ್ನು ಜನರ ಮುಂದೆ ಅಭ್ಯಾಸಮಾಡತೊಡಗಿದರು. ಅವರ ವಸ್ತು ಭಂಡಾರದಲ್ಲಿ ಪರಮೇಶ್ವರನ ಕಥೆಗಳೇ ಮುಖ್ಯವಾಗಿದ್ದವು. ಈ ಶೈವ ಕಥನಗೀತೆಗಳಿಗೆ ಹೊಂದಿಕೆಯಾಗುವಂತೆ ಹಾಗೂ ಪ್ರತಿಸ್ಪರ್ಧೆಗಳಂತೆ ವಿಷ್ಣು ಭಕ್ತರು ಇಂತಹ ವಾಚನಗಳನ್ನು ಪ್ರಾರಂಭಿಸಿದರು. ರೆಡ್ಡಿರಾಜರ ಯುಗದಲ್ಲಿ ವೈಷ್ಣವ ಧರ್ಮ ರಾಜ ಧರ್ಮವಾಗಿ ಪೋಷಣೆ ಪಡೆದಿತ್ತು. ಇಂತಹದೇ ವೇಷಗಳ ಮುಖಾಂತರ ಮಾಲ ಜಂಗಮರಿಗೆ ಪೋಷಣೆ ನೀಡಿ ರೆಡ್ಡಿರಾಜರು ಧಾರ್ಮಿಕ ಪ್ರಚಾರಕ್ಕೆ ತೊಡಗಿರುವ ಸಾಧ್ಯತೆ ಇದೆ. ಇಂದಿಗೂ ಸಹ ಆಂಧ್ರದಲ್ಲಿ ವೈಷ್ಣವ ಧರ್ಮದ ಮಾಲ ಜಂಗಮರು ಕಾಣಸಿಗುತ್ತಾರೆ. ಹೀಗೆ ಬೆಳೆದ ಈ ಬಹುರೂಪ ಕಲೆಯ ಕುರಿತು ಸ್ಪಷ್ಟವಾದ ನಿರೂಪಣೆ ಜಾಯಸೇನಾಪತಿಯು ಸಂಸ್ಕೃತ ಭಾಷೆಯ ‘ನೃತ್ಯರತ್ನಾವಳಿ’ಯಲ್ಲಿ ಇತರೆ ದೇಶೀ ರೂಪಗಳನ್ನು ಪರಿಚಯಿಸುವಾಗ ಈ ಕಲೆಯ ಲಕ್ಷಣಗಳನ್ನು ತಿಳಿಸಿದ್ದಾನೆ.

ಆಂಧ್ರಪ್ರದೇಶದಲ್ಲಿ ಪೂರ್ವದಲ್ಲಿ ‘ಜಂಗಂ’ ಎಂದು ಹೆಸರು ಪಡೆದ ಇವರು ನಂತರದಲ್ಲಿ ಬೇಡ ಜಂಗಮ, ಬುಡುಗಜಂಗಮ ಎಂದು ಬೇರ್ಪಟ್ಟಿರುವ ಸಾಧ್ಯತೆಗಳಿವೆ. ೧೭ನೇ ಶತಮಾನಕ್ಕೆ ಸೇರಿದ ನಾರಾಯಣಾಮಾತ್ಯುಡು ತನ್ನ ತೆಲುಗು ಕೃತಿಯಲ್ಲಿ ಹಿಂದಿನ ಜಾತಿಗಳನ್ನು ಕುರಿತು ಹೇಳುತ್ತಾ, “ಜಂಗಾಲು ತೆರ ನಾಟಕವು ಜಂಗಾಲು” ಎಂದು ಹೇಳಿರುವ ಮಾತು ಅದಕ್ಕೆ ಪುಷ್ಠಿ ನೀಡುತ್ತದೆ. ‘ಜಂಗಾಲು’ ಎಂದರೆ ಊರ ಜಂಗಮರನ್ನು ಸೂಚಿಸಿದರೆ ತೆರ ನಾಟಕವು ಜಂಗಾಲು ವೇಷ ಹಾಕುವ ಬುಡುಗಜಂಗಾಲರನ್ನು ಸೂಚಿಸುತ್ತದೆ. ಊರ ಜಂಗಮರು ಮಠ ಮಾನ್ಯಗಳಲ್ಲಿ ಸೇರಿ ಮಠಪತಿಗಳಾದರು. ವೇಷಗಾರ ಜಂಗಮರು ಬುಡುಗೆ ವಾದ್ಯಗಳ ಮೂಲಕ ವೇಷ ಹಾಕುತ್ತಾ ಊರ ಹೊರಗಡೆ ಕಾಡಿನಲ್ಲಿ ವಾಸ ಮಾಡುತ್ತಾ, ಹಾಗೆಯೇ ಉಪ ಜೀವನಕ್ಕೆ ಆಧಾರವಾಗಿ ಬೇಟೆಯಾಡಿದುದರಿಂದ ಬೇಡಜಂಗಮ ಅಥವಾ ಬುಡುಗಜಂಗಮರಾಗಿರುವ

ಸಾಧ್ಯತೆಗಳಿವೆ ಎಂದು ಸ್ಪಷ್ಟೀಕರಿಸಬಹುದು. ಆಂಧ್ರಪ್ರದೇಶದಲ್ಲಿ 'ಜಂಗಂ' ಎನ್ನುವ ಹೆಸರಿನಲ್ಲಿಯೇ ೫೬ ಗ್ರಾಮಗಳಿರುವುದನ್ನು ಕಾಣಬಹುದು.

ಕರ್ನಾಟಕದಲ್ಲಿ ವೀರಶೈವ ಧರ್ಮ ಹುಟ್ಟುವುದಕ್ಕೆ ಮುಂಚೆಯೇ ಆಂಧ್ರಪ್ರದೇಶದಲ್ಲಿ 'ಜಂಗಂ' ಎಂಬ ಹೆಸರಿನಿಂದ ಹುಟ್ಟಿರಬಹುದೆ? ಎನ್ನುವ ಸಮಸ್ಯೆ ಕಾಡುತ್ತಿದೆ ಏಕೆಂದರೆ ೧೧ನೇ ಶತಮಾನದ ಪೂರ್ವದಲ್ಲಿ 'ಜಂಗಂ' ಎನ್ನುವ ಕುಲ ಇದ್ದು, ಇವರ ಊರುಗಳಲ್ಲಿ ಭಿಕ್ಷೆ ಎತ್ತಿ ಜೀವನ ನಡೆಸುತ್ತಿರಬಹುದು. ಇವರಿಗೆ ೧೨ನೇ ಶತಮಾನದ ಕಾಕತೀಯರು ಎಲ್ಲಾ ಭಿಕ್ಷುಕರಿಗೆ ಒಂದು ವೃತ್ತಿಯ ಮೂಲಕ ಧರ್ಮ ಪ್ರಚಾರದ ದೃಷ್ಟಿ ಅವರ ಮೇಲೆ ಏರಿದುದರಿಂದ, ಜಂಗಮರಿಗೆ ಬುಡಿಗೆ ವಾದ್ಯವನ್ನು ಕೊಟ್ಟು ಬುರ್ರ ಕಥೆಗಳನ್ನು ಹೇಳಲು ಅಜ್ಞಾಪಿಸಿದರು. ಆ ವೃತ್ತಿ ಮತ್ತು ಧರ್ಮ ಪ್ರಚಾರದಲ್ಲಿ ತೊಡಗಿದ್ದಾಗ ಕಾಲಾಂತರದಲ್ಲಿ ರೆಡ್ಡಿರಾಜರು ಬಂದು ವಿಶಿಷ್ಟಾದ್ವೈತ ಧರ್ಮದ ಒತ್ತಡ ಹೇರಿದರು. ಅದನ್ನು ತಾಳಲಾರದ ಕೆಲವು ಬುಡುಗ ಜಂಗಾಲರು ವೇಷಗಾರರ, ಬಹುರೂಪಿಗಳ ಹೆಸರಿನಲ್ಲಿ ಕರ್ನಾಟಕ ಪ್ರವೇಶಿಸಿರಬಹುದೇ ಎನ್ನುವುದರ ಬಗ್ಗೆ ಇನ್ನು ಸ್ಪಷ್ಟವಾದ ಅಧ್ಯಯನ ನಡೆಯಬೇಕಿದೆ.

ಸ್ವತಂತ್ರ ಪೂರ್ವದಲ್ಲಿ ಇವರ ವೃತ್ತಿ, ಕಲೆ, ಆಳರಸರ ತೆಕ್ಕೆಯಲ್ಲಿದ್ದವು. ಉದಾಹರಣೆಗೆ ಕಾಕತೀಯ ಪ್ರತಾಪರುದ್ರ, ಬಸವಣ್ಣನವರು ಇವರನ್ನು ವೇಷಗಾರಿಕೆಯ ಮೂಲಕ ಧರ್ಮ ಪ್ರಚಾರ ಮತ್ತು ದ್ರವ್ಯ ಸಂಪಾದನೆಗೆ ಪ್ರೇರಣೆ ನೀಡಿದುದು ಮತ್ತು ಶಿವಾಜಿಯು ರಾಜಕೀಯ ಪ್ರಚಾರಕ್ಕೆ ಇವರನ್ನು ಗೂಡಾಚಾರಿಕೆಯ ಜವಾಬ್ದಾರಿಯನ್ನು ನೀಡಿದ್ದನೆನ್ನುವ ಮಾತುಗಳು ಈ ವಿಷಯಕ್ಕೆ ಪುಷ್ಟಿ ನೀಡುತ್ತವೆ. ತದನಂತರ ರಾಜ ಪ್ರಭುತ್ವ ನಾಶವಾದಂತೆಲ್ಲಾ ಇವರ ಕಲೆ ಜನಮುಖಿಯಾದಂತಹ ಸ್ವತಂತ್ರ ಅಸ್ತಿತ್ವ ಪಡೆದವು.

ಇವರು ಎಂತಹ ನಿಕೃಷ್ಟ ಜೀವವನ್ನು ನಡೆಸಿದರೂ ಕಲೆಗೆ ಎಂದೂ ಮೋಸಮಾಡಿಲ್ಲ. ತಮ್ಮ ಕಲೆಯನ್ನು ಸಾರ್ವಜನಿಕರಿಂದ ಒಪ್ಪಿಗೆ ಪಡೆಯುವಂತೆ ಅಭಿನಯಿಸಿ ಅದಕ್ಕೆ ಪ್ರತಿಫಲವಾಗಿ ಅವರಿಂದ ಕಾಡಿ, ಬೇಡಿಯೋ ಪಡೆಯುತ್ತಿದ್ದರೆ ಹೊರತು ಕಲೆಯನ್ನು ಮಾತ್ರ ಬಹಳ ನಿಯತ್ತಿನಿಂದ ದುಡಿಸಿಕೊಂಡು ಬಂದಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಈ ಕೆಳಗಿನ ಪ್ರಸಂಗ ನೋಡಬಹುದು. "ಮೈಸೂರು ಅರಸು ಮುಮ್ಮಡಿ ಕೃಷ್ಣರಾಜರು ಆಳುತ್ತಿದ್ದ ಕಾಲವದು. ಒಮ್ಮೆ ಮಹಾರಾಜರ ಅರಮನೆಗೆ ಅನಿರೀಕ್ಷಿತವಾಗಿ ಒಬ್ಬ ಸನ್ಯಾಸಿ ಆಗಮಿಸಿದ. ಮಹಾರಾಜರು ಭಕ್ತಿಯಿಂದ ಬರಮಾಡಿಕೊಂಡು ಉಚಿತ ಗೌರವ ಸಲ್ಲಿಸಿ ಬೊಗಸೆ ತುಂಬಾ ದಕ್ಷಿಣೆಯನ್ನು ಕಾಣಿಕೆಯಾಗಿ ಅರ್ಪಿಸಿದರು. ಸನ್ಯಾಸಿ ಅದನ್ನು ಸ್ವೀಕರಿಸದೆ ನಿರ್ಲಿಪ್ತ ಪ್ರಭಾವದಿಂದ ಹಾಗೇಯೇ ಎದ್ದು ಹೋದ. ಮರುದಿನ ಒಬ್ಬ ಭಿಕ್ಷುಕ ಆಗಮಿಸಿದ ಮಹಾರಾಜರು ಒಂದು ಚೂರು ನಾಣ್ಯ ಹಾಕಲು ಹೇಳಿದರು. ಭಿಕ್ಷುಕ ತಡೆದು 'ಮಹಾರಾಜ, ನಿನ್ನೆ ನನಗೆ ಬೊಗಸೆ ತುಂಬ ದಕ್ಷಿಣೆ, ಕಾಣಿಕೆ ಕೊಡಲು ಮುಂದಾದವರು ಇಂದು ಒಂದು ಚೂರು ನಾಣ್ಯ ನೀಡುವುದು ನ್ಯಾಯವೇ?' ಎಂದು ಪ್ರಶ್ನಿಸಿದ ಅರಸರು ಅವಕ್ಕಾದರು, 'ನಿನ್ನೆ ಸನ್ಯಾಸಿ ರೂಪದಲ್ಲಿ ಬಂದವನು ನೀನೆ?' ಎಂದರು. 'ಹೌದು ಸ್ವಾಮಿ ನಾನೊಬ್ಬ ವೇಷಗಾರ ದಿನಕ್ಕೊಂದು ವೇಷ ಹಾಕಿ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ'.

'ನಿನ್ನೆ ಬೊಗಸೆ ದಕ್ಷಿಣೆಯನ್ನು ನಿರಾಕರಿಸಿದವ, ಇಂದು ಏಕೆ ಹೆಚ್ಚು ಆಸೆ ಮಾಡುವೆ?' ನಿನ್ನೆ ಸ್ವೀಕರಿಸಿದ್ದರೆ ಸನ್ಯಾಸಿ ವೇಷಕ್ಕೆ ಅನ್ಯಾಯ ಮಾಡಿದಂತಾಗುತ್ತಿದ್ದಿತು. ಇಂದು ಭಿಕ್ಷುಕನಾಗಿ ಬೇಡಬೇಕಾದದು ನನ್ನ ಧರ್ಮ' ಎಂದು ಉತ್ತರಿಸಿದ. ಸಂತುಷ್ಟನಾದ ಅರಸರು "ನಿನ್ನೆ ನೀನು ನಟಿಸಿದ ನಿರ್ಲಿಪ್ತಭಾವದ ಯೋಗಿಗಳು ನಿಜ ಜೀವನದಲ್ಲಿ ಇರುವುದನ್ನು ಊರೂರು ಅಲೆಯುವ ನೀನು ಎಲ್ಲಿಯಾದರೂ ಕಂಡಿರುವೆಯಾ?" ಕಂಡಿದ್ದೇನೆ ಮುಳುಗುಂದದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿ ಎಂಬುವರಿದ್ದಾರೆ ಎಂದು ಹೇಳಿದ. ಮಹಾರಾಜರು ಆತನ ವೇಷಗಾರಿಕೆಗೆ ಮೆಚ್ಚಿ ದೊಡ್ಡ ಭಿಕ್ಷೆ ನೀಡಿ ಅತ್ತ ಕಳುಹಿಸಿದರು."[2] ಹೀಗೆ ಈ ವೇಷಗಾರರು ನಟನಾ ಚಾತುರ್ಯಕ್ಕಲ್ಲದೆ ನಿಯತ್ತು, ನಿಯಮದಲ್ಲಿಯೂ ಅಷ್ಟೇ ಕಠಿಣ ಮತ್ತು ನಿರಾಶಾವಾದಿಗಳು ಎಂಬುದನ್ನು ಈ ಚಿತ್ರಣ ಸ್ಪಷ್ಟ ಪಡಿಸುತ್ತದೆ.

ಇವರು ತಮ್ಮ ತಲ ತಲಾಂತರದಿಂದಲೂ ವೇಷಗಾರಿಕೆಯ ಪ್ರತಿಫಲವಾಗಿ ಪಡೆದ ಹಣ, ಆಸ್ತಿ, ಬಟ್ಟೆಗಳಿಂದಲೇ ಜೀವನ ನಿರ್ವಹಿಸುವುದಾಗಿ ಹೇಳುತ್ತಾರೆ. ಒಂದೊಂದು ಊರಿನಲ್ಲಿ ಕೆಲವು ದಿನಗಳ ಕಾಲ ಪ್ರದರ್ಶನ ನಡೆಸಿ ಪ್ರತಿಯೊಂದು ಮನೆಯಿಂದ ಕಾಣಿಕೆಯಾಗಿ ಹಣ, ದವಸ ಧಾನ್ಯ, ಕುರಿ, ಆಕಳು, ಬಟ್ಟೆ ಪಡೆಯುವುದುಂಟು. ಹಲವು ಸಲ ಇವರ ಕಲೆಯನ್ನು ನೋಡಿ ಮನರಂಜಿಸಲು ಊರುಗಳಲ್ಲಿ ವಿಶೇಷ ಕಾರ್ಯಕ್ರಮವಿರುವ ಸಂದರ್ಭದಲ್ಲಿ ಕರೆಯಿಸಿ ವೇಷಗಳನ್ನು ಆಡಿಸಿ ಸಂತೋಷಿಸಿದ ಸಂದರ್ಭಗಳೂ ಇನ್ನೂ ಮಾಸಿಲ್ಲ. ಕೆಲವರು ಇವರ ಅಭಿನಯವನ್ನು ಮೆಚ್ಚಿ ಬಂಗಾರ, ಹೊಲ, ಮನೆ, ಕುರಿ, ಗೋವುಗಳನ್ನು ಧಾರಾಳವಾಗಿ ನೀಡಿದ ಸಂದರ್ಭಗಳೂ ಉಂಟು. ಆದರೆ ಇವಾವು ಇವರು ಉಳಿಸಿಕೊಳ್ಳಲಿಲ್ಲ. ಏಕೆಂದರೆ ಹಣ, ಆಸ್ತಿಗಾಗಿ ಇವರು ಎಂದೂ ಬಾಳಿದವರಲ್ಲ. ಇವರಿಗೆ ಬೇಕಾದುದು ಒಂದು ದಿನದ ಕೂಳು, ಕುಡಿಯಲು ಹೆಂಡ ಅಥವಾ ಸರಾಯಿ ಇದನ್ನು ಬಿಟ್ಟು ಬೇರೆನನ್ನೂ ಆಪೇಕ್ಷಿಸಿಲ್ಲ. ಇವರು ಬದುಕಿನಲ್ಲಿ ಸ್ಥಿರಾಸ್ಥಿ ಬಗ್ಗೆ ಯಾವುದೇ ಕನಸುಗಳನ್ನು ಕಟ್ಟಿಕೊಂಡವರಲ್ಲ. 'ಇಂದಿನ ಚಿಂತೆ ಇಂದಲ್ಲದೆ ನಾಳೆಯ ಚಿಂತೆ ನಮಗೇಕಯ್ಯ' ಎನ್ನುವ ತತ್ವದಡಿಯಲ್ಲಿ ಬಾಳಿದವರು. ನಾಳೆಗಾಗಿ ಇವರು ಎಂದೂ ಚಿಂತೆ ಮಾಡಲಿಲ್ಲ. ಇಂದು ಅವರ ಕೈಯಲ್ಲಿ ಎಷ್ಟೇ ಹಣವಿರಲಿ ಅದನ್ನು ಅಂದೇ ತಿಂದು, ಕುಡಿದು ಮುಗಿಸಿಬಿಡುತ್ತಾರೆ. ಇದು ಇವರದೇ ಆಗಿರುವಂತಹ ಒಂದು ಕಾಯಕ ತತ್ವ. ಜನ ನೀಡಿದ ಬಂಗಾರ, ಹೊಲ, ಮನೆ ಇವಾವನ್ನು ಉಳಿಸಿಕೊಳ್ಳಲಿಲ್ಲ. ಯಾವ ಊರಿನಲ್ಲಿ ಕಾಣಿಕೆಯಾಗಿ ನೀಡುತ್ತಾರೊ, ಅದೇ ಊರಿನಲ್ಲಿ ಮಾರಿಕೊಂಡು ಹೋಗಿದ್ದಾರೆ. ಅಂದು ಅವರಿಗೆ ಹಣ, ಹೊಲ, ಮನೆ, ಬಂಗಾರ ಇದಾವುದೂ ಬೇಕಾಗಿದ್ದಿಲ್ಲ. ಇವರಿಗೆ ಜನರ ನಂಬಿಕೆ ಅವರ ಅಭಿಮಾನವೇ ಆಸ್ತಿಯಾಗಿದ್ದಿತು.

ಸ್ವಾತಂತ್ರಪೂರ್ವದಲ್ಲಿ ಇವರು ಇನ್ನೊಂದು ಬಹುಮುಖ್ಯ ಕಾರ್ಯ ನಿರ್ವಹಿಸಿರುವುದು ಇವರು ಹಾಡುವ ಬುರ್ರ ಕಥೆಗಳಿಂದ ತಿಳಿದು ಬರುತ್ತದೆ. ದೇಶದ ಸ್ವಾತಂತ್ರ್ಯಕ್ಕೆ ವೀರರ ಕಥೆಗಳನ್ನು ಹೇಳುವ ಮುಖಾಂತರ ಜನರನ್ನು ಸ್ವತಂತ್ರ ಹೋರಾಟಕ್ಕೆ ಅಣಿ ಮಾಡಿರುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಇವರು ಇಂದಿಗೂ ಹೇಳುವ ಅಲ್ಲೂರಿ ಸೀತರಾಮರಾಜು, ಉಯ್ಯಾಲವಾಡ ನರಸಿಂಹರೆಡ್ಡಿ, ಇನ್ನು

ಮುಂತಾದ ಕಥೆಗಳ ಮೂಲಕ ಸ್ವಾತಂತ್ರ ಹೋರಾಟಕ್ಕೆ ಅಳಿಲು ಸೇವೆ ಸಲ್ಲಿಸಿದ್ದಾರೆ ಎಂದು ತಿಳಿದುಬರುತ್ತದೆ.

೪.೨. ಸ್ವಾತಂತ್ರ ನಂತರ

ಸ್ವತಂತ್ರ ನಂತರದಲ್ಲಿಯೂ ಅದೇ ರೀತಿಯ ಜೀವನ ನಡೆಸಿದರಾದರೂ ೧೯೮೨ರಲ್ಲಿ ಆಂಧ್ರ ಪ್ರದೇಶದಲ್ಲಿ ಒಂದು ಕ್ರಾಂತಿಯನ್ನೇ ನಡೆಸಿ ತಮ್ಮ ನಾಗರಿಕ ಹಕ್ಕುಗಳಿಗಾಗಿ ಬಹಳ ಹೋರಾಟ ನಡೆಸಿರುವುದು ಕಂಡುಬಂದಿದೆ. ಹಳ್ಳಿಗಳ, ಮಂಡಲಗಳ, ತಾಲ್ಲೂಕುಗಳ, ಜಿಲ್ಲೆಗಳ ಹಾಗೂ ರಾಜ್ಯಮಟ್ಟದಲ್ಲಿ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಎನ್.ಆರ್. ವೆಂಕಟೇಶ್, ಮತ್ತು ನಿದಾನ ಕವಿ ಬಾಬುರಾವ್ ಅವರ ಹೋರಾಟವನ್ನು ಸ್ಮರಿಸಬಹುದು. ಇವರು ಆಂಧ್ರಪ್ರದೇಶದ ಪ್ರತಿಯೊಂದು ಹಳ್ಳಿಹಳ್ಳಿಗಳಿಗೂ ಕಾಡುಮೇಡು, ಬೆಟ್ಟ-ಗುಡ್ಡಗಳನ್ನು ಲೆಕ್ಕಿಸದೆ ಸೈಕಲ್ ಮೂಲಕ ತಿರುಗಿ ತಮ್ಮ ಸಮುದಾಯವನ್ನು ಒಂದುಗೂಡಿಸುವಲ್ಲಿ, ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ, ಅವರಿಗೆ ಸರ್ಕಾರದ ಯೋಜನೆಯಲ್ಲಿ ಮನೆಗಳನ್ನು ಕೊಡಿಸಲು, ಈ ಕಲೆಗಳನ್ನು ಉಳಿಸಿಕೊಳ್ಳಲು ಮತ್ತು ತಮ್ಮಲ್ಲಿ ಸಂಪ್ರದಾಯಿಕವಾಗಿ ಬಂದ ಅಸಂಬದ್ಧ ನಿಯಮಗಳನ್ನು ತೊಡೆದು ಹಾಕುವಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ. ಅಂತಹ ಹೋರಾಟದ ಮುಂದಾಳತ್ವ ಕರ್ನಾಟಕದ ವೇಷಗಾರರಲ್ಲಿ ಕಂಡುಬಂದಿಲ್ಲದಿರುವುದು ವಿಷಾದದ ಸಂಗಯೇ ಸರಿ. ಇತ್ತೀಚಿಗೆ ಈ ಸಮುದಾಯವನ್ನು ಸಂಘಟಿಸುವ ಸಲುವಾಗಿ ಡಾ ಕೆ.ಎಂ. ಮೈತ್ರಿ ಅವರು ಪ್ರಯತ್ನಿಸುತ್ತಿರುವುದನ್ನು ಸ್ಮರಿಸಬಹುದಾಗಿದೆ.

ಇವರಿಗೆ ಸ್ವಂತದೆನ್ನುವ ತುಂಡು ಭೂಮಿಯೂ ಇಲ್ಲ. ಆದುದರಿಂದ ವ್ಯವಸಾಯ ಹಾಗೂ ಪಶುಪಾಲನೆ ಇವರಿಂದ ಇನ್ನು ದೂರವಾಗಿಯೇ ಉಳಿದಿದೆ. ಭೂಮಿ ಇರುವವರು ಇವರಲ್ಲಿ ಒಬ್ಬರಿಬ್ಬರಿದ್ದರೆ ಸಮಯಕ್ಕೆ ಸರಿಯಾಗಿ ಬಿತ್ತನೆ, ಕೊಯ್ಲು, (ಹಾಗೂ ಸರಿಯಾದ ಪೋಷಣೆ ಮಾಡದೆ ಇರುವ) ಸಮಯದಲ್ಲಿ ಮಾತ್ರ ಇದ್ದು ಉಳಿದ ಕಾಲದಲ್ಲಿ ಸರಿಯಾದ ಪೋಷಣೆ ಮಾಡದೆ ಇರುವುದರಿಂದ ಇವರಿಗೆ ವ್ಯವಸಾಯವೂ ಕೈಗೆ ದಕ್ಕುವುದಿಲ್ಲ.

ಪೂರ್ವದಲ್ಲಿ ದೂರದರ್ಶನ, ಸಿನಿಮಾದಂತಹ ಮನರಂಜನೆಯ ಮಾಧ್ಯಮಗಳು ಇಲ್ಲದಿರುವುದರಿಂದ ಇವರ ಸಾಂಸ್ಕೃತಿಕ ಕಲೆಗೆ ಬಹಳ ಬೇಡಿಕೆ ಇದ್ದಿತು. ಆದ್ದರಿಂದ ಉಧಾರವಾದ ಆರ್ಥಿಕ ನೆರವು ಮತ್ತು ಮಾನ್ಯತೆಯೂ ಇತ್ತು. ಇಂದು ಇವರ ಪೋಷಕರನ್ನು ಆಧುನಿಕ ಮಾಧ್ಯಮಗಳು ಆಕರ್ಷಿಸಿಕೊಂಡು ಇವರ ವೃತ್ತಿ ಮತ್ತು ಕಲೆಯನ್ನು ಬರಡಾಗಿಸುವ ಸಮಯ ಸಮೀಪಿಸುತ್ತಿದೆ.

ಹೆಂಡ ಅಥವಾ ಸರಾಯಿ ಕುಡಿಯುವುದು ಇವರ ಕುಲ ಸಂಪ್ರದಾಯವಾಗಿ, ಇವರ ಕುಲದಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಈ ಮಧ್ಯಪಾನ ಚಟವು ಅಂಟಿಕೊಂಡಿದೆ. ಇವರ ಗಳಿಕೆಯ ಶೇಕಡ ಐವತ್ತು ಭಾಗವನ್ನು ಕುಡಿತದಿಂದಲೇ ಹಾಳು ಮಾಡುತ್ತಿದ್ದಾರೆ. ಇದರಿಂದ ಇತರ ಜನರು ಇವರನ್ನು ಕೀಳಾಗಿ

ಕಾಣುತ್ತಿದ್ದಾರೆಂದು, ಈ ಚಟ ಸಾಮಾಜಿಕ ಅಂತಸ್ಥನ್ನು ನಿರ್ಣಯಿಸುತ್ತದೆಂಬುದು ಇವರಿಗೆ ತಿಳಿದಿಲ್ಲ. ಈ ಬಗೆಯ ಅನಿಷ್ಟ ಹವ್ಯಾಸಗಳನ್ನು ಇವರು ತೊರೆಯುವತ್ತ ಜಾಗೃತರಾಗಬೇಕಾಗಿದೆ.

ಈ ಸಮುದಾಯದಲ್ಲಿ ಬಾಲ್ಯವಿವಾಹ ಪದ್ಧತಿ ಹೆಚ್ಚು ಕಂಡುಬರುತ್ತದೆ. ಈ ಬಾಲ್ಯ ವಿವಾಹ ಪದ್ಧತಿಯು ಕೂಡ ಮಕ್ಕಳ ಜೀವನದ ಸುಧಾರಣೆಯನ್ನು ಕುಂಟಿತಗೊಳಿಸಿದೆ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಿ ಸಂಸಾರದ ಜವಾಬ್ದಾರಿಯನ್ನು ಹೊರಿಸಿ ಬೇರೆ ಹಾಕುತ್ತಾರೆ. ಇದರಿಂದ ತಮ್ಮ ಹೊಟ್ಟೆ, ಬಟ್ಟೆ ನೋಡಿಕೊಂಡು ಸಂಸಾರ ನಿಭಾಯಿಸುವುದೇ ಕಷ್ಟವಾಗಿ, ಅನಿವಾರ್ಯದಿಂದ ತಮ್ಮ ಕುಲ ಸಂಪ್ರದಾಯ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲೇಬೇಕಾದ ಪರಿಸ್ಥಿತಿ ಬಂದಿದೆ. ಏಕೆಂದರೆ ಬೇರೆ ಪರ್ಯಾಯ ವೃತ್ತಿ ಕೈಗೊಳ್ಳಲು, ವಿದ್ಯಾಭ್ಯಾಸವಿಲ್ಲದಿರುವುದರಿಂದ ಜ್ಞಾನದ ಕೊರತೆ ಒಂದು ಕಡೆಯಾದರೆ, ಬಂಡವಾಳದ ಕೊರತೆ ಮತ್ತೊಂದು ಕಡೆ ತಲೆ ಎತ್ತುತ್ತದೆ. ಹೀಗೆ ಬಾಲ್ಯ ವಿವಾಹವು ಸಹ ಇವರ ಸಾಮಾಜಿಕ ಸ್ಥಿತಿ ಹಿಂದುಳಿಯುಕೆಗೆ ಕಾರಣವಾಗಿದೆ.

ಇವರಲ್ಲಿ ಕುಟುಂಬ ನಿಯಂತ್ರಣದ ವ್ಯವಸ್ಥೆ ಇಲ್ಲದಿರುವುದರಿಂದ ಒಬ್ಬೊಬ್ಬರಿಗೆ ಐದಾರು ಮಕ್ಕಳಾಗಿ ಅವುಗಳನ್ನು ಸಾಕಲು ಬವಣೆ ಪಡಬೇಕಾಗಿದೆ. ಆ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ ಎಲ್ಲಿಂದ ಬರಬೇಕು. ಇವರು ಸದಾ ಅಲೆಯುವವರಾಗಿದ್ದರಿಂದ ಪರಿಸರ ಬದಲಾವಣೆಗೆ ಹೆದರಿ ಕುಟುಂಬ ನಿಯಂತ್ರಣವನ್ನು ಸಹ ಮಾಡಿಸುವುದಿಲ್ಲ. ಈ ಸ್ಥಿತಿಯು ಸಹ ಇವರ ಆರ್ಥಿಕ ಹಿಂದುಳಿಯುವಿಕೆಗೆ ಕಾರಣವಾಗಿದೆ.

ವೇಷಗಾರರು ಊರ ಹೊರಗಡೆ ತಂಗುವುದರಿಂದ ಮತ್ತು ಪ್ರದೇಶಗಳಿಗೆ ಹೊಸಬರಾಗಿರುವುದರಿಂದ ಇವರ ಜೀವನ ವಿಧಾನದದಿಂದ ಆ ಪ್ರದೇಶದ ಜನರು ಇವರನ್ನು ಅನುಮಾನದಿಂದಲೇ ನೋಡುತ್ತಾರೆ. ಸಮಾಜದಲ್ಲಿ ಎಲ್ಲರಿಗೂ ಸಿಗುವ ಸ್ಥಾನಮಾನ ಸಿಗುವುದಿಲ್ಲ. ಅಸ್ಪೃಶ್ಯರಂತೆ ನೋಡುತ್ತಿದ್ದಾರೆ. ಈ ಸ್ಥಿತಿ ಇವರನ್ನು ಮಾನಸಿಕವಾಗಿ ದುರ್ಬಲರನ್ನಾಗಿಸಿದೆ.

೪.೩. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ

ವೇಷಗಾರರನ್ನು ೧೮೯೧ ಕುರಿತು ಕೇಂದ್ರೀಯ ಪ್ರಾಂತ್ಯದ ಜನಗಣತಿ ಆಯುಕ್ತರ ಅಭಿಪ್ರಾಯವೇನೆಂದರೆ "The Bahurpies from an example of the mode in which the followers of a particular occupation tend to become a distict Caste. The Man are by profession story tellers, mimics, animitating the voice of men and the notes of animals, their male children are also trained to dance. In payment for their entertainment they are usually content with caste of cloths. The mahor mang and mar ata division of Bhurupies are the most frequent in Berar; the former two begging only from the caste which they take this named"[8] ಅನುವಾದ ಬಹುರೂಪಿಗಳು ನಿರ್ದಿಷ್ಟವಾದ

ವೃತ್ತಿಯೊಂದಿಗೆ ಗುರುತಿಸಿಕೊಳ್ಳುವವರನ್ನು ಇಂತಹದೆ ಜಾತಿಯವರೆಂದು ಉಲ್ಲೇಖಿಸಬಹುದು. ಗಂಡಸರು ವೃತ್ತಿಪರ ಕತೆಗಾರರು, ಏಕಾಭಿನಯ, ಅಣುಕುದಾರರಾದ ಇವರು ಮನುಷ್ಯನ ಮತ್ತು ಪ್ರಾಣಿಗಳ ನಡುವಳಿಕೆಗಳನ್ನು ಅನುಕರಿಸುವರು. ಗಂಡು ಮಕ್ಕಳಿಗೆ ನೃತ್ಯ ತರಬೇತಿ ನೀಡುತ್ತಾರೆ. ಇವರು ನೀಡುವ ಪ್ರದರ್ಶನಗಳಿಗೆ ಸಂಭಾವನೆಯನ್ನು ದೂರದಿಂದ ಎಸೆಯುತ್ತಾರೆ. ಮಹಾರ್, ಮಾಂಗ್ ಮತ್ತು ಮರಾಠಿ ಪ್ರಾಂತ್ಯದ ೧೯೫೬ರಲ್ಲಿ ಸರ್ಕಾರ ಕೆಲವು ಜಾತಿಗಳಿಗೆ ಪ್ರಾದೇಶಿಕ ವ್ಯಾಪ್ತಿ ನಿಗಧಿ ಪಡಿಸಿತ್ತು. ಅವುಗಳೆಲ್ಲವೂ ದಕ್ಷಿಣ ರಾಜ್ಯದ ನೆರೆಹೊರೆ ಜಿಲ್ಲೆಗಳಾಗಿದ್ದವು. ಬಹುರೂಪಿಗಳಾದವರು ಬೇರಾರ್‌ನಲ್ಲಿ ಆಗಾಗ ಕಾಣಿಸಿಕೊಳ್ಳುವರು. ಭಿಕ್ಷುಕರಾದವರು ಪೂರ್ವದಿಂದಲೂ ತಮ್ಮನ್ನು ಸಂಬಾಳಿಸುವ ಜಾತಿಯ ಜನರುಗಳ ಬಳಿ ಬೇಡುತ್ತಾರೆ.

ಅನಾದಿ ಕಾಲದಿಂದಲೂ ಆಸ್ತಿಪಾಸ್ತಿಗಳಿಲ್ಲದೆ ನಿರ್ಗತಿಕರಾದ ಇವರು ಜೀವನೋಪಾಯಕ್ಕೆ ಇಂತಹ ವೃತ್ತಿಯನ್ನು ಕೈಗೊಂಡಿದ್ದಾರೆ. ಅಂದರೆ ಅಂದಿನ ಜೀವನ ವಿಧಾನವನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ.

ಮೊದಲನೆಯದಾಗಿ ಬುಡ್ಗ ಜಂಗಂ ಕುಲ ನಿಜಾಂ ಪ್ರಭುತ್ವದಲ್ಲಿ ಬಂದ ೧೯೪೪ರ ರಾಜ್ಯಪತ್ರದಲ್ಲಿ ಗುರುತಿಸಿದರು. ಆ ಪತ್ರದಲ್ಲಿ ಬೇಡ ಜಂಗಂನೊಂದಿಗೆ ಕಲಿಸಿ ಬುಡ್ಗ ಜಂಗಂ ಕುಲವನ್ನು ಬೇಡ (ಬುಡ್ಗ) ಜಂಗಂ ಎಂದು ಕ್ರಮಸಂಖ್ಯೆ ೪ ರಲ್ಲಿ ಗುರುತಿಸಿದರು.

೧೯೫೧ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯಾಗಿ ಗುರುತಿಸಿದುದು ಕೇವಲ ೩೭ ಕುಲಗಳು ಮಾತ್ರ. ಆ ಪಟ್ಟಿಯಲ್ಲಿ ಬುಡ್ಗ ಜಂಗಂ ಕುಲ ಕ್ರಮಸಂಖ್ಯೆ ೪ ರಲ್ಲಿ ಬೇಡ (ಬುಡ್ಗ) ಜಂಗಂ ಎಂಬ ಹೆಸರಿನಿಂದ ಗುರುತಿಸಲಾಗಿದೆ.

ಭಾರತದ ಆಡಳಿತದ ಜನಗಣತಿಯ ದಾಖಲೆಯ ಆಧಾರದಿಂದ ೧೯೫೬ರಲ್ಲಿ ಬಂದ ಸರ್ಕಾರಿ ಆದೇಶದ ಪ್ರಕಾರ ಈ ಕುಲದ ಕ್ರಮ ಸಂಖ್ಯೆ ೪ರಲ್ಲಿಯೇ ಬೇಡ (ಬುಡ್ಗ) ಜಂಗಂ ಎಂದು ಗುರುತಿಸಲಾಯಿತು. ಅದು ತೆಲಂಗಾಣ ಜಿಲ್ಲೆಯಲ್ಲಿಯೇ ಮಾತ್ರ ಈ ಜನರಿದ್ದಾರೆಂದು ನಮೂದಿಸಲಾಯಿತು. ಇದನ್ನೇ ೧೯೭೧ರಲ್ಲಿಯೂ ಸಹ ಯಥವಾತ್ತಾಗಿ ಆಡಳಿತ ಮುಂದುವರಿಯಿತು.

The Scheduled Cast and Scheduled Tribes Order (Amendment) Act 1976ರಲ್ಲಿ ಹೊರಡಿಸಿದ ರಾಜ್ಯಪತ್ರದಲ್ಲಿ ಬುಡ್ಗಂ ಜಂಗಂ, ಬೇಡ ಜಂಗಂ ಬ್ರಾಕೆಟ್ ತೆಗೆದುಹಾಕಿ ಕ್ರಮ ಸಂಖ್ಯೆ ೯ರಲ್ಲಿ ಈ ಎರಡು ಕುಲಗಳನ್ನು ಬೇರೆ ಬೇರೆಯಾಗಿ ಪ್ರಸ್ತಾಪಿಸಿದರು. ಒಳಗಡೆ ತೆಲಂಗಾಣ ಜಿಲ್ಲೆಗೆ ಸೀಮಿತವಾದ ಈ ಕುಲವನ್ನು ರಾಷ್ಟ್ರವ್ಯಾಪಿಯಾಗಿ ಗುರುತಿಸಿದರು.

ಇದರಿಂದ ಒಂದು ಅನಾಹುತ ಜರುಗಿತು. ಬೇಡ ಜಂಗಂ ಹೆಸರಿನಿಂದ ಶ್ರೀ ನಾಗಂ ಚಂದ್ರಶೇಖರ ಲಿಂಗಂ ಒಂಗೋಲು ಅವರು ಭಾರತೀಯ ಆಡಳಿತ ಸೇವೆಗೆ ಆಯ್ಕೆಯಾದ ಸಂದರ್ಭದಲ್ಲಿ ತಪ್ಪು ಜಾತಿ ಪ್ರಮಾಣ ಪತ್ರ ಹೊಂದಿದ್ದಾನೆಂದು ಆಡಳಿತ ಶಾಖೆ ಈತನನ್ನು ವಿರೋಧಿಸಿದರು. ೧೯೮೩ರಲ್ಲಿ ಇವರು

ಹೈಕೋರ್ಟಿಗೆ ರಿಟ್ ಸಲ್ಲಿಸಿದರು. ಕೇಸು ಮುಂದುವರಿಯುತ್ತಿರಬೇಕಾದರೆ ಸಮಾಜ ಮತ್ತು ಕಲ್ಯಾಣ ಇಲಾಖೆಯ ಕಾರ್ಯದರ್ಶಿ ೧೯೮೪ರ ಕಾಯ್ದೆಯನ್ನು ಜಾರಿಗೊಳಿ, ಕುಲ ದೃಡೀಕರಣ ನೀಡುವ ಅಧಿಕಾರ (Mro) Mandal revinue Office ನಿಂದ (RDO) Revenue Department Office ಪರಿಧಿಗೆ ತಂದರು. ಬೇಡ ಜಂಗಂ ಕುಲ ಆಂಧ್ರಪ್ರದೇಶದಲ್ಲಿ ಎಲ್ಲಿಯೂ ಇಲ್ಲ. ಇವರು ಮಾಂಸಹಾರಿಗಳು, ಉಡ, ಇಲಿ, ಕುಂದಲಿ, ಮೊಲ ಮೊದಲಾದವು ತಿನ್ನುತ್ತಾರೆ. ಬೇಟೆ ಅವರ ಸಂಪ್ರದಾಯ ಇವರನ್ನು ಇತರರು ಕೀಳಾಗಿ ಕಾಣುತ್ತಾರೆ. ಇವರನ್ನು ಬೇಡ ಜಂಗಾಲು ಎಂದು, ಬುಡ್ಗ ಜಂಗಾಲು ಎಂದು ಗುರುತಿಸಬೇಕೆಂದು ಆ ಪತ್ರದಲ್ಲಿ ಪ್ರಸ್ತಾಪಿಸಲಾಯಿತು.

೧೯೫೫ರಲ್ಲಿ ಬಂದ ಪರಿಶಿಷ್ಟ, ಹಿಂದುಳಿದ ವರ್ಗಗಳ ಕಮಿಷನರ್ ಈ ರೀತಿ ಹೇಳಿದರು. ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿದ ಎಲ್ಲಾ ಕುಲಗಳನ್ನು ಕೀಳುತನದಿಂದ ಕಾಣದಿದ್ದರೂ, ಅವರ ಆರ್ಥಿಕ, ವಿದ್ಯಾ ವಿಷಯದ ರಂಗದಲ್ಲಿ ಹಿಂದುಳಿವಿಕೆಯನ್ನು ಗುರುತಿಸಿ, ಅವರನ್ನು ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕಾಗಿ ಬಂದಿವೆ ಎಂಬ ಅಂಶವನ್ನು ನ್ಯಾಯಮೂರ್ತಿಗಳು ಉದಾಹರಿಸಿ, ನಾಗಂಚಂದ್ರಶೇಖರ ಲಿಂಗಂ ಅವರಿಗೆ ಭಾರತೀಯ ಆಡಳಿತ ಸೇವೆಗೆ ಉದ್ಯೋಗ ನೀಡಲು ನಿರಾಕರಿಸಿದುದು ದುರುದ್ದೇಶದಿಂದ ಕೂಡಿದೆ ಎಂದು ಹೇಳಿ ಇವರನ್ನು ಭಾರತೀಯ ಆಡಳಿತ ಸೇವೆ ಶಿಕ್ಷಣ ಸಂಪುಟಕ್ಕೆ ಆಯ್ಕೆಯಾಗುವಂತೆ ತೀರ್ಪು ನೀಡಿದರು.

೧೯೭೬ರ ರಾಜ್ಯಪತ್ರದಲ್ಲಿ ಈ ಕುಲವನ್ನು ಕ್ರಮ ಸಂಖ್ಯೆ ೯ ಆಗಿರಬೇಕಾದರೆ ಮತ್ತೆ ಸರಕಾರಿ ಆಡಳಿತ ಸೇವೆ ೨೦೪ರಲ್ಲಿ ಕ್ರಮ ಸಂಖ್ಯೆ ೬ರಲ್ಲಿ ಇರಿಸಿ ಬೇಡ ಜಂಗಮು, ಬುಡಗ ಜಂಗಮು ಕುಲವನ್ನು ಮತ್ತೆ ಬ್ರಾಕೆಟ್‌ನಲ್ಲಿ ಕಲಿಸಿ ಬೇಡ (ಬುಡ್ಗ) ಜಂಗಂ ಎಂದು ಹೆಸರಿಸಿದರು. ಹೀಗೆ ಇರಬೇಕಾದರೆ ೬-೬-೧೯೮೬ನೇ ಸರ್ಕಾರಿ ಆದೇಶದ ೧೨೨ ಜಾರಿಗೊಳಿಸಿ ಅದರಲ್ಲಿ ಇವರು ಕುಲವನ್ನು ಕ್ರಮ ಸಂಖ್ಯೆ ೫ರಲ್ಲಿ ಬೇಡ ಬುಡ್ಗ ಜಂಗಂ ಎಂದು ಹೆಸರಿಸಿದರು ಮತ್ತೆ ೧೯೮೬ರಲ್ಲಿ ಹೊಸ ನಿಯಮ ಹೊರಡಿಸಿ ಬೇಡ, ಬುಡ್ಗ ಜಂಗಂ ಕುಲವನ್ನು ಸೇರಿ ೫೬ ಕುಲಗಳನ್ನು ಸರಿಯಾಗಿ ವಿಚಾರಣೆ ನಡೆಸಿ ರೆವಿನ್ಯೂ ಇಲಾಖೆಗಳು ಜಾತಿಪ್ರಮಾಣ ಪತ್ರ ನೀಡಬೇಕೆಂದು ನಿರ್ಬಂಧ ಹೇರಿದರು. ಇದರಿಂದ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸಂಬಂಧಿಸಿದ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ., ಇದು ಆಂಧ್ರಪ್ರದೇಶದ ಚರಿತ್ರೆಯಾದರೆ ಇನ್ನು ಕರ್ನಾಟಕದಲ್ಲಿ ೧೯೭೬ರಲ್ಲಿ ಹೊರಡಿಸಿದ ಪಟ್ಟಿಯ ಪ್ರಕಾರ ರಾಜ್ಯಗಳ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಕ್ರ.ಸಂ. ೧೯ರಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಅದೇ ಪಟ್ಟಿಯ ಕ್ರ.ಸಂಖ್ಯೆ ೯ರಲ್ಲಿ ಬೇಡ ಜಂಗಂ ಮತ್ತು ಬುಡಗ ಜಂಗಮ ಎಂಬ ಎರಡು ಜಾತಿಗಳು ದಾಖಲಾಗಿವೆ. ಇವು ಬೇಡ ಜಂಗಮು, ಬುಡಗ ಜಂಗಾಲು ಸಮುದಾಯವನ್ನೇ ಪ್ರತಿನಿಧಿಸುವ ಪದಗಳಾಗಿದ್ದರೂ ಸರ್ಕಾರಕ್ಕೆ ಬಿಡಿಸಲಾಗದ ಕಗ್ಗಂಟಾಗಿರುವುದರಿಂದ ಸಂವಿಧಾನಬದ್ಧ ಸೌಲಭ್ಯಗಳಿಂದ ಈ ಸಮುದಾಯಗಳು ವಂಚಿಸಲ್ಪಟ್ಟಿರುವವು.’’[೪]

ಆಂಧ್ರಪ್ರದೇಶದಲ್ಲಿ ೧೯೮೫ರಲ್ಲಿ ಇವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ತಕ್ಕ ಚರ್ಯೆ ತೆಗೆದುಕೊಳ್ಳಲು, ಜಾತಿ ಪ್ರಮಾಣ ಪತ್ರ ಕೊಡಲು ಮಂಡಲ ರೆವಿನ್ಯೂ ಆಫೀಸ್ (MRO) ಪರಿಧಿಯಲ್ಲಿ ಕೊಡಬೇಕೆಂದು ಗೌ|| ಮುಖ್ಯಮಂತ್ರಿ ಶ್ರೀ ತಾರಕ ರಾಮರಾವು ಅವರಿಗೆ ೧೯೮೫ರಲ್ಲಿ ಒಂದು ವಿನಂತಿ ಪತ್ರ ಕೊಟ್ಟರು.

ಕೆಲವು ಅಧಿಕಾರಗಳು ನೀವು ಅಸ್ಪೃಶ್ಯ (Sigma of untouchability) ಎಂದು ಜಾತಿ ಪ್ರಮಾಣ ಪತ್ರ ಕೊಡಲು ನಿರಾಕರಿಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ೧೯೮೬ರಲ್ಲಿ ಸಂಬಂಧಿಸಿದ ಅಧಿಕಾರಿಗಳು ನಿಮಗೆ ನಿಮ್ಮ ಕುಲಗಳು ಮುಟ್ಟಿಸಿಕೊಳ್ಳದಿದ್ದರೆ ಜಾತಿ ಪ್ರಮಾಣಪತ್ರ ನೀಡುತ್ತೇವೆ ಎಂದು ಹೇಳಿ ನಿರಾಕರಿಸುತ್ತಿದ್ದಾರೆ. ಇದೆಲ್ಲಿಯ ನ್ಯಾಯ ಒಂದು ಕಡೆ ಆಡಳಿತ ಅಸ್ಪೃಶ್ಯತೆ, ತಪ್ಪು ಎಂದು ಘೋಷಿಸುತ್ತಿರುವಾಗ ಅಧಿಕಾರಿಗಳು ಈ ರೀತಿಯಾಗಿ ಕೇಳುವುದು ಎಷ್ಟರಮಟ್ಟಿಗೆ ಸಮಂಜಸ. ಸ್ವಾತಂತ್ರ್ಯ ಬಂದು ೫೫ ವರ್ಷಗಳು ಕಳೆದರೂ ಇನ್ನೂ ನಮ್ಮಲ್ಲಿ ಅಸ್ಪೃಷ್ಯತೆ ನೋಡಬೇಕೆಂದೇಳುವ ಅಧಿಕಾರಿಗಳ ವರ್ತನೆಗೆ ಆಶ್ಚರ್ಯವಾಗುತ್ತದೆ.

೪.೪. ಅಭಿವೃದ್ಧಿ ಯೋಜನೆಗಳು

"ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಲ್ಲಿಯವರೆಗೆ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದಾರೆ. ಹಲವಾರು ಯೋಜನೆಗಳನ್ನು ತಯಾರು ಮಾಡಿ ಕಾರ್ಯರೂಪಕ್ಕಿಳಿಸಿದ್ದಾರೆ. ಲಕ್ಷಾಂತರ ಹಿಂದುಳಿದವರು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಹೇಳಬೇಕೆಂದರೆ ಎಷ್ಟು ಸುಧಾರಣೆಯಾಗಬೇಕೋ ಅಷ್ಟು ಆಗಿಲ್ಲವೆನ್ನಬಹುದು."[೫] ಏಕೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಈ ಉಪಯೋಗವನ್ನು ಆಯ್ದ ಕೆಲವು ಜಾತಿ ಮತ್ತು ಪಂಗಡಗಳು ಮಾತ್ರ ಪಡೆಯುತ್ತಿವೆ. ಇನ್ನು ಹಲವಾರು ಸಮುದಾಯಗಳಿಗೆ ಈ ಅಭಿವೃದ್ಧಿ ಯೋಜನೆಗಳ ಪ್ರಯೋಜನ ದೊರೆಯುತ್ತಿದೆ ಎಂಬ ಸಾಮಾನ್ಯಜ್ಞಾನವೂ ಕೂಡ ಇಲ್ಲದ ಎಷ್ಟೋ ಜನರಿದ್ದಾರೆ. ಅಂತಹ ಜನಾಂಗಗಳಲ್ಲಿ ಬುಡಗ ಜಂಗಾಲರು ಒಬ್ಬರು. ಈ ಸಮುದಾಯದ ಎಷ್ಟೋ ಜನರಿಗೆ ಸರ್ಕಾರದ ಅಭಿವೃದ್ಧಿ ಯೋಜನೆಗಳ ಪ್ರಯೋಜನ ಪಡೆಯದೆ ಹಿಂದುಳಿದವರಿಗಿಂತ ಅತಿ ಹಿಂದುಳಿದವರಾಗಿದ್ದಾರೆ. ಕನಿಷ್ಟ ತಮ್ಮ ಜಾತಿಗೆ ಸರ್ಕಾರದಿಂದ ಇಂತಹ ಸೌಲಭ್ಯ ದೊರೆಯುತ್ತದೆ ಎಂದು ಸಹ ಗೊತ್ತಿಲ್ಲ. ಕೆಲವೇ ಸಮುದಾಯಗಳು ಈ ಸೌಲಭ್ಯಗಳನ್ನು ಪಡೆದು ಉದ್ಯೋಗ ಮತ್ತು ರಾಜಕೀಯದಲ್ಲಿಯೂ ಸಹ ಮುಂದುವರೆಯುತ್ತಿವೆ. ಇಂತಹ ಯೋಜನೆಗಳ ಬಗ್ಗೆ ಕೂಲಂಕಶವಾಗಿ ವಿಚಾರಿಸಿ ಎಲ್ಲರಿಗೂ ಸಾಮಾನವಾಗಿ ಹಂಚಿಕೆಯಾಗುವಂತೆ ಕಾಳಜಿ ಮತ್ತು ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆ. ಮುಖ್ಯವಾಗಿ ಈ ಸಮುದಾಯಕ್ಕೆ ಅರಿವು ಮೂಡಿಸುವುದು ಅವಶ್ಯ.

ಈ ನಿಟ್ಟಿನಲ್ಲಿ ಈ ಸಮುದಾಯಕ್ಕೆ ಕನಿಷ್ಟ ಮಟ್ಟದ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಸರಕಾರ ಕೆಲವು ಯೋಜನೆಗಳನ್ನು ಜಾರಿಗೊಳಿಸಬೇಕಾದ ಅಗತ್ಯತೆಯನ್ನು ಈ ಕೆಳಗೆ ನೋಡಬಹುದು.

ಈ ಸಮುದಾಯದ ಶೇಕಡ ಎಪ್ಪತ್ತರಷ್ಟು ಜನರಿಗೆ ತಮ್ಮದೇಯಾದ ನಿವೇಶನ ಮತ್ತು ವಾಸಿಸಲು ನಿರ್ದಿಷ್ಟ ಸ್ಥಳವೂ ಕೂಡ ಇಲ್ಲದೆ ಊರೂರು ಅಲೆಯುತ್ತಿದ್ದಾರೆ. ಇವರು ಬಿಡಾರಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಈಗ ಹಿಂದುಳಿದ ಇಂತಹ ಹಲವಾರು ಸಮುದಾಯಗಳು ಸೇರಿ ಆಶ್ರಯ ಮನೆಗಳಿಗಾಗಿ ಹೋರಾಟ ನಡೆಸುತ್ತಿವೆ. ಸರಕಾರ ಇಂತವರ ಸಮಸ್ಯೆಯ ಬಗ್ಗೆ ಮುತುವರ್ಜಿವಹಿಸಿ ಸಮಸ್ಯೆಯನ್ನು ಪರಿಶೀಲಿಸಿ ಅವರ ಅಗತ್ಯತೆಯನ್ನು ಪೂರೈಸಬೇಕಾದುದು ತುರ್ತಾಗಿ ಆಗಬೇಕಾಗಿದೆ.

ಕಲಾಕಾರರಿಗೆ, ಈ ಕಲೆ ನಾಶವಾಗದಂತೆ ಅಗತ್ಯ ಕಲಾಸಾಮಾಗ್ರಿಗಳನ್ನು ಸರಕಾರವು ನೀಡುವುದರ ಮುಖಾಂತರ ಇವರ ಕಲೆಗೆ ಗೌರವ ನೀಡಬೇಕು. ಹೀಗೆ ಮಾಡುವುದರಿಂದ ಇವರು ತಮ್ಮ ವೃತ್ತಿ ಕಲೆಯನ್ನು ತೊರೆಯದೆ ಹಾಗೆ ಮುಂದುವರೆಸಿಕೊಂಡು ಹೋಗುವುದು ಸಾಧ್ಯವಾಗುತ್ತದೆ. ಇಂದು ಸಾರ್ವಜನಿಕರ ಸಹಾಯ ಇವರಿಗೆ ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಆದ್ದರಿಂದ ಈ ಕಲೆಯನ್ನು ಉಳಿಯುವಂತೆ ನೋಡಿಕೊಳ್ಳಲು ಕೆಲವು ಕಲಾಶಾಲೆಗಳನ್ನು ತೆರೆದು ಇಂತಹ ಕಲೆಗಳ ತರಬೇತಿ ನೀಡುವ ಅವಶ್ಯಕತೆ ಇದೆ. ದೂರದರ್ಶನ, ಸಿನಿಮಾದಂತಹ ಮಾಧ್ಯಮಗಳು ಈ ಕಲೆಗೆ ಮಾರಕವಾಗಿ ಪರಿಣಮಿಸುತ್ತಿವೆಯಾದ್ದರಿಂದ ಈ ರೀತಿಯ ಸಹಾಯ ಬಹಳ ಪರಿಣಾಮಕಾರಿಯಾಗುತ್ತದೆ.

ಹಗಲುವೇಷಗಾರರು ಕಲೆಯನ್ನು ಪ್ರದರ್ಶಿಸಲು ರೈಲು ಮತ್ತು ಬಸ್‌ಗಳಲ್ಲಿ ಅಡ್ಡಾಡಲು ಉಚಿತ ಪಾಸ್ ವ್ಯವಸ್ಥೆ ನೀಡಿದರೆ, ಇಲ್ಲವೆ ವಿನಾಯಿತಿ ನೀಡಿದರೆ ಈ ಕಲೆಯನ್ನು ಪ್ರಚಾರ ಮತ್ತು ಇವರ ಜೀವನ ಮಾರ್ಗಕ್ಕೆ ಕೂಡ ಅನುಕೂಲ ಕಲ್ಪಿಸಿದಂತಾಗುತ್ತದೆ.

ವೃದ್ಧ ಕಲಾಕಾರರಿಗೆ ವೃದ್ದಾಪ್ಯ ವೇತನವನ್ನು ನೀಡುವುದರ ಮೂಲಕ ಇವರು ಜೀವನದಲ್ಲಿ ಪಡುವ ಜಿಗುಪ್ಸೆಯನ್ನು ಕಡಿಮೆ ಮಾಡಬಹುದು. ಹಿಂದಿನಿಂದಲೂ ಇವರು ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟು ಜೀವನವನ್ನು ಹೆದರಿಸಿ ವಿಶಿಷ್ಟವಾದ ಕಲೆಯನ್ನು ಉಳಿಸುವಲ್ಲಿ ಸಹಕಾರಿಯಾದಂತಹ ಇವರನ್ನು ಹೀಗೆ ಪ್ರೋತ್ಸಾಹಿಸಬೇಕಾದ ಅವಶ್ಯವಿದೆ. ಈಗಾಗಲೆ ಆಂಧ್ರಪ್ರದೇಶದಲ್ಲಿ ಈ ಸೌಲಭ್ಯವನ್ನು ಕೆಲವರು ಪಡೆಯುತ್ತಿದ್ದಾರೆ. ಕರ್ನಾಟಕದಲ್ಲಿಯೂ ಈ ವ್ಯವಸ್ಥೆ ಜಾರಿಗೊಳಿಸುವುದು.

ಇಂದು ಇವರ ಕಲೆಗೆ ಸರಿಯಾದ ಪ್ರತಿಫಲ ಸಿಗದೆ ಜೀವನ ನಡೆಸುವುದೇ ದುಸ್ತರವಾಗಿದೆ. ಈಗ ತಮ್ಮ ಜೀವನದ ನಿರ್ವಹಣೆಗೆ ಪರ್ಯಾಯವಾಗಿ ಅನ್ಯ ಕೆಲಸಗಳನ್ನು ಅರಸಿ ಹೋಗುವುದು ಅನಿವಾರ್ಯವಾಗಿದೆ. ಹೀಗೆ ಬೇರೆ ವೃತ್ತಿಯನ್ನು ಕೈಗೊಳ್ಳಲು ಎದುರಾಗಿರುವ ಮುಖ್ಯ ಸಮಸ್ಯೆಯೆಂದರೆ ಬಂಡವಾಳ. ಈಗ ಇವರಲ್ಲಿ ಬಂಡವಾಳವಿಲ್ಲದಿರುವ ಕಾರಣ ಇವರಿಗೆ ಬೇರೆಯವರು ಸಾಲ ನೀಡಲು ಹಿಂಜರಿಯುತ್ತಿದ್ದಾರೆ. ಅದಕ್ಕೆ ಇವರು ಜೀವನ ಮಾಡುವ ವಿಧಾನ ನೋಡಿ ಇವರು ಯಾವ ರೀತಿ ಸಾಲ ತೀರಿಸುತ್ತಾರೆಂದು ಆತಂಕ ಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರಕಾರವೇ ಮುಂದೆ ಬಂದು ಇವರಿಗೆ ಪ್ರತ್ಯೇಕ ಯೋಜನೆಗಳನ್ನು ಮಾಡಿ ಬ್ಯಾಂಕಿನಲ್ಲಿ ಸಾಲದ ವ್ಯವಸ್ಥೆ ನೀಡಬೇಕು. ಈಗಾಗಲೇ ಸಣ್ಣ ಪುಟ್ಟ ವ್ಯಾಪಾರ ಮಾಡುವ ಇವರಿಗೆ ಸಾಲ ನೀಡುವುದರಿಂದ ಇವರು ತಮ್ಮ ವ್ಯಾಪಾರದ ಕ್ಷಿತಜವನ್ನು ದೀರ್ಘವಾಗಿಸಿಕೊಂಡು ಜೀವನಮಟ್ಟದಲ್ಲಿ ಸುಧಾರಣೆಯಾಗುತ್ತದೆ.

ಈ ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ಈ ಮೇಲಿನ ಸೌಲಭ್ಯಗಳಿಲ್ಲದೆ ಇನ್ನೂ ಸೂಕ್ತ ಮಾರ್ಗವನ್ನು ಕಂಡು ಹಿಡಿದು ಇವರ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ. ಇವರಲ್ಲಿ ಮುಖ್ಯವಾಗಿ ಸಂಘಟನೆಯ ಕೊರತೆ ಎದ್ದು ಕಾಣುತ್ತಿದೆ. ಅವಿದ್ಯಾವಂತರಾದ ಇವರಿಗೆ ಹೋರಾಟ ಮಾರ್ಗಗಳೇ ತಿಳಿಯದೆ ಹೋರಾಟಕ್ಕೆ ಹೆದರುತ್ತಿದ್ದಾರೆ. ಆದಕಾರಣ ತಮ್ಮ ಸಮುದಾಯಗಳಲ್ಲಿ ಬುದ್ಧಿವಂತರಾದವರು ಮುಂದಾಳತ್ವವಹಿಸಿ ತಮ್ಮ ಸಮಸ್ಯೆಗಳ ವಿರುದ್ಧ ಸಂಘರ್ಷಿಸಬೇಕು ಮತ್ತು ತಮ್ಮಲ್ಲಿರುವ ಮೂಢನಂಬಿಕೆಯಿಂದ ಅಭಿವೃದ್ಧಿ ನಿರೋಧಕವಾದ ಆಲೋಚನೆಗಳನ್ನು ಅರ್ಥವಿಲ್ಲದ ಕುಲ ಸಂಪ್ರದಾಯಗಳನ್ನು ಬಿಟ್ಟು ಆಧುನಿಕತೆಯಡೆಗೆ ಬರಬೇಕು. ಯಾರೋ ಮಾಡುತ್ತಾರೆಂದು ಕೈಕಟ್ಟಿ ಕುಳಿತರೆ ಯಾರೂ ಮಾಡಿಕೊಡುವುದಿಲ್ಲ. ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು.

೪.೫. ಶೈಕ್ಷಣಿಕ ಯೋಜನೆಗಳು

ಎಲ್ಲಾ ಜಾತಿಗಳು ಅಷ್ಟೋ, ಇಷ್ಟೋ ಅಭಿವೃದ್ಧಿ ಮಾರ್ಗದಲ್ಲಿ ನಡೆಯುತ್ತಿವೆ. ಎಷ್ಟೋ ನೋವುಗಳನ್ನು ಅನುಭವಿಸುತ್ತಿರುವ ಬುಡಗ ಜಂಗಾಲರು ಅಥವಾ ವೇಷಗಾರರು ಮಾತ್ರ ಸಂಘಟಿತರಾಗಿ ಮುಂದಕ್ಕೆ ಬರುತ್ತಿಲ್ಲ. ಸಮಾಜದಲ್ಲಿರುವವರೆಲ್ಲಾ ಬೆಳೆಯುತ್ತಿದ್ದರೆ ವೇಷಗಾರರು ಮಾತ್ರ ಹಿಂದುಳಿಯುತ್ತಿದ್ದಾರೆ. ಇದಕ್ಕೆ ಕಾರಣ ಸರಿಯಾದ ವಿದ್ಯಾಭ್ಯಾಸ ಇಲ್ಲದಿರುವುದು.

ಇವರು ಪೂರ್ವದಿಂದಲೂ ಊರ ಹೊರಗಡೆ ಬಿಡಾರಗಳನ್ನು ಹಾಕಿಕೊಂಡು ಸಾಮೂಹಿಕವಾಗಿ ಜೀವಿಸುತ್ತಿದ್ದಾರೆ. ಅದಕ್ಕಾಗಿ ಸಾಮಾಜಿಕವಾಗಿ ಹಿಂದೆ ಬಿದ್ದಿದ್ದಾರೆ. ವಿದ್ಯಾಭ್ಯಾಸದಲ್ಲಿಯೂ ಎಷ್ಟು ಹಿಂದೆ ಇದ್ದಾರೆಯೋ, ಉದ್ಯೋಗ ವಿಷಯದಲ್ಲಿಯೂ ಸಹ ಸಹಜವಾಗಿ ಅಷ್ಟೇ ಹಿಂದೆ ಬಿದ್ದಿದ್ದಾರೆ.

ಕಲೆಯೇ ಇವರ ಜೀವನದ ಉಸಿರಾಗಿರುವುದರಿಂದ ಹುಟ್ಟಿದ ಪ್ರತಿಯೊಂದು ಮಕ್ಕಳಿಗೂ ತಮ್ಮ ವೇಷಗಾರಿಕಾ ವೃತ್ತಿಯನ್ನೇ ಕಲಿಸಿ ಅದರಲ್ಲಿಯೇ ಮುಂದುವರಿಯುತ್ತಿದ್ದಾರೆ. ಸಂಚಾರಿಗಳಾದ ಇವರು ಒಂದು ಊರಿನಲ್ಲಿ ನೆಲೆ ಇಲ್ಲದುದರಿಂದ ಇವರು ಮಕ್ಕಳನ್ನು ಶಾಲೆಗೆ ಸೇರಿಸದೆ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದೊಂದು ಕಾರಣವಾದರೆ ಓದುವವರಿಗೆ ಜಾತಿಪ್ರಮಾಣ ಪತ್ರ ನೀಡುವಲ್ಲಿ ತಕರಾರು ಮಾಡಿ ಹಲವಾರು ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾದವರು ಕಡಿಮೆ ಸಂಖ್ಯೆಯಲ್ಲಾದರು ಇದ್ದಾರೆ. ಅಲ್ಪ ಸ್ವಲ್ಪ ಜನರಿಗೆ ಓದಿಸಬೇಕೆಂಬ ಮನಸ್ಸುಳ್ಳವರಿಗೆ ಇಂತಹ ಪರಿಸ್ಥಿತಿಯಿಂದ ನಿರಾಶೆಯುಂಟಾಗಿದೆ. ಒಟ್ಟಿನಲ್ಲಿ ಈ ಸಮುದಾಯದವರು ಸಂಪೂರ್ಣವಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಈಗಾಗದಂತೆ ಈ ಸಮುದಾಯಕ್ಕೆ ವಿದ್ಯಾಭ್ಯಾಸ ನೀಡಲು ಇವರು ವಾಸಿಸುವ ಜಾಗಗಳಲ್ಲಿ ಶಾಲೆಗಳನ್ನು ನೀಡಬೇಕಾದುದು ಬಹಳ ಅವಶ್ಯವಾಗಿದೆ. 'ವಿದ್ಯೆ ಇಲ್ಲದವರ ಮುಖ ಹದ್ದಿಗಿಂತ ಕಡೆ' ಎನ್ನುವಂತೆ ಈ ಸಮುದಾಯಕ್ಕೆ ವಿದ್ಯೆ ಇಲ್ಲದೆ ಸಮಾಜದಲ್ಲಿ ಸರಿಸಮಾನವಾಗಿ ಉದ್ಯೋಗ ಪಡೆಯಲು ಅವಕಾಶವಿಲ್ಲದಂತಾಗಿದೆ.

೪.೬. ಮೀಸಲಾತಿಯ ಸಂಬಂಧ ವಿಲಿನೀಕರಣ

ಅಭಿವೃದ್ಧಿ ಯೋಜನೆ ಮತ್ತು ಮೀಸಲಾತಿಯಲ್ಲಿ ಸರಕಾರವು ಇವರಿಗೆ ವಿನಾಯಿತಿ ನೀಡಿದ್ದರೂ, ಇವರಿಗೆ ಇದುವರೆಗೂ ತಿಳಿದಿಲ್ಲದಿರುವುದು ವಿಪರ್ಯಾಸದ ಸಂಗತಿ. ಕರ್ನಾಟಕದಲ್ಲಿ ಪರಿಶಿಷ್ಟ ವರ್ಗ ಕ್ರಮಸಂಖ್ಯೆ ೧೯ರಲ್ಲಿದೆ. ಆಂಧ್ರಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ಕ್ರಮಸಂಖ್ಯೆ ೯ರಲ್ಲಿ ವಿಲೀನಗೊಳಿಸಲಾಗಿದೆ.

ಇವರ ಮೀಸಲಾತಿಯಲ್ಲಿ ಆಗಿರುವ ದೊಡ್ಡ ತೊಂದರೆಯಾದರೆ ಬುಡ್ಗ ಮತ್ತು ಬೇಡ ಜಂಗಮ ಎಂದು ಎರಡು ಹೆಸರನ್ನು ಸೇರಿಸಿರುವುದು ಗೊಂದಲವನ್ನುಂಟುಮಾಡುತ್ತದೆ. ಆದ್ದರಿಂದ ಇವರ ಮೀಸಲಾತಿಯನ್ನು ಮುಂದುವರೆದ ವೀರಶೈವ ಮಠಪತಿ ಜಂಗಮರು ಪಡೆಯುತ್ತಿದ್ದಾರೆ. ಇದನ್ನು ತಪ್ಪಿಸಲು ಇವರದೇ ಆದಂತಹ ಪ್ರತ್ಯೇಕ ಕ್ರಮ ಸಂಖ್ಯೆಯನ್ನು ಮಾಡಿದರೆ ಅಂತಹ ಸಮಸ್ಯೆಯನ್ನು ಪರಿಹರಿಸಬಹುದು.

"ಅನುಚ್ಛೇದ ೧೫ (೪)ರಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪ್ರಜೆಗಳ ಅಭಿವೃದ್ಧಿಗಾಗಿ ವಿಶೇಷ ಅವಕಾಶ, ಸೌಲಭ್ಯಗಳನ್ನು ಕಲ್ಪಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಲಾಗಿದೆ. ಜೊತೆಗೆ ಅನುಚ್ಛೇದ ೧೬ (೪)ರಲ್ಲಿ ರಾಜ್ಯದ ಅಭಿಪ್ರಾಯದಲ್ಲಿ ಸರ್ಕಾರಿ ಸೇವೆಯಲ್ಲಿ ಹಿಂದುಳಿದ ವರ್ಗಗಳಿಗೆ ಸಾಕಷ್ಟು ಪ್ರಾತಿನಿದ್ಯ ಸಿಗದೇಯಿದ್ದರೆ ಅಂತಹ ಸಮಯದಲ್ಲಿ ಸರ್ಕಾರಿ ಹುದ್ದೆಗಳಲ್ಲಿ ಹಿಂದುಳಿದವರಿಗೆ ಸ್ಥಾನಗಳನ್ನು ಮೀಸಲಿಡುವ ಅಧಿಕಾರವನ್ನು ರಾಜ್ಯಗಳಿಗೆ ಕೊಡಲಾಗಿದೆ. ರಾಷ್ಟ್ರಾದ್ಯಂತ ಹಿಂದುಳಿದ ವರ್ಗಗಳು ಏಕ ರೀತಿಯಲಿಲ್ಲ. ಪ್ರತಿಯೊಂದು ರಾಜ್ಯದಲ್ಲಿಯೂ ಹಿಂದುಳಿದ ವರ್ಗ ತನ್ನದೇಯಾದ ಒಂದು ರೀತಿಯಲ್ಲಿ ಹಿಂದುಳಿದಿರುತ್ತದೆ."[೬] ಹೀಗೆ ರಾಜ್ಯ ಸರ್ಕಾರದ ಅನುಚ್ಛೇದದಲ್ಲಿ ಹಿಂದುಳಿದ ವರ್ಗಗಳಲ್ಲಿ ವಿಶೇಷ ಮೀಸಲಾತಿಯನ್ನು ನೀಡಿದ್ದಾರೆ. ಈ ಅನ್ವಯದಲ್ಲಿ ಈ ಸಮುದಾಯಕ್ಕೆ ಕಲ್ಯಾಣವಾಗುವಂತೆ ವಿಶೇಷ ಯೋಜನೆಗಳನ್ನು ತರುವ ಧ್ಯೇಯೋದ್ದೇಶಗಳನ್ನು ಹೊಂದಿ ಸಫಲವಾಗುವಂತೆ ಮಾಡಬೇಕು.

"ಬೇಡ ಜಂಗಮರ ಹೆಸರಿನಲ್ಲಿ ಸಂಘ ಸ್ಥಾಪಿಸಿರುವ ವೀರಶೈವ ಜಂಗಮರ ಕರಪತ್ರ ಹೇಳಿಕೆ ಏನೆಂದರೆ ಪೂರ್ವದಲ್ಲಿ ಬೇಡುವ ಜಂಗಮ, ಬೀದರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಇದ್ದರೆಂದು ಅಲ್ಲಿಗೆ ಸೀಮಿತಗೊಳಿಸಿದ್ದರು. ಆದರೆ ಲೋಕಸಭೆ ಕಾಯಿದೆ ತಿದ್ದುಪಡಿ ೧೯೭೬ರ ಪ್ರಕಾರ ಬೇಡ ಜಂಗಮರ ವ್ಯಾಪ್ತಿ ಸಮಗ್ರ ಕರ್ನಾಟಕಕ್ಕೆ ಅನ್ವಯಿಸುತ್ತದೆ ಎಂದು ಪ್ರಕಟಣೆಗೊಳಿಸಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಬಳ್ಳಾರಿ ಜಿಲ್ಲೆಯ ಅನೇಕ ಪ್ರೌಢಶಾಲೆಗಳಲ್ಲಿ ಸ್ವತಂತ್ರ ಪೂರ್ವದ ಹೈದ್ರಾಬಾದ್ ನಿಜಾಮರ ಕಾಲದಿಂದಲೂ ಜಂಗಮರ ವಿದ್ಯಾರ್ಥಿಗಳಿಗೆ ಪರಿಶಿಷ್ಟರೆಂದು ಶಾಲಾ, ಕಾಲೇಜುಗಳಲ್ಲಿ ರಿಯಾಯಿತಿ ಇದ್ದುದರ ಸ್ಪಷ್ಟ ಪುರಾವೆಗಳು ಮೂಕ ಸಾಕ್ಷಿಯಾಗಿವೆ. ಈಗಾಗಲೇ ಬಳ್ಳಾರಿ, ಬಸವ, ಕಲ್ಯಾಣ, ರಾಯಚೂರು, ಹೊನ್ನಾಳಿ, ಬೆಂಗಳೂರುಗಳಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಜಾಗೃತಗೊಳಿಸಿದೆ. ಈ ಸಂಘಗಳ ಹೇಳಿಕೆ ಪ್ರಕಾರ ಬಡುಗ ಜಂಗಮ ಪರಿಶಿಷ್ಟರೇ ಹೊರತು ಅಸ್ಪೃಶ್ಯರಲ್ಲ ಎಂಬ ಭಾವನೆ ಊರ ಜಂಗಮರಲ್ಲಿದೆ."[೭] ಈ ವಿಷಯದ ಬಗ್ಗೆ ಸ್ಪಷ್ಟತೆ ನೀಡುವುದು ಬಹಳ ಮುಖ್ಯವಾಗಿದೆ. ಇವರ

ಪಟ್ಟಿಯಲ್ಲಿ ಇಬ್ಬರ ಹೆಸರು ಸೇರಿರುವುದು ಇಂತಹ ಗೊಂದಲದ ಸೃಷ್ಟಿಗೆ ಕಾರಣವಾಗಿದೆ. ಇದಕ್ಕೆ ತಜ್ಞರ ಸಲಹೆಯಂತೆ ಸರಿಪಡಿಸಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಹೀಗೆ ಈ ಬುಡ್ಗ (ಬೇಡ) ಜಂಗಮರಲ್ಲಿ ಮೀಸಲಾತಿಯ ವಿಲೀನೀಕರಣದ ಬಗ್ಗೆ ಗೊಂದಲ ಕಂಡುಬಂದಿದೆ.

ಅಡಿಟಿಪ್ಪಣೆಗಳು

೧. ಅರ್ಬಿಯಸ್ ಸುಂದರಂ, ಅನು: ಆಂಧ್ರಪ್ರದೇಶದ ಜಾನಪದ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ೧೯೭೮, ಪುಟ: ೧೫೭

೨. ಎಂ.ಎಂ. ಕಲಬುರ್ಗಿ, ಜನಪದ ಸಾಹಿತ್ಯ ದರ್ಶನ, ೧೯೯೪, ಪುಟ: ೩೦೭

೩. ದಾಸನೂರು ಕೂಸಣ್ಣ, ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ೧೯೯೮, ಪುಟ: ೧೫೫

೪. ಎನ್.ಆರ್. ವೆಂಕಟೇಶಂ, ಬುಡ್ಗ ಜಂಗವಾಣಿ, ಪ್ರತ್ಯೇಕ ಸಂಚಿಕೆ, ಏಪ್ರಿಲ್, ೧೯೮೯, ಪುಟ: ೩೦

೫. ಬಿ.ಎಂ.ಎಂ. ಆರಾದ್ಯ, ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಅಪ್ಪು ಪ್ರಕಾಶನ, ರಾಜಾಜಿನಾಗರ ಬೆಂಗಳೂರು, ೧೯೮೫ ಪುಟ: ೨೦೦

೬. ಅದೇ. ಪುಟ: ೧೮೮

೭. ದಾಸನೂರು ಕೂಸಣ್ಣ, ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ೧೯೯೮, ಪುಟ: ೧೦೧

¤ ¤ ¤ ¤ ¤

ಅಧ್ಯಾಯ ೫

ಸಮುದಾಯದ ನ್ಯಾಯತೀರ್ಮಾನ ವ್ಯವಸ್ಥೆ

೫.೧. ಕುಲಪಂಚಾಯಿತಿ ತೀರ್ಮಾನ

೫.೨. ಕಡ್ಡಿ ಪಂಚಾಯಿತಿ

೫.೩. ಕಳ್ಳು ಪಂಚಾಯಿತಿ

೫.೪. ಇತರ ಸಂಬಂಧ ನ್ಯಾಯತೀರ್ಮಾನ

೫.೫. ಕುಲಬಹಿಷ್ಕಾರ ಮತ್ತು ಸೇರಿಸಿಕೊಳ್ಳುವುದು

೫.೬. ಕಳ್ಳರನ್ನು ಹಿಡಿಯುವ ಬಗೆ

ಹಗಲುವೇಷಗಾರರ ನ್ಯಾಯಪಂಚಾಯತಿ ವ್ಯವಸ್ಥೆ

ತಪ್ಪು ಮಾಡುವುದು ಮಾನವನ ಸಹಜ ಸ್ವಭಾವ. ಆದರೆ ಅದನ್ನು ತಿದ್ದಿ ನಡೆಯುವುದು ಅವನ ಧರ್ಮ. ಮಾನವನ ಕಾತರ, ಈರ್ಷೆ, ದ್ವೇಷ, ಕ್ರೋಧ, ಶಂಕೆ, ಅಭಿಮಾನ, ತಪ್ಪು ತಿಳುವಳಿಕೆ ಮುಂತಾದ ಹಲವಾರು ಸಂಕೀರ್ಣ ಭಾವನೆಗಳ ಸಮುಚ್ಚಯ ಆಗಿದ್ದಾನೆ. ಪ್ರತಿಯೋರ್ವನಲ್ಲಿ ಒಳ್ಳೆಯ, ಕೆಟ್ಟ, ಸಾಮಾನ್ಯ ಗುಣಗಳಿರುತ್ತವೆ. ತಪ್ಪು ಮಾಡುವುದು, ತಪ್ಪಿಗೆ ಪಶ್ಚಾತ್ತಾಪ ಪಡುವುದು, ತಪ್ಪನ್ನು ತಿದ್ದಿಕೊಳ್ಳುವುದು ಈ ನ್ಯಾಯ ಅನ್ಯಾಯದ ಕಲ್ಪನೆಯಿರುವುದು ಮಾನವನಿಗೆ ಮಾತ್ರ. ಆದುದರಿಂದ ಸಮಾಜದ ಜೊತೆಗೆ ಹೊಂದಿಕೊಂಡು ಬದುಕುವುದು ಎಲ್ಲರಿಗೂ ಆರೋಗ್ಯಕರವಾಗಿರುತ್ತದೆ.

"ನ್ಯಾಯವನ್ನು ಕೊಡುವ ವಿಧಾನಗಳು ದೇಶದಿಂದ ದೇಶಕ್ಕೆ ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುತ್ತವೆಂಬುದರಲ್ಲಿ ಸಂದೇಹವಿಲ್ಲ. ಪರಿಸರಗಳು, ಆಚಾರ, ವಾತಾವರಣ, ಜೀವನ ನಿರ್ವಹಣೆಯ ವಿಧಾನಗಳು, ಆಹಾರ ಮೂಲಗಳ ದೊರೆಯುವಿಕೆ ಹಾಗೂ ಇತರ ಕಾರಣಗಳ ಮೇಲೆ ಹೆಚ್ಚಾಗಿ ಈ ಬದಲಾವಣೆ ಅವಲಂಬಿಸಿರುತ್ತದೆ. ಅತಿ ಪ್ರಾಚೀನ ಕಾಲದಲ್ಲಿ ಮಾನವ ತನಗಾದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳುವ ಕಾನೂನುಬದ್ಧವಾದ ಹಕ್ಕು ತನಗಿದೆಯೆಂದೂ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದು ತನಗೆ ಮಾತ್ರ ಬಿಟ್ಟಿದ್ದೆಂದು ಭಾವಿಸಿದ್ದನು. ಈ ಹಕ್ಕನ್ನು ಜಗತ್ತಿನ ಬಹುಪಾಲು ಬುಡಕಟ್ಟುಗಳು ಒಪ್ಪಿಕೊಂಡಿದ್ದವು. ಅಂತಹ ವ್ಯವಸ್ಥೆಯನ್ನು ಒಪ್ಪಿಕೊಂಡು ಬದುಕುತ್ತಿರುವ ಜನ ಸಮುದಾಯ ಅಥವಾ ಬುಡಕಟ್ಟು ಸಮುದಾಯವು ವ್ಯಕ್ತಿಗೆ ಆದ ಅವಮಾನ ಅಥವಾ ನೋವು ತನಗೇ ಆದದ್ದೆಂದು ಭಾವಿಸುವುದು ತನ್ನ ಕರ್ತವ್ಯವೆಂದು ತಿಳಿಯುತ್ತದೆ. ಅಪರಾಧದ ತೀವ್ರತೆಯನ್ನು ಗಮನಿಸಿ ಅದಕ್ಕೆ ತಕ್ಕ ಪ್ರತಿಕಾರದ ವಿಧಾನವನ್ನು ಇದು ನಿರ್ಣಯಿಸುತ್ತದೆ. ನಮ್ಮ ದೇಶದ ಹಲವಾರು ಬುಡಕಟ್ಟಿನವರು ಇಂದಿಗೂ ತಮ್ಮ ಜಗಳಗಳನ್ನು ಅನೌಪಚಾರಿಕವಾಗಿ ಪರಿಹರಿಸುತ್ತಾರೆ. ಆದರೆ ಅದರ ದಾಖಲೆಯನ್ನು ಇಡುವುದಿಲ್ಲ."[೧] ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಈ ಹಗಲುವೇಷಗಾರರು ಒಬ್ಬರು.

"ಪಂಚಾಯತಿಯೆಂದರೆ ನ್ಯಾಯ ತೀರ್ಮಾನಕ್ಕೆ ರಚಿತವಾದ ಐದು ಜನರ ಒಂದು ಸಮಿತಿ. ಸಮುದಾಯಗಳಲ್ಲಿ ನ್ಯಾಯ ಪಂಚಾಯಿತಿಯನ್ನು ಮಾಡಲು ಐದು ಜನರಿರಬೇಕೆಂಬ ನಿಯಮವೇನಿಲ್ಲ.

[illegible]

[illegible]

[illegible]

[illegible]

ಒಬ್ಬರೆ ಮಾಡಬಹುದು. ಹತ್ತಾರು ಜನರು ಕೂಡಿಯೂ ಮಾಡಬಹುದು."[೨] ಇವರದು 'ನೈಸರ್ಗಿಕ ನ್ಯಾಯ ಪದ್ಧತಿ.' ಯಾರಿಗೂ ಅನ್ಯಾಯವಾಗದಂತೆ ಅವಕಾಶಗಳನ್ನು ಸಮಾನವಾಗಿ ಹಂಚಿಕೊಳ್ಳುವುದು. ಇಲ್ಲಿ ಮಾನವೀಯತೆಯೊಂದೇ ಮೂಲಮಾನ.

ನ್ಯಾಯ ಮಾಡುವುದೆಂದರೆ ಸತ್ಯವನ್ನು ಶೋಧಿಸಿ ತೆಗೆಯುವುದು. ಸಮಾನತೆ, ಸರ್ವರ ಹಿತ ಬಯಸುವುದು, ತಪ್ಪು ಮಾಡಿದವರಿಗೆ ತಿಳಿಸಿ ಹೇಳುವುದು. ಕೆಲವು ಸಂದರ್ಭಗಳಲ್ಲಿ ತಪ್ಪಿತಸ್ತರಿಗೆ ದಂಡ ಕಟ್ಟುವುದು, ಪದೇ ಪದೇ ತಪ್ಪು ಮಾಡಿದರೆ ತಮ್ಮ ಸಮಾಜದಿಂದ ಬಹಿಷ್ಕರಿಸುವುದು, ಒಟ್ಟಾರೆ ಸರ್ವೇಜನ ಸುಖಿನೋ ಭವಂತಿ. ಇದು ಈ ಸಮುದಾಯದ ನ್ಯಾಯಪದ್ಧತಿಯ ಮುಖ್ಯ ಲಕ್ಷಣ.

೫.೧ ನ್ಯಾಯಸ್ಥಾನದ ಕೇಂದ್ರಗಳು : ಈ ಸಮುದಾಯದವರು ನ್ಯಾಯ ಪಂಚಾಯತಿ ಮಾಡಲು ಪೂರ್ವದಲ್ಲಿ ಎರಡು ವರ್ಷಕ್ಕೆ ಒಂದು ಸಾರಿ ಗದ್ವಾಲದಲ್ಲಿ ಚಿನ್ನ ಬುಚ್ಚಮ್ಮ, ಪೆದ್ದ ಬುಚ್ಚಮ್ಮನ ಜಾತ್ರೆ ನೆಪದಲ್ಲಿ ಸೇರಿ ಮದುವೆ, ನಿಶ್ಚಿತಾರ್ಥ, ಸಾಲ ಕೊಡುವುದು, ತೆಗೆದುಕೊಳ್ಳುವುದು, ಒಬ್ಬರನ್ನೊಬ್ಬರು ಬೇಟಿಯಾಗುವುದು ಎಲ್ಲಾ ಈ ಸ್ಥಳದಲ್ಲಿಯೇ ನಡೆಯುತ್ತಿದ್ದವು. ಆ ಸಮಯದಲ್ಲಿ ಕರ್ನಾಟಕದಲ್ಲಿರುವ ಬಹುತೇಕ ವೇಷಗಾರರು ಆಂಧ್ರ ಪ್ರದೇಶದಲ್ಲಿಯೇ ಚದುರು ಚದುರಾಗಿ ವಾಸಿಸುತ್ತಿದ್ದರು. ಶ್ರೀ ರಂಗಾಪುರಂನಲ್ಲಿ ಕೆಲವು ವರ್ಷ ಸೇರಿದರು. ಕರ್ನೂಲು ಜಿಲ್ಲೆಯ ಗದ್ವಾಳ ಗ್ರಾಮದಲ್ಲಿ ಕೆಲವು ದಿನ ಸೇರಿದರು. ಇತ್ತೀಚಿಗೆ ಕರ್ನೂಲು ಜಿಲ್ಲೆಯ ಗುದ್ಯಾಳ ಗ್ರಾಮದಲ್ಲಿ ಕೆಲವು ದಿನ ಸೇರಿದರು. ಗುಂತಕಲ್ ಮಸ್ತಾನಯ್ಯನ ಉರುಸಿಗೆ ಸೇರುತ್ತಾರೆ. ಇದು ಆಂಧ್ರ ಗಡಿಭಾಗದವರು ನ್ಯಾಯ ಪಂಚಾಯಿತಿಯ ತೀರ್ಮಾನ ಕೇಂದ್ರಗಳು. ಬೊಮ್ಮನಾಳು ಕುಗಮ್ಮನ ಹತ್ತಿರ ಸುಮಾರು ೨೦ ವರ್ಷ ನಡೆದಿದೆ. ಕರ್ನಾಟಕದಲ್ಲಿಯವರು ಮೊದಲು ಹುಲಿಗೆಯ ಪಕ್ಕದಲ್ಲಿ ಜಂಬಲಮ್ಮಳ ದೇವಸ್ಥಾನದ ಪಕ್ಕದಲ್ಲಿ ಎರಡು ವರ್ಷಕ್ಕೊಮ್ಮೆ ಸೇರುತ್ತಿದ್ದರು. ನಂತರ ಕುದುರೆಮೂತಿ ಅಡವಿಯ ಒಂದು ಗಿಡದ ಕೆಳಗೆ ಸೇರುತ್ತಿದ್ದರು. ಅಲ್ಲಿ ಕುಡಿಯುವ ನೀರಿನ ತೊಂದರೆಯಿಂದಾಗಿ ಈಗ ಕುದುರೆಮೂತಿಯಲ್ಲಿ ಪೀರಲ ಹಬ್ಬಕ್ಕೆ ಮೌಲಾಸ್ವಾಮಿಗೆ ನಡೆದುಕೊಳ್ಳುತ್ತಾ ಅಲ್ಲಿಯೇ ಜಾತ್ರೆ ಮಾಡಿ ತಮ್ಮ ಕೊಡು-ಕೊಳ್ಳುವ ವ್ಯವಹಾರಗಳನ್ನು ನೋಡಿಕೊಂಡು, ತಮ್ಮ ಬಂಧು-ಬಾಂಧವರನ್ನು ಭೇಟಿಯಾಗಿ ಮದುವೆ ನಿಶ್ಚಯಗಳನ್ನು ಮುಗಿಸಿಕೊಂಡು, ತಮ್ಮ ತಂಟೆ ತಗಾದೆಗಳನ್ನು ಇಲ್ಲಿಯೇ ಬಗೆಹರಿಸಿಕೊಂಡು ಹೋಗುತ್ತಾರೆ. ಇಂದು ನ್ಯಾಯ ತೀರ್ಮಾನದ ಕಟ್ಟೆಯಾಗಿ ಕುದುರೆ ಮೊತಿಯಲ್ಲಿ 'ಕರೆಪ್ಪನ ಕಟ್ಟೆ' ಇದೆ. ಕಾರಣಿಕವಾಗಿದೆ. ಆದರೆ ತೀರ್ಮಾನಗಳು ನಡೆಯುವುದು ದೊಡ್ಡ ದೊಡ್ಡ ಮಾವಿನತೋಪಿನ ಕೆಳಗಡೆಯೇ."[೩] ಏಕೆಂದರೆ ನ್ಯಾಯ ತೀರ್ಮಾನವೆಂದರೆ ಬಹಳ ಜನರು ಅಂದರೆ ಅವರ ಸಮುದಾಯದವರೆಲ್ಲ ಅಲ್ಲಿ ನೆರೆದಿರುತ್ತಾರೆ. ಆ ಕಟ್ಟೆಯ ಮೇಲೆ ಕೂಡಲು ಜಾಗ ಸಾಲುವುದಿಲ್ಲವೆಂದು ದೊಡ್ಡ ದೊಡ್ಡ ಮಾವಿನ ತೋಪುಗಳಿಗೆ ಹೋಗುತ್ತಾರೆ.

ಕೆಲವು ಸಲ ತುರ್ತು ಪರಿಸ್ಥಿತಿಯ ನ್ಯಾಯ ಬಂದಾಗ ವಾದಿ-ಪ್ರತಿವಾದಿಗಳಿಂದ ಮೊದಲು ವಂತಿಕೆ ಹಣವನ್ನು ಪಡೆದು ನ್ಯಾಯ ಪ್ರಮುಖರಿರುವ ಸ್ಥಳಗಳಿಗೆ ಒಬ್ಬ ಮನುಷ್ಯನಿಂದ ಹೇಳಿ ಕಳುಹಿಸಿ

[illegible]

[illegible]

ಕರೆಯಿಸಿಕೊಳ್ಳುತ್ತಾರೆ. ಅವರ ಖರ್ಚು, ವೆಚ್ಚವೆಲ್ಲವೂ ವಾದಿ-ಪ್ರತಿವಾದಿಗಳ ಬಾಬ್ತಿಗೆ ಬೀಳುತ್ತದೆ. ಅವರು ವಾದಿ-ಪ್ರತಿವಾದಿಗಳ ಸ್ಥಳಗಳಿಗೆ ಬಂದು ನ್ಯಾಯತೀರ್ಮಾನ ಮಾಡಿ ಹೋಗುತ್ತಾರೆ.

ಹಾಗಾದರೆ 'ಹಗಲುವೇಷಗಾರರು' ಹೇಗೆ ನ್ಯಾಯತೀರ್ಮಾನ ಮಾಡುವರು? ಯಾವ ಆಧಾರದ ಮೇಲೆ ನಿರ್ಣಯಿಸುವರು...? "ಇದಕ್ಕೆ ಯಾವ ಲಿಖಿತ ದಾಖಲೆಗಳೂ ದೊರೆಯುವುದಿಲ್ಲ. ಮೌಖಿಕ ಜ್ಞಾನವೇ ಆಧಾರ, ಮಾನವೀಯತೆ, ಮಾನವೀಯ ಮೌಲ್ಯ, ನಡಾವಳಿ, ಪರಿಸ್ಥಿತಿ, ಸ್ವಭಾವ, ಗುಣ, ಬುದ್ಧಿಮಟ್ಟ ಮತ್ತು ವಯಸ್ಸು ಇವೆ. ಜೊತೆಗೆ ಈ ಸಮುದಾಯದ ರೀತಿ ರೀವಾಜು ಪದ್ಧತಿ, ನಡಾವಳಿ, ಆಚರಣೆ, ಸಂಪ್ರದಾಯ, ಪರಂಪರೆ ಮುಂತಾದ ಅಂಶಗಳನ್ನು ಗಮನಿಸಿ ನ್ಯಾಯ ಪಂಚಾಯಿತಿ ಮಾಡುವರು. ಇದು ಇವರ ವೃತ್ತಿಯ ಪ್ರವೃತ್ತಿ, ನ್ಯಾಯ ಮಾಡುವುದು ಪವಿತ್ರವಾದ ಪುಣ್ಯವಾದ ಕೆಲವೆಂದು ಬಲವಾಗಿ ನಂಬಿಕೊಂಡಿದ್ದಾರೆ. ಇಲ್ಲಿ ಸುಳ್ಳು ಸಾಕ್ಷಿಗಳಿಗೆ ಅವಕಾಶವಿಲ್ಲ. ತರ್ಕಬದ್ಧವಾದ ವಾದಕ್ಕೆ ಬೆಲೆಯಿಲ್ಲ. ಮೋಸ, ವಂಚನೆಗೆ ಸ್ಥಳಾವಕಾಶವಿಲ್ಲ."[೪] 'ಪಂಚರಿಗೆ ಪಗಾರಿಲ್ಲ ಕತ್ತಿಗೆ ಲಗಾಮಿಲ್ಲ' ಎಂಬ ಗಾದೆಯಂತೆ ನ್ಯಾಯದಾನ ಮಾಡುವವರಿಗೆ ಯಾವುದೇ ರೀತಿಯ ಲಾಭದ ಉದ್ದೇಶಕ್ಕೆ ಅಲ್ಲ ಎಂಬುದು ಇವರ ಭಾವನೆ.

ಒಂದು ಕುಟುಂಬದಲ್ಲಿ ಸಣ್ಣ ಪುಟ್ಟ ಒಳ ಜಗಳ ನಡೆದರೆ ಅವರ ಕುಟುಂಬದ ಸಂಬಂಧಿಕರೇ ಕೆಲವು ನ್ಯಾಯಗಳನ್ನು ಬಗೆ ಹರಿಸಿಕೊಳ್ಳುತ್ತಾರೆ. ಇದಕ್ಕೆ ಪಂಚಾಯತಿಗಳ ಅಡ್ಡಿ ಇರುವುದಿಲ್ಲ.

"ಕುಲಂ ಅಂಟೆ ಸಮುದ್ರಂಲಾಂಟಿದಿ ಕುಲಂ ಚೆಪ್ಪಿಂದಿ ವಿನಾಲಿ". "ಕುಲ ಅಂದ್ರೆ ಸಮುದ್ರದಷ್ಟು ವಿಶಾಲವಾದದ್ದು, ಅವರು ಹೇಳಿದ್ದನ್ನು ತಿರಸ್ಕರಿಸಬಾರದು." ಒಬ್ಬರಿಗಿಂತ ಇಬ್ಬರು ಲೇಸು ಎನ್ನುವುದಕ್ಕಾಗಿಯೇ ಕುಲ ಇರಬೇಕು. ಇಲ್ಲಿ ದೊಡ್ಡವರೆಲ್ಲರೂ ಕೂಡಿದ್ದಾರೆ. ಅವರೆಲ್ಲರೂ ಸೇರಿ ನಿಮಗೆ ದಾರಿ ತೋರಿಸುತ್ತಾರೆ."[೫] ಎಂದು ಹೇಳಿ ನ್ಯಾಯ ಪಂಚಾಯಿತಿಯನ್ನು ಪ್ರಾರಂಭಿಸುತ್ತಾರೆ. ಈ ಮಾತು ಸಮಾಜದಲ್ಲಿ ಮನುಷ್ಯ ಬಾಳಲು ತಮ್ಮ ಕುಲ ಎಷ್ಟು ಪ್ರಾಮುಖ್ಯತೆ ವಹಿಸುತ್ತದೆ ಎನ್ನುವುದು ಅದು ಇಲ್ಲದೆ ಜಾತಿಯಿಂದ ಹೊರಗೆ ಉಳಿದರೆ ಅವರ ಜೀವನವೇ ಶೂನ್ಯ ಎನ್ನುವಷ್ಟರ ಮಟ್ಟಿಗೆ ಅವಿನಾಭಾವ ಸಂಬಂಧ ಸಮಾಜದೊಂದಿಗೆ ಹೆಣೆದುಕೊಂಡಿದೆ ಎಂಬುದನ್ನು ಸೂಚಿಸುತ್ತದೆ.

೫.೨ ಕಟ್ಟಳೆಗಳು : ಇವರು ಕುಲ ಕಟ್ಟಳೆಗಳು ಬಹು ಬಿಗಿಯಾಗಿದ್ದು, ಇವರ ಜೀವನವನ್ನು ಹಸನಾಗಿಡುವಲ್ಲಿ ಸಹಕಾರಿಯಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಹಗಲುವೇಷಗಾರರು ಪರಸ್ಪರ ತಿಳುವಳಿಕೆಯ ಮೇಲೆ ಚಾಲ್ತಿಯಲ್ಲಿರುವ ತೊಂಡಿ ರೂಪದ ಕುಲ ಕಟ್ಟಳೆಗಳನ್ನೇ ಅನುಸರಿಸುತ್ತಾರೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು. ಅಪರಾಧಗಳನ್ನು ಅನೇಕ ಬಗೆಯಾಗಿ ವಿಂಗಡಿಸಬಹುದು.

೧. ಧಾರ್ಮಿಕ ಅಪರಾಧಗಳು,

೨. ಲೈಂಗಿಕ ಅಪರಾಧಗಳು,

೩. ಸಾಮಾಜಿಕ ಅಪರಾಧಗಳು

೫.೨.೧ ಧಾರ್ಮಿಕ ಅಪರಾಧಗಳು : ಧರ್ಮದ ಅವಹೇಳನ ಮಾಡುವುದು, ಧರ್ಮ ಗುರುಗಳನ್ನು

[illegible]

ಬೈಯುವುದು, ಪಂಚಮರ ಕಟ್ಟೆಗೆ ಅಂದರೆ ಎರಡು ವರ್ಷಕ್ಕೊಮ್ಮೆ ನಡೆಯುವ 'ಕುದುರೆಮೂತಿ' ಮತ್ತು ಗುಂತಕಲ್ಲು ಮಾಸ್ತಾನಯ್ಯನ ಉರುಸಿನಲ್ಲಿ ಕರ್ನಾಟಕದವರು ಮತ್ತು ಆಂಧ್ರ ಗಡಿಭಾಗದವರು ಆ ಉತ್ಸವಕ್ಕೆ ಮನೆಗೆ ಒಬ್ಬರಾದರೂ ಸೇರಲೇ ಬೇಕು. ಸತ್ತ ಸುದ್ದಿಯನ್ನು ಹರಿಜನರ ಮೂಲಕ ಹೇಳಿ ಕಳುಹಿಸಬಾರದು. ಸತ್ತವರ ಸಂಸ್ಕಾರಕ್ಕಾಗಿ ಕುಣಿಯನ್ನು ಹರಿಜನರ ಮೂಲಕ ತೆಗೆಸಬಾರದು. ಕೆಳಜಾತಿಯವರ ಮನೆಯಲ್ಲಿ ಊಟ ಮಾಡಬಾರದು. ಇವುಗಳನ್ನು ಧಾರ್ಮಿಕ ಅಪರಾಧ ಎನ್ನಬಹುದು.

೫.೨.೨. ಲೈಂಗಿಕ ಅಪರಾಧಗಳು : ಬಲತ್ಕಾರದಿಂದ ಸಂಭೋಗಿಸುವುದು. ಹಾಗೇನಾದರೂ ಘಟಿಸಿದರೆ ಅವನನ್ನು ನ್ಯಾಯ ಸ್ಥಾನಕ್ಕೆ ಕರೆದು ಅವನಿಗೇ ಮದುವೆ ಮಾಡುತ್ತಾರೆ ದಂಡ ಸಮೇತ. ಅನ್ಯ ಕುಲದವರೊಂದಿಗೆ ಹಾದರತನ ಮಾಡುವುದು, ಅತ್ತಿಗೆ, ಅತ್ತೆ, ಅಕ್ಕ, ತಂಗಿ, ಮಗಳು, ಮಾವ, ಭಾವ, ಮೈದುನ ಮುಂತಾದ ರಕ್ತ ಸಬಂಧಿಕರ ಜೊತೆಗೆ ಅನೈತಿಕ ಸಂಬಂಧ ಹೊಂದುವುದು. ಮದುವೆಗಿಂತ ಮೊದಲೇ ಗರ್ಭಿಣಿಯಾಗುವುದು, ಗಂಡುಳ್ಳ ಹೆಣ್ಣನ್ನು ಓಡಿಸಿಕೊಂಡು ಹೋಗುವುದು. ಇವುಗಳನ್ನು ಲೈಂಗಿಕ ಅಪರಾಧಗಳೆಂದು ಪರಿಗಣಿಸಬಹುದು.

೫.೨.೩ ಸಾಮಾಜಿಕ ಅಪರಾಧಗಳು : ಮೊದಲು ಹಂಚಿಕೊಂಡ ಒಬ್ಬರ ಹಳ್ಳಿಗಳನ್ನು ಬೇರೊಬ್ಬರು ಅತಿಕ್ರಮಿಸಿ, ವೇಷ ಪ್ರದರ್ಶಿಸಿ ಭಿಕ್ಷೆ ಎತ್ತಬಾರದು, ಪಂಚಮರ ಕಟ್ಟೆಯಲ್ಲಿ ವೇಷ ಪ್ರದರ್ಶನಕ್ಕಾಗಿ ಕಟ್ಟಿಕೊಂಡ ಗುಂಪನ್ನು ಎರಡು ವರ್ಷಗಳವರೆಗೆ ತೊರೆಯಬಾರದು. ಗಂಡು ಮಕ್ಕಳು ಕಡ್ಡಾಯವಾಗಿ ಕೂದಲು ಬಿಡಬೇಕು, ಹೆಣ್ಣು ಬಣ್ಣ ಬಳಿದು ವೇಷ ಪ್ರದರ್ಶಿಸಬಾರದು. ಹೆಣ್ಣು ಕೊಡುವೆನೆಂದು, ಪಡೆಯುವೆನೆಂದು ಹೇಳಿ ಮಾತು ಕೊಟ್ಟು ತಪ್ಪಿಸಬಾರದು. ಎರಡು ಹೆಣ್ಣನ್ನು ಒಂದೇ ಮನೆಗೆ ಕೊಡಬಾರದು, ತೆಗೆದುಕೊಳ್ಳಬಾರದು. ಪಡೆದ ಸಾಲ ಮುಳುಗಿಸಬಾರದು, ಬಡ್ಡಿಗೆ ಬಡ್ಡಿ ಪಡೆಯಬಾರದು, ತಮ್ಮ ಕುಲದ ಕುಂದು ಕೊರತೆ ಹೊರಗಿನವರಿಗೆ ತಿಳಿಸಬಾರದು, ಏನೇ ಜಗಳವಾಗಲಿ ತಮ್ಮ ತಮ್ಮಲ್ಲಿಯೇ ಇತ್ಯರ್ಥವಾಗಬೇಕು. ಸಾಮಾನ್ಯ ಜಗಳದಲ್ಲಿ ಪೋಲೀಸ್ ಠಾಣೆ, ಕೋರ್ಟು, ಕಛೇರಿ ಸುದ್ದಿ ಎತ್ತಬಾರದು, ಮಾತು ಮಾತಿಗೆ ಜಗಳದಲ್ಲಿ ಚಪ್ಪಲಿ, ಬಡಿಗೆ ಒದೆಯುತ್ತೇನೆ ಎಂದು ಅನ್ನಬಾರದು, ಜಗಳದಲ್ಲಿ ಅವಾಚ್ಯ ಬೈಗಳ ಬಳಕೆ ಸರಿಯಾದುದಲ್ಲ, ಕೊಲೆ ಮಾಡುವುದು, ವಿಷ ಹಾಕುವುದು, ಕಳ್ಳತನ ಮಾಡುವುದು, ಕುಂಟಲತನ ಮಾಡುವುದು ಈ ಅಪರಾಧಗಳನ್ನು ಸಾಮಾಜಿಕ ಅಪರಾಧಗಳೆಂದು ಪರಿಗಣಿಸಿ ಹೀಗೆ ಭಾಗ ಮಾಡಲಾಗಿದೆ.

ವೇಷಗಾರರು ನ್ಯಾಯತೀರ್ಮಾನ ವ್ಯವಸ್ಥೆಯನ್ನು ಅವರದೇ ಮಾತಿನಲ್ಲಿ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಕಳ್ಳ ಪಂಚಾಯಿತಿ, ದೈವ ಪಂಚಾಯಿತಿ, ಕಡ್ಡಿ ಪಂಚಾಯಿತಿಗಳೆಂದು ಕರೆಯುತ್ತಾರೆ. ಕೆಲವು ಮುಖ್ಯವಾದ ತಪ್ಪುಗಳಿಗೂ ಸಹ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಬಾಡ ತಪ್ಪು, ಹಕಾ ತಪ್ಪು, ಬಾಯಿ ತಪ್ಪು ಇನ್ನು ಮುಂತಾದ ಸಣ್ಣ ಸಣ್ಣ ತಪ್ಪುಗಳಿವೆ ಅಪರಾಧಿಯು ಕೊನೆಗೂ ಇವುಗಳಿಗೆ ಬಗ್ಗದಿದ್ದರೆ ಕುಲದಿಂದ ಹೊರ ಹಾಕುತ್ತಾರೆ. ಅದನ್ನು 'ಕುಲ ಬಹಿಷ್ಕಾರ' ಎಂದು ಕರೆಯುತ್ತಾರೆ.

೫.೪ ಕುಲ ಪಂಚಾಯತಿ (ದೈವ ಪಂಚಾಯತಿ) : ಕಳ್ಳು ಪಂಚಾಯಿತಿ ವ್ಯವಸ್ಥೆಯನ್ನು ಮೀರಿದ ಇನ್ನೊಂದು ವ್ಯವಸ್ಥೆಯನ್ನು ದೈವ ಪಂಚಾಯಿತಿ ಎನ್ನುವರು. ಅದನ್ನೇ ಕುಲ ಪಂಚಾಯಿತಿಯಂತಲೂ ಅನ್ನುವರು. ಕಳ್ಳು ಪಂಚಾಯತಿಯಲ್ಲಿ ತೀರ್ಮಾನಗೊಳ್ಳದ ತೀವ್ರ ಸ್ವರೂಪದ ಉಗ್ರ ರೂಪ ತಾಳಿದಂತಹ ಜಗಳಗಳು ಇಲ್ಲಿ ಅಂತಿಮ ರೂಪ ಕಾಣುತ್ತವೆ. ಮೇಲೆ ಹೇಳಿದಂತಹ ಧಾರ್ಮಿಕ ಅಪರಾಧಗಳು, ಲೈಂಗಿಕ ಅಪರಾಧಗಳು ಮತ್ತು ಸಾಮಾಜಿಕ ಅಪರಾಧಗಳೆಲ್ಲವೂ, ಕುಲ ಪಂಚಾಯಿತಿಯಲ್ಲಿಯೇ ತೀರ್ಮಾನಗೊಳ್ಳುತ್ತವೆ. "ಇದೊಂದು ಸಾಮಾಜಿಕ ಸಂಸ್ಥೆಯಂತಿದ್ದು ಅಲಿಖಿತ ಶಾಸನದ ಮೂಲಕ ಕುಲದ ಭದ್ರತೆ ಹಾಗೂ ಕ್ಷೇಮಗಳನ್ನು ಕಾಯ್ದುಕೊಳ್ಳುತ್ತದೆ. ಕಟ್ಟಳೆಯನ್ನು ರಕ್ಷಿಸಿ ಸರ್ವರಹಿತ, ಮುಖ್ಯವಾಗಿ ಸಮುದಾಯದ ಹಿತ ಕಾಪಾಡುವುದು. ಸತ್ಯವನ್ನು ಶೋಧಿಸಿ ತೆಗೆದು ಕಾಪಾಡಬೇಕಾದದ್ದು ಕುಲ ಪಂಚಾಯಿತಿಯ ಕರ್ತವ್ಯ. ಇವರದೇ ಆದಂತಹ ಪಂಚಮರ ಕಟ್ಟೆಗಳಿದ್ದು, ಒಂದೊಂದು ಕುಲ ಪಂಚಾಯಿತಿಯನ್ನು ಹೊಂದಿರುತ್ತದೆ. ದೈವ ಪಂಚಾಯತಿಯೇ ಇವರಿಗೆ ನ್ಯಾಯಾಲಯ, ಪಂಚಮರ ಕಟ್ಟೆಯೇ ನ್ಯಾಯಸ್ಥಾನ. ಈ ಹಗಲುವೇಷಗಾರರ ನ್ಯಾಯಗಳೆಲ್ಲವೂ ಪರಿಹಾರವಾಗುವುದು ಇಲ್ಲಿಯೇ."[೬]

ಈ ಸಮುದಾಯದವರು ನ್ಯಾಯಮಾಡುವಾಗ, ಮಾತನಾಡುವ ಚಾಕಚಕ್ಯತೆ ಇದ್ದವರೆಲ್ಲರೂ ಮಾತನಾಡುತ್ತಾರಾದರು ನ್ಯಾಯತೀರ್ಮಾನ ಕೊಡುವವನು ಮಾತ್ರ 'ವಿಭೂತಿ ಬಳಿಯುವ' ಇವರನ್ನು 'ಕಟ್ಟೆ ಮನೆಯವರು' ಎಂದು ಕರೆಯುತ್ತಾರೆ. ಇವರ ಸಹಾಯಕರಾಗಿ ಯಡವದಲ್ಲಿ 'ಮಹಾಂತಗಾರ' ಸಿರಸ್ಯಾಲ (ಗಣಾಚಾರಿ) ಇರುತ್ತಾರೆ. ಮಹಂತಗಾರನು ತಳವಾರನಿದ್ದಂತೆ, ಮತ್ತು ಓಲೆಕಾರನಿದ್ದಂತೆ, ಈತನು ನ್ಯಾಯತೀರ್ಮಾನ ನಡೆಯುತ್ತಿರಬೇಕಾದರೆ ವಾದಿಗಳು- ಪ್ರತಿವಾದಿಗಳು ಮಧ್ಯೆ ಮಧ್ಯೆ ಎದ್ದು ಹೋಗುವುದು, ಜಗಳ ವಾಡುವುದು ಮಾಡಿದರೆ, ಒಂದು ಸಲ ಹೇಳುತ್ತಾನೆ. ಅಲ್ಲಿ ದೊಡ್ಡವರಿದ್ದಾರೆ ಹೇಳುತ್ತಾರೆ ಕೇಳು ಎಂದು ಹೇಳುತ್ತಾನೆ. ಅದನ್ನು ಅವರು ಅದೇ ರೀತಿ ಪದೇ ಪದೇ ಮುಂದುವರಿಸಿದರೆ ಅವರನ್ನು ಹೊಡೆಯುವ ಹಕ್ಕು ಈ ಮಹಾಂತಗಾರನಿಗಿದೆ. ಈ ಮಹಾಂತನಿಗೆ ಕೈಯಲ್ಲಿ ಒಂದು ಅಂಚಿನ ಬಡಿಗೆ ಇರುತ್ತದೆ ಯಾವಾಗಲೂ ಕೈಯಲ್ಲಿ. ಕೋರ್ಟಿನ ಜವಾನ ಹಾಕಿಕೊಂಡಿರುವಂತೆ ಶ್ರೀಶೈಲ ಮಠದಿಂದ ಕೊಟ್ಟಂತಹ ಒಂದು ಹುಕ್ಕುಂ ತಾಮ್ರ ಶಾಸನವಿದೆ. ಅದನ್ನು ಕೊರಳಲ್ಲಿ ಹಾಕಿಕೊಂಡಿರುತ್ತಾನೆ. ಸಿರಸ್ಯಾಲ ಬಳಿಯ ಈತನು ಮದುವೆ, ಸಾವು ಮುಂತಾದ ಸಾಂಪ್ರದಾಯಿಕ ಕಾರ್ಯಗಳ ಸಂದರ್ಭದಲ್ಲಿ ಮುಖ್ಯವಾಗುತ್ತಾನೆ. ನ್ಯಾಯಸ್ಥಾನದಲ್ಲಿ ಕುಲದಿಂದ



ಕುದುರೆಮೂತಿಯಲ್ಲಿರುವ ಕಾರಣಿಕ ನ್ಯಾಯಪಂಚಾಯಿತಿ ಕಟ್ಟೆ



ಬಹಿಷ್ಕಾರ ಹಾಕುವುದು ಮತ್ತು ಕುಲಕ್ಕೆ ಸೇರಿಸಿಕೊಳ್ಳುವುದು ಈತನು ಮಾಡುತ್ತಾನೆ. ಅಂದರೆ ಅದರಲ್ಲಿ ಮೂವರ ಅಭಿಪ್ರಾಯ ಅಡಗಿರುತ್ತದೆ. ಕೊನೆಯ ತೀರ್ಮಾನ 'ವಿಭೂತಿ' ಬಳಿಯ ನ್ಯಾಯಗಾರನದಾಗಿರುತ್ತದೆ.

ಈ ಕುಲಪಂಚಾಯಿತಿ ಎಲ್ಲಿ ಬೇಕಾದರೆ ಅಲ್ಲಿ ನಡೆಯುವುದಿಲ್ಲ. ಈ ಪಂಚಾಯಿತಿ ನಡೆಯುವ ಸ್ಥಳಗಳೇ ಬೇರೆ ಇವೆ. ಅವುಗಳನ್ನು ಕಟ್ಟೆಗಳೆಂದು ಕರೆಯುತ್ತಾರೆ. ಆ ಸ್ಥಳಗಳಲ್ಲಿ ಎರಡು ವರ್ಷಕ್ಕೊಮ್ಮೆ ಈ ಸಮುದಾಯದ ನ್ಯಾಯಗಳು ನಡೆಯುತ್ತದೆ. ಅದರಲ್ಲಿ ಅನ್ಯಾಯವಾದಂತಹ ಈ ಸಮುದಾಯದ ವ್ಯಕ್ತಿ ಯಾರೇ ಆಗಲಿ ನ್ಯಾಯವನ್ನು ಹೂಡಬಹುದು. ಆಮೇಲೆ ಕುಲಪಂಚಾಯಿತಿಯು ಗೊತ್ತು ಮಾಡಿದ ದಿವಸದಿಂದ ನ್ಯಾಯಕಟ್ಟೆಯ ಎದುರಿನ ಅಂಗಳದಲ್ಲಿ ಜನ ಬಂದು ಸೇರುತ್ತಾರೆ. ಮುಂದೆ ಮೊದಲು ನ್ಯಾಯ ಹೂಡಿದವನಿಂದ ನ್ಯಾಯ ಪ್ರಾರಂಭವಾಗುತ್ತದೆ.

"ಯಾವುದು ತಪ್ಪು ಯಾವುದು ಸರಿ ಎಂಬುದರ ಬಗ್ಗೆ ನಮ್ಮ ಭಾವನೆ ಏನೇ ಇರಲಿ, ಸತ್ಯದ ಔನ್ನತ್ಯವನ್ನು ಮಾನವ ಗೌರವವನ್ನು ನಮಗಿಂತ ಹೆಚ್ಚಾಗಿ ಕಾಪಾಡಿಕೊಂಡು ಬರುವ ಬುಡಕಟ್ಟುಗಳ ಮನೋವೃತ್ತಿಯನ್ನು ಕಟುವಾಗಿ ಪ್ರಶ್ನಿಸುವಂತಿಲ್ಲ."[೬] ಇವೆಲ್ಲ ಅಧ್ಯಯನ ಮಾಡಿದಾಗ ಕಠಿಣವೆನಿಸುತ್ತವೆ ಹಾಗೂ ಆಶ್ಚರ್ಯವನ್ನುಂಟುಮಾಡುತ್ತದೆ. ಅದನ್ನು ಪ್ರಶ್ನಿಸುವಂತಿಲ್ಲ ಅದು ಅವರ ದೈವ. ಇವರು ಪರಂಪರಾಗತವಾಗಿ ಬಂದಿರುವ ಅವರ ನ್ಯಾಯಪದ್ಧತಿಗೆ ಸಂಬಂಧಿಸಿದ ತತ್ವಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ.

೫.೪. ಕಳ್ಳು ಪಂಚಾಯಿತಿ : ವೇಷಗಾರರು ಅಲೆದಾಟದಿಂದ ಜೀವನ ಸಾಗಿಸುವುದೇ ಹೆಚ್ಚು. ಅಂತಹ ಸಂದರ್ಭದಲ್ಲಿ ಊರ ಪಕ್ಕದಲ್ಲಿ ತಮ್ಮ ಬಿಡಾರಗಳನ್ನು ಗುಂಪುಗಳಾಗಿ ಹಾಕಿಕೊಂಡು ಸಹಕಾರದ ಜೀವನ ನಡೆಸುತ್ತಿರುತ್ತಾರೆ. ಅಂತಹ ಸಂದರ್ಭದಲ್ಲಿ ಅಕಸ್ಮಿಕವಾಗಿ ಮಕ್ಕಳು ಮಕ್ಕಳಲ್ಲಿ ಜಗಳವಾಗಿ ಅದು ದೊಡ್ಡವರಿಗೆ ಸುತ್ತಿಕೊಳ್ಳಬಹುದು. ಕೆಲವು ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ಅಕ್ಕ ಪಕ್ಕ ಇರುವುದರಿಂದ ಭಿಕ್ಷೆಗೆ ಹೋಗುವಾಗ ಇಬ್ಬರು ಒಂದೇ ಓಣಿಯಲ್ಲಿ ಹೋದರೆನ್ನುವ ಕಾರಣಕ್ಕೋ ಅಥವಾ ಸಣ್ಣ ಪುಟ್ಟ ಸಮಸ್ಯೆಗಳಾದ ಉಣ್ಣುವಾಗ, ತೊಡುವಾಗ, ಹಂಚಿಕೊಳ್ಳುವಾಗ ಯಾವುದರಲ್ಲೋ ವ್ಯತ್ಯಾಸ ಬಂದು ಹೊಡೆದಾಡುವುದುಂಟು ಅಂತಹ ಸಂದರ್ಭಗಳಲ್ಲಿ ತಮ್ಮಲ್ಲಿರುವ ಕಳ್ಳು ಬಳ್ಳಿಯವರೇ ಸೇರಿ ಜಗಳ ಬಗೆಹರಿಸಿಕೊಳ್ಳುವುದುಂಟು. ಹೀಗೆ ಕಳ್ಳು ಬಳ್ಳಿಯ ಮಟ್ಟದಲ್ಲಿ ತೀರ್ಮಾನಗೊಳ್ಳುವ ವ್ಯವಸ್ಥೆಯನ್ನು ಕಳ್ಳು ಪಂಚಾಯಿತಿ ಎಂದು ಕರೆಯುತ್ತಾರೆ. 'ಕಳ್ಳು ಪಂಚಾಯಿತಿ'ಯಲ್ಲಿ ತೀರ್ಮಾನಗೊಂಡ ನ್ಯಾಯದ ದಂಡದ ಹಣದಲ್ಲಿಯ ಅರ್ಧಭಾಗವನ್ನು 'ದೈವ ಪಂಚಾಯಿತಿ'ಗೆ ಮುಟ್ಟಿಸುವರು. ಹೀಗೆ ಕಳ್ಳು ಬಳ್ಳಿಯಲ್ಲಿ ನಡೆಯುವ ಈ ಪಂಚಾಯಿತಿಯು 'ಅವಿಭಕ್ತ' ಕುಟುಂಬ ಪದ್ಧತಿಯನ್ನು ನೆನಪಿಗೆ ತರುತ್ತದೆ.

೫.೫. ಕಡ್ಡಿ ನ್ಯಾಯ (ಅಡಕ ಹಾಕುವುದು) : ವೇಷಗಾರರ ಸಮುದಾಯದಲ್ಲಿ ಅನ್ಯಾಯಕ್ಕೆ ಒಳಗಾದ ವ್ಯಕ್ತಿ 'ಕುಲ ಪಂಚಾಯಿತಿಗೆ' ಮೊದಲು ದೂರು ತರುವನು. ಪಂಚಮರ ಮುಂದೆ ತನಗಾದ ಅನ್ಯಾಯವನ್ನು ವಿವರಿಸಿ ಒಪ್ಪಿಸಿ ಕಡ್ಡಿಯನ್ನು 'ಅಡಕ' ಹಾಕುತ್ತಾನೆ."[೭] ನ್ಯಾಯಕಟ್ಟೆಯಲ್ಲಿ ಯಾರು ಮೊದಲು ಹಣ

ಸಂದಾಯ ಮಾಡಿರುವರೋ ಅಂತಹವರಿಗೆ ಮೊದಲು ಮಾತನಾಡಲು ಅವಕಾಶ ಮಾಡಿಕೊಡುತ್ತಾರೆ. ಇದನ್ನು 'ಅಡಕ' ಹಾಕುವುದು ಅಥವಾ 'ಕಡ್ಡಿ ಹಾಕುವುದು' ಎಂದು ಕರೆಯುತ್ತಾರೆ. ಹಲವಾರು ಸಂದರ್ಭಗಳಲ್ಲಿ ಇದನ್ನು ಕಡ್ಡಿ ನ್ಯಾಯವಂತಲೇ ಕರೆಯುವುದು. ಬೇರೆ ಸಮುದಯಾದಲ್ಲಿ ಮುಂಗಡವಾಗಿ ಇಡುವ (ಹಣಕ್ಕೆ) ಠೇವಣೆಗೆ ಸಮಾನವಾದದ್ದು ಈ ಕಡ್ಡಿ ಎಂಬುದು. ಕಡ್ಡಿ ಹಾಕುವುದು ಎಂದರೆ ಒಂದು ಬಂಗಾರದ ಉಂಗುರವೋ, ಬೆಳ್ಳಿಯ ಉಂಗರವೋ ಅಥವಾ ತಮ್ಮಲ್ಲಿರುವ ಒಂದು ಆಭರಣವಾದರೂ ಇರಬಹುದು. ಏನೂ ಇಲ್ಲದಂತಹ ಕಡು ಬಡವನಾಗಿದ್ದರೆ ಒಂದು ಕಸದಲ್ಲಿ ಬಿದ್ದ ಕಡ್ಡಿಯಾದರೂ ಎತ್ತಿ ಅವರಿಗೆ ಠೇವಣಿ ರೂಪದಲ್ಲಿ ಇಡಬೇಕು. ಈ ರೀತಿಯ ನ್ಯಾಯಕ್ಕೆ 'ಕಡ್ಡಿ ನ್ಯಾಯ' ಎಂದು ಕರೆಯುವರು. ಪಿರ್ಯಾದಿದಾರನು ದೂರು ಸಲ್ಲಿಸಿ ಕಡ್ಡಿ ಹಾಕಿದ ಮೇಲೆ. ಇವನು ಯಾರ ಮೇಲೆ ದೂರ ಸಲ್ಲಿಸಿರುತ್ತಾನೋ ಅವನನ್ನು ವಿಭೂತಿಯ ನ್ಯಾಯಗಾರನು ಮಹಾಂತನ ಮೂಲಕ ಕರೆಯಲಿಕ್ಕೆ ಕಳುಹಿಸುತ್ತಾನೆ. ಕಕ್ಷಿದಾರ ಬಂದ ಮೇಲೆ, ಇಂಥವರು ನಿನ್ನ ಮೇಲೆ ದೂರ ಸಲ್ಲಿಸಿ ಕಡ್ಡಿ ನ್ಯಾಯ ಹೂಡಿದ್ದಾನೆ. ಈ ನ್ಯಾಯದ ವಿವರ ಹೇಗಿದೆ ಎಂದು ವಿವರಿಸುತ್ತಾನೆ. ನಂತರ ಇವನೂ ಸಹ ತನ್ನ ದೂರನ್ನು ವಿವರಿಸಿ ತನ್ನದೇನು ತಪ್ಪಿಲ್ಲದಿದ್ದರೆ ಅಂತಹದ್ದೇ ಕಡ್ಡಿಯನ್ನು ಇವನೂ ಹಾಕಿದರೆ ನ್ಯಾಯ, ಅನ್ಯಾಯಗಳ ವಿಚಾರಣೆ ನಡೆಯಿಸಿ ಎಂದು ಪ್ರತಿ ಸವಾಲು ಹಾಕಿದಂತಾಗುತ್ತದೆ.

ನ್ಯಾಯ ನಡೆಯುವುದು ಖಚಿತವಾದ ಮೇಲೆ, ನ್ಯಾಯ ನಡೆಯುವ ಸುದ್ದಿಯನ್ನು ಕುಲಸ್ಥರಿಗೆ ತಿಳಿಸುವಂತೆ (ವಿಭೂತಿ ಬಳಿಯ) ನ್ಯಾಯಗಾರ (ಯಡವಲ್ಲಿಯ) ಮಹಾಂತುವಿಗೆ ಆಜ್ಞೆ ಹೊರಡಿಸುತ್ತಾನೆ. ಮಹಾಂತಗಾರನು ಡಂಗೂರದವನನ್ನು ಕರದುಕೊಂಡು ಇವರ ಸಮುದಾಯದವರೆಲ್ಲಾ ಎಲ್ಲಿ ಬೀಡು ಬಿಟ್ಟಿರುತ್ತಾರೋ ಆ ಸ್ಥಳದಲ್ಲೆಲ್ಲಾ ತಪ್ಪಡೆ ಬಾರಿಸುತ್ತಾ (ರಾತ್ರಿ ಮಲಗುವ ಸಮಯದಲ್ಲಾಗಲಿ, ಬೆಳಿಗ್ಗೆ ಮುಂಜಾನೆಯಾಗಲಿ ಹೋಗಿ) "ಕೇಳಿರಪ್ಪೋ ಕೇಳ್ರಿ ಕುಲಬಾಂಧವರೇ, ತಾಯಿ-ತಂದೆಗಳೇ ನಾಳೆ ಇಂತಹ ವಾದಿ-ಪ್ರತಿವಾದಿಗಳ ಮಧ್ಯ ನ್ಯಾಯವಿಚಾರಣೆ ನಡೆಯುತ್ತದೆ. ಕಾರಣ ತಾವೆಲ್ಲರೂ ಬರಬೇಕು" ಎಂದು ಸಾರುತ್ತಾನೆ.

ಮರುದಿನ ಎಲ್ಲರೂ ಬಂದು ಸೇರುತ್ತಾರೆ. ಪಂಚಮದಾರರ ಮುಂದೆ ವಾದಿ-ಪ್ರತಿವಾದಿಗಳು ಕುಳಿತಿರುತ್ತಾರೆ.



ಪಂಚಾಯಿತಿಯಲ್ಲಿ ರಾಜಿಯಾಗುತ್ತಿರುವುದು

[illegible]

ಇಂತಹ ಕಡ್ಡಿನ್ಯಾಯ ಹಾಕಿದ ಪಿರ್ಯಾದಿದಾರರು ಗಟ್ಟಿಯಾಗಿ ಬಾಯಿ ಮಾಡುವಂತಿಲ್ಲ. ಪಂಚಮರು ಕೇಳಿದ ಪ್ರಶ್ನೆಗಳಿಗೆ ಮಾತ್ರ ಉತ್ತರಿಸಬೇಕೇ ಹೊರತು ಬೈಯ್ಯುವ, ಜಗಳವಾಡುವ ಹಕ್ಕನ್ನು ಕಳೆದು ಕೊಂಡಂತೆಯೇ, ಪಂಚಮರ ಮುಂದೆ 'ಕಡ್ಡಿ' ಕೊಟ್ಟರೆ ಬಾಯಿಯನ್ನು ಸಹ ಅವರಿಗೆ ಕೊಟ್ಟಂತೆ ಎಂಬುದು ಅವರ ನಂಬಿಕೆ.

ನಂತರ ಸಾಕ್ಷಿಗಳ ವಿಚಾರಣೆ ಜರಗುತ್ತದೆ. ಪಂಚಮರಲ್ಲಿ ವಾದಿ-ಪ್ರತಿವಾದಿಗಳ ಪರವಾಗಿ ತಮ್ಮ ವಾದಗಳನ್ನು ಮುಂದಿಡುತ್ತಾರೆ. ನ್ಯಾಯ ಅನ್ಯಾಯಗಳನ್ನು ಚರ್ಚಿಸಿ ಇಂತಹ ಈ ಹಿಂದೆ ನಡೆದ ನ್ಯಾಯ ನಿರ್ಣಯಗಳನ್ನೆಲ್ಲಾ ಒಂದೊಂದಾಗಿ ವಿವರಿಸಿ ಹೇಳಿ, ಸದ್ಯ ನಡೆದ ನ್ಯಾಯಕ್ಕೆ ಪುಷ್ಠಿಯನ್ನು ನೀಡಿ, ಸತ್ಯವಾದ ವಾದಿ-ಪ್ರತಿವಾದಿಯನ್ನು ಎತ್ತಿ ಹಿಡಿಯುತ್ತಾರೆ. ತಪ್ಪಿತಸ್ಥನಿಗೆ ದಂಡ ವಿಧಿಸುತ್ತಾರೆ. ಸಂಸಾರದ ವಿಷಯಗಳಾದರೆ ರಾಜಿ ಮಾಡಲು ಪ್ರಯತ್ನಿಸುತ್ತಾರೆ. ಕೆಲವು ನ್ಯಾಯಗಳು ಎರಡು ಮೂರು ದಿನದವರೆಗೂ ನಡೆದ ಉದಾಹರಣೆಗಳಿವೆ. ನ್ಯಾಯ ತೀರ್ಮಾನದಲ್ಲಿ ಮೊದಲು ಆದ ಖರ್ಚನ್ನು ಪಂಚಮರು ನೋಡಿಕೊಳ್ಳುತ್ತಾರೆ. ನಂತರ ದಂಡದಿಂದ ವಸೂಲಾದ ಹಣದಲ್ಲಿ ಕಡಿತ ಮಾಡಿಕೊಳ್ಳುತ್ತಾರೆ. ಉಳಿದ ಹಣವನ್ನು ಕುಲಾಚಾರಕ್ಕಾಗಿ ವೆಚ್ಚ ಮಾಡುವರು. ಇಲ್ಲವೆ ಕುಲದ ಹೆಸರಿನಲ್ಲಿ ತೆಗೆದಿಡುತ್ತಾರೆ.

ಒಂದೇ ಪಂಚಾಯಿತಿಯಲ್ಲಿ ನ್ಯಾಯ ಬಗೆಹರಿಯದಿದ್ದರೆ ಇದೇ ಸಮುದಾಯದವರ ಇನ್ನೂ ಬೇರೆ ಬೇರೆ ಸ್ಥಳಗಳಲ್ಲಿ ಇರುವ ಪಂಚಮರ ಕಟ್ಟೆಗಳಲ್ಲಿನ ಪಂಚಮರನ್ನೂ ಕರೆಯಿಸಿ ಇಬ್ಬರು ಕೂಡಿ ನ್ಯಾಯ ಬಗೆಹರಿಸುವರು. ಮೊದಲು ಪಂಚಾಯತಿಯ ತೀರ್ಪೇ ಇವರೂ ನೀಡಿದರೆ ನ್ಯಾಯ ಹೂಡಿದ ಅಪರಾಧಿಗೆ ಹೆಚ್ಚಿನ ದಂಢ ವಿಧಿಸುವರು. ಒಂದು ವೇಳೆ ಮೊದಲು ಪಂಚಾಯಿತಿಯ ತೀರ್ಪಿಗೆ ವಿರುದ್ಧವಾದ ತೀರ್ಪು ಹೊರಬಿದ್ದರೆ ಮೊದಲು ತೀರ್ಪು ನೀಡದ ನ್ಯಾಯಗಾರನಿಗೆ ಆರೋಪಿ ನೀಡಿದ ದಂಡವನ್ನೆಲ್ಲಾ ಹಿಂದಕ್ಕೆ ಕೊಡಬೇಕು. ಮುಂದೆ ಈ ಪಂಚಮರ ಕಟ್ಟೆಯಲ್ಲಿ ಕುಳಿತುಕೊಳ್ಳುವ ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಈ ಸಂದರ್ಭವನ್ನು ನೋಡಿದರೆ ಈ ತೀರ್ಪು ಸಮಂಜಸವಾದುದ್ದೇ ಏಕೆಂದರೆ ಇಂತಹ ತಪ್ಪು ತೀರ್ಪುಗಳನ್ನು ಕ್ಷಮಿಸುತ್ತಾ ಹೋದರೆ ನ್ಯಾಯದ ಬದಲಾಗಿ ಅನ್ಯಾಯವೇ ಸಮುದಾಯದಲ್ಲಿ ತುಂಬಿ ಬಿಡುವ ಸಾಧ್ಯತೆ ಇದೆ. ಮುಂದೆ ನಡೆಯುವ ಪಂಚಾಯಿತಿಗೂ ಸಹ ಕುಲ ಬೆಲೆ ಕೊಡುವುದಿಲ್ಲ. ಅದಕ್ಕೆ ಇದು ಒಳ್ಳೆಯ ನಿರ್ಧಾರ.

ನ್ಯಾಯ ಪಂಚಾಯಿತಿ ನಡೆಯುವ ಸ್ಥಳಕ್ಕೆ ಕುಲದ ವ್ಯಕ್ತಿ ಯಾರೇ ಇರಲಿ, ಅಲ್ಲಿಗೆ ಕಟ್ಟಿಗೆ ಯಾವುದೇ ಆಯುಧ ಕೈಯಲ್ಲಿ ತರಬಾರದು. ಕುಡಿದು ಬರುವ ಹಾಗಿಲ್ಲ. ವಾದಿ-ಪ್ರತಿವಾದಿಗಳ ಮಧ್ಯ ಅಹವಾಲು ನಡೆಯುವಾಗ ಯಾರೂ ಮಧ್ಯೆ ಮಾತನಾಡುವ ಹಾಗಿಲ್ಲ. ಹೆಂಗಸರಿಗೆ ನ್ಯಾಯಸ್ಥಾನದಲ್ಲಿ ಮಾತನಾಡುವ ಹಕ್ಕು ಈ ಸಮುದಾಯದಲ್ಲಿಲ್ಲ. ಬೇಕಾದರೆ ಸ್ವಲ್ಪ ದೂರ ಕುಳಿತು ವೀಕ್ಷಿಸಬಹುದು. ಮಕ್ಕಳೂ ಸಹ ಮಾತನಾಡುವಂತಿಲ್ಲ. ಅವರನ್ನು ಸಾಕ್ಷಿಯಾಗಿ ಪರಿಗಣಿಸುವುದಿಲ್ಲ. ಏಕೆಂದರೆ ನ್ಯಾಯ ನಡೆಯುವ ಸ್ಥಳದಲ್ಲಿ ಬಡಿಗೆ, ಆಯುಧ ಇದ್ದರೆ ಆಕಸ್ಮಾತ್ತಾಗಿ ಕೋಪದಲ್ಲಿ ಕೈಗೆ ಸಿಕ್ಕಿದ್ದನ್ನು ತೆಗೆದುಕೊಂಡು ಹೊಡೆದಾಡುವ

[illegible]

[illegible]

[illegible]

[illegible]

ಸಂದರ್ಭಗಳಿರುತ್ತವೆ. ಹಾಗಾಗಿ ಇಂತಹ ಅನಾಹುತ ತಪ್ಪಿಸಲು ಈ ವ್ಯವಸ್ಥೆ ಕೈಗೊಂಡಿದ್ದಾರೆ. ಕುಡಿದವರ ಪ್ರಜ್ಞೆ ಅವರ ಹತೋಟಿಯಲ್ಲಿರುವುದಿಲ್ಲವೆಂದು ಅವರಿಗೂ ಕೂಡ ನಿಷೇಧಿಸಲಾಗಿದೆ.

೫.೫. ಬಾಡ ತಪ್ಪು : ಸಮುದಾಯದ ಗಂಡು ಇತರ ಜಾತಿಯ ಹೆಣ್ಣನ್ನು ಕೂಡಿಕೊಂಡಿದ್ದರೆ ಅಂತಹವರನಿಗೆ ದಂಡ ವಿಧಿಸಿ ಕುಲ ಬಹಿಷ್ಕಾರ ಹಾಕುವರು. ಅವನು ಆ ಹೆಣ್ಣನ್ನು ಬಿಟ್ಟು ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡರೆ ಅವನಿಗೆ ದಂಡಹಾಕುತ್ತಾರೆ. ಅದನ್ನೇ 'ಬಾಡ ತಪ್ಪು' ಎನ್ನುತ್ತಾರೆ. ಈ ಹಣವನ್ನು ಬೇಟೆ ಮಾಡಿಸಿ ಕುಲಕ್ಕೆ ಊಟ ಹಾಕಿಸುವರು. ಕುಲವು ಅವನಿಗೆ ಕ್ಷಮೆ ನೀಡುವುದು. ಅದೇ ಇವರ ಜಾತಿಯ ಹೆಣ್ಣು ಬೇರೆ ಜಾತಿಯ ಗಂಡಿನ ಜೊತೆ ಸಂಪರ್ಕ ಹೊಂದಿದ್ದರೆ, ಅವಳಿಗೆ ಕ್ಷಮೆ ಇಲ್ಲ. ಕುಲ ಬಹಿಷ್ಕಾರವೇ ಗತಿ ಈ ಹೆಣ್ಣನ್ನು ನಾಯಿ ಮಟ್ಟೆದ ಗಡಿಗೆಗೆ ಹೋಲಿಸುತ್ತಾರೆ. ಎಂತಹ ಸಮಯ, ಸಂದರ್ಭ, ಸಮಾರಂಭ ಬಂದರೂ ಅವಳನ್ನು ಕುಲದಲ್ಲಿ ಸೇರಿಸಿ ಕೊಳ್ಳುವುದಿಲ್ಲ. ಆದರೆ ಅದೇ ಗಂಡಿಗೆ ಈ ಕಟ್ಟಳೆಯಿಲ್ಲ. ಕುಲಕ್ಕೆ ಮಾಡಿಸಿದ ಊಟ ಅವನ ಸಂಬಂಧಿಕರು ತಿನ್ನುವುದಿಲ್ಲ. ಒಟ್ಟಿನಲ್ಲಿ ಈ ಸಮುದಾಯದಲ್ಲಿ ಹೆಣ್ಣಿಗೆ ಸ್ವತಂತ್ರ ಇಲ್ಲ. ಇಲ್ಲಿ ಋಗ್ವೇದದ ತರಹದ ಆಚರಣೆಗಳು ಇವರಲ್ಲಿ ಕಂಡುಬರುತ್ತವೆ. ಈ ಹೆಣ್ಣಿಗೆ ನ್ಯಾಯಸ್ಥಾನದಲ್ಲಿಯಾದರೂ ಅಷ್ಟೇ, ಯಾವುದೇ ತರಹದ ಅರ್ಹತೆ ನೀಡಿರುವುದಿಲ್ಲ. "ನಃ ಸ್ವತಂತ್ರ್ಯ ಸ್ತ್ರೀ" ಇಲ್ಲಿ ಕೂಡ ಸಮಾಜದ ಸಮಸ್ಯೆಗಳ ತಮ್ಮ ಪರಿಹಾರ ಮತ್ತು ನೀತಿ ನಿಯಮಗಳನ್ನು ನಿರ್ಧರಿಸುವುದಕ್ಕಾಗಿ ಕರೆಯುವ ಸಭೆಯಲ್ಲಿ ಭಾಗವಹಿಸುವ ಹಕ್ಕು ಕೂಡ ಮಹಿಳೆಗೆ ಇಲ್ಲ."[೯] ನ್ಯಾಯ ಬೇಡುವ ಹೆಂಗಸೂ ಸಹ ೧೫ ಮೊಳ ದೂರ ನಿಂತಿರಬೇಕು.

೫.೬ ಹಕಾಂ ತಪ್ಪು : ಒಬ್ಬನು ಮತ್ತೊಬ್ಬನ ಹೆಂಡತಿಯನ್ನು ಗುಟ್ಟಾಗಿ ಲೈಂಗಿಕ ಸುಖಕ್ಕಾಗಿ ಕರೆದುಕೊಂಡು ಹೋದರೆ ಅಂತಹ ಘಟನೆಯನ್ನು ಈ ಸಮುದಾಯದಲ್ಲಿ 'ಓಡಿಸಿಕೊಂಡು ಹೋಗುವುದು' ಅಥವಾ 'ಹಕಾಂ ತಪ್ಪು' ಎಂದು ಕರೆಯುತ್ತಾರೆ. ಅಂತಹ ಸಂಬಂಧದಲ್ಲಿ ಒಬ್ಬರಿಗೊಬ್ಬರಿಗೆ ಪರಸ್ಪರ ಇಚ್ಛೆ ಇದ್ದರೆ, ಅವಳಿಗೆ ಮೊದಲು ಇದ್ದ ಗಂಡನಿಗೆ ಲಗ್ನದ ಖರ್ಚು ಕೊಟ್ಟು, ಮದುವೆ ಮಾಡಿಕೊಡುತ್ತಾರೆ. ಅಲ್ಲದೆ ಅವಳನ್ನು ಮೊದಲು ಮದುವೆಯಾದ ಗಂಡನೂ ಅವಳನ್ನು ಸರಿಯಾಗಿ ನೋಡಿಕೊಳ್ಳದಿದ್ದಕ್ಕೆ ಅಂದರೆ ಬೇರೆಯವನ ಜೊತೆ ಸಂಬಂಧ ಬೆಳೆಸುವವರೆಗೂ ಅವಳನ್ನು ಸ್ವತಂತ್ರವಾಗಿ ಬಿಟ್ಟಿದ್ದಕ್ಕೆ ಅವನಿಗೂ ದಂಡ ಹಾಕುವರು. ಮಹಾಂತಗಾರ ಅವಳ ಸೆರಗಿನಲ್ಲಿ ಒಂದು ರೂಪಾಯಿ ನಾಲ್ಕಾಣೆ ಕಟ್ಟುವನು. ಇನ್ನು ಅಲ್ಲಿಗೆ ಮೊದಲಿನ ಗಂಡನಿಂದ ಅವಳಿಗೆ ಬಿಡುಗಡೆಯು ಸಿಂಧುವಾದಂತೆ. ಇನ್ನು ಅವಳು ಎಲ್ಲಿಯಾದರೂ ಇರಲಿ, ಯಾರ ಜೊತೆಗಾದರೂ ಇರಲಿ ಯಾರೂ ಕೇಳುವಂತಿಲ್ಲ. ಒಂದು ರೂಪಾಯಿ ನಾಲ್ಕಾಣೆಯನ್ನು ಸೆರಗಿಗೆ ಕಟ್ಟುವುದೆಂದರೆ ಮೊದಲಿನವನಿಂದ ಇದ್ದ ಹಳೆಯ ಸಂಬಂಧದ ಕೊಂಡಿ ಕಳಚಿದಂತೆಯೇ ಅದರ ಸಂಕೇತ ಎಂದು ಈ ಕುಲದವರ ಪದ್ಧತಿ ಇದು. ಇಂತಹ ತಪ್ಪಿಗೆ ಗಂಡಿನವರಿಗೆ ಮದುವೆಯ ಖರ್ಚಿನ ಹಣ ಕೊಟ್ಟರೆ ತೆಗೆದುಕೊಳ್ಳುವುದಿಲ್ಲ. "ತೆಗೆದುಕೊಂಡರೆ ತಪ್ಪು ಒಪ್ಪಿಕೊಂಡು ಅಂಥಹ ಕೆಲಸಕ್ಕೆ ಮತ್ತೆ ಪ್ರೇರಣೆ ನೀಡಿದಂತಾಗುತ್ತದೆಂದು ತಿರಸ್ಕರಿಸುವರು."[೧೦] ಒಂದೊಂದು ಸಲ ಇಂತಹ ತಪ್ಪುಗಳಿಂದ ಬಂದ

ಹಣವನ್ನು ಕುಲಸ್ಥರಾರು ತೆಗೆದುಕೊಳ್ಳದೇ ಶ್ರೀಶೈಲ ತಮ್ಮ ಗುರುವಿನ ಬಳಿಗೆ ಕಳುಹಿಸುತ್ತಾರೆ. ಇಂತಹ ಸಂದರ್ಭದಲ್ಲಿ ವಿಧಿಸಿದ ದಂಡದ ಹಣವನ್ನು ಕುಲಾಚಾರಕ್ಕಾಗಿ ಬೇಟೆಯನ್ನು ಮಾಡಿಸುತ್ತಾರೆ. ಅಂತಹ ಊಟವನ್ನು ಗಂಡನ ಮನೆಯವನಾಗಲಿ, ತವರು ಮನೆಯವರಾಗಿ ಮಾಡುವುದಿಲ್ಲ. ಕಳ್ಳು ಬಳ್ಳಿಯವರೂ ಸಹ ತೆಗೆದುಕೊಳ್ಳುವುದಿಲ್ಲ.

ಅದೇ ರೀತಿ ಒಬ್ಬ ಮದುವೆಯಾಗದ ಹುಡಗ ತಮ್ಮ ಸಮುದಾಯದ ಹುಡುಗಿಯ ಹತ್ತಿರ (ಅಂದರೆ ಆ ಹುಡುಗಿಗೂ ಸಹ ಮದುವೆಯಾಗದಿದ್ದರೆ) ಅನೈತಿಕ ಸಂಬಂಧ ಹೊಂದಿದ್ದು ಗೊತ್ತಾದರೆ 'ನಾಯಿ ಮುಟ್ಟಿದ್ದು ನಾಯಿಗೆ' ಎನ್ನುವ ಗಾದೆಯಂತೆ ಅವನು ಅನುಭವಿಸಿದ ಹುಡುಗಿಯನ್ನು ಅವನಿಗೇ ಮದುವೆ ಮಾಡಿಸುತ್ತಾರೆ. ಹುಡಗನ ತಂದೆಗೂ ಮತ್ತು ಹುಡುಗಿಯ ತಂದೆಗೂ ದಂಡವಿಧಿಸುತ್ತಾರೆ. ಏಕೆಂದರೆ ಮಕ್ಕಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳದ ಕಾರಣ ಅಥವಾ ಮಕ್ಕಳ ಬಗ್ಗೆ ಸರಿಯಾದ ಕಾಳಜಿ ಇರಲೆಂದು ತಂದೆ-ತಾಯಿಗಳಿಗೆ ದಂಡ ವಿಧಿಸುತ್ತಾರೆ.

"ಹೆಣ್ಣು ಕೊಡುವೆನೆಂದು ಹೇಳಿ ಅಥವಾ ಮಾಡಿಕೊಳ್ಳುವೆನೆಂದು ಹೇಳಿ ತಾಂಬೂಲ ತೆಗೆದುಕೊಂಡು ಪಂಚಾಯಿತಿಗೆ ಹಾಕುತ್ತಾರೆ. ಯಾವುದೇ ಒಂದು ಸಂದರ್ಭದಲ್ಲಿ ಗಂಡುಳ್ಳ ಮತ್ತು ಹೆಣ್ಣುಳ್ಳ ತಂದೆ-ತಾಯಿಗಳು ಸರಾಯಿ ಅಂಗಡಿಯಲ್ಲಿಯೇ ಆಗಲಿ, ಟೀ ಹೊಟಲಿನಲ್ಲಿಯೇ ಆಗಲಿ ಮಕ್ಕಳು ಚಿಕ್ಕವಿದ್ದರೂ ಸಹ ಮನೆಯಲ್ಲಿ ಯಾವುದೇ ಅಭಿಪ್ರಾಯ ಪಡೆಯದೇ ಟೀಯನ್ನು ಅಥವಾ ಸರಾಯಿಯ ಗ್ಲಾಸುಗಳನ್ನು ಬದಲಾಯಿಸಿ ಈತನದು ಆತ, ಆತನದು ಈತ ಮಾತುಕೊಟ್ಟು ಕುಡಿದನೆಂದರೆ ಮುಗಿಯಿತು. ಅಲ್ಲಿಗೆ ಮಾತು ಕಾಯಂ ಆದಂತೆಯೇ ಮುಂದೆ ಹುಡುಗ ದೊಡ್ಡವನಾಗಿಯೋ ಅಥವಾ ಹುಡುಗಿ ದೊಡ್ಡವಳಾಗಿಯೋ ಸರಿ ಬರಲಿಲ್ಲವೆಂದರೆ ಮತ್ತೆ ದೈವದ ಮುಂದೆ ಕಾಫಿಯೋ ಅಥವಾ ಸರಾಯಿಯೋ ಒಬ್ಬರಿಗೊಬ್ಬರು ಬದಲಾಯಿಸಿಕೊಂಡು ಕುಡಿದರೆ ಅಲ್ಲಿಗೆ ಮಾತು ವಾಪಸ್ಸು ಪಡೆದಂತೆ. ಇಲ್ಲದಿದ್ದರೆ ಪಂಚಾಯಿತಿ ಹೂಡುವರು. ಪಂಚಾಯತಿಯಲ್ಲಿ ಪಂಚಮರು ಕೋರಿದ ದಂಡ ಕೊಡಬೇಕು."[೧೧]

(ಸತ್ತ ಸುದ್ದಿಯನ್ನು ಹರಿಜನರಿಂದ ಹೇಳಿ ಕಳುಹಿಸುವ ಹಾಗಿಲ್ಲ. ಹಾಗೆ ಹೇಳಿ ಕಳುಹಿಸಿದರೆ ಬಂಧುಗಳು ಶವ ಸಂಸ್ಕಾರಕ್ಕೆ ಬರುವುದಿಲ್ಲ. ಸತ್ತವರನ್ನು ಹೂಳಲು ಕುಣಿಯನ್ನು ಸಹ ಹರಿಜನರಿಂದ ತೆಗೆಸುವ ಹಾಗಿಲ್ಲ. ಹಾಗೇನಾದರೂ ತೆಗೆಸಿದರೆ ದೈವವು ದಂಡವನ್ನು ವಿಧಿಸುತ್ತದೆ.)

ಈ ಸಮುದಾಯದವರಲ್ಲಿ ಹುಟ್ಟಿದ ಪ್ರತಿಯೊಬ್ಬ ಗಂಡು ಮಗುವೂ ಕಡ್ಡಾಯವಾಗಿ ಕೂದಲನ್ನು ಬಿಡಬೇಕು. ಬಿಡದಿದ್ದರೂ ದಂಡವನ್ನು ವಿಧಿಸುತ್ತಾರೆ. ಇಲ್ಲದಿದ್ದರೆ ಅಂತಹವರನ್ನು ಕಾರ್ಯದಲ್ಲಿ ಕರೆಯುವುದಿಲ್ಲ. ಹೆಣ್ಣು ಕೊಡುವುದಿಲ್ಲ. ಇತ್ತೀಚೆಗೆ ಈ ವ್ಯವಸ್ಥೆ ನಶಿಸುತ್ತಾ ಬಂದಿದೆ. ಏಕೆಂದರೆ ಹಲವಾರು ವೇಷಗಾರರು ಈ ವೃತ್ತಿಯನ್ನು ತೊರೆಯುತ್ತಿದ್ದಾರೆ. ಮತ್ತು ಈ ವೇಷಗಾರಿಕೆಯ ಬಗ್ಗೆ ಜಿಗುಪ್ಸೆ ಉಂಟಾಗಿದೆ. ಆದುದರಿಂದ ಸಡಿಲತೆ ಉಂಟಾಗಿದೆ ಎಂದು ಹೇಳಬಹುದು.

ಸೋಗು ಧರಿಸಿಕೊಂಡು ಹೋಗುವ ಮೇಳದವರೆಲ್ಲ ಗಂಡಸರು ಮಾತ್ರ. ಹೆಂಗಸರು ಪಾತ್ರಧರಿಸುವಂತಿಲ್ಲ. ಅವಶ್ಯವಿದ್ದರೆ ಅವರು ವಾದ್ಯ ಮೇಳದಲ್ಲಿ ಭಾಗವಹಿಸುವರು. ಬುರ್ರಕಥೆ ಹೇಳುವಾಗ 'ಡುಮುಕಿ' ಬಾರಿಸಬಹುದು. ವೇಷವೇನಾದರೂ ಹಾಕಿದರೆ ಅಂತಹದಕ್ಕೆ ಕೂಡ ಪಂಚಾಯಿತಿ ದಂಡವನ್ನು ವಿಧಿಸುತ್ತದೆ.

ಒಂದು ಹೆಣ್ಣನ್ನು ಮಾಡಿಕೊಂಡ ಅವನಿಗೆ ಇನ್ನೊಂದು ಹೆಣ್ಣನ್ನು ಕೊಡಬಾರದು ಹಾಗೆ ಕೊಟ್ಟರೆ ಕೊಟ್ಟವನಿಗೂ ಮಾಡಿಕೊಂಡವನಿಗೂ ದಂಡ ವಿಧಿಸುತ್ತಾರೆ. ವೇಷಗಾರರಲ್ಲಿ ಹೆಣ್ಣಿನ ಸಮಸ್ಯೆ ಇರುವುದರಿಂದ ಈ ವ್ಯವಸ್ಥೆ ಮಾಡಿಕೊಂಡಿರಬಹುದು ಎಂದೆನಿಸುತ್ತದೆ. ಮತ್ತು ದ್ವಿಪತ್ನಿತ್ವ ತಲೆದೂರಿ ಸಾಮಾಜಿಕ ಅನಿಷ್ಟಕ್ಕೆ ಕಾರಣವಾಗುತ್ತದೆ ಎಂಬ ಇನ್ನೊಂದು ಕಾರಣವಿರಬಹುದು.

ಗಂಡ-ಹೆಂಡತಿಯ ಮಧ್ಯ ವಿರಸ ತಲೆದೂರಿ ಒಬ್ಬರಿಗೊಬ್ಬರ ಸಂಬಂಧಗಳು ಕಡಿದು ಹೋಗುವ ಸಂದರ್ಭ ಬಂದರೆ, ತಮ್ಮ ಕುಟುಂಬದಲ್ಲಿಯೇ ಕಳ್ಳು ಪಂಚಾಯಿತಿ ಮಾಡಿ ಬಗೆಹರಿಸುವರು. ಹಾಗೇನಾದರೂ ಬಗೆಹರಿಯದಿದ್ದರೆ ಕುಲ ಪಂಚಾಯಿತಿಗೆ ಮನವರಿಕೆ ಮಾಡಿ, ನ್ಯಾಯ ಸಲ್ಲಿಸುವರು. ತಮ್ಮಲ್ಲಿ ಬಾಳಿ ಹೋದ ಕುಲಜರ ಆದರ್ಶಗಳನ್ನು ಹೇಳಿ, ಬುದ್ದಿ ಮಾತುಗಳಿಂದ ಒಂದುಗೂಡಿಸುವರು. ಇಬ್ಬರಿಗೂ ಕೂಡಿರಲು ಸಾಧ್ಯವಿಲ್ಲವೆಂದು ಕಂಡುಬಂದರೆ ದೈವದವರು ಗಂಡಿನಿಂದ ನಾಲ್ಕಾಣೆಯನ್ನು ಪಡೆದು ಅವಳ ಸೆರಗಿನಲ್ಲಿ ಕಟ್ಟಿಸುತ್ತಾರೆ. ಅಲ್ಲಿಗೆ ಬಿಡುಗಡೆ ಅಥವಾ ವಿಚ್ಛೇದನ ಸಿಂಧುವಾದಂತೆ. ಗಂಡನಾದವನು ಹೆಂಡತಿ ಬೇಕೆಂದು ಹೇಳಿದಾಗ ಹೆಂಡತಿಯಾದವಳು ಗಂಡನನ್ನು ತಿರಸ್ಕರಿಸಿದರೆ ಅವಳ ತಂದೆ-ತಾಯಿಗಳಿಂದ ಮದುವೆಯಲ್ಲಿ ಆದ ಖರ್ಚನ್ನು ಗಂಡನಿಗೆ ಕಟ್ಟಿಕೊಡಬೇಕು. ದಂಡ ವಿಧಿಸಿ, ಗಂಡನಿಂದ ಒಂದು ರೂಪಾಯಿ ನಾಲ್ಕಾಣೆ ಪಡೆದು ಅವಳ ಸೆರಗಿಗೆ ಕಟ್ಟಿಸಿ ಬಿಡುಗಡೆಯನ್ನು ದೃಢೀಕರಿಸುವರು. ಗಂಡನೇ ಹೆಂಡತಿಯನ್ನು ತಿರಸ್ಕರಿಸಿದರೆ ಅವಳ ಜೀವಿತಕ್ಕೆ ಏನನ್ನಾದರು ಕೊಟ್ಟು ಪಂಚಾಯಿತಿಗೆ ದಂಡವನ್ನು ಕಟ್ಟಿ ಸಂಬಂಧವನ್ನು ಬಿಡುಗಡೆ ಮಾಡಿಕೊಳ್ಳುವರು.

ಹಗಲುವೇಷಗಾರರಲ್ಲಿ ಸಾಮಾನ್ಯ ಜಗಳಗಳನ್ನ ಮಾಡಿಕೊಂಡವರೂ ಸಹ ಇಂತಹ ನ್ಯಾಯ ಪಂಚಾಯಿತಿಯಿಂದ ತಪ್ಪಿಸಿಕೊಂಡಿಲ್ಲ. ಜಗಳವಾಡಿ ಬಡಿಗೆಯಿಂದ ಹೊಡೆದಾಡುವ ಹಾಗಿಲ್ಲ. ಹಾಗೆ ಹೊಡೆದಾಡಿದರೆ ಹೊಡೆದವನಿಗೆ ೫೦ ರೂಪಾಯಿ, ಹೊಡಿಸಿಕೊಂಡವನಿಗೆ ಅದರ ಅರ್ಧ ಅಂದರೆ ೨೫ ರೂಪಾಯಿ ದಂಡ ವಿಧಿಸುವರು. ಹೊಡೆಯುತ್ತೇನೆಂದು ಕಟ್ಟಿಗೆ ಹಿಡಿದುಕೊಂಡು ತೋರಿದರೂ ೨೫ ರೂಪಾಯಿ, ಹೊಡೆದರೂ ೧೦೦ ರೂಪಾಯಿ, ಹೊಡೆಸಿಕೊಂಡರೆ ೫೦ ರೂಪಾಯಿ ದಂಡ ಹಾಕುವರು. ಕೆರದಿಂದ (ಮೆಟ್ಟು) ಹೊಡಿಸಿಕೊಂಡರೆ ಮನೆಯ ಒಳಗೆ ಕರೆದುಕೊಳ್ಳುವಂತಿಲ್ಲ. ಈ ವ್ಯವಸ್ಥೆ ಬ್ರಾಹ್ಮಣರಲ್ಲಿ ಕಂಡುಬರುತ್ತದೆ. (ವೈಷ್ಣವರ ಕೆಲ ವಿಚಾರಗಳೂ ಇವರ ಆಚರಣೆಯಲ್ಲಿ ಪ್ರಭಾವ ಬೀರಿವೆ.) ಜೋಪಡಿಯನ್ನು ಸಾರಿಸಿ ಕುಲದ ಶಿರಸ್ಯಾಲ ಗಣಾಚಾರಿಯನ್ನಾಗಲಿ, ಇಲ್ಲವೇ ಅಲ್ಲಿಯ ಸ್ಥಳೀಯ ಜಂಗಮನನ್ನಾಗಲಿ ಕರೆದುಕೊಂಡು ಬಂದು ಅವನ ಪಾದ ಪೂಜೆ ಮಾಡಿ ಆ ಪಾದೋದಕವನ್ನು, ವಿಭೂತಿಯನ್ನು ಹೊಡೆಸಿಕೊಂಡವನ ಬಾಯಿಯಲ್ಲಿ ಹಾಕಿ, ನಾಲಿಗೆಯನ್ನು ಊದಿನ ಕಡ್ಡಿಯಿಂದ

[illegible]

ಸುಡುವರು. ಹಣೆಗೆ ವಿಭೂತಿ ಹಚ್ಚುವರು. ನಂತರ ಅವನು ಗುರುಗಳ ಕಾಲಿಗೆ ಬಿದ್ದು ಆಶೀರ್ವಾದ ಪಡೆದು ಜೋಪಡಿಯೊಳಗೆ ಪ್ರವೇಶಿಸಬೇಕು. ಅಲ್ಲಿಗೆ ಅವನ ಸೂತಕ ಕಳೆದಂತೆ. ಹಾಗೆ ಕೆರದಿಂದ ಹೊಡೆಸಿಕೊಂಡ ವ್ಯಕ್ತಿಯನ್ನು ಮಾದಿಗರಿಗೆ ಸಮ ಎಂದು ತಿರಸ್ಕರಿಸುತ್ತಾರೆ. ಅಂದರೆ ಇವರು ಆರ್ಥಿಕವಾಗಿ ಎಷ್ಟೇ ಹಿಂದುಳಿದಿದ್ದರೂ ತಮ್ಮ ಸಂಪ್ರದಾಯಗಳನ್ನು ಬಿಟ್ಟುಕೊಟ್ಟಿಲ್ಲ. ಬಿಟ್ಟುಕೊಡಲೂ ಆಗುವುದಿಲ್ಲ. ಇದೆಲ್ಲಾ ನೋಡಿದರೆ ಇವರಲ್ಲಿ ವೈದಿಕ ಮತ್ತು ಶೈವ ಆಚರಣೆಗಳ ಸಮ್ಮಿಶ್ರವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಹಗಲುವೇಷಗಾರರಿಗೆ ಹಳ್ಳಿಗಳೇ ಇವರ ಆಸ್ತಿ. ಇವರಲ್ಲಿ ಅಣ್ಣ-ತಮ್ಮಂದಿರು ಭಾಗವಾದರೂ ಆಸ್ತಿಯ ರೂಪದಲ್ಲಿ ಹಳ್ಳಿಗಳನ್ನು ಹಂಚಿಕೊಳ್ಳುತ್ತಾರೆ. ಹಾಗೆ ಹಂಚಿಕೊಂಡ ಹಳ್ಳಿಗಳನ್ನು ಬೇರೊಬ್ಬ ವೇಷಗಾರರ ತಂಡ ಬಂದು ಅತಿಕ್ರಮಿಸಿ ವೇಷ ಹಾಕುವಂತಿಲ್ಲ. ಹಾಗೇನಾದರೂ ವೇಷ ಹಾಕಿದರೆ ಅಂತಹವರನ್ನು ಪಂಚಾಯಿತಿ ತಿಳಿಹೇಳಿ ದಂಡವಿಧಿಸುತ್ತದೆ. ಈ ಊರುಗಳ ಹಂಚಿಕೆಯಲ್ಲಿ ಎಷ್ಟೋ ದೊಡ್ಡ-ದೊಡ್ಡ ಜಗಳಗಳಾಗಿವೆ. ಕುಲಪಂಚಾಯಿತಿಯಲ್ಲಿ ಕೂಡಿ ಊರಾಡುತ್ತೇವೆಂದು ಮಾತು ಕೊಟ್ಟು ಯಾವಾಗ ಬೇಕಾದರೆ ಆಗ ಬಿಡುವಂತಿಲ್ಲ. ಹಾಗೇನಾದರೂ ಗುಂಪಿನಿಂದ ತೊರೆಯಬೇಕೆಂದರೆ ಮತ್ತೆ ಎರಡು ವರ್ಷವಾದ ಮೇಲೆ ನಡೆಯುವ ಕುಲ ಪಂಚಾಯಿತಿಯ ತೀರ್ಮಾನದಂತೆ ಆದಾಯದ ಹಂಚಿಕೆಮಾಡುವರು. ಆ ಬಳಿಕ ಗುಂಪು ತೊರೆಯುವರು.

ಸಾಮಾನ್ಯ ಜಗಳದಲ್ಲಿ ಪೊಲೀಸ್‌ಠಾಣೆಯ ಸುದ್ದಿ ಎತ್ತಬಾರದು ಮತ್ತು ಅದರಲ್ಲಿ ಕಾಲಿಡಬಾರದು. ಹಾಗೆ ನ್ಯಾಯಕೋರಿ ಪೊಲೀಸ್‌ಠಾಣೆಗೆ ಯಾರು ಮೊದಲು ಹೋಗುತ್ತಾರೆಯೋ ಅವರಿಗೆ ಕುಲಪಂಚಾಯಿತಿಯಲ್ಲಿ ದಂಡ ಹಾಕುತ್ತಾರೆ. "ಪೊಲೀಸ್‌ಠಾಣೆಯ ಮೆಟ್ಟಿಲು ಹತ್ತುವುದು ಒಂದೆ, ಸುಡುಗಾಡು ಹಾದಿ ತುಳಿಯುವುದು ಒಂದೆ" ಎಂದು ಈ ಸಮುದಾಯದವರು ತಿಳಿದಿದ್ದಾರೆ.

ತೆಗೆದುಕೊಂಡ ಸಾಲವನ್ನು ಹಿಂದುರುಗಿಸದೇ ಎಗರಿ ಹಾಕುವ ಮಾತು ಮಾತನಾಡಿದರೆ ಅಂತಹವರನ್ನು ಈ ಸಮಾಜ ಸುಮ್ಮನೆ ಬಿಡುವುದಿಲ್ಲ. ಸಾಲ ಕೊಟ್ಟವನು ಪಂಚಾಯತಿಗೆ ದಾವೆ ಹೂಡಿ ನಾಲ್ಕು ಮಂದಿಯ ಹತ್ತಿರ ಇಡುತ್ತಾನೆ. ಈ ಅವಮಾನವನ್ನು ತಾಳಲಾರದೆ ಅವರ ಸಂಬಂಧಿಕರು ಅವನ ಸಾಲವನ್ನು ತೀರಿಸಿ ಮರ್ಯಾದೆ ಉಳಿಸಿಕೊಳ್ಳುತ್ತಾರೆ. ಸಾಲ ತೆಗೆದುಕೊಂಡವನು ಒಪ್ಪಿಕೊಳ್ಳದೆ ಕೈ ಎತ್ತಲು ಪ್ರಯತ್ನಿಸಿದರೆ ಅವನನ್ನು ಕುಲವು ಸುಮ್ಮನೆ ಬಿಡುವುದಿಲ್ಲ. ಕುಲದಿಂದ ಬಹಿಷ್ಕಾರ ಹಾಕುವ ಮತ್ತು ಇವರಲ್ಲಿ ಸಾಲ ಕೊಡುವವನು ಸಹ ಹೆಚ್ಚಿನ ಬಡ್ಡಿಗೆ ಕೊಡುವ ಹಾಗಿಲ್ಲ ಮತ್ತು ಬಡ್ಡಿಗೆ ಬಡ್ಡಿ ಚಕ್ರಬಡ್ಡಿಯನ್ನು ಹಾಕುವಂತಿಲ್ಲ. ಹಾಗೇನಾದರೂ ಹೆಚ್ಚಿನ ಬಡ್ಡಿ ಹಾಕಿದರೆ ಸಾಲ ತೆಗೆದುಕೊಂಡವನು ಪಂಚಾಯಿತಿಗೆ ಹೂಡಿ ಸುಸ್ತಿ ಬಡ್ಡಿ ಕಡಿಮೆ ಮಾಡಿಸಿಕೊಳ್ಳುತ್ತಾರೆ.

೫.೭. ಬಾಯಿ ತಪ್ಪು (ನೋಟ ತಪ್ಪು) : ಜಗಳದಲ್ಲಿ ಅವಾಚ್ಯ ಶಬ್ದಗಳ ಬಳಕೆಯನ್ನು ಖಂಡಿಸುತ್ತದೆ.

ಮತ್ತು ದಂಡದ ಮೂಲಕ ಶಿಕ್ಷೆ ವಿಧಿಸುತ್ತದೆ. ಹೊಟ್ಟೆಗೆ ಏನು ತಿನ್ನುತ್ತೀ? ಎಂದರೂ ಕೂಡ ದಂಡ ಹಾಕದೆ ಬಿಡುವುದಿಲ್ಲ. ಮಗನು ಸಹ ತಂದೆ-ತಾಯಿಗಳಿಗೆ ಅವಾಚ್ಯ ಶಬ್ದಗಳಿಂದ ಬೈದರೆ ಸ್ವಲ್ಪವಾದರೂ ದಂಡವೆಂದು ಹಾಕಿಸುತ್ತಾರೆ. ಇಂತಹ ತಪ್ಪುಗಳಿಗೆ ಬಾಯಿ ತಪ್ಪೆಂದು ಪರಿಗಣಿಸುವರು.

ಹೆಣ್ಣು ಗಂಡುಗಳ ಮಧ್ಯ ಕುಂಟಲುತನ ಮಾಡುವವರಿಗೂ ಮತ್ತು ಗಂಡನ ಮನೆಯಲ್ಲಿ ಸರಿಯಾಗಿ ಬಾಳುವೆ ನಡೆಸುವವರನ್ನು ದುರ್ಭೋದೆ ತುಂಬಿ ತವರು ಮನೆಗೆ ಓಡಿ ಹೋಗುವಂತೆ ಮಾಡಿದವರನ್ನು ಗುರುತಿಸಿ ಪಂಚಾಯಿತಿ ಕಟ್ಟೆಗೆ ಎಳೆದು ದಂಡವನ್ನು ವಿಧಿಸುತ್ತಾರೆ.

೫.೮. ಕುಲ ಬಹಿಷ್ಕಾರ (ಎಲಿ ಗೊಟ್ಟು) : ಹಗಲುವೇಷಗಾರರು ನ್ಯಾಯ ವಿಚಾರಣೆಯ ನಂತರ ಎಲ್ಲಾ ರೀತಿಯ ಅನ್ಯಾಯಗಳನ್ನು ತಡೆಯಲು ಸಾಮ, ಭೇದ, ದಂಡ ಎನ್ನುವಂತೆ ಎಲ್ಲಾ ರೀತಿಯಿಂದಲೂ ಜ್ಞಾನವನ್ನು ಭೋದಿಸಿ ಇಂತಹ ಘಟನೆ ಮುಂದೆ ಘಟಿಸಬಾರದೆಂದು ತಿಳಿಹೇಳುತ್ತಾರೆ. ಇದನ್ನು ಮೀರಿ ದೈವ ಎತ್ತಿ ಹಿಡಿದ ನ್ಯಾಯಕ್ಕೆ ತಲೆ ಬಾಗದಿದ್ದರೆ, ಕೊನೆಯ ಅಸ್ತ್ರವಾಗಿ 'ದಂಡಂ ದಶಗುಣಂ' ಎನ್ನುವ ನೀತಿಯಂತೆ ಕುಲದಿಂದ ಹೊರದೂಡುತ್ತಾರೆ. ಅದನ್ನೇ 'ಕುಲ ಬಹಿಷ್ಕಾರ' ಅಥವಾ 'ಎಲಿಗೊಟ್ಟು' ಎಂದು ಕರೆಯುತ್ತಾರೆ. ಈ ಸಮುದಾಯದಲ್ಲಿ 'ಕುಲ ಬಹಿಷ್ಕಾರ' ಎಷ್ಟು ಶಕ್ತವಾದುದೆಂದರೆ ಇಂತಹ ನ್ಯಾಯ ತಿರಸ್ಕರಿಸಿದ ವ್ಯಕ್ತಿಯನ್ನು ಸಮುದಾಯದ ಉಳಿದ ಯಾವ ವ್ಯಕ್ತಿಯೂ ದೈವದವರ ತೀರ್ಮಾನವನ್ನು ವಿರೋಧಿಸುವಂತಿಲ್ಲ. ದಂಡ ನೀಡಲಾರದಂತಹ ಇಂತಹ ಕುಲ ಖೈದಿಗಳು ಅನಿವಾರ್ಯವಾಗಿ ಶಿಕ್ಷೆ ಅನುಭವಿಸಲೇ ಬೇಕು. ಬಹಿಷ್ಕಾರಕ್ಕೆ ಒಳಗಾದವರನ್ನು ವೇಷಗಾರರ ಮೇಳದಲ್ಲಿ ಕೂಡಿಸಿಕೊಳ್ಳುವಂತಿಲ್ಲ. ಅವನಿಗೆ ಕುಡಿಯಲು, ತಿನ್ನಲು ಕೊಟ್ಟವರೂ, ಬೆಂಕಿ ಕೊಟ್ಟವರೂ, ದಂಡ ಕೊಡಬೇಕಾಗುತ್ತದೆ. ಅಂತಹವನಿಗೆ ಹೆಣ್ಣು ಕೊಡುವುದಿಲ್ಲ. ಯಾವುದೇ ಕಾರ್ಯ ನಡೆದರೂ ಸಂಬಂಧಿಕರು ಕೂಡ ಕರೆಯುವಂತಿಲ್ಲ. ಬಹಿಷ್ಕಾರಕ್ಕೆ ಒಳಗಾದ ವ್ಯಕ್ತಿಯ ಹೆಸರನ್ನು ಎರಡು ವರ್ಷಕ್ಕೆ ಒಂದು ಸಾರಿ ಕೂಡಿದ ದೈವದಲ್ಲಿ ಸಾರಿದಾಗ ಅಲ್ಲಿಗೆ ನೆರೆದಿದ್ದ ಕುಲಜರ ಜೋಪಡಿ ಇರುವಲ್ಲಿ ಯಡವಲ್ಲಿ ಮಹಾಂತ ಡಂಗೂರ ಸಾರಿಸುತ್ತಾನೆ. ಅಲ್ಲಿಂದ ಒಬ್ಬರಿಂದ ಒಬ್ಬರಿಗೆ ಎಲ್ಲರಲ್ಲಿಯೂ ಹರಡುತ್ತದೆ. ಕುಲದಿಂದ ಬಹಿಷ್ಕಾರವಾದ ವ್ಯಕ್ತಿಗಳು ಕೆಲವು ವರ್ಷಗಳಲ್ಲಿ ಸೋತು ಸುಣ್ಣವಾಗಿ ಅನಿವಾರ್ಯವಾಗಿ ಕುಲ ಪಂಚಾಯಿತಿಯನ್ನು ಅತ್ತು ಕರೆದು ದಂಡ ಕಡಿಮೆ ಮಾಡಿಸಿಕೊಂಡು ಸೇರಿಯೇ ಸೇರುತ್ತಾರೆ.

೫.೯. ಕುಲಕ್ಕೆ ಸೇರಿಸಿ ಕೊಳ್ಳುವುದು : ಕುಲದಲ್ಲಿ ಸೇರಲು ಇಚ್ಛಿಸಿದ ವ್ಯಕ್ತಿಗಳು ಸುಮ್ಮನೆ ಕುಲದಲ್ಲಿ ಸೇರುವ ಹಾಗಿಲ್ಲ. ಅವನು ಶುದ್ಧೀಕರಣಗೊಳ್ಳಬೇಕು. ಅವನು ಹೇಗೆ ಶುದ್ಧಿಯಾಗಬೇಕೆಂದರೆ, ಮೊದಲಿದ್ದ ಹಳೆಯ ಸ್ವಾರೆ, ಮಡಿಕೆ, ಉಟ್ಟು ತಗ್ಗಂಡು, ಮೊರ, ಬಟ್ಟೆ, ಮುಚ್ಚಳ ಎಲ್ಲಾ ದೂರ ಎಸೆದು ಬಂದು ಸ್ನಾನ ಮಾಡಿ ಹನುಮಂತರಾಯನ ಗುಡಿಗೆ ಹೋಗಿ ಪೂಜೆ ಮಾಡಿ ಬಂದು 'ಶಿರಸ್ಕಾಲ' ಗಣಾಚಾರಿಯಿಂದ ಬೆಳ್ಳಿಯ ಉಂಗುರದಿಂದಲೋ, ಬಂಗಾರದ ಉಂಗುರದಿಂದಲೋ, ಅಥವಾ ಕಡಗದಿಂದಲೋ ಬೆಂಕಿಯಲ್ಲಿ ಕಾಯಿಸಿ ನಾಲಿಗೆಗೆ ಬರೆ ಎಳೆಯುತ್ತಾರೆ. ನಂತರ ಹೊಸ ಗಡಿಗೆ, ಮುಚ್ಚಳ ತಂದು ಅಡಿಗೆ ಮಾಡಿ

ದೈವಕ್ಕೆ ಊಟ ಹಾಕಿಸಿ, ಸರಾಯಿ ಕುಡಿಸಬೇಕು. ಅಲ್ಲಿಗೆ ಅವನ ಸೂತಕ ಕಳೆದು ಶುದ್ದನಾಗುತ್ತಾನೆ. ಕೆಲವು ಸಲ ಬಹಿಷ್ಕಾರಕ್ಕೊಳಗಾದ ವ್ಯಕ್ತಿ ತಪ್ಪೊಪ್ಪಿಕೊಂಡು, ಪಂಚಮರು ವಿಧಿಸಿದ ದಂಡವನ್ನು ಕೊಡಲು ಒಪ್ಪಿದರೆ ಪಂಚಮರಲ್ಲಿ 'ಯಡವಲ್ಲಿ' ಮಹಾಂತಗಾರನು ಸೇದಿದ ಚಿಲುಮೆಯಿಂದ ಬೂದಿಯನ್ನು ತೆಗೆದು ಅವನ ಹಣೆ ಹಚ್ಚಿ ಬಾಯಿಯಲ್ಲಿ ವಿಭೂತಿ, ರುದ್ರಾಕ್ಷಿ ಹಾಕಿ ಕುಲದಲ್ಲಿ ಸೇರಿಕೊಳ್ಳುವರು.

ಹಗಲುವೇಷಾಗಾರರಲ್ಲಿ ಒಳಾಡಳಿತ ವ್ಯವಸ್ಥೆ ಬಹಳ ಕಠಿಣವಾಗಿದೆ. ಏಕೆಂದರೆ ಇವರು ಮೂಲತಃ ಅಲೆಮಾರಿಗಳಾಗಿರುವುದರಿಂದ ಹಾಗೂ ಊರಿನ ಹೊರವಲಯಗಳಲ್ಲಿ ವಾಸಿಸುವುದರಿಂದ ಇವರ ಒಳಾಡಳಿತದಲ್ಲಿ ಹೊರಗಿನ ಅಥವಾ ಬೇರೆ ಸಮುದಾಯದವರ ಪ್ರವೇಶ ಕಡಿಮೆ. ಅದಕ್ಕಾಗಿಯೇ ಇವರ ಆಡಳಿತ ಅಷ್ಟು ಬಿಗಿಯಾಗಿರುವುದು. ಇಲ್ಲದಿದ್ದರೆ ಇವರ ಸಮುದಾಯದ ಗುರುತು ಕೂಡ ಇಲ್ಲದಂತೆ 'ಹತ್ತರಲ್ಲಿ ಇನ್ನೊಂದು' ಎನ್ನುವಂತೆ ಇವರೇ ಎಂದು ಹೇಳಿಕೊಳ್ಳುವುದಕ್ಕೆ ಒಂದು ಕುಲ ಇಂತಹದೆ ಇಷ್ಟೇ ಬಳಿಗಳಿವೆ ಎಂದು ಗೆರೆ ಎಳೆದು ಹೇಳುವುದೇ ಕಷ್ಟವಾಗುತ್ತಿತ್ತು. ಈ ಸಮುದಾಯದ ಆಡಳಿತ ಅಷ್ಟು ಬಿಗಿಯಾಗಿರುವುದರಿಂದಲೇ ಇನ್ನು ಜೀವಂತವಾಗಿದೆ.

ಕೊನೆಯಲ್ಲಿ ದಂಡದಿಂದ ಬಂದ ಹಣವನ್ನು ಏನು ಮಾಡುತ್ತಾರೆ? ಎನ್ನುವ ಪ್ರಶ್ನೆಗೆ, ದಂಡದ ಹಣವನ್ನು ಕೋರುವವ ನ್ಯಾಯಗಾರ, ಅದನ್ನು ತಪ್ಪಿತಸ್ಥರಿಂದ ವಸೂಲಿ ಮಾಡುವವ ಮಹಾಂತಗಾರ. ಹೀಗೆ ಕೂಡಿಸಿದ ಹಣದಲ್ಲಿ ಒಂದು ಭಾಗವನ್ನು ಗುರುಪೀಠವಾದ ಶ್ರೀಶೈಲಕ್ಕೆ ತೆಗೆದಿರಿಸಿ, ಉಳಿದ ಹಣದಲ್ಲಿ ಬೇಟೆ ತಂದು ಕುಲದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ಕೂಡ ಸಮಾನ ಪಾಲು ಹಾಕಿ ಕುಟುಂಬಗಳಿಗೆ ಹಂಚುವರು. ಕುಲದಲ್ಲಿ ಬಂದ ಹಣ ಕುಲದ ಆಸ್ತಿ ಅದಕ್ಕಾಗಿ ನಮ್ಮ ಕುಲವೇ ತೀರ್ಮಾನಿಸಿದಂತೆ ವೆಚ್ಚಮಾಡುತ್ತದೆ. ಎಂದು ಹೆಂಡ, ಸರಾಯಿ, ಬ್ರಾಂದಿ, ಬೀರು ಎಂದು ಕುಡಿದು ಖರ್ಚು ಮಾಡುವರು. ಇಂತಹ ದಂಡವನ್ನು ಹೀಗೆ ಖರ್ಚು ಮಾಡುವುದಕ್ಕೆ 'ಕುಲಾಚಾರ' ಎಂದು ಕರೆಯುತ್ತಾರೆ. ಇನ್ನು ಕೆಲವರು 'ಕುಲದೈವಯಾಟ' (ಕುಲ ದೈವದ ಬೇಟೆ) ಎಂತಲೂ ಕರೆಯುತ್ತಾರೆ.

೫.೧೦. ಕಳ್ಳತನ ಮಾಡಿದವರನ್ನು ಹಿಡಿಯುವ ತಂತ್ರಗಳು

ಹಗಲುವೇಷಗಾರರು ಕಳ್ಳರನ್ನು ಹಿಡಿಯಲು ಉಪಯೋಗಿಸುತ್ತಿರುವ ತಂತ್ರಗಳನ್ನು ನೋಡಿದರೆ ಎಂತಹವರನ್ನು ಬೆರಗುಗೊಳಿಸುತ್ತದೆ. ಅವರು ಮೂರು ರೀತಿಗಳು, ವೈಜ್ಞಾನಿಕವಾಗಿ ತಿರುಗ-ಮುರುಗ ಲೆಕ್ಕ ಹಾಕಿ ನೋಡಿದರೂ ಸೂತ್ರ ಬದ್ಧವಾದ ಲೆಕ್ಕಾಚಾರವಾಗುತ್ತದೆ. ನೋಡುವವರಿಗೆ ಆಡುವ ಹುಡುಗರ ರೀತಿ ಕ್ಷುಲ್ಲಕವೆನಿಸಿದರೂ ಅದ್ಭುತವಾದ ಶೋಧನೆಯನ್ನು ಮಾಡುತ್ತದೆ. ಇವು ಈ ಕೆಳಗಿನಂತಿವೆ. ಇದೂ ಕೂಡ ಒಂದು ತರಹದ ಪಂಚಾಯಿತಿಯೇ ಹೌದು.

"ಒಂದು ಅರ್ಧ ಮಾರು ಸುತ್ತು ದುಂಡಾಗಿ ಸಗಣಿಯಿಂದ ಸಾರಿಸಿ, ಸುತ್ತುಲೂ ದುಂಡಾಗಿ ಕೆಮ್ಮಣ್ಣು, ಸುಣ್ಣ ಹಚ್ಚಿ, ಮಧ್ಯ ರಂಗೋಲಿ ಹಾಕುತ್ತಾರೆ. ದೊಡ್ಡ ದೊಡ್ಡ ಅಡುಗೆ ಮಾಡುವಾಗ

ಅನ್ನವನ್ನು ತಿರುವಲು ಬಳಸುವ ಒಂದು ದೊಡ್ಡ ಹುಟ್ಟನ್ನು"[೧೨] ತೆಗೆದುಕೊಂಡು ಅದರ ಕುತ್ತಿಗೆಗೆ ಒಂದು ಮೊಳ ಉದ್ದದ ದಾರ ಕಟ್ಟಿ ಅದನ್ನು ಸಾರಿಸಿದ ಜಾಗದಲ್ಲಿ ಇಟ್ಟು ಆ ಹುಟ್ಟಿಗೆ ನೀರು ಚಿಮುಕಿಸಿ (ತುಂಬಿದ ಕೊಡದ ನೀರು) ವಿಭೂತಿ, ಕುಂಕುಮ, ಹರಿಷಿಣ ಹಚ್ಚಿ, ಊದಿನ ಕಡ್ಡಿ ಹಚ್ಚಿ, ಎಲೆ ಅಡಿಕೆ ಇಟ್ಟು ಪೂಜೆ ಸಲ್ಲಿಸುತ್ತಾರೆ. ಪೂಜೆ ಮುಗಿದ ಮೇಲೆ ಒಬ್ಬ ಹುಡುಗನನ್ನು ಕರೆದು ಅದರ ದಾರದ ತುದಿಯನ್ನು ಹಿಡಿದು ಒಂದು ಎರಡು ಗೇಣು ಮೇಲೆ ಎತ್ತುವಂತೆ ಹೇಳುತ್ತಾರೆ. ಆ ಹುಟ್ಟಿನ ಮುಖ ಮೇಲೆತ್ತುತ್ತದೆ. ಆ ಹುಟ್ಟಿನ ಮುಖ ಆ ಕಡೆ ಈ ಕಡೆ ಜೋತಾಡುತ್ತಿರುತ್ತದೆ. ಆ ಸ್ಥಳದಲ್ಲಿ ಮೊದಲೇ ತಮ್ಮ ಕುಲದವರು ಸುತ್ತಮುತ್ತಲಿನವರೆಲ್ಲರನ್ನು ಕರೆಯಿಸಿರುತ್ತಾರೆ. ಆ ಹುಟ್ಟು ಆ ಕಡೆ ಈ ಕಡೆ ಜೋತಾಡುತ್ತಾ ಕಳ್ಳನಿರುವ ಕಡೆಗೆ ಹೋಗುತ್ತದೆ ಮುಂದಕ್ಕೆ ಕಳ್ಳನಿರುವ ಜಾಗಕ್ಕೆ ನಿಲ್ಲುತ್ತದೆ. ಅಕಸ್ಮಾತ್ ಕಳ್ಳ ಹಿಂದುಗಡೆ ಇದ್ದರೆ (ಬೆನ್ನ ಹಿಂದುಗಡೆ) ಆ ಹುಟ್ಟು ಹಿಂದಕ್ಕೆ ತಿರುಗಿ ನಿಲ್ಲುತ್ತದೆ. ಅಷ್ಟರೊಳಗೆ ಆ ಗುಂಪಿನಲ್ಲಿದ್ದ ಕಳ್ಳ ನೀರು ನೀರಾಗಿರುತ್ತಾನೆ. ಆ ಬೆವರನ್ನು ನೋಡಿ ಗುರುತಿಸಿ ಇವನೇ ಕಳ್ಳ ಎಂದು ಗುರುತಿಸುತ್ತಾರೆ."[೧೩] ಇದು ಒಂದು ರೀತಿಯ ಪಂಚಾಯಿತಿ ಕ್ರಮವಾಗಿದೆ.

ಅದೇ ರೀತಿ ಇನ್ನೊಂದು ವಿಧವಾದ ತಂತ್ರವೆಂದರೆ "ಕಳ್ಳತನ ನಡೆದ ಜೋಪಡಿಯ ಸುತ್ತಮುತ್ತಲಿನವರಲ್ಲಿ ಯಾರ್‍ಯಾರ ಮೇಲೆ ಅನುಮಾನವಿರುತ್ತದೆಯೋ ಅವರನ್ನೆಲ್ಲಾ ಕರೆಯಿಸಿ ಸೇರಿಸಿರುತ್ತಾರೆ. ಪಂಚಮರ ಕಟ್ಟೆಗೆ ಸುಡುಗಾಡಿನಲ್ಲಿರುವ ಬೋಕಿಗಳನ್ನು ಆಯ್ದು ತಂದು ಅವುಗಳನ್ನೆಲ್ಲಾ ಅವರ ಎದುರಿಗೇ ಪುಡಿಮಾಡುತ್ತಾರೆ. ಆ ಬೋಕಿಯಿಂದ ಮಾಡಿದ ಪುಡಿಯನ್ನು ಎಲ್ಲರ ಕೈಯಲ್ಲಿಯೂ ಇಷ್ಟಿಷ್ಟು ಕೊಡುವರು. ಕೊಟ್ಟ ಬೋಕಿಯ ಪುಡಿಯನ್ನು ಅವರವರ ಕೈಯಲ್ಲಿನ ಬೋಕಿಯ ಪುಡಿಯನ್ನು ಅವರವರೇ ಉಗುಳಿ ಆ ಪುಡಿಯನ್ನು ಉಂಡೆ ಮಾಡಬೇಕು. ಆಗಲೇ ಕಳ್ಳತನ ಮಾಡಿದಂತಹ ವ್ಯಕ್ತಿಯ ಬಾಯಿಯಲ್ಲಿ ಉಗುಳು ಬರುವುದಿಲ್ಲ. ಮೈಯೆಲ್ಲಾ ಬೆವರು ಬಂದು ಬಿಡುತ್ತಾನೆ. ಏಕೆಂದರೆ ಭಯದಿಂದ ಬಾಯಾರಿ, ಬಾಯಿಯಲ್ಲಿ ಉಗುಳು ಬರದಂತೆ ಆಗಿಬಿಡುತ್ತದೆ. ಅಂತಹವನನ್ನು ನೋಡಿ ಆಗಲೇ ಅಲ್ಲಿ ನೆರೆದ ಜನರೇ ಗುರುತಿಸಿ ಕಂಡ ಕಂಡಂತೆ ಮಾತನಾಡಲು ಪ್ರಾರಂಭಿಸುತ್ತಾರೆ. ಕಳ್ಳನಾದವನಿಗೆ ಇನ್ನೂ ಭಯ ಹೆಚ್ಚಾಗಿ ಅನಿವಾರ್ಯವಾಗಿ ತಪ್ಪನ್ನು ಒಪ್ಪಿಕೊಂಡು ಬಿಡುತ್ತಾನೆ."[೧೪]

ಹೀಗೆ ಈ ಸಮುದಾಯದವರು ಕಳ್ಳರನ್ನು ಹಿಡಿಯುವ ತಂತ್ರ ನಗೆ ಪಾಟಲಿಗೆ ಈಡು ಮಾಡುವಂತಿದ್ದರೂ ಎಷ್ಟು ನೈತಿಕತೆಯನ್ನು ಹೊಂದಿವೆಯೆಂದರೆ ಇಂತಹ ಘಟನೆಯನ್ನು ನೋಡಿದರೆ ಅದರ ಸತ್ಯದ ಅರಿವು ಇನ್ನು ಸ್ಪಷ್ಟವಾಗುತ್ತದೆ. ಹೀಗೆ ಈ ಸಮುದಾಯದವರು ತಮ್ಮ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.

ಅಡಿಟಿಪ್ಪಣಿಗಳು

೧. ಅಕ್ಕಮಹಾದೇವಿ, ಬುಡಕಟ್ಟು ನ್ಯಾಯ, ಅನು: ಪುಟ: ೧,೨, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೧೯೮೪

೨. ಜಾನಪದ ಜಗತ್ತು (ವಿಶೇಷ ಸಂಚಿಕೆ) ಸಂಪುಟ: ೯, ಸಂಚಿಕೆ: ೫-೬ ಪುಟ: ೪೮

೩. ಗಂಗಮ್ಮ, ವಯಸ್ಸು ೮೫, ಅಗಲೂರು ಹೊಸಳ್ಳಿ, ಸಿರುಗುಪ್ಪ ತಾಲೂಕು ದಿನಾಂಕ ೩.೪.೨೦೦೧

೪. ಜಾನಪದ ಜಗತ್ತು (ವಿಶೇಷ ಸಂಚಿಕೆ) ಸಂಪುಟ ೯ ಸಂಚಿಕೆ ೫ ಮತ್ತು ೬ ಪುಟ: ೪೯. ಸಂ. ಹೆಚ್.ಎಲ್. ನಾಗೇಗೌಡ ಕರ್ನಾಟಕ ಜಾನಪದ ಟ್ರಸ್ಟ್ (ರಿ) ಬೆಂಗಳೂರು, ೧೯೮೮

೫. ಸೂರ್ಯನಾರಾಯಣಪ್ಪ, ವಯಸ್ಸು ೫೨ ಕುದರೆಮೂತಿಯಲ್ಲಿ ನಡೆದ ಪಂಚಾಯಿತಿಯಲ್ಲಿ ದಿ ೪.೪.೨೦೦೧

೬. ಕರ್ನಾಟಕದಲ್ಲಿ ವೇಷಗಾರರು: ಬಿ.ಎಂ. ಹೊಸಮನಿ ಪಿಎಚ್.ಡಿ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨, ಪುಟ: ೧೪೯

೭. ಬುಡಕಟ್ಟುನ್ಯಾಯ, ಅನು ಅಕ್ಕಮಹಾದೇವಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪, ಪುಟ: ೪

೮. 'ಅಡಕ' ಎಂದರೆ 'ಅಡ' ಇಡುವುದು ಅಥವಾ ಒತ್ತೆ ಇಡುವುದು, ಸಾಮಾನುಗಳನ್ನು ಅಡ ಇಡುವ ರೀತಿಯಲ್ಲಿ ಕೊನೆಗೆ ಕಡ್ಡಿಯನ್ನಾದರೂ 'ಅಡ' ಇಟ್ಟು, ನ್ಯಾಯ ಕೇಳುವುದು

೯. ನೆಲ್ಸನ್ ಮಂಡೇಲಾ, ರಂಜಾನ್ ದರ್ಗಾ ಬೆಂಗಳೂರು, ವಿಶ್ವವಿದ್ಯಾಲಯ ೧೯೯೦, ಪುಟ: ೧೩೩

೦೦. ರಾಮುಡು.ವಿ. ಹಳೆ ದರೋಜಿ, ವಯಸ್ಸು ೩೨, ದಿನಾಂಕ ೧೫.೭.೧೯೯೯

೧೧. ಅದೇ. ಪುಟ

೧೨. ಉಟ್ಟು: ದೊಡ್ಡ ದೊಡ್ಡ ಅಡುಗೆಯ ಸಂದರ್ಭದಲ್ಲಿ ಅನ್ನವನ್ನು ತಿರುವಲು ಬಳಸುವಂತಹ ಸಾಧನೆ

೧೩. ಸಣ್ಣ ರಾಮಪ್ಪ ಆಗಲೂರ ಹೊಸಳ್ಳಿ ವಯಸ್ಸು ೪೫ ಸಿರಗುಪ್ಪ ತಾಲೂಕು ದಿನಾಂಕ ೫.೧೨.೧೯೯೯

೧೪. ರಾಮಚಂದ್ರಪ್ಪ ಆಗಲೂರ ಹೊಸಳ್ಳಿ ವಯಸ್ಸು ೩೫ ಸಿರಗುಪ್ಪ ತಾಲೂಕು ದಿನಾಂಕ ೫.೧೨.೧೯೯೯ ಆದರೆ ಬೇಟೆಯಾಗಿದ್ದು ಕರೂರಿನಲ್ಲಿ ಅಲ್ಲಿಯೇ ಬೀಡು ಬಿಟ್ಟಿದ್ದರು

¤ ¤ ¤ ¤ ¤

ಅಧ್ಯಾಯ ೬

ಹಗಲುವೇಷಗಾರರ ಸಾಂಸ್ಕೃತಿಕ ಕೊಡುಗೆ

೬.೧. ವೇಷಭೂಷಣಗಳು
೬.೨. ಬುರ್‍ರ ಕಥೆಗಳು
೬.೩. ಭಾಷೆ

ಹಗಲುವೇಷಗಾರರ ಸಾಂಸ್ಕೃತಿಕ ಕೊಡುಗೆ

ಸರ್ವಕಲೆಯ ಅಡಿಗಲ್ಲು ಜನಪದವೇ ಆಗಿದ್ದು, ಈ ಕಲೆಗಳು ಮೊದಲು ದೇವತಾರಾಧನೆಗೆಂದು ಜನಿಸಿ, ಮುಂದೆ ಮನರಂಜನೆಯಾಗಿ ಬೆಳೆದಿರಬೇಕೆಂದು ಸೂಕ್ಷ್ಮವಾಗಿ ಅವಲೋಕಿಸಿದರೆ ತಿಳಿಯುತ್ತದೆ. ಕೆಲವು ಕಲೆಗಳು ನಿತ್ಯಜೀವನದ ಶ್ರಮ ನಿವಾರಣೆಗಾಗಿ ರೂಪಿಸಿಕೊಂಡು ಬಂದರೆ ಇನ್ನು ಕೆಲವು ಕಲೆಗಳು ಉಪಜೀವನದ ದಾರಿಯನ್ನು ಅನುಸರಿಸಿ ಬಂದವುಗಳಾಗಿವೆ.

ಭಾರತದ ಹಲವಾರು ಜನಪದ ಕಲೆಗಳಲ್ಲಿ ಹಗಲುವೇಷಗಾರರ ಕಲಾ ಸಂಪ್ರದಾಯವೂ ಒಂದು. ಹಗಲು ಹೊತ್ತಿನಲ್ಲಿ ವೇಷಗಳನ್ನು ಧರಿಸಿ ತಮ್ಮ ಕಲಾನೈಪುಣ್ಯತೆಯನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸುವುದರಿಂದ ಇವರಿಗೆ ಹಗಲುವೇಷಗಾರರು ಎಂದು ಹೆಸರು ಬಂದಿದೆ. ಒಬ್ಬ ವ್ಯಕ್ತಿ ಸಂದರ್ಭಕ್ಕೆ ತಕ್ಕಂತೆ ಅನೇಕ ವೇಷಗಳನ್ನು ಪ್ರದರ್ಶಿಸುವುದರಿಂದ 'ಬಹುರೂಪಿಗಳು' ಎನ್ನುವ ಹೆಸರು ಬಂದಿದೆ. ಈದಿನ ಬಹುರೂಪಿಗಳು, ಹಗಲುವೇಷಗಾರರು (ಪಗಟಿ ವೇಷಗಾಳ್ಳು) ಎಂಬ ಹೆಸರುಗಳು ಪರ್ಯಾಯ ಪದಗಳಾಗಿ ವ್ಯವಹಾರದಲ್ಲಿವೆ. ಬಳ್ಳಾರಿ ಮತ್ತು ಆಂಧ್ರಗಡಿಭಾಗದಲ್ಲಿ ಜನಪದ ಕಲೆಗಳಲ್ಲಿಯೇ ವಿಶೇಷವಾಗಿ ಜನಾದಾರಣೆಯನ್ನು ಪಡೆದ ಈ ಹಗಲುವೇಷ ಕಲೆ ಕರ್ನಾಟಕ ಮತ್ತು ಆಂಧ್ರಪ್ರದೇಶದ ಎರಡೂ ರಾಜ್ಯಗಳಲ್ಲಿಯೂ ಸಹ ತನ್ನತನವನ್ನು ಪಸರಿಸಿದೆ. ತಮಿಳುನಾಡು ಮತ್ತು ಮಹಾರಾಷ್ಟ್ರ, ರಾಜಾಸ್ಥಾನ್, ಗುಜರಾತ್ ಮೊದಲಾದ ಉತ್ತರ ರಾಜ್ಯಗಳಲ್ಲಿಯೂ ಕೂಡ ಈ ಜನಪದ ಕಲಾರೂಪ ಪ್ರದರ್ಶಿತವಾಗುತ್ತದೆ.

ಪೂರ್ವದಲ್ಲಿ ಗುಪ್ತಾಚಾರರು ತಮ್ಮನ್ನು ಗುರುತು ಹಿಡಿಯಲಾರದಂತಹ ವೇಷಗಳನ್ನು ಹಾಕಿಕೊಂಡು ಹಾಡುಹಗಲೆ ಪ್ರಜೆಗಳ ಮಧ್ಯ ತಿರುಗುತ್ತಾ, ಅವರ ಮನದ ಭಾವನೆಗಳನ್ನು ತಿಳಿದುಕೊಳ್ಳುತ್ತಿದ್ದರು. ರಾಜರು ಕೂಡ ಸ್ವಯಂ ಆಗಿ ವಿವಿಧ ವೇಷಗಳನ್ನು ಧರಿಸಿಕೊಂಡು ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವವರು. ಹೀಗೆ ಪ್ರಾರಂಭವಾದ ಹಗಲುವೇಷಗಳೇ ಕಲಾರೂಪವನ್ನು ಪಡೆದು ಕಲೆಯಾಗಿ, ತರುವಾಯ ಲಾಕ್ಷಣಿಕರ ಲಕ್ಷಣಗಳನ್ನು ಜೋಡಿಸಿಕೊಂಡು, ಹಗಲುವೇಷಗಳೇ ಬಹುರೂಪಗಳಾಗಿ ಈ ಹೆಸರುಗಳಿಂದಲೇ ಸ್ಥಿರವಾಗಿವೆ.

[illegible]

[illegible]

[illegible]

[illegible]

ಹಗಲುವೇಷದ ಕಲೆ ಹೇಗೆ ಪ್ರಾರಂಭವಾಯಿತೆನ್ನುವುದಕ್ಕೆ ಆಂಧ್ರಪ್ರದೇಶದಲ್ಲಿ ಹೀಗೆ ಹೇಳುತ್ತಾರೆ. ''ವೆಂಕಟರಾಮಯ್ಯ ಎನ್ನುವ ಬ್ರಾಹ್ಮಣ ಮೈಸೂರು ಪ್ರಾಂತ್ಯದಿಂದ ಆಂಧ್ರಪ್ರದೇಶಕ್ಕೆ ಬಂದು, ಕೃಷ್ಣಾ ಜಿಲ್ಲೆಯ ವಿರಂಕಿಲಾಕು ಪಕ್ಕದ ಮೈಲುದೂರದಲ್ಲಿ ಗಡ್ಡಿಪಾಡು (ಇಂದು ಹನಂತಪುರಂ) ಅಗ್ರಹಾರದಲ್ಲಿರುವ ಬ್ರಾಹ್ಮಣರಿಗೆ ಹಗಲುವೇಷಗಳನ್ನು ಕಲಿಸಿದ್ದಾನೆ. ಸದಾಚಾರ ಸಂಪನ್ನರು ಆದ ಗಡ್ಡಿಪಾಡು ಅವರು ಹಗಲುವೇಷವನ್ನು ವೃತ್ತಿಯಾಗಿ ಸ್ವೀಕರಿಸಿ, ೬೪ ವೇಷಗಳಿಂದ ಈ ವೃತ್ತಿಯನ್ನು ಪ್ರಾರಂಭಿಸಿದರು. ಕೃಷ್ಣಾನದಿಗೆ ಆಣೆಕಟ್ಟು ಕಟ್ಟುವ ಪೂರ್ವದಲ್ಲಿ ಬಂಜರು ಭೂಮಿಯಲ್ಲಿ ಸರಿಯಾದ ಬೆಳೆ ಬೆಳೆಯದೆ ಆರ್ಥಿಕವಾಗಿ ಹಿಂದುಳಿದ ಕುಚುಪುಡಿ ಬ್ರಾಹ್ಮಣರು, ಸಮೀಪದಲ್ಲಿರುವ ಗಡ್ಡಿಪಾಡು ಭಾಗವತರಿಂದ ಹಗಲುವೇಷಗಳನ್ನು ಕಲಿತು, ಧನಸಂಪಾದನೆಯ ವೃತ್ತಿಯಾಗಿ ಸ್ವೀಕರಿಸಿದ್ದಾರೆ. ತರುವಾಯ ಗಡ್ಡಿಪಾಡು ಅವರಿಗೆ ಸೇವೆ ಮಾಡಿ ಕ್ರಿಷ್ಣಪಾಡು ಜಂಗಾಲು, ಈಚಲ ಕೊಂಬೆ ಜಂಗಾಲು ಈ ವಿದ್ಯೆಯನ್ನು ಕಲಿತಿದ್ದಾರೆ. ಆದರೆ ಈದಿನ ಬ್ರಾಹ್ಮಣರಾರು ಹಗಲುವೇಷಗಳನ್ನು ಪ್ರದರ್ಶಿಸುತ್ತಿಲ್ಲ. ಆದರೆ ಹಗಲುವೇಷಗಾರರು ಎನಿಸಿಕೊಂಡ ಜಂಗಾಲರು ಮಾತ್ರ ತಮ್ಮ ವೃತ್ತಿಯನ್ನು ಹಾಗೆ ಮುಂದುವರೆಸಿಕೊಂಡು ಬಂದಿದ್ದಾರೆ.''[೧]

ತೆಲಂಗಾಣ, ರಾಯಲಸೀಮೆ, ಕೋಸ್ತಾಂಧ್ರ ಪ್ರದೇಶದಲ್ಲಿ ಸಂಚರಿಸುವ ಹಗಲುವೇಷಗಾರರ ಪದ್ಧತಿ ಮತ್ತು ಬಳ್ಳಾರಿ, ರಾಯಚೂರು, ಬೀದರ ಪ್ರದೇಶದಲ್ಲಿ ಅಭಿನಯಿಸುವ ವೇಷದ ಪದ್ಧತಿಗಳು, ಪ್ರದರ್ಶನಾ ವಿಧಾನದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿರುವುದನ್ನು ಕಾಣಬಹುದು. ಪೂರ್ವದಲ್ಲಿ ಮುವತ್ತೆರಡು ವೇಷ, ಮೂವತ್ತಮೂರು ದಿನ ಎನ್ನುವಂತೆ ಒಂದೊಂದು ಊರಲ್ಲಿ ಮೂವತ್ತೆರಡು ವೇಷಗಳ ಪ್ರದರ್ಶನ ನೀಡುತ್ತಿದ್ದರು. ಆದರೆ ಇಂದು ಆಧುನಿಕ ಮನರಂಜನೆಗಳಿಂದ ಪ್ರದರ್ಶನಾ ದಿನಗಳನ್ನು ಊರುಗಳಿಗೆ ತಕ್ಕಂತೆ ತಗ್ಗಿಸಿಕೊಂಡಿದ್ದಾರೆ.

"ಜೀವನದ ಬದುಕನ್ನೇ ನಾಟಕಗಳಾಗಿ, ಕಲಾರೂಪಗಳಾಗಿ ಮಾಡಿಕೊಂಡು ಗ್ರಾಮಗ್ರಾಮಗಳಲ್ಲಿ ವೇಷಗಳನ್ನು ಪ್ರದರ್ಶಿಸುತ್ತಾ ಸಂಚಾರ ಮಾಡುವುದು ಇವರ ಬದುಕಾಗಿದೆ. ಮೊದಲು ಜಾತಿ ವೇಷಗಳನ್ನು ನಟಿಸುತ್ತಾ ಸಂಚರಿಸುತ್ತಿದ್ದಾಗ, ಕೂಚಿಪುಡಿ ಬ್ರಾಹ್ಮಣರ ಶಿಷ್ಯತ್ವ ದೊರಕಿರುವುದರಿಂದ ಯಕ್ಷಗಾನ ಕಲಾರೂಪವನ್ನು ಕಲಿತುಕೊಂಡಿದ್ದೇವೆಂದು ಹೇಳುತ್ತಾರೆ. ಕಾಲ ಉರುಳಿದಂತೆ ಇವರ ಕುಟುಂಬಗಳು ರಾಷ್ಟ್ರವ್ಯಾಪಿಯಾಗಿ ಬೆಳೆದು, ಅನೇಕ ಕುಟುಂಬಗಳಾಗಿ ವೃದ್ಧಿ ಹೊಂದಿದವೆಂದು ಕೆಲವು ಕುಟುಂಬಗಳು ವ್ಯವಸಾಯ ವೃತ್ತಿಯಲ್ಲಿಯೇ ಮುಂದುವರಿಯುತ್ತಿದ್ದಾರೆಂದು (ಆಂಧ್ರದಲ್ಲಿ) ಇನ್ನೂ ಕೆಲವರು, ಯಕ್ಷಗಾನ ತರಬೇತುದಾರರಾಗಿ, ಭಾಗವತರಾಗಿ, ಕೀರ್ತನಕಾರರಾಗಿ ಕೆಲವರು ವೇಷಗಾರಿಕೆಯ ವೃತ್ತಿ ನಡೆಸುತ್ತಿದ್ದಾರೆಂದು ಆಂಧ್ರಪ್ರದೇಶದ ಪೂರ್ವಿಕರು ಹೇಳುತ್ತಾರೆ."[೨]

ಪಾತ್ರಕ್ಕೆ ತಕ್ಕ ವೇಷ, ಪಾತ್ರಕ್ಕೆ ತಕ್ಕಂತೆ ಜೀವ ತುಂಬಿ ಸೈ ಎನಿಸಿಕೊಳ್ಳುವಂತಹ ಅಭಿನಯ ನೀಡುವುದು ಒಬ್ಬ ಉತ್ತಮ ಕಲಾಕಾರನಿಗೆ ಸಾಧಾರಣ ವಿಷಯವೇನಲ್ಲ. ಅದೇ ರೀತಿ ಈ ಕಲಾಕಾರರು ಸ್ತ್ರೀ ವೇಷಗಳನ್ನು ಗಂಡಸರೇ ಅಭಿನಯಿಸುತ್ತಿದ್ದು, ಅವರ ಕಲೆಗೆ ಅವರೇ ಸಾಟಿ. ಇವರು ಧರಿಸಿದ

ಸ್ತ್ರೀ ವೇಷವನ್ನು ನಮ್ಮ ಕಣ್ಣು ಉಜ್ಜಿಕೊಂಡು ಮತ್ತೆ ನೋಡಿದರೂ ನಂಬಲಾರದಷ್ಟು ಈ ಕಲಾಕಾರರು ಸ್ತ್ರೀ ವೇಷ ಧರಿಸುತ್ತಾರೆ. ವಿಶೇಷವೆಂದರೆ ಸ್ತ್ರೀ ವೇಷ ಅವರೇ ಸ್ವಯಂ ಆಗಿ ಧರಿಸಿಕೊಂಡು ಅಭಿನಯಿಸುವ ಪಾತ್ರಕ್ಕೆ ತಕ್ಕ ಸ್ವಭಾವ ಅರ್ಥಮಾಡಿಕೊಂಡು ಏಕ ಚಿತ್ತದಿಂದ ನಟಿಸುತ್ತಿದ್ದರೆ ಪ್ರೇಕ್ಷಕರು ಮೈಮರೆಯಬೇಕು. ಮೂಕ ಚಿತ್ರಗಳಿಂದ ಹಿಡಿದು ಎಂ.ಟಿ.ವಿ ಚಾನೆಲ್, ಕಂಪ್ಯೂಟರ್‌ಯುಗ ಬಂದರೂ ಈ ಕಲಾಕಾರರು ಧರಿಸುವ ಸ್ತ್ರೀ ಪಾತ್ರಕ್ಕೆ ಕಡಿಮೆಯೆಂದೇ ಹೇಳಬೇಕು. ಸಾಮಾಜಿಕ ಪಾತ್ರ, ಪೌರಾಣಿಕ ಪಾತ್ರಗಳನ್ನು ಅಭಿನಯಿಸುವುದರಲ್ಲಿ ಎತ್ತಿದ ಕೈ ಆದರೆ ಈ ಕಲೆಯನ್ನು ಪೋಷಿಸುವ ಜವಾಬ್ದಾರಿ. ಭಾದ್ಯತೆ ಎಲ್ಲರಲ್ಲಿಯೂ ಇದೆ.

ಹಗಲುವೇಷಗಾರರು ತಮ್ಮ ವೇಷಗಾರಿಕೆಯಿಂದ ಜನರಿಗೆ ಆನಂದವನ್ನು ಕಲ್ಪಿಸುವಂತೆ ಮಾಡುತ್ತಾ, ಪರಿಹಾಸ್ಯದ ಮೂಲಕ ಸಮಾಜದ ಹುಳುಕನ್ನು, ದುರಾಚಾರ, ದುರ್ನೀತಿಯನ್ನು ಎಚ್ಚರಿಸುವ ನಿಮ್ನ ದರ್ಪಣ ಅಥವಾ ದಿಕ್ಸೂಚಿಯಂತೆ ಕಾರ್ಯನಿರ್ವಹಿಸುವುದು ತಮ್ಮ ಪ್ರಧಾನ ಆಶಯವೆಂದು ಹೊಸಳ್ಳಿ ಶಿವಲಿಂಗಪ್ಪ ಹೇಳುತ್ತಾರೆ. ವಿನೋದ ಅಭ್ಯುದಯ, ತಾಮಸ ಅನ್ನುವ ಮೂರು ರೀತಿಯಲ್ಲಿ ಪರಿಣಾಮ ಬೀರುವಂತೆ ಹಗಲುವೇಷಗಳನ್ನು ನಟಿಸುತ್ತಿದ್ದೇವೆಂದು ರಾಮಕೊಂಡಯ್ಯ ಪಾರ್ವತಿನಗರ (ಆಂಧ್ರ) ಇವರು ಹೇಳುತ್ತಾರೆ.

ಬಳ್ಳಾರಿ ಮತ್ತು ಆಂಧ್ರಗಡಿಭಾಗದಲ್ಲಿ ಧರಿಸುವ ವೇಷಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಸಮಾಜಿಕ ವೇಷಗಳು

೨. ಪೌರಾಣಿಕ ವೇಷಗಳು

೧. ಸಮಾಜಿಕ ವೇಷಗಳು : ಲಂಬಾಣಿ ವೇಷ, ಅಗಸರ ವೇಷ, ಒಗಳುಬಟ್ಟರ ವೇಷ, ಬೇಟೆಗಾರರ ವೇಷ, ಔಷಧಿ ಮಾರುವವರ ವೇಷ, ಬುಡುಬುಡುಕಿಯವರ ವೇಷ, ಪಕ್ಕೀರ ವೇಷ, ಕೋಮಟಿಗರ ವೇಷ, ಬೋಡಿ ಬ್ರಾಹ್ಮಣರ ವೇಷ, ವಡ್ಡರ ವೇಷ, ಮಾದಿಗ ವೇಷ, ಕುರುಡುದಾಸರ ವೇಷ, ಜಂಗಮ ದೇವರ ವೇಷ, ಪಕ್ಷಿಗಳ ದೊರೆ ವೇಷ, ಬಾಣಂತಿವೇಷ, ಬೇಡರ ವೇಷ, ಬೇತಾಳ ವೇಷ ಹಾವಾಡಿಗರ ವೇಷ, ಲಿಂಗ ಬಲಿಜ, ಸೋಮಯಾಜುಲು ಸೋಮಿದೇವಮ್ಮ ವೇಷ, ಪೋಲಿಸರ ವೇಷ.

೨. ಪೌರಾಣಿಕ ವೇಷಗಳು : ಅರ್ಧನಾರೀಶ್ವರ ವೇಷ, ರಾಮಲಕ್ಷ್ಮಣ ಶೂರ್ಪನಖಿ ವೇಷ (ಪರ್ಣಶಾಲೆ), ಸುಂದೋಪಸುಂದರನ ವೇಷ, ಮೋಹಿನ ಬಸ್ಮಾಸುರನ ವೇಷ, ಸೌಗಂಧಿಕಪುಷ್ಪಹರಣ, ನಾರದ ಗರ್ವಭಂಗ, ಕೃಷ್ಣ ಜಾಂಬವತರ ಕಲಹ, ಬೈರಾಗಿ ವೇಷ, ಶ್ರೀಕೃಷ್ಣ ರುಕ್ಮಿಣಿ ಪ್ರಣಯ ಕಲಹ, ಭೀಮಾಂಜಿನೇಯ ಯುದ್ಧ, ಲವಕುಶರ ಕಾಳಗ, ತ್ರಿಪುರ ಸಂಹಾರ, ಸತ್ಯಹರಿಶ್ಚಂದ್ರ, ಮೇನಕೆ ವಿಶ್ವಮಿತ್ರಾ, ತಾಕಿಡಿ ವಧೆ. ಆದರೆ ಎಲ್ಲಾ ವೇಷಗಳ ಕಥೆಯನ್ನು ಇಲ್ಲಿ ಕೊಡಲು ಆಗುತ್ತಿಲ್ಲವಾದ್ದರಿಂದ ಕೆಲವನ್ನು ಮಾತ್ರ ಇಲ್ಲಿ ಸಾರಂಶ ಸಹಿತ ನೀಡಲಾಗಿದೆ.

೬.೧. ವೇಷಭೂಷಣಗಳು

ತುಪಾಕಿ ರಾಮನ ವೇಷ (ಪಕ್ಷಿಗಳ ದೊರೆ)

ಏಕ ವ್ಯಕ್ತಿ ಪ್ರದರ್ಶಿಸುವ ವೇಷಗಳಲ್ಲಿ ಪಕ್ಷಿಗಳ ದೊರೆ ಅಥವಾ ತುಪಾಕಿ ರಾಮನ ವೇಷ ಒಂದು. ಇದನ್ನು ಪಿರಂಗಿ ವೇಷವೆಂತಲೂ ಕರೆಯುತ್ತಾರೆ. ಈ ವೇಷ ಆಂಧ್ರಪ್ರದೇಶದಲ್ಲಿ ಹೆಚ್ಚು ಹೆಸರುವಾಸಿಯಾಗಿದೆ. ಇದು ಹಾಸ್ಯಪ್ರಧಾನವಾದಂತಹ ವೇಷ, ಇದರ ಸಂಭಾಷಣೆ ಚಮತ್ಕಾರದಿಂದ ಕೂಡಿದ್ದು, ಕೆಲವು ಸಂದರ್ಭಗಳು ಕಣ್ಣಿಗೆ ಕಂಡದ್ದೇ ವೇಷಗಾರನ ಬಾಯಿಯಲ್ಲಿ ಸಂಭಾಷಣೆಯಾಗಿ ಬಿಡುತ್ತದೆ.

ತುಪಾಕಿ ರಾಮನ ವೇಷ ಧರಿಸುವವರು ಎಗುಡು, ದಿಗುಡಾಗಿರೋ ಕಾಕಿ ಪ್ಯಾಂಟು, ಅದೇ ಬಣ್ಣದ ಹಳೆಯ ಅಂಗಿ, ತಲೆಯ ಮೇಲೆ ಇಂಗ್ಲೀಷಿನವರು ಧರಿಸುವ ಹ್ಯಾಟು, ಭುಜದ ಮೇಲೆ ಕಟ್ಟಿಗೆಯ ತುಪಾಕಿ, ಗ್ಲಾಸು ಇಲ್ಲದ ಕರಿಯ ಕನ್ನಡಕ. ಎಡ ಭುಜಕ್ಕೆ ಜೋಳಿಗೆ ಇರುತ್ತದೆ. ಹಳೆಯ ಬೂಟು ತೊಟ್ಟುಕೊಂಡಿರುತ್ತಾರೆ. ಜೇಬಿನಲ್ಲಿ ಬೀಡಿ, ಪೆಟ್ಟಿಗೆ, ಸಿಗರೇಟು ಪಾಕೆಟ್ಟು ಇರುತ್ತದೆ. ಪ್ಯಾಂಟಿನ ಒಂದು ತೋಳ ಮೇಲಕ್ಕೆ ಮಡಚಿರುತ್ತಾನೆ. ಒಂದು ತೋಳ ಹಾಗೆ ಉದ್ದಕ್ಕೆ ಬಿಟ್ಟಿರುತ್ತಾನೆ. ಹೀಗೆ ವೇಷ ಹಾಕಿಕೊಂಡು ಗ್ರಾಮಗಳಲ್ಲಿ ಮನೆ ಮನೆ ತಿರುಗುತ್ತಾ, ಹಾಸ್ಯ ಹುಟ್ಟಿಸುವ ಮಾತನಾಡುತ್ತಾ, ಎಲ್ಲರನ್ನು ನಗಿಸುತ್ತಾ ಭಿಕ್ಷಾಟನೆ ಮಾಡುತ್ತಾನೆ. ಮಕ್ಕಳು ಗುಂಪು ಗುಂಪಾಗಿ ಈತನ ಹಿಂದೆ ಸುತ್ತುತ್ತಾ ಆತನು ಆಡುವ ಮಾತುಗಳನ್ನು ಆಲಿಸುತ್ತಾ, ಕೇಕೆ ಹಾಕುತ್ತಾ ಆನಂದಿಸುತ್ತಾರೆ.

ತನ್ನ ಹತ್ತಿರ ಇದ್ದ ಕಟ್ಟಿಗೆಯ ತುಪಾಕಿಯಿಂದ ಕಾಗೆ, ಗುಬ್ಬಿ ಮೊದಲಾದ ಪಕ್ಷಿಗಳಿಗೆ ಗುರಿ ಇಟ್ಟು ತನ್ನ ಬಾಯಿಯಿಂದಲೇ 'ಡಂ' ಎಂದು ಶಬ್ದ ಮಾಡುತ್ತಾ, ಎಲ್ಲರನ್ನು ನಗಿಸುತ್ತಿರುತ್ತಾನೆ. ಆದುದರಿಂದ ಆತನನ್ನು ಪಿಟ್ಟಲದೊರೆ (ಪಕ್ಷಿಗಳ ರಾಜ) ಎಂದು ಕರೆಯುತ್ತಾರೆ.

ತುಪಾಕಿಯನ್ನು ತಿರುವಿ ಹಿಡಿದುಕೊಂಡು ಎಷ್ಟೋ ಯುದ್ಧಗಳಲ್ಲಿ, ಎಷ್ಟೋ ಮಂದಿಯನ್ನು ಕೊಂದಿದ್ದೇನೆ ಎನ್ನುತ್ತಾನೆ. ನಿನ್ನೆಯವರೆಗೆ ದಂಡಿನ ಮೇಲೆ ಯುದ್ಧಕ್ಕೆ ಹೋಗಿದ್ದೆ, ಒಂದೊಂದು ಗುಂಡಿಟ್ಟು ಹೊಡೆದರೆ ಗುಂಡು ಹೋಗಿ ಗುಂಡ್ಲಪಲ್ಲಿ ಕೆರೆಯಲ್ಲಿ ಬಿತ್ತು, ನಾನು ಹೋಗಿ ತುಂಗಭದ್ರ ಡ್ಯಾಂನಲ್ಲಿ ಬಿದ್ದೆ. ನನ್ನ ಭಯಕ್ಕೆ ಸೈನ್ಯವೆಲ್ಲಾ ದಿಕ್ಕೆಟ್ಟುಹೋಯಿತು ಎಂದು ಎಲ್ಲಾರು ನಗುವ ಹಾಗೆ ಜಂಬ ಕೊಚ್ಚಿಕೊಳ್ಳುತ್ತಾನೆ.

ಅಪರಿಚಿತರನ್ನು ಕೂಡ ಪರಿಚಯವಿದ್ದವರಂತೆ ಮಾತನಾಡಿಸುತ್ತಾನೆ. ಏನರೀ! ನಿಮಗೇನಾದರು ಹಣ ಬೇಕೆ? ಏನು? ನಿಮಗೆ ಹಣ ಬೇಕಾದರೆ ನಮ್ಮ ದುಡ್ಡಿಲ್ಲದ ದೊರೆಯ ಹತ್ತಿರ ಒಂದು ಲಕ್ಷ ರೂಪಾಯಿ ನಿಮಗೆ ಕೊಡಿಸುತ್ತೇನೆ. ಅದಕ್ಕೆ ಮೊದಲು ಐದು ರೂಪಾಯಿ ಐವತ್ತುಪೈಸೆ ಜಮಕಟ್ಟಿ ಚಲನ್ (ರಶೀದಿ) ಪಡೆಯಿರಿ ಎಂದು ಏನೇನೋ ವಿಧವಿಧವಾದ ಬೊಗಳೆ ಬಿಡುತ್ತಿರುತ್ತಾನೆ. ಈ ವೇಷದಲ್ಲಿ ಇರುವ ವೈಚಿತ್ರ್ಯವೆಂದರೆ ಬೊಗಳೆ ಬಿಡುವ ಮನುಷ್ಯರಿಗೆ ಬುದ್ಧಿ ಬರುವ ಹಾಗೆ ಇರುತ್ತದೆ.

ನಿನಗೆ ಹಣ ಕೊಡಿಸುತ್ತೇನೆ, ನಿನಗೆ ಮನೆ ಕಟ್ಟಿಸುತ್ತೇನೆ. ಅಸಲು ನಿನಗೆ ಎಷ್ಟು ಆಸ್ತಿ ಇದೆ? ಎಂದು ಎದುರಿರುವವರನ್ನು ಅವಹೇಳನ ಮಾಡುವವರಿಗೆ ಗುಣಪಾಠ ಹೇಳುವುದಕ್ಕೆ ಈ ವೇಷ.

ಹಲೋ ಸಾರ್, ಗುಡ್‌ಮಾರ್ನಿಂಗ್ ಸಾರ್! ಗುಡ್ ಮಾರ್ನಿಂಗ್, ಸಲಾಂಲೇಖುಂ, ಸಾಲಂ ಲೇಖುಂ, ಹಲೋ ವಣಕ್ಕುಂ, ಸಾಮಿ ವಣಕ್ಕುಂ, ಹಲೋ ನಮಸ್ಕಾರ, ಮಂಡಿ ನಮಸ್ಕಾರ, ಹಲೋ ನಮಸ್ಕಾರ ಸ್ವಾಮಿ, ನಮಸ್ಕಾರ ನೀವೆಲ್ಲಾ ಚೆನ್ನಾಗಿದ್ದೀರಾ...? ನಾವು ಚೆನ್ನಾಗಿಯೇ ಇದ್ದೇವೆ ಸಾರ್. ಏನಯ್ಯ ಇದೆಲ್ಲಾ ಏನು? ದಾರಿಯಲ್ಲಿ ಈ ಮಂಚ ಏನು? ಈ ಕುರ್ಚಿ ಏನು, ಯಾರಯ್ಯ ನೀವು? ಈ ಮನೆ ಯಜಮಾನ ಯಾರಯ್ಯ? ಏಯ್ ಜವಾನ ಇವರ ಹೆಸರೆಲ್ಲಾ ಬರೆದುಕೋ, ಏನ್ರಿ ಸಾರ್ ಹಾಗೆ ನೋಡುತ್ತಿದ್ದೀರಿ? ನಾನು ಸಾರ್, ನೀವು ಮನೆ ಕಟ್ಟಿಕೊಳ್ಳುವುದಕ್ಕೆ ಅಪ್ಲಿಕೇಷನ್ ಹಾಕಿದ್ದೀರಲ್ಲಾ! ನಿಮ್ಮ ಹೆಸರ ಮೇಲೆ ನಮ್ಮ ಬ್ಯಾಂಕಿಗೆ ಹಣ ಬಂದಿದೆ ಸಾರ್, ಈಗ ತಕ್ಷಣ ಐದುರೂಪಾಯಿ ಐವತ್ತು ಪೈಸೆ ಫೀಜು ತುಂಬಿ ಚಲಾನ್ ಪಾರಂ ತೆಗೆದುಕೊಳ್ಳಿ. ದುಡ್ಡಿಲ್ಲದ ನಮ್ಮ ದೊರೆಯ ಹತ್ತಿರ ನಿಮಗೆ ಬೇಕಾದ ಹಣ ಕಳುಹಿಸುತ್ತೇನೆ. ಈ ಮನೆ ಚೆನ್ನಾಗಿಯೇ ಇದೆ. ಆದರೆ ಸಾರ್! ಮುಂದಕ್ಕೆ ಮೂರಡಿ ಜರಗಿಸಬೇಕು. ಹಿಂದಕ್ಕೆ ಏಳಡಿ ಜರಗಿಸಬೇಕು. ಪಕ್ಕಕ್ಕೆ ಹತ್ತು ಅಡಿ ಜರಗಿಸಬೇಕು. ನಿಮ್ಮ ಮನೆ ಪ್ಲಾನ್ ಬಹಳ ಚೆನ್ನಾಗಿದೆ. ನಮ್ಮ ದೊರೆಯವರು ಒಂದು ಲಕ್ಷರೂಪಾಯಿ ಮುಂಜೂರು ಮಾಡಿದ್ದಾರೆ. ಮೊದಲು ಹನ್ನೆರಡು ರೂಪಾಯಿ ನಾಲ್ಕು ಆಣೆ ಜಮ ಕಟ್ಟಿ ರಶೀದಿ ಪಡೆಯಿರಿ. ನಿಮ್ಮ ಹನ್ನೆರಡು ರೂಪಾಯಿ ನಾಲ್ಕಾಣಿ ತೆಗೆದುಕೊಂಡು ಓಡಿಹೋಗುತ್ತೇನೆಂದುಕೊಂಡರೆ ಮುನ್ಸಿಪಾಲ್ಟಿಯನ್ನು ಜಾಮೀನು ಇಡುತ್ತೇನೆ. ಡಿ.ಸಿಯನ್ನು ಒತ್ತೆ ಇಡುತ್ತೇನೆ. ಇನ್ನೂ ನಿಮಗೆ ನಂಬಿಕೆ ಇಲ್ಲವೆಂದರೆ ರೋಡ್‌ನಲ್ಲಿ ಏಳು ಎಕರೆ ಹೊಲ ಬರೆದುಕೊಡುತ್ತೇನೆ. ನಾಳೆ ನಮ್ಮ ದುಡ್ಡಿಲ್ಲದ ದೊರೆಯ ಹತ್ತಿರ ಐವತ್ತು ಸಾವಿರ ಕಳುಹಿಸುತ್ತೇನೆ. ಈಗ ಅಮೆರಿಕಾ ತಾಲಿಬಾನ್‌ಗೆ ಯುದ್ದ ನಡೆಯುತ್ತಿದೆ ಸಾರ್. ಈಗ ನಮ್ಮ ದೇಶದಿಂದ ಸೈನಿಕರು ಬೇಕಾಗಿದ್ದಾರೆ. ವಯಸ್ಸಿದ್ದ ಹುಡುಗರು ಯುದ್ಧದಲ್ಲಿ ಕೆಲಸಕ್ಕೆ ಬಾರರೆಂದು ಮುದಿಯವರನ್ನು ತಂದು ಗೋಣಿಚೀಲದಲ್ಲಿ ಹಾಕಿ ಮೂತಿ ಕಟ್ಟಿ ವಿಮಾನದಲ್ಲಿ ಹಾಕಿ ಅಮೆರಿಕಾಕ್ಕೆ ಕಳುಹಿಸುತ್ತಿದ್ದೇವೆ. ಲಕ್ಷ ಲಕ್ಷ ವೆಚ್ಚಮಾಡಿ ಗ್ರಾನೈಟ್ ಕಲ್ಲಿನಿಂದ ಬಂಗ್ಲಾ ಕಟ್ಟಿಸಿದರೆ ಗಾಳಿ ಬಂದರೆ ಗಲಗಲ ಮಳೆ ಬಂದರೆ ಜಲಜಲ ಎಂದು ಆ ಬಂಗ್ಲೆಗೆ ಹುಲ್ಲಿನ ತೊಲೆ ಕಂಬ ಪತ್ರವಳಿಯ ಚಾಪೆ ಹಾಕಿ ಕಟ್ಟಿಸಿದ್ದೇನೆ. ನಾಯಿ ಮುಟ್ಟಿದ ಕಾರಣ ಕುಂಬಳ ಕಾಯಿಯಷ್ಟು ಬಂಗಾರ ಬಾವಿಯಲ್ಲಿ ಹಾಕಿ ಬಂದೆ. ಆ ಬಂಗಾರವನ್ನು ತೆಗೆದುಕೊಳ್ಳುವುದಕ್ಕೆ ಮುನ್ನಾರಾ ಐವತ್ತು ಮಂದಿ ತಲೆಗೆ ಕಲ್ಲು ಗುಂಡು ಕಟ್ಟಿಕೊಂಡು, ಕಾಲಿಗೆ ಬೆಂಡು ಕಟ್ಟಿಕೊಂಡು ಮುಳುಗಿದರೆ ಕಾಲು ಮೇಲೆ ತಲೆ ಕೆಳಗೆ ಹೋಗುತ್ತಿದ್ದಾವೆ ಎಂದು ವರ್ಣಿಸಿ ಚಮತ್ಕಾರ ಪ್ರಸಂಗಗಳನ್ನು ಹೇಳಿ ಜನರನ್ನು ನಗಿಸುತ್ತಿರುತ್ತಾನೆ.

ಸಂತಾನ ಇಲ್ಲದವರಿಗೆ ನಮ್ಮ ದೊರೆಯವರು ಒಳ್ಳೆ ಡಾಕ್ಟರಿಂದ ಸಂತಾನ ಆಗುವ ಹಾಗೆ ಮಾಡುತ್ತಾರೆ ಸಾರ್! ಸಂತಾನ ಹೆಚ್ಚಾದರೆ ಡಾಕ್ಟರರಿಂದ ಕುಟುಂಬ ನಿಯಂತ್ರಣ ಕಟಿಂಗ್ ಮಾಡಿಸುತ್ತಾರೆ

ಸಾರ್! ಎಲ್ಲರಿಗೂ ಇಬ್ಬರು ಇಲ್ಲವೆ ಮೂವರು ಮಕ್ಕಳು ಸಾಕೆಂದು ನಮ್ಮ ದೊರೆಯವರ ಸಲಹೆ ಸಾರ್! ನಮ್ಮ ಮನೆ ಹೈಲೈಟು ಸಾರ್! ಅಮೆರಿಕಾ ಬಾಂಬು ಹಾಕಿದರೂ ಅಲ್ಲಾಡುವುದಿಲ್ಲ. ಭೂಕಂಪ ಬಂದರೂ ಅಲ್ಲಾಡುವುದಿಲ್ಲ, ಹಗಲು ಸೂರ್ಯ, ರಾತ್ರಿ ಚಂದ್ರ ಕಾಣಿಸುತ್ತಲೆ ಇರುತ್ತಾರೆ ಸಾರ್! ಮನೆಯ ಗಾಳಿಗೆ ಮನೆಯ ಹುಲ್ಲಿನ ತೊಲೆಕಂಬ, ಪಾತ್ರಳಿಯ ಚಾಪೆ ಹಾರಿ ಹೋಗಿವೆ ಸಾರ್! ಮತ್ತೆ ಹಾಕಿಕೊಳ್ಳಬೇಕೆಂದರೆ ಮಣಿ ಬೇಕು ಸಾರ್! ನೀವು ಕೊಡುವ ದುಡ್ಡಿನಿಂದಲೇ ಮನೆ ಕಟ್ಟಬೇಕು, ಹೊಟ್ಟೆ ತುಂಬಬೇಕು. ಮನೆ ಕಟ್ಟಬೇಕು ಬರುತ್ತೇನೆ ಸಾರ್, ಬರುತ್ತೇವೆ!

ಈ ವೇಷ ಕೇವಲ ಕಲ್ಪಿತ ಕಥೆ, ಶಿಸ್ತಾಗಿ ಮಾತನಾಡುವ ವಾಕ್ ಚಾತುರ್ಯವೇ ಇದಕ್ಕೆ ಮುಖ್ಯ.

ಮಾದಿಗವೇಷ (ವೀರಬಾಹು ವೇಷ)

ಹಗಲುವೇಷಗಳಲ್ಲಿ ಮಾದಿಗ ವೇಷ ಅನನ್ಯವಾದುದಾಗಿದೆ. ದೊಡ್ಡ ದೊಡ್ಡ ಮೀಸೆಗಳು, ಗೋಸಿ, ನಡುವಿನ ಕಟ್ಟು, ಕೈಗೆ ಕಡಗ, ಕಾಲಿಗೆ ಸರ, ಕೊರಳಲ್ಲಿ ತಾಯಿತ, ಭುಜದಲ್ಲಿ ತಪ್ಪಡೆ (ಡಪ್ಪು) ಹಾಕಿಕೊಂಡು ಜಜ್ಜಿನಕ್ಕ, ಜಜ್ಜಿ ಜಜ್ಜಿ ನಕ್ಕ ಎನ್ನುವ ಹಾಗೆ ತಪ್ಪಡೆ ಬಾರಿಸುತ್ತಾ ಇರುತ್ತಾನೆ. ಯಂಡ ಕುಡಿದವನಂತೆ ಕಾಣುತ್ತಿರುತ್ತಾನೆ. ಈತನನ್ನು ವೀರಬಾಹುವೆಂತಲೂ ಸಹ ಕರೆಯುತ್ತಾರೆ. ಈ ಪ್ರತಿ ಹಾಡಿಗೂ ಮಾತಿಗೂ ಲೆಲ್ಲಾಯಿಲಾ ಎಂದು ಹೇಳುತ್ತಿರುತ್ತಾನೆ.

ನಾನು ಸ್ವಾಮಿ ಕಾಡಿಗೆ ದೊಡ್ಡವನು. ಈ ಊರಿಗೆ ದೊಡ್ಡವನು ಲೆಲ್ಲಿಯಿಲಾ ಈ ಊರಿಗೆ ಎಂದು ಲೆಲ್ಲಿಯಲ ಹಾಡು ಹಾಡುತ್ತಾ ಪ್ರತಿ ಕುಲವನ್ನು ಎತ್ತಿ ಹಾಕಿ ಮಾತನಾಡುತ್ತಾನೆ. ಈ ಮಾನವ ಜಾತಿ ಹೇಗೆ ಹುಟ್ಟಿತೋ ಹೇಳುತ್ತೇನೆ.

ಸ್ವಾಮಿ ನಮ್ಮನ್ನು ಮುಟ್ಟಬಾರದು ಎನ್ನುತ್ತಾರೆ ಅಲ್ಲ ಮುಟ್ಟು ಮುಟ್ಟೆಂದರು, ಮುಟ್ಟಬಾರದೆಂದರು ಮುಟ್ಟುವುದರ ಗುಟ್ಟು ಏನು? ಮೂಲ ಏನು? ನರರ ದೇಹವ ನೋಡು ನವದ್ವಾರಗಳಿವೆ, ಹುಟ್ಟಿದಾಗಲೆ ಮುಟ್ಟುವೇಮಾ! ಎಂದು ವೇಮನನ ಶತಕಗಳನ್ನು ಸ್ವಚ್ಛಂದವಾಗಿ ಹೇಳುತ್ತಾನೆ.

“ವಿಧವಿಧವಾಗಿ ಕುಲಗಳು ಇಲ್ಲ
ಬಣ್ಣಬಣ್ಣವಾಗಿ ಮತಗಳು ಇಲ್ಲ
ದುಡ್ಡಿದವನದೇ ದೊಡ್ಡ ಕುಲ
ಇಲ್ಲದವನದೇ ‘ಲೇಕಿ’ ಕುಲ”

ನಾವು ಮಾದಿಗೆ ಜಾತಿಯವರು, ಋಷಿಗಳು ನಮ್ಮ ಹತ್ತಿರವೇ ಹುಟ್ಟಿದ್ದಾರೆ. ಬ್ರಾಹ್ಮಣರು ನಮ್ಮನೆ ಅಳಿಯಂದಿರು, ಎಂದು ಚಾಡಿ ಹೇಳುವ ಅವಕಾಶ ಇವರಿಗಿದೆ. ಶುನಕ ಗರ್ಭದಿಂದ ಯಶೌನಕಮುನಿ ಜನ್ಮಿಸಿದ, ಗಡಿಗೆಯಲ್ಲಿ ಅಗತ್ಯಮುನಿ ಜನಿಸಿದ ಗಿಳಿಯ ಹೊಟ್ಟೆಯಲ್ಲಿ ಶ್ರೀ ಶಕುಮುನಿ ಜನ್ಮಿಸಿದ, ವಶಿಷ್ಟ, ಊರ್ವಸಿಗೆ ಹುಟ್ಟಿದ, ಬೇಡರ ಮನೆಯಲ್ಲಿ ವಾಲ್ಮೀಕಿ ಹುಟ್ಟಿದ, ಆರುಂಧತಿ ನಮ್ಮ ಮನೆಯ ಹೆಣ್ಣುಮಗಳು ಎಂದು ಹೇಳುತ್ತಾನೆ.

ನಿಮ್ಮನ್ನು ನಾವು ಮುಟ್ಟಿಕೊಳ್ಳಬಾರದು, ಆದರೆ ಹೊಲದಲ್ಲಿ ಕೂಲಿ ಕೆಲಸಮಾಡಲು, ಕಾಳು ಕಡಿಗಳನ್ನು ಹೋರಲು, ಮನೆಗೆ ತಂದು ಹಾಕಲು ನಾವು ಬೇಕು ಅದಕ್ಕೆ ಮುಟ್ಟು ಇರುವುದಿಲ್ಲ. ಬೀದಿಯಲ್ಲಿ ಬಂದರೆ ನೀವು ಮೇಲೆ, ನಾವು ಕೆಳಗೆ, ದೂರ ನಿಲ್ಲಬೇಕು. ಇದು ಸಂಗತಿ. ಅಸಲು ಮಾನವ ಜನ್ಮ ಹೇಗೆ ಹುಟ್ಟಿತು ಗೊತ್ತಾ? ಯಾವ ಕುಲವೂ ಆಕಸ್ಮಿಕವಾಗಿ ಹುಟ್ಟಿಲ್ಲ.

ಕನ್ಯೆ ವರ ಸೇರಿ ಕಲಿಯಲು ಒಂದು ಸಮಯದಲ್ಲಿ
ಅಂಗಾಗಳು ಸೇರಿ ಪಿಂಡ ಉದ್ಭವಿಸಿತು
ಹೆಚ್ಚು ಕುಲದವರು ಯಾರು ಹೀನ ಕುಲದವರು ಯಾರು

ಹಾಡು : ಊರು ಹಂದಿಯನ್ನು ತಿಂದವರು ಈ ಊರಲ್ಲೇ ಇದ್ದಾರೆಯ್ಯೋ. ನಾವು ಸತ್ತ ಗೋವು ತಿಂದಿದ್ದೇವೆ ಊರ ಹೊರಗೆ ಇದ್ದೇವಯ್ಯೋ, ಹೊರಗಡೆ ತಿರುಗುವ ಹಂದಿ ಮಾಂಸ ದೊಡ್ಡ ದೊಡ್ಡೋರು ತಿನ್ನುತ್ತಾರಯ್ಯೋ, ಆದರೆ ನಾವು ಹಸಿರು ಹುಲ್ಲು ತಿನ್ನೋ ಗೋವನ್ನು ತಿನ್ನುತ್ತೀವೆಯ್ಯೋ, ಊರ ಹೊರಗೆ ಇರುತ್ತೇವೆಯ್ಯೋ.

ಹಾಡು : ಗೋವು ಮಾಂಸ ನಾವು ತಿಂದರೆ ಅದರ ಕೊಬ್ಬು ಇವರೇ ತಿಂದಿದ್ದಾರೆ. ಕೊಬ್ಬು ಎಂದರೆ ದೊರೆಗಳಿಗೆ ಕೋಪ ಬಂದುಬಿಡುತ್ತದೆ. ಏನಾ ಮಾದಿಗಾ ದೊಡ್ಡ ಸಣ್ಣ ಇಲ್ವೇನೋ? ಎಲ್ಲಾ ಕಣ್ಣು ಮುಚ್ಚಿಕೊಂಡು ಹೋಗ್ಯಾವಾ? ಅನ್ನುತ್ತಾರಯ್ಯ. ಏಕೆ ಎಡಗೈ ಬಲಗೈ ಇಲ್ಲಂದ್ರೆ ಹೇಗೆ? ಇರಿರಿ ಸ್ವಾಮಿ ಕೊಬ್ಬು ಅಂದ್ರೆ ಏನು ಅಲ್ಲರೀ. ಒಂದು ಆಕಳು ಸಾಕುತ್ತೇವೆಂದು ತಿಳಿಯಿರಿ ಅದರ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ನಾವು ತಿನ್ನುತ್ತೇವೆಯೆ? ಅಸಲಿ ನಿಜವಾದ ಕೊಬ್ಬು ಅದೇನಯ್ಯಾ ಇನ್ನು ನಾವು ತಿಂದರೆ ಏನು ತಿಂದೀವಿ?

ತುಪ್ಪವಿಲ್ಲದ ಆಹಾರ ಕೊಡುವುದೇ ಕಸುವು
(ನೆಯ್ಯಿ ಲೇನಿ ತಿಂಡಿ ನಿಯ್ಯನಾ ಕಸುವುದಿ)
ಬೇಳೆ ಇಲ್ಲದ ಆಹಾರ ಫಲವಿಲ್ಲದ್ದು
(ಪಪ್ಪುಲೇನಿ ತಿಂಡಿ ಫಲಮುಲೇದು)
ಸಾಲವಿಲ್ಲದವನ್ನೆ ಅಧಿಕ ಸಂಪನ್ನನು
(ಅಪ್ಪುಲೇನಿವಾಡು ಅಧಿಕ ಸಂಪನ್ನುಡುರಾ)
ವಿಶ್ವಧಾಬಿರಾಮ ವಿನುರವೇಮ

ಇದು ಕೊಬ್ಬು ಅಂದ್ರೆ ಇನ್ನು ನಮ್ಮನ್ನು ಮುಟ್ಟಬಾರದು ಎನ್ನುತ್ತೀರಿ. ಅಸಲು ಮುಟ್ಟು ಅಂದ್ರೆ ಏನು?

ಮುಟ್ಟಿನಲ್ಲಿಯೇ ಹುಟ್ಟಿದೆ ಕುಲ
ಮುಟ್ಟನ್ನು ಅಂಟಿಕೊಂಡೆ ಬೆಳೆದಿದೆ ಕುಲ
ಕುಲದ ಮೂಲ ತಿಳಿದರೆ
ಕುಲದ ನೆಲ ಎಲ್ಲಿಯೂ ಇಲ್ಲ

[illegible]

[illegible]

[illegible]

[illegible]

[illegible]

[illegible]

ನವದ್ವಾರದಿಂದ ಹುಟ್ಟಿದಾಗ ಹುಟ್ಟಿದ ಮುಟ್ಟು ಏನು....?
ಶುಕ ಶೌನಕಾದಿ ಮಹಾಋಷಿಗಳೆಲ್ಲರಾ
ಕುಲಗಳು ಇವರ ಗೋತ್ರಗಳು ಏನು ?
ಇವರು ಯಾರು? ಯಾರಿಗೆ ಹುಟ್ಟಿದ್ದಾರೆ ನೋಡಿರಿ

ಮೀನು ಮಾರಿಕೊಂಡು ಬದುಕುವ ದಾಶರಾಜು ಮಕ್ಕಳು ಯೋಜನಗಂಧಿ, ಮತ್ಸ್ಯಗಂಧಿ. ಆ ಮತ್ಸ್ಯಗಂಧಿಗೆ ಹುಟ್ಟಿದ್ದಾರೆ, ನಾಲ್ಕು ವೇದಗಳನ್ನು ವಿಭಜಿಸಿದ ವೇದವ್ಯಾಸರು. ಮತ್ತೆ ಇವರ ಕುಲ ಯಾವುದು?

ರಾಮಾಯಣವನ್ನು ರಚಿಸಿದ ವಾಲ್ಮೀಕಿ ಯಾರು? ಕಳ್ಳತನ, ಹತ್ಯೆಗಳು, ಬೇಟೆಗೋಗಿ ಎಷ್ಟೋ ಪ್ರಾಣಿಗಳನ್ನು ಕೊಂದ ಬೇಡಕುಲ ಅಂತಾರೆ. ಹಾಗಾದರೆ ವಾಲ್ಮೀಕಿಯದು ಯಾವ ಕುಲ? ಹುಲ್ಲಿಗೆ ಹುಟ್ಟಿದ್ದಾರಂತೆ ಕೃಪಾಚಾರ್ಯರು. ಭಾರತ ಯುದ್ಧದಲ್ಲಿ ಎಷ್ಟೋ ಹೆಸರು ತಂದುಕೊಂಡಿದ್ದಾರೆ. ಆತನದು ಯಾವ ಕುಲ.

ಮಾಂಡವ್ಯ ಮಹಾಋಷಿ ಕಪ್ಪೆಗೆ ಹುಟ್ಟಿದ್ದಾನಂತೆ! ಹಾಗಾದರೆ ಈತನದು ಯಾವ ಕುಲ.

ಗಾರ್ಗೇಯ ಮಹಾಋಷಿ ಮಹಾ ತಪಸ್ಸು ಬಲ್ಲವರು. ಅವರು ಕತ್ತೆಗೆ ಹುಟ್ಟಿದ್ದಾರೆಂದರೆ ನಂಬುತ್ತೀರಾ...? ಹಾಗಾದರೆ ಇವರ ಕುಲ ಯಾವುದು?

ಊರ್ವಶಿ ಪುತ್ರ-ವಶಿಷ್ಟ. ದಾಸಿ ಪುತ್ರ ನಾರದ. ಒಂದು ದಿನ ಬ್ರಹ್ಮದೇವ ವೇದಾಧ್ಯಯನ ಮಾಡುತ್ತಿರಬೇಕಾದರೆ, ಅದೇ ಸಮಯದಲ್ಲಿ ಊರ್ವಶಿ ಅತಿಲೋಕ ಸುಂದರಿಯಾಗಿ ಅಲಂಕರಿಸಿಕೊಂಡು ಬ್ರಹ್ಮದೇವನ ದರ್ಶನಕ್ಕೆ ಬರಲು. ಆ ಸಮಯದಲ್ಲಿ ಬ್ರಹ್ಮನ ಮನಸ್ಸು ಚಂಚಲವಾಯಿತಂತೆ! ವೇದಾದ್ಯನ ಬಿಟ್ಟು ಊರ್ವಶಿಯ ಹತ್ತಿರ ಕಾಲಕ್ಷೇಪನ ಮಾಡಿದ್ದಾನಂತೆ. ಅಂತಹ ವೇದಾದ್ಯನಲ್ಲಿದ್ದಾಗ ವಿಶಿಷ್ಟ ಹುಟ್ಟಿದ್ದಾನೆ. ಅದಕ್ಕಾಗಿ ಹೇಳುತ್ತಾರೆ. ಹೆಣ್ಣನ್ನು ನೋಡಿದರೂ, ಸಂಪತ್ತನ್ನು ನೋಡಿದರೂ ಮನಸ್ಸು ಸೋಲುತ್ತದೆ. ಇರಲಿ ನಾರದ ಮಹಾಋಷಿ ಇದ್ದಾನಲ್ಲಾ ಆತನ ತಾಯಿ ಋಷಿಗಳ ಹತ್ತಿರ ದಾಸಿತನ ಮಾಡಿದ್ದಾಳೆ. ಆ ದಾಸಿಯ ಮಗನೇ ನಾರದ ಮಹಾಋಷಿ ಇವರ ಕುಲವ್ಯಾವುದು!

ಭಾರಧ್ವಜ ಪಕ್ಷಿಗೆ ಹುಟ್ಟಿದ್ದಾರೆ. ಇವರು ಸಪ್ತ ಮಹಾಋಷಿಗಳಲ್ಲಿ ಒಬ್ಬರು. ಅಗಸ್ತ್ಯ, ಹರಿಜನ ಹೆಣ್ಣು ಮಗಳಿಗೆ ಹುಟ್ಟಿದ್ದಾನೆ ಹಾಗಾದರೆ ಇವರ ಕುಲವಾವುದು?

ಮಾತಂಗ ಶ್ರೀಗೆ ಹುಟ್ಟಿದ ಮಾತಂಗ ಮಹಾಋಷಿ ನಮ್ಮವರೇನಯ್ಯ, ಗಿಳಿಗೆ ಹುಟ್ಟಿದ ಶ್ರೀ ಶುಕುಂಡು ನಮ್ಮವನೆ. ಇವರೆ ಭಾರತ, ಭಾಗವತಾದಿ ಗ್ರಂಥಗಳನ್ನು ಜನಮೇಜಯರಾಜಗೆ ಹೇಳಿದ್ದಾರೆಂದು, ಗ್ರಂಥಗಳೆಲ್ಲಾ ಅವಸಿಂದಲೇ ಬಂದಿದ್ದಾವೆಂದು ಹೇಳುತ್ತಾರೆ. ಮತ್ತೆ ಇವರ ಕುಲ ಯಾವುದು?

ದುರ್ವಾಸಮಹಾಮುನಿ ಅಂದ್ರೆ ತ್ರಿಮೂರ್ತಿಗಳು ಗಡಗಡ ನಡುಗುತ್ತಾರೆ. ಮಹಾಕೋಪಿಷ್ಟ, ಮಹಾ

ಒಗರುತನದವ, ಇನ್ನು ಪರಶುರಾಮ ಇದ್ದಾನಲ್ಲ ಅವನ ತಾಯಿ ಕ್ಷತ್ರಿಯ ಕನ್ಯೆ: ತಂದೆಯ ಮಾತಿಗೆ ಎದುರಾಡದೆ ತಾಯಿಯನ್ನೇ ಕೊಂದ ತನಯ. ಈತನ ಕುಲವಾವುದು ಹೇಳಿರಯ್ಯಾ? ಈಗ ಅವರೆಲ್ಲರೂ ಬ್ರಾಹ್ಮಣರು ನಾನು ಬ್ರಹ್ಮಜ್ಞಾನಿ ಎನ್ನುತ್ತಾರೆ. ಇವರು ಹುಟ್ಟಿದ ಕುಲಕ್ಕೆ ಏನಾದರೂ ಇರುಕು ಇದೆಯೇ?

ಶ್ಲೋಕ ಜನ್ಮನಾ ಜಾಯತೆ ಶುದ್ರಾ:
ಕರ್ಮಾಣಿ ಜಾಯಿತೆ ದ್ವಿಜ:
ವೇದಭ್ಯಾಸ ವಿಪ್ರಾಸ್ಯಾತ್
ಬ್ರಹ್ಮಜ್ಞಾನಂ ತು ಬ್ರಾಹ್ಮಣ:

ಹಾಗೆ ಹುಟ್ಟಿದಾಗ ಎಲ್ಲರೂ ಶೂದ್ರರೇ, ಆತ್ಮಸಂಸ್ಕಾರಾದಿ ಕರ್ಮಗಳಿಂದ, ವೇದಾಧ್ಯಯನದಿಂದ ವಿಪ್ರರಾದರು. ಬ್ರಹ್ಮಜ್ಞಾನದಿಂದ ಬ್ರಾಹ್ಮಣನಾದ ಅದಲ್ಲದೆ ಬ್ರಾಹ್ಮಣ ಸ್ತ್ರೀಗೆ ಹುಟ್ಟಿದವರು ಬ್ರಾಹ್ಮಣರಲ್ಲ. ಇವರೆಲ್ಲ ವೃತ್ತಿ ಧರ್ಮಗಳನ್ನು ಅವಲಂಬಿಸಿ ಅವರವರ ಕುಲಗಳು ಹುಟ್ಟಿದ್ದಾವೆ. ವ್ಯಾಪಾರ ಮಾಡುವವರು ಕೋಮಟಿಗರು, ವೇದಾದ್ಯಯನ ಮಾಡಿದವರು ಬ್ರಾಹ್ಮಣರು, ವ್ಯವಸಾಯ ಮಾಡುವವರು ರೈತರು, ಹೀಗೆ ಕುಲಗಳು ಹುಟ್ಟಿದ್ದಾವೆ.

ಶ್ಲೋಕ ಬ್ರಾಹ್ಮಣೋ ಕ್ಷತ್ರಿಯ ವೈಶ್ಯ ಶೂದ್ರ
ಚಂಡಾಲ ಏವಚಃ ವಿಶ್ವಂ ನಾರಾಯಣ ದೇವಂ

ಧನ ಯಾರ ಹತ್ತಿರ ಇರುತ್ತದೆಯೋ ಅವರೇ ದೊಡ್ಡವರು. ಅಂದರೆ ಅವರ ತಪಸ್ಸು ವಿಜ್ಞಾನದಿಂದ, ವಿವೇಕದಿಂದ ದೊಡ್ಡವರಾಗಿದ್ದಾರೆ. ಎಲ್ಲರಿಗೂ ಅದೇ ಕಾಲು ಅದೇ ಕಣ್ಣು ಅದೇ ಮೂಗು, ಕಿವಿ, ಬಾಯಿ ಎಲ್ಲಾ ಒಂದೇ ಎಲ್ಲರೂ ಯೋನಿಯಿಂದಲೇ ಹುಟ್ಟಿದ್ದಾರೆ. ಆದರೆ ನಮಗೆ ಸ್ವಲ್ಪ ಶುದ್ಧಿ, ಸ್ವಚ್ಛತೆ ಕಡಿಮೆ, ನಿಮಲ್ಲಿ ಹೆಚ್ಚು ಹಣವಿದೆ ನಮಗೆ ಅದು ಇಲ್ಲ. ನೀವು ಬ್ರಾಂದಿ, ಬೀರು ಕುಡಿಯುತ್ತೀರಿ. ನಾವು ಯಂಡ, ಸಾರಾಯಿ ಕುಡಿಯುತ್ತೇವೆ. ಅಷ್ಟೇ ವ್ಯತ್ಯಾಸ ಇನ್ನು ಹೇಳಿದರೆ ಬಹಳ ಇದೆ. ನಮಗೆ ಹೊತ್ತಾಗುತ್ತದೆ ಬರುತ್ತೇನೆ ಸ್ವಾಮಿ ಎಂದು ತಪ್ಪಡಿ ಬಾರಿಸಿಕೊಳ್ಳುತ್ತಾ ಹೋಗುತ್ತಾನೆ.

ಶ್ಲೋಕ : ಧೃವೋ ಮರ್ತ್ಯ ರೂಪಕಶ್ಚ ಜಂಪೆತ್ರಿ
ಪುಟ ಏವಚ ಆಟತಾಳ ಏಕತಾಳೆ,
ಸಪ್ತತಾಳ ಪ್ರಕಿರ್ತಿತಃಯಿ
ಸಪ್ತತಾಳಗಳು ಬಾರಿಸಬೇಕು ಸ್ವಾಮಿ ಬರುತ್ತೇವೆ.

ಫಕೀರ ಸಾಹೇಬರ ವೇಷ : ಹಗಲುವೇಷಗಳಲ್ಲಿ ಫಕೀರ ಸಾಹೇಬರ ವೇಷ ಬಹುಪ್ರಸಿದ್ಧಿ ಹೊಂದಿದೆ. ಇದು ಹಾಸ್ಯಭರಿತವಾದಂತಹ ವೇಷ. ಇವರು ಮಾತನಾಡುವ ಭಾಷೆ ಉರ್ದು ಮತ್ತು ಕನ್ನಡದಿಂದ ಕೂಡಿರುತ್ತದೆ. ಕನ್ನಡ ಬರುವುದಿಲ್ಲದಿರುವ ಹಾಗೆ ಮಾತನಾಡುತ್ತಾರೆ.

ವೇಷ : ಮುಖಕ್ಕೆ ಬಣ್ಣ ಹಾಕುವ ಅವಶ್ಯಕತೆ ಇಲ್ಲ. ತಲೆಗೆ ಕೆಂಪು ಅಥವಾ ಹಸರಿ ಇಲ್ಲವೇ ಅರಿಷಿಣ, ಬಣ್ಣದ ಪೇಟಗಳನ್ನು ಸುತ್ತಿರುತ್ತಾರೆ. ಕೈಯಲ್ಲಿ ಕರಿಯ ಫಕೀರ ಚಿಪ್ಪುಗಳಿರುತ್ತವೆ. ಕೊರಳಲ್ಲಿ ಬಿಳಿಯ

ಕವಡೆ ಸರ ಮತ್ತು ತಾಯಿತ ಹಾಕಿಕೊಂಡಿರುತ್ತಾರೆ. ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಾರೆ. ಗಡ್ಡ ಮೀಸೆ ಬಿಟ್ಟಿರುತ್ತಾರೆ. ಇಲ್ಲವೆ ಮೀಸೆ ಇಲ್ಲದೆ ಗಡ್ಡ ಬಿಡಬಹುದು. ನಡುವಿಗೆ ಲುಂಗಿ ಕಟ್ಟಿರುತ್ತಾರೆ. ಮೇಲೆ ಅಂಗಿ ಅದರ ಮೇಲೆ ಹಳೆಯ ಕೋಟು ತೊಟ್ಟುಕೊಂಡಿರುತ್ತಾರೆ. ಲುಂಗಿ ಮೊಳಕಾಲವರೆಗೆ ಕಟ್ಟಿರಬೇಕು. ಒಬ್ಬರ ಕೈಯಲ್ಲಿ ನವಿಲು ಪುಚ್ಚದ ಕಟ್ಟು ಇರುತ್ತದೆ. ಇವರು ಇಬ್ಬರಿಂದ ಐದು ಮಂದಿಯವರೆಗೆ ಇರಬಹುದು. ಖವಾಲಿ ಹಾಡುತ್ತಾ ಪ್ರತಿ ಮನೆಯ ಮುಂದೆ ವೇದಾಂತ ಪರವಾದ ಹಾಡುಗಳನ್ನು ಹಾಡುತ್ತಾ ಕನ್ನಡದಲ್ಲಿ ಅರ್ಥ ಹೇಳಬೇಕು. ಕೈಯಲ್ಲಿ ಡಪ್ಪು ವಾದಿಸುತ್ತಾ ಇರುತ್ತಾರೆ. ಕೆಲವು ಡಪ್ಪುಗಳಿಗೆ ಅಲ್ಲಲ್ಲಿ ಸುತ್ತು ತಾಳಗಳನ್ನು ಜೋಡಿಸಿರುತ್ತಾರೆ.

೧. ಅರೇ ನಾವು ಜೇ ಜೋಲ್ ತೇರೇ ಠಿಕಾನಾ, ಕಹಾಸೇವು, ಯಾ ಹೈಯಾವೋ ತೆರಾನಾ ||ಅರೆನಾವು||
ಯಾಹೋ ಪೇರಾವ್ವ ಹೇಕೈಶಿಬಿಖಾನಾ ಯಾಹ್ ತೇರಾ ವೈಹೋಗಾ ಫಿರ್ ತೆರೇಜಾನಾ
೨ ಎ ತನ್ ಮನ್ ಸೇ ಗಲ್‌ದನ್ ಬದಲ್‌ಜಾನರೇ, ಯಾಫಸ್ಕು ಜಮಾಯಾಮೇ ನೈಡಾಲ್‌ನಾರೇ
||ಅರೆನಾವು||
೩. ಅಗರ್ ತೂಹೆ ಪಾಂಚ್ ಪರದೇಶಿಯಾನ ಅರೇ ಮನ್ನಾ ಕೋರೇನಕೋ ಹೇದಿವಾನಾ ||ಅರೆನಾವು||
೪. ಜಿಯ್ಯೊ ತಕ್ಕಿಜೋರು ಬಚ್ಚೆ ಪ್ಯಾರ್ ಕರ್ತೇ, ಮೇರೆಪಿಚ್ ಮುದ್ಗಾರ್ ಕಲ್‌ದಿಯಡರೇ ||ಅರೆನಾವು||
೫. ಆಖರ್‌ಕಿ ಪರಪಂಚ ಜೂಟಾ ಜಮಾನಾ, ಅರೇ ಮನ್ನಕೋರೇನ ಕೋ ಹೇದಿವಾನಾ ||ಅರೆನಾವು||
೬. ಕಬರ್‌ಮೇ ತೇರಾಕೋಯಿ ಸಾತ್‌ನಹೀರೇ, ಕಂಠಿನ್ ನಕ್ಕುಕಾಕೋಯಿ ಸಂಗಾತ್ ನಹೀರೇ
||ಅರೆನಾವು||

ಅವು ಲಿಲ್ಲಾಕಾ ಆಬಾದರ್‌ಕಿ ಬೇಟಾ ಬೇಟಿ ಸುಖಾನಂದರ್‌ಕೆ ಅವುಲೈಮಾಲಾಕ್‌ಮೇರಾ ಬಾಪ್ ಜೀತೆರಾಂ

ಲಿಲ್ಲಾಪಕೀರು ಹಂ ಬಾಬಾಹಂಸೇ ಟೆಲಂಗಿ ಬಾತ್ ಆತನ್ವ ತೋಡಾ ತೋಡಾ ಸಮಸ್ತೆಹೈ ವಿಖಿನ್ ಪೂರಾ ಜಾನ್‌ತಾನ್ವ ಅಖಿಮೈಪಡೇಸೋ ಈಗ ನಾವು ಹೇಳಿದಾ ಮಾತು ಆಪ್‌ಕಾ ಕನ್ನಡಮೇ ಹೇದಾಂತ ಬೋಲ್ತಾ ಹೈ.

ಹಮಾರೇ ತುರುಕುಮ್‌ಮೇ ಸವಾಲ್ ಹೋಗಯಾ ಕಿಸ್ಕೊ ಕಿಸ್ಕೊ ಸವಾಲ್ ಹೋಗಯಾ ತನ್‌ಕೋ ಮನ್‌ಕೋ ದೋನೇಕೂ ನವಾಲ್ ಪಡಗಯಾ ತನ್‌ಬೋಲ್‌ತೋ ತನ್ನುಮನ್ ಬೋಲೇತೊ ಮನಸ್ಸು ಈ ತನ್ನುಕಿ ಯೀ ಮನಸ್ಸು ಕೇಳುತಾದ. ಸ್ವಲುಪ ಅರ್ಥ ಹೇಳುತಾದ ಸುನೋಜಿ ಬಾಬಾ.

೧. "ಅರೇ ಮನ್ಮುಜೆ ಬೋಲ್‌ತೇರೆ ಠಿಕಾನಾ ಕಹೋಸೇವು ಆಯೆ ಯಹ್ ತೆರಾನಾ"

ಅರೇವ್ರೋ ಮನಸೇ ನನ್ನ ಹತ್ತಿರ ಹೇಳು ನೀಠಿಕಾನಾ ಎಲ್ಲಿ ಇದೆ. ನೀವು ಎಲ್ಲಿನಿಂದ ಬಂದಿದ್ದೀರಿ. ತಿರಿಗೆ ಎಲ್ಲಿಗೆ ಹೋಗ್ತೀಗಿ! ತುಪ್‌ಪಾಂಚ್ ಭೂತ್ ಮಿಲಾಕೆ ನೀವು ಪೃಥ್ವಿ ವ್ಯಾಪಿಸಿದರೆ

ಜೋವಾಯುರಾಕಾಶಂಬುಲ ನೆಡಿ ಪಂಚಭೂತ ಮೂಲತೋ ಕೂಡಿಕೊಂಡಿವೆಯೇ ಶರೀರವೇ ಇದು ನಿನಗೆ ಖಾಯಂ ಅಲ್ಲ. ನಿನಗೆ ಖಾಯಮ್ ಆದ ಸ್ಥಳ ಯಾವುದೋ ತಿಳಿದುಕೋ ಎಂದು ಈ ದೇಹಾತ್ಮನಿಗೆ ಈ ಜೀವಾತ್ಮ ಹೇಳಿದರೂ ವೇದಾಂತ

ಮಾರಾಜ್ ಏತನ್ ಮನ್ ಗಲ್‌ದನ್ ಬಧಲ್ಲಾನ್ನಾರೇ ಸುಕಾ ಆನಂದಸೇಯು ಸ್ಕುನಾ ಪಾಲನ್ನರ್

ಅಂದ್ರೆ ಈ ತುನ್ನುಕೆ ಈ ಪಾನಕ್ಕೆ ದೊಡ್ಡದು ಮಾಡು ಮಾರಾಜ್! ದೊಡ್ಡದು ಅಂದ್ರೆ ಒಂದನ್ನು ನೋವು ಬಿದ್ದರೆ ಮತ್ತೊಂದಕ್ಕ ಬಾದ ಬತ್ತಾತ. ಕಬು ಆತಾಹೈ! ಅದು ಯ್ಯಾವಾಗ ಬರ್ತಾದ ಒಂದೇ ದಿನ ದಾರಿ ನಡೆದು ಹೋತ್ತಾ ದಾರೀಲಿ ಸನ್ನಮುಲ್ಲೂ ಕಾಲ್ಗೆ ಸುಚ್ಚಿಗೊಂಡ್ರೆ ನೋವು ಎಲ್ಲಿ ಆಗ್ತಾತ ಮರಾಜ್! ಪಾನಾನ್ಕಿ ನೋವು ಆಗ್ತಾದ. ಈ ಎರಡಕ್ಕೆ ಎಷ್ಟು ಸ್ನೇಹ ಇದ್ದ ಕಾಲದಲ್ಲಿ ಈ ಬೊಂದಿಲೋ ಜೀವಾತ್ಮಕ ಹೋಗಬುಡ್ತದ. ಅದುಕೆ ಈ ಶರೀರಕ್ಕೂ ಸುಖದಿಂದಲೂ ಆನಂತದಿಂದಲೂ ಹಂಚಬಾರದು ಬಾಬಾ

ಪದ: ಸಖಾನಂದ ಶ್ರೇಯಸ್ಸು ಸಾಫಾಲ್ನಾರೇ

ಸುಖ ಅಂದ್ರೆ ಈ ಬೊಂದಿಲೋ ಇರುವ ಜೀವಾತ್ಮನಿಗೆ ಅರ್ಥ ಇದೆ. ಒಂದು ಗಿಳಿಗೆ ಅರ್ಥ ಇದೆ. ಅದು ಹೇಗೆ ಅಂದ್ರೆ? ಒಂದು ಅಡವಿ ಗಿಳಿಗೆ ತಂದದಕ ಒಂದು ಪಂಜರ ಕಟ್ಟಿಸಿ ಅದಕ್ಕೆ ಹಾಲು ಹಾಕಿ, ಕಡ್ಲೆ ಹಾಕಿ, ಇದ್ದಿಲ್ ಹೇಳಿ ಘೋಷಾ ಮಾಡಿ ಮಾತು ಕಲಿಸಿ ಚೆನ್ನಾಗಿ ನೋಡಿದ್ರೆ ಒಂದು ದಿನ ಪಂಜರದಲ್ಲಿ ಬಾಯಿ ತೆರಿದಿದ್ರ ಯಾರಿಗೆ ಹೇಳದಂಗ ಯಾವ ಅಡಿಯಿಂದ ಗಿಳಿಯನ್ನು ತಂದ್ಯಾವೋ ಅದೇ ಅಡ್ವಿಗೆ ಬುರ್‍ರನ ಎಗ್ರಿ ಹೋಗಿದೆ. ಆಗ ನಾವು ಹತ್ತು ರೂಪಾಯಿಗೆ ಇಟ್ಟು ಕಟ್ಟಿಸಿದ ಪಂಜರ ತೆಗ್ದು ಮೂಲಿಗೆ ಒಂದು ಕೋಣೆಯಲ್ಲಿ ಬೀಸಾಕ್ತಿವಿ ಅದೇ ಮಾದರಿ ಈ ದೇಹ ಎನ್ನೋ ಪಂಜರದಲ್ಲಿಂದ ಈ ಜೀವ ಎನ್ನೋ ಗಿಳಿ ಹೋಗಿದ ಮೇಲೆ ಈ ಶರೀರಕ್ಕೆ ತೆಗೆದುಕೊಂಡು ಹೋಗಿ ಸ್ವಲ್ಪ ದೂರದಲ್ಲಿ ಸ್ಮಶಾನದಲ್ಲಿ ಬೀಸಾಕಿದ್ರೆ ಪಂಜರಕ್ಕ ಗಿಳಿಗೆ ಎಷ್ಟು ಸಂಬಂಧವೋ ಶರೀರಕ್ಕ ಜೀವಾತ್ಮಕ್ಕಾ ಅಷ್ಟೇ ಸಂಬಂಧ ಐತೆ. ಅದು ಅಲ್ದೇ

ಪದ: ಜಿಯ್ಯೆ ತಕ್ಕಿ ಜೋರು ಬಚ್ಚೆ ಪ್ಯಾರ್ ಕರ್ತೆ ಮೇರೇ ಪೀಚೆ ಮುದ್ದಾಕರ್‌ದಿಲ್ ಮಡರ್ತೆ.

ಜಿಯ್ಯು ತಕ್ಕಿಜೋರೂ ಗಿರೂ ಬಚ್ಚೆಗಿಚಿ ಸಬ್ ಪ್ಯಾರ್ ಕರೇ! ಅಂದ್ರೆ ಮನ್ನಿ ಬದ್ಕೆ ಇದ್ರೆ ಕಾಲದಲ್ಲಿ ಮದುವೆ ಹುಡ್ಗುರಿಗೆ, ತಾಯೇರ್ಗೆ ಎಲ್ಲರಿಗೆ ಮುದ್ದು ಮಾಡ್ತಾರ್ ಅದು ಯಾವಾಗ ಮುದ್ದು ಮಾಡ್ತಾರ್ ಮಾರಾಜ್! ಸಂಸಾರದಲ್ಲಿ ಸೊಟ್ಟ ಇಲ್ಲದಂಗೆ ನೆಟ್ಟಗ ಇರ್ತಾದ ಅವಾಗ ಮುದ್ದು ಮುಡ್ತಾರ ಸಂಸಾರದಲ್ಲಿ ಸೊಟ್ಟ ಆದ್ರೆ ಹೆಂಡ್ತಿ ನೋಡಿ ಗಂಡನಿಗೆ ಅಂದ್ರೆ ದಿಗದಾ ಅಯ್ಯಾ ಮನೆಯಲ್ಲಿ ನೋಡಿದ್ರ ಬತ್ತ ಇಲ್ಲ. ಹುಡುಗರ ಹಸಿವ್ಗೆ ಅಳ್ತಾ ಇದಾರ್. ಹತ್ತು ರೂಪಾಯ್ಗೆ ತಗಂಬಾಂದ್ರೆ ಗಂಡ್ಸು ಸಿಟ್ಟಿಗೋಗಿ ಒಬ್ಬನ ತಲೆ ಒಡೆದು ಕಷ್ಟ ಮಾಡೋ ಮೋಸಾ ಮಾಡೋ ರೊಕ್ಕಕ ತಂದು ಮನೇಲಿ ಇಪ್ಪತ್ತು ರೂಪಾಯ್ಗೆ

ಕೊಟ್ಟರೆ ಬೀಬೀ ಅಂತಾತಲ್ಲ! ಅಹಾಹಾಹಾ! ನಂದು ಗಂಡ ಕೊಡಬೇಕಾ ಪಾತಿಕಾ ರೂಪಾಯಿಗೆ ಕೊಟ್ಟನ ಎಂದು ಆ ಸಮಯದಾಗ ನೀರು ಹಾಕಿ ಕಾಲು ಇಸುಕಿ ಎಷ್ಟು ಚೆನ್ನಾಗಿ ನೋಡುತ್ತದೆ. ಐದು ರೂಪಾಯಿಗೆ ತೆಗೆದುಕೊಂಡು ಹೋಗಿ ಹತ್ತು ಮಂದಿ ದೋಸ್ತುಗಳಿಗೆ ಚಾಯ್‌ಪೀಸಿದರೆ ಹತ್ತು ಮಂದಿ ದೋಸ್ತರು ಅಂತಾರೆ ಅಲ್ಲಾ ಆಹ್ ಈ ದೋಸ್ತು ಎಷ್ಟು ಒಳ್ಳೆಯವರ ಹಾಗೆ ಇದ್ದಾನೆ? ಅಯ್ಯಾ ಇಲ್ಲಿ ಕುಳಿತುಕೊಳ್ಳಿ ಎಂದು ಎಷ್ಟು ಮರ್ಯಾದೆ ಮಾಡುತ್ತಾರೆ. ಸರ್ಕಾರ್ ಅದು ಅವಳ ಮುಖ ನೋಡಿ. ಹೀಗೆ ಬೀದೀಲಿ ಒಳ್ಳೆ ಮನೆಯಲ್ಲಿ ಒಳ್ಳೆ ಅನ್ನಿಸಿಕೊಂಡ್ರೆ ಮತ್ತೆ ಒಂದು ದಿನ ಕೆಟ್ಟ ಆಗುತ್ತಾನೆ ಮಾರಾಜ್! ಈ ದೇಹದಲ್ಲಿರುವ ಪ್ರಾಣ ಹೋದ ಮೇಲೆ ಈ ಅಮ್ಮಲಕ್ಕಲ್ ಹೆಂಡತಿ ಹುಡುಗರು ಅಂತಾರೆ ಅಲಾ! ಅಯ್ಯಾ ಅಯ್ಯಾ ನಮ್ಮದು ಮನುಷಿ ಸತ್ತು ಹೊಯ್ತಿ. ಈ ಯನಿಗೆ ತೆಗೆದು ಹಾಕಿರಿ. ಮನೆ ಶುದ್ದಿ ಮಾಡ್ಕೋಬೇಕು. ಹುಡುಗರ ಹಸಿವೆಗೆ ಅಳುತಾ ಇರ್‍ತಾರೆ ಅಂತಾರೆ. ಆಗ ಅಲ್ಲಿ ಚಾಯ್ ಕುಡಿದ ದೋಸ್ತುಗಳು ಬಂದು ಅರೆರೆ! ಶಾನಾ ಒಳ್ಳೆಯವನು ಸತ್ತು ಹೋಗಿದಾ ಇನ್ನೂ ಏತಕ್ಕೆ ಇಟ್ಟುಕೊಂಡಿದಿರಿ ಇವನಿಗೆ ತೆಗೆದು ಹಾಕ್ರಿ, ಎಳೆದು ಹಾಕ್ರಿ, ಬೀಸಾಕ್ರಿ, ಅಂತಾರೆ, ಆದ್ರೆ ಮನೆಯಲ್ಲಿ ಇಡೋದಿಲ್ಲ. ಎಷ್ಟು ಲಚ್ಚಾಧಿಕಾರಿ ಎಷ್ಟು ಕೊಟ್ಟೇಶ್ವರನಾದ್ರು ಕಬರ್ ಸ್ಥಾನ್‌ಕೂ ಅಂತ ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕಾದುದ್ದೆ ಓ ಕಂಪಿ ಶರೀರವೇ? ನಿಮ್ಮವರು ನಿಮ್ಮವರು ಅಂತ ಎಲ್ಲರಿಗೆ ನೋಡಿದ್ರಿ, ನಿನಗೆ ಮನೆಗೆ ಏನು ಸಂಬಂಧ? ಎಲ್ಲಿಯವರೆಗೆ ಬರ್‍ತೀರಿ? ಸ್ಮಶಾನ ಮಿತ್ರಭಾಂದವ್ಯ ಬಂಧುಗಳು, ಸ್ಮಸಾನದವರ್‍ಗೆ ಬರ್‍ತಾರ್ ಆ ಕಡೆ ಬರೋದಿಲ್ಲ. ಆ ಕಡೆ ಬರೋದು ಏನು ಸುಕೃತ, ದುಷ್ಕೃತದ ಮೇಲೆ, ಮಾನವನು ಮಾಡಿದ ಒಳ್ಳೆ, ಕೆಟ್ಟ, ಪಾಪ-ಪುಣ್ಯ, ಧರ್ಮ ಅಧರ್ಮ, ಕೀರ್ತಿ, ಅಪಕೀರ್ತಿ ಈ ಎರಡೇ ಹಿಂದಾ ಬುರ್‍ತಾಆದ್ರೆ ನನ್ನ ಹೆಂಡ್ತಿ ನನ್ನ ಮಕ್ಕಳು, ನನ್ನ ಅಣ್ಣಂದಿರು, ನನ್ನ ತಮ್ಮಂದಿರು, ನನ್ನ ಅಕ್ಕ ತಂಗಿಯರು ನನ್ನ ಭಾವ ಬಾಮೈದರು, ನಮ್ಮ ಅಣ್ಣ ನಿನಗೆ ಜೊತೆ ಬರೋದಿಲ್ಲ. ನಿನ್ನ ಪಾಪ ಪುಣ್ಯಗಳು, ಮೋಕ್ಷ ನಿನ್ನಿಂದೆ ಬರ್‍ತಾವಾ ಎಂದು ಈ ಜೀವಾತ್ಮನಿಗೆ ಈ ಪರಮಾತ್ಮ ಹೇಳಿದರೂ ವೇದಾಂತ ಮರಾಜ್.

ಪದ: ಕ ಬರ್ಮೆ ತೇರಾಕೋ ಇಸಾತ್ ನಹೀರೇ ಕರಿರನ್ ವಕ್ತುಕಾಕೋಯಿ ಸಂಗಾತ್ ನಹೀರೆ!

ಮನುಷ್ಯ ಸತ್ತು ಹೋಗೋ ಮೊದ್ಲು ಇಬ್ಬರ್ ಯಮದೂತರು ಬಂದು ಕಾಲಿಗೆ ಕೈಯ್‌ಗೆ ಗಾಳ ಹಾಕಿ ಯಾವರೀತಿ ಎಳೆಯುತ್ತಾರೋ ಅದೇ ರೀತಿ ಜೀವಾತ್ಮನಿಗೆ ಹಗ್ಗ ಹಾಕಿ ಎಳೆಯುತ್ತಿದ್ದರೆ ಆಗ ಬರುತ್ತದೆ ಮಾರಾಜ್ ಕಷ್ಟ ಬಂದು ಅಯ್ಯಾನಂದು ಹಣ ಇಲ್ಲಿ ಇದೆ. ಹುಡುಗರಿಗೆ ಏನು ಮಾತುಗಳು ಹೇಳಬೇಡ. ನಾನು ಇನ್ನು ಬರುವುದಿಲ್ಲ, ಬರುವುದಿಲ್ಲ ಎಂದು ಹೇಳುತ್ತಾನೆ. ಮಾರಾಜ್ ಆಗ ಮನಿಷನ ಜೀವ ಅಲ್ಲಾನ ಮೇಲೆ ದೇವರ ಮೇಲೆ ಮನಸು ಇದೆ! ಮರಾಜಾ ಆದ್ರೆ ಆಗ ದೇವನ ಮೇಲೆ ಮನಸ್ಸು ಹೋದ ಇನ್ನು ಯಮಧೂತರಿಗೆ ಬದಲು ದೇವಧೂತರು ಬರುತ್ತಾರೆ. ಅದಕ್ಕಾಗಿ ಮನುಷ್ಯ ಇರುವಷ್ಟು ಕಾಲ ಅಲ್ಲಾನ ಮನಸ್ಸಿನಲ್ಲಿ ಉಳಿಸಿಕೋ ದೇವರ ಚಿಂತನ ಮಾಡು ನಿನಗೆ ಅಲ್ಲಾ ಒಳ್ಳೇದು ಮಾಡ್ತಾನೆ ಎಂದು ಹೇಳಿದೆ ಅಯ್ಯಾ!

ಪದ: (ಕೊನೆಗೆ) ಪರಪಂಚಂ ಝೂಟಾ ಜಮಾನಾ ಅರೆ ಮನ್ನಾ ಕೋರೇನಾ ಕೋಯಿ ದಿವಾನಾ

ಈ ಪ್ರಪಂಚ ಎಲ್ಲಾ ಮಿತ್ಯ ಇದಕ್ಕೆ ನಂಬಿ ನಿನಗೆ ನಿಜವಾದ ಪ್ರಪಂಚ. ಅಲ್ಲಾನ ಹತ್ರ ಐತೆ ಅಂತ ಹೇಳದಿವಿ ಮಾರಾಜ್! ನೊಡಿ ಅಯ್ಯಾ ನಮ್ಮದು ಎಲ್ಲಿ ಮಾರಾಜ್! ಮಕ್ಕಾ ಮಸೀದಿ ಮದರಾಸಿನಿಂದ ಇಲ್ಲಿಗೆ ಮುಸಾಫಿರ್ ಮಾಡೋದಕ್ಕೆ ಬಂದಿದಿವಿ. ಮುಸಾಫಿರ್ ಮಾಡಿದಷ್ಟು ಕಾಲ ಮುಸಾಫಿರ್ ಮಾಡಿದ್ದೇವೆ. ಇನ್ನು ಮನೆಗೆ ಹೋಗಬೇಕು ಅಂತ ಬುದ್ದಿ ಹುಟ್ಟಿದೆ. ಇನ್ನು ಮನೆಗೆ ಹೋಗುತ್ತೇವೆ. ಅದೆ ನಮ್ಮದು ಮನುಷ್ಯ ಬದುಕಿದಷ್ಟು ಕಾಲ ಎಲ್ಲಾ ಮುಸಾಫಿರ್! ತಾನು ಸತ್ತು ಹೋದ ಮೇಲೆ ತಾನು ಎಲ್ಲಿಂದ ಬಂದಿದೆ. ತಿರ್ಗಿ ಎಲ್ಲಿಗೆ ಹೋಗ್ತಾದೆ ಎಂದು ಈ ಜೀವಾತ್ಮನಿಗೆ, ಈ ದೇಹಾತ್ಮನಿಗೆ ಪರಮಾತ್ಮ ಹೇಳಿದರೂ ವೇದಾಂತ ಮಾರಾಜ್!

ಫಜಿಲಾ ಮೌಲಾ ಹಂಚುವುದು ಷಾಯಾಂಕಾ ನಬಿರಸೂಲಲ್ಲೂ ಅಲ್ಲ ವಾಕರೇ ದರ್ವೇಷಿರಾಂಕರಮ್ ಕದಮ್ ದರ್ವೇಷಿ ಹೈರಾದ್ವಾಲಾ ಎನ್ನಬೇಕು ದೇವೇಚಿರಾಕ್ ಪಾವೇ ಮುರಾದ್ ಹಶಿಕ್‌ಕರೇಯಾ ಅಲ್ಲಾಕಾ ಅಲ್ಲಾಕಾ ದಿನ್ ದಿನ್ ಮೇಲಾ ದೀನ್‌ಮೊಮೊಲಾಯಾ ದಸ್ತಗಿರಿ ಮಹಮದ್ ರಸೂಲಲ್ಲಾ!

೧. ಅಹಾಕ್ಯಾನಾ ಮುಸಲ್ಲೆ ಅಲ್ಲಾಹೈ ಷಾಹೇ ಜಿಲಾನಿ ಗೌಸುಲ್ ಬರಾಹೈ ||ಅಹಾ||

೨. ದಿನ್ ಹೈತ ಮತ್ಕೊ ಸಂಜಾತೋ ಕ್ಯಾ ಹೈ ತಾಜ್ ಫಕ್‌ರೇಸಲೇ ಔಲಿಯಾ ಹೈ ಅಹಾ ಕ್ಯಾನಾ ಮುಸಲ್ಲೆ ಅಲ್ಲಾ ಹೈ

೩. ಖಂಬ್ರಮ್ ಆಕ್ ಪೂಚ್ ಪರಿಸ್ತೇ ಕ್ಯಾಚ್ ಟ್ಯೂಂಕಾಸೆ ತೆಂಗರ್‍ನಯುನ್‌ಸೇ ಅಹಾ ಕ್ಯಾನಾಮ್ ಸಲ್ಲೆ ಅಲ್ಲಾ ಹೈ

ದೇವರ ವೇಷ : ಹಗಲುವೇಷಗಳಲ್ಲಿ ದೇವರ ವೇಷ ಇಂದ್ರಜಾಲದಿಂದ ಕೂಡಿದೆ. ಇವರ ಇಂದ್ರ ಜಾಲದ ಗುಟ್ಟುಗಳನ್ನು ಹೇಳುತ್ತಿಲ್ಲ. ಈ ವೇಷವನ್ನು ದೇವರ ಸುಂಕಲಮ್ಮ ಎಂದು ಕೂಡ ಕರೆಯುತ್ತಾರೆ. ಈ ವಿದ್ಯೆಯನ್ನು ಪ್ರದರ್ಶಿಸುವುದರಲ್ಲಿ ಇವರು ಬಹಳ ಪರಿಣಿತಿ ಪಡೆದಿದ್ದಾರೆ. ಈ ವೇಷ ಹೇಗೆ ಇರುತ್ತದೆಂದರೆ ಕೆದರಿದ ತಲೆ ದೊಡ್ಡ ದೊಡ್ಡ ಮೀಸೆಗಳು ಬರಿ ಮೈಯಲ್ಲಿ ಇರುತ್ತಾರೆ. ಮೈತುಂಬಾ ಅರಿಷಿಣ, ಕುಂಕುಮ ಹಚ್ಚಿಕೊಂಡಿರುತ್ತಾರೆ. ಕೈಯಲ್ಲಿ ಬೇವಿನ ಕೊಂಬೆಗಳನ್ನು ಹಿಡಿದುಕೊಂಡು ಬಹಳ ಬಯಾನಕವಾಗಿರುತ್ತಾರೆ. ಮೂವರು ಗಂಡು ವೇಷಗಳೇ ಇರುತ್ತವೆ. ಒಬ್ಬರು ದೇವರನ್ನು ಹೊತ್ತಿರುತ್ತಾನೆ. ಒಬ್ಬನೆ ತಮ್ಮಟೆ ಬಾರಿಸುತ್ತಿರುತ್ತಾನೆ. ಒಬ್ಬರು ಕೈಯಲ್ಲಿ ದೊಡ್ಡ ಚಾಟಿ ಹಿಡಿದಿರುತ್ತಾರೆ.

ಇವರು ಪ್ರದರ್ಶಿಸುವ ಇಂದ್ರಜಾಲ ವಿದ್ಯೆಗಳಲ್ಲಿ, ಅಗ್ನಿ ಸ್ತಂಭನ, ಮೂಗ ಸ್ತಂಭನ, ಖಡ್ಗಸ್ತಂಭನ, ವಾಯುಧಾರಣ, ಫಲವೇಕ್ಷಿಣಿ ಮೊದಲಾದ ಯಕ್ಷಿಣಿ ವಿದ್ಯೆ ಸೇರಿರುತ್ತವೆ. ನಾವು ನೋಡುತ್ತಿರುವುಂತೆಯೇ ಕುಂಕುಮ, ಅರಿಷಿಣ ನೀರಿನಲ್ಲಿ ಕಲಸಿ ಮತ್ತೆ ಬೇರೆ ಬೇರೆ ತೆಗೆಯುತ್ತಾರೆ. ಧಾರವನ್ನು ತುಂಡು, ತುಂಡುಮಾಡಿ ಮತ್ತೆ ಒಂದೇ ಏಕದಾರವಾಗಿ ಮಾಡುತ್ತಾರೆ. ಈ ವಿಧವಾದ ಇಂದ್ರಜಾಲ ವಿದ್ಯೆಗಳೆಲ್ಲಾ ಇವರ ಕೈಯಲ್ಲಿವೆ. ಈ ಇಂದ್ರಜಾಲ ವಿದ್ಯೆ ರಾತ್ರಿ ಹೊತ್ತಿನಲ್ಲಿ ಹೇಗಾದರೂ ಮಾಡಬಹುದು. ಆದರೆ

[illegible]

ಹಗಲು ಹತ್ತು ಮಂದಿ ನೋಡುತ್ತಿರುವಂತೆಯೇ ಮಾಡುವುದು ಮಹಾಕಷ್ಟ. ಇವರ ಹಸ್ತಲಾಘವ, ಕಣ್ಣು ಕಟ್ಟು ವಿದ್ಯೆಗಳು ನೋಡುತ್ತೇವೆ ಹೊರತು ಬರೆಯಲಾರೆವು.

ಇವರು ಶರಣೆ ಶರಣೆ ಭ್ರಮರಾಂಬಾ! ನಿನಗೆ ಶರಣು ಭ್ರಮರಾಂಭ ಎನ್ನುತ್ತಾ ದೇವಿಯ ಮೇಲೆ ಪದ ಹಾಡುತ್ತಾ ಇದ್ದರೆ ಆ ಪದಕ್ಕೆ ಅನುಗುಣವಾಗಿ ತಮ್ಮಟೆ ಬಾರಿಸುತ್ತಿರುತ್ತಾರೆ. ಹಾಗೆ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಿರುತ್ತಾರೆ. ಈ ನೃತ್ಯ ನೋಡಲು ಬಹಳ ಅಚ್ಚುಕಟ್ಟಾಗಿರುತ್ತದೆ.

"ಜಜ್ಜನಕಡ-ಜಜ್ಜನಕಡ" ಎಂದು ತಮ್ಮಟೆ ಬಾರಿಸುತ್ತಾ ಬರುತ್ತಾ
ಶರಣೆ ಶರಣೆ ಭ್ರಮರಾಂಬಾ ನಿನಗೆ ಶರಣು ಭ್ರಮರಾಂಬಾ
....
....
....
....

ನಮ್ಮ ಅಮ್ಮನವರು ದೇಶದೇಶ ತಿರುಗಿದ್ದಾಳೆ. ದೇಶಕ್ಕೊಂದು ಹೆಸರು ಪಡೆದಿದ್ದಾಳೆ. ರಾಜ್ಯ-ರಾಜ್ಯ ತಿರುಗುತ್ತಾಳೆ. ರಾಜ್ಯಕ್ಕೊಂದು ಹೆಸರು ಪಡೆದಿದ್ದಾಳೆ. ಉತ್ತರ ದೇಶಕ್ಕೆ ಹೋಗಿ ಬಳಿದುಹಾಕಿ ಬಂದಿದ್ದಾಳೆ. ಪಶ್ಚಿಮ ದೇಶಕ್ಕೆ ಹೋಗಿ ಹಾಳುಮಾಡಿ ಬಂದಿದ್ದಾಳೆ. ದಕ್ಷಿಣ ದೇಶಕ್ಕೋಗಿ ಧ್ವಂಸ ಮಾಡಿ ಬಂದಿದ್ದಾಳೆ. ಕಲಕತ್ತಾಕ್ಕೆ ಹೋಗಿ ಕಾಳಿ ಎಂದು ಹೆಸರು ಪಡೆದಿದ್ದಾಳೆ. ಮೈಸೂರಿಗೆ ಹೋಗಿ ನಮ್ಮ ತಾಯಿ ಚಾಮುಂಡೇಶ್ವರಿ ಎಂದು ಹೆಸರು ಪಡೆದಿದ್ದಾಳೆ. ಬೆಜವಾಡಕ್ಕೆ ಬಂದು ಮಾಯಮ್ಮ, ಕನಕದುರ್ಗಮ್ಮ ಎಂದು ಹೆಸರಿಟ್ಟುಕೊಂಡಿದ್ದಾಳೆ. ಕೊಂಡ್ರಕೋಟಕ್ಕೆ ಹೋಗಿ ನಮ್ಮ ತಾಯಿ ನೂಕಾಲಮ್ಮ, ಮುತ್ಯಾಲಮ್ಮ, ಮರಿಡಮ್ಮ, ಅಂಕಾಲಮ್ಮ, ಸೋಮಲಮ್ಮ, ಕನ್ನಾಲಮ್ಮ ತಾಯಿಯನ್ನು ೫೦ ತೊಲೆ ವಡ್ಯಾಣ ಕೆಳಗೆ ೩೦ ತೊಲೆನತ್ತು ಕೆಳಗೆ ಬಳೆ ಗಲಗಲ ಅಲ್ಲಾಡಿಸುತ್ತಾ ಮಾರೆಮ್ಮ ಬಳೆ ತೊಡಿಸಮ್ಮಾ ತಾಯಿ ||ಶರ|| ಮಲ್ಲೆಲಮ್ಮ ಮಲ್ಲೇಲೇ ಮಲ್ಲೇಲು ಮಲ್ಲೆಲಾ ಮಲ್ಲೆಲೇಮ್ಮಾ!

ನಮ್ಮ ಅಮ್ಮನವರು ಮುತ್ತು ಅರಿಷಿಣವನ್ನು ಹಸಿರಾಗಿ ಮಾಡುತ್ತಾಳೆ. ಕುಂಕುಮವನ್ನು ಕೆಂಪಗೆ ಮಾಡುತ್ತಾಳೆ. ಬೆಲ್ಲವನ್ನು ಸಿಹಿಯಾಗಿ ಮಾಡುತ್ತಾಳೆ. ಸುಣ್ಣವನ್ನು ಬೆಳ್ಳಗೆ ಮಾಡುತ್ತಾಳೆ. ಇದ್ದಲಿಯನ್ನು ಕಪ್ಪಗೆ ಮಾಡುತ್ತಾಳೆ. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡುತ್ತಾಳೆ. ನಮ್ಮ ಅಮ್ಮನವರಿಗೆ ದೊಡ್ಡ ದೊಡ್ಡ ವಿದ್ಯೆ ಬರುತ್ತವೆ. ೬೪ ಕಲೆಗಳು ಅರ್ಧರ್ಧವಾಗಿ ಬಿಟ್ಟವೆ. ೬೪ ಕಲೆಗಳನ್ನುತ್ತಾರೆಯೇ ಹೊರತು ವಿದ್ಯೆಯಿಂದ ಹೇಳಲು ಬಲ್ಲರು. ನಾನು ಹೇಳುತ್ತೇನೆ ಕೇಳಿರಯ್ಯಾ

೧. ಅಕ್ಷರ ಲಕ್ಷಣ
೨. ಅಲಂಕಾರ
೩. ಇತಿಹಾಸ
೪. ಮೀಮಾಂಸೆ
೫. ತರ್ಕಶಾಸ್ತ್ರ
೬. ಸ್ತ್ರೀ ಲಕ್ಷಣ
೭. ಪುರುಷಲಕ್ಷಣ
೮. ಅಶ್ವಲಕ್ಷಣ
೯. ಗಜ ಲಕ್ಷಣ
೧೦. ಗೋಲಕ್ಷಣ
೧೧. ಕನ್ಯಾವಾದ
೧೨. ವಿಷವಾದ

೧೩. ಬಲವಾದ
೧೪. ರಸವಾದ
೧೫. ಧಾತುವಾದ
೧೬. ಬ್ರಹ್ಮವಾದ
೧೭. ಮೃಷವಾದ
೧೮. ಮುದ್ರಾರಾಕ್ಷಸ
೧೯. ಕ್ಷಾತ್ರಕರ್ಮ
೨೦. ಭೂರಜವಾತ
೨೧. ಅಶ್ವವೈದ್ಯ
೨೨. ಗಜವೈದ್ಯ
೨೩. ಪಶುವೈದ್ಯ
೨೪. ನರವೈದ್ಯ
೨೫. ಇಂದ್ರಜಾಲ
೨೬. ಮಹೇಂದ್ರಜಾಲ
೨೭. ಗಜಕರ್ನ
೨೮. ಗೋಕರ್ಣ
೨೯. ತಣಾವಧಾನ
೩೦. ಶಬ್ಧಾವಧಾನ
೩೧. ಬೂಜಾವಧಾನ
೩೨. ಘಂಟಾವಧಾನ
೩೩. ನಯನ ಸೋಜ್ಞ
೩೪. ಭಾಷಾ ವಿಶೇಷ
೩೫. ಓಷಣ
೩೬. ಭ್ರಮಣ
೩೭. ವಿದ್ವೇಷಣ
೩೮. ಉಚ್ಚಾಟನ
೩೯. ಆಕರ್ಷಣ
೪೦. ಅಂಜನ
೪೧. ಅದೃಶ್ಯ
೪೨. ಭೃಗುಮತ್
೪೩. ಬೇತಾಳಮತ
೪೪. ಅಯುಧಾಬ್ಯಾಸ
೪೫. ವಾಸ್ತುಶಾಸ್ತ್ರ
೪೬. ಶಿಲ್ಪಶಾಸ್ತ್ರ
೪೭. ಭರತಶಾಸ್ತ್ರ
೪೮. ಯೋಗಶಾಸ್ತ್ರ
೪೯. ಚಿತ್ರಕ್ರಿಯೆ
೫೦. ರಾಡಾರೋಹಣ
೫೧. ಗಜಾರೋಹಣ
೫೨. ಅಶ್ವಾರೋಹಣ
೫೩. ಹವಿಸ್ತಂಭನ
೫೪. ವಾಯುಸ್ತಂಭನ
೫೫. ಅಗ್ನಿ ಸ್ತಂಭನ
೫೬. ಜಲಸ್ತಂಭನ
೫೭. ಖಡ್ಗಸ್ತಂಭನ
೫೮. ಘಟಿಕಾ ಸಿದ್ಧಿ
೫೯. ಪಾದುಕಾ ಸಿದ್ಧಿ
೬೦. ಮಂತ್ರ ಸಿದ್ಧಿ
೬೧. ಪರಕಾಯ ಪ್ರವೇಶ
೬೨. ದೊರದೃಷ್ಟಿ
೬೩. ದೂರಶ್ರವಣ
೬೪. ಹಸ್ತಾಚಲನ

ಈ ೬೪ ವಿದ್ಯೆಗಳು ಈ ೬೪ ಕಲೆಗಳಲ್ಲಿಯೇ ಇವೇ ಅನ್ನುವ ಮಾತು. ಇವು ಅಮ್ಮನವರ ಮಾತುಗಳೇ ಸ್ವಾಮಿ.

ವಡ್ಡೆ ಉಪ್ಪಾರ ವೇಷ

ವಡ್ಡೆ ಉಪ್ಪಾರ ವೇಷವನ್ನು ಸಾಮಾನ್ಯವಾಗಿ ನೋಡಿರುತ್ತೇವೆ. ಇವರು ಹೇಗೆ ಅಲಂಕರಿಸಿಕೊಂಡಿರುತ್ತಾರೆಂದರೆ, ಮುಖಕ್ಕೆ ಲೈಟಾಗಿ ಕೆಂಪುಬಣ್ಣ ಬರೆದುಕೊಳ್ಳಬೇಕು. ಕೊರಳಲ್ಲಿ ಇತ್ತಾಳೆಯ, ಬೆಳ್ಳಿಯ ಸರ ಹಾಕಿಕೊಂಡಿರುತ್ತಾರೆ. ಗಂಡಸರು ಕೋರೆ ಮೀಸೆ ಬಿಟ್ಟಿರುತ್ತಾರೆ. ತಲೆಗೆ ರುಮಾಲು ಕೈಯಲ್ಲಿ ಪುಟ್ಟಿ ಭುಜದ ಮೇಲೆ ಗುದ್ದಲಿ ಇವರಲ್ಲಿ ಒಂದು ಸ್ತ್ರೀ ಪಾತ್ರವಿರುತ್ತದೆ. ತಲೆಯ ಮೇಲೆ ಮುಸುಗು ಹಾಕಿಕೊಂಡು, ಪುಟ್ಟಿ ಹೊತ್ತುಕೊಂಡಿರುತ್ತಾಳೆ. ಪುಟ್ಟಿಯಲ್ಲಿ ಒಂದು ಪಾರು ಇರುತ್ತದೆ. ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿರುತ್ತಾರೆ. ಕೊರಳಲ್ಲಿ ಮಣಿಯ ಸರ ಅರಿಷಿಣ ದಾರ ಜಾಕೆಟ್ಟು, ಮೇಲೆ ಸೀರೆ, ಮೊಳಕಾಲು ಮೇಲಕ್ಕೆ ಕಟ್ಟಬೇಕು. ಒಂದು ಕೈಗೆ ಬಳೆಗಳು, ಒಂದು ಕೈಗೆ ಬೆಳ್ಳಿ ಕಡಗ ಧರಿಸಬೇಕು. ಇವರು ಎಲ್ಲಿಗೋದರೂ ಗಂಡಹೆಂಡತಿ ಹೋಗುತ್ತಾರೆ. ಇವರ ಭಾಷೆ ಬೇರೆ. ಇವರು ೧೦-೧೭ ಮಂದಿ

ಕಲಸಿ ಹೋಗುತ್ತಾರೆ. ಇವರು ಸೂರ್ಯವಂಶದವರು. ಸ್ತ್ರೀಯರು ಅಡ್ಡಬೊಟ್ಟು ಪುರುಷರು ನಾಮ ಇಡುತ್ತಾರೆ.

ನಮಸ್ಕಾರ ಸ್ವಾಮಿ ನಮಸ್ಕಾರ ನಾವು ಹೊಲದ ಕೆಲಸ ಮಾಡುತ್ತೇವೆ ಸ್ವಾಮಿ ಮನೆಗ ಬುನಾದಿ ಕುಣಿಗಳನ್ನು ತೆಗೆಯುತ್ತೇವೆ, ಊಳುತ್ತೇವೆ. ರೋಡು ತೋಡುತ್ತೇವೆ. ಊಳುತ್ತೇವೆ. ('ವಡ್ಡಿ ಉಪ್ಪರ್ಲ') ಬಡ್ಡಿ ಉಪ್ಪಾರರು ಸ್ವಾಮಿ! ನಾವು ಇಂದು ಅಂದು ಹುಟ್ಟಿದವರಲ್ಲ ಸ್ವಾಮಿ. ಕೃತಕಯುಗದಲ್ಲಿ ಹುಟ್ಟಿದವರು. ಅದು ಯಂತಹ ಸಂಗತಿಯೆಂದರೆ, ನಮಗೆ ತಿಳಿದಷ್ಟು ಮನವಿ ಸಲ್ಲಿಸುತ್ತೇನೆ ಕೇಳಿ ದೊರೆ!

ಕಮಲದಿಂದ ಬ್ರಹ್ಮಹುಟ್ಟಿದ ಬ್ರಹ್ಮನ ಮಗ ಮರಿಚಬ್ರಹ್ಮ. ಮರಿಚಬ್ರಹ್ಮನ ಮಗ ಕಶ್ಯಪ ಬ್ರಹ್ಮ-ಕಶ್ಯಪ ಬ್ರಹ್ಮನ ಮಗ ಜಗದಾತ್ಮ, ಜಗದಾತ್ಮನ ಮಗ ಮನು, ಮನುವಿನ ಮಗ ಇಷ್ವಾಕು-ಇಷ್ವಾಕುವಿನ ಮಗ ವಿಕುಕ್ಷಿ-ವಿಕುಕ್ಷಿ ಮಗ ಯಕ್ಷರಾತ್ಮ-ಯಕ್ಷರಾತ್ಮನ ಮಗ ಪುರಂಜಯ, ಪುರಂಜಯನ ಮಗ ಕಾಕುತ್ಸ ಕಾಕುತ್ಸನ ಮಗ ಯವನಾಶ್ವ ಯವನಾಶ್ವನ ಮಗ ಮಹಾಂಧಾತ ಮಹಾಂಧಾತನ ಮಗ ಅಮರಣ್ಯುಡು ಅಮರಣ್ಯನ ಮಗ ತ್ರಿಶಂಕು ತ್ರಿಶಂಕುವಿನ ಮಗ ಹರಿಶ್ಚಂದ್ರ ಹರಿಶ್ಚಂದ್ರನ ಮಗ ಲೋಹಿತಾಶ್ವ ಲೋಹಿತಾಶ್ವನ ಮಗ ಯವನಾಶ್ವ ಯವನಾಶ್ವನ ಮಗ ಪುರುಕುಚ್ಚ ಪುರಕುಚ್ಚನ ಮಗ ಬಾಹುಕ ಬಾಹುಕನ ಮಗ ಸಗರ ಈ ಸಗರ ಸಂತತಿಯವರೇ ನಾವು ಸ್ವಾಮಿ. ನಾವು ಬಡ್ಡಿ ಉಪ್ಪಾರರು ಹೀಗಾಗಲು ಕಾರಣ, ಒಂದಾನೊಂದು ಕಾಲದಲ್ಲಿ ಸಗರ ಅಶ್ವಮೇಧಯಾಗ ಮಾಡಲು ನಿಶ್ಚಯಿಸಿದ ಒಂದು ಸಂದರ್ಭದಲ್ಲಿ ತನ್ನ ೬೦ ಮಂದಿ ಮಕ್ಕಳೊಂದಿಗೆ ದೇಶ ಸಂಚಾರಕ್ಕೆ ಕುದುರೆ ಏರಿಸಿ ಕಳುಹಿಸಿದನು. ದೇಶದೇಶಗಳೆಲ್ಲಾ ತಿರುಗಿ ಈ ೬೦ ಮಂದಿ ಮಕ್ಕಳು ಬರುತ್ತಿರುತ್ತಾರೆ. ದೊರೆ ಈ ಸಗರರ ಚಕ್ರವರ್ತಿ ಅಶ್ವಮೇಧಯಾಗ ಮಾಡಿ ಸ್ವರ್ಗಲೋಕದಲ್ಲಿ ಇಂದ್ರಾದಿಪತ್ಯ ವಹಿಸುತ್ತಾನೆಂದು, ದೇವೇಂದ್ರನು ಭಯ ಬಿದ್ದು ಸಗರ ಚಕ್ರವರ್ತಿಯ ಮಕ್ಕಳು ಮಲಗಿಕೊಂಡಾಗ, ಅವರು ತಂದ ಅಶ್ವಗಳನ್ನು ಪಾತಾಳ ಲೋಕದಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲ ಋಷಿಯ ಹತ್ತಿರ ತೆಗೆದುಕೊಂಡು ಹೋಗಿ ಅಲ್ಲಿ ಕಟ್ಟಿಹಾಕಿ ದೇವೇಂದ್ರ ಹೋದ. ಸ್ವಲ್ಪ ಸಮಯದ ನಂತರ ಸಗರನ ಮಕ್ಕಳು ಎದ್ದು ನೋಡಿದರು ಯಜ್ಞಾಶ್ವ ಕಾಣಲಿಲ್ಲ. ಆಗ ಭೂಲೋಕವೆಲ್ಲಾ ಹುಡುಕಿದರು. ಕುದುರೆ ಕಾಣಲಿಲ್ಲ ಒಂದು ಜಾಗದಲ್ಲಿ ಕುದುರೆಯ ಸಗಣಿ ಕಂಡಿತು. ಅದನ್ನು ಹಿಡಿದು ಅಬ್ಬಾ! ಈ ಕುದುರೆಯನ್ನು ಯಾರೋ ಭೂಲೋಕಕ್ಕೆ ತೆಗೆದುಕೊಂಡು ಹೋಗಿದ್ದಾರೆಂದು ಆಗ ಪಾರು, ಹಾರೆ, ಚಲಿಕೆಯಿಂದ ಭೂಮಿಯನ್ನು ಅಗೆಯಲು ಪ್ರಾರಂಭಿಸಿದರು. ಹಾಗೆ ಕೆಲವು ಸಂವತ್ಸರಗಳ ಕಾಲ ತೋಡುತ್ತಾ ಇರಬೇಕಾದರೆ ಪಾತಾಳದಲ್ಲಿ ಒಬ್ಬ ಋಷಿ ತಪಸ್ಸು ಮಾಡುತ್ತಿದ್ದ. ಆತನ ಪಕ್ಕದಲ್ಲಿಯೇ ಯಜ್ಞಾಶ್ವ ಕಟ್ಟಿ ಹಾಕಿತ್ತು. ಆ ಕುದುರೆಯನ್ನು ನೋಡಿದ ತಕ್ಷಣ ಸಂತೋಷವಾಯಿತು. ಆದರೆ ಈ ಮುದಿ ಋಷಿಯ ಹತ್ತಿರ ಈ ಕುದುರೆ ಹೇಗೆ ಬಂತು ಆ ಋಷಿಯನ್ನು ನಾನಾ ಕಷ್ಟ ಕೊಟ್ಟು, ತಪ್ಪನ್ನು ಭಗ್ನಗೊಳಿಸಿದರು. ಆಗ ಆ ಕಪಿಲ ಮಹಾಮುನಿ ಋಷೀಶ್ವರ ಬಹಳ ಕೋಪದಿಂದ ಯಾರಿವರು ಎಂದು ಕಣ್ಣು ತೆಗೆದ ತಕ್ಷಣ ಆ ೬೦ ಮಂದಿ ಸಗರ ಚಕ್ರವರ್ತಿಯ ಮಕ್ಕಳು ಬಸ್ಮವಾದರು.

ಇನ್ನು ಸಗರ ಚಕ್ರವರ್ತಿಗೆ ಇವರ ವಿಷಯ ತಿಳಿಯಲಿಲ್ಲ ಸ್ವಾಮಿ. ಇನ್ನು ಯಜ್ಞ ನಿಂತು ಹೋಯಿತು. ಮಕ್ಕಳ ಸುಳಿವೇ ಇಲ್ಲ. ತರುವಾಯ ಕೆಲವು ಸಂವತ್ಸರಗಳ ನಂತರ ಸಗರ ಚಕ್ರವರ್ತಿಗೆ ಮಗ ಹುಟ್ಟಿದ. ಆತನು ಕೂಡ ಚಕ್ರವರ್ತಿಯಾದ. ಆದರೆ ಯಜ್ಞದ ಕುರಿತು ಯೋಚಿಸಲಿಲ್ಲ. ಸಮಂಜಯನ ಮಗ ಸಮಂತ ಸಮಂತನ ಮಗ ದಿಲೀಪ ಆತನು ಚಕ್ರವರ್ತಿಯೇ, ದಿಲೀಪನ ಮಗ ಭಗೀರಥ. ಭಗೀರಥ ಮಹಾರಾಜ ಪರಿಪಾಲನೆ ಮಾಡುತ್ತಿರಬೇಕಾದರೆ ಒಂದು ದಿನ ನಾರದ ಮಹಾ ಋಷಿ ಭಗೀರಥ ಚಕ್ರವರ್ತಿಯ ಹತ್ತಿರ ಬಂದು, ಓ ರಾಜಾ ಭಾಗಿರಥಾ ನೀನೀಗ ವೃತಾ ಕೂಳು ತಿನ್ನುತ್ತಿದ್ದೀಯಿ. ವೃತಾ ಕೂಳು ತಿನ್ನುವುದಕ್ಕಿಂತ ಪಿಂಡಿ ಕೂಳು ತಿನ್ನುವುದು ಮೇಲು ಅಂದನು. ಆ ಸಂಗತಿ ನಿನಗೆ ಗೊತ್ತಿಲ್ಲವೇ ಎಂದು ನಾರದ ಮಹಾಋಷಿ. ಆ ಮಾತಿಗೆ ಭಾಗಿರಥ ಮಹಾರಾಜು ಏನು ಸ್ವಾಮಿ ಏನು ಮಾತು ಹೇಳುತ್ತಿದ್ದಿಯಾ? ಆಗ ನಾರದ ಸಗರ ಚಕ್ರವರ್ತಿ ೧೦೦ ಅಶ್ವಮೇಧಯಾಗಗಳನ್ನು ಮಾಡಿದ್ದಾನೆ. ಕೊನೆಯ ಯಜ್ಞದಲ್ಲಿ ಇಂದ್ರ ಪದವಿಗೆ ಬರುತ್ತಾನೆಂದು ಭಯದಿಂದ ದೇವೇಂದ್ರ ಅಶ್ವವನ್ನು ತೆಗೆದುಕೊಂಡು ಹೋಗಿ ಕಪಿಲ ಮುನೀಶ್ವರನ ಹತ್ತಿರ ಕಟ್ಟಿ ಹಾಕಿದ ಜರಿಗಿದ ವೃತ್ತಾಂತವೆಲ್ಲಾ ಹೇಳಿ ಇಲ್ಲಿಯವರೆಗೆ ನಿಮ್ಮ ತಾತಂದಿರು ವೃತಾ ಕೂಳು ತಿಂದು ಹೋದರು. ಆದರೆ ನೀನು ಜ್ಞಾನಿ. ಮಹಾಯೋಗ ನಿಷ್ಟ. ಆದರೆ ನೀನು ನಾನು ಹೇಳಿದಂತೆ ಮಾಡಿದರೆ ನಿಮ್ಮವರಿಗೆ ಮುಕ್ತಿ ನಿನಗೆ ಭಕ್ತಿ. ಪ್ರಜೆಗಳಿಗೆ ಭಕ್ತಿ ಆ ಚಂದ್ರತಾರರ್ಕವಾಗಿ ಹೆಸುರುಳಿಯುತ್ತದೆ ಎಂದನು. ಆಗ ಭಗೀರಥ ಚಕ್ರವರ್ತಿ ತನ್ನ ರಾಜ್ಯವನ್ನು ತನ್ನ ಮಗ ಸುಹಾತೃನಿಗೆ ವಹಿಸಿ ತಾನು ಮಧುವನ ಪ್ರವೇಶಿಸಿ ಮಹಾವಿಷ್ಣುವಿನ ಕೋರಿಕೆಗೆ ತಪಸ್ಸು ಮಾಡುತ್ತಾನೆ. ಆತನ ನಿಶ್ಚಲ ತಪಸ್ಸು ಮೆಚ್ಚಿ ಶ್ರೀಹರಿ ಪ್ರತ್ಯಕ್ಷವಾಗಿ ಭಗಿರಥಾ ನಿನಗೆ ಏನು ವರಬೇಕು ಕೇಳು ಎಂದನು. ದೇವಾ ಶ್ರೀಹರಿ ಪಾದದ ಕೆಳಗಿರುವ ಗಂಗೆಯನ್ನು ನನಗೆ ದಯಪಾಲಿಸು ಅದರಿಂದ ನಮ್ಮ ವಂಶಿಕರಾದ ಸಗರ ಚಕ್ರವರ್ತಿ ಮಕ್ಕಳನ್ನು (ಭಸ್ಮಾಸುರರನ್ನು) ಗಂಗೆಯಿಂದ ಸ್ಪರ್ಶಿಸಿದರೆ, ನಮ್ಮ ಕುಲ ಪಾವನವಾಗುತ್ತದೆ ಎಂದನು. ಈ ಗಂಗೆಯನ್ನು ನಿಲ್ಲಿಸುವ ಶಕ್ತಿ ಸರ್ವ ಸೃಷ್ಟಿಯ ಶಿವನಿಗೆ ಮಾತ್ರ ಇರುವುದು ಎಂದಾಗ, ಹಿಮಾಲಯ ಪರ್ವತದ ಮೇಲೆ ಒಂದೇ ಪಾದದ ಮೇಲೆ ದಿವ್ಯ ತಪಸ್ಸು ಮಾಡಲು. ಅಷ್ಟರಲ್ಲಿ ಶಿವನು ಪ್ರತ್ಯಕ್ಷವಾಗಿ ಏನು ಬೇಕು ಕೇಳು ಎಂದಾಗ ಅಯ್ಯಾ ಸ್ವಾಮಿ ಶ್ರೀಹರಿಯ ಪಾದದಿಂದ ಗಂಗೆ ಬರುತ್ತಿದ್ದಾಳೆ. ಅದನ್ನು ತಡೆಯುವ ಶಕ್ತಿ ತಮಗೆ ಇದೆ. ಅವಳನ್ನು ತಡೆದರೆ ನಮ್ಮ ಸಗರ ಚಕ್ರವರ್ತಿಯ ಮಕ್ಕಳ, ಮರಳು ರಾಶಿಗಳನ್ನು ತೆಗೆಯಲು ಅನುಕೂಲ ಎಂದು ಹೇಳಲು ಸರೆ ಎಂದು ಒಪ್ಪಿಕೊಂಡು ಶ್ರೀಹರಿಯ ಪಾದದಿಂದ ಗಂಗಾವತರಣ ಬಂದಳು. ಆಕಾಶದಿಂದ ಗಂಗೆ ಡಮ ಡಮ ಧ್ವನಿಯಿಂದ ಅಷ್ಟ ದಿಕ್ಕಿನಿಂದ ಬರುತ್ತಿರುವ ಗಂಗೆಯನ್ನು ಹಿಮಾಚಲ ಪ್ರದೇಶದಲ್ಲಿ ತಪಸ್ಸು ಮಾಡುವ ಶಿವನು ಭೂಮಿಯ ಮೇಲೆ ಬೀಳದಂತೆ ತನ್ನ ಜಡೆಯಲ್ಲಿ ಬಂದಿಸಿದನು. ಆಗ ಶಿವನು ಭಗೀರಥನನ್ನು ಕರೆದು ನೀನು ಹಿಂದಕ್ಕೆ ತಿರುಗಿ ನೋಡದಂತೆ ನಿಮ್ಮ ವಂಶಿಕರಾದ ಸಗರ ಚಕ್ರವರ್ತಿಯ ಮಕ್ಕಳ (ಭಸ್ಮಗಳವರೆಗೆ ಹೋದಾಗ) ಕಪಿಲಮುನಿಯ ಆಶ್ರಮದ ಹತ್ತಿರ ಹೋಗಿ ಭಸ್ಮದ ರಾಶಿಗಳನ್ನು ಮುಟ್ಟಲು ಆಗ ಸಗರ ಚಕ್ರವರ್ತಿ ಮಕ್ಕಳು ಮುಕ್ತಿ ಹೊಂದಿದರು. ಆಗ ಸಗರನ ಮಕ್ಕಳು ಭೂಮಿ ತೋಡುತ್ತಿದ್ದರು.

ಅವರ ಕೈಯಲ್ಲಿ ಪಾರು ಹಾರೆ, ಗುದ್ದಲಿ, ಚಲಿಕೆ, ಪುಟ್ಟಿ ಇದ್ದವು. ಭಗೀರಥನು ನೋಡಿ ಓ.. ತಾತಂದಿರಾ ನೀವೆಲ್ಲರೂ ಪಾರು, ಹಾಕಿ ಹಿಡಿದು, ಹಳ್ಳಕೆರೆ, ಮನೆಯ ಬುನಾದಿಗಳು ತೋಡಿರಿ, ಇನ್ನು ಈ ವೃತ್ತಿಯಿಂದಲೇ ಜೀವಿಸಿರಿ ಎಂದು ಹೇಳಿದ್ದಾನೆ ಸ್ವಾಮಿ!

ಅಂದಿನಿಂದ ಇಂದಿನವರೆಗೂ ನಮಗೆ ಅದೇ ವೃತ್ತಿ ಆಧಾರ ಸ್ವಾಮಿ. ಆದರೆ ಅಂದು, ಭಗೀರಥ ತಂದ ಗಂಗೆ ಕಪಿಲಮುನಿಯಲ್ಲಿ ಬಸ್ಮವಾದುದಕ್ಕೆ ತೋಡಿದ ಭೂಮಿಯೆಲ್ಲಾ ತುಂಬಿತು. ಅದಕ್ಕಾಗಿ ಸಾಗರ ಅನ್ನುತ್ತಾರೆ ದೊರೆ! ಗಂಗೆಯನ್ನು ತಂದು ಕಲಿಸಿದಕ್ಕಾಗಿ ಗಂಗಾಸಾಗರ, ಇದು ಕಲ್ಕತ್ತಾಗೆ ೫೦೦ ಮೈಲು ದೂರದಲ್ಲಿದೆ ಸ್ವಾಮಿ. ಈಗಲು ಸಂಕ್ರಾಂತಿಯ ಮೂರು ದಿನ ಸಮುದ್ರದಲ್ಲಿ ಕಪಿಲ ಮುನಿ ಗುಡಿ ಹೊರಗೆ ಬರುತ್ತದೆ. ಮತ್ತೆ ಮೂರು ದಿನದಲ್ಲಿ ಸಮುದ್ರದಲ್ಲಿ ಗುಡಿ ಮುಳುಗಿ ಹೋಗುತ್ತದೆ ಸ್ವಾಮಿ. ನಮ್ಮ ವಡ್ಡೆ ಉಪ್ಪರ ಕುಲ ಆಗ ಹುಟ್ಟಿದೆ ಸ್ವಾಮಿ. ಅಯ್ಯಾ ನಿಮ್ಮ ಹತ್ತಿರ ಕೆರೆ ತೋಡಬೇಕೆಂದರೂ, ಅಳ್ಳ ತೋಡಲು, ಬುನಾದಿ ತೆಗೆಯಬೇಕೆಂದರೂ ಯಾವುದಾದರೂ ಕೆಲಸ ಇದ್ದರೆ ಹೇಳಿರಿ. ಸ್ವಾಮಿ ಹೇಳಿರಿ ತೆಗೆದು ಬಿಡುತ್ತೇವೆ ಎಂದು ಮುಂದೆ ಹೊರಟು ಹೋಗುವರು.

ಕಣಿ ಹೇಳುವ ವೇಷ (ಕೊರವಂಜಿ) : ಈ ವೇಷವನ್ನು ಯಾರಾದರೂ ಮಾಡಬಹುದು. ಕೆಂಪು, ಬಿಳಿಯ, ಅರಿಷಿಣ ಬಣ್ಣ ಸ್ವಲ್ಪ ಸ್ವಲ್ಪ ಅಂಗೈಯಲ್ಲಿ ಹಾಕಿಕೊಂಡು ಚೆನ್ನಾಗಿ ಕಲಿಸಿ ಮುಖಕ್ಕೆ ಬಳಿದುಕೊಂಡು ಮೇಲೆ ಪೌಡರ್ ಹಾಕಿ, ಕಣ್ಣಿಗೆ ಕಾಡಿಗೆ, ಹಣೆಗೆ ಐವತ್ತು ಪೈಸೆಯ ಸೈಜು ಕೆಂಪು ಬೊಟ್ಟು, ಗಂಧ, ಮೂಗಿಗೆ ಹಳ್ಳು ಕಿವಿಗೆ ಬೆಂಡೋಲೆ, ಕೊರಳಲ್ಲಿ ಸರ, ಸಣ್ಣ ಮೂತಿ ಇರುವ ಒಂದು ಬಿದಿರು ಪುಟ್ಟಿ ತಲೆಯ ಮೇಲಿಟ್ಟುಕೊಂಡು, ಕೈಯಲ್ಲಿ ಒಂದು ಸಣ್ಣ ಕಟ್ಟಿಗೆ ಇದ್ದರೆ ಸಾಕು. ಪುಟ್ಟಿಯಲ್ಲಿ ಒಂದು ಸಣ್ಣ ಏಕತಾರಿ ಇರುತ್ತದೆ. ಕೊರಳಲ್ಲಿ ಜೋಳಿಗೆ, ಇವರಲ್ಲಿ ಎರಡು ಮೂರು ರೀತಿಯಲ್ಲಿರುತ್ತಾರೆ. ಕಾಲಿಗೆ ಬೆಳ್ಳಿಯ ಕಡಗ. ದಂಡ ಹಿಡಿದಿರುವ ಕೈಗೆ ಕಡಗ, ಕೊರಳಿಗೆ ಅಲ್ಯುಮಿನಿಯಂ, ರಾಗಿ, ಇಲ್ಲವೆ ನಾಲ್ಕಾಣಿ ಅಥವಾ ಐವತ್ತು ಪೈಸೆಗಳನ್ನು ಹಾರ ಮಾಡಿಕೊಂಡು ಕೊರಳಲ್ಲಿ, ಕೈಗೆ ಕಟ್ಟಿಕೊಂಡಿರುತ್ತಾರೆ.
ಮಾತುಗಳು : ಕೊರವಂಜಿ ಹೇಳುತ್ತೇವೆಮ್ಮಾ ನಾವು ಕಣಿ ಹೇಳುತ್ತೇವೆ. ನಡೆದಿದ್ದು ನಡೆದಂತೆ, ನಡೆಯುವುದು ಹೇಳುತ್ತೇವೆ. ಇದ್ದಿದ್ದು ಹೇಳುತ್ತೇವೆ, ಇಲ್ಲದ್ದು ಹೇಳುತ್ತೇವೆ. ಇದ್ದಿದ್ದು ಇದ್ದಂತೆ ಇಲ್ಲದ್ದು ಇಲ್ಲದಂತೆ ಹೇಳುತ್ತೇವೆ. ಹೊಟ್ಟೆಯಲ್ಲಿದ್ದ ಮಗು ಹೇಳುತ್ತೇವೆ ಬರುವುದು ಹೇಳುತ್ತೇವೆ. ಹೋಗುವುದು ಹೇಳುತ್ತೇವೆ. ||ಕಣಿ|| ಅಷ್ಟರಲ್ಲಿ ಒಬ್ಬರು ಬಂದು ನನ್ನ ಕೈ ನೋಡಿ ಕಣಿ ಹೇಳು ಎಂದು ಕೇಳುತ್ತಾರೆ.

(ಕೈ ನೋಡಿ) ಓ ಅಮ್ಮಾ ಇತ್ತ ಬಾ ತಾಯಿ! ಈ ಬುಟ್ಟಿಯಲ್ಲಿ ಅಕ್ಕಿ ಹಾಕು. ಕುಂಡಿ ನೆಲಕ್ಕೆ ಹಾಕಿ ಕುಳಿತುಕೋ ನನ್ನ ತಾಯಿ, ಕುಳಿತಿಕೋ. ಅವಳ ಕೈಯನ್ನು ಹಿಡಿದುಕೊಂಡು ಎಡಗೈಯಲ್ಲಿದ್ದ ಸಣ್ಣ ಕಟ್ಟಿಗೆ ಹಿಡಿದುಕೊಂಡು ಹೀಗೆ ಹೇಳುತ್ತಾಳೆ. ಓಯಮ್ಮ ಕಂಚಿ ಕಾಮಾಕ್ಷಿ, ಓಯಮ್ಮ ಮಧುರೆ ಮೀನಾಕ್ಷಿ, ಓಯಮ್ಮ ಕಾಶಿ ವಿಶಾಲಾಕ್ಷಿ, ಓ ಮದರಾಸು ಮಾರೆಮ್ಮ, ಓ ಮೈಸೂರು ಚಾಮುಂಡೇಶ್ವರಿ,

ಓ ಹೈದರಾಬಾದು ಮೈಸಮ್ಮ, ಓ ಗಂಡಿ ಪೋಸಮ್ಮ, ಬೆಜವಾಡ ಕನಕ ದುರ್ಗಮ್ಮ, ಕೊಲ್ಲಾಪುರಿ ದೇವತಾ ಓ ಭದ್ರಕಾಳಿ, ಓ ತಾಯಿ ಅಂಕಾಳೆಮ್ಮ ಅಲಂಪುರ ಜೋಗಲಾಂಬ, ಶ್ರೀಶೈಲ ಭ್ರಮರಾಂಬ, ನಿಜ ಹೇಳು ತಾಯಿ ನಿಜ ಹೇಳು ಇದ್ದಿದ್ದು ಇದ್ದಾಂಗೆ ಹೇಳು ಇಲ್ಲದ್ದು ಇಲ್ಲದಂತೆ ಹೇಳು. ಅಮ್ಮಾ ನಮ್ಮ ತಾಯಿ ನಿನ್ನ ಕೈಯ್ಯಿ ಬಂಗಾರದಂತಿದೆ. ಈ ಕೈ ಬೆಳೆಯುವ ಬೆಳೆ, ದಾನ ಧರ್ಮಗಳ ಮಾಡು, ಹತ್ತು ಮಂದಿಗೆ ಸಹಾಯಮಾಡು, ಹತ್ತುಮಂದಿಗೆ ಕೊಡುವ ಕೈ, ನಿನ್ನ ಕೈಯಲ್ಲಿ ಇಗೋ ಕೇಳಿದಷ್ಟು ಸಂತಾನ ಇಷ್ಟು ಹೆಣ್ಣು ಸಂತಾನ. ನೀನು ನಂಬಿದವನು ಇಷ್ಟು ದಿನ ಚೆನ್ನಾಗಿಯೇ ನೋಡಿಕೊಂಡಿದ್ದಾನೆ. ಆದರು ಮುಂದೆ ಇನ್ನೊಂದು ಗಂಡಾಂತರವಿದೆ ತಾಯಿ. ದಿಗಿಲು ಏತಕ್ಕೆ ನಮ್ಮಮ್ಮ ನಿನಗೆ ಈತನ ಸಹಾಯವಿದ್ದರೆ ಸಾಕು (ಭುಜವನ್ನು ತೋರಿಸುತ್ತಾಳೆ.) ಭುಜವೆಂದರೆ ಭಾವ ಗುರುತು ಇದೆಯಾ ನಿನಗೆ ನಿನ್ನ ಕಡೆಯವರೇ ಸಹಾಯ. ಅಂದ್ರೆ ಅತ್ತೆ ಮನೆಯವರೆಂದು ಅರ್ಥ. ಈಗ ಹುಚ್ಚುತನಕ್ಕೆ ನಿನ್ನ ಮನಸ್ಸು ಒಂದು ಅಂದುಕೊಳ್ಳುತ್ತದೆ. ಅದು ಆಗುತ್ತದೆಯೇ ಇಲ್ಲವೆಂದು ಅನುಮಾನ ಕೂಡ ಇದೆ. ಆ ಕೆಲಸ ನಿನಗೆ ತಪ್ಪದೆ ನೆರವೇರುತ್ತದೆ. ಭಾಮಾ ನಾನು ಜೋತಿಷ್ಯ ಬ್ರಹ್ಮಜ್ಞಾನಿಗಳಿಗೆ ಹೇಳಿದ್ದೇನೆ. ಯೋಗಿಗಳಿಗೆ ಹೇಳಿದ್ದೇನೆ. ಭೋಗಿಗಳಿಗೆ ಹೇಳಿದ್ದೇನೆ. ತ್ರಿಪುರಾಸುರ ಈಶ್ವರನಿಗೂ ಹೇಳಿದ್ದೇನೆ. ಸಮುದ್ರ ಮಂಥನ ರಹಸ್ಯ ನಾನೇ ಹೇಳಿದ್ದು. ಸೃಷ್ಟಿ ರಹಸ್ಯವೆಲ್ಲಾ ಬ್ರಹ್ಮದೇವನಿಗೆ ನಾನೇ ಹೇಳಿದ್ದು. ಇಂದ್ರಾದಿ ದೇವತೆಗಳಿಗೆ ಜೋತಿಷ್ಯ ಹೇಳಿದ್ದು ನಮ್ಮ ಕುಲದವರು. ನಾನು ಹೇಳಿದ್ದು ಟಕ್ಕುನ ನಡೆಯುತ್ತದೆ. ನಂಬುವುದಿಲ್ಲವೇ ಪಾಪ ನಂಬು. ಓ ಅಯ್ಯ ಈ ಕಡೆ ಬಾ. ನಿಂದು ನೋಡಿಸು, ನಾನು ನೋಡುತ್ತೇನೆ ಕೈ. ಓ ಅಯ್ಯಾ ನಿನ್ನ ಗುಣ ಬಹಳ ಒಳ್ಳೆಯದು ನೀನು ಒಳ್ಳೆಯವನೇ, ಒಳ್ಳೆಯದಕ್ಕೆ ಹೋಗಿ ಕೆಟ್ಟದ್ದು ತರುತ್ತೀ. ಸ್ನೇಹಿತರನ್ನು ನಂಬಬೇಡ. ನಿಮ್ಮ ಬಂಧುಗಳನ್ನು ನಂಬಬೇಡ. ನಿನ್ನ ಮನಸ್ಸನ್ನೇ ನಂಬು. ಇದೋ ಇದೇ ದಿಕ್ಕಿನಿಂದ ನಿನಗೆ ಕೇಡುಬರುತ್ತದೆ ಎಂದು ಒಂದು ದಿಕ್ಕಿಗೆ ಕೈಮಾಡಿ ತೋರಿಸಿ ಅನುಮಾನ ಬರುವ ಹಾಗೆ ಮಾಡುವುದು. ನೀನು ನಂಬಿದವನು ನಿನಗೆ ಒಳ್ಳೆಯದು ಮಾಡುತ್ತಾನೆ. ಕೇಡು ನಡೆಯುವುದಿಲ್ಲ. ನಂಬು ಬಾಲಕ ನನ್ನ ಮಾತು ನಂಬು.

ಓ ಪೋರಿ ಇಲ್ಲಿ ಬಾ ನಿನಗೆ ಒಬ್ಬರ ಮೇಲೆ ಮನಸ್ಸು ಇದೆ. ನಿನ್ನ ಮೇಲೆ ಇನ್ನೊಬರ ಮನಸ್ಸು ಇದೆ. ನಿನಗೆ ಮೂತಿಯ ಮೇಲೆ ಮೀಸೆ ಇದ್ದವರು ಮೂವರು ಹೀಗೆ ಹೇಳಿ ಹೋಗುತ್ತಿರುತ್ತಾರೆ. ಇವರಿಗೆ ತಬಲ ಹಾರ್ಮೋನಿಯಂ, ತಾಳ ಬೇಕಿಲ್ಲ, ಒಬ್ಬರೇ ಇದ್ದರೆ ಸಾಕು. ಇಬ್ಬರಿದ್ದರೂ ನಡೆಯುತ್ತದೆ. ಹೀಗೆ ಇದನ್ನು ಕೊರಸರ ವೇಷವೆಂತಲೂ ಕರೆಯುತ್ತಾರೆ.

ಹಳ್ಳಿಳ್ಳಿ ವೇಷ : ಇದು ವೇಷ ಮತ್ತು ಸಂಪ್ರದಾಯ ಎರಡನ್ನು ಹೊಂದಿದೆ. ಈ ವೇಷ ದಿನಾಲೂ ಹಾಕುವುದಿಲ್ಲ. ಪೀರಲ ಹಬ್ಬದ ಸಮಯದಲ್ಲಿ ಮಾತ್ರ ಧರಿಸುತ್ತಾರೆ.

ಈ ವೇಷ ಎಲ್ಲರೂ ಧರಿಸುವುದಿಲ್ಲ. ಅವರವರ ತಂದೆತಾಯಿಗಳು, ಮಗುವಾಗಿದ್ದಾಗ ಹುಡುಗರಿಗೆ ಜ್ವರ, ಪೀಡೆ, ರೋಗ ಬಂದರೆ ವಸ್ತೂರುಸ್ವಾಮಿಯನ್ನು ಬೇಡಿಕೊಂಡು ನನ್ನ ಮಗ ವೇಷ ಹಾಕುವಂತಾದ

ಮೇಲೆ ನಿನ್ನ ಹಬ್ಬಕ್ಕೆ ಹಳ್ಳಿಹಳ್ಳಿ ವೇಷ ಮಾಡಿಸುತ್ತೇವೆ ಎಂದು ಅರಕೆ ಮಾಡಿಕೊಂಡಿರುತ್ತಾರೆ. ತಾವು ಎಷ್ಟು ವರ್ಷ ಹರಕೆ ಮಾಡಿಕೊಂಡಿರುತ್ತಾರೋ ಅಷ್ಟು ವರ್ಷ ಇಂತಹ ವೇಷ ಹಾಕಿಸುತ್ತಾರೆ.



ಹಳ್ಳಳ್ಳಿ ವೇಷ

ಈ ವೇಷ ಹೇಗಿರುತ್ತದೆಂದರೆ ತಲೆಗೆ ಲೋಟಾಕಾರದ ಟೋಪಿ ಹಾಕಿಕೊಂಡಿರುತ್ತಾರೆ. ತಲೆಗೆ ಟೋಪಿ ಹಾಕಿಕೊಂಡಾಗ ಮಾತನಾಡುವ ಹಾಗಿಲ್ಲ. ಮಾತನಾಡಬೇಕೆಂದರೆ ತಲೆಯ ಮೇಲಿನ ಟೋಪಿ ತೆಗೆದು ಮಾತನಾಡಬೇಕು. ಮುಖಕ್ಕೆ ಕರೀಮಸಿ ಹಚ್ಚಿಕೊಂಡಿರುತ್ತಾರೆ. ಕೊರಳಲ್ಲಿ ಗೆಜ್ಜೆ ಸರ ಹಾಕಿಕೊಂಡಿರುತ್ತಾರೆ. ಒಂದು ಒಲ್ಲಿಯನ್ನು ಸುತ್ತಿಕೊಂಡು ಅದನ್ನು ಲೊಡ್ಡುಮಾಡಿಕೊಂಡು ಜನರನ್ನು ಒಡೆಯುವುದು ಕೈಚಾಚುವುದು, ಹೊಡೆಸಿಕೊಂಡವರು ೫೦ ಪೈಸೆಯೋ ಒಂದು ರೂಪಾಯಿಯೋ ದಕ್ಷಿಣ ಕೊಡುತ್ತಾರೆ. ಹೀಗೆ ಹಳ್ಳಳ್ಳಿ ವೇಷ ಹಾಕಿಸಿಕೊಂಡವರಿಂದ ಹೊಡೆಸಿಕೊಂಡರೂ ಜ್ವರ, ಪೀಡೆ, ಪಿಶಾಚಿಗಳು ತೊಲಗುತ್ತವೆಂದು ಸಹ ಹೇಳುತ್ತಾರೆ. ಈ ವೇಷದ ಛಾಯಾಚಿತ್ರ ಅನುಬಂಧದಲ್ಲಿ ನೀಡಲಾಗಿದೆ.

೬.೨. ಬುರ್ರ ಕಥಾಮೇಳ

ಕರ್ನಾಟಕ ಮತ್ತು ಆಂಧ್ರಪ್ರದೇಶಗಳೆರಡರಲ್ಲಿಯೂ ಹಲವಾರು ಜನಪದ ಕಲಾ ಪ್ರಕಾರಗಳಲ್ಲಿ ಸಾಮ್ಯತೆ ಕಂಡುಬರುತ್ತವೆ. ಅಂತಹ ಕಲೆಗಳಲ್ಲಿ ಬುರ್ರ ಕಥಾಮೇಳವೂ ಒಂದಾಗಿದೆ. ಈ ಕಲೆ ಬಳ್ಳಾರಿ ಮತ್ತು ಆಂಧ್ರ ಗಡಿಭಾಗದಲ್ಲಿ ಅತ್ಯಂತ ಪ್ರಸಿದ್ಧ. ಆಂದ್ರಪ್ರದೇಶದಲ್ಲಿ ಬುರ್ರಕಥೆಗಳನ್ನು 'ಜಂಗಂ' ಕಥಲು ಎಂದು ಕರೆಯುತ್ತಾರೆ. 'ಸೋಮನನ ಕಾಲದಲ್ಲಿ ವೀರಶೈವ ಧರ್ಮ ಪ್ರಚಾರದ ಕಥೆಗಳನ್ನೇ 'ಜಂಗಂ' ಕಥೆಗಳೆಂದು ಕರೆದರೆ, ಇಂದು ಭಕ್ತಿಯ ಸಲುವಾಗಿ 'ಬುಡಿಗಿ ಜಂಗಾಲು'ರು ಹೇಳುವ ತಂದಾನ ಕಥೆಗಳೇ 'ಜಂಗಂ' ಕಥೆಗಳು ಆಗಿವೆ''[೧] ಎಂದು ಹೇಳಿದ್ದಾರೆ. ಜಂಗಾಲು ಮೊದಲು ಶಿವನನ್ನು ಕುರಿತವುಗಳೇ ಆದರೂ ಬರು ಬರುತ್ತಾ ಕಾಲಕ್ರಮೇಣ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಶೈವೇತರ ಕಥೆಗಳನ್ನು ಕೂಡ ಹೇಳುತ್ತಾರೆ.''[೨]

ಈ ಮೇಳದಲ್ಲಿ ಬಹುಮುಖ್ಯವಾಗಿ ಮೂರು ಜನ ಕಲಾವಿದರಿರುತ್ತಾರೆ. ''ಪ್ರಧಾನ ಗಾಯಕರು ನಡುವೆ ನಿಂತು ಕಥೆಯನ್ನು ಹಾಡುತ್ತಾ ತನ್ನ ಕೊರಳಿನಲ್ಲಿ ನೇತು ಹಾಕಿಕೊಂಡ ತಂಬೂರಿಯನ್ನು

[illegible]

[illegible]

[illegible]



ಆಂಧ್ರಪ್ರದೇಶದ ಬುರ್ರಕಥಾ ತಂಡ

ನುಡಿಸುತ್ತಾನೆ. ಆಗ ಪಕ್ಕದಲ್ಲಿ ನಿಂತ ಇಬ್ಬರು ಗುಮ್ಮಟೆ ನುಡಿಸುತ್ತಾ ಹಿಮ್ಮೇಳವನ್ನು ಹಾಡಿ, ಪ್ರಧಾನ ಹಾಡುಗಾರನ ಕಥಾ ನಿರೂಪಣೆಯನ್ನು ಬೆಳಸುತ್ತಾರೆ. ಕೆಲವೊಮ್ಮೆ ಪ್ರಧಾನ ಗಾಯಕನು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಎಡಗೈ ತೋರು ಬೆರಳು ಹಾಗೂ ಹೆಬ್ಬೆರಳುಗಳಿಗೆ ಗಗ್ಗರಿಯನ್ನು ಧರಿಸಿ, ಎಡಗೈ ಕಿರುಬೆರಳಿಗೆ ಕರವಸ್ತ್ರವನ್ನು ಕಟ್ಟಿಕೊಂಡು ಕುಣಿಸುತ್ತಿರುತ್ತಾನೆ."[5] ತಂಬೂರಿ ಮೀಟುತ್ತಾ ಕಥೆ ಹೇಳುತ್ತಾ ಕುಣಿಯುತ್ತಿರುತ್ತಾನೆ. ಈತನ ಜೊತೆಗಿರುವ ಸಹ ಕಲಾವಿದರೂ ಗುಮ್ಮಟೆ ನುಡಿಸುತ್ತಾ ಓಲಾಡುತ್ತಾ ಗುಮ್ಮಟೆಯನ್ನು ಬಾರಿಸುತ್ತಿರುತ್ತಾರೆ. ಹಾಡುಗಳು, ಸಂಭಾಷಣೆ, ಹಾವಭಾವಗಳು, ಧ್ವನಿಯ ಏರಿಳಿತ ಮುಖ್ಯ ಕಥೆಗಾರನ ಮೇಲಿರುತ್ತದೆ.

ತಟ್ಟಿ ಬಾರಿಸುವ ವಾದ್ಯಗಳಾದ ಡುಮುಕಿ ಅಥವಾ ಡಿಂಕಿ ಮತ್ತು ಗುಮ್ಮಟೆ ಒಂದು ತಂಬೂರಿಯ ವಾದ್ಯಗಳಿರುತ್ತವೆ. ಹಿಮ್ಮೇಳದವರು ತಂದಾನನ ತಾನ ತಂದಾನನ ಎಂದು ಅನುಕರಿಸುವುದರಿಂದ ಈ ಕಥೆಗಳಿಗೆ ತಂದಾನ ಕಥೆಗಳೆಂತಲೂ ಕರೆಯುತ್ತಾರೆ.

ಮುಖ್ಯ ಕಥೆಗಾರರು ಮಾತ್ರ ಅಂದವಾಗಿ ಸಿಂಗರಿಸಿಕೊಂಡಿರುತ್ತಾರೆ. ಕರ್ನಾಟಕದಲ್ಲಿ ತಲೆಗೆ ಪೇಟ, ನಿಲುವಂಗಿ ಅದರ ಮೇಲೆ ಕರಿಯ ಕೋಟು, ಹೆಗಲಿಗೆ ಝುರಿಶಲ್ಯ ಇಲ್ಲವೇ ಹಂಚಿನವಲ್ಲಿ, ಕಾಲಲ್ಲಿಗೆಜ್ಜೆ, ಎಡಗೈ ತೋರು ಬೆರಳು ಹೆಬ್ಬೆರಳಿಗೆ ಗಗ್ಗರಿ, ಎಡಗೈ ಕಿರು ಬೆರಳಿಗೆ ಕರಿವಸ್ತ್ರವನ್ನು ಇಳಿಬಿಟ್ಟುಕೊಂಡು ಹಣೆಗೆ ವಿಭೂತಿ, ಕುಂಕುಮ ಹಚ್ಚಿರುತ್ತಾನೆ. ಆಂಧ್ರಪ್ರದೇಶದಲ್ಲಿ ಕಾಲಿಗೆ ಗೊಂಡೆ ಇದ್ದ ಗೆಜ್ಜೆಸರ, ಬಣ್ಣ ಬಣ್ಣದ ಝುರಿ ದೋತುರ, ಬಣ್ಣ ಬಣ್ಣದ ಝುರಿ ನಿಲುವಂಗಿ ನಡುವಿಗೆ ಒಪ್ಪುವ ಬಣ್ಣದ ನಡುವು ಕಟ್ಟು, ತಲೆಗೆ ಝುರಿ ರುಮಾಲು, ತಲೆಯಲ್ಲಿ ಬಿಳಿಯ ಬಣ್ಣದ ಪುಚ್ಚ ಹಣೆಯಲ್ಲಿ ವಿಭೂತಿ, ಕುಂಕುಮ, ಕೊರಳಿನಲ್ಲಿ ರುದ್ರಾಕ್ಷಿಸರ ಬಲ ಕೈಯಲ್ಲಿ ತಂಬೂರಿ, ಎಡಗೈ ಹೆಬ್ಬೆರಳಿಗೆ ಗಗ್ಗರಿ ಕಿರುಬೆರಳಿಗೆ ಕರವಸ್ತ್ರದ ಮೂಲೆಯನ್ನು ಕಟ್ಟಿಕೊಂಡು ಇಳೆ ಬಿಟ್ಟಿರುತ್ತಾರೆ. ಮುಖ್ಯ ಕಥೆಗಾರನ ವೇಷ ಹೀಗಿದ್ದಾಗ ಉಳಿದ ಸಹ ಕಲಾವಿದರು ಸಾದಾರಣವಾಗಿರುತ್ತಾರೆ.

ಕರ್ನಾಟಕಾಂಧ್ರ ಗಡಿಭಾಗದಲ್ಲಿ ಕಂಡುಬರುವ ಬುರ್ರ ಕಥಾ ಸಂಪ್ರದಾಯಕ್ಕೂ ದಕ್ಷಿಣ ಕರ್ನಾಟಕದ 'ಕರಪಾಲಮೇಳ'ಕ್ಕೂ ಮೂಲ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ 'ಜಂಗಂ ಕಥೆ'ಯೇ ಎಂಬುದರಲ್ಲಿ

ಅನುಮಾನವಿಲ್ಲ ಎಂದು ಹೇಳುತ್ತಾರೆ.''[೪] ಕೆಲವು ತೆಲುಗರು 'ಶಾರದಾ ಕಥಲು'ಗೆ ಹೋಲಿಸಿದ್ದಾರೆ. ಇವರು ಯಾವುದೇ ಒಂದು ಸಮಯದಲ್ಲಿ ಈ ಸಮುದಾಯದಿಂದ ಸಿಡಿದಿದ್ದಾರೆ ಎಂದು ಇವರಿಬ್ಬರಲ್ಲಿ ಸಾಮ್ಯತೆಯನ್ನು ಹುಡುಕಲು ಪ್ರಯತ್ನಿಸಿದ್ದಾರೆ. ಶಾರದ ಕಥೆಗಳಿಗೆ, 'ಜಂಗಂ' ಕಥೆಗಳಿಗೆ ಇರುವ ವ್ಯತ್ಯಾಸಗಳು ಕೂಡ ಚರ್ಚಿಸಿ, ಬುಡಿಗೆ ಜಂಗಾಲರನ್ನೇ ಶಾರದಗಾಳ್ಳು ಎಂದು ಕರೆಯುತ್ತಾರೆಯೇ ಹೊರತು, ಶಾರದ ಕಥೆಯವರು ಬೇರೆ ಕುಲದವರು ಅಲ್ಲವೆಂದು ರಾಯಲಸೀಮೆ ಪ್ರಾಂತ್ಯದಲ್ಲಿ ಈ ಕಥೆಗಳನ್ನು ತಂದಾನ ಕಥೆಗಳೆಂದು ಕರೆಯುತ್ತಾರೆ.''[೫] ಎಂದು ಸ್ಪಷ್ಟ ಪಡಿಸಿರುತ್ತಾರೆ. ಕೆಲವರು ಇತ್ತಾಳಿಯ ಬುಡಿಗೆಗಳನ್ನು ಉಪಯೋಗಿಸಿದರೆ ಕೆಲವರು ಮಣ್ಣಿನ ಬುಡಿಗೆಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ತಂಬೂರಿಯ ಮೇಲೆ 'ಶಾರದ' ಚಿತ್ರವಿರುತ್ತಿದ್ದವಂತೆ ಆ ಚಿತ್ರಕ್ಕೆ ಪೂಜೆ ಮಾಡಿ ಕಥೆ ಪ್ರಾರಂಭಿಸುತ್ತಿದ್ದರೆಂದು, ಅದಕ್ಕಾಗಿ ನಮಗೆ 'ಶಾರದಗಾಳ್ಳು' (ಶಾರದೆಯವರು) ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ.

ಬುರ್ರಕಥೆಯವರು ಹಳ್ಳಿ ಹಳ್ಳಿಗಳಲ್ಲಿ ಕಾಣಿಸುತ್ತಾರೆ. ಪೂರ್ವದಲ್ಲಿ ಒಂದು ಸ್ಥಳದಲ್ಲಿ ದಿನಗಟ್ಟಲೆ ಕಥೆಗಳನ್ನು ಹೇಳುವವರು. ಕಾಲಕ್ರಮದಲ್ಲಿ ಅಷ್ಟು ಅವಧಿ ಇಲ್ಲದಿರುವ ಇಂದಿನ ಆಧುನಿಕ ಪ್ರಸಾರ ಮಾಧ್ಯಮಗಳ ಪ್ರಭಾವದಿಂದ ಇಂದು ಒಂದು ಗಂಟೆಯೋ ಎರಡು ಗಂಟೆಯೋ ಕಥೆ ಹೇಳಿಸಿಕೊಂಡು ಆನಂದಿಸುತ್ತಿದ್ದಾರೆ. ಊರಿಂದ ಊರಿಗೆ ಅಲೆಯುವುದಲ್ಲದೆ ಯಾರಾದರೂ ಆಹ್ವಾನ ನೀಡಿದರೂ ಬಂದು ಮೇಳ ನೆಡಸಿಕೊಡುತ್ತಾರೆ.

ಮೇಳದಲ್ಲಿ ಭಾಗವಹಿಸುವವರು ಸಾಮಾನ್ಯವಾಗಿ ಗಂಡ ಕಥೆ ಹೇಳಿದರೆ ಹೆಂಡತಿ ಬುಡಿಗೆ ಭಾರಿಸುತ್ತಾಳೆ. ಇವರಲ್ಲಿ ಕೆಲವರು ಬಹು ಪತ್ನಿತ್ವದಿಂದ ವಂತಿಕೆ ಭಾರಿಸುವ ಇಬ್ಬರೂ ಆತನ ಹೆಂಡತಿಯರಾಗಿರುವ ಸಂದರ್ಭಗಳೂ ಹೆಚ್ಚಿವೆ. ಕೆಲವು ಸಂದರ್ಭಗಳಲ್ಲಿ ತಂದೆ ಮಕ್ಕಳು, ಅಣ್ಣತಮ್ಮಂದಿರು, ಮಾವಅಳಿಯಂದಿರು ಮೇಳ ಕಟ್ಟಿರುತ್ತಾರೆ. ಮೂವರು ಸ್ತ್ರೀಯರೇ ಸೇರಿ ಕೂಡ ಕಥೆಯನ್ನು ಹೇಳಿ ಮೇಳ ನಡೆಸಿಕೊಡುತ್ತಾರೆ. ಈ ಪದ್ಧತಿ ರಾಯಲಸೀಮಯದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಬುಡಗ ಜಂಗಾಲರಿಗೆ ಸಾಮಾನ್ಯವಾಗಿ ಗಂಡಸರು ವೇಷಗಳನ್ನು ಹಾಕಿದರೆ ಹೆಂಗಸರಿಗೆ ಕಥೆ ಹೇಳುವುದು ವೃತ್ತಿ. ಈ ಪದ್ಧತಿ ಕರ್ನಾಟಕದಲ್ಲಿ ಹೆಚ್ಚು ಕಂಡುಬರುತ್ತದೆ.

ಇವರು ವೀರ, ಅದ್ಭುತ, ಕರುಣ ಕಥೆಗಳನ್ನು ಹೆಚ್ಚು ಹೇಳುತ್ತಾರೆ. ಕೆಲವು ಕಥೆಗಳಲ್ಲಿ ನವರಸಗಳೂ ಹರಿದಿವೆ. ಇವರಲ್ಲಿ ಪ್ರಚಾರವಿರುವ ಕಥೆಗಳೆಲ್ಲಾ ತೆಲುಗು ಭಾಷೆಯಲ್ಲಿಯೇ ಇವೆ. ಕೆಲವು ಕಥೆಗಳು ಮಾತ್ರ ಕನ್ನಡದಲ್ಲಿ ಭಾಷಾಂತರವಾಗಿರುವುದು ಕಂಡುಬರುತ್ತದೆ. ಒಟ್ಟು ಆಂಧ್ರ ಮತ್ತು ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಕಥೆಗಳ ಸಂಖ್ಯೆ ೮೮ ಆದರೆ ಅಷ್ಟನ್ನೂ ಇಂದು ಹಾಡುತ್ತಿಲ್ಲ. ಹಲವಾರು ಕಥೆಗಳು ಮರೆತು ಹೋಗಿ ಕೆಲವನ್ನು ಮಾತ್ರ ಹಾಡುತ್ತಿದ್ದಾರೆ. ಈ ಕಥೆಗಳ ಮುಖ್ಯ ಉದ್ದೇಶ ಜನಪದರಿಗೆ ಭೋದನೆ ವಿನೋದ, ಹಾಗೂ ವೈವಿಧ್ಯವನ್ನು ಕೊಡುವುದು. ಪ್ರೇಕ್ಷಕರನ್ನು ಇಡೀ ರಾತ್ರಿ ಕುಳಿತು ನೋಡುವಂತೆ ಮಾಡುತ್ತಾರೆ.

ಈ ಕಲೆ ಕಾಕತೀಯರ ಹಾಗೂ ಅವರ ಆನಂತರದ ಕಾಲದಲ್ಲಿ ಶೈವರು ಧಾರ್ಮಿಕ ಪ್ರಚಾರದ ಉದ್ದೇಶದಿಂದ ಇದನ್ನು ಪೂರ್ತಿಯಾಗಿ ವಶಪಡಿಸಿಕೊಂಡರು. ಶೈವ ಧರ್ಮದ ಪ್ರಬಲ ಶಾಖೆಯಾದ ವೀರಶೈವ ಧರ್ಮದ ಪ್ರಚಾರಕ್ಕಾಗಿ ಮತ್ತು ಜೈನ ವೈಷ್ಣವ ಧರ್ಮವನ್ನು ವಿರೋಧಿಸಲು ಈ ಕಲೆಯನ್ನು ಬಳಸಲಾಯಿತು. ಅವರ ವಸ್ತು ಭಂಡಾರದಲ್ಲಿ ಪರಮೇಶ್ವರನ ಕಥೆಗಳೇ ಮುಖ್ಯವಾಗಿದ್ದವು. ಈ ಶೈವ ಕಥನ ಗೀತೆಗಳಿಗೆ ಹೊಂದಿಕೆಯಾಗುವಂತೆ ಹಾಗೂ ಪ್ರತಿಸ್ಪರ್ಧಿಗಳಂತೆ ವಿಷ್ಣು ಭಕ್ತರಾದ ವೈಷ್ಣವರು ಸಹ ಇಂತಹ ವಾಚನಗಳನ್ನು ಪ್ರಾರಂಭಿಸಿದರು. ಇದು ಕರ್ನಾಟಕದಲ್ಲಿ ಶರಣರ ಚಳುವಳಿಯಿಂದ ಮತ್ತಷ್ಟು ಪ್ರೇರಣೆ ಪಡೆಯಿತು. ಇಂತಹ ಸಂದರ್ಭವನ್ನು ಅಂಬಿಗರ ಚೌಡಯ್ಯನ ವಚನದಲ್ಲಿ ಕಾಣಬಹುದು.

ಬುರ್ರಕಥೆಗಳ ಪಟ್ಟಿ ಕೆಳಗಿನಂತಿವೆ.

೧. ಅಪರೂಪ ರಾಜಲು ಕಥ
೨. ಅಮರ ಮೇಘ ಮಹಾರಾಜು ಕಥ
೩. ಅಲ್ಲಿರಾಣಿ ಕಥ
೪. ಆಡಬಿಡ್ಡ ಶಂಕರಮ್ಮ ಕಥ
೫. ಆರುಟ್ಲರಾಮಚಂದ್ರಾರೆಡ್ಡಿ ಕಥ
೬. ಅರೆ ಮರಾಟಿಲ ಕತೆ
೭. ಈಡಿಗೋಳ್ಳ ಸತ್ಯಮ್ಮ ಕಥ
೮. ಎರಕುಲ ನಾಂಚಾರಿ ಕಥ
೯. ಎಲ್ಲಮ್ಮ ಕಥ
೧೦. ಏಕ ಚಕ್ರವರ್ತಿ
೧೧. ಕನಕತಾರ
೧೨. ಕಮಲ ಸಂಗಯ್ಯ
೧೩. ಕಮ್ಮವಾರಿ ಪಡತಿ
೧೪. ಕಲಿಯುಗ ಪೊನ್ನ
೧೫. ಕಾಂತಾಮತಿ
೧೬. ಕಾಂಬೋಜರಾಜ ಕಥ
೧೭. ಕಾಟಮರಾಜು ಕಥ
೧೮. ಕಾಮಮ್ಮ ಕಥ
೧೯. ಕುಂಭಂ ಚೆನ್ನಾರೆಡ್ಡಿ ಕಥ
೨೦. ಕುಮಾರರಾಮನ ಕಥ
೨೧. ಕುಸುವುಕೋಮಲಿ
೨೨. ಗಾಂಧಾರಿ ಕಥ
೨೩. ಗಾರ್ಲಮನಿಕೋಟೆಕಥ
೨೪. ಗೋಲಸು ಮಹಾರಾಜು ಕಥ
೨೫. ಗೌಂಡ್ಲ ಅಂಜಯ್ಯ ಕಥ
೨೬. ಚಿನ್ನಮ್ಮ ಕಥ
೨೭. ಜರಸಂದನ ಕಥ
೨೮. ತಲವಂಚನಿ ವೀರುಡು ಕಥ
೨೯. ತಾಬೇಲು ಪುತ್ರುಡು ಕಥ
೩೦. ದೇಶಿಂಗು ರಾಜು ಕಥ
೩೧. ನರಕಾಸುರ ವಧ
೩೨. ನಲಚಕ್ರವರ್ತಿ
೩೩. ನಲ್ಲತಂಗಮಹಾರಾಜು ಕಥ
೩೪. ನವ ಭೋಜರಾಜು ಕಥ
೩೫. ನಾಗಿರೆಡ್ಡಿ ಕಥ
೩೬. ನೀಲರೂಪ ನೀಲನೇನ ಕಥ
೩೭. ಪಂಚಪಾಡವುಲ ಕಥ
೩೮. ಪೂರ್ವ (ಪೂರೂರುವ) ಚಕ್ರವರ್ತಿ ಕಥ
೩೯. ಬಂಗಾರು ತಿಮ್ಮರಾಜು ಕಥ
೪೦. ಬಲ್ಲೂರಿ ಕೊಂಡಯ್ಯ
೪೧. ಬಾಲನಾಗಮ್ಮ
೪೨. ಬೀರಪ್ಪ ಕಥ
೪೩. ಬುಡ್ಡಾ ವೆಂಗಳರೆಡ್ಡಿ
೪೪. ಬೆಬ್ಬುಲಿಯುದ್ದಂ
೪೫. ಬಬ್ರುವಾಹನ
೪೬. ಮಾಂದಾತ
೪೭. ಮುಂಗಮೋಹನ ಮಹಾರಾಜು ಕಥ
೪೮. ಮುದ್ದುರಾಮನ್ನ
೪೯. ಮೈನಾವತಿ
೫೦. ರತ್ನನೇನು ಮಹಾರಾಜು ಕಥ
೫೧. ರಾಜೌರಂಪಾಲಕ
೫೨. ರಾಮುಲಮ್ಮ ಲಂಬಾಡಿ ಕಥ
೫೩. ರೇಣುಗುಂಟ ರಾಮಿರೆಡ್ಡಿ
೫೪. ಲಕ್ಕಕೋಟ ವೀರುಲಕಥ
೫೫. ಲಕ್ಷಮ್ಮ ಕಥ
೫೬. ವಕನೂರಿ ವೆಂಕಟರೆಡ್ಡಿ ಕಥ
೫೭. ವೀರ ಬಲವಂತ

೫೮. ವೇಶ್ಯ ನಾಗಮ್ಮ
೫೯. ಶಂಖ ಮಹಾರಾಜು ಕಥ
೬೦. ಶಿವಕುಮಾರಿನಿ ಕಥ
೬೧. ಶೀಲಮೂರಿ ಚಿನ್ನಮ್ಮ ಕಥ
೬೨. ಸದಾಶಿವರೆಡ್ಡಿ ಕಥ
೬೩. ಸನ್ಯಾಸಮ್ಮ
೬೪. ಸರ್ವಾಯಿ ಪಾಪುಡು
೬೫. ಸಾರಂಗಧರ ಕಥ
೬೬. ಸಿರಿಕೊಂಡ ಮಹಾರಾಜು ಕಥ
೬೭. ಸುಗುಣಾವತಿ ಕಥ
೬೮. ಸುಬ್ಬಿರೆಡ್ಡಿ ಕಥ
೬೯. ಸುರಾಸಿಂಧು ರಾಜುಲ ಕಥ
೭೦. ಸೂರ್ಯ ಚಂದ್ರರಾಜುಲ ಕಥ
೭೧. ಹರಿಶ್ಚಂದ್ರ ಕಥ
೭೨. ಹರ್ಕ್ಯಾರುಬಂಟು
೭೩. ಕಲ್ಲಿಚರ್ಲ ನರಸಿಂಹರೆಡ್ಡಿ
೭೪. ಚಿನ್ನಪ್ಪರೆಡ್ಡಿ ಕಥ
೭೫. ಪಿಲಾಯಿ ಪಲ್ಲಿ ಪಾಪಿರೆಡ್ಡಿ ಕಥ
೭೬. ಭಟ್ಟಿ ವಿಕ್ರಮಾರ್ಕ
೭೭. ಸವಾರಮ್ಮ
೭೮. ವಂದರಿ ಎಂಕನ್ನ ಕಥ
೭೯. ಸುರೋಜನಮ್ಮ
೮೦. ಮೋಹಿನಿ ರುಕ್ಮಾಂಗದ
೮೧. ಈಡಿಗೆ ದೇವಮ್ಮ
೮೨. ಡ್ರೈವರುಗಾರಿ ಕಥ
೮೩. ದೈವಾದೀನಂಕಥ
೮೪. ಲಕ್ಷ್ಮಣರಾಯುನಿಕಥ
೮೫. ಅಪ್ಪನ್ನ ಪಲ್ಲಿ ರೈಲು ಪಡ್ಡಕಥ
೮೬. ತೆಲುಗು ಸತ್ತಮ್ಮಕಥ
೮೭. ಪತಿಪೂರ್ವ ಚಂದ್ರಕಾಂತ ಕಥ

ಧರ್ಮ ಪ್ರಚಾರಕ್ಕೆಂದು ಹುಟ್ಟಿಕೊಂಡ ಈ ಕಲೆಗಾರರು ಕಾಲಕ್ರಮೇಣ ಚರಿತ್ರೆಯಲ್ಲಿ ನಡೆದಂತಹ ಘಟನೆಗಳನ್ನೇ ಮತ್ತು ಅವರ ಜೀವನ ಚರಿತ್ರೆಯನ್ನೇ ಕಥೆಯನ್ನಾಗಿ ಪರಿವರ್ತಿಸಿಕೊಂಡಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಚರಿತ್ರಾತ್ಮಕ ಕಥೆಗಳೇ ಹೆಚ್ಚು ಚಾಲ್ತಿಯಲ್ಲಿವೆ.

ಇವುಗಳ ಪ್ರದರ್ಶನಕಾರರು ಕಸುಬುಗಾರರಾಗಿರುತ್ತಾರೆ. ಈ ವೃತ್ತಿಯಿಂದಲೇ ಇವರ ಹೊಟ್ಟೆ ತುಂಬಬೇಕು. ಈಗಲೂ ಇಂತಹ ಕುಟುಂಬಗಳು ಇವೆ. ಪ್ರೇಕ್ಷಕರ ಅಭಿರುಚಿಯಲ್ಲಿ ಬದಲಾವಣೆ ಉಂಟಾಗಿರುವುದರಿಂದ ಈ ವೃತ್ತಿಗಾಯಕರು ಕಥೆಗಳನ್ನು ಮರೆತು ಬೇರೆ ಬೇರೆ ಕಸುಬುಗಳಿಗೆ ಮೊರೆ ಹೋಗುತ್ತಿದ್ದಾರೆ. ಇನ್ನು ಕೆಲವರು ಇತ್ತೀಚಿಗೆ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಚಾರಕ್ಕೂ, ಪಕ್ಷದ ಪ್ರಚಾರಕ್ಕೂ ಬಳಸಿಕೊಳ್ಳುತ್ತಿವೆ. ಸರ್ಕಾರಗಳೂ ಸಹ ತಮ್ಮ ಅಭಿವೃದ್ಧಿ ಯೋಜನೆಗಳ ಹಾಗೂ ಕಾರ್ಯಕ್ರಮಗಳ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇಂತಹವರನ್ನು ಸರಕಾರ ಖಾಯಂ ಆಗಿ ಏಕೆ ತಗೆದುಕೊಳ್ಳಬಾರದು.

೬.೩. ಭಾಷೆ

ಭಾಷೆ ಮನುಷ್ಯನ ಸ್ವ-ಪ್ರಯತ್ನದ ಫಲದ ಪ್ರಕ್ರಿಯೆ ಪ್ರಪಂಚದಲ್ಲಿ ಭಾಷೆಗೆ ಬಹಳ ಬೆಲೆ ಇದೆ. ದಂಡಿಯು ಭಾಷೆಯೆಂಬುದು ಇಲ್ಲದಿದ್ದರೆ ಮಾನವ ಪ್ರಪಂಚವೇ ಕತ್ತಲು ಎಂದು ಹೇಳಿದ್ದಾನೆ. ಭಾಷೆ ನಾಗರಿಕತೆಯ ಜೀವ, ಜೀವಾಳ. ಯಾವುದೇ ಜನಸಮುದಾಯದ ಅಧ್ಯಯನ ಮಾಡಬೇಕಾದರೂ ಮೊತ್ತ ಮೊದಲು ಆ ಜನಾಂಗದ ಭಾಷೆ ಅರಿತುಕೊಳ್ಳಬೇಕಾಗುವುದು ಅವಶ್ಯ. 'ನಾಲಗೆ ಅರುಹಿನ ಕುರುಹು' ಇದನ್ನೇ ಸೂಚಿಸುತ್ತದೆ. ಭಾಷಾ ವಿಜ್ಞಾನಿಗಳು ಪ್ರಪಂಚದಲ್ಲಿ ಎಷ್ಟು ನಾಲಗೆ ಇವೆಯೋ ಅಷ್ಟು ಸಂಸ್ಕೃತಿ ಇವೆ ಎಂದು ಹೇಳುತ್ತಾರೆ.

ತೆಲುಗು ಮತ್ತು ಕನ್ನಡ ಭಾಷೆಗಳು ಬಹು ಹಿಂದೆಯೇ ಸೋದರ ಭಾಷೆಗಳಾಗಿದ್ದು, ದ್ರಾವಿಡ ಭಾಷಾ ಕುಟುಂಬ ಪರಿವಾರಕ್ಕೆ ಸೇರಿದ್ದವು. ಈ ಭಾಷೆಗಳು ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಒಂದೊಂದಾಗಿ ಹೊರಬಂದವು. “ಪ್ರಮುಖ ದ್ರಾವಿಡ ಭಾಷೆಗಳಲ್ಲಿ ತಮಿಳು, ಮಲೆಯಾಳಿ ಭಾಷೆಗಳನ್ನು ಒಂದು ಗುಂಪಿಗೂ ಕನ್ನಡ, ತೆಲುಗುಗಳನ್ನು ಮತ್ತೊಂದು ಗುಂಪಿಗೂ ಕನ್ನಡ, ತೆಲುಗುಗಳನ್ನು ಮತ್ತೊಂದು ಗುಂಪಿಗೂ ಸೇರಿಸಬಹುದಾಗಿದೆ.”[೬]

ಮೂಲ ದ್ರಾವಿಡ

ತಮಿಳು ಕನ್ನಡ ತೆಲುಗು **ತಮಿಳು ಮಲೆಯಾಳಂ**

ವಿಶ್ವದ ಯಾವುದೇ ಜನಾಂಗದ ಸಂಸ್ಕೃತಿಯನ್ನು ಅರಿಯಬೇಕಾದರೆ ಮೊದಲು ಆ ಸಮುದಾಯದ ಭಾಷೆಯನ್ನು ವಿವೇಚಿಸಬೇಕಾಗುತ್ತದೆ. ಅದಕ್ಕಾಗಿ “ಭಾಷೆಯು ಮಾನವನ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳ ಬುನಾದಿಯಾಗಿದೆ.”[೭] ಮತ್ತು ಬದುಕಿಗೆ ಪೂರಕ, ಪ್ರೇರಕವಾಗಿರುತ್ತದೆ.

ಮೂಲತಃ ಆಂಧ್ರಪ್ರದೇಶದವರಾದ ಹಗಲುವೇಷಗಾರರ ಮಾತೃ ಭಾಷೆ ತೆಲುಗು ಆಗಿರುತ್ತದೆ. ಇವರು ಜೀವನ ನಿರ್ವಹಣೆಗಾಗಿ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವ ಸಂದರ್ಭಗಳಿರುವುದು ಹೆಚ್ಚು. ಅಂತಹ ಸಂದರ್ಭದಲ್ಲೆಲ್ಲ ಅನ್ಯ ಭಾಷೆಗಳ ಪ್ರಭಾವಕ್ಕೆ ಒಳಗಾಗುವುದು ಸಹಜವಾಗಿದೆ. ಇವರಿಗೆ ನೇರ ಹಾಗೂ ವಿಶೇಷ ಸಂಬಂಧವಿದ್ದ ಪ್ರದೇಶಗಳೆಂದರೆ ಕರ್ನಾಟಕ ಮತ್ತು ಆಂಧ್ರಪ್ರದೇಶ. ಇವುಗಳ ಮೇಲೆ ಇಷ್ಟು ಗಾಢವಾದ ಪರಿಣಾಮ ಬೀರಲು ಇನ್ನೊಂದು ಮುಖ್ಯ ಕಾರಣವೆಂದರೆ ತೆಲುಗು ಸಾಹಿತ್ಯ ಪ್ರಾರಂಭವಾಗುವ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಹಲವು ಕೃತಿಗಳು ರಚನೆಯಾಗಿದ್ದವು ಮತ್ತು ಹಲವು ಲಕ್ಷಣ ಗ್ರಂಥಗಳೂ ರಚನೆಯಾಗಿದ್ದವು. ಶಬ್ದ ಭಂಡಾರವೂ ಬೆಳೆದಿತ್ತು. ಆದ್ದರಿಂದಲೇ ಕನ್ನಡದ ಪ್ರಭಾವವೇ ತೆಲುಗು ಭಾಷೆಯ ಮೇಲೆ ಆಗುವುದು ಸಹಜವೇ ಆಗಿದ್ದಿತು.”[೮] ಹೀಗಾಗಿ ಕನ್ನಡ ಮತ್ತು ತೆಲುಗು ಜನರ ಸಾಮಾಜಿಕ ಹಾಗೂ ಧಾರ್ಮಿಕ ಬಾಂಧವ್ಯಗಳಿಗೆ ಕಾರಣವಾಗಿದೆ ಎಂದು ಹೇಳಬೇಕು.

ಭಾರತದಲ್ಲಿ ಹಲವಾರು ಭಾಷೆಗಳಿದ್ದರೂ ಮಾತನಾಡುವ ಎಲ್ಲಾ ಭಾಷೆಗಳಿಗೆ ಲಿಪಿ ಇಲ್ಲ. ಅಂತಹ ಲಿಪಿ ಇಲ್ಲದಂತಹ ಭಾಷೆಗಳನ್ನು ಚಾಕ್ಷುಸ ಅಥವಾ ಅನಾಗರಿಕ ಭಾಷೆ ಎಂದು ಕರೆಯುತ್ತಾರೆ. ಇಂತಹ ಭಾಷೆ ಮುಖ್ಯವಾಗಿ ಬುಡಕಟ್ಟು ಜನಾಂಗದವರ ಭಾಷೆಗಳಾಗಿರುವುದೂ ಒಂದು ಅಂಶ. ಈ ಭಾಷೆಗಳು ಸಂಪೂರ್ಣವಾಗಿಲ್ಲ. ಈ ಒಳಭಾಷೆಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವುದುಂಟು. ಇವರಲ್ಲಿ ಅಂತಹ ಭಾಷೆ ಇದೆ. ಹಗಲುವೇಷಗಾರರು ಈ ಭಾಷೆಯನ್ನು ‘ಮರಗು ಭಾಷೆ’ ಎಂದು ಕರೆಯುತ್ತಾರೆ.

ಈ ಸಮುದಾಯದವರು ಆಡುವ ಭಾಷೆಯನ್ನು ಈ ಕೆಳಗಿನಂತೆ ವಿವರಿಸಬಹುದು. ಮೂರು ಭಾಷೆಗಳಲ್ಲಿ ಭಾಷಾ ಪ್ರಭೇದಗಳನ್ನು ತಿಳಿಸಲು ಪ್ರಯತ್ನಿಸಲಾಗಿದೆ. ಮನುಷ್ಯರ ದೇಹದ ಅಂಗಗಳನ್ನು ಕುರಿತು ವಿವಿಧ ಜಾತಿಯವರನ್ನು, ಹಣಕ್ಕೆ ಸಂಬಂಧಿಸಿದ, ಅಂಕಿಗಳು, ಇವರ ಬೇಟೆಯ ಪ್ರಾಣಿಗಳ

[illegible]

ಹೆಸರು ಮತ್ತು ಬಲೆಗಳ ಹೆಸರು, ಕ್ರಿಯಾಪದಗಳು, ಇತರ ಪದಗಳು ಹೀಗೆ ವರ್ಗೀಕರಿಸಿಕೊಳ್ಳಲಾಗಿದೆ.

ಮನುಷ್ಯರ ದೇಹದ ಅಂಗಗಳನ್ನು ಕುರಿತ ಶಬ್ಧಗಳು

ಕನ್ನಡ	ಮರಗು	ತೆಲುಗು
ತಲೆ	ಶಿರಾಸ್ವಾಂ	ತಲ
ಕೂದಲು	ಕುಸುವಾಲು	ಎಂಟ್ರಿಕಲು
ಕಣ್ಣುಗಳು	ಕೋಟ್ಲು	ಕಳ್ಳು
ಕಿವಿಗಳು	ಚೆವ್ವಲು	ಚೆವ್ವಲು
ಬಾಯಿ	ವಾಗಡ	ನೋರು
ಹಲ್ಲುಗಳು	ದಂತಕೋಟ್ಲು	ಪಂಡ್ಲು
ಗಡ್ಡ	ದಾಡಿವಾಂ	--
ಕೈಗಳು	ಹಸ್ತಕೋಟ್ಲು	ಚೆಯ್ಯಲು
ಮೊಲೆಗಳು	ಕರಕಾಲು	ಸ್ತನಂ
ಕಾಲುಗಳು	ಪಾದಕಪ್ಪಾಲು	ಕಾಳ್ಳು
ವೃಷಣ	ಕೊಂಕಣಂ	ವೃಷಣಂ
ಮುಕುಳಿ	ಗೊಟ್ಟಂ	ಗುದ್ದ
ಹೆಣ್ಣಿನ ಗುಪ್ತಾಂಗ	ಆಸನಂ	ಪೂಕು

ವಿವಿಧ ಜಾತಿಗಳನ್ನು ಕುರಿತು ಹೇಳುವಾಗ

ಮರಗು ಭಾಷೆಯ ಅಂತ್ಯದಲ್ಲಿ 'ಳ್ಳು' ಪ್ರತ್ಯಯ ಸೇರಿಸಿದರೆ ಅವೆಲ್ಲ ಬಹುವಚನ ರೂಪ ಪಡೆಯುತ್ತವೆ.

ಕನ್ನಡ	ಮರುಗು	ತೆಲುಗು
ಗೌಡ	ಎಲುಕುಡು	ಗೊಂಚಗಾಡು
ಬ್ರಾಹ್ಮಣ	ತಾಟಗಾಡು	ಬ್ರಾಹ್ಮಣುಡು
ಉಪ್ಪಾರವನು	ಮಿಟುಂಗಾಡು	ಉಪ್ಪಾರೋಡು
ಲಿಂಗಾಯತ	ಪಿಟಿಗ್ಗಾಡು	ಜಂಗಮುಲು
ವೇಷಗಾರ	ವಾಲ್ಕಾದಾರಿ	ವೇಷಗಾಡು
ಕೋಮಟಿ ವೈಶ್ಯ	ಗೊಂಟಗಾಡು	ವೈಶ್ಯುಡು
ಪಚ್ಚಗುಂಟರವನು	ಕಡ್ಡಿಗಾಡು	ಪಿಚ್ಚಗುಂಟೋಡು
ಕುಮ್ಮರಿ	ಕುಮ್ಮಿಗಾಡು	ಕುಮ್ಮರಿ
ಕುರುಬ	ಜಿಡ್ಡುಡು	ಕುರುಬೋಳ್ಳು
ಬೇಡ, ನಾಯಕ	ಮೊಬ್ಬುಗಾಡು	ಬೋಯನಾಡು
ಅಗಸ	ತೆಲ್ಬುಲೋಡು	ಚಾಕಲಿ
ಮಾದಿಗ	ಕೀನೆಗಾಡು	ಮಾದಿಗೋಡು
ಡೊಂಬರವನು	ಬಿಡೆಂಗಾಡು	ದೊಮ್ಮರಿಗಾಡು

ಹೊಲೆಯ	ನೆಚ್ಚಿಕಿನಗಾಡು	ಮಾದಿಗೋಡು
ಲಂಬಾಣಿಯವನು	ಮೆಕ್ಕಡಿಗಾಡು	ಲಂಬಾಡಿವಾಡು
ಬೋವಿ, ವಡ್ಡ	ಬಾತಿಗಾಡು, ಬಡ್ಡೇರುಗಾಡು	ವಡ್ಡೆವಾಡು
ಹಜಾಮ	ಕೊರುಗುಡು	ಮಂಗಲ್ಲೋಳ್ಳು
ದಾಸರವನು	ಹಾಸಿಗಾಡು	ದಾಸರಿ
ಗೊಲ್ಲ	ಗಿಡ್ಡಗಾಡು	ಗೊಲ್ಲವಾಡು
ಗೋಸಾಯಿ	ಕ್ವಂಕ್ ಪಂತಗೋಳ್	ಪೇಗುಲೋಳ್ಳುಡು

ಹಣಕ್ಕೆ ಸಂಬಂಧಿಸಿದ ಅಂಕಿಗಳು

ಕನ್ನಡ	ಮರಗು	ತೆಲುಗು
ಒಂದು ರೂಪಾಯಿ	ಗಿಂಜ, ಒಕಗಿಂಜ	ಒಕ್ಕ ರೂಪಾಯಲು
ಐವತ್ತು ಪೈಸೆ	ಅರ್ಧಗಿಂಜ	ಅರ್ದರೂಪಾಯಿ
ಹತ್ತು ಪೈಸೆ	ಪದಿತುಕ್ಕಲು	ಪದಿ ಪೈಸ
ಐದು ಪೈಸೆ	ಪಂಚಂ ಪೈಸೆ	ಐದು ಪೈಸ
ಎಪ್ಪತ್ತೈದು ಪೈಸೆ	ಮೂಡುಗೀಟ್ಲು	ಮುಪ್ಪಾವಲ
ಎರಡು ರೂಪಾಯಿ	ದೋಯಂಗಿಜಾಲು	ರೆಂಡು ರೂಪಾಯ
ಮೂರು ರೂಪಾಯಿ	ಮೂಡು ಗಿಂಜಾಲು	ಮೂಡು ರೂಪಾಯಲು
ಹನ್ನೊಂದು ರೂಪಾಯಿಗಳು	ದಶಮೊಗಟಿ ಗಿಂಜಾಲು	ಪದಿಕೊಂಡು ರೂಪಾಯಲು
ಹದ್ನೈದು ರೂಪಾಯಿಗಳು	ದಶಂಪಂಚಂಗಿಂಜಾಲು	ಪದ್ಯೆದು ರೂಪಾಯಲು
ಇಪ್ಪತ್ತು ರೂಪಾಯಿಗಳು	ಇಮಚಿತಂ ಗಿಂಜಾಲು	ಇರುವೈರೂಪಾಯಲು
ಐವತ್ತು ರೂಪಾಯಿಗಳು	ಹಸ್ತ ಗಿಂಜಾಲು	ಯಾಬೈ ರೂಪಾಯಲು
ನೂರು ರೂಪಾಯಿಗಳು	ಗೌರ ಗಿಂಜಾಲು	ವಂದರೂಪಾಯಲು
ಒಂದು ಸಾವಿರ ರೂಪಾಯಿಗಳು	ಬೀರು ಏರುಪಾಟು	ವೆಯ್ಯಿ ರೂಪಾಯಲು

ಇವರ ಬೇಟೆಯ ಪ್ರಾಣಿಗಳ ಹೆಸರು ಮತ್ತು ಬಲೆಗಳ ಹೆಸರುಗಳು

ಕನ್ನಡ	ಮರಗು	ತೆಲುಗು
ಕೌಜು	ಕಾಮುಜು	ಕೌಂಜು
ಬುರ್ಲಿಹಕ್ಕಿ	ಲಾವುಕಲು	ಬುರ್ಲಾಂಕು
ಹಂದಿ	ಗೂಟಿಗಾಡು, ಮುಕ್ಕುರಾಸಿಗಾಡು	ಪಂದಿ
ಮುಂಗಸಿ	ಗಿಜಿಗಾಡು	ಮುಂಗುಲಿ
ಉಡ	ತೂಡ್ಡಿಗಾಡು, ವಲಿಂಗಾಡು	ಉಡುಮು, ಉಡುತ
ಆಮೆ	ಕುರಂಗಾಡು	ತಾಂಬೇಲು
ಮೊಲ	ಕುಂದೇಲು	ಕುಂದೇಲು
ಇಲಿ	ಮೂಸಗಾಡು	ಎಲಕಲು
ನರಿ	ನರಿಸಿಗಾಡು	ನಕ್ಕ
ಅಳಿಲು, ಇಣಚಿ	ತೋರ್ಸಿಗಾಡು	--

ಅಡವಿಬೆಕ್ಕು	ಜಂಗಾಳಿಕಂ	ಜಂಗಪಿಲ್ಲ
ಮರದಬೆಕ್ಕು	ಮಾನಗಾಶಿಕಂ	ಚಟ್ಟು ಪಿಲ್ಲ
ಮುಳ್ಳುಹಂದಿ	ಮೆಕಂ	ಮುಳ್ಳುಪಂದಿ
ಚಿಪ್ಪುಹಂದಿ	ಆಲವ	ಚಿಪ್ಪುಪಂದಿ
ಪುನುಗುಬೆಕ್ಕು	ಪುನಗಾಸಿಕಂ	ಪುನುಗುಪಿಲ್ಲ
ಮೀನು	ಕಾಜಾಲು	ಚಾಪ
ಏಡಿಕಾಯಿ	ಕರಗೋಟಿ ಗಾಡು	ಯಂಡ್ರಕಾಯಿ

ಊರಪ್ರಾಣಿಗಳನ್ನು ಕುರಿತ ಹೇಳುವ ಶಬ್ಧಗಳು

ಕನ್ನಡ	**ಮರಗು**	**ತೆಲುಗು**
ದನಗಳು	ಬಡಸ್ಯಾಲು	ಪಶುಲು
ಕುರಿ, ಮೇಕೆ	ಫ್ಯಾಸಂ	ಮ್ಯಾಕ
ಕೋಳಿ	ಕೊಕ್ಕಡಂ	ಕೋಡಿ
ಕೋತಿ	ಕೊಕ್ಕಡಿಗಾಡು	ಕೋತಿ
ನಾಯಿ	ಕೈಕ	ಕುಕ್ಕ
ಊರಬೆಕ್ಕು	ಮೆತ್ತ ಕಾಶಿಗ್ಯಾ	(ಪಿಲ್ಲಿ, ಕಾಶಿ) ಊರುಪಿಲ್ಲಿ
ಊರಹಂದಿ	ಮಂಡಿಗಾಡು	ಊರುಪಂದಿ

ಕೆಳಗಿನ ಪ್ರಾಣಿಗಳ ಮರಗು ಭಾಷೆಯ ಮುಂದೆ 'ಉ' ಪ್ರತ್ಯೆಯ ಸೇರಿಸಿದರೆ ಬಹು ವಚನವಾಗುತ್ತದೆ.

ಬಲೆಯ ಕುರಿತ ಹೇಳುವ ಶಬ್ದಗಳು

ಕನ್ನಡ	**ಮರಗು**	**ತೆಲುಗು**
ಬಲೆಗಳು	ಪೀಸಾಲು	ವಲಲು
ಉರುಲುಗಳು	ಡೋರ್ನಾಲು	ಉಚ್ಚಲು
ಕೌಜನಬಲೆ	ಪಾದಿ	ಕೌಂಜುವಲ
ಆಮೆ ಹಿಡಿಯುವ ಗಾಣ	ದೋಟಿಗಾಲಂ	ತಾಂಬೇಲು ಕೊಕ್ಕಿ
ಎಲ್ಲಾ ರೀತಿಯ ಆಯುಧಗಳು	ವಾಡಿವಾಂ	ಅನ್ನಿವಿಧಾಲ ಆಯುಧಾಲು

ಕ್ರಿಯಾಪದಗಳ ಕುರಿತ ಶಬ್ದಗಳು

ಕನ್ನಡ	**ಮರಗು**	**ತೆಲುಗು**
ಕುಳಿತುಕೋ	ವಾಲ್ಕೋ	ಕುಸ್ಸುಕೋ
ಹೋಗು	ನಿಕ್ಕು	ಪೋ
ಹೋಗಿಬಾ	ಜಾನ್‌ರಾ	ಪೋಯಿರಾ
ಹೋಗು	ಜಾನ್‌ಪೋ	ಪೊ
ಇರು	ನೆಚ್ಚುಂಡು	ಉಂಡು
ಬಚ್ಚಿಡು	ಐಕಂಚ್ಯೆ	ಬಚ್ಚಿಪೆಟ್ಟು

ಊಟಮಾಡು	ಮೆಸ್ಕವಡಂ	ಬೋಜನಂ ಚ್ಯೆ
ಅದಿಕ	ಅಂಟಸಿಲ	ಅಧಿಕಂ
ಸುಳ್ಳು, ಸುಮ್ಮನೆ	ಅಡ್ಡಿ	ಅಭದ್ದಂ, ಊರುಕೋಸಿ
ಪರವಾಗಿಲ್ಲ	ಅಶೋಡೆ	ಪಾರ್‍ವಾಲೇದು
ಬಾಲಸಂತರ ವೇಷ	ಅಲಾಗೆ ಪಂತು	ಬಾಲಸಂತು ವೇಷಂ
ನಗುವುದು, ನಗು	ಇಗ್ವಾಟಂ	ನವ್ವಟಂ, ನವ್ವು
ಭೋಗಿಸುವ ಸ್ತ್ರೀ	ಏಳೆಶಾಂತಿ	ಭೌಗಂಸ್ತ್ರೀ
ಆಪರಿಚಿನನ್ನು ತಮ್ಮವನೆಂದು ಭಾವಿಸುವುದು	ಒಂಟು	ಅಪರಿಚತುಮ್ಮಿ ತಮವಾಡಿನಿ ವಾಡನಿ ಭ್ರಮಿಂಚಟಂ
ಸಂಭೋಗಿಸು	ಕಂಜುಲಾಟ	ಸಂಭೋಗಂ
ಕತ್ಪ	ಮುಚ್ಚಿಲಿಖ	ಮುಚ್ಚಳಿಕಂ
ವೈದ್ಯ	ಕನ್ಯೆದಾರಿ	ವೈದ್ಯುಡು
ರಹಸ್ಯ	ಕಬ್ಬಿ	ರಹಸ್ಯಂ
ಸಾಯಿಸು	ಕರಿಂಪು	ಚಂಪು
ಮಾವಿನ ಕಾಯಿ, ಕಾಯಿ	ಕರ್‍ಕುವಾಂ	ಎದ್ದೈನ ಅಕುಪಚ್ಚನಿಕಾಯಿ
ಕತ್ತಲೆ	ಕರ್‍ವಡಿ	ಚೀಕಟಿ
ಬೈಯ್ಯುವುದು	ಕಸಿಂಪು	ತಿಟ್ಟು
ಕಳ್ಳತನದಿಂದ, ತೆಗೆದುಕೊಳ್ಳುವುದಿಲ್ಲ	ಅಂಟುಕೋನು	ತೀಸುಕೋನು, ದೊಂಗಿಲಿಂಚು
ಚೆನ್ನಾಗಿ, ಹೆಚ್ಚು	ಅಮ್ರು	ಬಾಗ, ಎಕ್ಕುವ
ಮಾಂಸ	ಅಶ್ಕೊಟಿ	ಮಾಂಸಂ
ಗಿಡ	ಇಕ್ರಕೋಟಿ	ಚೆಟ್ಟು
ತೆಲುಗಿನವನು	ಈವಾಡುಗಾಡು	ತೆಲುಗು
ಸುಖದಿಂದಿರುವವನು	ಏಳೆಗಾಡು	ಬೋಗಂವಾಡು
ಬಚ್ಚಿಡು	ಏಕಂಜೆಯು	ದಾಚಿಪೆಟ್ಟು
ಭಿಕ್ಷೆ	ಬಿಲ್ತು	ಭಿಕ್ಷಂ
ಹಣ	ಕಂಚಿಕಂ	ಡಬ್ಬು
ಸಂಭೋಗಿಸು	ಕಂಜು	ಸಂಭೋಗಿಂಚು
ಔಷಧಿ ಕುಲದವನು	ಕನ್ಯೇಟುಗಾಡು	ಮಂದುಲ ಕುಲಸ್ಥುಡು
ಸತ್ತು ಹೋಗು	ಕರ್ಸಿಪೋವು	ಚನಿಪೋವು
ಕಲ್ಲು	ಕಲ್ವಾಂ	ರಾಯಿ
ಅಪಾಯ	ಕಶಾದಂ	ಅಪಾಯಂ
ಮೆಣಸಿನಕಾಯಿ	ಕಾರಂಕೋಟ್ಲ	ವಿರುಪಕಾಯಲು
ಕೋಪಿಷ್ಟ	ಕಾರ್‍ಕುಡು	ಕೋಪಿಷ್ಟ, ಕೊಟ್ಟೆವಾಡು
ದೆವ್ವ	ಕಾಸ್ಕಂ	ದ್ಯೆಯ್ಯಂ

ಸಾಯು	ಕಿಟ್ಟಿಪೋವು	ಚನಿಪೋವು
ಸಾಯಿಸು	ಕರಿಂಚು	ಸಾಯಿಸು
ವಸ್ತ್ರ	ಕೆಂದ	ವಸ್ತ್ರಂ
ನೆಕ್ಕಿ ಸಾಯಿಸು	ಕೇಮಿಂಚು	ನೊಕ್ಕಿ ಚಪ್ಪು, ನಿಲದಿಯು
ತಿನ್ನು	ಕೈಪು	ತಿನು
ತಪ್ಪು ಹಿಡಿಯುವುದು	ಕೋಡಿ	ತಪ್ಪು ಪೆಟ್ಟಟ
ಪುರುಷಾಂಗ	ಕೋಸಾಂ	ಪುರುಷಾಂಗಂ
ದೆವ್ವ	ಗಬ್ಬಿ	ಭೂತಂ
ಅಳುವುದು	ಗೀತಾಟ್ಕಂ	ಏಡ್ವಡಂ
ಗುದದ್ವಾರ	ಗುಯ್ಯಂ ಗುಯ್ಯಾಂ	ಗುದಂ
ಅವಮಾನ	ಗೂಸು	ಅವಮಾನಂ
ಸ್ತ್ರೀ ಮರ್ಮಾಂಗ	ಗೊಟ್ಟ್ಯಾಂ	ಸ್ತ್ರೀ ಮರ್ಮಾವಯಂ
ಮೋಸಕಾರ	ಗೋರೆಂದ	ಮೋಸಕಾರಿ
ದೆವ್ವ	ಜಂತಕೋಟಿ	ದಯ್ಯಂ
ಮೊಂಡು ಕುಲಕ್ಕೆ ಸೇರಿದವನು	ಜಕಾರಿಗಾಡು	ಮೊಂಡಿಕುಲಾನಿಕೆ ಸೇರಿದವನು
ಕಾಮಾಂದನು	ಓಚ್ಚುಪುನ್ನೆಂ	ಕಾಮುಕುಡು
ಕಾಳು	ಜಿವ್ವಾಲು	ಗಿಂಜಲು
ಭೂತ ಬಿಡಿಸುವವ	ಕಾಳ್ಕದಾರಿ	ಭೂತ ವೈದ್ಯುಡು
ಸಾಯಿಸು	ಕಿತ್ತುಮಾಪು ಚಯು	ಚಂಪು
ಪುರುಷಾಂಗ	ಕೊಂಕಡಂ	ಪುರುಷಾಂಗಂ
ಕಳ್ಳ ಬುದ್ಧಿಯವನು	ಕೊಕ್ಕು ಮಿಡ್ಸುಡು	ದೊಂಗಬುದ್ದಿ ಕಲವಾಡು
ಆಕ್ರಮಸಂಬಂಧವಿಟ್ಟುಕೊಂಡವನು	ಗಂಡಡು, ಗಂಡಗಾಡು	ಆಕ್ರಮ ಸಂಬಂಧಂ ಪೆಟ್ಟುಕುನ್ನವಾಡು
ಹುಲ್ಲು	ಗಾಸ್ಟಾಂ	ಗಡ್ಡಿ
ಪ್ರಶಂಸೆ	ಗುಲ್ಪು	ಪ್ರಶಂಸ
ಬಿಡಾರವನ್ನು ನಿರ್ಮಿಸಿದವನು	ಗೂಡೆಗಾಡು	ಗೂಡೆಂ ಏರ್ಮಾಟು
ಹೋಗು	ಜಾನು	ವೆಳ್ಳು
ತಲೆ	ಜಿಡ್ಡುವಾಂ	ತಲ
ಪ್ರಸಂಗ	ಜಿರ್ರ	ಪ್ರಮೇಯಂ
ಜೋಳ	ಜೋಡಾಲು	ಜೊನ್ನಲು
ಕಟುಕರವನು	ತುಕಾರಿಗಾಡು	ಕಟಕವಾಡು
ಅಂಬಲಿ	ತೋಲಿಪ್ಯಾಂ	ಅಂಬಲಿ
ತಮಾಷೆ ಮಾಡು	ದತ್ತು	ಅಲ್ಲರಿ ಚೆಯು
ಒಡೆ	ದೈಪು, ದೇಪು	ಕೊಟ್ಟು

ಸೈಕಲ್‌ನಿಂದ ದೂರು ಸಮಾಚಾರ ತಿಳಿಸುವ	ನಾಟಾಂ	ಸೈಗಲ್‌ದ್ವಾರಾ ದೂರನಿಂಚಿ ಸಮಾಚಾರನ್ನಿ ಅಂದಜಯೇಟ
ನೆಲ್ಲು	ನರ‍್ರಲು	ವಡ್ಲು
ತೆಗೆದು ಕೋ	ನಾಪ್ಕೋ	ತೀಸುಕೋ
ನೋಡು	ನೆಟ್ಕಿ	ಚೂಡು
ವೇಷ	ಪಂತು	ವೇಷಂ
ತಂಬಾಕು	ಪಚ್ಚಾಂ	ಪಚ್ಚಿ ಪೊಗಾಕು
ಕಲ್ಲು	ಪತ್ರಕೋಟಿ	ರಾಯಿ
ಇತರ ಸಂಚಾರ ಜಾತಿಗೆ ಸೇರಿದವನು	ಪರ್ದೇಸಿ	ಇತರ ಸಂಚಾರ ಜಾತಿಕಿ ಚೆಂದಿನವಾಡು
ಮೂತ್ರ	ಪಣ್ಯಾಲು	ಮೂತ್ರಂ
ನೀರು	ಫಾಣ್ಕಾಳು	ನೀಳ್ಳು
ಚಿಕ್ಕವನು, ಹುಡುಗು	ಪಿಂಕೆಡು	ಪಿಲ್ಲವಾಡು
ಮುಚ್ಚಳಿಕೆ	ಪುಲ್ಲ	ಮುಚ್ಚಲಿಕ
ಉಣಸೆಕಾಯಿ, ಮಾವಿನಕಾಯಿ	ಪುಲ್ಲಾಕೊಟ್ಟು	ಚಿಂತಕಾಯಲು, ಮಾಮಿಡಿ ಕಾಯಲು
ರೂಪಾಯಿ	ತೆಲ್ಲಾಂ	ರೂಪಾಯಿಲು
ಗಂಜಿ	ದಬ್ಲಕೋಟ, ದವ್ಲಿಕೋಟ	ಗಂಜಿ
ನಿಲ್ಲು, ಇರು	ನಚ್ಚಂಡು	ಉಂಡು, ಆಗು
ಬೇಡ	ನಾಗನ ನಾಗನ್ನ	ವದ್ದು
ಗಿಡಮೂಲಿಕೆ ಮಾರುತ್ತಾ ಜಾತಕ ಹೇಳುವ ವೇಷ	ನಾಟಂ ಪಂತು ನಾಟು ಪಂತು	ನಾಟಾಂ ಅಂದುಕೊನಿ ಜಾತಕಂ ಚೆಪ್ಪ ವೇಷಂ
ಬಿಳಿಯ	ನಲುಪು	ಸಾರಾ
ಹಣ	ನೆಟ್ಟು	ಸೊಮ್ಮು
ಕಳ್ಳತನ	ಪಚ್ಚಾಟ್ಕಂ	ದೊಂಗತನಂ
ಕಳ್ಳ	ಪಚ್ಚಿಗಾಡು	ದೊಂಗ
ಮಾತನಾಡುವುದು	ಪಲ್ಲಾಟಂ	ಮೊಟ್ಲಾಡಟಂ, ಯಾಚಿಚಟಂ
ಮಗು, ಮರಿ	ಪಿಂಕೆ	ಪಿಲ್ಲ
ಹೇಳು	ಪಾಪ್ಕ್ಯಂ	ಚೆಪ್ಪು
ಚಾಡಿ ಹೇಳು	ಪಿತ್ವ	ಚಾಡಿಲು ಚೆಪ್ಪು, ತಾಕಟ್ಲು ಚೆಪ್ಪು
ಕುಲಪಂಚಾಯಿತಿಯಲ್ಲಿ ಕೋಶಾದಿಕಾರಿ	ಪುಲ್ಲದಾರಿ	ಕುಲಪಂಚಾಯಿತಿಲೋ ಕೋಶಾಧಿಕಾರಿ
ಉಂಚೆಣ್ಣು	ಪುಲ್ಲಾಂ	ಚಿಂತಾಕು

ಗರ್ಭವತಿ	ಪಾಟ್ಲಕೋಟೆ	ಗರ್ಭಂ
ಕಳ್ಳತನದಿಂದ	ಬಂಗಿಜೆಯು	ದೊಂಗಿಲಿಂಚು, ದಾಚಿ ಪೆಟ್ಟಕೋನು
ಗಂಗೆತ್ತಿನವನು	ಬಡಿಶಾಲೋಡು	ಗಂಗಿರೆದ್ದುಲವಾಡು
ಚೆನ್ನಾಗಿ	ಬೀರುಗಾ	ಮಂಚಿಗಾ, ಬಾಗುಗಾ
ರಕ್ತ	ಬೊಲ್ಲಕೋಟೆ	ರಕ್ತಂ
ಪಾತ್ರೆ, ಗಡಿಗೆ, ಬಟ್ಟಲು,	ಬೊಡಿಶ್ಯಾಂ	ಗಿನ್ನ, ಕುಂಡ, ಪಾತ್ರ
ಮಣ್ಣು	ಮಟ್ಟಿವಾಂ	ಮನ್ನು
ನಿದ್ರಿಸು, ವ್ಯಭಿಚಾರ ಮಾಡು	ಮಲ್ಗು	ನಿದ್ರಿಂಚು ವ್ಯಭಿಚರಿಂಚು
ಮಾರಿಕೊಳ್ಳುವುದಿಲ್ಲ	ಮಾರ್ಪಿಲ್ಲು	ಅಮ್ಮಕೋನು
ಕಳ್ಳ	ಮಿಡ್ಸಿಗಾಡು	ದೊಂಗ
ನಿರ್ಲಕ್ಷ	ಮಿತ್ರ	ನಿರ್ಲಕ್ಷಂ
ಮೊಸಳೆ	ಮುತ್ಕಾರಿ	ಮುಸಲಿ
ದೇವತೆ, ಅಮ್ಮ, ತಾಯಿ	ಮುತ್ತಡಿ	ದೇವತೆ, ಅಮ್ಮ, ತಲ್ಲಿ
ತಿನು, ಊಟಮಾಡು	ಮೆಸ್ಕು	ತಿನು, ತಾಗು
ಚೆಂಬು, ತಂಬಿಗೆ	ಮೊಗ ಗಿನ್ನೆ	ಚಂಬು
ಭಿಕ್ಷೆ	ಯಾಸ್ಕಂ	ಭಿಕ್ಷಂ
ಹಾವು	ಯಾಸಂ	ಪಾಮು
ಕಟ್ಟೆ	ಲಾಕಡಾಂ	ಕಟ್ಟ
ಕತ್ತಿ	ವಾಡಿವಾಂ	ಕತ್ತಿ
ಸ್ತ್ರೀ, ಹೆಣ್ಣು	ಶಾಂತಿ ಶರಾಂ	ಸ್ತ್ರೀ
ಗದೆ	ಬಡಿಶಾಂ	ಬರ್ರೆ, ಗೇದೆ
ಬುಡಗ ಜಂಗಾಲರ ಬಿಡಾರ	ಬಿರಾಡು	ಬುಡುಗಿ ಜಂಗಾಲು ಗೂಡೆಂ
ಸಂಭೋಗ, ವೈಭೋಗ	ಬೋಗಾಟ್ಕಂ	ಸಂಭೋಗಂ, ವೈಭವಂ
ಕಿರೀಟ	ಮಕಟಾಂ	ಕಿರೀಟಂ
ಹಳ್ಳಿಯವನು	ಮುಟ್ಟಿಗಾಡು	ಗ್ರಾಮೀಣುಡು
ಮನೆ	ಮತ್ತೆ	ಇಲ್ಲು
ಹೆಣ್ಣು	ಮಮ್ಯಾತಟಿ	ಸ್ತ್ರೀ
ಅನ್ನ	ಮಾತೃ	ಅನ್ನಂ
ಅಕ್ಕಿ	ಮಿಟಿಪಿಳ್ಳು	ಬಿಯ್ಯಂ
ಕಳ್ಳತನ	ಮಿಡ್ಸಾಟ್ಕಂ	ದೊಂಗತನಂ
ಉಪ್ಪು	ಮಿಟಾಂ	ಉಪ್ಪು
ದೇವರು	ಮುತ್ತುಗಾಡು	ದೇವುಡು
ದೊಡ್ಡ ಮನುಷ್ಯ	ಮ್ಯಾಂಡ್ಯಾಸ್ಕಂ	ಪುಂಡಿ ಮನಿಷಿ

ಸಿಂಹಂ	ಯೊಗ್ರಕೋಟೆ	ವ್ಯಾಘ್ರಂ
ಚೆನ್ನಾಗಿ ಭಿಕ್ಷಿ ತರುವವನು	ಯಾಸ್ಕದಾರಿ	ಭಾಗ ಭಿಕ್ಷಂ ತಟ್ಟೆವಾಡು
ನಟನೆ	ಲಕ್ಕು	ನಟನ
ಪಲ್ಯ, ಹುಳಿ	ಶಾಕಾಂ	ಕೂರ, ಪುಲುಸು
ಅನ್ನ	ಶಾವಿಡಿ	ಅನ್ನಂ
ಹುಡುಗ	ಶಿರ್ಪಗಾಡು, ಶಿರ್ಬಡು	ಪಿಲ್ಲವಾಡು
ವಲಸೆ, ದೇಶಾಂತರ	ಶೆಂಡ್ರ	ವಲಸೆ, ದೇಶಾಟನಂ
ಹೋಗು	ಶೇಗು	ವೆಳ್ಳು
ರಾಗಿ	ಸಿಕ್ಕಿ ಜಿವ್ವಾಲು	ತೈದಲು, ರಾಗುಲು
ಪದ್ಧತಿ, ಆಚಾರ	ಸಿರಸ್ತ	ಪದ್ಧತಿ, ಆಚಾರಂ
ಸ್ತನ	ಸಿಲಕೋಟಿ	ಸ್ತನಂ
ಒಡವೆ	ಸೊನ್ಪಾಂ ಸೋನ್ಪಂ	ಸೊಮ್ಮುಲು
ಬೇಡ	ಸೋಕ	ವದ್ದು
ಹೆಣ್ಣು ಹುಡುಗಿ	ಶಿರ್ಪಕೋಟಿ	ಆಡಪಿಲ್ಲ
ಜೈನು	ಶಿತ್ತಾ	ಚೇನು
ಸಾಕ್ಷಿ	ಸಾಯಿದ	ಸಾಕ್ಷ್ಯಂ
ಸರಾಯಿ	ಸಿದಾನಂ	ಕಲ್ಲು
ಮೊರ	ನೆರ್ಗುವಾಂ	ಚೇಟ
ಜೋಳ	ಸೊಕ್ಕಾಲು	ಜೊನ್ನಲು
ಪೋಲೀಸ್	ಕುಚ್ಚುಗಾಡು ದಾರಿಗಾಡು	ಪೋಲೀಸ್‌ವಾಡು

ಒಡವೆಗಳನ್ನು ಕುರಿತು ಹೇಳುವ ಶಬ್ದಗಳು

ಕನ್ನಡ	**ಮರಗು**	**ತೆಲುಗು**
ಆಭರಣ	ಸೊಣಪಂ	ಆಭಣಾಲು
ಬಂಗಾರ	ನೆಟ್ಟು	ಗಡ್ಯಾಣಂ
ಬೆಳ್ಳಿ	ಚಿಕ್ಕನೆಟ್ಟು	ಎಂಡಿ
ಸಂದಿ ಬಂದಿ	ತೋಳು ಬಂದಿ	

ಹಗಲುವೇಷಗಾರರ ಸಮುದಾಯವು ತಾವು ವೈಯಕ್ತಿಕವಾಗಿ ಮನೆಯಲ್ಲಿ ತೆಲುಗು ಮಾತನಾಡುತ್ತಾರೆ. ಆದರೆ ಬರೆಯಲು ಓದಲು ಬರುವುದಿಲ್ಲ. ವಲಸೆ ಹೋದಾಗ ಆ ನಾಡುಗಳಲ್ಲಿ ಮಾತನಾಡುವ ಭಾಷೆಯನ್ನೇ ಇವರು ಮಾತನಾಡುತ್ತಾರೆ. ವೇಷ ಧರಿಸಿದಾಗ ಕರ್ನಾಟಕದಲ್ಲಿದ್ದಾಗ ಕನ್ನಡ ಆಂಧ್ರಪ್ರದೇಶದಲ್ಲಿದಾಗ ತೆಲುಗು ಮಾತನಾಡುತ್ತಾರೆ. "ಕನ್ನಡ, ತೆಲುಗು ಭಾಷೆಗಳ ಜೊತೆಗೆ ಆಯಾಯ ಪ್ರದೇಶದ ಮರಾಠಿ, ತಮಿಳು, ಹಿಂದಿ ಮುಂತಾದ ಭಾಷೆಗಳನ್ನು ಮಾತನಾಡುತ್ತಾರೆ. ಮತ್ತು ಅರ್ಥ ಮಾಡಿಕೊಳ್ಳುತ್ತಾರೆ.' ಆಧುನಿಕತೆಯ ಅಲೆಯಿಂದಾಗಿ ಯುವಕರ ಮಾತುಗಳಲ್ಲಿ ಅಲ್ಲಲ್ಲಿ ಇಂಗ್ಲೀಷ್ ಪದಗಳು ಸೇರಿಕೊಂಡಿವೆ.

ಇವರ ಬುಡಕಟ್ಟು ಭಾಷೆಯಾದ ಮರಗು ಭಾಷೆಗೆ ಕ್ರಿಯಾಪದಗಳಿಗೆ ಹಾಗೂ ನಾಮಪದಗಳಿಗೆ ತೆಲುಗು ಭಾಷೆಯ ಪ್ರತ್ಯಯಗಳು ಸೇರಿವೆ. ಉದಾ: ಜಾನ್ ರಾ ಜಾನಂ ಪೊ, ಕೊನೆಯ ಪೋ ಮತ್ತು ರಾ ಗಳು ತೆಲುಗು ಶಬ್ದಗಳು ಸೇರಿರುವುದು ಕಂಡುಬರುತ್ತದೆ.

ತೆಲುಗು ಶಬ್ದಗಳಲ್ಲದೆ ಮರಗು ಭಾಷೆಗೆ ಸಂಸ್ಕೃತದ ಪದಗಳ ದಟ್ಟ ಪ್ರಭಾವವೂ ಇದೆ. ಉದಾ ಮ್ಯಾಸಂ ಮೇಕೆ ಸಂಸ್ಕೃತದಲ್ಲಿ ಮೇಷಂ ಎನ್ನುತ್ತಾರೆ. ಅದೇ ರೀತಿ ಕೊಕ್ಕಡಂ ಕೋಳಿ ಸಂಸ್ಕೃತದಲ್ಲಿ ಕೊಕ್ಕಡಂ ಎಂದು ಕರೆಯುತ್ತಾರೆ. ಅಂಕಿಸಂಖ್ಯೆಗಳ ಬಳಕೆಯಲ್ಲಿ ದಶಂ, ಪಂಚಂ ಎಂದು ಇತರ ಶಬ್ದಗಳಾದ ಸಿರಸ್ಸಾಂ, ಹಸ್ತ, ಪಾದ ಮುಂತಾದ ಶಬ್ದಗಳ ಬಳಕೆಯಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹದು. ಈ ಸಂಚಾರಿ ಭಾಷೆ ಇದು ಸಂಪೂರ್ಣ ಭಾಷೆ ಅಲ್ಲ. ಪದಗಳ ರೂಪದಲ್ಲಿದೆ ಮತ್ತು ಪ್ರತಿಯೊಂದು ಸಂಚಾರಿ ಭಾಷೆಗೂ ಇಂತಹ ಬೇರೆ ಬೇರೆ ಭಾಷೆ ಇರುತ್ತದೆ.

ತೆಲುಗು ಮತ್ತು ಕನ್ನಡದಲ್ಲಿಯಂತೂ ಬಹಳ ಸಾಮ್ಯತೆ ಇದೆ. ಏಕೆಂದರೆ ನೂರಾರು ವರ್ಷಗಳಿಂದ ಒಂಬತ್ತು ಕೋಟಿ ಜನರು ಒಬ್ಬರ ಭಾಷೆಯನ್ನೊಬ್ಬರು ಮಾತನಾಡುತ್ತಾ ಬಂದಿದ್ದಾರೆ. "ಈ ಭಾಷೆಗಳ ಹೊಂದಾಣಿಕೆಗೆ ಕಾರಣ ಅವರೆಡೂ ದ್ರಾವಿಡ ಕುಟುಂಬದ ಕವಲುಗಳು. ಈ ಕೌಟುಂಬಿಕ ಬಾಂಧವ್ಯವನ್ನು ಭಾಷಯ ಹಲವು ಮಜಲುಗಳಲ್ಲಿ ಕಾಣಬಹುದು."[೮] ಭೌಗೋಳಿಕವಾಗಿ ಅಕ್ಕಪಕ್ಕದ ಭಾಷೆಗಳು ಅಲ್ಲದೆ ಒಂದು ಪರಿಚಯ ಇಲ್ಲವೆ ತಿಳುವಳಿಕೆ ಇದ್ದವರಿಗೆ ಇನ್ನೊಂದು ಭಾಷೆಯ ಕಲಿಕೆ ಸುಲಭ.

ಅಡಿಟಿಪ್ಪಣೆಗಳು

೧. ತೆಲುಗು ಜಾನಪದ ಗೇಯ ಗಾಥಲು ನಾಯನಿ, ಕೃಷ್ಣ ಕುಮಾರಿಗಾರು, ತೆಲುಗು ಅಕಾಡೆಮಿ ಹೈದರಾಬಾದು ದ್ವಿ. ಮು. ೧೯೯೦, ಪುಟ: ೩೫

೨. ತೆಲುಗು ಜಾನಪದ ಗೇಯ ಸಾಹಿತ್ಯಂ ರಾಮರಾಜು, ಬಿರುದುರಾಜು, ಪುಟ: ೮೦೫, ಜಾನಪದ ವಿಜ್ಞಾನ ಪ್ರಚುರಣಲ ಹೈದ್ರಾಬಾದ್, ದ್ವಿ.ಮು. ೧೯೯೦

೩. ಕರ್ನಾಟಕ ಜನಪದ ಕಲೆಗಳ ಕೋಶ, ಸಂ. ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪುಟ: ೮೦೫

೪. ಕರ್ನಾಟಕ ಜನಪದ ಕಲೆಗಳ ಕೋಶ, ಸಂ. ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪುಟ: ೨೧೯

೫. ಬುಡಿಗೆ ಜಂಗಾಲು ಭಾಷಾ ಸಾಹಿತ್ಯ ಸಾಂಸ್ಕೃತಿಕಾಂಶಾಲ ಪರಿಶೀಲನೆ ಡಾ. ಎನ್.ಆರ್. ವೆಂಕಟೇಶಂ ದಿವ್ಯ ದೀಪ್ತ ಪ್ರಚುರಣಲ ಹೈದ್ರಾಬಾದ್, ೧೯೯೫, ಪುಟ: ೮೩

೬. ಕನ್ನಡ ತೆಲುಗು ಸಂಬಂಧಸಾಮ್ಯ, ಎಂ, ಕೃಷ್ಣರಾವ್, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ಪುಟ: ೭

೭. ಕರ್ನಾಟಕದ ಲಂಬಾಣಿಗಳು ಒಂದು ಅಧ್ಯಯನ ಪಿ.ಕೆ. ಖಂಡೋಬ, ದಿ ತೇಜಸಿಂಗ್ ರೋಠೋಡ್ ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗಾ, ೧೯೯೧, ಪುಟ: ೨೫೨

೮. ಕನ್ನಡ ತೆಲುಗು ಸಂಬಂಧಸಾಮ್ಯ, ಎಂ, ಕೃಷ್ಣರಾವ್, ಐ.ಹೆಚ್. ಪ್ರಕಾಶನ, ಬೆಂಗಳೂರು, ಪುಟ: ೧೭

[illegible]

[illegible]

[illegible]

[illegible]

[illegible]

೯. ಕರ್ನಾಟಕದಲ್ಲಿ ವೇಷಗಾರರು, ಬಿ.ಎಂ. ಹೊಸಮನಿ, ಪಿಎಚ್.ಡಿ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩, ಪುಟ: ೧೭೫

೧೦. ಕರ್ನಾಟಕಾಂಧ್ರ ಸಾಹಿತ್ಯ ಭಾಂದವ್ಯ, ಐದು ಉಪನ್ಯಾಸಗಳು, ಕನ್ನಡ ತೆಲುಗು ಭಾಷಾ ಬಾಂದವ್ಯ, ಶ್ರೀ ಹಂಪನಾಗರಾಜಯ್ಯ, ವಿಶೇಷ ವಾಙ್ಞಯ ಪ್ರಸಾರ ಮಾಲೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩, ಪುಟ: ೧೩

¤ ¤ ¤ ¤ ¤

ಅಧ್ಯಾಯ ೭

ಹಗಲುವೇಷಗಾರರ ಆಚರಣೆಗಳು

೭.೧. ಜನನ
೭.೨. ಋತುಮತಿ
೭.೩. ವಿವಾಹ
೭.೪. ಮರಣ
೭.೫. ಧರ್ಮಗಳು
೭.೬. ವೈದ್ಯ
೭.೭. ನಂಬಿಕೆ ನಿಷೇಧಗಳು

ಆಚರಣೆ ಮತ್ತು ಸಂಪ್ರದಾಯ

ಆಚರಣೆ ಮತ್ತು ಸಂಪ್ರದಾಯಕ್ಕೆ ಅವಿನಾಭಾವ ಸಂಬಂಧವಿದೆ. ಆಚರಿಸುವುದೇ ಆಚಾರ. ಒಬ್ಬ ವ್ಯಕ್ತಿ ಆಚರಿಸಿದರೆ ಅಭ್ಯಾಸವಾಗುತ್ತದೆ. ಒಂದು ಸಮುದಾಯ ಆಚರಿಸಿದರೆ ಆಚರಣೆಯಾಗುತ್ತದೆ. ಸಾಮೂಹಿಕ ಆಚರಣೆಗಳು ಆ ಸಮುದಾಯದ ಶ್ರೇಯಸ್ಸಿಗೋಸ್ಕರ, ಅಭಿವೃದ್ಧಿಗೋಸ್ಕರ ರೂಢಿಸಿಕೊಂಡು ಬಂದವುಗಳಾಗಿವೆ. ಆಚರಣೆಗಳು ಒಂದು ಕುಲವನ್ನು ಇನ್ನೊಂದು ಕುಲದಿಂದ ಬೇರ್ಪಡಿಸುತ್ತದೆ. ಅದಕ್ಕಾಗಿ ಒಂದೊಂದು ಕುಲಾಚಾರಾಗಳು ಒಂದೊಂದು ರೀತಿಯಾಗಿರುತ್ತವೆ. ಪ್ರತಿಜಾತಿಗೂ, ಕುಲಕ್ಕೂ ಬೇಧಗಳಿರುವಂತೆ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಒಂದೇ ಕುಲದಲ್ಲಿಯೂ ಕೂಡ ಅಲ್ಪ ಸ್ವಲ್ಪ ಬೇಧ ಕಂಡುಬರುತ್ತದೆ. ಆಚರಿಸುವ ಆಚಾರ ಎಲ್ಲಾ ಕುಲಗಳು ಆಚರಿಸಿದರೆ ಅದು ಸಂಪ್ರದಾಯವಾಗಿ ಸಮಾಜದಲ್ಲಿ ಪರಿಗಣಿಸಲ್ಪಡುತ್ತದೆ. ಒಂದು ಕುಲದ ಸಂಸ್ಕೃತಿ ಕುರಿತು ಹೇಳಬೇಕೆಂದರೆ ಆ ಕುಲದ ಸಂಪ್ರದಾಯಗಳ ಅಧ್ಯಯನ ಕೈಗೊಳ್ಳಬೇಕಾಗತ್ತದೆ.

"ಮಾನವನ ಜೀವನವನ್ನು ರೂಡಿಸುವಲ್ಲಿ, ಸಂಸ್ಕೃತಿಯನ್ನು ಪೋಷಿಸುವಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯಾಚರಣೆಗಳಿಗೆ ವಿಶೇಷ ಮಹತ್ವವಿದೆ. ಅವು ಅವನ ಬಾಳಿನ ಅವಿಭಾಜ್ಯ ಸಂಗತಿಗಳಾಗಿವೆ. ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದುಕ್ಕೊಯ್ಯುವ ಶಕ್ತಿ ಪುಂಜಗಳಾಗಿವೆ. ಅವನ ನಡವಳಿಕೆ ಹಾಗೂ ವ್ಯವಹಾರಗಳು ಸಂಪ್ರದಾಯಬದ್ಧವಾಗಿಯೇ ಜರುಗುತ್ತವೆ. ಜಗತ್ತಿನ ಸಕಲ ರಾಷ್ಟ್ರಗಳ ಕಾನೂನು ರಚನೆಗೆ ಸಂಪ್ರದಾಯಗಳೇ ಆಧಾರ. ಇಂಗ್ಲೆಂಡಿನಂತಹ ಕೆಲವು ರಾಷ್ಟ್ರಗಳಲ್ಲಂತೂ ಸಂಪ್ರದಾಯಗಳೇ ಕಾನೂನಾಗಿ ಪರಿಣಮಿಸುತ್ತವೆ. ಆದ್ದರಿಂದಲೇ ನಾಗರಿಕ ಪ್ರಪಂಚ ಸರ್ವ ವ್ಯವಸ್ಥೆಗಳಿಗೆ ಅವೇ ಮೂಲ ಮಾತೃಕೆಗಳೆಂದು ಗಣನೆಗೊಂಡಿವೆ."[1] ಹೀಗೆ ಸಂಪ್ರದಾಯಗಳು ಮಾನವನ ಜೀವನದಲ್ಲಿ ಪ್ರತಿಯೊಂದು ವ್ಯವಸ್ಥೆಯಲ್ಲಿ ಅವಿರ್ಭವಿಸಿರುವುದನ್ನು ಕಾಣಬಹುದು.

ಇನ್ನೊಂದು ಅರ್ಥದಲ್ಲಿ ಸಂಪ್ರದಾಯ ಆಚರಣೆಗಳನ್ನು ಸಂಸ್ಕಾರಗಳೆಂತಲೂ ಕರೆಯುತ್ತಾರೆ. "ಸಂಸ್ಕಾರವೆಂದರೆ ಮೇಲ್ಮಾಡು, ತಿದ್ದುಪಾಡು, ಯೋಗ್ಯತೆ ಅಥವಾ ಅಧಿಕಾರ ಸಂಪಾದನೆ ದೋಷ ಕಳೆದು

[illegible]

[illegible]

[illegible]

[illegible]

ಗುಣ ಸಂಪಾದನೆ ಮಾಡಿಕೊಂಡು ಶುದ್ಧವಾಗುವುದು ಎಂಬುದು ಇನ್ನೊಂದು ಅರ್ಥ. ಪ್ರತಿದಿನವೂ ಪ್ರತಿ ಸಂಬಂಧದಲ್ಲಿಯೂ ಮನುಷ್ಯನ ಮನಸ್ಸು ಶುದ್ಧವಾಗಿ ಮೃದುವಾಗಿ ಲೋಕ ಹಿತಕ್ಕೆ ಸಜ್ಜಾಗಬೇಕು ಎಂಬುದು ತತ್ವ. ಶಿಲ್ಪಿಯ ಉಳಿಯ ಪೆಟ್ಟು ಬಿದ್ದಂತೆಲ್ಲಾ ಕಲ್ಲಿನ ಮೂರ್ತಿ ಹೇಗೆ ಕಡೆದು ರೂಪಗೊಂಡು ಚೆಲುವಾಗುವುದೋ ಹಾಗೆ ಈ ಸಂಸ್ಕಾರಗಳು ಮನುಷ್ಯ ಜೀವನವನ್ನು ರೂಪಿಸುವವು.''[೨] ಹೀಗೆ ಆಚರಣೆ, ಸಂಪ್ರದಾಯ, ಸಂಸ್ಕಾರ, ನಂಬಿಕೆ, ನಿಷೇಧಗಳು ನಮಗೆ ಗೊತ್ತಿಲ್ಲದಂತೆ ಒಂದಕ್ಕೊಂದು ಬೆರೆತು ಪ್ರತಿಯೊಬ್ಬರ ಜೀವನದಲ್ಲಿ ಅಳವಟ್ಟಿವೆ. ಇವುಗಳಿಂದ ಹಗಲುವೇಷಗಾರರೂ ಬಿಡುಗಡೆಯಾಗಿಲ್ಲ. ಅವರ ಜೀವನದಲ್ಲಿಯೂ ಹಲವಾರು ಸಂಪ್ರದಾಯಗಳು ಆಚರಣೆಯಲ್ಲಿರುವುದನ್ನು ಮುಂದೆ ಚರ್ಚಿಸಲಾಗಿದೆ.

೭.೧. ಜನನ

ಒಂದು ಸಮುದಾಯದಲ್ಲಿ ಜನಿಸಿದ ವ್ಯಕ್ತಿ ಸಾಯುವವರೆಗೂ ಅವರಲ್ಲಿ ರೂಢಿಯಲ್ಲಿರುವ ಸಂಪ್ರದಾಯಗಳನ್ನು ನಿರಾಕರಿಸಿ ಜೀವಿಸುವುದು ಕಷ್ಟ ಸಾಧ್ಯ. ಮನುಷ್ಯ ಸಂಘ ಜೀವಿ. ಸಂಘದ ನಿಯಮಕ್ಕೆ ಬದ್ಧನಾಗಿರಬೇಕಾಗುತ್ತದೆ. ಕಾಲಕ್ಕೆ ಅನುಗುಣವಾಗಿ ಸಮಾಜದಲ್ಲಿಯ ಆಚರಣೆಗಳು ಬದಲಾಗುತ್ತಲೇ ಇರುತ್ತವೆ. ಆದರೆ ಬುಡಕಟ್ಟು ಸಮುದಾಯಗಳಲ್ಲಿ ಅಷ್ಟು ಸುಲಭವಾಗಿ ಬದಲಾಗುವುದಿಲ್ಲ. ಶಿಷ್ಟ ಸಮಾಜದಲ್ಲಿ ತಕ್ಷಣ ಬದಲಾದರೆ ಬುಡಕಟ್ಟು ಸಮುದಾಯಗಳಲ್ಲಿ ನಿಧಾನ ಗತಿಯಲ್ಲಿ ಬದಲಾಗುವುದು.

'ಮಕ್ಕಳಿರಲ್ಲವ್ವ ಮನೆ ತುಂಬ' ಎಂಬ ಸಹಜ ವಾಕ್ಯದಂತೆ ಮದುವೆಯಾದ ದಂಪತಿಗಳೆಲ್ಲರು ಮಕ್ಕಳನ್ನು ಬಯಸುವುದು ಸಹಜ. ಮಕ್ಕಳು ಇಲ್ಲದಿದ್ದರೆ ಮೋಕ್ಷವಿಲ್ಲ, ಎನ್ನುವ ನಂಬಿಕೆ ನಮ್ಮ ಜನಪದರಲ್ಲಿದೆ. ಮಕ್ಕಳಿಗಾಗಿ ಪಡಬಾರದ ಕಷ್ಟಗಳನ್ನು ಪಡುತ್ತಾರೆ. ಕಂಡ ದೇವರಿಗೆ ಕೈಮುಗಿಯುವುದು, ಮುಡುಪು ಕಟ್ಟುವುದು, ದೇವರಿಗೆ ಬಂಗಾರದ ಕೋರೆ ಮೀಸೆ, ನಾಮ ಮೂಡಿಸುತ್ತೇವೆಂದು ದೇವರನ್ನು ಬೇಡಿಕೊಳ್ಳುತ್ತಾರೆ. ಸಂತಾನವಾದರೆ ಹುಟ್ಟು ಕೂದಲು ತೆಗೆಸುತ್ತೇನೆಂದು, ನಿನ್ನ ಹೆಸರು ಮಗುವಿಗೆ ನಾಮಕರಣ ಮಾಡುತ್ತೇವೆಂದು ದೇವರನ್ನು ಬೇಡಿಕೊಳ್ಳುತ್ತಾರೆ. ಮಂತ್ರಗಾರರ ಹತ್ತಿರ ತಾಯಿತ ಕಟ್ಟಿಸಿಕೊಳ್ಳುವುದು, ಮಂತ್ರಿಸಿದ ವಿಭೂತಿ ಹಚ್ಚಿಕೊಳ್ಳುವುದು, ನಾಟಿ ವೈದ್ಯರಿಂದ ಔಷಧಿ ತಿನ್ನುವುದು ಹೀಗೆ ಹಲವಾರು ರೀತಿಯಲ್ಲಿ ಮಕ್ಕಳು ಪಡೆಯುವ ಪ್ರಯತ್ನಮಾಡುವುದುಂಟು. ಇವೆಲ್ಲಾ ಸಮಾಜವನ್ನು ಒಪ್ಪಿಸುವ ಕೆಲಸಗಳಾಗಿವೆ. ಜನನವನ್ನು ಕುರಿತಂತೆ ಪ್ರತಿಯೊಂದು ಧರ್ಮವೂ ತನ್ನದೇ ಆದ ಕಲ್ಪನೆಯನ್ನು ಹೊಂದಿದೆ. ಇದಕ್ಕೆ ಹಗಲುವೇಷಗಾರರೂ ಹೊರತಲ್ಲ.

'ನಪುತ್ರಸ್ಯ ಗತಿರ್ನಾಸಿ' ಎಂಬ ನಾಣ್ನುಡಿಯಂತೆ ಪುತ್ರಸಂತಾನವಿಲ್ಲದವರಿಗೆ ಮೋಕ್ಷವಿಲ್ಲ. ತಮ್ಮ ವಂಶಕ್ಕೆ ಉತ್ತರಾಧಿಕಾರಿಯಾಗಲು ಮತ್ತು "ಕುಲ ಉದ್ಧರಿಸಲು ಪುತ್ರ ಇರಬೇಕು. ಬಿರುದು ತರಲು ಮಗಳು ಇರಬೇಕು" ಎಂದು ನಂಬಿರುತ್ತಾರೆ. ಸಂತಾನಹೀನ ಹೆಣ್ಣು ಎಲ್ಲರ ಪ್ರೀತಿ, ವಾತ್ಸಲ್ಯಗಳಿಂದ ವಂಚಿತಳಾಗುತ್ತಾಳೆ. "ಒಟ್ಟಿನಲ್ಲಿ ಸಂತಾನಹೀನ ಹೆಣ್ಣು ಮನೆಯಲ್ಲಾಗಲಿ, ಸಮಾಜದಲ್ಲಾಗಲಿ ಯಾವುದೇ

ಮಾನ ಸನ್ಮಾನ ಸಿಗದೇ ಕೊನೆಗೆ ಅತ್ತೆಮಾವಂದಿರ ಅಷ್ಟೇ ಏಕೆ ಗಂಡನ ಪ್ರೀತಿಯಿಂದಲೂ ವಂಚಿತಳಾಗುತ್ತಾಳೆ."[೩] ಎಂಬುದು ವಾಸ್ತವ ಸಂಗತಿಯಾಗಿದೆ.

ಜನನದ ಬಗ್ಗೆ ಹಲವು ಗ್ರಂಥಗಳಿಂದ ತಿಳಿದುಕೊಳ್ಳಬಹುದು. ಅದೇ ರೀತಿ ತಾಯ ಗರ್ಭದಲ್ಲಿ ಶಿಶು ರೂಪ ತಳೆಯುವ ಹಲವು ಘಟ್ಟಗಳನ್ನು ಬಾಲಸಂಗಯ್ಯನ ವಚನಗಳಿಂದ ತಿಳಿಯಬಹುದು.

"ಹದಿನೈದು ದಿನಕ್ಕೆ ಬುದ್ಬದಾಕಾರವಾಗಿಹುದು
ಏಕಮಾಸಕ್ಕೆ ಕುಕ್ಕುಟಾಂಡ ಸ್ವರೂಪವಾಗಿ ಶಿರಸವಹುದು
ದ್ವಿಮಾಸಕ್ಕೆ ಬಾಹು ಹುಟ್ಟುವುದು
ತ್ರಿಮಾಸಕ್ಕೆ ಉದರ ಹುಟ್ಟುವುದು
ಚತುರ್ಮಾಸಕ್ಕೆ ಸರ್ವಾಂಗ ಹುಟ್ಟುವುದು ನೋಡಾ
ಅಪ್ರಮಾಣ ಕೂಡಲ ಸಂಗಮದೇವಾ (ವಚನ -೧೧)
ಪಂಚಮಾಸಕ್ಕೆ ರೋಮಗಳು ಹುಟುವವು
ಷಟ್ ಮಾಸಕ್ಕೆ ಹಸ್ತಿಗಳು ಹುಟ್ಟುವವು
ಸಪ್ತಮಾಸಕ್ಕೆ ಜೀವಕಳೆ ಸಂಪೂರ್ಣವಹದು
ಅಷ್ಟಮಾಸಕ್ಕೆ ಪೂರ್ವಜನ್ಮನರಿವನು."[೪]

ಈ ವಚನದ ಎಷ್ಟೋ ಅಂಶಗಳು ವೈಜ್ಞಾನಿಕ ಶಿಸ್ತಿನಿಂದ ನಿರೂಪಿಸುವುದು ಗಮನಾರ್ಹ. ಇಂತಹ ಕೆಲವು ಸಂಗತಿಗಳು ಸಂಪ್ರದಾಯಿಕ ತಿಳುವಳಿಕೆಯನ್ನು ದಾಖಲಿಸುತ್ತವೆ.

ಶಿಷ್ಟ ಸಮಾಜದಲ್ಲಿರುವಂತೆ ಹಗಲುವೇಷಗಾರರ ಸಮುದಾಯದಲ್ಲಿ ಸೀಮಂತ ಎಂಬ ಆಚರಣೆ ರೂಢಿಯಲ್ಲಿಲ್ಲ. ಗರ್ಭಿಣಿಯಾದ ಮಗಳನ್ನು ಬಂದು ನೋಡಿ, ಹಣ್ಣು-ಹಂಪಲುಗಳನ್ನು ಕೊಟ್ಟು ಹೋಗುವ ಸಂಪ್ರದಾಯ ಕರ್ನಾಟಕದಲ್ಲಿದೆ. ಆಂಧ್ರಪ್ರದೇಶದಲ್ಲಾದರೆ ಹೆಂಡದ ಅಂಗಡಿಗೆ ಗರ್ಭಿಣಿಯಾದವಳನ್ನು ಕರೆದುಕೊಂಡು ಹೋಗಿ ತೃಪ್ತಿಯಾಗುವವರೆಗೆ ಕುಡಿಸುವ ಸಂಪ್ರದಾಯವಿದೆ. ಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಮೊದಲ ಹೆರಿಗೆ ತವರುಮನೆಯಲ್ಲಿ ನೆರವೇರಿಸುತ್ತಾರೆ. ಆದರೆ ವೇಷಗಾರರಲ್ಲಿ ತವರುಮನೆಯಲ್ಲಿಯೇ ಹೆರಿಗೆ ಕಾರ್ಯ ನಡೆಸಬೇಕೆಂಬ ನಿಯಮವೇನು ಇಲ್ಲ. ಅತ್ತೆಯ ಮನೆಯಲ್ಲಿಯೇ ಮೊದಲ ಹೆರಿಗೆ ಕಾರ್ಯನಡೆಯುತ್ತದೆ. ಹೆರಿಗೆಯಾಗುವರೆಗೂ ಗರ್ಭಿಣಿಯು ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಲೇ ಇರುತ್ತಾಳೆ.

೭.೧.೧. ಹೆರಿಗೆ : ಈ ಸಮುದಾಯದವರು ಹೆರಿಗೆ ಕಾರ್ಯ ನಡೆಸಲು ಅಗಸರು ಅತವಾ ಹೊರಜಾತಿಯ ಸೂಲಗಿತ್ತಿಯರನ್ನು ಕರೆಯಿಸುವುದಿಲ್ಲ. ಇವರ ಕುಲದಲ್ಲಿಯೇ ಹೆರಿಗೆ ಮಾಡಿಸುವ ಕಾರ್ಯದಲ್ಲಿ ಅನುಭವಸ್ಥಳಾದವಳು ಇರುತ್ತಾಳೆ. ಅವಳನ್ನು ಇವರು 'ಮಂತ್ರಸಾನಿ' ಎಂದು ಕರೆಯುತ್ತಾರೆ. ಇವರು ಸಂಚಾರಿಗಳಾಗಿರುವುದರಿಂದ ಮಂತ್ರಸಾನಿ ಯಾವ ಊರಿನಲ್ಲಿರುತ್ತಾಳೆಯೋ ತಿಳಿದುಕೊಂಡು ಹೆರಿಗೆಯ ಒಂದು ತಿಂಗಳು ಮುಂಚೆಯೇ ಮಂತ್ರಸಾನಿ ಇರುವ ಊರಿಗೆ ಹೋಗಿ ಅವರ ಪಕ್ಕದಲ್ಲಿ ತಾವು ಬಿಡಾರ

ಹಾಕಿಕೊಂಡು ಇರುತ್ತಾರೆ. ಮಂತ್ರಸಾನಿ ಕುಟುಂಬ ಮತ್ತೊಂದು ಊರಿಗೆ ಬದಲಾದರೆ ಅವರ ಹಿಂದೆ ಈ ಗರ್ಭಿಣಿ ಕುಟುಂಬ ಕೂಡ ಬದಲಾಗುತ್ತಾರೆ.''[೫]

ಇವರ ಬಿಡಾರ ಅರ್ಧ ಚಂದ್ರಾಕೃತಿಯಲ್ಲಿರುತ್ತವೆ. ಗರ್ಭಿಣಿಗೆ ಹೆರಿಗೆ ನೋವು ಪ್ರಾರಂಭವಾದಾಗ ಹೋಗಲು, ಬರಲು, ಸ್ವಲ್ಪ ಸಂದು ಬಿಟ್ಟು ಉಳಿದಿದ್ದನ್ನು ಮುಚ್ಚಿ ಬಿಡುತ್ತಾರೆ. ಹೆರಿಗೆಗೆ ನೋವು ಬಾರದೆ ಪ್ರಸವವೂ ಆಗದೆ ಸಂಕಟ ಪಡುತ್ತಿದ್ದರೆ, ಪಕ್ಕದಲ್ಲಿದ್ದ ಮಂತ್ರಸಾನಿಯನ್ನು ಕರೆತರುತ್ತಾರೆ. ಆ ಮಂತ್ರಸಾನಿಯು ಇತ್ತಾಳೆಯ ಚಂಬಿನಲ್ಲಾಗಲಿ, ರಾಗಿಯ ಚಂಬಿನಲ್ಲಾಗಲಿ ಮಂತ್ರಿಸಿದ ನೀರು ತಂದು ಗರ್ಭಿಣಿಗೆ ಕುಡಿಸಿ, ಆ ಚೆಂಬು ನೆಲದ ಮೇಲಿಟ್ಟರೆ ಮೈಲಿಗೆ ಆಗುತ್ತದೆಂದು ಬಿಡಾರದ ಮೇಲಿಡುತ್ತಾರೆ. ಸ್ವಲ್ಪ ಸಮಯದ ನಂತರ ಮತ್ತೆ ನೀರು ಕುಡಿಸುತ್ತಾರೆ. ಇಂದಿಗೂ ಸಹ ಹೆರಿಗೆಗೆ ಆಸ್ಪತ್ರೆಗೆ ಹೋಗುವುದಿಲ್ಲವೆಂಬುದು ತಿಳಿದುಬರುತ್ತದೆ.

ಗರ್ಭಿಣಿಗೆ ಮಂತ್ರಸಾನಿಯು ಧೈರ್ಯ ಹೇಳುತ್ತಾ ಮಾನಸಿಕವಾಗಿ ಹೆರಿಗೆಗೆ ಸಿದ್ಧಪಡಿಸುತ್ತಿರುತ್ತಾಳೆ. ಗರ್ಭಿಣಿಗೆ ನೋವು ಬಂದು ಪ್ರಸವ ಸಂಭವಿಸುವಾಗ ಬಿಡಾರದ ಸುತ್ತಲೂ ನಿಂತು ಕೆಲವು ಸ್ತ್ರೀಯರು ಸ್ವಲ್ಪ ತಲೆಯ ಭಾಗ ಹೊರಗೆ ಬಂದಿದ್ದರೆ, ಅದನ್ನು ಹಿಡಿದು ಅವಳಿಗೆ ಧೈರ್ಯ ಬರುವಂತೆ ಶಿವುಡೊಚ್ಚ, ಶಿವಜೊಚ್ಚ (ಶಿವಬಂದ...ಶಿವಬಂಧ) ದೇವುಡೊಚ್ಚ ದೇವುಡೊಚ್ಚ (ದೇವರು ಬಂದ...ದೇವರು ಬಂದ...) ಸ್ವಾಮಿ...ಸ್ವಾಮಿ... ಎನ್ನುತ್ತಾ ಪ್ರಸವ ಆಗುವವರೆಗೂ ನಿನಾದ ಮಾಡುತ್ತಿರುತ್ತಾರೆ.

ಹೆರಿಗೆಯಾಗುವುದಕ್ಕಿಂತ ಮೊದಲು ತೊಳೆದ ಈಳಿಗೆ, ಇಲಿಯ ಇಕ್ಕೆ ಆಯ್ದು ತಂದಿರುತ್ತಾರೆ. ಕುಂಬಾರರಿಂದ ಒಂದು ಹೊಸ ಗಡಿಗೆಯನ್ನು ತಂದಿರುತ್ತಾರೆ. ಹೆರಿಗೆಯಾದ ತಕ್ಷಣ ಈಳಿಗೆಯಿಂದ ಹೊಕ್ಕಳ ಹುರಿಯನ್ನು ಕೊಯ್ಯುತ್ತಾರೆ. "ಇಲಿಯ ಇಕ್ಕೆಗಳನ್ನು ಪುಡಿಮಾಡಿ ಅದರಲ್ಲಿ ಅರಿಷಿಣಪುಡಿ, ಕೊಬ್ಬರೆ ಎಣ್ಣೆ ಮಿಶ್ರಗೊಳಿಸಿ ಹೊಕ್ಕಳು ಹುರಿಕೊಯ್ದ ಭಾಗಕ್ಕೆ ಹಚ್ಚುತ್ತಾರೆ."[೬] ಹೀಗೆ ಹಚ್ಚುವುದರಿಂದ ತಾಯಿಯ ವಿಸರ್ಜಿತ ವಸ್ತು ಇದ್ದರೆ ಕೂಸಿನ ಹೊಟ್ಟೆಯಿಂದ ತಕ್ಷಣ ಹೊರಬರುತ್ತದೆ ಎಂದು ಹೇಳುತ್ತಾರೆ. ಇನ್ನು ಕೆಲವರು ಅರಿಷಿಣ ಕೊಬ್ಬರಿ ಎಣ್ಣೆ ಮಾತ್ರ ಹಚ್ಚುತ್ತಾರೆ. ನಂತರ ಮಗುವಿನ ಮೈಯನ್ನು ಒಂದು ಬಟ್ಟೆಯಿಂದ ಸ್ವಚ್ಛಗೊಳಿಸುತ್ತಾರೆ. ಹಾಗೂ ಕಿವಿಯನ್ನು ಊದಿ ಅಲ್ಲಿ ಇದ್ದಿರಬಹುದಾದ ಕಲ್ಮಶ ಹೊರ ಹೋಗುವಂತೆ ಮಾಡುತ್ತಾರೆ. ಹೆರಿಗೆಯಾದ ನಂತರ ಬರುವ ಮಾಸವನ್ನು ಇವರು 'ಮಾಯ' ಎಂದು ಕರೆಯುತ್ತಾರೆ. ಅದನ್ನು ಹೊಸ ಗಡಿಗೆಯಲ್ಲಿ ತುಂಬಿಡುತ್ತಾರೆ. ಬಳಿಕ ಬಿಡಾರದ ಮುಂದೆ ಒಂದು ಬಂಡೆಯ ಮೇಲೆ ಉಗುರು ಬೆಚ್ಚಗಿನ ನೀರಿನಿಂದ ಮಗುವಿಗೆ ಸ್ನಾನ ಮಾಡಿಸಿ ಶುದ್ಧವಾದ ಬಟ್ಟೆಯನ್ನು ಹೊದಿಸಿ, ಮೊರದಲ್ಲಿ ಮಲಗಿಸುತ್ತಾರೆ. ಬಾಣಂತಿಗೆ ಶೀತವಾಗಬಾರದೆಂದು ಕಿವಿಯಲ್ಲಿ ಹತ್ತಿಯನ್ನು ಇಟ್ಟು ತಲೆಯ ಸುತ್ತ ಬಟ್ಟೆ ಕಟ್ಟುತ್ತಾರೆ.

೨.೧.೨. ಕೊಲ್ಲು : ಪ್ರಸವ ಜರುಗಿದ ಮೇಲೆ ಕೊಲ್ಲು ತಯಾರು ಮಾಡುತ್ತಾರೆ. ಕೊಲ್ಲು ಅಂದರೆ ಬಾಣಂತಿಯರು ಸ್ನಾನಮಾಡಿದ ಸೀರು ಹರಿದು ಹೋಗದಂತೆ ತಡೆಯಲು ಹಾಕಿದ ಒಂದು ಸಣ್ಣ ಒಡ್ಡು

ಅಥವಾ ತಡೆ. ತೆಲುಗು ಅರ್ಥಕೋಶದಲ್ಲಿ ನೀರಿನ ಕಾಲುವೆ, ಮಾಸದ ಕಟ್ಟೆ ಎಂಬ ಸಮಾನಾರ್ಥಕ ಪದ ಇವೆ. ಬಿಡಾರದ ಎದುರು ಸ್ವಲ್ಪ ದೂರದಲ್ಲಿ ಸುಮಾರು ಆರು ಅಡಿ ವ್ಯಾಸದಲ್ಲಿ ಸುತ್ತು ಐದು ಇಂಚು ಆಳದಲ್ಲಿ ಕುಣಿ ತೆಗೆದು, ಮಣ್ಣನ್ನು ಸುತ್ತಲೂ ಒಡ್ಡುಕಟ್ಟಿ ಅದರ ಮೇಲೆ ಸುತ್ತ ಬೇವಿನಕೊಂಬೆಗಳನ್ನು ನಾಟುತ್ತಾರೆ. ಹಾಗೆ ಮಾಡಿದ ವ್ಯಾಸದ ಮಧ್ಯದಲ್ಲಿ ಮೂರಡಿ ಆಳಕ್ಕೆ ಕುಳಿ ತೆಗೆದು ಅದರಲ್ಲಿ ಮಾಸದ ಗಡಿಗೆಯನ್ನು ಸಮನಾಗಿ ನಿಲ್ಲಿಸಿ ಅದರ ಮೇಲೆ ಸಣ್ಣ ಕಲ್ಲು ಬಂಡೆಯನ್ನಿಟ್ಟು ಮಣ್ಣು ಮುಚ್ಚುತ್ತಾರೆ. ಆ ಗಡಿಗೆಯನ್ನು ಸಮಾಂತರವಾಗಿ, ನೆಟ್ಟಗೆ ನಿಲ್ಲಿಸಿ ಹೂಳದಿದ್ದರೆ ಮಗುವು ಹಾಲು ಕಕ್ಕುತ್ತದೆ ಎಂದು ಇವರ ನಂಬಿಕೆ.

''ಹೆರಿಗೆಯಾದ ಮೇಲೆ ಬಾಣಂತಿ ಮತ್ತು ಮಗು ಇರುವ ಬಿಡಾರದಲ್ಲಿ ಕೊಡಲಿ, ಬಾರಿಗೆ, ಮೀನಿನ ಬಲೆ ಇಟ್ಟು ಬಿಡಾರದ ಸುತ್ತ ಬೂದಿ ಮಂತ್ರಿಸಿ ಹಾಕುತ್ತಾರೆ. ಹೀಗೆ ಮಾಡುವುದರಿಂದ ಭೂತ, ಪ್ರೇತಗಳು ಪಕ್ಕ ಸುಳಿಯುವುದಿಲ್ಲವೆಂಬ ನಂಬಿಕೆಯಿದೆ.ಮೀನಿನ ಬಲೆಯನ್ನು 'ನೂರು ಗಂಡರ ಹುಲಿ' ಎಂದು ಕರೆಯುತ್ತಾರೆ. ಏಕೆಂದರೆ ಭೂತ, ಪ್ರೇತಗಳನ್ನು ಅಡ್ಡ ತಡೆಯುವುದರಲ್ಲಿ ಇದು ಹೆಸರುವಾಸಿಯಾದುದು ಎಂದು ಹೇಳುತ್ತಾರೆ. ಇದನ್ನು 'ಪೊತ್ತಿ ಕಟ್ಟಡಂ' ಎಂದು ಕರೆಯುತ್ತಾರೆ.

''ಹೆರಿಗೆಯಾದ ನಂತರ ಬಂದ ಮಾಸವನ್ನು ಮಾಯಮಂತ್ರ ಅಥವಾ ಕೊಲ್ಲು ಎಂದು ಸಹ ಕರೆಯುತ್ತಾರೆ. ಈ ಕೊಲ್ಲಿನಲ್ಲಿಯೂ ಎರಡು ರೀತಿ ಉಂಟು. ಅವುಗಳೆಂದರೆ, 'ದೊರೆಕೊಲ್ಲು' ಮತ್ತು 'ದೊಂಗಕೊಲ್ಲು', ಹುಟ್ಟಿದಾಗ ಮಗುವಿನ ಅಂಗಾಗಗಳೆಲ್ಲವೂ ಸರಿಯಾಗಿದ್ದು, ದೈಹಿಕವಾಗಿ ಸಮರ್ಥ ಮತ್ತು ಆರೋಗ್ಯವಾಗಿದ್ದರೆ ಅಂತಹ ಕೊಲ್ಲನ್ನು 'ದೊರೆಕೊಲ್ಲು' ಎಂದು ಕರೆಯುತ್ತಾರೆ. ಇದನ್ನು ಬಿಡಾರದ ಮುಂದೆ ಸುಮಾರು ಐದಾರು ಅಡಿಗಳ ದೂರದಲ್ಲಿ ಬಲ ಪಕ್ಕಕ್ಕೆ ಗುಂಡಿ ತೋಡಿ ಸೋರೆ ಸಹಿತ ಊಳುತ್ತಾರೆ. ಹುಟ್ಟಿದ ಮಗುವಿನ ಅಂಗಾಂಗಗಳು ಸರಿಯಾಗಿಲ್ಲದಿದ್ದರೆ ಮತ್ತು ಮಗುವು ದೈಹಿಕವಾಗಿ ಅಸಮರ್ಥವಾಗಿ ಮಗುವಿನ ಆರೋಗ್ಯ ಚೆನ್ನಾಗಿಲ್ಲದಿದ್ದರೆ ಅಂತಹ ಕೊಲ್ಲನ್ನು 'ದೊಂಗಕೊಲ್ಲು' ಎಂದು ಕರೆಯುತ್ತಾರೆ. ಇಂತಹ ಕೊಲ್ಲನ್ನು ಬಿಡಾರದ ಮುಂದೆ ಒಂದು ಪಕ್ಕಕ್ಕೆ ಅಂದರೆ ದೊರೆಕೊಲ್ಲುವಿಗಿಂತಲೂ ಇನ್ನೂ ಸ್ವಲ್ಪ ದೂರದಲ್ಲಿ ಸುಮಾರು ಇಪ್ಪತ್ತು ಅಡಿಗಳ ದೂರದಲ್ಲಿ ಬಲ ಪಕ್ಕಕ್ಕೆ ಊಳುತ್ತಾರೆ. ದೊರೆಕೊಲ್ಲು ಊಳಿದ ಜಾಗದಲ್ಲಿ ಹಾಸುಗಲ್ಲನ್ನಿಟ್ಟು ಅದರ ಮೇಲೆ ಬಾಣಂತಿಯನ್ನು ಕೂಡಿಸಿ ಸ್ನಾನ ಮಾಡಿಸುತ್ತಾರೆ. ದೊಂಗ ಕೊಲ್ಲುವಿನ ಮೇಲೆ ಬಾಣಂತಿಗೆ ಸ್ನಾನ ಮಾಡಿಸುವುದಿಲ್ಲ. ಬೇರೆ ಜಾಗದಲ್ಲಿ ಕಲ್ಲು ಇಟ್ಟು ಅದರ ಮೇಲೆ ಬಾಣಂತಿಯನ್ನು ಕೂಡಿಸಿ ಸ್ನಾನ ಮಾಡಿಸುತ್ತಾರೆ. ದೊಂಗ ಕೊಲ್ಲನ್ನು ದೂರ ಊಳಿದರೆ ಮಗುವಿನ ಆರೋಗ್ಯ ಸರಿ ಹೋಗುತ್ತದೆ ಎನ್ನುವ ನಂಬಿಕೆ ಇವರದು.''[೬] ಹೀಗೆ ಇವರಿಗೆ ಇವರದೇ ಆದಂತ ಹಲವಾರು ನಂಬಿಕೆಗಳಿವೆ.

ಹೆರಿಗೆಯಾದ ಮೇಲೆ ಮಾಯ ಅಥವಾ ಕೊಲ್ಲನ್ನು ಊಳಿದ ಮೇಲೆ ಬಾಣಂತಿಗೆ ಸ್ನಾನ ಮಾಡಿಸುತ್ತಾರೆ. ತಮ್ಮ ಸಮುದಾಯದ ಸುತ್ತಮುತ್ತಲಿನ ಬಿಡಾರದವರೆಲ್ಲರೂ ಒಂದೊಂದು ಅಂಡೆ ನೀರು ಕಾಯಿಸಿಕೊಂಡು

ತರುತ್ತಾರೆ. ಬಹುಶಃ ಅಲೆಮಾರಿಗಳಾದ ಇವರು ಊರಿನ ಹೊರಗಡೆ ವಾಸಿಸುವುದರಿಂದ ನೀರಿನ ಕೊರತೆ ಇದ್ದು, ಒಬ್ಬರಿಗೊಬ್ಬರು ಸಹಕರಿಸಿ ಬದುಕಲು ರೂಢಿಸಿಕೊಂಡಿದ್ದು ಮುಂದೆ ಇದೇ ಒಂದು ಆಚರಣೆಯಾಗಿ ಪರಿವರ್ತನೆಯಾಗಿರುವ ಸಾಧ್ಯತೆ ಇದೆ. ಹೀಗೆ ನೀರು ಕಾಯಿಸುವಾಗ ಅದರಲ್ಲಿ ಬೇವಿನ ತಪ್ಪಲು ಹಾಕಿರುತ್ತಾರೆ. ಬಾಣಂತಿಯ ಕುಡುಗೋಲು, ಬೇವಿನಕೊಂಬೆ ಕೈಯಲ್ಲಿ ಹಿಡಿದುಕೊಂಡು ಹೊರ ಬರುತ್ತಾಳೆ. ಮಂತ್ರಸಾನಿ ಅವಳಿಗೆ ನೀರು ಚಿಮುಕಿಸುತ್ತಾಳೆ. ಆ ನೀರು ಮೈಮೇಲೆ ಬಿದ್ದ ಮೇಲೆ ಕೈ ಮುಗಿದು ಎರಡು ಹೆಜ್ಜೆ ಮುಂದೆ ಬರುತ್ತಾಳೆ. ಮತ್ತೆ ಮಂತ್ರಸಾನಿ ಬಾಣಂತಿಗೆ ನೀರು ಚಿಮುಕಿಸುತ್ತಾಳೆ. ಅವಳು ಕೈಮುಗಿದು ಮತ್ತೆ ಎರಡು ಹೆಜ್ಜೆ ಮುಂದೆ ಬರುತ್ತಾಳೆ. ಹೀಗೆ ಮೂರು ಸಾರಿ ಮಾಡುತ್ತಾರೆ. ಮಂತ್ರಸಾನಿ ಬೇವಿನ ಮಂಡಲಕ್ಕೆ ನೀರು ಚಿಮುಕಿಸಿ, ಮಾಯ ಅಥವಾ ಕೊಲ್ಲು ಹೂತಿರುವ ಕುಣಿಯ ಮೇಲೆ ಒಂದು ಕಲ್ಲು ಹಾಕಿ ಅದರ ಮೇಲೆ ಬಾಣಂತಿಯನ್ನು ಕೂಡಿಸಿ ಬೇವಿನ ತಪ್ಪಲು, ಅರಿಷಿಣ ಪುಡಿ ಕೂಡಿಸಿ ಉಳಿದಿದ್ದನ್ನು ಮೈಗೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ನೀರು ಹರಿದು ಹೋಗದಂತೆ ಮಂಡಲ ಏಕೆ ಮಾಡಿರುತ್ತಾರೆಂದರೆ. ಬಾಣಂತಿ ಸ್ನಾನ ಮಾಡಿದ ನೀರು ದಾಟಬಾರದು. ದಾಟಿದರೆ ಬಾಣಂತಿಯು ಸುಖವಾಗಿರುವುದಿಲ್ಲವೆಂದು ನಂಬಿರುತ್ತಾರೆ. ಬಾಣಂತಿಯ ಸ್ನಾನ ಆದ ಮೇಲೆ ಸೂರ್ಯನಿಗೆ ಮೂರು ಸಾರಿ ನಮಸ್ಕಾರ ಮಾಡಿ ಬಿಡಾರದ ಒಳಗಡೆ ಪ್ರವೇಶಿಸುವಳು.

೭.೧.೩. ಪುರುಡು ಅಥವಾ ನಾಮಕರಣ : ಮಗುವು ಜನಿಸಿದ ಮೂರನೆಯ ದಿನವನ್ನು ಪುರುಡು ಎಂದು ಆಚರಿಸುತ್ತಾರೆ. ಆ ದಿನ ಬೆಳಿಗ್ಗೆ ಮಗುವಿನ ಸಂಬಂಧಿಕರು ಮತ್ತು ಸುತ್ತಮುತ್ತಲಿನವರು ಶಿಕಾರಿ ಅಥವಾ ಬೇಟೆಗೆ ಹೋಗುತ್ತಾರೆ. ಅಂದು ಸಿಕ್ಕ ಮೀನು, ಏಡಿ, ಇಲಿ, ಉಡ ಮುಂತಾದವುಗಳನ್ನು ಬೇಟೆಯಾಡಿ ತರುತ್ತಾರೆ. ಒಟ್ಟಿನಲ್ಲಿ ಅಂದು ಬೇಟೆಗೆ ಹೋಗಲೇ ಬೇಕೆಂಬ ನಿಯಮವಿದೆ ಎಂದು ಕೆಲವರು ಹೇಳುತ್ತಾರೆ. ಕೆಲವರು ನಾವು ಬೇಟೆಯಾಡುವ ಜನ ಬೇಟೆಯಾಡುತ್ತೇವೆ. ಅಂದು ಹೋಗಲೇಬೇಕೆಂಬ ಕಡ್ಡಾಯವೇನಿಲ್ಲ ಎಂದು ಕೆಲವರು ಹೇಳುತ್ತಾರೆ.

ಅದೇ ದಿನ ಈ ಸಮುದಾಯದ ಆಚಾರದ ಪ್ರಕಾರ ಗಂಡು ಮಗುವಾದರೆ ಐವತ್ತು ರೂಪಾಯಿ ಹೆಣ್ಣಾದರೆ ಇಪ್ಪತ್ತೈದು ರೂಪಾಯಿ ಕುಲಕ್ಕೆ ಇನಾಮು ಕೊಡಬೇಕು. ಕುಲಸ್ಥರು ಆ ಹಣದಿಂದ ಏನನ್ನಾದರು ಖರೀದಿಸಿ ಹಂಚಿಕೊಳ್ಳುತ್ತಾರೆ. ಆ ಹಣ ಯಾವುದಕ್ಕೂ ಸರಿಹೊಂದಿದ್ದರೆ ಕೊನೆಗೆ ಬೀಡಿ, ಸಿಗರೇಟು ಕೊಂಡು ಹಂಚಿಕೊಳ್ಳುತ್ತಾರೆ. ಮಂತ್ರಸಾನಿಗೆ ಐವತ್ತೊ, ಅಥವಾ ಇಪ್ಪತ್ತೈದು ರೂಪಾಯಿ ಕೊಟ್ಟು, ಹೊಟ್ಟೆ ತುಂಬಾ ಊಟ ಹಾಕಿ, ಕೇಳಿದಷ್ಟು ಹೆಂಡ, ಸರಾಯಿ ಕುಡಿಸುತ್ತಾರೆ. ಇವಳು ವಾರದವರೆಗೂ ಬಾಣಂತಿಯನ್ನು ಉಪಚರಿಸುತ್ತಾ ಇರುತ್ತಾಳೆ. ಕುಟುಂಬದ ಮುಖ್ಯಸ್ಥರು ಮತ್ತು ಅವರ ಹಿಂದೆ ಬೇಟೆಗೆ ಹೋದವರಿಗೆಲ್ಲ ನೀರು ಕಾಯಿಸಿ ಹಾಕಿದವರಿಗೆ ಕುಟುಂಬದ ಯಜಮಾನ ಹೆಂಡ, ಸರಾಯಿ ಕುಡಿಯಿಸುತ್ತಾನೆ. [illegible] ಕುಲಸ್ಥರಲ್ಲಿ ಕೆಲವರು ಮನೆಗೊಬ್ಬರನ್ನು ಕರೆದು ಊಟ ಹಾಕಿಸುತ್ತಾರೆ.

ಊಟದ ಕಾರ್ಯಕ್ರಮ ಮುಗಿದ ಮೇಲೆ ಅಲ್ಲಿ ಸೇರಿದ ಕುಲಬಾಂಧವರು ಆ ಮಗುವಿನ ತಂದೆ

ತಾಯಿಗಳನ್ನು ನಿಮ್ಮ ಮಗುವಿಗೆ ಏನು ಹೆಸರು ಇಟ್ಟಿದ್ದೀರಿ ಎಂದು ಕೇಳುತ್ತಾರೆ. ಆಗ ಆತ ಬಂದು ಹೆಸರನ್ನು ಎಂದು ತಂದೆ ಹೇಳುತ್ತಾನೆ. ಇದೇ ಇವರಲ್ಲಿ ನಾಮಕರಣವಿದ್ದಂತೆ, ಸಾಮಾನ್ಯವಾಗಿ ತಾತನ ಹೆಸರು, ಅಜ್ಜಿಯ ಹೆಸರು, ಮುತ್ತಾತನ ಹೆಸರು, ಮನೆ ದೇವತೆಯ ಹೆಸರಾದ ಎಲ್ಲಮ್ಮ, ಪೋಷಮ್ಮ, ಮಾರೆಮ್ಮ, ಸುಂಕ್ಲಮ್ಮ, ಜಂಬಲಮ್ಮ ಎಂದು ಹೆಸರಿಸುತ್ತಾರೆ. ಮೊದಲೇ ಯಾವುದಾದರು ದೇವರಿಗೆ ನಡೆದುಕೊಂಡಿದ್ದರೆ, ಅಂತಹ ದೇವರ ಹೆಸರು ವೆಂಕಟಯ್ಯ, ಅಂಜಯ್ಯ, ಹನುಮಂತ, ಶಿವಲಿಂಗಪ್ಪ, ಶ್ರೀನಿವಾಸ, ನರಸಿಂಹ, ಶಂಕರಪ್ಪ, ಮಲ್ಲಯ್ಯ ಎಂದು ಹೆಸರಿಡುತ್ತಾರೆ. ಮುಸ್ಲಿಂ ದೇವರಿಗೆ ನಡೆದುಕೊಂಡಿದ್ದರೆ ಮೆಹಬೂಬ, ಹುಸೇನ ಮಸ್ತಾನಯ್ಯ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಮೊದಲಿನ ಮಕ್ಕಳು ಸಾಯುತ್ತಾ ಇದ್ದರೆ ಕೆಲವು ಪ್ರತ್ಯೇಕವಾದ ಹೆಸರುಗಳನ್ನಿಡುತ್ತಾರೆ. ಹುಟ್ಟಿದ ಮಗುವನ್ನು ಜೋಳಿಗೆಯಲ್ಲಿ ಹಾಕಿಕೊಂಡು ಅಡ್ಡಾಡಿ ಜೋಳೆಯ್ಯ ಎಂದು ಭಿಕ್ಷೆಯ ಜೋಳಿಗೆಯಲ್ಲಿ ಹಾಕಿಕೊಂಡು ಊರಲ್ಲಿ ಅಡ್ಡಾಡಿ ಬಂದು 'ಭಿಕ್ಷೆಯ್ಯ' ಎಂದು ಹೆಸರಿಡುತ್ತಾರೆ. ಹೀಗೆ ಮಾಡುವುದರಿಂದ ಹುಟ್ಟಿದ ಮಕ್ಕಳು ಸಾಯುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ.

೭.೧.೪. ಕಲ್ಲು ಪೂಜೆ, ಕಳ್ಳು ಪೂಜೆ : ಪುರಡುವಿನ ದಿನ ಬೇಟೆಯಾಡಿ ಹೋಗಿ ತಂದ ಪ್ರಾಣಿಗಳಲ್ಲಿ ಮೀನು, ಏಡಿ, ಇಲಿ ಮಾಂಸದ ಸಾರು ಬೇರೆ ಬೇರೆ ಸಿದ್ಧಪಡಿಸುತ್ತಾರೆ. ಅನ್ನ ಮಾಡುತ್ತಾರೆ. ಮೂರು 'ಬಿಂಗುಸಿ ಕಲ್ಲು'[೮] ತಂದು ತೊಳೆದು, ಅವುಗಳನ್ನು ಒಂದರ ಪಕ್ಕದಲ್ಲಿ ಒಂದಿರಿಸಿ ಅರಿಷಿಣ, ಕುಂಕುಮ ಬೊಟ್ಟು ಇಟ್ಟು ಪೂಜೆ ಸಲ್ಲಿಸುತ್ತಾರೆ. ಆ ಕಲ್ಲುಗಳ ಮುಂದೆ ಮೂರು ಪತ್ರವಳಿ ಹಾಕಿ ಅವುಗಳಲ್ಲಿ ಅನ್ನ, ಮೀನು, ಏಡಿ, ಇಲಿಯ ಮಾಂಸದ ತುಂಡು ಇಟ್ಟು ಎಡೆ ಮಾಡುತ್ತಾರೆ. ಇದನ್ನು 'ಎಡೆ' ಹಾಕುವುದು ಎನ್ನುತ್ತಾರೆ. ಭೂತ ಬಲಿಗೆ ಹಾಕುವ ಆಹಾರವನ್ನು ಎಡೆ ಎಂತಲೂ ಕರೆಯುತ್ತಾರೆ. ಮೂರು ಕಲ್ಲಿನ ಪಕ್ಕದಲ್ಲಿ ಮೂರು ಎಡೆ ಹಾಕಿ ಪಕ್ಕದಲ್ಲಿ ಒಂದು ದೀಪವಿಡುತ್ತಾರೆ. ಅದಕ್ಕೂ ಮೊದಲು ಬೆಳ್ಳುಳ್ಳಿಗೆ ಅದರ ಮೇಲಿನ ಸಿಪ್ಪೆಯನ್ನು ಬಿಡಿಸಿ ದಾರಕ್ಕೆ ಪೋಣಿಸಿ ಮೂರು ಹಾರ ಮಾಡಿರುತ್ತಾರೆ. ಈ ಮೂರು ಬೆಳ್ಳುಳ್ಳಿ ಹಾರಗಳಲ್ಲದೆ ಇನ್ನೊಂದನ್ನು ಮಗುವಿನ ಕೈಗೆ ಕಟ್ಟುತ್ತಾರೆ. ಹೆಣ್ಣು ಮಗುವಾದರೆ ಸೊಂಟಕ್ಕೆ ಕಟ್ಟುತ್ತಾರೆ. ಆ ಬಳಿಕ ಬಾಣಂತಿಗೆ ಉರಿಯುವ ದೀಪ ಕೈಗೆ ಕೊಟ್ಟು. ಅವಳಿಗೆ ಮೈತುಂಬ ಒಂದು ಬಟ್ಟೆಯನ್ನು ಹೊದಿಸಿ ಕೊಲ್ಲು ಊಳಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅದಕ್ಕೆ ಮೂರು ಸಾರಿ ಪ್ರದಕ್ಷಿಣೆ ಮಾಡಿಸುತ್ತಾರೆ. ಪೂರ್ವಕ್ಕೆ ಅಥವಾ ಉತ್ತರಕ್ಕೆ ಮುಖಮಾಡಿ ಕೊಲ್ಲು ಊಳಿದ ಜಾಗದಲ್ಲಿ ಬಂಡೆ ಹಾಕಿರುವ ಹಾಸುಗಲ್ಲಿನ ಮೇಲೆ ಕೂಡಿಸುತ್ತಾರೆ. ಮೊದಲು ಮಾಸ ಊಳಿದ ಸ್ಥಳದ ಪಕ್ಕದಲ್ಲಿ ಇನ್ನೊಂದು ಕುಣಿ ತೋಡಿ ಅದರಲ್ಲಿ ಬಿಂಗುಸಿ ಕಲ್ಲಿಗೆ ಮಾಡಿದ ಎಡೆಯಲ್ಲಿ ಒಂದು ಎಡೆ, ಪೂಜೆ ಸಲ್ಲಿಸಿದ ಬಿಂಗಣ್ಣಾ ಕಲ್ಲು, ಒಂದು ಬೆಳ್ಳುಳ್ಳಿಹಾರ ಹಾಕಿ ಮುಚ್ಚುತ್ತಾರೆ. ಎರಡನೆಯ ಬೆಳ್ಳುಳ್ಳಿ ಹಾರವನ್ನು ಬಾಣಂತಿಯ ಮಂಗಳ ಸೂತ್ರಕ್ಕೆ ಕಟ್ಟುತ್ತಾರೆ. ಮೂರನೆಯದನ್ನು ಗಂಡುಮಗುವಾದರೆ ಹೆಣ್ಣು ನಾಯಿಗೆ, ಹೆಣ್ಣು ಮಗುವಾದರೆ ಗಂಡು ನಾಯಿಯನ್ನು ಕರೆತಂದು ಅದಕ್ಕೆ ಮೈತೊಳೆದು, ಪೂಜೆ ಸಲ್ಲಿಸಿ ಅದರ

ಕೊರಳಿಗೆ ಕಟ್ಟಿ, ಒಂದು ಎಡೆಯನ್ನು ತಿನ್ನಿಸಿ ನಾಯಿಯನ್ನು ಅರಚುವಂತೆ ಹೊಡೆಯುತ್ತಾರೆ. ಇನ್ನೊಂದು ಎಡೆಯನ್ನು ಬಾಣಂತಿ ಸ್ವಲ್ಪ ತಿಂದು ಉಳಿದಿರುವುದನ್ನು ಮೂವರು ಸಣ್ಣ ಮಕ್ಕಳಿಗೆ ತಿನ್ನಿಸುತ್ತಾರೆ. ಗಂಡು ಮಗು ಹುಟ್ಟಿದರೆ ಹೆಣ್ಣು ಹುಡುಗರಿಗೆ ತಿನ್ನಿಸಬೇಕು. ಹೆಣ್ಣು ಮಗು ಹುಟ್ಟಿದ್ದರೆ, ಗಂಡು ಮಕ್ಕಳಿಗೆ ತಿನ್ನಿಸಬೇಕು ಎಂಬ ರೂಢಿ ಇವರಲ್ಲಿದೆ. ಆಮೇಲೆ ಅಲ್ಲೆ ನೆಲದ ಮೇಲೆ ಬೆಂಕಿ ಹಾಕಿ ಅದರಲ್ಲಿ ಎಣ್ಣೆ ಹಾಕಿ ಹೊಗೆ ಏಳಿಸುತ್ತಾರೆ. ಆಗ ಬಾಣಂತಿ "ಎಣ್ಣೆಧಾರೆ ನೀನು ತಗೋ ಹಾಲಿನ ಧಾರೆ ನನಗೆ ಕೊಡು" ಎಂದು ಮೂರು ಸಾರಿ ಹೇಳಿ ಬೆಂಕಿಗೆ ಕೈಮುಗಿಯುತ್ತಾಳೆ. ಆ ಬೆಂಕಿಯನ್ನು ಇವರು ಭೂತ ಎಂದು ತಿಳಿದಿದ್ದಾರೆ. ಆ ಮೇಲೆ ಭೂತಾಯಿಗೆ ನಮಸ್ಕರಿಸಿ "ಕೊಲ್ಲುಧಾರೆ ನೀನು ತಗೋ ಹಾಲು ಧಾರೆ ನನಗೆ ಕೊಡು" ಎಂದು ಮೂರುಸಾರಿ ಕೈ ಮುಗಿಯುತ್ತಾಳೆ. ತರುವಾಯ ಅವಳನ್ನು ಮನೆಗೆ ಕರೆದುಕೊಂಡು ಹೋಗುತ್ತಾರೆ. ಮಂಡಲವೆಂದು ಮಣ್ಣಿನ ಕಟ್ಟೆ ಕಟ್ಟಿ ಬೇವಿನಕೊಂಬೆ ನೆಟ್ಟಿದ್ದನ್ನು ಕಿತ್ತುಹಾಕಿ ಮಣ್ಣಿನಿಂದ ಮುಚ್ಚುತ್ತಾರೆ. ಇದಿಷ್ಟು ವಿಧಾನಗಳೊಂದಿಗೆ 'ಕೊಲ್ಲು' ಊಳುವ ಸಂಪ್ರದಾಯ ಮುಗಿಯುತ್ತಾರೆ.

ನಾಲ್ಕನೆಯ ದಿನ ಅಡುಗೆ ಮಾಡಿದ ಬೂದಿಯನ್ನು ಕೊಲ್ಲು ಊಳಿದ ಜಾಗದಲ್ಲಿ ಹಾಕಿರುವ ಹಾಲುಗಲ್ಲಿನ ಮೇಲೆ ಹಾಕುತ್ತಾರೆ. ಇವರಲ್ಲಿ ಇಂದಿಗೂ ಈ ಆಚಾರ ಕಡ್ಡಾಯವಾಗಿದ್ದು, ಕೆಲವರು ಮುಂದುವರಿಸಿಕೊಂಡು ಬಂದಿದ್ದರೆ ಇನ್ನು ಕೆಲವರು ಆಚರಣೆಯನ್ನು ಬಿಟ್ಟಿದ್ದಾರೆ.

ಇನ್ನು ಕೆಲವು ಕಡೆ ಆ ಸಂಪ್ರದಾಯವನ್ನೇ ಸಂಕೀರ್ಣವಾಗಿ ಆಚರಿಸುತ್ತಾರೆ. 'ಕಳ್ಳುಪೂಜೆ' ಎಂದು ಕೊಲ್ಲು ಊಳಿದ ಬಂಡೆಯ ಪಕ್ಕದಲ್ಲಿ ಬಲಗಡೆ ಮೂರು ಎಡಗಡೆ ಎರಡು ಒಟ್ಟು ಐದು ಕಲ್ಲುಗಳನ್ನು ಇಟ್ಟು ಅವುಗಳಿನ್ನು ಲಿಂಗವೆಂದು ಭಾವಿಸಿ ಅರಿಷಿಣ, ಕುಂಕಮ ಹಚ್ಚಿ ಪೂಜೆ ಸಲ್ಲಿಸಿ, ಒಂದು ದಾರಕ್ಕೆ ಅರಿಷಿಣ ಕುಂಕುಮ ಹಚ್ಚಿ ಆ ಲಿಂಗಗಳ ಮೇಲೆ ಹಾಕುತ್ತಾರೆ. ಮುಂದೆ ಪತ್ರವಳ್ಳಿ ಹಾಕಿ ಅದರಲ್ಲಿ ತಾವು ಮಾಡಿದ ಅಡುಗೆಯನ್ನು ಅದರಲ್ಲಿ ಬಡಿಸುತ್ತಾರೆ. ಗಂಡು ಮಗು ಹುಟ್ಟಿದ್ದರೆ ಹೆಣ್ಣು ನಾಯಿಯನ್ನು, ಹೆಣ್ಣು ಮಗು ಹುಟ್ಟಿದ್ದರೆ ಗಂಡುನಾಯಿಯನ್ನು ಕರೆತಂದು ಮೈತೊಳೆದು ಪೂಜೆ ಸಲ್ಲಿಸಿ, ಅದರ ಕೊರಳಿಗೆ ಮೊದಲು ಲಿಂಗದ ಮೇಲೆ ಹಾಕಿರುವ ದಾರವನ್ನು ಇದರ ಕೊರಳಿಗೆ ಕಟ್ಟುತ್ತಾರೆ. ಪತ್ರವಳ್ಳಿಯಲ್ಲಿ ಹಾಕಿದ ಎಡೆಯನ್ನು ನಾಯಿಗೆ ತಿನ್ನಿಸಿ ಆ ನಾಯಿಯನ್ನು ಕಟ್ಟಿಗೆಯಿಂದ ಹೊಡೆಯುತ್ತಾರೆ. ಆ ನಾಯಿ ಅರಚಬೇಕು ಹಾಗಾದರೆ ಒಳ್ಳೆಯದು ಎಂದು ನಂಬಿದ್ದಾರೆ. ನಾಯಿಯನ್ನು ಮಲ್ಲಿಕಾರ್ಜುನ ನಾಯಿ ಎಂದು ಕರೆಯುತ್ತಾರೆ.

೭.೧.೫. ಗಂಗಸ್ನಾನ : ಹೆರಿಗೆಯಾದ ಏಳನೆಯ ದಿನಕ್ಕೆ ಇಲ್ಲವೆ ಒಂಬತ್ತನೆಯ ದಿನಕ್ಕೆ ತಣ್ಣೀರು ಮುಟ್ಟಿಸುವ ಕಾರ್ಯಕ್ರಮ ಇರುತ್ತದೆ. ತಮ್ಮ ಸಂಬಂಧಿಕರಾದ ಅತ್ತೆ ಅಥವಾ ಅಕ್ಕ, ಈರ್ವದಲ್ಲಿ ಒಬ್ಬರನ್ನು ಕರೆದುಕೊಂಡು ಹುಡಿಯಲ್ಲಿ ನವಧಾನ್ಯಗಳನ್ನು (ಹತ್ತಿಕಾಳು, ಹೆಸರು, ಕಡಲೆ, ತೊಗರಿ, ಹಲಸಂದಿ, ಜೋಳ, ರಾಗಿ, ಸಜ್ಜೆ, ಗೋದಿ) ಬೇವಿನ ತಪ್ಪಲಿನಲ್ಲಿ ಬೆರಸಿ ಎಲ್ಲೆಲ್ಲಿ ಸಗಣಿ ಇರುತ್ತದೆಯೋ ಅಲ್ಲಲ್ಲಿ ಉದುರಿಸಿಕೊಳ್ಳುತ್ತಾ, ನೀರು ಇರುವ ಕೆರೆ ಅಥವಾ ಬಾವಿಗೆ ಹೋಗುತ್ತಾರೆ. ಅಲ್ಲಿ ಐದು

ಮಣ್ಣಿನ ರಾಶಿ ಮಾಡಿ ಅದಕ್ಕೆ ಅರಿಷಿಣ, ಕುಂಕುಮ ಹಚ್ಚಿ 'ಹಂಗುನೂಲು' ಏರಿಸಿ, ಊದುಬತ್ತಿ ಹಚ್ಚಿ ಕಾಯಿ ಒಡೆದು ನೀರಿನಲ್ಲಿ ಎಲೆ, ಅಡಿಕೆ, ದಕ್ಷಿಣೆ ಹಾಕಿ ತಾವು ತಂದ ತಂಬಿಗೆಯಲ್ಲಿ ನೀರು ತುಂಬಿ ಅದಕ್ಕೂ ಸಹ ಪೂಜಿಸಿ ತಲೆಯ ಮೇಲೆ ಹೊತ್ತುಕೊಂಡು ಎಲ್ಲೆಲ್ಲಿ ನವಧಾನ್ಯ ಹಾಕಿರುತ್ತಾಳೆಯೋ ಅಲ್ಲಲ್ಲಿ ನೀರು ಚಿಮುಕಿಸುತ್ತಾ ಬರುತ್ತಾರೆ. ಬಳಿಕ ಬಿಡಾರದಲ್ಲಿ ಮಗುವಿದ್ದ ಸ್ಥಳದಲ್ಲಿಗೆ ಹೋಗಿ ಬಾಣಂತಿಯು ತನ್ನ ತಲೆಯ ಮೇಲೆ ನೀರು ಹಾಕಿಕೊಂಡು, ಮಗುವಿನ ಮೇಲೆ ಬೀಳುವಂತೆ ಮಾಡುತ್ತಾಳೆ. ಅಲ್ಲಿಗೆ ಬಾಣಂತಿಯ ಸೂತಕ ಕಳೆದಂತೆ, ಆಗಿನಿಂದ ಅವಳು ಮನೆಯಲ್ಲಿ ಎಲ್ಲರಂತೆ ಸಹಜವಾಗಿ ಕೆಲಸ ನಿರ್ವಹಿಬಹುದು.

೭.೧.೬. ಮಗುವಿಗೆ ಬರೆ ಹಾಕುವುದು : ಮಗುವು ಜನಿಸಿದ ಒಂಬತ್ತನೆಯ ದಿನ ಮಗುವಿಗೆ ಸ್ನಾನಮಾಡಿಸಿ ನಂತರ ಬರೆಹಾಕುತ್ತಾರೆ. ಹುಣಿಸೆ ಗಿಡದ ತೊಗಟೆ, ಉತ್ತರಾಣಿ ಕಡ್ಡಿ ಮತ್ತು ಸೂಜಿ ಈ ಮೂರಲ್ಲಿ ಒಂದನ್ನು ಬೆಂಕಿಯಲ್ಲಿ ಕೆಂಪಗೆ ಕಾಯಿಸಿ ಹೊಕ್ಕಳ ಬುಡ್ಡೆಯ ಎಡಪಕ್ಕ ಮತ್ತು ಬಲಪಕ್ಕ ಎರಡು ಕಡೆ '+' ಅಥವಾ 'x' ಮಾದರಿಯಲ್ಲಿ ಸುಡುತ್ತಾರೆ. ಹೀಗೆ ಸುಡುವುದರಿಂದ ಮಗುವಿಗೆ ಗರ್ಭವಾಯು, ಹೊಟ್ಟೆ ಉಬ್ಬರ ಬರುವುದಿಲ್ಲವೆಂದು ಮತ್ತು ಮಗುವಿನ ಆರೋಗ್ಯ ಚೆನ್ನಾಗಿರುತ್ತದೆಂದು ನಂಬಿದ್ದಾರೆ.

೭.೧.೭. ಬಾಣಂತಿಯ ಆಹಾರ : ಬಾಣಂತಿಗೆ ದೇಹ ಬಾವು ಬಂದಿರುತ್ತದೆ. ಇದಕ್ಕೆ ಕಾರಣ ಮೈಯಲ್ಲಿ ಶಕ್ತಿ ಕಡಿಮೆಯಾಗಿರುತ್ತದೆ. ಶಕ್ತಿ ಬರಲು ಪೌಷ್ಠಿಕ ಆಹಾರದ ಅಗತ್ಯವಿರುತ್ತದೆ. ಅದಕ್ಕಾಗಿ ಮೆಣಸು, ಒಣ ಮೆಣಸಿನ ಕಾಯಿ ಬೆಚ್ಚಗೆ ಮಾಡಿ, ಬೆಳ್ಳುಳ್ಳಿ ಹಾಕಿ ಪುಡಿ ಮಾಡಿ ಕುಸುಬೆ ಎಣ್ಣೆಯನ್ನು ಕಾಯಿಸಿ ಅದರಲ್ಲಿ ಅನ್ನವನ್ನು ಮಿಶ್ರಣ ಮಾಡಿ ಒಂದು ಹಾರ ಈ ಆಹಾರವನ್ನು ಕೊಡುತ್ತಾರೆ. ಒಂದು ವಾರದ ನಂತರ ಶುಂಠಿ, ಮೆಣಸು, ಹಿಪ್ಪಲಿ, ಮೋಡಿ, ಲವಂಗ, ಅಜ್ಜಿಬಾನ, ಚಂದ್ರವಾಮ, ಸೂರ್ಯವಾಮ, ಜಾಜಿಕಾಯಿ, ಜಾಪತ್ರೆ, ಇಂಗಳಕಾಯಿ, ಅಳ್ಳಿಕಾಯಿ, ಕುಂಕಮದ ಹೂ, ರಸಕರ್ಪೂರ, ಮಗ್ಗು, ನಲ್ಲಿಕಾಯಿ ಇವುಗಳನ್ನು ಕುಟ್ಟಿ ಮುದ್ದೆಮಾಡಿ ಮುಂಜಾನೆ, ಸಾಯಂಕಾಲ ಬಾಣಂತಿಗೆ ಐದು ದಿನ ತಿನ್ನಲು ಕೊಡುತ್ತಾರೆ. ಇದನ್ನು ಬಾಣಂತಿಯ ಔಷಧಿ ಎಂದು ಕೆಲವರು 'ಕಾರ' ಎಂತಲೂ ಸಹ ಕರೆಯುತ್ತಾರೆ.

೭.೧.೮. ಆಚರಣೆಯ ಅಂತರಾರ್ಥ : ಪ್ರಸೂತಿಯ ಆಚರಣೆಯಲ್ಲಿ ಸಂಘ ಜೀವಿಗಳಾದ ಮನುಷ್ಯರು ಪರಸ್ಪರ ಸಹಕಾರ, ಆಧ್ಯಾತ್ಮಿಕ ದೃಷ್ಟಿ, ಆರೋಗ್ಯ ಸೂತ್ರದಿಂದ ಕೂಡಿರುತ್ತಾನೆಂಬುದು ಎಲ್ಲರಿಗೂ ತಿಳಿದ ವಿಷಯ. ಅದೇ ರೀತಿ ಈ ಸಮುದಾಯದಲ್ಲಿನ ಅಂತರಾರ್ಥ ಹೀಗಿದೆ. ಗರ್ಭಿಣಿಗೆ ಹೆರಿಗೆಯಾಗುವಾಗ ಮಗುವಿನ ತಲೆ ಹೊರಗೆ ಬಂದಾಗ ಶಿವ ಬಂದ ಎನ್ನುವರು. ಕಾರಣ ಗರ್ಭಿಣಿಯ ಗಮನವನ್ನು ಬೇರೆಡೆಗೆ ಸೆಳೆದು ಹೆರಿಗೆ ನೋವನ್ನು ಮರೆಯುವಂತೆ ಮಾಡುವುದೇ ಆಗಿದೆ. ದೇವರನ್ನು ಪ್ರಾರ್ಥಿಸಿದರೆ ಪ್ರಸೂತಿ ಅನಾಯಾಸವಾಗಿ ಆಗುತ್ತದೆಂಬ ನಂಬಿಕೆ. ಈ ಆಚರಣೆಯ ಸಂದರ್ಭದಲ್ಲಿ ಮೂರು ಕಲ್ಲನ್ನು ಲಿಂಗವೆಂದು ಭಾವಿಸುವುದು ಶೈವ ಸಂಪ್ರದಾಯವನ್ನು ಸೂಚಿಸುತ್ತದೆ. ಎಡೆಯನ್ನು ಸಣ್ಣ ಮಕ್ಕಳಿಗೆ ಊಟ ಮಾಡಿಸುವುದರಿಂದ ತನ್ನ ಮಗುವು ಹಾಗೆಯೇ ಬೆಳೆಯಲೆಂಬ ಆಶಯವಿದ್ದಂತೆ ತೋರುತ್ತದೆ. ಭೂತವನ್ನು

ಶಾಂತಿ ಮಾಡಿಸಿದರೆ ಯಾವುದೇ ತೊಂದರೆ ಬರುವುದಿಲ್ಲವೆಂದು, ಬೆಳ್ಳುಳ್ಳಿ ಸರ ಮತ್ತು ಬೇವಿನ ತಪ್ಪಲು ಬಾಣಂತಿಗೆ ಸ್ನಾನ ಮಾಡಲು ಉಪಯೋಗಿಸಲು ಕಾರಣ ಔಷಧಿಯ ಗುಣಗಳನ್ನು ಹೊಂದಿರುವುದರಿಂದ ಕ್ರಿಮಿಕೀಟಗಳು ಸಾಯುತ್ತವೆ ಎಂಬುದನ್ನು ಅರಿತಿದ್ದಾರೆ. ಕೆಲವು ಆಚರಣೆಗಳನ್ನು ಹಿಂದಿನ ನಂಬಿಕೆಯ ಮುಂದುವರಿಕೆಯಾಗಿ ಆಚರಿಸಿದರೂ ಅವುಗಳಲ್ಲಿ ವೈಜ್ಞಾನಿಕ ಅಂಶವಿರುವುದನ್ನು ಗುರುತಿಸಲು ಸಾಧ್ಯವಿದೆ.

ಈ ಸಮುದಾಯದವರಲ್ಲಿ ಅಮವಾಸೆಯ ದಿನ ಹೆರಿಗೆಯಾಗಬಾರದೆಂಬ ನಂಬಿಕೆ ಇದೆ. ಒಂದು ಪಕ್ಷ ಅಮವಾಸೆಯಂದು ಹೆರಿಗೆಯಾದರೆ ತಂದೆ ಇಪ್ಪತ್ತೊಂದು ದಿನಗಳವರೆಗೆ ಮಗುವಿನ ಮುಖ ನೋಡುವಂತಿಲ್ಲ. "ಮೇಲಿನ ಹಲ್ಲು ಮೊದಲು ಬಂದರೆ ಸೋದರ ಮಾವನಿಗೆ ದೋಷ." ದೋಷ ಪರಿಹಾರಕ್ಕೆ ಹನುಮನ ದೇವರ ಗುಡಿಗೆ ಮಗುವನ್ನು ಕರೆದುಕೊಂಡು ಹೋಗಿ ದೇವರ ಎದುರಿಗೆ ಕೂಡಿಸಿ ಒಣ ಕೊಬ್ಬರಿ ಬಟ್ಟಲನ್ನು ತಲೆಯ ಮೇಲೆ ಮುರಿದು ಹಾಕಿ ಆಮೇಲೆ ಮುಖ ನೋಡುತ್ತಾನೆ. ಈಚಿನ ದಿನಗಳಲ್ಲಿ ದೋಷ ಪರಿಹಾರಕ್ಕಾಗಿ ರುದ್ರಾಭಿಷೇಕ ಮಾಡಿಸುವುದು ರೂಢಿಯಲ್ಲಿದೆ. ಮಗುವಿಗೆ ದೃಷ್ಟಿಯಾದರೆ ಬಾರಿಗೆಯ ಕಡ್ಡಿ, ಒಣ ಮೆಣಸಿನಕಾಯಿ, ಉಪ್ಪು ಮಗುವಿನ ಮುಖದ ಮುಂದೆ ನೀವಳಿಸಿ ಬೆಂಕಿಯಲ್ಲಿ ಹಾಕಿ ಸುಡುತ್ತಾರೆ. ಇಲ್ಲವೆ ಅನ್ನದ ಮುದ್ದೆಯನ್ನು ಚಿಪ್ಪಿನಲ್ಲಿಟ್ಟು ಕುಂಕಮದ ನೀರು ಹಾಕಿ ನೀವಳಿಸಿ ಮೂರು ದಾರಿ ಕೂಡುವ ಸ್ಥಳದಲ್ಲಿ ಚೆಲ್ಲುತ್ತಾರೆ.

ಹಗಲುವೇಷಗಾರರಿಗೂ ಸಹ ಎಲ್ಲರಂತೆ ಗಂಡು ಮಗುವಿನ ಮೇಲೆಯೇ ಹೆಚ್ಚು ಅಕ್ಕರೆ, ಏಕೆಂದರೆ ಮುಂದೆ ನಮ್ಮ ಸುಖಕ್ಕೆ ದುಡಿದು ಸಲಹುತ್ತಾನೆ. ಹೆಣ್ಣು ಬೇರೆಯವರ ಮನೆಗೆ ಹೋಗುತ್ತಾಳೆ. ಸತ್ತರೆ ಮಣ್ಣು ಕೊಡಲು ಗಂಡೇ ಶ್ರೇಷ್ಠ ಎನ್ನುವ ನಂಬಿಕೆ ಇದೆ.

೭.೨. ಋತು ಸಂಪ್ರದಾಯ

ಹೆಣ್ಣು ಬಾಲಾವಸ್ಥೆಯನ್ನು ಕಳೆದು ಮುಂದಿನ ಹೆಜ್ಜೆಯೇ ಕೌಮಾರ್ಯ ಅಥವಾ ಯೌವನಾವಸ್ಥೆ. ಈ ದಿಶೆಯಿಂದ ಶಾರೀರಿಕ ಬದಲಾವಣೆ ಮತ್ತು ಮಾನಸಿಕ ಸ್ವಸ್ಥ ಕೂಡ ಬದಲಾಗುತ್ತದೆ. ಇದನ್ನು ಒಂದು ಮಹತ್ವದ ಸಂದರ್ಭವಾಗಿ ಪೂಜೆ ಪುರಸ್ಕಾರಗಳೊಂದಿಗೆ ನಡೆಸುತ್ತಾರೆ.

ಎಲ್ಲಾ ಜನಸಮುದಾಯಗಳಂತೆ ಹಗಲುವೇಷಗಾರ ಸಮುದಾಯ ಕೂಡ ಲಿಂಗ ಪ್ರೌಢಿಮೆಗೆ ಸಂಬಂಧಿಸಿದಂತೆ ತಮ್ಮಲ್ಲಿ ರೂಢಿಯಲ್ಲಿರುವ ಪದ್ಧತಿಯ ಪ್ರಕಾರ ಋತುಸಂಸ್ಕಾರ ನೆರವೇರಿಸುವರು. ಹೆಣ್ಣು ಪ್ರೌಢಾವಸ್ಥೆ ತಲುಪುವ ಹಂತವನ್ನು ಋತುವಾದಳು, ದೊಡ್ಡವಳಾದಳು, ಹೆಣ್ಣಾದಳು, ಮೈನೆರದಳು, ಫಲವತಿಯಾದಳು, ಪುಷ್ಪವತಿಯಾದಳು ಎಂದು ಬೇರೆಬೇರೆ ಹೆಸರುಗಳಿಂದ ಕರೆಯುತ್ತಾರೆ. ಋತುವಾದ ಕ್ಷಣದಿಂದಲೇ ಹುಡುಗಿಯ ಮನೆಯವರಿಗೆ ಹಾಗೂ ಆಕೆಯ ರಕ್ತಸಂಬಂಧಿಗಳಿಗೆ 'ಸೂತಕ' ತಲೆದೂರುತ್ತದೆ.

ಈ ಸಮುದಾಯದಲ್ಲಿ ಹೆಣ್ಣು 'ರಜಸ್ವಲೆ' ಆದಳೆಂದು ತಿಳಿದ ತಕ್ಷಣ ತಮ್ಮ ಬಿಡಾರದ ಪಕ್ಕದಲ್ಲಿ ಮತ್ತೊಂದು ಸಣ್ಣ ಬಿಡಾರ ಹಾಕಿಸುತ್ತಾರೆ. ಬಿಡಾರವನ್ನು ನಿರ್ಮಿಸುವವರು ಸೋದರ ಮಾವ. ಅಥವಾ

ತಾತ ನಂತರ ಸ್ತ್ರೀಯರು ಆ ಹುಡುಗಿಯನ್ನು ಬಿಡಾರದಲ್ಲಿ ಕರೆದುಕೊಂಡು ಹೋಗಿ ಕೂಡಿಸುತ್ತಾರೆ. ಒಂಬತ್ತು ದಿನಗಳವರೆಗೂ ಅವಳು ಆ ಬಿಡಾರದಲ್ಲಿಯೇ ವಾಸವಿರಬೇಕು. ಆ ಸಂದರ್ಭದಲ್ಲಿ ಆಕೆಯ ಸಂಬಂಧಿಕರು ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಹೆಣ್ಣು ರಜಸ್ವಲೆಯಾದ ದಿನವೇ ಅವಳ ಸೋದರ ಮಾವ ಮುಖನೋಡದಂತೆ ಅವಳ ತಲೆಯ ಮೇಲೆ ಒಣ ಕೊಬ್ಬರಿ ಬಟ್ಟಲಿನಲ್ಲಿ ಮೂರು ರೀತಿಯ ಎಣ್ಣೆ ಹಾಕಿ ಅವಳ ತಲೆಯ ಮೇಲೆ ಆ ಕೊಬ್ಬರಿ ಬಟ್ಟಲನ್ನು ಒತ್ತಿ ಅವಳ ತಲೆಯ ಮೇಲೆಯೇ ಬಿಟ್ಟು ಹಾಗೆಯೇ ಮುಂದಕ್ಕೆ ಹೋಗಿ ಸ್ನಾನ ಮಾಡಿ ಹನುಮನ ದೇವರ ಗುಡಿಗೆ ಹೋಗುತ್ತಾರೆ. ಕೈಮುಗಿದು ಬಂದು ಅವಳ ಮುಖ ನೋಡುವನು. ಹೀಗೆ ಮಾಡುವುದರಿಂದ ಅವಳಿಗೆ ಏನಾದರು ದೋಷ ಇದ್ದರೆ ಪರಿಹಾರವಾಗುತ್ತದೆಂದು ಇವರು ನಂಬಿದ್ದಾರೆ. ಇವಳು ವಾಸವಾಗಿರುವ ಬಿಡಾರದಲ್ಲಿ ಕುಡುಗೋಲು, ಮೀನಿನ ಬಲೆ ಇಟ್ಟಿರುತ್ತಾರೆ. ಮತ್ತು ಬೂದಿಯನ್ನು ಮಂತ್ರಿಸಿ ಬಿಡಾರದ ಸುತ್ತ ಮಂಡಲ ಹಾಕುತ್ತಾರೆ. ಏಕೆಂದರೆ ಪೀಡೆ, ಪಿಶಾಚಿಗಳು ಹತ್ತಿರ ಸುಳಿಯಬಾರದೆಂಬ ನಂಬಿಕೆಯನ್ನಾದರೂ, ಬೂದಿ ಹಾಕುವುದರಿಂದ ಇರುವೆಗಳಂತಹ ಸಣ್ಣಪುಟ್ಟ ಕ್ರಿಮಿಗಳು ಬಿಡಾರದ ಒಳಗೆ ಹೋಗದಂತೆ ತಡೆಯಬಲ್ಲದು.

ಇಂತಹವಳಿಗೆ ಊಟಮಾಡಲು, ನೀರು ಕುಡಿಯಲು ಕುಂಬಾರನ ಮನೆಯಿಂದ ಒಂದು ಮಣ್ಣಿನ ಮುಚ್ಚಳ ತಂದು ಅದರಲ್ಲಿಯೇ ಊಟ ಮತ್ತು ನೀರು ಕೊಡುತ್ತಾರೆ. ಈ ಸಂದರ್ಭದಲ್ಲಿ ಈಕೆ ಬಳಸುವ ಯಾವುದೇ ಸಾಮಾಗ್ರಿಗಳನ್ನು ಯಾರು ಮುಟ್ಟಿಸಿಕೊಳ್ಳುವಂತಿಲ್ಲ. ಹಾಗೂ ಮುಖವನ್ನು ಸಹ ನೋಡುವ ಹಾಗಿಲ್ಲ. ಬೆಳಕು ಹರಿಯುವ ಮೊದಲೇ ಬೆಳಗಿನ ನಿತ್ಯ ಕ್ರಿಯೆಗಳನ್ನು ಮುಗಿಸಿ ಒಗೆದ ಬಟ್ಟೆಗಳನ್ನು ಧರಿಸಿರುತ್ತಾಳೆ. ಇವರ ಕುಟುಂಬದಲ್ಲಿ ಸೂತಕ ಕಳೆಯುವವರೆಗೆ ಪೂಜೆ-ಪುನಸ್ಕಾರ ಶುಭಕಾರ್ಯ ನಡೆಯುವಂತಿಲ್ಲ.

ಋತುಮತಿಯಾದವಳಿಗೆ ಅಕ್ಕಿ ಜೊತೆಗೆ ಹೆಸರು ಅಥವಾ ಹಲಸಂದಿ ಬೇಳೆ ಸೇರಿಸಿ ಉಪ್ಪು ಹಾಕದೆ ಬೇಯಿಸುತ್ತಾರೆ. ಇದನ್ನು ಕಿಚ್ಚಿಡಿ ಎನ್ನುವರು. ರೊಟ್ಟಿಯನ್ನು ಕೊಡುವುದಿಲ್ಲ. ಸುತ್ತಮುತ್ತ ಇರುವ ತಮ್ಮ ಸಮುದಾಯದವರು ಸಿಹಿ ಅಡುಗೆಯನ್ನು ಸಿದ್ಧಪಡಿಸಿ ತಂದು ಉಣಬಡಿಸುವರು. ಬಂಧು, ಬಳಗದವರು ಕೊಬ್ಬರಿ, ಬೆಲ್ಲ ಉತ್ತುತ್ತಿ ಕುಟ್ಟಿ ಪುಡಿ ಮಾಡಿ ತಂದು ತಿನ್ನಿಸಿಹೋಗುತ್ತಾರೆ. ಇಂತಹ ಆಹಾರ ತಿನ್ನುವುದರಿಂದ ಸೊಂಟಕ್ಕೆ ಶಕ್ತಿ ಬರುತ್ತದೆ. ಸ್ತನದ ಬೆಳವಣಿಗೆಯಾಗುತ್ತದೆ, ಶರೀರಕ್ಕೆ ನುಣುಪು ಬರುತ್ತದೆ ಎಂದು ಹೇಳುತ್ತಾರೆ. ಇವಳಿಗೆ ತಿಂದು ಆಹಾರ ಹೆಚ್ಚಾದರೆ ಯಾರು ತಿನ್ನುವಂತಿಲ್ಲ ನಾಯಿಗೆ ಹಾಕುತ್ತಾರೆ.

ಏಳು ಅಥವಾ ಐದನೆಯ ದಿನದಂದು ಸೂತಕ ಕಳೆಯುವುದು ಕಂಡುಬರುತ್ತದೆ. ಅಂದು ತಮ್ಮ ಬಿಡಾರವನ್ನು ಸಾರಿಸಿ, ಗೋಮೂತ್ರ ಚಿಮುಕಿಸುವರು. ಆ ಹುಡುಗಿಗೆ ಸ್ನಾನಮಾಡಿಸಿ ಹನುಮಂತಪ್ಪನ ಗುಡಿಗೆ ಹೋಗಿ ಪೂಜೆ ಸಲ್ಲಿಸಿ ದೀಪ ಮುಡಿಸಿ ಬರುತ್ತಾಳೆ. ಕೆಲವು ಕಡೆ ಅವಳ ಸೋದರ ಮಾವ ಅವಳ ಮುಖದ ಮುಂದೆ ಕೋಳಿ ಕುತ್ತಿಗೆಯನ್ನು ಕೊಯ್ಯುವನು. ಆಗ ಅವಳು ಸ್ನಾನ ಮಡಿ ಮಾಡಿ

ಗೋಮೂತ್ರ ಪ್ರೋಕ್ಷಿಸಿಕೊಂಡ ಬಳಿಕ ಸೂತಕ ಕಳೆಯುತ್ತದೆ. ಹೊರಗಿನವರ ಮುಖ ನೋಡಬಹುದು.

ರಸ್ವಜ್ವಲೆಯಾದ ಹುಡುಗಿಯನ್ನು ಎಬ್ಬಿಸಿದ ತರುವಾಯ ಅವಳನ್ನು ಕೂಡಿಸಿದ ಬಿಡಾರವನ್ನು ಹಾಗೂ ಬಳಸಿದ ಸಾಮಗ್ರಿರಾದ ಹಾಸಿದ ಚಾಪೆ, ಹೊದ್ದುಕೊಂಡ ಹಾಸಿಗೆ ಎಲ್ಲವನ್ನು ಒಯ್ದು ದೂರ ಎಸೆದು ಬರುತ್ತಾರೆ. ಇವುಗಳನ್ನು ಎಸೆದರೆ ಭೂತ, ಪ್ರೇತ ಪಿಶಾಚಿಗಳ ಪೀಡೆ ಇರುವುದಿಲ್ಲವೆಂದು ನಂಬಿರುತ್ತಾರೆ.

"ಕೆಲವು ಕಡೆ ೫, ೯ ಅಥವಾ ೧೧ನೇ ದಿನದಲ್ಲಿ ಒಂದು ದಿನ ಹುಡುಗಿಗೆ ಸ್ನಾನಮಾಡಿಸಿ ಸರಾಯಿ ಅಂಗಡಿಗೆ ಕರೆದುಕೊಂಡು ಹೋಗಿ ಅವಳು ಕುಡಿಯುವಳಾದರೆ ಕುಡಿಸಿ ಇಲ್ಲವಾದರೆ ಅವಳ ಮುಖಕ್ಕೆ ಸರಾಯಿ ಚಿಮುಕಿಸಿ ತಾವೆಲ್ಲಾ ಕುಡಿದು ಬರುತ್ತಾರೆ. ಹೀಗೆ ಸರಾಯಿ ಅಂಗಡಿಗೆ ಆಕೆಯನ್ನು ಕರೆದೊಯ್ದು ಬರುವುದೇ ಪವಿತ್ರಗೊಳಿಸಿದಂತೆ ಎಂದು ತಿಳಿದಿರುತ್ತಾರೆ. ಜೊಪಡಿಗೆ ಬಂದ ಮೇಲೆ ಅವಳಿಂದ ಗಂಗಾಳ, ತಂಬಿಗೆ, ಕಸಬರಿಗೆ ಮುಟ್ಟಿಸುವರು."[೧೦] ಸೂತಕ ಕಳೆದ ದಿನ ರಾತ್ರಿ ಮಾಂಸದ ಆಹಾರ ಸಿದ್ಧಪಡಿಸಿ ಸುತ್ತಮುತ್ತಲಿನವರಿಗೆ, ಕುಲಸ್ಥರಿಗೆ, ಊಟದ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಸರಾಯಿ ಹೆಂಡವಂತೂ ಇವರ ಪ್ರತಿಯೊಂದು ಕಾರ್ಯಕ್ರಮಕ್ಕೂ ಇರಲೇಬೇಕು.

ಹಗಲುವೇಷಗಾರರಲ್ಲಿ ಬಾಲ್ಯ ವಿವಾಹ ಹೆಚ್ಚು. ವಿವಾಹ ನಡೆದರೂ ಕೂಡ ಹಿರಿಯವಳಾಗುವವರೆಗೂ ತರುಣಿ ತಾಯಿಯ ಮನೆಯಲ್ಲಿಯೇ ಇರುತ್ತಾಳೆ. ಆದುದರಿಂದ ಮದುವೆಯಾದ ಮೇಲೆಯೇ ರಸ್ವಜ್ವಲೆಯಾಗುತ್ತಾಳೆ. ಮದುವೆಯಾದ ನಂತರ ಹಿರಿಯಳಾದರೆ ಅತ್ತೆ ಮಾವಂದಿರಿಗೆ ಹೇಳಿ ಕಳುಹಿಸುತ್ತಾರೆ. ಅವರು ಬಂದು ತಮ್ಮ ಬೀಗರಿಗೆ ಕನ್ಯೆಯ ತಂದೆ, ತಾಯಿಗೆ ಹಾಗೂ ಕುಲದ ಹಿರಿಯರು ಅವರಿಗೆ ಇಷ್ಟವಾದ ಆಹಾರಮಾಡಿಸಿ ಹೆಂಡ, ಸರಾಯಿ ಕುಡಿಸಬೇಕು. ಮದುವೆಯಾಗದ ಹುಡುಗಿ ಹಿರಿಯಳಾದರೆ ಈ ಆಚಾರ ಇಲ್ಲ. ಮದುವೆಯಾಗಿದ್ದರೆ ಮಾತ್ರ ಅಂದಿನ ಖರ್ಚನ್ನು ಗಂಡಿನವರು ಎರಡು ಭಾಗ ಭರಿಸಿದರೆ ಹೆಣ್ಣಿನವರು ಒಂದು ಭಾಗ ಭರಿಸುತ್ತಾರೆ. ನಂತರ ಒಂದು ದಿನ ನಿಶ್ಚಯಿಸಿ ಮನೆಗೆ ಕರೆದುಕೊಂಡು ಹೋಗಿ ಮನೆ ತುಂಬಿಸಿಕೊಳ್ಳುವರು.

ಮದುವೆಯಾದ ಮತ್ತು ಮದುವೆಯಾಗದ ಹೆಣ್ಣು ಮಕ್ಕಳು ಬಹಿಷ್ಠೆಯಾದಾಗ ಮೂರು ದಿನ ಬಿಡಾರದ ಹೊರಗಡೆಯೇ ಇರಬೇಕು. ಊಟದ ತಾಟು, ತಂಬಿಗೆ ಪ್ರತ್ಯೇಕವಾಗಿರುವವು. ಈ ಅವಧಿಯಲ್ಲಿ ಭಿಕ್ಷೆಗೆ ಹೋಗುವಂತಿಲ್ಲ. ಪ್ರತಿದಿನ ಮಲೀನಗೊಂಡ ಬಟ್ಟೆಗಳನ್ನು ಶುಚಿಗೊಳಿಸಿಕೊಂಡು ಸ್ನಾನ ಮಡಿ ಉಡುವಳು. ನಾಲ್ಕನೆಯ ದಿನ ತಲೆಗೆ ಸ್ನಾನಮಾಡಿ ಬಿಡಾರ ಪ್ರವೇಶಿಸುವಳು. ತನ್ನ ಊಟದ ತಂಬಿಗೆ ತಾಟುಗಳನ್ನು ಬೆಂಕಿಯ ಜಳ ಮುಟ್ಟಿಸಿ ಶುದ್ಧಗೊಳಿಸಿ ಒಳಗೆ ಒಯ್ಯುವಳು."[೧೧] ಈ ಪದ್ಧತಿ ಬ್ರಾಹ್ಮಣರಲ್ಲಿಯೂ ಕಂಡುಬರುತ್ತದೆ.

ವೇಷಗಾರರಲ್ಲಿಯೂ ಕೆಲವು ವಿಶಿಷ್ಟ ಸಂಪ್ರದಾಯಗಳಿದ್ದು, ಆದಿತ್ಯವಾರ ಮೈನೆರೆತ ಹುಡುಗಿಯವರಿಗೆ ಒಳ್ಳೆಯದು ಆಗುವುದಿಲ್ಲ. ತಂದೆ-ತಾಯಿಗೆ ದೋಷ ಎಂದು ನಂಬುತ್ತಾರೆ. ಒಂದು ವೇಳೆ ಆದಿತ್ಯವಾರ

ಮೈನೆರೆದರೆ ಅಂತಹ ಹುಡುಗಿಯನ್ನು ಕಣ್ಣಿಗೆ ಬಟ್ಟೆ ಕಟ್ಟಿ ಅಡವಿಯಲ್ಲಿ ಬಿಟ್ಟು ಬರಬೇಕು ಎನ್ನುವ ನಿಯಮವಿದೆ. ಇತ್ತೀಚಿಗೆ ಈ ನಿಯಮದಲ್ಲಿ ಬದಲಾವಣೆ ಕಂಡುಬಂದಿದೆ. ಆದರೂ ಇವರು ಶಾಸ್ತ್ರೋಕ್ತವಾಗಿ ಕಣ್ಣಿಗೆ ಬಟ್ಟೆ ಕಟ್ಟಿ ಅಡವಿಯಲ್ಲಿ ಬಿಟ್ಟು ಸನ್ನೆಯ ಮೂಲಕ ಬಿಡಾರಕ್ಕೆ ಕರೆತರುವರು. ಹಾಗೆ ಕರೆ ತರುವಾಗ ಆ ಹುಡುಗಿಯು ಯಾರೊಂದಿಗೂ ಮಾತನಾಡುವಂತಿಲ್ಲ. ಹೀಗೆ ಇವರ ಸಂಪ್ರದಾಯಗಳು ಬಿಗಿಯಾಗಿದ್ದರೂ ಔಪಚಾರಿಕವಾಗಿಯಾದರೂ ನಡೆಸುತ್ತಿರುವುದು ಇವರ ಪರಿವರ್ತನೆಗೆ ಸಾಕ್ಷಿಯಾಗಿದೆ. ಮುಂದೆ ಇಂತಹ ಸಂಪ್ರದಾಯಗಳ ಕ್ರಮೇಣವಾಗಿ ಕಣ್ಮರೆಯಾಗುತ್ತವೆ. ಅಥವಾ ಪ್ರಾಚೀನ ನಂಬಿಕೆ ಮತ್ತು ಆಚರಣೆಗಳನ್ನು ಗೌರವಿಸುವ ಸಲುವಾಗಿ ಕೆಲವು ಅನುಕರಿಸುವ ಮುಂದುವರಿಸುವ ಸಾಧ್ಯತೆ ಇದೆ.

೭.೩. ಮದುವೆ

"ಮಾನವ ಬದುಕಿನ ಹದಿನಾರು ಸಂಸ್ಕಾರಗಳಲ್ಲಿ ಮದುವೆ ಅತ್ಯಂತ ಪವಿತ್ರ ಹಾಗೂ ಪ್ರಮುಖವಾದುದು. ನಮ್ಮ ಸಮಾಜ ಜೀವನದ ಮುಖ್ಯ ಘಟಕ, ಮಾನವನಲ್ಲಿರುವ ಮೃಗ ಪ್ರವೃತ್ತಿಯನ್ನು ಸಂಸ್ಕಾರಗೊಳಿಸಿ ಸಂಯಮದಿಂದ ಉದಾತ್ತವಾದುದರ ಕಡೆಗೆ ತಿರುಗಿಸುವ ಒಂದು ಪವಿತ್ರ ಸಾಧನವೆಂಬ ಭಾವನೆ, ಬಹುಕಾಲದಿಂದಲೂ ಭಾರತೀಯ ಸಮಾಜದ ಆದರ್ಶವಾಗಿ ಬೆಳೆದು ಬಂದಿದೆ."[೨] ಮಾನವನ ಇಂದ್ರಿಯ ಸಹಜ ಬಯಕೆಗಳನ್ನು ಸಕ್ರಮಗೊಳಿಸಿ ಅದಕ್ಕೆ ನೈತಿಕ ಚೌಕಟ್ಟು ಒದಗಿಸುವಲ್ಲಿ ಮದುವೆಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಪ್ರತಿಯೊಂದು ಜೀವಕೋಟಿಗೂ ಗೃಹಸ್ಥಾಶ್ರಮ ಪ್ರಮುಖ ಘಟ್ಟ.

ಪ್ರಪಂಚದ ಪ್ರಾಚೀನ ನಾಗರಿಕತೆ ಮತ್ತು ಆಧುನಿಕ ನಾಗರಿಕತೆಯನ್ನು ಹೊಂದಿದ್ದ ಹಾಗೂ ಹೊಂದಿರುವ ಸಮಾಜಗಳ ವಿವಾಹ ಪದ್ಧತಿಯನ್ನು ಪರಿಶೀಲಿಸಿದರೆ ವಿಶ್ವರೂಪವನ್ನೇ ತೋರಿಸುತ್ತದೆ. ಯಾವುದೇ ಆದಿವಾಸಿಗಳಿಗೂ, ಅಲೆಮಾರಿಗಳಿಗೂ ಮತ್ತು ನಗರವಾಸಿಗಳಿಗೂ ಈ ಸಂಸ್ಕಾರಗಳಲ್ಲಿ ಹುಟ್ಟು, ಮದುವೆ, ಸಾವು ಹಾಗೂ ಕುಲ ದೇವತೆಗಳ ಆಚರಣೆಗಳು ಬಹು ಪ್ರಮುಖವಾದ ಪಾತ್ರವಹಿಸುತ್ತವೆ.

ಮೂಲತಃ ಅಲೆಮಾರಿಗಳಾದ ಹಗಲುವೇಷಗಾರರಲ್ಲಿ ರೂಢಿಯಲ್ಲಿರುವ ವಿವಾಹ ಪದ್ಧತಿಯು ಇತರೆ ಸಮುದಾಯಗಳಿಗಿಂತ ವಿಶಿಷ್ಟ ಹಾಗು ಅನನ್ಯವೂ ಆಗಿದೆ. ಅತ್ಯಂತ ಸರಳವಾಗಿ ನೆರವೇರಿಸುವ ಇವರ ವಿವಾಹದ ಒಂದು ವಿಚಿತ್ರ ಅಂಶವೆಂದರೆ ಮದ್ಯಪಾನ ಮಾಡುವುದು.

೭.೩.೧. ಹುಡುಗಿಯನ್ನು ನಮ್ಮದಾಗಿಸಿಕೊಳ್ಳುವುದು : ವಿವಾಹದಂತೆ ನಿಶ್ಚಿತಾರ್ಥವು ಕೂಡ ಕನ್ಯದಾತರ ಮನೆಯಲ್ಲಿ ನಡೆಯುತ್ತದೆ. ವರನ ಕಡೆಯವರು ಬಂದು ವಧುವನ್ನು ನೋಡಿ ನಿಶ್ಚಯಿಸಿ ತಾಂಬೂಲ ಹಂಚಿಕೊಳ್ಳುವರು. ಅಂದು ಗುರುತಿಗಾಗಿ ಉಂಗುರ ಅಥವಾ ಸರವನ್ನೊ ಬದಲಾಯಿಸಿಕೊಳ್ಳುವರು. ಇದನ್ನು 'ಕತಪ' ಎಂದು ಕರೆಯುತ್ತಾರೆ. ಕೆಲವು ಕಡೆ ಹೂವು, ಹಣ್ಣು ಕೊಡುವ ನಿಯಮವಿದೆ. ವರನು ಹುಡುಗಿಯನ್ನು ಮದುವೆಯಾಗುವವರೆಗೆ ಅತ್ತೆ ಮಾವಂದಿರ ಸೇವೆ ಮಾಡಬೇಕು. ಹಗಲುವೇಷಗಾರರು

ನಿಶ್ಚಿತಾರ್ಥವನ್ನು ಇಳೇವು ಇಡುವುದು, ಇಡೆಂ ಪೆಟ್ಟಟಂ, ಹುಡುಗಿಯನ್ನು ನೋಡುವುದು, (ಪಿಲ್ಲನು ಚೂಡಟಂ) ಹುಡುಗಿಯನ್ನು ಕೇಳುವುದು, (ಪಿಲ್ಲನಿ ಅಡಗಟಂ) ಹುಡುಗಿಗೆ ಸರಾಯಿ ಹಾಕಿಸುವುದು, (ಪಿಲ್ಲಲಕು ಕಲ್ಲು ಪೋಯಿಂಚಡಂ) ಹುಡುಗಿಯನ್ನು ನಮ್ಮದಾಗಿಸಿಕೊಳ್ಳುವುದು, (ಪಿಲ್ಲನಿ ಮಾದಿ ಅನಿಪಿಂಚಡಂ) ಎಂಬುದಾಗಿ ಕರೆಯುವರು.

ಸಂಚಾರ ಜೀವನದಲ್ಲಿ ಎರಡು ಕುಟುಂಬಗಳು ಕೂಡಿದ ಸಂದರ್ಭದಲ್ಲಿ ಹುಡುಗಿ ಹುಟ್ಟಿದಾಗ ಇಲ್ಲವೆ ನಾಲ್ಕು, ಐದು ವಯಸ್ಸಿನಲ್ಲಿ ಸಂಬಂಧ ನಿರ್ಣಯಿಸಿಕೊಳ್ಳುತ್ತಾರೆ. ದೇಶಾಟನೆಗೆ ಹೋದಾಗ, ವೇಷದ ಮೇಳ ಕಟ್ಟಿದಾಗ, ಬೇಟೆಗೆ ಹೋದ ಸಂದರ್ಭದಲ್ಲಿ, ಹೆಂಡ ಅಥವಾ ಸರಾಯಿ ಕುಡಿದ ಸಮಯದಲ್ಲಿ ಸ್ನೇಹ ಬೆಳೆದು ಒಬ್ಬರ ಮಗನಿಗೆ ಒಬ್ಬರ ಮಗಳನ್ನು ಕೊಡಬೇಕೆಂದು ನಿರ್ಣಯ ತೆಗೆದುಕೊಳ್ಳುತ್ತಾರೆ. ಇದು ಇಳೇವು ಇಡುವುದಕ್ಕೆ ಮೊದಲು ತೆಗೆದುಕೊಂಡ ಒಪ್ಪಂದವಾಗಿರುತ್ತದೆ. ಹುಡುಗಿ ಐದಾರು ವರ್ಷ ಇರುವಾಗಲೆ ಗಂಡು ಹುಡುಗನ ತಂದೆತಾಯಿಗಳು ಆ ಹುಡುಗಿಯನ್ನು ನಮ್ಮದು ಅನ್ನಿಸಿಕೊಳ್ಳುತ್ತಾರೆ. ಹುಡುಗಿಯ ತಂದೆತಾಯಿಗಳನ್ನು ಹೆಂಡದ ಅಂಗಡಿಗೆ ಕರೆದುಕೊಂಡು ಹೋಗಿ, ಅವರಿಗೆ ಹೆಂಡ ಕೊಟ್ಟು ನಿಮ್ಮ ಮಗಳನ್ನು ನಮ್ಮ ಮಗನಿಗೆ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆ ಹುಡುಗಿಯ ತಂದೆತಾಯಿಗಳು ಇಷ್ಟ ಪಟ್ಟರೆ ಅಂದು ಹೆಂಡ ಕುಡಿಯುತ್ತಾರೆ. ಇದಕ್ಕೆ ಸಾಕ್ಷಿ ಇರಬೇಕೆಂದು ವರನ ತಂದೆ ತಾಯಿಗಳು ಒಬ್ಬ ಕುಲಸ್ಥನಿಗೆ ಕೂಡ ಹೆಂಡ ಕೊಟ್ಟು, ತಮ್ಮ ಸಂಬಂಧ ಕುರಿತು ಹೇಳುತ್ತಾರೆ. ಇದನ್ನೇ 'ಹುಡುಗಿ ನಮ್ಮದಾಗಿಸಿಕೊಳ್ಳುವುದು' ಎನ್ನುತ್ತಾರೆ. ಕೆಲವರು ಹುಡುಗಿಗೆ ಬಳೆ ಹಾಕಿಸಿ 'ಹುಡುಗಿ ನಮ್ಮದು' ಎನಿಸಿಕೊಳ್ಳುತ್ತಾರೆ. ಈ ಒಪ್ಪಂದ ನಡೆದ ಮೇಲೆ ಆ ಹುಡುಗಿಯನ್ನುಇತರರಿಗೆ ಕೊಡುವುದಕ್ಕೆ ಆಗುವುದಿಲ್ಲ. ಹುಡುಗಿಗೆ ೧೦-೧೨ ವರ್ಷವಾದ ಮೇಲೆ ಇಳೇವು ಅಥವಾ ನಿಶ್ಚಿತಾರ್ಥ ಮಾಡುತ್ತಾರೆ.

ಹುಡುಗಿ ದೊಡ್ಡವಳಾದ ಮೇಲೆ ಹುಡುಗಿಯನ್ನು ಗೊತ್ತು ಮಾಡಿದವರು ಯಾವ ಊರಲ್ಲಿರುತ್ತಾರೆಯೋ ಹುಡುಗಿಯ ತಂದೆತಾಯಿಗಳು ಅವರ ಹತ್ತಿರ ತಾವೇ ಹೋಗುತ್ತಾರೆ. ಹೋದವರು ಏನಯ್ಯಾ! ಫಲಾನು ಹುಡುಗಿಯನ್ನು ನಿಮ್ದು ಮಾಡಿಕೊಂಡಿದ್ರಿ. ಈಗ ಹುಡುಗಿ ದೊಡ್ಡವಳಾಗಿ ತಿಂಡಿ ತಿನ್ನುವ ಹಾಗೆ ಆಗಿದ್ದಾಳೆ. ಬಟ್ಟೆ ಕಟ್ಟುವವಳು ಆಗಿದ್ದಾಳೆ ಎಂದು ಹೇಳುತ್ತಾರೆ. ಹುಡುಗನ ತಂದೆತಾಯಿಗಳು ಸಮಯ ನೋಡಿಕೊಂಡು ಫಲಾನುದಿನ ಬರುತ್ತೇವೆ ಎಂದು ಹೇಳಿ, ಹೇಳಿದ ಪ್ರಕಾರ 'ಇಳೇವು' ಇಡುತ್ತಾರೆ.

೭.೩.೨. ಸಂಬಂಧ ಕಡಿದು ಕೊಳ್ಳುವುದು : ಒಂದು ವೇಳೆ ಆ ಹುಡುಗಿಯನ್ನು ಮದುವೆ ಮಾಡಿಕೊಳ್ಳುವುದು ಗಂಡಿನ ತಂದೆಗೆ ಇಷ್ಟವಿಲ್ಲವೆಂದರೆ ಹುಡುಗಿ ಸಣ್ಣವಳಿದ್ದಾಗ ಮಾಡಿಕೊಳ್ಳುತ್ತೇವೆಂದು ಹೇಳಿದ್ದೆವು ಆದರೆ ಆ ಹುಡುಗಿ ಬೇಡ ಆ ಹುಡುಗಿಯನ್ನು ಯಾರಿಗಾದರು ಕೊಟ್ಟುಕೊಳ್ಳಬಹುದು ಎಂದು ವರನ ತಂದೆ ಕುಲಾಚಾರದ ಪ್ರಕಾರ ಒಂದು ಕಡ್ಡಿಯನ್ನು ತೆಗೆದುಕೊಂಡು ಮುರಿದು ಹಾಕುತ್ತಾನೆ. ಇದನ್ನೇ 'ಸಂಬಂಧ ಕಡಿದುಕೊಳ್ಳುವುದು ಕಡ್ಡಿ ಮುರಿಯುವುದು (ಪುಲ್ಲ ವಿರುಪು)' ಎಂದು ಕರೆಯುತ್ತಾರೆ. ಇದರಿಂದ ಆ ಹುಡುಗಿಯನ್ನು ಬೇರೆಯವರಿಗೆ ಕೊಡಬಹುದು. ಕಡ್ಡಿ ಮುರಿಯುವವರೆಗೆ ಆ ಹುಡುಗಿ

ಇವರ ಹೆಸರಿನಲ್ಲಿಯೇ ಇರುತ್ತದೆ. ಒಂದು ವೇಳೆ ಹುಡುಗನ ತಂದೆ ತಾಯಿಗಳಿಗೆ ಹೇಳದಂತೆ ಬೇರೆಯವರಿಗೆ ಹುಡುಗಿಯನ್ನು ಕೊಟ್ಟರೆ, ಈ ವಿಷಯ ವಿಕೋಪಕ್ಕೆ ಹೋಗಿ ದೊಡ್ಡ ಪಂಚಾಯಿತಿಗೆ ದಾರಿಮಾಡಿಕೊಡುತ್ತದೆ. ಆ ಕುಲಪಂಚಾಯತಿಯಲ್ಲಿ ಹೆಣ್ಣಿನ ತಂದೆತಾಯಿಗಳದೆ ತಪ್ಪಾಗುತ್ತದೆ.

೭.೩.೩. ಇಡೆಂ (ಇಳೇವು) : ಸಣ್ಣ ಮಕ್ಕಳಿದ್ದಾಗ ಒಪ್ಪಂದ ಮಾಡಿಕೊಳ್ಳದವರು ತಮ್ಮ ಮಗನಿಗೆ ಮದುವೆ ಮಾಡಬೇಕು ಎಂದುಕೊಂಡಾಗ ತಮಗೆ ಪರಿಚಯವಿರುವ ಇಲ್ಲವೆ ತಮ್ಮ ಬಂಧುಗಳ ಪರಿಚಯ ಇರುವ ಕುಟುಂಬದಿಂದ ಸಂಬಂಧ ಮಾಡಿಕೊಳ್ಳುತ್ತಾರೆ. ಮೊದಲು ತಾವು ಸಂಬಂಧ ಬೆಳೆಸಲು ಹೋಗುವ ಕುಟುಂಬದವರ ಗುಣಸ್ವಭಾವದ ಬಗ್ಗೆ ವಿಚಾರಿಸುತ್ತಾರೆ. ಅವರಿಗೆ ಮದುವೆಯಾದ ಮಕ್ಕಳಿದ್ದರೆ ಅವರು ಯಾವ ರೀತಿ ತಿರುಗಿ ಜೀವನ ನಡೆಸುತ್ತಿದ್ದಾರೆಂದು ವಿಚಾರಿಸಿ, ಎಲ್ಲಾ ವಿಧದಲ್ಲೂ ಮೆಚ್ಚುಗೆಯಾದ ಮೇಲೆ ಅವರ ಹುಡುಗಿಯನ್ನು ಸೊಸೆಯಾಗಿ ಮಾಡಿಕೊಳ್ಳಬೇಕೆಂದು ಕೊಳ್ಳುತ್ತಾರೆ.

ಹುಡುಗಿಯನ್ನು ಕೇಳುವ ಮೊದಲು ಕುಟುಂಬದ ಹಿರಿಯನ ಹತ್ತಿರ ಈ ವಿಷಯ ಪ್ರಸ್ತಾಪಿಸಿ ಸಲಹೆ ತೆಗೆದುಕೊಳ್ಳುತ್ತಾರೆ. ಎಂದು ಇಳೇವು ಮಾಡಬೇಕೋ ಕುಲದ ಹಿರಿಯ ನಿರ್ಣಯಿಸುತ್ತಾನೆ. ಬೇರೆಯವರ ಕುಟುಂಬದಲ್ಲಿ ಹೆಣ್ಣು ಕೇಳಲು ಹೋಗುವಾಗ ವರನ ತಂದೆತಾಯಿಯವರು ಕುಲದ ಹಿರಿಯನನ್ನು, ತಮಗೆ ತಿಳಿದ ಇಬ್ಬರು ಮೂವರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗುತ್ತಾರೆ.

"ಇಡೆಂ ಇಡುವ ದಿನ ತಿಳಿದ ಮೇಲೆ ಮುಂಜಾನೆ ವರನ ತಂದೆ ತಾಯಿ ಕುಲದ ಹಿರಿಯರನ್ನ ಹೋಗಿ ಹುಡುಗಿಯ ಮನೆಯ ಮುಂದೆ ಕುಳಿತುಕೊಳ್ಳುತ್ತಾರೆ. ಎಲ್ಲರೂ ಕುಳಿತ ಮೇಲೆ ಕುಲದ ಹಿರಿಯ ಗಂಡಿನ ತಂದೆಯನ್ನು ಕುರಿತು ಮನೆಯ ಹೆಸರು ಸಂಭೋಧಿಸಿ ಉದಾ:- ತೂರ್‍ಪಾಟ, ವಿಭೂತಿ, ಪಸ್ತಂ, ಯಡವಲ್ಲಿ ಮುಂತಾದವು. ಏನಪ ತೂರ್‍ಪಾಟಿಯಾತ ಇಷ್ಟು ಮಂದಿ ಕುಲಸ್ಥರನ್ನು ವಿಭೂತಿಯವರ ಮನೆ ಮುಂದೆ ಕಲೆಹಾಕಿದ್ದಿ ಏನು ಸಂಗತಿ? ಆಗ ಹುಡುಗನ ತಂದೆ ಕುಲಕ್ಕೆ ಶರಣಾರ್ತಿ ಎಂದು ಹೇಳಿ ನಾನು ನಮ್ಮ ತಾತ ಮುತ್ತಾತಂದಿರ ಕಾಲದಿಂದ ಬಾಳುವೆ ಮಾಡುತ್ತಾ ಈ ಗಡ್ಡೆಗೆ ಬಂದಿದ್ದೇವೆ. ನಮ್ಮ ತಂದೆ, ತಾತ ಬದುಕಿದ್ದು ನಿಮ್ಮ ತಂದೆತಾಯಂದಿರಿಗೆ ಕೂಡ ಗೊತ್ತು. ಈಗ ನಾನು ನಿಮ್ಮ ಕಣ್ಣ ಮುಂದೆಯೇ ಬದುಕುತ್ತಿದ್ದೇನೆ. ನಾವು ಒಳ್ಳೆಯವರೋ, ಕೆಟ್ಟವರೋ ನಿಮಗೆ ತಿಳಿದಿದೆ ನಾವು ಹೊಡೆದಾಡಿದ್ದು, ದಂಡಕಟ್ಟಿದ್ದು, ದ್ರೋಹ ಬಗೆದದ್ದು, ಒಬ್ಬನನ್ನು ಕೈಯೆತ್ತಿ ಒಡೆದಿದ್ದು, ಮಂದಿಯನ್ನು ಮುಳುಗಿಸಿದ್ದು, ಹತ್ತು ಮಂದಿಗೆ ಸಹಾಯಮಾಡಿದ್ದು ಎಲ್ಲಾ ನಿಮಗೆ ಗೊತ್ತಿದೆ. ನನ್ನ ಹೊಟ್ಟೆಯಲ್ಲಿ ಬುಡಿಮೆಕಾಯಿಯಂತಹ ಮಗು ಹುಟ್ಟಿದ್ದಾನೆ. ಅವನಿಗೆ ಒಂದು ಹುಡುಗಿಯನ್ನು ನೋಡಿ 'ಹೆಂಡ ಹಾಕಿಸೋಣ' ಅಂತ, ಇಂತಹ ವಿಭೂತಿಯವರ ಮನೆಯಲ್ಲಿ 'ಅಂಬಲಿ' ಇದೆ ಎಂದು ಬಂದಿದ್ದೇನೆ ಎನ್ನುತ್ತಾನೆ.

ಆಗ ಕುಲದ ಹಿರಿಯ ವಧುವಿನ ತಂದೆಯನ್ನು ಉದ್ದೇಶಿಸಿ ಏನಯ್ಯಾ ವಿಭೂತಿಯಾತ, ತೂರ್‍ಪಾಟಿಯಾತ ಬಂದಿದ್ದಾನೆ. ಇದಕ್ಕೆ ನೀನು ಏನು ಹೇಳುತ್ತೀಯ? ನಿಮ್ಮ ಮನೆಯಲ್ಲಿ ಅಂಬಲಿ

[illegible]

ಇದೆಯಂತೆ ಹಾಕುತ್ತೀಯಂತ ಬಂದೀನಿ ಅಂತಾನ. ಆಗ ವಧುವಿನ ತಂದೆ ಕುಲಕ್ಕೆಲ್ಲ ನಮಸ್ಕಾರ. ಎಲ್ಲರಿಗೂ ಶರಣು ಶರಣಾರ್ತಿ, ಕುಲವಿಲ್ಲದೆ ಮನುಷ್ಯನಿಲ್ಲ ವನವನ್ನು ಬಿಟ್ಟು ಕೋತಿಯಿಲ್ಲವೆಂದು ದೊಡ್ಡವರು ಹೇಳುತ್ತಾರೆ. ತೂರ್‍ಪಾಟಿಯಾತ ನಮ್ಮ ಮನೆಗ ಬಂದಿದ್ದಾನೆ. ಸರೆ ಒಳ್ಳೆಯದು ಎಲ್ಲರಂತೆಯೇ ನನಗೊಂದು ಬುಡಿಮೆ ಕಾಯಿಯಂತಹ ಮಗಳು ಇದ್ದಾಳೆ. ಹುಡುಗಿ ಇದ್ದ ಮನೆಗೆ ನಾಲ್ಕು ಮಂದಿ ಬರುತ್ತಾರೆ. ಹುಡುಗಿ ಇದ್ದರೆ ಹತ್ತು ಮಂದಿ ಆಸೆ ಪಡುತ್ತಾರೆ. ಹೆಣ್ಣು ಎಷ್ಟು ದಿನ ಇದ್ದರು ಬೇರೆಯವರ ಆಸ್ತಿ, ನಮ್ಮ ಹುಡುಗಿಯನ್ನು ಕುಲಕ್ಕೆ ಕೊಡದಿದ್ದರೆ ಮನೆಯಲ್ಲಿ ಇಟ್ಟುಕೊಳ್ಳುತ್ತೇನೆಯೋ? ಮಾಡಿಕೊಂಡ ಹುಡುಗಿಗೆ ತಲೆಗೆ ಎಣ್ಣೆ, ಮೈಯ್ಯಿಗೆ ಬಟ್ಟೆ, ಹೊಟ್ಟೆ ತುಂಬ ಊಟ ಇದ್ದರೆ ಸಾಕು. ಅತ್ತೆ ಕಾಟ, ಮಾವನ ಕಾಟ, ಗಂಡನಕಾಟ ಇಲ್ಲದಂತೆ ಚೆನ್ನಾಗಿ ನೋಡಿಕೊಂಡರೆ ಸಾಕು. ಅಷ್ಟೇ ನಾನು ಕೇಳಿಕೊಳ್ಳುವುದು ಎಂದು ಹೇಳುತ್ತಾನೆ. ಆಗ ಕುಲದ ಹಿರಿಯರು ನಿನ್ನ ಮಗಳನ್ನು ಅವರಿಗೆ ಕೊಡಲು ಒಪ್ಪಿದ್ದೀಯಾ? ಹೇಳು ಎಂದು ಕೇಳುತ್ತಾರೆ. ತನ್ನ ಮಗಳನ್ನು ಕೊಡುವುದು ಇಷ್ಟವಿದ್ದರೆ ಸರೆ ಅನ್ನುತ್ತಾನೆ. ಇಲ್ಲದಿದ್ದರೆ "ತಂದೆ! ಮೀನಿಗೆ ಆಕಾಶಕ್ಕೆ ಹೊಂದುವುದಿಲ್ಲ. ನಮಗೆ-ಅವರಿಗೆ ಸರಿಹೋಗುವುದಿಲ್ಲ ನಮ್ಮ ಹುಡುಗಿಯನ್ನು ಅವರಿಗೆ ಕೊಡುವುದಿಲ್ಲವೆಂದು ಹೇಳುತ್ತಾನೆ."[೧೩]

ಒಂದು ವೇಳೆ ಹುಡುಗಿಯ ತಂದೆ ಒಪ್ಪಿದರೆ ತಾಯಿಯನ್ನು ಕೇಳುತ್ತಾರೆ. ಆಗ ತಾಯಿ ಅಯ್ಯ ನನ್ನ ಮಗಳಿಗೆ ಜಿದ್ದು ಇಲ್ಲ, ಕೆಟ್ಟ ಬುದ್ಧಿ ಇಲ್ಲ. ಸುಳ್ಳು-ಪಾರಪತ್ಯ ತಿಳಿಯದು, ಮತ್ತೆ ನಮ್ಮ ಹುಡುಗಿಯನ್ನು ಹೇಗೆ ನೋಡಿಕೊಳ್ಳುತ್ತಾರೆಯೋ? ನೀವೇ ಹೇಳಿ. ನಮ್ಮ ಹುಡುಗಿ ಕುಲದ ಹುಡುಗಿ. ಅವಳನ್ನು ಕುಲದ ಕೈಯಲ್ಲಿಡುತ್ತಿದ್ದೇನೆ. ಎಂದ ಮೇಲೆ ಹಿರಿಯರು ಹುಡುಗಿಯ ಸೋದರ ಮಾವ, ದೊಡ್ಡಪ್ಪ, ಚಿಕ್ಕಪ್ಪ ಅವರನ್ನು ಕೇಳುತ್ತಾರೆ. ಅಯ್ಯಾ ಕೇಳುವುದೇನಿದೆ ಅವರಾಡಿದ ಮಾತಿಗೆ ನಾವಿರುತ್ತೇವೆ. ಏನು ಪರವಾಗಿಲ್ಲ. ಕೊಟ್ಟ ಹುಡುಗಿಯನ್ನು ಕಷ್ಟ ಕೊಡದೆ ಹೊಟ್ಟೆಗ ಬಟ್ಟೆಗೆ ಕಡಿಮೆ ಮಾಡದಿದ್ದರೆ ಆಯ್ತು ಹುಡುಗಿಗೆ ಕೆಲಸ ಬರದಿದ್ದರೆ ಕಲಿಸಿಕೊಳ್ಳಬೇಕು. ನೀವೆಲ್ಲ ದೊಡ್ಡವರು ನೀವೇ ನಿರ್ಣಯಿಸಿರಿ ಎಂದು ಹೇಳುತ್ತಾರೆ. ಕೊನೆಗೆ ಹುಡುಗನ ತಂದೆ ತಾಯಿ ಎಲ್ಲರನ್ನು ಕೇಳಿ 'ಒಪ್ಪಿದಿರಾ'? ಒಪ್ಪಿದಿರಾ? ಎಂದು ಕೇಳುತ್ತಾರೆ.

೭.೩.೪. ಬುದ್ಧಿಮಾತುಗಳು : ಇಬ್ಬರು ಇಷ್ಟ ಪಟ್ಟ ಮೇಲೆ ಕುಲದ ಹಿರಿಯ ಗಂಡಿನ ಕಡೆಯವರಿಗೆ ಬುದ್ಧಿ ಮಾತು ಹೇಳುತ್ತಾರೆ. ಆ ಹುಡಗಿಗೆ ತಲೆಗೆ ಎಣ್ಣೆ, ಮೈಗೆ ಬಟ್ಟೆ, ಹೊಟ್ಟೆಗೆ ತಿಂಡಿ ಕಡಿಮೆ ಮಾಡಬಾರದು. ಹುಡುಗಿ ಸಣ್ಣದು ತಪ್ಪು ಮಾಡಿದರೆ ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು. ಮಗನಿಗೆ ಬುದ್ಧಿ ಹೇಳಿಕೊಳ್ಳಬೇಕು. ಕೆಲಸ ಬರದಿದ್ದರೆ ಕಲಿಸಿಕೊಳ್ಳಬೇಕು. ಅತ್ತೆಯನ್ನು ಉದ್ದೇಶಿಸಿ ಎಲ್ಲಾ ನೆಮ್ಮದೆ, ಹಾಲಿನ ಸೋರೆ ಹೊಡೆಯದಂತೆ ನೋಡಿಕೊಳ್ಳಬೇಕು. ಗಡಿಗೆಯಿಂದ ಇನ್ನಾವುದರಿಂದಲೋ ತಪ್ಪು ನಡೆದರೆ ನಡೆದ ವಿಷಯ ಹೇಳಿ ಸರಿಪಡಿಸಿಕೊಳ್ಳಬೇಕು. ಹುಡುಗಿ ಕೂಡ ಎಷ್ಟು ಹೇಳಿದರೂ ಕೇಳದಿದ್ದರೆ ಕುಲಕ್ಕೆ ಹೇಳಿ ಮುಖಕ್ಕೆ ಒಡೆಯಿಸಬೇಕು. ಮಾವ ತನ್ನ ಬಸ್ತಿನಲ್ಲಿ ತಾನು ಅತ್ತೆ ತನ್ನ ಮಿತಿಯಲ್ಲಿ ತಾನು

[illegible]

[illegible]

[illegible]

ಇರಬೇಕು. ಹುಡುಗಿಯ ತಂದೆ ತಾಯಿಗಳಿಗೂ ಕೂಡ ಬುದ್ಧಿ ಹೇಳುತ್ತಾರೆ. ನಿಮ್ಮ ಹುಡುಗಿಯದು ತಪ್ಪಾದರೆ ಬುದ್ಧಿ ಹೇಳಿಕೊಳ್ಳಬೇಕು. ಯಾರದಾದರೂ ಸಂಸಾರವೇ. ನಿಮ್ಮ ಮಗಳನ್ನು ಮೇಲಿಟ್ಟುಕೊಂಡು ಬರಬಾರದು. ನಿಮ್ಮ ಮಗಳು ಚೆನ್ನಾಗಿ ಸಂಸಾರ ಮಾಡಿದರೆ ನಿಮಗೂ ಹೆಸರು ಬರುತ್ತದೆ. ನಿಮ್ಮ ಬೀಗರು ಮನುಷ್ಯರೆ, ನೀವು ಮನುಷ್ಯರೆ ಕಲಿಸಿ ಚೆನ್ನಾಗಿರಿ ಎಂದು ಹೇಳುತ್ತಾರೆ.

ವರ ಬೀಗರಿಗೆ ಮಾಡುವ ಸೇವೆಗಳನ್ನು ಹೇಳುತ್ತಾರೆ. ಮೀನು (ಎಂಡ್ರಕಾಯ) ಏಡಿ, ಇಲಿ, ಉಡುವು ತಂದುಕೊಡಬೇಕು. ಸಾರು ಮಾಡಿಕೊಡಬೇಕು, ಕಟ್ಟಿಗೆ ತರಲು ಸಹಾಯಮಾಡಬೇಕು ಎಂದು ಹೇಳುತ್ತಾರೆ.

೭.೩.೫. ಕೈಸಾಕ್ಷಿ : ಕುಲದ ಹಿರಿಯರು ಇಬ್ಬರಿಗೂ ಬುದ್ಧಿ ಮಾತುಗಳನ್ನು ಹೇಳಿದ ಬಳಿಕ ವರನ ತಂದೆಯನ್ನು ಎದ್ದು ನಿಲ್ಲಿಸಿ ಐದು ಗೋತ್ರದವರ ಅಥವಾ ಮನೆ ಹೆಸರಿನವರ ಕೈಯಲ್ಲಿ ಕೈಹಾಕಿ ಒಬ್ಬೊಬ್ಬರ ಹತ್ತಿರ ಸಾಕ್ಷಿ ಇಡುತ್ತಾರೆ. ಇದನ್ನೆ 'ಕೈಸಾಕ್ಷಿ' ಅಥವಾ 'ಚೆಯ್ಯಿಸಾಕ್ಷಿ' ಎಂದು ಕರೆಯುತ್ತಾರೆ. ಕೈಸಾಕ್ಷಿ ಆದ ಮೇಲೆ ಕುಲಾಚಾರಕ್ಕೆ ಎರಡು ರೂಪಾಯಿ ಕೊಡುತ್ತಾನೆ. ವಧುವಿನ ತಂದೆಯು ಒಂದು ರೂಪಾಯಿ ಕೊಡುತ್ತಾನೆ.

ಕೈಸಾಕ್ಷಿ ಮುಗಿದ ಮೇಲೆ ವಧುವಿನ ಸಂಬಂಧಿಕರೆಲ್ಲರನ್ನು ಕರೆಯಿಸಿ ಕುಲದ ಹಿರಿಯ ಹೇಳಿದಷ್ಟು ಹಣ, ಅವರ ಖರ್ಚಿಗೆ ವರನ ತಂದೆ ಕೊಡುತ್ತಾನೆ. ಅವರವರೆ ಮರ್ಯಾದೆ ಮಾಡಿಕೊಳ್ಳುತ್ತಾರೆ.

೭.೩.೬. ಹೆಂಡ ಹಾಕಿಸುವುದು : ಅಂದು ಸಾಯಂಕಾಲ ವರನ ತಂದೆ ಸಂಬಂಧಿಕರು, ಕುಲಸ್ಥರೆಲ್ಲರನ್ನು ಹೆಂಡ ಅಥವಾ ಸರಾಯಿ ಅಂಗಡಿಗೆ ಕರೆದುಕೊಂಡು ಹೋಗಿ ಅವರಿಗೆ ಕೇಳಿದಷ್ಟು ಸಾರಾಯಿ, ಮಾಂಸ, ಹೆಂಡ ಕೂಡಿಸುತ್ತಾನೆ. ಹುಡುಗಿಯ ಕಡೆಯವರು ಅದು ಇಲ್ಲ, ಇದು ಇಲ್ಲ ಎಂದು ತಕರಾರು ತೆಗೆಯುತ್ತಿರುತ್ತಾರೆ. ಇವರನ್ನು ಶಾಂತಿ ಮಾಡದಿದ್ದರೆ ಹುಡುಗನ ತಂದೆಯನ್ನು ತಪ್ಪಿನಲ್ಲಿಡುತ್ತಾರೆ. ಅದಕ್ಕಾಗಿ ಅವರು ಕೇಳಿದ್ದನ್ನು ತಂದುಕೊಡುತ್ತಾರೆ. ತಿಂದು ಕುಡಿದ ಮೇಲೆ ಹುಡುಗಿಯ ಕಡೆಯವರನ್ನು ಜೋಪಾನವಾಗಿ ಮನೆಗೆ ಸೇರಿಸಿ ಬರಬೇಕು. ಅಷ್ಟರಲ್ಲಿ ಊರಾಡಲು ಹೋದ ವಧು ಬರುತ್ತಾಳೆ. ಅವಳಿಗೂ ಸಹ ಕುಡಿಸಿ ತಿನ್ನಿಸಿ ಅಂದಿನ ಕಾರ್ಯಕ್ರಮ ಸಮಾಪ್ತಿಗೊಳಿಸುತ್ತಾರೆ.

೭.೩.೭. ಸಂಬಂಧ ಕಡಿದುಕೊಳ್ಳುವುದು : ನಿಶ್ಚಿತಾರ್ಥ ಆದ ಮೇಲೆ ಯಾವುದೇ ಕಾರಣದಿಂದ ಸಂಬಂಧ ಇಷ್ಟ ಬರದಿದ್ದರೆ ಕುಲಪಂಚಾಯಿತಿಯ ಮುಖಾಂತರ ಬಗೆಹರಿಸಿಕೊಳ್ಳುತ್ತಾರೆ. ಇವರ ನಿಯಮಗಳು ಈ ರೀತಿ ಇವೆ. ವಧುವಿನ ಪಕ್ಷದವರಿಗೆ ವರನ ಪಕ್ಷದ ನಡತೆಗಳು ಮೆಚ್ಚದೇ ಇದ್ದರೆ ನಿಶ್ಚಿತಾರ್ಥದ ದಿನ ಹೆಂಡ, ಸಾರಾಯಿ, ಮಾಂಸ ತಿನ್ನಿಸಲು ಮಾಡಿದ ಖರ್ಚು ಹೆಣ್ಣಿನ ಕಡೆಯವರು ವಾಪಾಸ್ಸು ಕೊಡಬೇಕು. ವರನ ಪಕ್ಷದವರಿಗೆ ವಧುವಿನ ಪಕ್ಷದ ನಡತೆಗಳು ಮೆಚ್ಚದಿದ್ದರೆ ವರನ ಕಡೆಯವರು ಏನು ಕೊಡುವ ಹಾಗಿಲ್ಲ. ನಮಗೆ ಈ ಸಂಬಂಧ ಬೇಕಿಲ್ಲ. ಆ ಹುಡುಗಿಯನ್ನು ಯಾರಿಗಾದರು ವಿವಾಹ ಮಾಡಿಕೊಡಬಹುದು. ಯಾವುದೇ ಅಭ್ಯಂತರವಿಲ್ಲವೆಂದು ವರನ ತಂದೆ ಕುಲಸ್ಥರ ಮುಂದೆ ಹೇಳಿ ವಿವರಿಸಿದರೆ ಈ ಸಂಬಂಧ ಕೊನೆಯಾಗುತ್ತದೆ.

[illegible]

೭.೩.೮. ವಿವಾಹ ಕಾರ್ಯಕ್ರಮ : ಹಗಲುವೇಷಗಾರರಲ್ಲಿ ಬಾಲ್ಯ ವಿವಾಹ ಪದ್ಧತಿ ಹೆಚ್ಚಾಗಿ ಕಂಡುಬರುತ್ತದೆ. ಒಂದೇ ಊರಿನಲ್ಲಿ ಸ್ಥಿರವಾದ ನಿವಾಸಗಳಿಲ್ಲದೆ ಊರುರು ತಿರುಗುವುದರಿಂದ ತಮಗೆ ಬೇಕಾದ ಒಂದು ಊರನ್ನು ಆಯ್ಕೆಮಾಡಿಕೊಂಡು ಅಲ್ಲಿ ಇಬ್ಬರು ಎದುರು ಬದುರು ಬಿಡಾರಗಳನ್ನು ಹಾಕಿಕೊಂಡು ನಿಗಧಿಪಡಿಸಿದ ದಿನದಂದು ಮದುವೆ ನಡೆಸುತ್ತಾರೆ. ಒಳ್ಳೆಯ ದಿನ ಕೆಟ್ಟದ ದಿನ ಎಂಬ ತಾರತಮ್ಯ ಇವರಲ್ಲಿಲ್ಲ. ಸಾಮಾನ್ಯವಾಗಿ ವಧುವಿನ ಬಿಡಾರದ ಮುಂದೆ ಮದುವೆ ಕಾರ್ಯ ನೆರವೇರಿಸುವರು.

"ಹಿಂದುಗಳಲ್ಲಿ ಭಿನ್ನ ಗೋತ್ರ ವಿವಾಹವೆಂಬುದು ಎರಡು ಅಂಶಗಳನ್ನೊಳಗೊಂಡಿದೆ. ಮೊದಲನೆಯದು 'ಸಪಿಂಡ'ವೆಂಬ ಭಿನ್ನ ಗೋತ್ರ ವಿವಾಹ ಪದ್ಧತಿ. ಇದು ಕೆಲವು ತಲೆಮಾರುಗಳ ವ್ಯಾಪ್ತಿಯಲ್ಲಿ ತಂದೆಯ ಕಡೆಯಿಂದಾಗಲಿ ಇಲ್ಲವೆ ತಾಯಿಯ ಕಡೆಯಿಂದಾಗಲಿ ಸಂಬಂಧ ಹೊಂದಿದವರ ನಡುವೆ ವಿವಾಹವಾಗುವುದನ್ನು ನಿಷೇಧಿಸುತ್ತದೆ. ಮತ್ತೊಂದು 'ಭಿನ್ನಗೋತ್ರ' ವಿವಾಹ ಪದ್ಧತಿ. ಒಂದೇ ಗೋತ್ರದವರೊಂದಿಗೆ ವಿವಾಹ ಸಂಬಂಧ ನಡೆಯುವುದನ್ನು ನಿಷೇಧಿಸುತ್ತದೆ. ಇದರ ಲಕ್ಷಣದ ಬಗ್ಗೆ ಶ್ರೀ ಕರಂಡಿಕರ್‌ರವರು ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ." ಗೋತ್ರವೆಂಬ ಪದ ಇತ್ತೀಚಿನವರ ಪ್ರಕಾರ ವಂಶವೆಂಬ ಅರ್ಥವನ್ನು ಸೂಚಿಸದೇ ಹೋದರು. ಋಗ್ವೇದದ ಕಾಲದಲ್ಲಿನ ಸುತ್ತಮುತ್ತ ಸನ್ನಿವೇಶದಲ್ಲಿ ಗುಂಪು ಎಂಬ ಭಾವನೆಯನ್ನು ಪಡೆಯುತ್ತಾ ಬಂದಿತು. ಇದೇ ಶಬ್ಧ ಛಂದಗೋಪ್ಯ ನಿಷತ್ತಿನ ಕಾಲದ ಹೊತ್ತಿಗೆ ವಂಶವೆಂಬ ಅರ್ಥವನ್ನು ಪಡೆಯಿತು."[೧೪] ಹೀಗೆ ಹಗಲುವೇಷಗಾರರು ಸಹ ಭಿನ್ನಗೋತ್ರವೆಂಬ ವಿವಾಹ ಪದ್ಧತಿಯನ್ನು ಆಚರಿಸುತ್ತಿದ್ದಾರೆ. ಇವರ ಪ್ರಕಾರ ಒಂದೇ ಗೋತ್ರವೆಂದರೆ ಅಣ್ಣ-ತಮ್ಮಂದಿರೆಂಬ ಭಾವನೆಯನ್ನು ಹೊಂದಿದ್ದಾರೆ. ಅವರು ಎಲ್ಲೇ ಇರಲಿ ಈ ಗೋತ್ರಗಳಿಂದಲೇ ತಮ್ಮ ಕೊಡುವ ತೆಗೆದುಕೊಳ್ಳುವ ರಕ್ತಸಂಬಂಧವನ್ನು ಗುರುತಿಕೊಳ್ಳುತ್ತಾರೆ. ವಿವಿಧ ಸಮಾಜ ಶಾಸ್ತ್ರಜ್ಞರು ಈ ವಿವಾಹ ಪದ್ಧತಿಯನ್ನು ಒಪ್ಪಿಕೊಂಡಿದ್ದಾರೆ. ಏಕೆಂದರೆ ತಳಿ (ಜೀನ್ಸ್) ಬದಲಾವಣೆಯು ಒಳ್ಳೆಯ ನಿಯಮ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಭಾರತದಲ್ಲಿ ಭಿನ್ನ ಗೋತ್ರ ವಿವಾಹ ಸಂಬಂಧಗಳನ್ನು ರಕ್ತಸಂಬಂಧ, ಕುಲ ದೇವತೆ, ಪ್ರಾದೇಶಿಕ ಗುಂಪು ಮತ್ತು ಗೋತ್ರ ಮತ್ತು ಸಪಿಂಡ ಎಂಬ ಪದಗಳಿಂದ ವಿವರಿಸಲಾಗಿದೆ. ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಪ್ರದೇಶದಲ್ಲಿ ವಾಸ್ತವವಿರುವ ಸಮುದಾಯದಲ್ಲಿ ಸುಮಾರು ೧೫೫ ಭಿನ್ನ ಗೋತ್ರಗಳು ಪತ್ತೆಯಾಗಿವೆ. ಈ ಹಿಂದೆ ಬಿ.ಎಂ. ಹೊಸಮನಿಯವರು ೧೦೦ ಎನ್.ಆರ್. ವೆಂಕಟೇಶ್ ಅವರು ೧೧೪ ಯಳನಾಡ ಅಂಜಿನಪ್ಪ ೬೨ ಭಿನ್ನ ಗೋತ್ರಗಳು ಸೂಚಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

"ಒಂದು ಗೋತ್ರಕ್ಕೆ ನೆಂಟರಾಗುವ ಎಲ್ಲಾ ಗೋತ್ರಗಳವರೂ ಅಣ್ಣ ತಮ್ಮಂದಿರು ಎನ್ನುವ ನಂಬಿಕೆ ಇವರಲ್ಲಿದೆ. ಉದಾಹರಣೆಗೆ ರುದ್ರಾಕ್ಷಿ ಗೋತ್ರದವರಿಗೆ ಕಲ್ಯಾಣಂನವರು, ಕೊಂಡಪಿಲ್ಲ, ಅಶ್ವಂ, ಮಿರ್ಯಾಲ, ಪೋತೆ, ಸಂಕುಲ, ಸಿರುವಾಟಿ, ಮೊಗೊಳ್ಳು ಹಾಗೂ ಬಲ್ಲಲ್ಲೋಳ್ಳು ಗೋತ್ರಗಳವರು ನೆಂಟರಾಗುತ್ತಾರೆ. ಅಂದರೆ ರುದ್ರಾಕ್ಷಿಯವರನ್ನುಳಿದ ಹತ್ತು ಗೋತ್ರಗಳವರೂ ಅಣ್ಣ-ತಮ್ಮಂದಿರು ಎನ್ನುವ ಭಾವನೆ ಇದೆ.

ಅಲ್ಲದೆ ಈ ಗೋತ್ರಗಳು ಸೋದರ ಗೋತ್ರಗಳೆಂದು ತಿಳಿದಿದ್ದಾರೆ. ಇವರಲ್ಲಿ ಪರಸ್ಪರ ಮದುವೆಯ ಸಂಬಂಧಗಳು ಏರ್ಪಡುವುದಿಲ್ಲ."[೧೫]

"ವೇಷಗಾರರ ಭಿನ್ನ ಗೋತ್ರಗಳ ವಿಷಯದಲ್ಲಿ ಕೆಲವು ಅನುಮಾನಗಳಿವೆ. ರುದ್ರಾಕ್ಷಿಯವರಿಗೆ ಅಶ್ವಂ ಮತ್ತು ಕೊಂಡಪಿಲ್ಲ ಗೋತ್ರಗಳವರು ನೆಂಟರಾದರೆ ಅಶ್ವಂನವರಿಗೆ ರುದ್ರಾಕ್ಷಿ ಹಾಗೂ ಕೊಂಡಪಿಲ್ಲ ಇಬ್ಬರೂ ಬೀಗರಾಗುತ್ತಾರೆ. ಅಂದರೆ ಮೊದಲ ಗುಂಪಿನಲ್ಲಿ ಅಣ್ಣ ತಮ್ಮಂದಿರಾಗಿದ್ದ ಅಶ್ವಂ ಮತ್ತು ಕೊಂಡಪಿಲ್ಲ ಎರಡನೇ ಗುಂಪಿನವರಿಗೂ ನೆಂಟರಾಗುತ್ತಾರೆ. ಇದೇ ರೀತಿ ಸಿರುವಾಟಿ ಗೋತ್ರದವರು ಸಹ ಉಳಿದೆಲ್ಲರಿಗೂ ನೆಂಟರು ಎಂದು ತಿಳಿದು ಬಂದಿದೆ."[೧೬] ಇಲ್ಲಿ ಗೋತ್ರಗಳು ಎರಡು ದಿಕ್ಕಿನಲ್ಲಿ ಕೆಲಸ ಮಾಡುವುದನ್ನು ನೋಡಿದರೆ ಇದರ ಬಗ್ಗೆ ಇನ್ನು ಸೂಕ್ಷ್ಮವಾದ, ಸ್ಪಷ್ಟವಾದ ಸಮಾಜ ವಿಜ್ಞಾನದ ಅಧ್ಯಯನದ ಅವಶ್ಯಕತೆ ಇದೆಯೆಂಬುದು ಸ್ಪಷ್ಟವಾಗುತ್ತದೆ.

ಮದುವೆಗೆ ಒಂದು ದಿನ ಮುಂದೆ ಇವರು ತಮ್ಮ ಬಿಡಾರದ ಮುಂದೆ ನೆಲದ ಮೇಲೆ ಮೂರು ಕಟ್ಟಿಗೆಯನ್ನು ಊಳಿ ಅದರ ಮೇಲೆ ಒಂದು ಈಚಲು ಚಾಪೆ ಹೊದಿಸುತ್ತಾರೆ. ಇದನ್ನು 'ತಕ್ಕಟೆ' ಎಂದು ಕರೆಯುತ್ತಾರೆ. ಇದು ಮದುವೆಯ ಸಂಕೇತವನ್ನು ಸೂಚಿಸುತ್ತದೆ.

೭.೩.೯. ಚಾಪೆಯ ಮೇಲೆ ಮಾತು : ಮದುವೆಯ ದಿನ ಮುಂಜಾನೆ ವರನ ಕಡೆಯವರು, ಕುಲದ ಹಿರಿಯರು ವಧುವಿನ ಮನೆಯ ಮುಂದೆ ಕುಳಿತುಕೊಳ್ಳುತ್ತಾರೆ. ವರನ ತಂದೆ ಬಂದು ಹೊಸ ಈಚಲು ಚಾಪೆಯನ್ನು ತಂದುಕೊಡುತ್ತಾನೆ. ಕೆಲವು ಪ್ರದೇಶಗಳಲ್ಲಿ ಮುತ್ತೈದೆ ಚಾಪೆ ಹಾಕಿದರೆ, ಕೆಲವು ಕಡೆ ಕುಲದ ಹಿರಿಯರು ಚಾಪೆ ಹಾಸುತ್ತಾರೆ. ಮದುವೆ ಆದ ಮೇಲೆ ಯಾವುದೇ ತೊಂದರೆ ಬರಬಾರದೆಂದು ವಧು, ವರನ ತಂದೆ ತಾಯಿಗಳು ಮಾತನಾಡಿಕೊಳ್ಳುತ್ತಾರೆ. ಈ ಒಪ್ಪಂದಗಳೇ ಸದಾ ಕಾಲ ಇರುತ್ತವೆಂದು ನಂಬಿರುತ್ತಾರೆ. ಈ ಚಾಪೆಯ ಮೇಲೆ ಕುಳಿತು ತೆಗೆದುಕೊಂಡು ನಿರ್ಣಯಗಳನ್ನೇ 'ಚಾಪೆಯ ಮೇಲೆ ಮಾತು' ಎಂದು ಕರೆಯುತ್ತಾರೆ.

ವಧುವಿನ ತಂದೆ ಕೆಲವು ಬೇಡಿಕೆಗಳನ್ನು ಮುಂದಿಡುತ್ತಾನೆ. ತನ್ನ ಮಗಳನ್ನು ಮದುವೆಯಾದ ಮೇಲೆ ಅಳಿಯನಿಗೆ ಎರಡು ಮಕ್ಕಳಾಗುವವರೆಗೆ ನನ್ನ ಹತ್ತಿರ ಇರಬೇಕೆಂದು ಹೇಳುತ್ತಾನೆ. ಬುದ್ಧಿವಂತರಾದವರು ನಾವು ನಿಮ್ಮ ಮಗಳನ್ನು ಸರಿಯಾಗಿ ನೋಡಿಕೊಳ್ಳುತ್ತೇವೆಯೋ ಇಲ್ಲವೋ ಒಬ್ಬ ಮಧ್ಯವರ್ತಿಯನ್ನು ನಿಯಮಿಸು ಗೊತ್ತಾಗುತ್ತದೆ ಎನ್ನುತ್ತಾನೆ. ದೊಡ್ಡ ಮನುಷ್ಯನನ್ನು ಮಧ್ಯವರ್ತಿಯಾಗಿ ನಿಯಮಿಸಿದರೆ ಇವರ ಕುಟುಂಬ ಅಡ್ಡಾಡಿದಂತೆಲ್ಲಾ ಮಧ್ಯವರ್ತಿಯು ಅವರ ಹಿಂದೆಯೇ ಹೋಗುತ್ತಿರುತ್ತಾನೆ. ಅಂತಹ ದೊಡ್ಡ ಮನುಷ್ಯನೆನಿಸುವ ಮಧ್ಯವರ್ತಿಯ ಖರ್ಚು ಇವರದೇ ಆಗಿರುತ್ತದೆ. ನಾವು ನೀವು ಇರಬೇಕಾದರೆ ಮಧ್ಯಸ್ಥರು ಏಕೆ? ಏನು ಹೊಡೆದಾಡಿದರೂ, ಬೈದಾಡಿದರೂ ಯಾರನ್ನು ಮಧ್ಯ ಬರಬಾರದೆಂದು ಹೇಳುತ್ತಾರೆ. ಕೊನೆಗೆ ಅದು ಇದು ಮಾತನಾಡಿ ವರನ ತಂದೆ ಒಂದು ಕೋರಿಕೆ ಕೇಳುತ್ತಾನೆ. ಆತನು ಎರಡು ಮಕ್ಕಳಾಗುವವರೆಗೆ ಎಂದು ಹೇಳಿದ್ದನ್ನು, ಒಂದು ಮಗುವಿಗೋ ಅಥವಾ ಒಂದು ವರ್ಷಕ್ಕೋ ಒಪ್ಪಿಸುತ್ತಾನೆ.

ಇದಾದ ತಕ್ಷಣ ಮತ್ತೆ ವರನ ತಂದೆ ತಾಯಿಗಳು ವಧುವಿನ ತಂದೆತಾಯಿಗಳಿಗೆ ತಮ್ಮ ಸಂಬಂಧ ವಿವರ ತಿಳಿಸುವರು (೭.೩.೩. 'ಇಡೆಂ' ನಲ್ಲಿ ಇಲ್ಲಿ ನಿರೂಪಿಸಿದಂತೆ)

೭.೩.೧೦. ಮನೆದೇವರ ಪೂಜೆ : "ಮದುವೆಯ ಮುಂಚೆ ಯಾವ ದಿನ ಮಂಗಳವಾರ ಬರುತ್ತದೆಯೋ ಅಂದು ಮನೆಯ ದೇವರು ಸುಂಕ್ಲಮ್ಮನಿಗೆ ಒಂದು ಬೇಟೆ, ಜಂಬಲಮ್ಮನಿಗೆ ಎರಡು ಬೇಟೆ ಮಾಡುತ್ತಾರೆ. ಈ ಪೂಜೆಯನ್ನು ಸಲ್ಲಿಸುವ ಕ್ರಮ ಈ ರೀತಿ ಇದೆ. ಜಂಬೆಯ ಗಿಡಕ್ಕೆ ನಾಲ್ಕು ಮೂಲೆಗೆ ಒಂದೊಂದು ಸ್ತಂಭ ಊಳಿ ಅದರ ಮೇಲೆ ಐದು ರೀತಿಯ ತಳಿರುಗಳಿಂದ ಹಂದರ ಹಾಕಿ, ಸ್ಥಂಭಗಳಿಗೆ ಮಾವಿನ ಎಲೆ, ಬಾಳೆಯ ದಿಂಡುಗಳಿಂದ ತೋರಣ ಕಟ್ಟಿ ಅದಕ್ಕೆ ಸುಣ್ಣ ಕೆಮ್ಮಣ್ಣಿನಿಂದ ನಾಮ ಬಳಿಯುತ್ತಾರೆ. ಮನೆಯ ದೇವರು ಜಂಬಲಮ್ಮ ಆದರೆ ಹುಟ್ಟು ಮಾರ್ಗದಲ್ಲಿ ಪೂಜಿಸುತ್ತಾರೆ."[೧೭]

ಪೂಜೆ ಸಲ್ಲಿಸುವ ವಿಧಾನವೆಂದರೆ ಸ್ನಾನಮಾಡಿ ಹುತ್ತದಿಂದ ಮಣ್ಣು ತಂದು ಹದಮಾಡಿ ದೇವರ ಬೊಂಬೆ ಮಾಡಿ, ಮುಂದೆ ಗೋದಿ ಹಿಟ್ಟಿನಿಂದ 'ಗಂಡಾದೀಪ'[೧೮] ಮಾಡಿ ಆ ಗೊಂಬೆಗೆ ಕುಂಕುಮ, ಅರಿಷಿಣ ಹಚ್ಚಿ ಪೂಜೆ ಸಲ್ಲಿಸಿ ಆ ಬೊಂಬೆಯ ಎದುರು ಎರಡು ಬೇಟೆ ಕಡಿಯುತ್ತಾರೆ. ತಲೆ ಕಡಿದ ತಕ್ಷಣ ಮುಂದಿನ ಒಂದು ಕಾಲನ್ನು ಕತ್ತರಿಸಿ ಬಾಯಿಯಲ್ಲಿ ಇಟ್ಟು ಪೂಜಿಸಿದ ಗೊಂಬೆಯ ಎದುರಿಗೆ ಇರಿಸುತ್ತಾರೆ. ದೇಹದಲ್ಲಿರುವ ಕೊಬ್ಬನ್ನು ತೆಗೆದು ಗಂಡಾದೀಪಕ್ಕೆ ಹಾಕಿ ಉರಿಸುತ್ತಾರೆ. ಇದು ಜಂಬಲಮ್ಮಳ ಪೂಜೆ.

ಸುಂಕ್ಲಮ್ಮಳ ಪೂಜೆಯಾದರೆ ಮೊದಲಿನಂತೆಯೇ ತಳಿರು, ತೋರಣಗಳಿಂದ ಅಲಂಕರಿಸಿ ಮಂಟಪಮಾಡಿ ಅದರಲ್ಲಿ ಒಂದು ಮಣ್ಣಿನ ಗಡಿಗೆಯಲ್ಲಿ ಬೆಲ್ಲದ ನೀರಿನ ಪಾನಕ ತುಂಬಿಡುತ್ತಾರೆ. ಅದರ ಮೇಲೆ ಸುಲಿಯದ ತೆಂಗಿನಕಾಯಿ ಇಡುತ್ತಾರೆ. ಕಾಯಿಯ ಮೇಲೆ ಕುಪ್ಪಸದ ಕಣ ಇಟ್ಟು ಮುಂದೆ ಗೋದಿ ಹಿಟ್ಟಿನಿಂದ ಗಂಡಾದೀಪ ಮಾಡಿ ಇಡುತ್ತಾರೆ. ಅವುಗಳಿಗೆ ಕುಂಕುಮ, ಅರಿಷಿಣ ಹಚ್ಚಿ ಊದು ಬತ್ತಿ, ಉರಿಸಿ ಪೂಜೆ ಸಲ್ಲಿಸಿ ಒಂದು ಬೇಟೆಯನ್ನು ಕಡಿಯುತ್ತಾರೆ. ಆ ಗಡಿಗೆಯ ಮುಂದೆ ಬೇಟೆ ಕಡಿದು ಅದರ ಬಾಯಿಯಲ್ಲಿ ಕಾಲನ್ನು ಕಡಿದು ಇಡುತ್ತಾರೆ. ಕೊಬ್ಬು ತೆಗೆದು ಗಂಡಾದೀಪದಲ್ಲಿ ಹಾಕಿ ಉರಿಸುತ್ತಾರೆ. ಇದನ್ನು 'ಮನೆ ದೇವರ ಪೂಜೆ' ಅಥವಾ 'ಇಂಟಿ ದೇವತ ಪೂಜ' ಎಂದು ಕರೆಯುತ್ತಾರೆ.

೭.೩.೧೧. ಓಲಿ ಕೊಡುವುದು (ತೆರ ಕೊಡುವುದು) : ಚಾಪೆಯ ಮೇಲೆ ಮಾತು ಒಪ್ಪಿಸುವುದು ಮುಗಿದ ಬಳಿಕ ವರನ ತಂದೆ ತಾಯಿಗಳು ಹಾರ್ಮೋನಿಯಂ, ತಬಲ, ಮೇಳ ಬಾರಿಸುವದರೊಂದಿಗೆ ಎಲೆ, ಅಡಿಕೆ ತೆಗೆದುಕೊಂಡು ಕುಲದ ಹಿರಿಯರನ್ನು ಮುಂದಿಟ್ಟುಕೊಂಡು ವಧುವಿನ ಮದುವೆಯ ಬಿಡಾರದೊಳಗೆ ಹೋಗಿ, ವಧುವಿನ ತಂದೆ-ತಾಯಿಗಳಿಗೆ, ವರನ ತಂದೆ-ತಾಯಿಗಳು ಕುಂಕುಮ ಬೊಟ್ಟು ಇಟ್ಟು ಎಲೆ ಅಡಿಕೆ, ಅರಿಷಿಣ ಕೊಂಬಿನೊಂದಿಗೆ ಒಂಬತ್ತು ರೂಪಾಯಿ 'ಓಲಿ' (ತೆರ) ಕೊಡುತ್ತಾರೆ. ವಧುವಿನ ತಾಯಿ ಒಂಬತ್ತು ತಿಂಗಳು ಹೊತ್ತು ಮಗಳನ್ನು ಸಂಬಾಳಿಸಿದ್ದಕ್ಕೆ ಈ ಒಂಬತ್ತು ಸಾವಿರ ಕೊಟ್ಟಿದ್ದಾರೆ ಎಂದು ತಪಾಸೆ ಮಾಡುತ್ತಾಳೆ. ಇತ್ತೀಚಿಗೆ ಈ ತೆರದ ಹಣ ಹೆಚ್ಚು ಮಾಡಿದ್ದಾರೆ. ೧೦೦ ರಿಂದ ೫೦೦ಕ್ಕೆ

ಹೋಗಿದೆ. ಪೂರ್ವದಲ್ಲಿ ಒಂಬತ್ತು ರೂಪಾಯಿಗೆ ವಧುವಿನ ತಂದೆ ತಾಯಿಗಳಿಗೆ ಬಟ್ಟೆ ಬರುತ್ತಿದ್ದವು. ಈಗ ರೂಪಾಯಿ ಮೌಲ್ಯಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಆ ಮೊತ್ತವನ್ನು ಹೆಚ್ಚಿಸಿದ್ದಾರೆ. ಈ ಪೂರ್ವಾಚಾರ ಇಂದಿಗೂ ಹಾಗೆಯೇ ಮುಂದುವರಿಯುತ್ತದೆ.



ಮದುವೆಯ ಹಂದರದ ಮುಂದೆ ಹಾಡುಗಾರಿಕೆ

೭.೩.೧೨. ಹಂದರ ಹಾಕುವುದು : ಇವರ ಹಂದರ ಹಾಕುವ ಕಾರ್ಯಕ್ರಮ ಈ ರೀತಿ ಇದೆ. ಹಾರ್ಮೋನಿಯಂ, ತಬಲ ಡಕ್ಕೆ, ಭಜನೆಯ ಸಂಗೀತದೊಂದಿಗೆ ಹಾಡುಗಳನ್ನು ಹಾಡುತ್ತಾ ಮುತ್ತೈದೆಯರೊಡಗೂಡಿ ಹುತ್ತದ ಮಣ್ಣು ತರಲು ಗುದ್ದಲಿ ಪುಟ್ಟಿ ತೆಗೆದುಕೊಂಡು ಹೋಗುವರು. ಒಬ್ಬ ಗಂಡಸರು ಗುದ್ದಲಿಯಿಂದ ಐದು ಸಲ ತೋಡುತ್ತಾನೆ. ಒಬ್ಬ ಮುತ್ತೈದು ಆ ಮಣ್ಣನ್ನು ಒಂದು ಪುಟ್ಟಿಯಲ್ಲಿ ತುಂಬಿಕೊಂಡು, ಎಲ್ಲರೂ ಬಿಡಾರದ ಹತ್ತಿರ ಬರುತ್ತಾರೆ. ಬಂದ ಮೇಲೆ ಮೊದಲು ಮುತ್ತೈದೆಯರು ಹಾರೆಯಿಂದ ಹಂದರದ ಬಲ ಭಾಗದಲ್ಲಿ ಒಂದು ಕುಣಿಯನ್ನು ತೋಡಿ ಬಂದು ಕಟ್ಟಿಗೆ ಊಳಿ ಹುತ್ತದ ಮಣ್ಣು ಹಾಕಿ ಮುಚ್ಚಿ ಅದಕ್ಕೆ ಕೆಮ್ಮಣ್ಣು ಸುಣ್ಣದ ನಾಮ ಬಳಿದ ಮಾವಿನ ತಳಿರ ಕಟ್ಟುವುದರ ಮುಖಾಂತರ ಕಾರ್ಯಕ್ರಮ ಪ್ರಾರಂಭಿಸುತ್ತಾರೆ. ಇನ್ನುಳಿದ ಮೂರನ್ನು ಬೇರೆಯವರು ಕುಳಿ ತೆಗೆದು ನಾಲ್ಕು ಚೌಕಾಗಿ ಕಟ್ಟಿಗೆ ಊಳಿ ಅವುಗಳಿಗೆ ಕೆಮ್ಮಣ್ಣು, ಸುಣ್ಣ ಹಚ್ಚಿ ತಳಿರು ಕಟ್ಟಿ ಅಲಂಕರಿಸಿ ಮೇಲೆ ಐದು ರೀತಿಯ ಎಲೆಗಳಾದ ಮಾವು, ಕಣಗಲ, ರಾಗಿ, ಗೋಂದ, ಬಾಳೆ ಎಲೆಗಳನ್ನು ಹಾಕಿ ಮುಚ್ಚುತ್ತಾರೆ. ಅದರ ಕೆಳಗಡೆ ನಾಲ್ಕು ಮೂಲೆ ಚೌಕಾಗಿ ಸಗಣಿ ಯಿಂದ ಸಾರಿಸಿ ನೇರವಾಗಿ, ಚೌಕಾಗಿ ಸುಣ್ಣ ಕೆಮ್ಮಣ್ಣು ಹಚ್ಚಿ ರಂಗವಲ್ಲಿ ಹಾಕಿ ಅಲಂಕರಿಸುತ್ತಾರೆ. ಇದನ್ನು 'ಹಂದರ' ಎಂದು ಕರೆಯುತ್ತಾರೆ. ಈ ಹಂದರ ಹೆಣ್ಣು ಮತ್ತು ಗಂಡಿನ ಇಬ್ಬರ ಬಿಡಾರದ ಮುಂದೆಯೂ ಹಾಕುತ್ತಾರೆ.

ಈ ಸಮುದಾಯದ ಮದುವೆಗಳಲ್ಲಿ ಪ್ರತಿಯೊಂದು ಕಾರ್ಯಕ್ಕೂ ದೊಡ್ಡ ಮುತ್ತೈದೆ ಎನಿಸಿಕೊಂಡವರು ಪ್ರಮುಖ ಪಾತ್ರವಹಿಸುತ್ತಾರೆ. ದೊಡ್ಡ ಮುತ್ತೈದೆಯರೆಂದರೆ ಹದಿನಾರು ದಿನಗಳ ಕಾಲ ಮದುವೆ ಶಾಸ್ತ್ರ ನೆರವೇರಿಸಿಕೊಂಡು ಮದುವೆ ಮಾಡಿಕೊಂಡವರನ್ನು 'ದೊಡ್ಡ ಮುತ್ತೈದೆ' ಎಂದು ಕರೆಯುತ್ತಾರೆ. ಇವರು ಮದುವೆಯ ಸಲಹೆ ನೀಡಲು ಅರ್ಹರೆಂದು ಪ್ರತೀತಿ ಇದೆ. ಕರ್ನಾಟಕದ ಕೆಲವು ಕಡೆ ಇಬ್ಬರು ಮದುವೆಯಾಗದ ಹುಡುಗರಿಗೆ ಸ್ನಾನ ಮಾಡಿಸಿ ಕಂಕಣ ಕಟ್ಟಿ ಮದುವೆಯ ಕಾರ್ಯಗಳಿಗೆ ಮುಂದಾಳತ್ವಕ್ಕೆ ಬಿಡುವ ಪ್ರತೀತಿ ಇದೆ. ಕೆಲವು ಕಡೆ ಹೀಗೆ ಮುಂದಾಳತ್ವ ವಹಿಸಿದವರು ಕಳಸ ಹಿಡಿಯುತ್ತಾರೆ. ಕೆಲವು ಕಡೆ ಮುತ್ತೈದೆಯರು ಹಿಡಿಯುತ್ತಾರೆ. ಒಟ್ಟಿನಲ್ಲಿ ಇವರ ಮದುವೆಯ ಮುಂದೆ ಜೋಡಿ ಕಳಸದಾರರಿರುತ್ತಾರೆ.

ಇವರಲ್ಲಿ ಮದುವೆಗೆ ಯಾರನ್ನೇ ಆಹ್ವಾನ ಮಾಡಿರಲಿ ಅವರ ಬಸ್ಸಿನ ಖರ್ಚನ್ನು ಆಹ್ವಾನಿತರೇ ಕೊಡಬೇಕು. ಉದಾಹರಣೆಗೆ ಮದುವೆಗೆ ಬಂದು ಹತ್ತು, ಇಪ್ಪತ್ತು ರೂಪಾಯಿ ಮುಯ್ಯಿ ಕೊಟ್ಟು, ನೂರು ಎರಡು ನೂರು ರೂಪಾಯಿ ಬಸ್ಸು ಅಥವಾ ರೈಲು ಖರ್ಚು ದೊರಕಿಸಿಕೊಂಡು ಹೋದ ಎಷ್ಟೋ ಸಂದರ್ಭಗಳು ಇವೆ.


ಜೋಡು ಕಳಸದೊಂದಿಗೆ ವಧುವರರು

೭.೩.೧೩. ಕುಲಾಚಾರ : ಮದುವೆಯ ಊಟದ ಅಡುಗೆ ತಯಾರಿಸಲು ಪ್ರತ್ಯೇಕ ಜಾಗದಲ್ಲಿ, ಪ್ರತ್ಯೇಕವಾಗಿ ಒಲೆಗಳನ್ನು ಮುತ್ತೈದೆಯರೊಂದಿಗೆ ಹಾಕಿಸುತ್ತಾರೆ. ಒಲೆಯ ಹಿಂದೆ ಗಣಪನ ಮೂರ್ತಿ ಮಾಡಿ ವಿಭೂತಿ, ಕುಂಕುಮ, ಹೂ ಮುಡಿಸಿ, ಗಂಧದ ಕಡ್ಡಿಹಚ್ಚಿ ಆರತಿ ಬೆಳಗಿ ಪೂಜೆ ಸಲ್ಲಿಸಿ, ಆ ಒಲೆಗಳ ಮೇಲೆಯೇ ಅಡುಗೆ ಸಿದ್ಧಪಡಿಸುವರು. ಅಡುಗೆ ಸಿದ್ಧಗೊಂಡ ಮೇಲೆ ಮೊದಲಿಗೆ ಎಡೆ ಗಣಪನಿಗೆ ಹಾಕವರು. ಏಕೆಂದರೆ, ಏನಾದರೂ ವಿಘ್ನಗಳು ಬಂದರೆ ಗಣಪನು ಪರಿಹರಿಸುವನು ಎಂಬ ನಂಬಿಕೆ ಇವರದು.

ಪೂರ್ವದಲ್ಲಿ ಅಡುಗೆ ಮಾಡಿಸಿ ಊಟ ನೀಡುವ ಪದ್ಧತಿ ಇದ್ದಿಲ್ಲ. ತಮ್ಮ ಬಿಡಾರದ ಸುತ್ತಲು ಇರುವ ಕುಲಸ್ಥ ಕುಟುಂಬಗಳನ್ನು ಲೆಕ್ಕ ಹಾಕಿಕೊಂಡು. ಕುಲದ ಹಿರಿಯ ವರನ ತಂದೆಯಿಂದ ಅಕ್ಕಿ, ಬೇಳೆಗೆ, ಹೆಂಡಕ್ಕೆ ಹಣ ಕೇಳಿ ಪಡೆದು ಆ ಹಣದಿಂದ ಅಗತ್ಯವಿದ್ದಷ್ಟು ತರಿಸಿ, ಮದುವೆಯಾದ ಪ್ರತಿಯೊಂದು ಕುಟುಂಬಕ್ಕೂ ಈ ಧಾನ್ಯ ಪಡೆಯಲು ಹಕ್ಕು ಇರುತ್ತದೆ. ಎಷ್ಟು ಕುಟುಂಬಗಳಿವೆಯೋ ಲೆಕ್ಕ ಹಾಕಿ ತಲಾ ಎರಡು ಸೇರು ಅಕ್ಕಿ ಅದಕ್ಕೆ ತಕ್ಕಷ್ಟು ತೊಗರಿಬೇಳೆ. ಹುಣಸೆ ಹಂಚಲು ನಿಯಮಿಸುತ್ತಾರೆ. ಉಳಿದ ಹಣದಲ್ಲಿ ಸಾಯಂಕಾಲ ಹೆಂಡ / ಸರಾಯಿ ತರಿಸಿ ಕುಲಸ್ಥರಿಗೆ ಸಮಾನವಾಗಿ ಹಂಚುತ್ತಾರೆ. ಕೆಲವು ಸಲ ಕುಟುಂಬಗಳಿಗೆ ಅಕ್ಕಿಯೊಂದೇ ಕೊಟ್ಟು ಕುಲದ ಯುವಕರೊಂದಿಗೆ ಸಾಂಬಾರು ಮಾಡಿಸಿ ಸಾಯಂಕಾಲ ಕುಲಸ್ಥರೆಲ್ಲರಿಗೂ ಹಂಚುವರು. ಇದನ್ನು ಪೂರ್ವದಲ್ಲಿ 'ಕುಲಾಚಾರ' ಎಂದು ಕರೆಯುತ್ತಿದ್ದರು.

೭.೩.೧೪. ಬಳೆ ಹಾಕಿಸುವುದು : ಮದುವೆಯ ಸಂದರ್ಭದಲ್ಲಿ ಬಳೆ ಹಾಕಿಸುವ ಪದ್ಧತಿ ಇದೆ. ಕೆಲವು ಕಡೆ ಕಡ್ಡಾಯವಿಲ್ಲ. ವರನ ಕಡೆಯ ಒಬ್ಬರು ಅಥವಾ ಇಬ್ಬರು ಮುತ್ತೈದೆಯರು, ವಧುವಿನ ಕಡೆಯ ಒಬ್ಬರು ಅಥವಾ ಇಬ್ಬರು ಮುತ್ತೈದೆಯರು ಕೂಡಿ ವಧುವಿಗೆ ಬಳೆ ಹಾಕಿಸಲು ಪಕ್ಕದ ಬಳೆ ಅಂಗಡಿ ಇರುವ ಊರುಗಳಿಗೆ ಕಳುಹಿಸುತ್ತಾರೆ. ಹಾಗೆ ಹೋಗಬೇಕಾದರೆ ವಧುವಿಗೆ ಕಂಬಳಿ ಇಲ್ಲವೆ ರಗ್ಗು ಹೊದಿಸಿಕೊಂಡು ಹೋಗುತ್ತಾರೆ. ಬಳೆ ಹಾಕಿಸಿಕೊಂಡ ನಂತರ ಎಲ್ಲರೂ ಹೆಂಡ ಅಥವಾ ಸರಾಯಿ



[illegible]

[illegible]

ಅಂಗಡಿಗೆ ಹೋಗಿ ವಧುವಿಗೆ ಕುಡಿಸಿ ತಾವು ಕುಡಿದು ಬರುತ್ತಾರೆ. ಅಂದಿನ ಖರ್ಚೆಲ್ಲಾ ವರನ ತಂದೆ ಭರಿಸುತ್ತಾನೆ. ಹೀಗೆ ಅಡ್ಡಾಡಿ ಮದುವೆಯ ಮಂಟಪಕ್ಕೆ ಬರುವಷ್ಟರೊಳಗಾಗಿ ಸಾಯಂಕಾಲ ಏಳು, ಎಂಟು ಗಂಟೆಯಾಗಿರುತ್ತದೆ. ಅಷ್ಟರೊಳಗೆ ಕುಲಸ್ಥರೆಲ್ಲಾ ಉಂಡು, ಕುಡಿದು ಕುಳಿತುರುತ್ತಾರೆ. ಅಲ್ಲಿಂದ ತಾಳಿಯ ಕಾರ್ಯಕ್ರಮ ಪ್ರಾರಂಭವಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಬಳೆಗಾರನನ್ನೇ ತಾವಿರುವಲ್ಲಿಗೆ ಕರೆಸಿಕೊಳ್ಳುವುದು ನಡೆಯುತ್ತವೆ.

೭.೩.೧೫. ತಾಳಿಯ ಕಾರ್ಯಕ್ರಮ : ಹೆಣ್ಣಿನ ಮನೆಯ ಮುಂದೆ ಹೆಣ್ಣಿಗೆ, ಗಂಡಿನ ಮನೆಯ ಮುಂದೆ ಗಂಡಿಗೆ ಪೂಜೆ ಸಲ್ಲಿಸಿದ ಒನಕೆಯನ್ನು ಬಿಡಾರದ ಮುಂದೆ ಇಟ್ಟು ಅದರ ಮೇಲೆ ಕೂಡಿಸಿ ಮೈಗೆ ಅರಿಷಿಣ, ಎಣ್ಣೆ ಕಲಿಸಿ ಮುತ್ತೈದೆಯರು ಮೈಗೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ತೊಟ್ಟುಕೊಳ್ಳಲು ಗಂಡಿಗೆ ಅಂಗಿದೋತರ ಕೊಡುತ್ತಾರೆ. ಹೆಣ್ಣಿಗೆ ಸೀರೆ ಕುಪ್ಪಸ ಕೊಡುತ್ತಾರೆ. ಅವು ಸಾಮಾನ್ಯವಾಗಿ ಊರಲ್ಲಿ ಭಿಕ್ಷೆ ಪಡೆದವುಗಳೆ ಆಗಿರುತ್ತವೆ. ಅವುಗಳಲ್ಲಿಯೇ ಕೆಲವು ಒಳ್ಳೆಯವು ಜರತಾರಿಯ ಬಟ್ಟೆಗಳು ಬಂದಿದ್ದರೆ ಅಂತಹವುಗಳನ್ನು ಬಚ್ಚಿಟ್ಟು ಇಂತಹ ಸಂದರ್ಭಗಳಲ್ಲಿ ಬಳಸುತ್ತಾರೆ. ಗಂಡಿನ ಕೈಯಲ್ಲಿ ಒಂದು ಕತ್ತಿ ಕೊಟ್ಟು ಅದಕ್ಕೆ ನಿಂಬೆಹಣ್ಣು ಸಿಕ್ಕಿಸಿರುತ್ತಾರೆ. ಇದು ಕೈಯಲ್ಲಿ ಇದ್ದರೆ ಭೂತ, ಪ್ರೇತ, ಪಿಶಾಚಿಗಳು ಹತ್ತಿರ ಸುಳಿಯುವುದಿಲ್ಲವೆಂದು ನಂಬಿದ್ದಾರೆ. ಅಲ್ಲದೆ ಪೂರ್ವದಲ್ಲಿ ಹೆಣ್ಣು ಮದುವೆಯಾಗಬೇಕೆಂದರೆ ವೈರಿಗಳನ್ನು ಗೆಲ್ಲಬೇಕಾಗಿದ್ದಿತು. ಅದರ ಪ್ರತೀಕವಾಗಿಯೂ ಸಹ ಹಿಡಿಯುವ ಸಾಧ್ಯತೆ ಇದೆ. ಇದನ್ನೇ ಸಮುದಾಯಗಳವರು ರೂಢಿಸಿಕೊಂಡು ಮುಂದುವರಿಸಿದ್ದಾರೆ.



ವಧುವರರಿಗೆ ಅರಿಷಿಣ ಹಚ್ಚಿ ನೀರು ಹಾಕುತ್ತಿರುವುದು

ಸಿಂಗರಿಸಿಕೊಂಡ ವಧುವರರನ್ನು ಬಚ್ಚಿಡುತ್ತಾರೆ. ಆಗ ಆರುತಿ, ಕಳಸಗಳೊಂದಿಗೆ ಸಂಗೀತ ವಾದ್ಯಗಳನ್ನು ಬಾರಿಸುತ್ತಾ ಹೋಗಿ ಹುಡುಗಿಯನ್ನು ಹುಡುಗಿ ಸೋದರ ಮಾವನಿಂದ ಹೊರಸಿಕೊಂಡು ಮದುವೆಯ ದಿಬ್ಬಣಕ್ಕೆ ಬರುವರು. ಅಷ್ಟರೊಳಗಾಗಿ ವಧುವಿನ ಮನೆಯ ಮುಂದೆ ಕಂಬಳಿ ಹಾಸಿ ಅದರ ಮೇಲೆ ಅಕ್ಕಿಯಿಂದ ರಂಗೋಲಿ ಹಾಕಿ (ಸೂರ್ಯ, ಚಂದ್ರ ರಾಮನ ತೊಟ್ಟಿಲು) ಸಜ್ಜುಗೊಳಿಸಿರುತ್ತಾರೆ. ಕೆಲವು ಕಡೆ ಈಚಲು ಚಾಪೆ ಹಾಸಿ ಅದರ ಮೇಲೆ ಅಕ್ಕಿಯಿಂದ ರಂಗೋಲಿ ಹಾಕುವ ಪದ್ಧತಿಯೂ ಇದೆ. ವರನಿಗೆ ತಲೆಯ ಮೇಲೆ ರುಮಾಲು ಸುತ್ತಿರುತ್ತಾರೆ. ಅಂಗಿ, ದೋತರ, ಅಂಗಿಯ ಮೇಲೊಂದು ಕೋಟು ಧರಿಸಿರುತ್ತಾನೆ. ಮಧುವಣಗಿತ್ತಿ ಸಾದಾ ಸೀರೆ, ಕುಪ್ಪಸ, ತೊಟ್ಟಿರುತ್ತಾಳೆ. ಹೀಗೆ ಅಲಂಕರಿಸಿಕೊಂಡು



ಸೋದರಮಾವ ವಧುವನ್ನು ಹಸೆಗೆ ಹೊತ್ತು ತರುತ್ತಿರುವುದು

ಬಚ್ಚಿಟ್ಟುಕೊಂಡವರನ್ನು ಅವರ ಸೋದರ ಮಾವಂದಿರು ದಿಬ್ಬಣಕ್ಕೆ ಹೊತ್ತುಕೊಂಡು ಬರುತ್ತಾರೆ. ವರನನ್ನು ಕರೆತಂದವರನ್ನು ಬಲಭಾಗದಿಂದ ಪ್ರದಕ್ಷಿಣೆ ಮಾಡಿ ಮದುವೆಯ ದಿಬ್ಬಣದ ಮೇಲೆ ಪೂರ್ವಕ್ಕೆ ಮುಖ ಮಾಡಿ ಕೂಡಿಸುವರು. ವಧುವನ್ನು ದಿಬ್ಬಣಕ್ಕೆ ಎಡಭಾಗದಿಂದ ಪ್ರದಕ್ಷಿಣೆ ಹಾಕಿ ದಿಬ್ಬಣದ ಮೇಲೆ ವರನಿಗೆ ಎದುರಾಗಿ ಕೂಡಿಸುವರು. ಅಷ್ಟರೊಳಗೆ ಗಂಡಿನವರು ತಾಳಿ, ಬೆಳ್ಳಿಯ ಕಡಗ, ಕಾಲುಂಗರ, ಕುಂಕುಮ ಮಿಶ್ರಣ ಮಾಡಿದ ಅಕ್ಷತೆ ತಂದು ಸಾಸೆಯ ಕಟ್ಟೆಯ ಮೇಲೆ ಇಟ್ಟಿರುತ್ತಾರೆ. ಇವರಲ್ಲಿ ಜೋಡಿ ತಾಳಿ ಕಟ್ಟುವ ಪದ್ಧತಿ ಇದೆ. ಒಂದು ತಾಳಿಯು ವರನ ಮನೆಯವರನ್ನು ಪ್ರತಿನಿಧಿಸಿದರೆ ಇನ್ನೊಂದು ವಧುವಿನ ಮನೆಯವರನ್ನು ಪ್ರತಿನಿಧಿಸುತ್ತದೆ. ಹೆಣ್ಣು, ಗಂಡನ್ನು ಕರೆತರುವಾಗ ಪರಸ್ಪರ ಎಲ್ಲರೂ ಬೂದಿ, ಕುಂಕುಮ, ಅರಿಷಿಣ ಎರಚಾಡುತ್ತಾ ಬರುವುದು ಇವರಲ್ಲಿ ರೂಢಿಯಲ್ಲಿರುವ ಒಂದು ವಿಶಿಷ್ಟ ಪದ್ಧತಿಯಾಗಿದೆ.

ಕುಲದ ಹಿರಿಯ ಪೌರೋಹಿತ್ಯ ವಹಿಸಿ ತಾರಾಬಲಂ, ಚಂದ್ರಾಬಲಂ, ದೀರ್ಘಮಾಯ ಎಂದು ಉಚ್ಚರಿಸುತ್ತಾ ಬ್ರಾಹ್ಮಣನಂತೆ ಹಣ್ಣು, ಕಾಯಿ, ಪತ್ರಿ, ಎಲೆ, ಅಡಿಕೆ ಎಲ್ಲಾ ಮುಟ್ಟಿ, ವರನ ಕಡೆಯವರು ಕುಂಕುಮ ಕಲಿಸಿದ ಅಕ್ಕಿಯನ್ನು ಎಲ್ಲರ ಕೈಯಲ್ಲಿ ಹಂಚುತ್ತಾರೆ. ಕೊಬ್ಬರಿ ಬಟ್ಟಲಲ್ಲಿ ಹಾಲು ಬೆಲ್ಲ ಹಾಕಿ ವಧುವವರಿಗೆ ಕುಡಿಸುತ್ತಾರೆ. ಆ ಹಾಲು ಕುಡಿಸಿದ ಕೊಬ್ಬರಿ ಬಟ್ಟಲನ್ನು ವಧುವಿನ ಸೋದರರು ತೆಗೆದುಕೊಳ್ಳುತ್ತಾರೆ. ನಂತರ ವಧುವಿನ ತಂದೆಯಿಂದ 'ಕನ್ಯಾಧಾನ ಮಾಡಿದೆ' ಅನ್ನಿಸುತ್ತಾರೆ. ವರನಿಂದ 'ಕನ್ಯಾಧಾನ ತೆಗೆದುಕೊಂಡೆ' ಅನ್ನಿಸುತ್ತಾರೆ.

'ಧರ್ಮೇಚ, ಅರ್ಥೇಚ, ಕಾಮೇಚ, ಮೋಕ್ಷೇಚ, ನಾತಿ ಚರಮಿ' ಎಂದು ಮಂತ್ರ ಓದುತ್ತಾ 'ನಾತಿ ಚರತವ್ಯಂ' ಎಂದು ವರನಿಂದ ಅನ್ನಿಸಿ ವಧುವಿನ ಕಾಲಿಗೆ ಕಾಲುಂಗರ ಇಡಿಸಿ, ಮಂಗಳ ಸೂತ್ರವನ್ನು ಕಟ್ಟಿಸುತ್ತಾನೆ. ವಧುವರರು ಪರಸ್ಪರ ಒಬ್ಬರಿಗೊಬ್ಬರು ಹೂ ಮಾಲೆ ಬದಲಿಸಿಕೊಂಡ ಮೇಲೆ ಎಲ್ಲರೂ ಅಕ್ಷತೆ



ಸೋದರಮಾವ ವರನನ್ನು ಹಸೆಗೆ ಹೊತ್ತು ತರುತ್ತಿರುವುದು





ತಾಳಿ ಕಟ್ಟಲು ಸಿದ್ಧಪಡಿಸಿರುವ ಹಸೆ

ಹಾಕುತ್ತಾರೆ. ವರನ ದೋತುರವನ್ನು ವಧುವಿನ ಸೀರೆಗೆ ಗಂಟು ಹಾಕುತ್ತಾರೆ. ಇದನ್ನು ಬ್ರಹ್ಮಗಂಟು ಎಂದು ಕರೆಯುತ್ತಾರೆ. ನಂತರ ಮದುವೆಗೆ ಬಂದವರೆಲ್ಲರೂ ಮುಯ್ಯಿ ಮಾಡುವರು.

ತಾಳಿ ಕಟ್ಟುವ ಕಾರ್ಯಕ್ರಮ ಮುಗಿದ ಮೇಲೆ ಮಧುಮಕ್ಕಳನ್ನು ಹೆಣ್ಣಿನ ಬಿಡಾರಕ್ಕೆ ಕರೆದುಕೊಂಡು ಹೋಗುತ್ತಾರೆ. ಬಿಡಾರದೊಳಗೆ ಕಾಲಿಡುವ ಮೊದಲು ದೃಷ್ಟಿ ತೆಗೆದು ಓಕುಳಿ ನೀರನ್ನು ಆ ಕಡೆ ಈ ಕಡೆ ಚೆಲ್ಲುತ್ತಾರೆ. ಮಧುಮಗ ಬಲಗಾಲು ಮುಂದಿಟ್ಟು, ಮಧುವಣಗಿತ್ತಿ ಎಡಗಾಲು ಮುಂದಿಟ್ಟು ಪ್ರವೇಶಿಸುತ್ತಾರೆ. ಒಳಗಡೆ ಉತ್ತರಕ್ಕೆ ಮುಖಮಾಡಿ ಕೂಡಿಸಿ ಅಕ್ಷತೆ ಹಾಕಿ ಆರತಿ ಮಾಡುವರು ತರುವಾಯ ಅಕ್ಕಿಯಲ್ಲಿ ಉಂಗುರ, ಮೂಗಿನ ಬಟ್ಟು, ಮುಚ್ಚಿಟ್ಟು ವಧು-ವರರಿಂದ ಹುಡುಕಿಸುವರು. ಗೊಂಬೆಯಿಂದ ಮಕ್ಕಳಾಟ ಆಡಿಸುವರು. ಮಗುವನ್ನು ಇವರ ಕೈಯಲ್ಲಿ ಕೊಟ್ಟು ಆಡಿಸುವರು. ಹೀಗೆ ಕೆಲವು ಕಾರ್ಯಕ್ರಮ ನಡೆಯುತ್ತವೆ. ಈ ಮಕ್ಕಳಾಟ ಆಡಿಸುವ ಪದ್ಧತಿ ಕೊರಚರಲ್ಲಿಯೂ ಕಂಡುಬರುತ್ತದೆ.

ಆಗಿನ ಊಟದ ಖರ್ಚನ್ನು ಹೆಣ್ಣಿನವರು ಭರಿಸುತ್ತಾರೆ. ಕೆಲವರು ಹುಗ್ಗಿ, ಅನ್ನ, ಸಾರು ಮಾಡಿಸುತ್ತಾರೆ. ಇತ್ತೀಚಿಗೆ ಲಾಡು, ಅನ್ನ, ಸಾರು ಸಿದ್ಧಪಡಿಸುವುದು ಕಂಡುಬರುತ್ತದೆ. ಜೊತೆಗೆ ಹೆಂಡ ಅಥವಾ ಸರಾಯಿ ಕಡ್ಡಾಯ

೭.೩.೧೬. ಎರಡನೆಯ ದಿನದ ಕಾರ್ಯಕ್ರಮ : ಎರಡನೆಯ ದಿನ ವಧುವನ್ನು ಗಂಡನ ಮನೆಗೆ ತುಂಬಿಸಿಕೊಳ್ಳುವ ಕಾರ್ಯಕ್ರಮವಿರುತ್ತದೆ. ಬೆಳಿಗ್ಗೆ ಎದ್ದು ಫಲಹಾರ ಮುಗಿಸಿದ, ಬಳಿಕ ಮಧುಮಗ ಮತ್ತು ಮಧುಮಗಳನ್ನು ಒನಕೆಯ ಮೇಲೆ ಕೂಡಿಸಿ ಅರಿಷಿಣ, ಎಣ್ಣೆ ಕಲಿಸಿ ಹಚ್ಚಿ ಮುತ್ತೈದೆಯರು ಸ್ನಾನ ಮಾಡಿಸುವರು. ಬಳಿಕ ಬಟ್ಟೆ ತೊಡಿಸಿ ಕರೆತಂದು ಚಾಪೆಯ ಮೇಲೆ ಕೂಡಿಸುತ್ತಾರೆ. ಹಣೆಗೆ ವಿಭೂತಿ, ಕುಂಕಮ ಹಚ್ಚಿ ಉಡಿಯಲ್ಲಿ ಐದು ಹಿಡಿ ಅಕ್ಕಿ, ಎರಡು ಎಲೆ, ಎರಡು ಅಡಿಕೆ, ಐದು ಉತ್ತುತ್ತಿ, ಒಂದು ಕೊಬ್ಬರಿ ಬಟ್ಟಲು, ಐದು ಅರಿಷಿಣದ ಕೊಂಬು, ಕಲ್ಲುಸಕ್ಕರೆಯನ್ನು ಉಡಿಯಲ್ಲಿ ತುಂಬುತ್ತಾರೆ. ಅನಂತರ ಕಳಸ, ಭಜನೆ, ಡೋಲಿನೊಂದಿಗೆ ಹಾಡು ಹಾಡುತ್ತಾ ಗಂಡಿನ ಬಿಡಾರಕ್ಕೆ ಕರೆದುಕೊಂಡು ಹೋಗುವರು. ಆ ಸಮಯದಲ್ಲಿ ಮಧುಮಕ್ಕಳ ಮೇಲೆ ಬಿಸಿಲು ಝಳ ಬೀಳಬಾರದೆಂದು ಒಂದು ವಸ್ತ್ರ ಅಥವಾ ಛತ್ರಿಯನ್ನು ಮೇಲೆ ಹಿಡಿದುಕೊಂಡು ಹೋಗುತ್ತಾರೆ.

೭.೩.೧೭.೧. ಕಲಿಕುಂಡ : ಮಧು ಮಕ್ಕಳು ಗಂಡಿನ ಬಿಡಾರಕ್ಕೆ ಬರುವಷ್ಟರೊಳಗಾಗಿ ಗಂಡಿನ ಬಿಡಾರದ

ಮುಂದೆ ಹಂದರದಲ್ಲಿ ಬಲ ಕಂಬದ ಹತ್ತಿರ ಸಗಣಿಯಿಂದ ಸಾರಿಸಿ ಅಲ್ಲಿ ಒಂದು ಗಡಿಗೆಯನ್ನು ಇಟ್ಟು ಅದರಲ್ಲಿ ಅಕ್ಕಿತೊಳೆದ ನೀರು, ಅನ್ನದ ಗಂಜಿ ಹಾಕಿರುತ್ತಾರೆ. ಪೂರ್ವದಲ್ಲಿ ಆ ಗಡಿಗೆಯಲ್ಲಿ ಈಚಲ ಹೆಂಡ ಹಾಕುತ್ತಿದ್ದರಂತೆ. ಈಗ ಹೆಂಡ ದೊರೆಯದೆ ಇರುವುದರಿಂದ ಈ ಸಂಪ್ರಾದಾಯದ ಬದಲಾಗಿ ಅಕ್ಕಿ ತೊಳೆದ ನೀರು ಅನ್ನದ ಗಂಜಿ ಹಾಕುತ್ತಾರೆ. ಹಾಗೆ ತುಂಬಿದ ಗಡಿಗೆಗೆ ವಿಭೂತಿ, ಕುಂಕುಮ ಹಚ್ಚಿ ಪೂಜೆ ಸಲ್ಲಿಸಿರುತ್ತಾರೆ. ಅದನ್ನು 'ಕಲಿಕುಂಡ' ಎಂದು ಕರೆಯುತ್ತಾರೆ.



ಕಲಿಕುಂಡದಲ್ಲಿ ಉಂಗುರ ತೆಗೆಯುತ್ತಿರುವುದು

ಅಲ್ಲಿಂದ ಮಧು ಮಕ್ಕಳು ಬಂದ ಮೇಲೆ ಅವರಿಗೆ ದೃಷ್ಟಿ ತೆಗೆಯುವರು. ವಧುಮಕ್ಕಳು ಕಲಿ ಕುಂಡದ ಹತ್ತಿರ ಹೋಗಿ ನಮಸ್ಕರಿಸುವರು. ಮುತ್ತೈದೆಯರು ಆ ಕುಂಡದಲ್ಲಿ ಬಂಗಾರ, ಬೆಳ್ಳಿ, ರಾಗಿಯ ಆಭರಣಗಳನ್ನು ಹಾಕಿ ವಧು ಮಕ್ಕಳಿಗೆ ಹುಡುಕಲು ಬಿಡುವರು. ಆಗ ವಧು ಮಕ್ಕಳು ಅದರಲ್ಲಿ ಕೈಹಾಕಿ ಹುಡುಕಿ ಕೈಯಲ್ಲಿ ಏನು ಸಿಗುತ್ತದೆಯೋ ಅದನ್ನು ಮೇಲೆತ್ತಿಕೊಂಡು ತೋರಿಸುವರು. ಇಬ್ಬರಿಗೂ ಬಂಗಾರದ ಆಭರಣ ಸಿಕ್ಕರೆ ಒಳ್ಳೆಯದು. ಗಂಡಿಗೆ ಬಂಗಾರದ್ದು, ಹೆಣ್ಣಿಗೆ ಬೆಳ್ಳಿಯದು ಸಿಕ್ಕರೆ ಒಳ್ಳೆಯದು. ಗಂಡಿಗೆ ಸಿಕ್ಕು ಹೆಣ್ಣಿಗೆ ಸಿಗದಿದ್ದರೂ ಒಳ್ಳೆಯದು ಆದರೆ ಹೆಣ್ಣಿಗೆ ಸಿಕ್ಕು ಗಂಡಿಗೆ ಸಿಗದಿದ್ದರೆ, ಇಬ್ಬರಿಗೂ ಸಿಗದಿದ್ದರೆ ಕೆಟ್ಟದ್ದು ಅಥವಾ ಅಪಶಕುನ ಎನ್ನುವ ಭಾವನೆ ಇವರಲ್ಲಿದೆ. ಇದೆಲ್ಲಾ ಮುಗಿದ ಮೇಲೆ ಬಿಡಾರ ಪ್ರವೇಶಿಸುವರು. ಗಂಡು ಎಡಗಾಲು ವಧು-ವರರು ಹೆಣ್ಣು ಬಲಗಾಲು ಮುಂದೆ ಇಟ್ಟು ಒಳಗೆ ಪ್ರವೇಶಿಸಬೇಕು. ಈ ಕಲಿಕುಂಡವನ್ನು ತಮ್ಮ ಕುಲದೇವತೆಯಾದ ಜಂಬಲಮ್ಮ ಎಂದು ಕರೆಯುತ್ತಾರೆ.

೭.೩.೧೬.೨. ಅನ್ನ ಪರೀಕ್ಷೆ: ತವರು ಮನೆಯಿಂದ ತಂದ ಉಡಿ ಅಕ್ಕಿಯನ್ನು ಸೇರಿಸಿ ಅನ್ನ ಮಾಡುತ್ತಾರೆ. ಅದರಲ್ಲಿ ಸಾಂಬಾರು, ಪಲ್ಯ, ಚಿತ್ರಾನ್ನ, ಬದನೆಕಾಯಿ ಪಲ್ಯ ಮಾಡಿ ಕಲಿಕುಂಡದ ಮುಂದೆ ಮೂರು ಎಡೆ ಹಾಕುವರು. ಒಂದು ವಧು-ವರರಿಗೆ, ಒಂದು



ಕಲಿಕುಂಡದ ಮುಂದೆ ಹಾಕಿರುವ ಮೂರು ಎಡೆ

[illegible]

[illegible]



[illegible]

ಮುತ್ತೈದೆಯರಿಗೆ, ಮೂರನೆಯದು ಮಕ್ಕಳಿಗೆ ಊಟ ಮಾಡಿಸುವರು. ವಧುಮಗಳು-ವಧುಮಗನಿಗೆ ಮಧುಮಗ-ಮಧುಮಗಳಿಗೆ ಊಟ ಮಾಡಿಸುವರು. ಇದನ್ನು 'ಅನ್ನ ಪರೀಕ್ಷೆ' ಎಂದು ಕರೆಯುವರು. ಕೆಲವರು 'ಉಡಿ ಹಕ್ಕಿಯ ಊಟ'ವೆಂತಲೂ ಕರೆಯುತ್ತಾರೆ.

ಈ ದಿನದ ಊಟದ ಖರ್ಚು ಗಂಡಿನ ತಂದೆಯದಾಗಿರುತ್ತದೆ. ಅಂದು ಬೀಗರ ಕಡೆಯವರು ಏನು ಕೇಳಿದರೂ ಕೊಡಬೇಕು. ಇಲ್ಲವಾದರೆ ಪಂಚಾಯಿತಿ ಸೇರಿಸಿ ತಪ್ಪಿನಲ್ಲಿಡುತ್ತಾರೆ. ಆದಕಾರಣ ತಮ್ಮ ತಮ್ಮಂದಿರನ್ನು, ಅಳಿಯರನ್ನು ಬೇಟೆಗೆ ಕಳುಹಿಸುತ್ತಾರೆ. ಮುಂಗಲಿ, ಉಡ, ಮೀನು, ಯಾವ ಪ್ರಾಣಿ ಸಿಕ್ಕರೂ ಅಡುಗೆ ಸಿದ್ಧಪಡಿಸಿ ಬೀಗರಿಗೆ ಊಟಮಾಡಿಸಿ ಮತ್ತು ಅವರಿಗೆ ಸಾಕಾಗುವಷ್ಟು ಕುಡಿಯಲು ಹೆಂಡ ಅಥವಾ ಸರಾಯಿ ಒದಗಿಸಿ, ಇದನ್ನು 'ಚುಟ್ಬಾಲ ಬಂತಿ' ಅಥವಾ 'ಬೀಗರ ಊಟ' ಎಂದು ಕರೆಯುತ್ತಾರೆ.

೭.೩.೧೭. ನಾಗೋಲಿ ಊಟ : ಮಧು ಮಕ್ಕಳು ಬೇಟೆ ಕೊಯ್ಯುವ ಕಾರ್ಯಕ್ರಮ. ಇದು ಮದುವೆಯ ಕೊನೆಯ ಕಾರ್ಯಕ್ರಮ. ಮದುವೆಗೆ ಬಂದವರೆಲ್ಲರೂ ಈ ಕಾರ್ಯಕ್ರಮವನ್ನು ನೋಡಿಯೇ ತಮ್ಮ ತಮ್ಮ ಊರುಗಳಿಗೆ ಹೋಗಬೇಕೆಂಬ ನಿಯಮವಿದೆ. ಮಧುಮಗ ಬೇಟೆ ಕೊಯ್ಯುವನು ಮಧುಮಗಳು ಬೇಟೆ ಕೊಯ್ಯಲು ಸಹಾಯ ಮಾಡುವಳು. ಹೀಗೆ ಒಂದು ಕುರಿಯನ್ನು ಕತ್ತರಿಸಿ ತುಂಡು ಮಾಡಿ ಕಾಲು, ತಲೆ ಸುಡುವವರೆಗೆ ಮಧುಮಕ್ಕಳಿಬ್ಬರೇ ಮಾಡುವರು. ನೆರೆದ ಎಲ್ಲಾ ಬಂಧುಗಳು ಅದನ್ನು ನೋಡುತ್ತಾ ಇರುತ್ತಾರೆ. ಈ ಬೇಟೆಯ ಅಡುಗೆ ಸಿದ್ಧಗೊಳಿಸಿ ಬೀಗರಿಗೆ ಮತ್ತು ಕುಲಸ್ಥರಿಗೆಲ್ಲಾ ಊಟ ಹಾಕಿಸುತ್ತಾರೆ. ಚೆನ್ನಾಗಿ ಹೆಂಡ ಸಾರಾಯಿ ಕುಡಿಸಿ ತಲೆಭಾರ ಇಳಿಸುತ್ತಾರೆ. ಇದನ್ನು 'ನಾಗೋಲಿ ಊಟ' ಎಂದು ಕರೆಯುತ್ತಾರೆ. ಇಂದಿನ ಊಟದ ವ್ಯವಸ್ಥೆಯಲ್ಲಿ ಮೂರನೆ ಎರಡು ಭಾಗದ ವೆಚ್ಚವನ್ನು ಗಂಡಿನ ಕಡೆಯರು ಹಾಗೂ ಮೂರನೆಯ ಒಂದು ಭಾಗವನ್ನು ಹೆಣ್ಣಿನ ಕಡೆಯವರು ಭರಿಸುತ್ತಾರೆ. ಇದು ತಲ ತಲಾಂತರದಿಂದ ನಡೆದು ಬಂದ ರೂಢಿಯಾಗಿದೆ.



ಕೊನೆಯ ಬೇಟೆಯ ದಿನ ವಧುವರರು ಬೇಟೆ ಸುಡುತ್ತಿರುವುದು

೭.೩.೧೭.೧. ಮೂರನೆಯ ದಿನದ ಕಾರ್ಯಕ್ರಮ :ಮೂರನೆಯ ದಿನದ ಕಾರ್ಯಕ್ರಮ ಏನೆಂದರೆ ಹಿಂದಿನ ದಿನ ಚೆನ್ನಾಗಿ ತಿಂದು, ಕುಡಿದು ತಲೆ ಹಿಡಿದಿರುತ್ತದೆ, ಆ ತಲೆಭಾರವನ್ನು ಇಳಿಸುವುದಾಗಿದೆ. ಜಂಬರದ ಕೊನೆಯ ದಿನ ಭಜನೆ ಹಾರ್ಮೋನಿಯಂ ಸಂಗೀತವಾದ್ಯಗಳೊಂದಿಗೆ ಹಾಡು ಹಾಡುತ್ತಾ

ಕಲಿಕಂಡದ ನೀರನ್ನು ಜಂಬೆ ಗಿಡಕ್ಕೆ ಹಾಕಿಬರುತ್ತಾರೆ. ಜಂಬೆ ಗಿಡ ಇಲ್ಲವೆಂದರೆ ಬೇವಿನ ಗಿಡಕ್ಕೆ ಹಾಕಿ ಬರುತ್ತಾರೆ. ನಂತರ ಹಂದರದ ತಳಿರನ್ನು ಕಿತ್ತು ಆ ಒಣ ಎಲೆಯನ್ನು ನದಿ ನೀರಿನಲ್ಲಿ ಬಿಟ್ಟು ಬರುವರು. ಹಾಡು ಹಾಡಿದ ಯುವಕರಿಗೆ, ಮುತ್ತೈದೆಯರಿಗೆ ತಮ್ಮ ಪ್ರೀತಿಗೆ ತಿಳಿದಷ್ಟು ಕಾಣಿಕೆ ಕೊಡುವರು ಇಷ್ಟೆ ಎಂದಿಲ್ಲ. ಮಾತು ಕತೆ ಮುಗಿಸಲು ಚಾಪೆ ಹಾಸಿದ್ದಕ್ಕೆ ಚಾಪೆ ಚಾಜ ಎಂದು ಐವತ್ತರಿಂದ ನೂರವರೆಗೆ ಹಣ ಕೊಡುವರು. ಇವರಿಗೆ ಕೊಟ್ಟ ಹಣದಲ್ಲಿ ಗಂಡಿನವರಿಗೆ ಮೂರು ಭಾಗ ಹೆಣ್ಣಿನವರಿಗೆ ಒಂದು ಭಾಗ ಹಂಚಿಕೊಳ್ಳುತ್ತಾರೆ. ಇದು ಹಿಂದಿನಿಂದಲೂ ನಡೆದು ಬಂದ ಪದ್ಧತಿಯಾಗಿದೆ.

೭.೩.೧೮. ಸೋಬಾನ : ಇವರಲ್ಲಿ ಬಾಲ್ಯವಿವಾಹ ಹೆಚ್ಚು ರೂಢಿಯಲ್ಲಿ ಇರುವುದರಿಂದ ಸಾಮಾನ್ಯವಾಗಿ ಮದುವೆಯಾದ ಮೇಲೆಯೇ ಹೆಚ್ಚು ಹುಡುಗಿಯರು ಋತುಮತಿಯಾಗುವುದು, ಋತುಮತಿಯಾದ ತಕ್ಷಣ ಗಂಡಿನ ಮನೆಯವರಿಗೆ ಹೇಳಿ ಕಳುಹಿಸುತ್ತಾರೆ. ಇಲ್ಲವೆ ಹುಡುಗಿಯ ತಂದೆಯೇ ಗಂಡಿನ ಮನೆಗೆ ಬಂದು ನನ್ನ ಮಗಳು ಬಟ್ಟೆ ಉಡುವ ಹಾಗೆ ಆಗಿದ್ದಾಳೆ. ತಿಂಡಿ ತಿನ್ನುವ ಹಾಗೆ ಆಗಿದ್ದಾಳೆ. ಅವಳನ್ನು ಉಡಿ ತುಂಬಿಕೊಳ್ಳಿರಿ ಎಂದು ಹೇಳುತ್ತಾನೆ. ಒಂದು ಪ್ರಸಕ್ತ ದಿನ ನೋಡಿಕೊಂಡು ಹುಡುಗನು, ಅವನ ತಂದೆತಾಯಿಗಳು ಹೋಗುತ್ತಾರೆ. ಅಂದಿನ ಸೋಬಾನ ಕಾರ್ಯಕ್ರಮಕ್ಕೆ ಪ್ರತ್ಯೇಕವಾದ ಬಿಡಾರವನ್ನು ಸೋದರಮಾವನಿಂದ ನಿರ್ಮಾಣ ಮಾಡಿಸುತ್ತಾರೆ. ರಾತ್ರಿ ಮಾಂಸದ ಊಟದ ವ್ಯವಸ್ಥೆ ಇರುತ್ತದೆ. ಊಟ ಮಾಡಿ ಸಾಕಷ್ಟು ಕುಡಿದು ಗಂಡು ಬಿಡಾರದೊಳಗೆ ಹೋಗುತ್ತಾನೆ. ಅಷ್ಟರಲ್ಲಿ ಬಿಡಾರದಲ್ಲಿ ಈಚಲು ಚಾಪೆ ಹಾಸಿರುತ್ತಾರೆ. ಹುಡುಗನು ಹೂವು, ಹಣ್ಣು, ಎಲೆ, ಅಡಿಕೆ ತಂದಿರುತ್ತಾನೆ. ಹುಡುಗಿಯನ್ನು ಅವರ ಅಜ್ಜಿ, ಅತ್ತೆ, ಅತ್ತಿಗೆಯರು ಬಂದು ಧೈರ್ಯ ಹೇಳಿ ಒಳಗಡೆ ಬಿಡುವರು. ಬಿಡಾರದಲ್ಲಿ ತುಳಸಿದಳ, ಗಗ್ಗರ ಮಟ್ಟ ಹಾಕಿ ಸುವಾಸನೆ ಬರುವಂತೆ ಮಾಡಿರುತ್ತಾರೆ. ಆ ಹುಡುಗಿ ಒಳಗಡೆ ಬಂದ ತಕ್ಷಣ ಹುಡುಗ ಮೊದಲು ಹುಡುಗಿಗೆ ಹೂ ಮುಡಿಸಿ, ಹಣ್ಣು ಕಾಯಿ ತಿನ್ನಿಸಿ ಸಲುಗೆ ಮಾಡಿಕೊಳ್ಳುತ್ತಾನೆ. ಮುಂಜಾನೆ ಹಾಸಿಗೆಯನ್ನು ಅತ್ತೆ ಇಲ್ಲವೆ ಹುಡುಗಿಯ ತಂಗಿ ಜಾಡಿಸಿ ಕಸ ಗುಡಿಸುತ್ತಾರೆ. ಬಿಡಾರ ಹಾಕಿದ ಸೋದರ ಮಾವನಿಗೆ ಮುಂಜಾನೆ ಹುಡುಗ ಹೆಂಡ ಸರಾಯಿ ಕುಡಿಸಿ ಮರ್ಯಾದೆ ಮಾಡುವನು.

೭.೩.೧೯. ಮ್ಯಾರ : ಮದುವೆಯಾದ ಮೇಲೆ ಚಾಪೆಯ ಮೇಲೆ ಮಾತಿನ ಪ್ರಕಾರ ಎಷ್ಟು ವರ್ಷ ಒಪ್ಪಿಕೊಂಡಿರುತ್ತಾನೆಯೋ ಆ ಒಪ್ಪಂದದಂತೆ ಅಷ್ಟು ದಿನ ಅಳಿಯನು ಮಾವನ ಆದೀನದಲ್ಲಿರಬೇಕು. ಹೀಗೆ ಮಾವನ ಹಿಂದೆ ತಿರುಗುವುದನ್ನು 'ಮ್ಯಾರ' ತಿರುಗುವುದು ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಅತ್ತೆಮಾವಂದಿರಿಗೆ ಚಾಕರಿ ಮಾಡಬೇಕು. ಅವರು ಅಡುಗೆ ಮಾಡಲು ಸೌದೆ ತರಬೇಕು. ಬೇಟೆಗೆ ಬೇಟೆಹೋಗಿ ತಂದುಕೊಡಬೇಕು. ಅಡವಿಯಲ್ಲಿ ಸಿಕ್ಕ ಹಣ್ಣುಕಾಯಿ, ಪಲ್ಯ ತಂದುಕೊಡಬೇಕು. ಹೊಸದಾಗಿ ಬಂದ ದವಸಧಾನ್ಯ ತಂದು ಕೊಡಬೇಕು. ಇದೇ ರೀತಿ ಮಾವನಿಗೆ ಸಹಾಯ ಮಾಡುತ್ತಾ ಸೇವೆ ಸಲ್ಲಿಸಬೇಕು. ಅವರುಗಳೂ ಅಳಿಯನನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಇವರು ಸರಿಯಾಗಿ ಊಟ, ತಿಂಡಿ ಕೊಡದೆ ತಂದೆ ಮಕ್ಕಳು ಸತಾಯಿಸಿದರೆ ಪಂಚಾಯಿತಿಗೆ ನ್ಯಾಯಕ್ಕೆ ಒತ್ತಾಯಿಸಬಹುದು.

೭.೩.೨೦. ಪೂಟ : ಮ್ಯಾರ ಸಮಯದಲ್ಲಿ ಹೆಂಡತಿ ಅತ್ತೆ ಮಾವ ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು ಹುಡುಗನ ತಂದೆತಾಯಿಗಳಿಗೆ ತಿಳಿದರೆ ಕುಲಪಂಚಾಯಿತಿಗೆ ದಾವೆ ಹೂಡುತ್ತಾರೆ. ಅದು ರುಜುವಾತಾದರೆ, ಕುಲದ ಹಿರಿಯರು ಅವರ ಹಿಂದೆ ಒಬ್ಬ ಕುಲದ ಹಿರಿಯನನ್ನು ಕಾವಲು ಕಳುಹಿಸುತ್ತಾರೆ. ಅದನ್ನು 'ಪೂಟ' ಎಂದು ಕರೆಯುತ್ತಾರೆ. ಈ ಪೂಟ ಏರ್ಪಟ್ಟ ಕುಟುಂಬ ಊರಾಡಲು ಯಾವ ಊರಿಗೆ ಹೋದರೆ ಅವರ ಹಿಂದೆ ಕುಲದ ಹಿರಿಯ ಉಭಯರ ಗುಣಗಳನ್ನು ಪರಿಶೀಲಿಸುತ್ತಾ ಅವರ ಹಿಂದೆಯೇ ಸಂಚರಿಸುತ್ತಾನೆ. ಮೂರು ನಾಲ್ಕು ತಿಂಗಳು ಅವರ ಹಿಂದೆಯೇ ತಿರುಗಿ ಯಾರದು ತಪ್ಪು ಯಾರದು ಒಪ್ಪು ಎಂದು ನಿರ್ಣಯಿಸಿ ಕುಲಪಂಚಾಯಿತಿಗೆ ತಿಳಿಸುತ್ತಾನೆ. ಸಾಮಾನ್ಯವಾಗಿ ಹೀಗೆ ಹಿಂದೆ ತಿರುಗುವಾಗ ಯಾರದು ತಪ್ಪು ಕಾಣುತ್ತದೆಯೇ ಅವರಿಗೆ ಬುದ್ಧಿ ಹೇಳಿ ತಿದ್ದಿ ಜೀವನ ಹೊಂದಿಕೊಳ್ಳುವಂತೆ ಮಾಡುತ್ತಾರೆ. ಅಂತಹ ಮಧ್ಯಸ್ಥನ ಸೇವೆ ಮತ್ತು ಊಟ, ತಿಂಡಿಯ ಖರ್ಚು ಇವರೇ ನೋಡಿಕೊಳ್ಳಬೇಕಾಗುತ್ತದೆ. ಈ ಕುಟುಂಬದ ನ್ಯಾಯ ಅಲ್ಲಿಗೂ ಬಗೆ ಹರಿಯದಿದ್ದರೆ, ವಿಚ್ಛೇದನ ಅನಿವಾರ್ಯವಾಗುತ್ತದೆ. ಇಲ್ಲವೇ ಅಳಿಯ, ಮಾವ ಎಲ್ಲರೂ ಚೆನ್ನಾಗಿದ್ದು, ಅಳಿಯ ಮಗಳನ್ನು ಚೆನ್ನಾಗಿ ನೋಡಿಕೊಳ್ಳಬಲ್ಲ ಎಂದು ಖಾತ್ರಿಯಾದರೆ ಮ್ಯಾರವನ್ನು ಅಲ್ಲಿಗೆ ಕಡಿತಗೊಳಿಸಿ ಸ್ವೇಚ್ಛೆಯಾಗಿ ಗಂಡ-ಹೆಂಡತಿಯನ್ನು ದೇಶಾಟನೆಗೆ ಕಳುಹಿಸುತ್ತಾರೆ.

೭.೩.೨೧. ವಿಚ್ಛೇದನ : "ವಿವಾಹ ವಿಚ್ಛೇದನ ಎರಡು ಕಾರಣಗಳಿಗೆ ಆಗಬಹುದು. ಒಂದು; ಗಂಡಿನಲ್ಲಿರುವ ಯಾವುದಾದರೂ ಅತಿರೇಕತೆಯ ಬಗೆಗೆ ಉಂಟಾದ ದೈಹಿಕ ಜಿಗುಪ್ಸೆ. ಎರಡು; ವೈವಾಹಿಕ ಸಂಬಂಧದಲ್ಲಿ ಬೇಸರ ಉಂಟಾದರೆ ದಂಪತಿಗಳು ಯಾವ ಒಂದು ಗಲಭೆ ಗಡಿಬಿಡಿ ಇಲ್ಲದೆ ಬೇರೆಯಾಗುತ್ತಾರೆ. ಇಬ್ಬರು ತಡ ಮಾಡದೆ ಪರಿತಪಿಸದೆ ಬೇರೆಯವರನ್ನು ಆರಿಸಿಕೊಳ್ಳುತ್ತಾರೆ."[೧೯] ಹೀಗೆ ಹಗಲುವೇಷಗಾರರು ಸಹ ಇಂತಹ ನ್ಯಾಯಗಳನ್ನು ಪಂಚಾಯಿತಿಯಲ್ಲಿ ಬಗೆಹರಿಸಿಕೊಂಡು ಮುಂದಿನ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ.

ಗಂಡನು ಹೆಂಡತಿಯನ್ನು ನಿರಾಕರಿಸಿದರೆ ಅದನ್ನು ಹೆಂಡತಿಯು ಕೂಡ ಒಪ್ಪಿಕೊಂಡರೆ ಹೆಂಡತಿ ಕಡೆಯವರಿಗೆ ಮದುವೆಯ ಖರ್ಚು ಕೊಡುವ ಅವಶ್ಯಕತೆ ಇಲ್ಲ. ಕುಲದ ಹಿರಿಯರ ಮುಂದೆ ನನಗೆ ಈ ಹೆಂಡತಿ ಬೇಡ ಇವಳನ್ನು ಬಿಟ್ಟು ಬಿಡುತ್ತೇನೆ ಎಂದು ಹೇಳಿ ಒಂದು ರೂಪಾಯಿ ನಾಲ್ಕಾಣೆ ನಾಣ್ಯವನ್ನು ಸೆರಗಿನಲ್ಲಿ ಕಟ್ಟಿದ್ದರೆ ವಿಚ್ಛೇದನ ಸಿಂಧುವಾದಂತೆ ಹೆಂಡತಿ ಇಲ್ಲವೇ ಅವಳ ತಂದೆತಾಯಿಗಳು ಈ ಸಂಬಂಧ ಇಷ್ಟವಿಲ್ಲವೆಂದು ಹೇಳಿದರೆ, ಗಂಡನ ಮದುವೆಯ ಖರ್ಚು ಹೆಂಡತಿ ಕಟ್ಟಿಕೊಡಬೇಕು. ಕುಲಪಂಚಾಯಿತಿಯ ದಂಡ ಹಿರಿಯರು ನಿರ್ಣಯಿಸಿದಂತೆ ಇಬ್ಬರೂ ಕೊಡಬೇಕು.

೭.೩.೨೨. ಮರು ಮದುವೆ (ವಿಧವಾ ವಿವಾಹ) :ಕುಲಪಂಚಾಯಿತಿಯಲ್ಲಿ ವಿಚ್ಛೇದನ ಸಿಂಧುವಾದವರು ಮರು ಮದುವೆ ಮಾಡಿಕೊಳ್ಳಬಹುದು. ಈ ಮದುವೆ ಒಂದೆ ದಿನದಲ್ಲಿ ನಡೆಯುವಂತಹದು. ಇಂತಹ ಮದುವೆ ಮಾಡಿಕೊಳ್ಳಲು ಮೊದಲು ಮದುವೆಯಾಗಿ ವಿಚ್ಛೇದನಗೊಂಡ ವರನಾಗಿರಬಹುದು. ವಿಚ್ಛೇದನಗೊಂಡ

ಹುಡುಗಿಯಾಗಿರಬಹುದು. ಇಲ್ಲವೆ ಹುಡುಗಿ ಕನ್ಯೆಯಾಗಿದ್ದು ಹುಡುಗ ವಿಚ್ಛೇದನ ಹೊಂದಿದವನು ಆಗಿರಬಹುದು. ಅಂತಹ ಹುಡುಗಿ ಇದ್ದ ಮನೆಯನ್ನು ತಿಳಿದುಕೊಂಡು ಮುಂಜಾನೆ ಕುಲದ ಹಿರಿಯರನ್ನು ಸೇರಿಸಿ ಹೆಣ್ಣಿನ ಮನೆಯ ಮುಂದೆ ಕುಳಿತು, ಹುಡುಗಿಯನ್ನು ತಮಗೆ ಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ನಿಶ್ಚಿತಾರ್ಥದಲ್ಲಿ ಹೇಳುವಂತೆ ಕುಲದ ಹಿರಿಯ ಇಬ್ಬರಿಗೆ ಬುದ್ಧಿಮಾತು ಹೇಳುತ್ತಾನೆ. ಒಳ್ಳೆಯ ದೃಷ್ಟಿ ಇಟ್ಟುಕೊಂಡು ಉಭಯರು ಅನ್ಯೋನ್ಯವಾಗಿ ಇರಬೇಕೆಂದು ಬುದ್ಧಿಮಾತು ಹೇಳಿದ ಮೇಲೆ ವರನ ತಂದೆ 'ಕೈಸಾಕ್ಷಿ' ಹಾಕುತ್ತಾನೆ. ಮೊದಲ ಮದುವೆಗೆ ಒಂಬತ್ತು ರೂಪಾಯಿ ತೆರ ಅಥವಾ ಓಲಿ ಇದ್ದರೆ ಮರು ಮದುವೆಗೆ ಅದರಲ್ಲಿ ಅರ್ಧ ನಾಲ್ಕುವರೆ ರೂಪಾಯಿ ವಧುವಿನ ತಂದೆತಾಯಿಗಳಿಗೆ ಓಲಿ ಕೊಡುತ್ತಾರೆ. ಮರು ಮದುವೆಗೆ ಕಳಸ ಹಿಡಿಯವಂತಿಲ್ಲ.

ಇಂತಹ ಮದುವೆಗೆ ಸಣ್ಣ ಮಕ್ಕಳನ್ನು ಸೇರಿಸುವುದಿಲ್ಲ. ಸಾಯಂಕಾಲ ಮದುವೆ ಕಾರ್ಯ ನೆರವೇರಿಸುತ್ತಾರೆ. ಒಂದು ಗೊತ್ತಾದ ದಿನದಂದು ಹೆಣ್ಣಿನ ಬಿಡಾರದ ಮುಂದೆ ಮರುದಮದುವೆ ಆಗುವ ಮದುವೆಯ ಹೆಣ್ಣಿಗೆ ಮತ್ತು ಗಂಡಿಗೆ ಸ್ನಾನಮಾಡಿಸಿ ಹಳೆಯ ಇಲ್ಲವೇ ಹೊಸ ಸೀರೆಯನ್ನು ಗಂಡಿನವರು ಕೊಡುತ್ತಾರೆ. ಗಂಡು ಸಹ ಬಟ್ಟೆಗಳನ್ನು ತೊಟ್ಟುಕೊಂಡು ತಲೆಗೆ ರುಮಾಲು ಸುತ್ತಿಕೊಂಡು, ಅಂಗಿಯ ಮೇಲೆ ಒಂದು ಹಳೆಯ ಕೋಟು ಧರಿಸುವನು. ಹೆಣ್ಣು-ಗಂಡು ಸಿದ್ಧವಾದ ಬಳಿಕ ಇಬ್ಬರನ್ನು ಹೆಣ್ಣಿನ ಮನೆಯ ಮುಂದೆ ಕರೆತಂದು, ಅಲ್ಲಿ ಒಂದು ದಿಬ್ಬಣ ಸಿದ್ಧಪಡಿಸಿರುತ್ತಾರೆ. ಕುಲದ ಹಿರಿಯ ಪೌರೋಹಿತ್ಯವನ್ನು ವಹಿಸುತ್ತಾನೆ. ಒಂದು ಗಡಿಗೆಯಲ್ಲೆ ನೀರು ಹಾಕಿ ಅದರಲ್ಲಿ ಬಂಗಾರದ ಮೂಗುತಿ ಹಾಕಿ ಆ ನೀರನ್ನು ಇಬ್ಬರಿಗೆ ಕುಡಿಸುತ್ತಾರೆ. ಕುಲದ ಹಿರಿಯ 'ತಾರಾಬಲ, ಚಂದ್ರಬಲ, ದೀರ್ಘಮಯಾ' ಎಂದು ಮಂತ್ರ ಹೇಳಿದ ಬಳಿಕ ಗಂಡು ತಾಳಿ ಕಟ್ಟುವನು. ನಂತರ ಪರಸ್ಪರ ಇಬ್ಬರು ಹೂವಿನಹಾರ ಬದಲಾಯಿಸಿಕೊಳ್ಳುತ್ತಾರೆ. ನೆರದಿರುವ ಬಂಧುಬಳಗದವರು ಅಕ್ಷತೆ ಹಾಕುತ್ತಾರೆ. ಇದನ್ನು 'ಮರುಮದುವೆ' ಅಥವಾ 'ಸೀರು ಹುಡಿಕೆ' ಎಂದು ಕರೆಯುತ್ತಾರೆ.

೭.೩.೨೩. ಬಹುಪತ್ನಿತ್ವ : ಬಹುಪತ್ನಿತ್ವವೂ ಈ ಸಮುದಾಯದಲ್ಲಿ ಸಾಮಾನ್ಯ. ಇಬ್ಬರು ಹೆಣ್ಣುಗಳನ್ನು ಮದುವೆಯಾದ ಪ್ರಸಂಗಗಳೂ ಇವೆ. ಮದುವೆ ಆಗುವವರು ಅವರ ತಂದೆ ತಾಯಿಗಳ ಒಪ್ಪಿಗೆಯನ್ನು ಪಡೆಯುತ್ತಾರೆ. ಬಹಪತ್ನಿತ್ವ ಸಾಮಾನ್ಯವಾಗಿ ಅಕ್ಕ-ತಂಗಿಯರನ್ನು ಮದುವೆ ಆಗಿರುವ ಸಂದರ್ಭಗಳೇ ಹೆಚ್ಚು. ಮೊದಲು ಒಬ್ಬಳನ್ನು ಮದುವೆ ಮಾಡಿಕೊಂಡಾಗ ಮಕ್ಕಳಾಗದಿದ್ದರೆ, ಗಂಡು ಮಕ್ಕಳಾಗದಿದ್ದರೆ, ರೋಗ ರುಜಿನಗಳಿಗೆ ಬಿದ್ದರೆ ಇಂತಹ ಮದುವೆಗಳನ್ನು ಮಾಡಿಕೊಳ್ಳುತ್ತಾರೆ.

೭.೪. ಸಾವು

'ಜಾತಿಸ್ಯಂ ಮರಣಂ ಧ್ರುವಂ' ನಿಸರ್ಗದಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ಹುಟ್ಟು ಎಷ್ಟು ಸಹಜವೋ ಸಾವು ಕೂಡ ಅಷ್ಟೇ ಸಹಜವಾದದ್ದು. ಇದು ಸೃಷ್ಟಿಯ ನಿಯಮ. ಹುಟ್ಟು ಕೆಲವೊಮ್ಮೆ ಬೇಕೆಂದರೆ ಬೇಕು. ಸಾವು ಮಾತ್ರ ಬೇಡವೆಂದರೂ ಬೇಕು. ಮಾನವನ ಜೀವಿತದ ಅವಧಿಯಲ್ಲಿ ಬೇರೆ

ಬೇರೆ ಸಂದರ್ಭದಲ್ಲಿ ಮಾಡುವ ವಿವಿಧ ಕ್ರಿಯಾಚರಣೆಗಳು ಎಷ್ಟು ಮುಖ್ಯವೋ, ಆತ ಸತ್ತ ನಂತರ ಮಾಡುವ ಕ್ರಿಯಾಚರಣೆಗಳೂ ಅಷ್ಟೇ ಮುಖ್ಯ ಎಂಬುದು ಎಲ್ಲಾ ಸಮುದಾಯದಲ್ಲಿರುವ ಒಂದು ನಂಬಿಕೆ. ಕಾರಣ ಪಂಚಭೂತಗಳಿಂದಾದ ದೇಹ ಪಂಚಭೂತಗಳಿಗೇ ಒಪ್ಪಿಸುವುದಲ್ಲದೆ, ದೇಹದಿಂದ ಹೊರಬಂದ ಆತ್ಮಕ್ಕೆ ಉತ್ತಮ ನೆಲೆಯನ್ನು ತೋರಿದಂತಾಗುತ್ತದೆಂಬ ವಿಶ್ವಾಸ. ಅದೊಂದು ನಿರಂತರವಾದ ಆಚರಣೆ. ಇದು ವ್ಯಕ್ತಿಯೊಂದಿಗಿನ ಜಗತ್ತಿನ ಸಂಬಂಧವನ್ನು ಕೊನೆಗೊಳಿಸುತ್ತದೆ.

ಎಲ್ಲಾ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಸ್ವರ್ಗ-ನರಕ ಮತ್ತು ಮರುಜನ್ಮವನ್ನು ನಂಬಿದವರಾಗಿದ್ದಾರೆ. ಅದಕ್ಕೆ ಹಗಲುವೇಷಗಾರರೂ ಹೊರತಲ್ಲ. ಪೂರ್ವಜರು ಮರುಜನ್ಮವನ್ನು ನಂಬಿದವರಾದ್ದರಿಂದ ಸತ್ತವರ ಶಾಂತಿಗಾಗಿ ವಿಧಿವತ್ತಾದ ನಿಯಮಗಳನ್ನು ಆಚರಿಸುತ್ತಾರೆ. ಅವನ ಆತ್ಮಕ್ಕೆ ಶಾಂತಿ ದೊರೆಯಬಹುದೆಂಬುದು, ಪವಿತ್ರ ಸ್ನಾನವು ಶಾರೀರಿಕ, ನೈತಿಕ, ಆಧ್ಯಾತ್ಮಿಕ ದೋಷಗಳನ್ನೆಲ್ಲಾ ಶುದ್ಧೀಕರಿಸಬಲ್ಲದೆಂದು ನಂಬುತ್ತಾರೆ. ಈಜಿಪ್ತಿಯನ್ನರಲ್ಲಿ ಯಾರಾದರೂ ಸತ್ತರೆ ಅವರು ಇಷ್ಟ ಪಡುವ ವಸ್ತುಗಳನ್ನೆಲ್ಲಾ ಕುಣಿಯಲ್ಲಿ ಹಾಕಿ 'ಮಮ್ಮಿ' ಎನ್ನುವ ಗೋರಿ ಕಟ್ಟುವ ಮೂಲಕ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಹಗಲುವೇಷಗಾರರು ಸಹ ಅದೇ ರೀತಿಯ ಭಾವನೆ ಹೊಂದಿದವರಾಗಿದ್ದಾರೆ. ತಮ್ಮದೆಯಾದ ಸಂಪ್ರದಾಯ ಶೈಲಿಯಲ್ಲಿ ಮಾನವ ಸಹಜವಾದ ಸಾವಿನ ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದಾರೆ.

ಈ ಜನ ಸಮುದಾಯದಲ್ಲಿನ ರೂಢಿಯೆಂದರೆ ವಯಸ್ಸಾದವರಾದರೆ ಅವರು ಸಾಯವುದಕ್ಕೆ ಕೆಲವು ದಿನಗಳು ಮೊದಲಿನಿಂದಲೂ ಅವರಿಗೆ ಇಷ್ಟವಾದಂತಹ ಆಹಾರ ಕೊಡುತ್ತಾರೆ. ಅವರು ಕೇಳುವುದೇ ಹೆಂಡ ಮತ್ತು ಬೇಟೆಯ ಪ್ರಾಣಿಗಳ ಮಾಂಸ. ಅವರು ಕೇಳಿದ್ದು ಕೊಡದೆ ಹೋದರೆ ತಪ್ಪದೆ ದೆವ್ವ ಆಗುತ್ತಾರೆಂದು ಇವರ ನಂಬಿಕೆ. ದೂರ ದೂರದಲ್ಲಿರುವ ಮಕ್ಕಳು, ಬಂಧುಗಳನ್ನು ತಕ್ಷಣ ಕರೆ ಕಳುಹಿಸುತ್ತಾರೆ. ಜೀವ ಹೋಗುವ ಸಮಯದಲ್ಲಿ 'ಜೀವಗಂಜಿ' ಹಾಕುತ್ತಾರೆ. ಒಬ್ಬೊಬ್ಬರೆ ಮುಂದೆ ಬಂದು ತಲೆಯನ್ನು ತೊಡೆಯ ಮೇಲಿರಿಸಿಕೊಂಡು ಇದು ಸಣ್ಣ ಮಗನದು; ಇದು ದೊಡ್ಡ ಮಗನದು; ಮಗಳದು; ಸೊಸೆಯದು ಎಂದು ಗಂಜಿ ಹಾಕುತ್ತಾರೆ.

ವ್ಯಕ್ತಿ ಸತ್ತನೆಂದು ಸುದ್ದಿ ತಿಳಿದ ತಕ್ಷಣ ಹೆಂಡತಿಯ ಎಡಗೈಯಿಂದ ಕೊಬ್ಬರಿ ಎಣ್ಣೆ ಹಚ್ಚಿಸಿ (ಮದುವೆಯಾಗದಿದ್ದರೆ ತಲೆಗೆ ಕೊಬ್ಬರಿ ಎಣ್ಣೆ ಯಾರು ಬೇಕಾದರೂ ಹಚ್ಚಬಹುದು) ಕಾಯಿಸಿದ ನೀರನ್ನು ಅವಳು ಮೊದಲು ಎಡಗೈಯಿಂದ ಹಾಕಿದ ನಂತರ ಮಗನಾಗಲಿ, ಹತ್ತಿರದ ಸಂಬಂಧದವರಾಗಲಿ ಮೈತೊಳೆದು ಮೊದಲು ಉಡುತ್ತಿದ್ದ ಹಳೆಯ ಮಡಿ ಬಟ್ಟೆಗಳನ್ನು ಉಡಿಸಿ ಬಿಡಾರದ ಮುಂಭಾಗದ ಕಂಬಕ್ಕೆ ಆನಿಸಿ ಪದ್ಮಾಸನದಲ್ಲಿ ಕೂರಿಸುವರು. ಧ್ಯಾನ ಮಗ್ನ ಬುದ್ಧನ ರೂಪದಲ್ಲಿ, ಕೈ ಮೊಳಕಾಲ ಮೇಲೆ ಚಾಚುವಂತೆ ಮಾಡಿ ಕೈಯಲ್ಲಿ ವಿಭೂತಿ ಉಂಡೆ ಇಡುವರು. ಬಾಯಿಯಲ್ಲಿ ರುದ್ರಾಕ್ಷಿ ಇಟ್ಟು ಕೈ, ತೋಳು ಮತ್ತು ಕಾಲಿಗೆ ವಿಭೂತಿ ಹಚ್ಚಿ ಹಣೆಗೆ ಕುಂಕುಮ ಹಚ್ಚುತ್ತಾರೆ. ಕೊರಳಲ್ಲಿ ರುದ್ರಾಕ್ಷಿ

ಸರ ಹಾಕುವರು. ಪಕ್ಕದಲ್ಲಿ ದ್ವೀಪ ಮುಡಿಸಿ ಊದುಬುತ್ತಿಯನ್ನು ಹಚ್ಚಿರುತ್ತಾರೆ.

ಈ ಸಮುದಾಯದಲ್ಲಿ ಯಾರೇ ಆಗಲಿ ಸಾವಿನ ಸುದ್ದಿ ತಿಳಿದ ತಕ್ಷಣ ವೇಷ ಹಾಕುವುದನ್ನು ನಿಲ್ಲಿಸಿ ಸತ್ತವರ ಬಿಡಾರದ ಮುಂದೆ ಸೇರುತ್ತಾರೆ. ತಮ್ಮ ಸಮುದಾಯದ ಸುತ್ತಲಿನ ಬಿಡಾರದವರು, ಮನೆಯಲ್ಲಿದ್ದ ಅನ್ನ ಚೆಲ್ಲಿ ಬೇಕು. ಮೊದಲು ಸತ್ತ ವ್ಯಕ್ತಿಯ ಸಂಬಂಧಿಗಳಿಗೆಲ್ಲಾ ಹೇಳಿಕಳುಹಿಸುವರು. ಸೇರಿದವರೆಲ್ಲರೂ ಮುಂದಿನ ಕಾರ್ಯದ ಬಗ್ಗೆ ಏರ್ಪಾಡು ಮಾಡುವರು. ಸತ್ತ ಸುದ್ದಿ ತಿಳಿಸಲು ಹರಿಜನ. ವಡ್ಡರಂತಹ ಕೆಳವರ್ಗದವರನ್ನು ಕಳಿಸುವ ಹಾಗಿಲ್ಲ. ಅಕಸ್ಮಾತ್ ಕಳುಹಿಸಿದರೆ ಶವಸಂಸ್ಕಾರಕ್ಕೆ ಬರಬೇಕಾದವರು ಬರುವುದಿಲ್ಲ. ಮತ್ತು ಕುಲಪಂಚಾಯತಿಗೆ ನ್ಯಾಯ ಹಾಕುವರು. ಆದ್ದರಿಂದ ತಮ್ಮ ಸಮುದಾಯದವರೇ ಕರೆಯಲು ಹೋಗುವುದು ರೂಢಿಯಲ್ಲಿದೆ.

ಸತ್ತ ವಿಷಯವನ್ನು ತಿಳಿಸಬೇಕಾದರೆ ಮುಖಾಮುಖಿಯಾಗಿ ಹೇಳುವ ಹಾಗಿಲ್ಲ. ಅವರನ್ನು ಬಿಡಾರದಿಂದ ಹೊರಕ್ಕೆ ಕರೆದು ಹೋಟೆಲ್ಲಿನಲ್ಲಿಯೋ, ಸರಾಯಿ ಅಂಗಡಿಯಲ್ಲಿಯೋ ಅಥವಾ ಸಂತೆ, ಜಾತ್ರೆಯಂತಹ ಜನ ಜಂಗುಳಿಯ ಪ್ರದೇಶದಲ್ಲಿ ತಿಳಿಸಬೇಕು. ಹೀಗೆ ತಿಳಿಸುವುದರಿಂದ ಅವರಿಗೆ ತುರ್ತು ದುಗುಡ ವಾಗುವುದಿಲ್ಲ. ಮತ್ತು ಜನರಿರುವ ಪ್ರದೇಶದಲ್ಲಿ ಸ್ವಲ್ಪ ಧೈರ್ಯ ಬರುತ್ತದೆ. ಎನ್ನುವ ಭಾವನೆ ಇದೆ. ವಿಷಯ ತಿಳಿಸಿದವರನಿಗೆ ಅವರು ಸಾರಾಯಿ ಹೆಂಡ ಕುಡಿಸಿ ಕಳುಹಿಸಬೇಕು.

ಶವಸಂಸ್ಕಾರಕ್ಕೆ ಬಂದವರೆಲ್ಲಾ ತಾವು ತಂದ ರುದ್ರಾಕ್ಷಿ, ಊದುಬತ್ತಿ, ಹೂವು, ಕಾಯಿ, ಮುಂದಿಡುವರು. ಹೂ ಕೊರಳಿಗೆ ಹಾಕಿ ಅಕ್ಕಿಕಾಳು ಹಾಕಿ ಕಳಸ ಬೆಳಗುವರು. ಮುಖ್ಯವಾದ ವ್ಯಕ್ತಿಗಳು ಬರುವುದು ಆಗದಿದ್ದರೆ ಶವವನ್ನು ರಾತ್ರಿ ಇಟ್ಟುಕೊಳ್ಳುತ್ತಾರೆ. ಹಾಗೇನಾದರೂ ಇದ್ದರೆ ರಾತ್ರಿಯೆಲ್ಲಾ ಭಕ್ತಿಗೀತೆಗಳನ್ನು ಹಾಡುತ್ತಾ ಭಜನೆ ಮಾಡುವರು.

ಹಗಲುವೇಷಗಾರರಲ್ಲಿ ಹೆಣವನ್ನು ಸುಡುವ ಪದ್ಧತಿಯಿಲ್ಲ ಹೂಳುವ ಪದ್ಧತಿ ರೂಢಿಯಲ್ಲಿದೆ. ಅಲೆಮಾರಿ ಬದುಕನ್ನು ಸಾಗಿಸುವ ಇವರ ವ್ಯಕ್ತಿ ಸತ್ತರೆ ಅದೇ ಊರಿನಲ್ಲಿ ಜಂಗಮರನ್ನು ಹೂಳುವ ಸ್ಮಶಾನದಲ್ಲಿಯೇ ಇವರು ಸಹ ಹೆಣ ಹೂಳುತ್ತಾರೆ. ಇವರಲ್ಲಿ ಶೈವರ ಆಚರಣೆ ಕಂಡುಬರುವುದರಿಂದ ಊರುಗಳಲ್ಲಿ ಶೈವರು ಹೂಳುವ ಜಾಗದಲ್ಲಿ ಅವಕಾಶ ನೀಡುತ್ತಾರೆ.

ಇವರು ಹೆಣ ಹೂಳಲು ಕುಣಿಯನ್ನು ತಾವೇ ತೆಗೆದುಕೊಳ್ಳುವುದೇ ಹೆಚ್ಚು. ಏಕೆಂದರೆ ಕೆಳ ಸಮುದಾಯದವರೊಂದಿಗೆ ಕುಣಿ ತೆಗೆಯಿಸಿದರೆ, ಕುಲಪಂಚಾಯಿತಿಗೆ ನ್ಯಾಯ ಹಾಕಿ ತಪ್ಪಿನಲ್ಲಿಡುವರು. ಕುಣಿಯನ್ನು ಚೌಕಾಕಾರವಾಗಿ ತೆಗೆಯುತ್ತಾರೆ. ಅಳತೆ ಇಷ್ಟೇ ಇರಬೇಕೆಂದಿಲ್ಲ. ಸತ್ತ ಮನುಷ್ಯರ ಅಳತೆಗೆ ತಕ್ಕಂತೆ ಇವರು ಹೆಣ ಕೂರಿಸಲು ಎಷ್ಟು ಜಾಗಬೇಕೋ ಹಾಗೇ ಅಂದಾಜಿನಲ್ಲಿ ತೆಗೆಯುತ್ತಾರೆ. ಕುಣಿಯಲ್ಲಿ ಹೆಣ ಕುಳಿತರೆ ತಲೆ ಎಲ್ಲಿ ಬರುತ್ತದೆಯೋ ಅದರ ಹಿಂದೆ ಒಂದು ತಲೆ ಕೂಡುವಷ್ಟು ಗೂಡು ಬಿಟ್ಟಿರುತ್ತಾರೆ.

ಇನ್ನೊಂದು ಕಡೆ ಹೆಣವನ್ನು ಹೊತ್ತುಕೊಂಡು ಹೋಗಲು ಒಂದು ಕೌದಿಗೋ ಅಥವಾ ಒಂದು ದೊಡ್ಡ ಗೋಣಿ ಚೀಲವನ್ನು ಬಿಚ್ಚಿ ಉದ್ದಕ್ಕೆ ಮಾಡಿರುತ್ತಾರೆ. ಅದಕ್ಕೆ ಹಿಂದಿನ ಅಂಚು ಮತ್ತು ಮುಂದಿನ ಅಂಚನ್ನು ಕಟ್ಟಿಗೆಗೆ ಒಲಿದಿರುತ್ತಾರೆ. ಹಿಂದೆ ಮುಂದೆ ನಾಲ್ಕು ದಿಕ್ಕಿಗೆ ನಾಲ್ಕು ಮೂಲೆಗೆ ಕಟ್ಟಿಗೆಗಳನ್ನು ಹಿಡಿದುಕೊಳ್ಳಲು ಹೊರಬಿಟ್ಟಿರುತ್ತಾರೆ.

ಬಂದುಗಳೆಲ್ಲಾ ಬಂದ ಮೇಲೆ ಶವವನ್ನು ಸ್ಮಶಾನಕ್ಕೆ ಒಯ್ಯುವ ಏರ್ಪಾಡು ಮಾಡುತ್ತಾರೆ. ಮೊದಲು ಕೌದಿಯ ಅಥವಾ ಗೋಣಿ ಚೀಲದಿಂದ ತಯಾರಿಸಿದ ಚಟ್ಟವನ್ನು ತಂದು ಅದರಲ್ಲಿ ಹೆಣವನ್ನು ಹಾಗೆಯೇ ಕೂಡಿಸಿ ನಾಲ್ಕು ಮೂಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಾರೆ. ಶವ ಯಾತ್ರೆಯಲ್ಲಿ ಹೆಂಡತಿ ಸತ್ತರೆ ಗಂಡ ಮುಂದೆ. ಗಂಡ ಸತ್ತರೆ ಆತನ ಹಿರಿಯ ಪುತ್ರ ಮುಂದೆ. ವಿಧವೆ ಸತ್ತರೆ ಆತನ ಸಣ್ಣ ಮಗ ಮುಂದೆ ನಡೆಯಬೇಕು. ಒಬ್ಬ ಕುಲಸ್ಥ ಶಂಖ ಜಂಗಮ ಜಾಗಟೆ ಬಾರಿಸುತ್ತಾ, ಗಂಟೆಯಿಂದ ಶಬ್ದಮಾಡುತ್ತಾ, ಶಂಖ ಊದುತ್ತಾ ಹರಹರಾ, ಶಿವಶಿವಾ! ಮಹದೇವ! ಅನ್ನುತ್ತಾ ಶವದ ಮುಂದೆ ಸಾಗುತ್ತಾನೆ. ಹಿಂದೆ ಸಂಸ್ಕಾರಕ್ಕೆ ಬರುವವರ ಜಾತ್ರೆ ಬರುತ್ತಿರುತ್ತದೆ. ಸ್ಮಶಾನ ಸಮೀಪಿಸುತ್ತಿದ್ದಂತೆಯೇ ಒಂದು ಸ್ಥಳದಲ್ಲಿ ಶವವನ್ನು ಇಳಿಸುತ್ತಾರೆ. ಇದನ್ನು 'ದಿಂಪುಡುಕಳ್ಳಂ' ಎಂದು ಕರೆಯುತ್ತಾರೆ. ಅಲ್ಲಿ ಹೆಂಡರು, ಮಕ್ಕಳು, ಬಂಧುಗಳು ಹೆಣದ ಬಾಯಿಯಲ್ಲಿ ನೀರು ಬಿಡುವರು. ಅಂತಿಮ ದರ್ಶನವೆಂದು ಮುಖ ನೋಡಲು ಮತ್ತು ಹಿಂದಿ ಬಿದ್ದಿರುವ ನಿಶಕ್ತರು. ಮುದಿಯರು ಎಲ್ಲರೂ ಬಂದು ಗುಂಪಿನಲ್ಲಿ ಸೇರಲಿ ಎಂದು ಇರಬಹುದು. ಎಲ್ಲಾರು ಬಂದು ಸೇರಿದ ಮೇಲೆ ಮತ್ತೆ ಹೆಣವನ್ನು ಹೊತ್ತುಕೊಂಡು ಮುಂದೆ ಸಾಗುವರು. ಸ್ಮಶಾನ ಬಂದ ಮೇಲೆ ದಾಯಾದಿಗಳು ಎಲ್ಲರೂ ಕುಣಿಯ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಮಾಡಿ, ಮೊದಲೇ ತಂದಿಟ್ಟುಕೊಂಡಿರುವ ಅವರೆ ಗಿಡದ ತಪಲ್ಲು, ಹೂವನ್ನು ಕುಣಿಯಲ್ಲಿ ಹಾಕಿ ನಂತರ ಉಪ್ಪು ಇಟ್ಟು ಶವದ ಮೇಲಿದ್ದ ಬಟ್ಟೆ, ಹೂವು, ತೆಗೆದು ಕುಣಿಯ ಹೊರಗಡೆ ಹಾಕುತ್ತಾರೆ. ಉತ್ತರಾಭಿಮುಖವಾಗಿ ಹೆಣವನ್ನು ಕುಣಿಯಲ್ಲಿ ಕೂಡಿಸಿ ಒಂದು ಹಿತ್ತಾಳೆ ಚೆಂಬಿನಲ್ಲಿ ತಂದ ನೀರಿನಿಂದ ವಿಭೂತಿ ಕಲಿಸಿ ದಾಯಾದಿಗಳು ಎಲ್ಲರೂ ಶವದ ಮೇಲೆ ಚಿಮುಕಿಸುವರು. ಎಲ್ಲರೂ ಅಂತಿಮ ದರ್ಶನ ಮಾಡಿಕೊಂಡ ಮೇಲೆ ಹಿರಿಯ ಮಗ ಮೊದಲು ಐದು ಹಿಡಿ ಮಣ್ಣು ಕೊಡುತ್ತಾನೆ. ನಂತರ ಬಂದವರೆಲ್ಲರೂ ಮಣ್ಣು ಹಾಕುವರು. ಊಳಿ ಆಯಾತಕಾರದಲ್ಲಿ ಮಣ್ಣಿನ ದಿಬ್ಬ ಮಾಡಿ ಅದರ ಮೇಲೆ ಒಂದು ಬಂಡೆ ಇಡುವರು. ತಮ್ಮ ಕುಲ ಗುರುವಾದ ಶಂಖ ಜಂಗಮ ಮಣ್ಣು ದಿಬ್ಬದ ಮೇಲೆ ನಿಂತುಕೊಂಡು ಜಾಗಟೆ ಬಾರಿಸುತ್ತಾ, ಶಂಖ ಊದುತ್ತಾ, ಹರ ಹರಾ! ಶಿವಶಿವಾ! ಮಹದೇವ! ಎಂದು ಹರಕೆ ಕೊಡುತ್ತಾನೆ. ಸತ್ತ ವ್ಯಕ್ತಿಯ ಹಿರಿಯ ಮಗ, ಆತನ ಕಾಲಿಗೆ ಬಿದ್ದು ಕಾಣಿಕೆ ಸಲ್ಲಿಸುವನು. ಆ ಜಂಗಮ ತಲೆಯ ಮೇಲೆ ಬಸ್ಮ ಹಾಕಿ ಹಣೆಗೆ ವಿಭೂತಿ ಹಚ್ಚುವನು. ನಂತರ ದಾಯಾದಿಗಳು, ಕುಲಬಾಂಧವರು ಕಾಲಿಗೆ ಬೀಳುವರು. ಎಲ್ಲರಿಗೂ ತಲೆಯಲ್ಲಿ ಬಸ್ಮ ಹಾಕಿ ಹಣೆಗೆ ವಿಭೂತಿ ಹಚ್ಚಿ, ಆಶೀರ್ವಾದಿಸುತ್ತಾನೆ.

ಎಲ್ಲರೂ ಆಶೀರ್ವಾದ ತೆಗೆದುಕೊಂಡ ಮೇಲೆ ಕುಲದ ಹಿರಿಯರು ಮತ್ತು ವಿಧವೆಯರು ಸತ್ತ ವ್ಯಕ್ತಿಯ ಹೆಂಡತಿಯ ತಾಳಿಯನ್ನು ಸಮಾದಿಗೆ ಮುಟ್ಟಿಸಿ ಕೇಳುವರು ಹಾಗೂ ಬಳೆ ಒಡೆಸುವರು. ಅವಳ ಮುಖ ಯಾರಿಗೂ ಕಾಣದಂತೆ ಸೆರಗಿನಿಂದ ಮುಚ್ಚಿಕೊಂಡು ಹಿಂದಿರುಗುವರು. ಸತ್ತವರು ಹೆಣ್ಣಾಗಿದ್ದರೆ ಗಂಡ ಉಡದಾರ ಹರಿದು ಹಾಕಬೇಕು. ಗಂಡಸಿಗೆ ಹರೆ ಇರುವಾಗಲೆ ಹೆಂಡತಿ ಸತ್ತರೆ ಸೆರಗಿನಲ್ಲಿ ಒಂದು ರೂಪಾಯಿ ನಾಲ್ಕಾಣಿ ಸೆರಗಿಗೆ ಕಟ್ಟುವರು. ಹಾಗೆ ಕಟ್ಟುವುದರಿಂದ ಇನ್ನೊಂದು ಮದುವೆ ಮಾಡಿಕೊಳ್ಳಬಹುದು. ಸ್ಮಶಾನದಿಂದ ಹಿಂದಿರುಗಿ ಬರುವಾಗ ಯಾರು ಹಿಂದಿರುಗಿ ನೋಡುವ ಹಾಗಿಲ್ಲ. ಬರುವಾಗ ದಾರಿಯಲ್ಲಿ ಎಲ್ಲರೂ ಕೆರೆ, ಬಾವಿಗಳಿಗೆ ಹೋಗಿ ಸ್ನಾನ ಮಾಡಿ, ಮತ್ತೆ ಮರಣಿಸಿದವರ ಮನೆಗೆ ಬರುತ್ತಾರೆ. ಎಲ್ಲರೂ ಸೇರಿ ಸಾರಾಯಿ / ಹೆಂಡದ ಅಂಗಡಿಗೆ ಹೋಗುತ್ತಾರೆ. ಅಲ್ಲಿ ಕುಲಾಚಾರ ನಡೆಯುತ್ತದೆ. ಸತ್ತ ವ್ಯಕ್ತಿಯ ಮನೆಯವರು ಮದುವೆಯಾದ ಪ್ರತಿ ಕುಟುಂಬಕ್ಕೂ ತಲಾ ಒಂದು ಸರಾಯಿ ಪಾಕೆಟ್ಟು ಕೊಡಬೇಕು. ಇದರ ಖರ್ಚು ಸತ್ತ ಮನೆಯವರದು. ಕುಲಸ್ಥ ಸತ್ತ ವ್ಯಕ್ತಿಯ ಹಿರಿಯ ಮಗನಿಗೆ ಸರಾಯಿ ಕುಡಿಸುತ್ತಾರೆ. ಇದನ್ನು 'ವಿಷದ ಬಾಯಿ ತೊಳೆಸುವುದು' ಎಂದು ಕರೆಯುತ್ತಾರೆ.

ಇದಾದ ಸ್ವಲ್ಪ ಸಮಯದ ನಂತರ ಮನೆಯವನು ಒಬ್ಬ ಮತ್ತು ಇಬ್ಬರು ಸಂಬಂಧಿಕರನ್ನು ಕರೆದುಕೊಂಡು ಹೆಣ ಊಳಿದ ಸ್ಥಳಕ್ಕೆ ಹೋಗಿ, ಮಣ್ಣು ಮಾಡಿದ ದಿಮ್ಮೆಯ ಮೇಲೆ ಹೆಂಡೆಯ ಕುರುಳಿನಿಂದಲೋ, ಕಸದಿಂದಲೋ ಬೆಂಕಿ ಹಚ್ಚಿ ಬಿಡಾರಕ್ಕೆ ಬರುತ್ತಾರೆ. ಹೀಗೆ ಬೆಂಕಿ ಹಾಕುವುದನ್ನು 'ಇಂಗಳ ಹಾಕುವುದು' ಎಂದು ಕರೆಯುತ್ತಾರೆ. ಈ ಸಂಪ್ರಾದಾಯ ಒಂದು ಕಾಲದಲ್ಲಿ ಅಗ್ನಿ ಸಂಸ್ಕಾರವೆಂದು ದಹನ ಕ್ರಿಯೆ ಇದ್ದುದರ ಪ್ರತೀಕ ಇರಬಹುದು. ಮತ್ತು ಇಂಗಳ ಹಾಕುವುದರಿಂದ ಸತ್ತು ಹೋದ ವ್ಯಕ್ತಿ ದೆವ್ವವಾಗಿ ಕಾಡುವುದಿಲ್ಲವೆಂದು ಇವರು ನಂಬಿದ್ದಾರೆ. ಶವಯಾತ್ರೆಗೆ ಬಂದ ಬಂಧು ಬಳಗದವರು ಸತ್ತ ಸಂಬಂಧಿಕರಿಗೆ ಧೈರ್ಯ ಹೇಳಿ ಹೋಗುತ್ತಾರೆ. ಹೆಣ ಊಳಿದ ದಿನ ಅಂದು ರಾತ್ರಿ ಹಸಿರು ಸೊಪ್ಪಿನಿಂದ ಅಡುಗೆ ತಯಾರಿಸಿ ಊಟ ಮಾಡಬೇಕು ಎನ್ನುವ ಪ್ರತೀತಿ ಇದೆ.

ದಿನಕರ್ಮ (ಮುರುಗೋಳು) : ಮೂರನೆಯ ದಿನಕರ್ಮ ಮಾಡುತ್ತಾರೆ. ಇದನ್ನು 'ಮುರುಗೋಳು' ಅಥವಾ 'ದಿನಕರ್ಮ' ಎಂದು ಕರೆಯುತ್ತಾರೆ. ಹಗಲುವೇಷಗಾರರು ಈ ಆಚರಣೆಯನ್ನು ಮಾಡುವುದರ ಮೂಲಕ ಶ್ರದ್ಧಾಕರ್ಮಗಳನ್ನು ಮುಗಿಸುತ್ತಾರೆ. ತರುವಾಯ ಯಾವ ರೀತಿಯ ಕ್ರಿಯಾಚರಣೆಗಳೂ ಇರುವುದಿಲ್ಲ.

ಈ ದಿನ ಬಂಧುಗಳು, ಕುಲಸ್ಥರು ಸೇರಿ ಬೇಟೆಗೆ ಹೋಗಿ ಮೀನು, ಏಡಿ, ಇಲಿ, ಉಡ, ಮುಂಗಲಿ ಮೊದಲಾದ ಪ್ರಾಣಿಗಳನ್ನು ಬೇಟೆಮಾಡಿ ತರುತ್ತಾರೆ. ಪುಂಡಿಪಲ್ಯ, ಗುನುಗು ಪಲ್ಯ, ಮೊದಲಾದ ಹಸಿರು ಪಲ್ಯ ಹರಿದು ತರುವರು. ಸತ್ತ ಜಾಗದಲ್ಲಿ ಸಂಬಂಧಿಕರಿಂದ, ಎಡಗೈಯಿಂದ ಕೋಳಿಯನ್ನು ನೆಲಕ್ಕೆ ಬಡಿಸಿ ಸಾಯಿಸುತ್ತಾರೆ. ಎಡಗೈಯಿಂದಲೇ ಪುಚ್ಚ ಕಿತ್ತಿ, ಕೊಯ್ಯುವನು, ಸಂಬಂಧಿಕರು ಮತ್ತು ಸತ್ತ ವ್ಯಕ್ತಿಯ ಹೆಂಡತಿ ಸೇರಿ ಹೊಸ ಕಲ್ಲುಗಳಿಂದ ಒಲೆ ಮಾಡಿ, ಹೊಸ ಗಡಿಗೆಯಲ್ಲಿ ಯಾರಿಗೂ ಕಾಣದಂತೆ ಅಡುಗೆ ತಯಾರಿಸುವರು. ಅವುಗಳನ್ನೆಲ್ಲಾ ಬಟ್ಟೆಯಲ್ಲಿ ಕಟ್ಟಿಕೊಂಡು, ಸತ್ತ ವ್ಯಕ್ತಿ ಮೊದಲು ಏನೇನು

ಇಷ್ಟ ಪಡುತ್ತಿದ್ದನೋ ಆ ಆಹಾರವೆಲ್ಲಾ ಇರಬೇಕು. ಬೀಡಿ ಸೇದುವ ಚಟವಿದ್ದರೆ ಬೀಡಿ ಪೆಟ್ಟಿಗೆ, ಸರಾಯಿ ಕುಡಿಯುವ ಚಟವಿದ್ದರೆ ಸಾರಾಯಿ ಪಾಕೆಟ್ಟು ಹೀಗೆ ಪ್ರತಿಯೊಂದನ್ನು ಒಂದು ಬಿಡದಂತೆ ಬಂಧುಗಳೆಲ್ಲರೂ ಒಂದೊಂದು ಹೊತ್ತು ಕೊಳ್ಳುವರು. ಸತ್ತವನ ಹೆಂಡತಿಯು ತಲೆಯ ಮೇಲೆ ನೀರು ಹೊತ್ತುಕೊಳ್ಳುವಳು. ಶಂಖ ಜಂಗಮ ಮುಂದೆ ಜಾಗಟೆ ಬಾರಿಸುತ್ತಾ, ಶಂಖ ಊದುತ್ತಾ ಎಲ್ಲವನ್ನು ಹೊತ್ತು ಸ್ಮಶಾನಕ್ಕೆ ಹೋಗುವರು. ಮೊದಲು ಎಲ್ಲಿ ಹೆಣ ಇಳಿಸಿದ್ದರೂ ಆ ಸ್ಥಳದಲ್ಲಿ ಸ್ವಲ್ಪ ಹೊತ್ತು ನಿಂತು, ಹಿಂದಿದ್ದವರೆಲ್ಲಾ ಗುಂಪಿನಲ್ಲಿ ಸೇರಿಕೊಂಡ ಮೇಲೆ ಮುಂದೆ ಸಾಗುವರು. ಕುಣಿಯ ಹತ್ತಿರ ಬಂದು ಎಲ್ಲರೂ ಮೂರು ಸಾರಿ ಸಮಾದಿಯ ಸುತ್ತ ಸುತ್ತುವರು. ಸಮಾದಿಯಲ್ಲಿ ತಲೆ ಇರುವ ಭಾಗದಲ್ಲಿ ಸ್ವಲ್ಪ ಕುಣಿ ತೆಗೆದು ಹೊಸ ಮುಚ್ಚಳ ಇಟ್ಟು ಅದರಲ್ಲಿ ತಂದ ಆಹಾರ ಪದಾರ್ಥವನ್ನೆಲ್ಲಾ ಎಡಗೈಯಿಂದ ನೀಡುವರು. ಮತ್ತೆ ಬೀಡಿ, ಸಿಗರೇಟು, ಕಡ್ಡಿ ಪಟ್ಟಿಗೆ, ಸರಾಯಿ ಪಾಕೆಟ್ಟು ಇಟ್ಟು ಊದುಬತ್ತಿ ಹಚ್ಚಿ ಪೂಜೆ ಸಲ್ಲಿಸಿ ಲೋಬಾನ ಹಾಕಿ ನಮಸ್ಕರಿಸಿ ಮನದಲ್ಲಿ ಬೇಡಿಕೊಳ್ಳುವರು. ನಂತರ ಎಲ್ಲರೂ ಸ್ವಲ್ಪ ದೂರ ಹೋಗಿ ಕುಳಿತುಕೊಳ್ಳುವರು.

ಸತ್ತು ಹೋದ ವ್ಯಕ್ತಿಯ ಆತ್ಮ ಪಕ್ಷಿ ರೂಪದಲ್ಲಿ ಬಂದು ತಿಂದು ಹೋಗುತ್ತದೆ ಎನ್ನುವ ವಿಶ್ವಾಸವೇ ಇದಕ್ಕೆ ಕಾರಣ. ಪಕ್ಷಿಗಳು ಬರದಿದ್ದರೆ ಸತ್ತ ಕುಟುಂಬದ ವ್ಯಕ್ತಿಗಳು ಬಂದು ಸಮಾದಿಯ ಪಕ್ಕ ಹೋಗಿ, ನಮಸ್ಕರಿಸುತ್ತಾ, ಹೀಗೆ ಬೇಡಿಕೊಳ್ಳುತ್ತಾರೆ. ಆ ಕಡೆ ಈ ಕಡೆ ಎಲ್ಲಿಗೆ ಹೋಗಲಾರದಂತೆ, ಯಾರ ಮನೆಯಲ್ಲಿ ಹೋಗದಂತೆ, ಕನಸಿನಲ್ಲಿ ನೆರಳಿನಲ್ಲಿ ಬಾರದಂತೆ ನೇರವಾಗಿ ಸ್ವರ್ಗವನ್ನು ಸೇರಿಕೋ. ನಮ್ಮನ್ನು ಬಾದಿಸಬೇಡ ಎಂದು ಕೈ ಮುಗಿಯುತ್ತಾರೆ. ದೆವ್ವವಾಗಿ ಯಾರನ್ನು ಬಾಧಿಸದೆ ಸ್ವರ್ಗಕ್ಕೆ ನೇರವಾಗಿ ಹೋಗಿ ದೇವರಾಗಬೇಕೆಂದು ಇವರ ನಂಬಿಕೆ. ಆಹಾರವನ್ನು ಯಾವ ಪಕ್ಷಿಗಳು ತಿನ್ನಲು ಬಾರದೆ ಇದ್ದರೆ, ಆಗಲೆ ಬಂದ ಕುಲಸ್ಥರಲ್ಲಿ ಗುಸು, ಗುಸು, ಮಾತುಗಳು ಪ್ರಾರಂಭವಾಗುತ್ತವೆ. ಸತ್ತ ವ್ಯಕ್ತಿ ಅಂತರ್ ಪಿಶಾಚಿಯಾಗಿದ್ದಾನೆಂತಲೂ, ಮೊದಲು ಹೊಟ್ಟೆ ತುಂಬ ಊಟ ಹಾಕುತ್ತಿದ್ದರೋ ಇಲ್ಲವೋ, ಅನ್ಯಾಯದವನು ಎಂತಲೂ, ತನ್ನ ಸಂಸಾರದ ಮೇಲೆ ಇನ್ನು ಮಮಕಾರ ಬಿಟ್ಟಿಲ್ಲವೆಂದೂ, ತಾನು ಬದುಕಿದ್ದಾಗಿನ ನೋವು ಇನ್ನು ಮರೆತಿಲ್ಲವೆಂದೂ ತಿಳಿಯುತ್ತಾರೆ. ಬದುಕಿದ್ದಾಗ ಮನಸ್ಸಿಗೆ ಶಾಂತಿ ಇಲ್ಲದಿದ್ದರೆ ದೆವ್ವ ಆಗುತ್ತಾನೆ ಎಂದು ಬಾವಿಸುವುದು ಇವರಲ್ಲಿ ಸರ್ವ ಸಾಧಾರಣವಾಗಿದೆ. ಹದ್ದು ಬಂದು ಆಹಾರ ಮುಟ್ಟಿದರೆ ಒಳ್ಳೆಯದೆಂದು, ಕಾಗೆಗಳು ಬಂದು ಆಹಾರ ತಿಂದರೆ ಒಳ್ಳೆಯದು ಆತ್ಮ ಸ್ವರ್ಗಕ್ಕೆ ನೇರವಾಗಿ ಹೋಗಿದೆ ಎಂದು ತಿಳಿಯುತ್ತಾರೆ.

ಯಾವುದೇ ಪಕ್ಷಿಯಾಗಲಿ ಬಂದು ಆಹಾರ ತಿಂದ ಮೇಲೆ ಆಹಾರ ಹಾಕಿದ ಕುಣಿಯ ಮೇಲೆ ಬಂಡೆ ಎಳೆದು ಮುಚ್ಚುವರು. ಗಂಡ ಸತ್ತರೆ ಹೆಂಡತಿ ಬಳೆ ಒಡೆದು, ಕುಂಕುಮ ತೆಗೆದು ವಿಧವೆಯಾಗಿ ಮಾಡುತ್ತಾರೆ. ವಿಧವೆಯರು ಅವಳಿಗೆ ಬಿಳಿಯ ಸೀರೆ ಉಡಿಸಿ ತಲೆ ತುಂಬ ಸೆರಗು ಹಾಕಿಸಿ ಮನೆಗೆ ಕರೆದುಕೊಂಡು ಹೋಗುತ್ತಾರೆ. ಮನೆಯ ಹೆಣ್ಣು ಮಗಳು ಎಲ್ಲರಿಗಿಂತಲೂ ಮೊದಲೇ ಬಂದು ಸಗಣಿ

ನೀರು ಹಾಕಿ, ಸಾರಿಸಿ ಬಿಡಾರವನ್ನು ಶುದ್ಧಗೊಳಿಸಿರುತ್ತಾಳೆ. ಅನ್ನ ಬೇಯಿಸಲು, ಅಂಬಲಿ ಕುದಿಸಲು ಒಲೆ ಹೊತ್ತಿಸುತ್ತಾಳೆ. ಒಂದು ಮೂಲೆಯಲ್ಲಿ ದೀಪವನ್ನು ಹಚ್ಚುತ್ತಾಳೆ. ದಾಯಾದಿಗಳು ಹಾಗೂ ಕುಲಸ್ಥರು ಎಲ್ಲರೂ ಸೇರಿ ಪಕ್ಕದ ಕೆರೆ ಅಥವಾ ಬಾವಿಗಳಲ್ಲಿ ಸ್ನಾನ ಮಾಡಿ ಬರುತ್ತಾರೆ. ಬಿಡಾರದ ಮೂಲೆಯಲ್ಲಿ ಹೊತ್ತಿಸಿರುವ ದೀಪವನ್ನು ನೋಡಿ ಕೈ ಮುಗಿಯುತ್ತಾರೆ. ದೀಪವು ಅಲ್ಲಾಡದಂತೆ ಉರಿಯುತ್ತಿದ್ದರೆ, ಮರಣಿಸಿದ ವ್ಯಕ್ತಿ ನೇರವಾಗಿ ಸ್ವರ್ಗಕ್ಕೆ ಹೋಗಿದ್ದಾನೆಂದು, ಆ ಕಡೆ ಈ ಕಡೆ ಅಲ್ಲಾಡುತ್ತಿದ್ದರೆ ದೆವ್ವವಾಗುತ್ತಾರೆಂದು ಇವರು ನಂಬಿರುತ್ತಾರೆ.

ಅದೇ ಸಮಯದಲ್ಲಿ ಭಾರ ಇಳಿಸುವ ಕಾರ್ಯಕ್ರಮ ನಡೆಯುತ್ತದೆ. ಶವವನ್ನು ಯಾರು ಯಾರು ಹೊತ್ತಿರುವರೋ ಅವರ ಹೆಗಲಿನ ಭಾರವನ್ನು ಆ ಮನೆಯವರು ಇಳಿಸುವರು. ಎಳ್ಳು, ಔಡಲ, ಕೊಬ್ಬರಿ ಎಣ್ಣೆ ಮೂರನ್ನು ಸೇರಿಸಿ ಅದರಲ್ಲಿ ಗರಕಿ ಹುಲ್ಲನ್ನು ಹದ್ದಿ ಆ ಹುಲ್ಲಿನಿಂದ ಭುಜದ ಮೇಲಿನಿಂದ ಕೆಳಗೆ ಎಣ್ಣೆಯನ್ನು ಹಚ್ಚುವರು. ಹೀಗೆ ಮೂರು ಸಲ ಹಚ್ಚುವರು, ಹೀಗೆ ಹಚ್ಚುವುದರಿಂದ ಅವರ ಭಾರ ಇಳಿಸಿದಂತಾಗುತ್ತದೆ, ಎಂದು ನಂಬುತ್ತಾರೆ. ಆ ಬಳಿಕ ಅವರು ಅಲ್ಲಿಯೇ ಸ್ನಾನ ಮಾಡುವರು.

೭.೪.೧. ಐದನೆಯ ದಿನದಕಾರ್ಯ (ದೇವತಾಕಾರ್ಯ) : ಐದನೆಯ ದಿನದ ಕಾರ್ಯಕ್ಕೆ ಸ್ಮಶಾನಕ್ಕೆ ಹೋಗುವುದಿಲ್ಲ. ಎಲ್ಲಾ ಕಾರ್ಯಗಳು ತಮ್ಮ ಬಿಡಾರದ ಹತ್ತಿರವೇ ನೆರವೇರಿಸುತ್ತಾರೆ. ಅಂದು ರಾತ್ರಿ ಸುಮಾರು ರಾತ್ರಿ ಒಂಬತ್ತರಿಂದ ಹತ್ತು ಗಂಟೆಯ ಒಳಗೆ ಮಾಡುತ್ತಾರೆ. ಸುಡುಗಾಡಿನ ದಾರಿಯ ಕಡೆ ದೀಪ ಆರದಂತೆ ಒಂದು ಗೂಡು ಕಟ್ಟಿ ಅದರಲ್ಲಿ ಎಣ್ಣೆ ಹಾಕಿ ದೀಪ ಹಚ್ಚಿ ಉರಿಸುತ್ತಾರೆ. ಒಂದು ಹೊಸ ಮರದಲ್ಲಿ ಒಂದು ಪಾವಿನಷ್ಟು ಅಕ್ಕಿ, ರಾಗಿ, ಗೋದಿ, ತೊಗರಿಬೇಳೆ, ಒಂದು ಕೆಂಪು ವಸ್ತ್ರ ಇಟ್ಟು ಪೂಜೆ ಸಲ್ಲಿಸುತ್ತಾರೆ. ನಂತರ ಆ ಮೊರವನ್ನು ಗಣಾಚಾರಿಗೆ ಕೊಟ್ಟು ತರುವಾಯ ಅವರ ಸಂಬಂಧಿಕರೆಲ್ಲರೂ ಗಣಾಚಾರಿಯು ಪಾದಗಳನ್ನು ಹಿಡಿದುಕೊಂಡು, ಸತ್ತ ವ್ಯಕ್ತಿಯ ಆತ್ಮವನ್ನು ದೇವಲೋಕಕ್ಕೆ ಕಳುಹಿಸಿ ಕೊಡುವಂತೆ ಕೇಳಿಕೊಳ್ಳುತ್ತಾರೆ. ಆ ಗಣಾಚಾರಿಯು ತನ್ನೊಂದಿಗೆ ಒಂದು ಗಂಟೆ ತಂದಿರುತ್ತಾನೆ. ಅದನ್ನು ಕೈಯಲ್ಲಿ ಹಿಡಿದುಕೊಂಡು ಅದರ ನಾಲಗೆ (ಲೋಲಕ)ಯನ್ನು ಸತ್ತ ವ್ಯಕ್ತಿಯ ಸಂಬಂಧಿಕರೆಲ್ಲರೂ ಹಿಡಿಯುವಂತೆ ಹೇಳುತ್ತಾನೆ. ಎಲ್ಲರೂ ಒಟ್ಟಿಗೆ ಹಿಡಿದಾಗ ನಿಮ್ಮಾತನನ್ನು ದೇವಲೋಕಕ್ಕೆ ಕಳುಹಿಸುತ್ತೇನೆ. ಎನ್ನುತ್ತಾ ಗಟ್ಟಿಯಾಗಿ ಹೋದ ಹೋದ ಎನ್ನುತ್ತಾ ಕತ್ತಲಿನ ಆಕಾಶದ ಕಡೆಗೆ ನೋಡುತ್ತಾನೆ. ಆಗ ಎಲ್ಲರೂ ಅವನು ನೋಡಿದ ಕಡೆಗೇ ನೋಡುತ್ತಾರೆ. ಆದಾದ ಮೇಲೆ ಶಂಖ ಜಂಗಮ ತನ್ನ ಗಂಟೆಯಲ್ಲಿ ಬೆಲ್ಲ, ವಿಭೂತಿ, ನೀರಿನಲ್ಲಿ ಮಿಶ್ರ ಮಾಡಿ ಎಲ್ಲರಿಗೂ ತೀರ್ಥದ ರೂಪದಲ್ಲಿ ಹಂಚುವನು.''[೨೦] ಅವರ ಬಿಡಾರಕ್ಕೂ ಸ್ವಲ್ಪ ಚಿಮುಕಿಸಿ ಸೂತಕ ಕಳೆಯುವನು. ಅಷ್ಟರಲ್ಲಿ ಅಡುಗೆ ಸಿದ್ಧವಾಗಿರುತ್ತದೆ. ಮೊದಲು ಶಂಖ ಜಂಗಮನಿಗೆ ಎರಡು ಎಡೆ ಹಾಕಿ ಉಣ ಬಡಿಸಿ ನಂತರ ಉಳಿದ ಕುಲಬಾಂಧವರಿಗೆ ಊಟ ಮಾಡಿಸುವರು. ಈ ಆಚರಣೆಗೆ ಶವಸಂಸ್ಕಾರಕ್ಕೆ ಹೋದವರೆಲ್ಲರೂ ಸೇರಿರುತ್ತಾರೆ. ಇದನ್ನು ದೇವತಾಕಾರ್ಯ ಎಂದು ಕರೆಯುತ್ತಾರೆ. ಅಂದು ಊಟಕ್ಕೆ ಸಸ್ಯಹಾರ ಮಾತ್ರ

ಮಾಡಿರುತ್ತಾರೆ. ಮಾಂಸಹಾರ ಇರುವುದಿಲ್ಲ.

೭.೪.೨. ವಯಸ್ಕ ಹೆಣ್ಣು ಗಂಡು ಸತ್ತಾಗ : ಮದುವೆಯಾಗದೆ ತಿಳುವಳಿಕೆಗೆ ಬಂದ ಹೆಣ್ಣಾಗಲಿ, ಗಂಡಾಗಲಿ ಸತ್ತರೆ ಮೇಲಿನ ಆಚರಣೆಗಳೆಲ್ಲವೂ ಮಾಡುತ್ತಾರೆ. ಆದರೆ ಕುಣಿಯಲ್ಲಿ ಹುಗಿಯುವಾಗ ಕುಳ್ಳಿರಿಸುವುದಿಲ್ಲ. ಅಡಿಮುಖಮಾಡಿ ಇಲ್ಲವೆ ಮಗ್ಗಲು ಮುಖಮಾಡಿ ಮಲಗಿಸಿ ಮಣ್ಣು ಮುಚ್ಚುವರು.

೭.೪.೩. ಶಿಶು ಸತ್ತರೆ : ಸಣ್ಣ ಶಿಶು ಸತ್ತರೆ ಅರಿವೆ ಹೊದಿಸಿಕೊಂಡು, ತೋಳ ತೆಕ್ಕೆಯಲ್ಲಿ ಅಥವಾ ಹೆಗಲ ಮೇಲೆ ಹಾಕಿಕೊಂಡು, ಸ್ಮಶಾನಕ್ಕೆ ಹೊಯ್ದು ಸಣ್ಣ ಕುಣಿ ತೋಡಿ ಮಲಗಿಸಿ ಮಣ್ಣುಮುಚ್ಚಿ ಬರುವರು. ಮೂರನೆಯ ದಿನ ಹಾಲು, ಹಣ್ಣು ಹೊಯ್ದು ಕುಣಿಯ ಮೇಲ್ಭಾಗದಲ್ಲಿ ಸ್ವಲ್ಪ ತಗ್ಗು ತೆಗೆದು ಅದರಲ್ಲಿ ಹಾಕಿ ಮೇಲೆ ಕಲ್ಲು ಮುಚ್ಚಿ ಬರುವರು.

೭.೪.೪. ಗರ್ಭಿಣಿ, ತೊನ್ನು ಹತ್ತಿದವರು ಸತ್ತರೆ : ಗರ್ಭಿಣಿ ಮತ್ತು ತೊನ್ನು ಹತ್ತಿದವರು ಸತ್ತರೆ ಮೇಲೆ ಹೇಳಿದ ಆಚರಣೆಗಳನ್ನೇ ಮಾಡುತ್ತಾರೆ. ಆದರೆ ಅವರನ್ನು ಉಳುವುದಿಲ್ಲ ಬೆಂಕಿಯಲ್ಲಿ ಸುಡುತ್ತಾರೆ.

ಹಗಲುವೇಷಗಾರರಲ್ಲಿ ರೂಢಿಯಲ್ಲಿರುವ ಶವ ಸಂಸ್ಕಾರದಲ್ಲಿ ಶೈವರಲ್ಲಿರುವ ಶವಸಂಸ್ಕಾರಕ್ಕೂ ಸಾಮ್ಯತೆಯನ್ನು ಕಾಣಬಹುದು. ಆದರೆ ಪೂಜೆ ಕ್ರಿಯೆಗಳಿಗೆ ಊರ ಜಂಗಮರ ಮತ್ತು ಬ್ರಾಹ್ಮಣರನ್ನು ಸೇರಿಸಿಕೊಳ್ಳುವುದಿಲ್ಲ. ತಮ್ಮಲ್ಲಿಯೇ ಜಂಗಮನನ್ನು ನಿಯಮಿಸಿಕೊಂಡು ಆ ಕೊರತೆಯನ್ನು ತುಂಬಿಕೊಳ್ಳುತ್ತಾರೆ. ಮತ್ತು ಊರ ಹೊರಗೆ ವಾಸಮಾಡುವುದರಿಂದ, ಅಲೆಮಾರಿಗಳಾಗಿರುವುದರಿಂದ ಇವರು ಊರಿನವರ ಸಹವಾಸ ಬೇಡವೆಂದು ತಮ್ಮ ಕಾರ್ಯವನ್ನು ತಾವೇ ಆಚರಿಸಿಕೊಳ್ಳುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಸ್ವಚ್ಛಂದ ಬದುಕನ್ನು ಬಾಳಿ ತಮ್ಮದೇ ಆದ ಭಿನ್ನ ಹಾಗೂ ಅನನ್ಯ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

ಈ ಕುರಿತು ನಿರ್ಮಲ್ ಕುಮಾರ್ ಬೋಸ್ ಅವರ ವಾಕ್ಯ ನೋಡೋಣ. "One might indeed say that tribes can be regarded of full absorbed in the Hindu fold in Brahmin priests perform Brahminical ceremonics for them during the three critical events of Birth, marriage and death. If the letter are still celeberated by tribal rituals. Then the Communities are still true to their own faith inspite of the fact that. In the outer fringes of their culture they participate in same of the ceremonics of their Hindu neigh bours"[೨೮] ವಿವರಣೆಯ ಪ್ರಕಾರ ಬುಡಕಟ್ಟಿನ ಜನ ಹುಟ್ಟು, ಮದುವೆ, ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣರ ಪೌರೋಹಿತ್ಯಕ್ಕೆ ಅವಕಾಶ ಕೊಡದೇ ತಾವೇ ನಡೆಸಿಕೊಂಡು ಹೋಗುತ್ತಾರೆ. ಎಲ್ಲಿಯವರೆಗೆ ಈ ಪರಿಸ್ಥಿತಿ ಉಳಿದಿರುವದೋ ಅಲ್ಲಿಯವರೆಗೆ ಬುಡಕಟ್ಟು ತನ್ನ ಮೊಲ ರೂಪದಲ್ಲಿ ಉಳಿದಿರುತ್ತದೆ. ಅದೇ ರೀತಿ ಈ ಹಗಲುವೇಷಗಾರರಲ್ಲಿಯೂ ಸಹ ಹುಟ್ಟು, ಮದುವೆ, ಸಾವಿನ ಸಂದರ್ಭಗಳಲ್ಲಿ ಬ್ರಾಹ್ಮಣರ ಪೌರೋಹಿತ್ಯಕ್ಕೆ ಅವಕಾಶ ಕೊಡುವುದಿಲ್ಲ. ಆದಕಾರಣ ಇವರಲ್ಲಿ ಮೂಲ ರೂಪದ ಬುಡಕಟ್ಟು ಸಂಸ್ಕೃತಿ ಉಳಿದಿದೆ ಎಂದು ಹೇಳಿದರೆ ತಪ್ಪಲ್ಲ.

೭.೫. ಹಚ್ಚೆ



ಹಚ್ಚೆಯ ಚಿತ್ರಗಳು

ದೇಹದ ಅಂದವನ್ನು ಹೆಚ್ಚಿಸಿಕೊಳ್ಳಲು ಆರಂಭವಾದ ಹಚ್ಚೆ, ಕಾಲಕ್ರಮೇಣ ಹಚ್ಚೆ ಹಾಕಿಸಿಕೊಳ್ಳುವುದು ಒಂದು ಸಂಪ್ರದಾಯವಾಗಿ ಪರಿಣಮಿಸಿದೆ. ಈ ಕಲೆ ಆದಿಮಾನವನಿಂದ ಇಂದಿನವರೆಗೂ ಹಂತ ಹಂತವಾಗಿ ಆಯಾ ಸಮುದಾಯಗಳು ಇಚ್ಛೆಗನುಗುಣವಾಗಿ ಉಳಿದು, ಬೆಳೆದುಕೊಂಡು ಬಂದಿದೆ. ನಮ್ಮ ಜನಪದರು ಹಚ್ಚೆ ಹಾಕಿಸಿಕೊಳ್ಳುವುದರಿಂದ ಸೌಂದರ್ಯ ಹೆಚ್ಚುತ್ತದೆಂದು ಮತ್ತು ಸತ್ತಾಗ ನಮ್ಮ ಜೊತೆಯಲ್ಲಿ ಬರುವ ಏಕೈಕ ಸಂಪತ್ತು ಎಂಬ ನಂಬಿಕೆಯುಳ್ಳವರಾಗಿದ್ದಾರೆ.

ಹಚ್ಚೆ ಹಾಕುವ ವಿಧಾನ ಒಂದೇ ಆದರೂ ಹಾಕಿಸಿಕೊಳ್ಳುವವರ ಚಿತ್ರ ವಿನ್ಯಾಸಗಳು ಮನೋಭಾವನೆ ಮಾತ್ರ ಬೇರೆ ಬೇರೆಯಾಗಿರುತ್ತವೆ. ಇದು ಅವರ ಧರ್ಮ ಮತ್ತು ಮನೋಭಾವನೆಯನ್ನು ಅವಲಂಬಿಸಿರುತ್ತವೆ. ಅಲ್ಲದೆ ಇದು ಹಿಂದೂ ಧರ್ಮದ ಸಂಕೇತ ಮತ್ತು ನಿದರ್ಶನವೆಂದು ಹೇಳಬಹುದು. ಹಗಲುವೇಷಗಾರರು ಸಹ ಹಚ್ಚೆಯ ಬಗ್ಗೆ ಇದೇ ಭಾವನೆಯನ್ನು ಹೊಂದಿದವರಾಗಿದ್ದಾರೆ. ಇವರು ಸಹ ಹಚ್ಚೆ ಎಂತಲೇ ಕರೆಯುತ್ತಾರೆ. ಆದರೆ ವಿವಿಧ ಸಮುದಾಯಗಳಲ್ಲಿ ಪ್ರದೇಶಕ್ಕೆ ಅನುಗುಣವಾಗಿ ಅಚ್ಚೆ, ಹಂಚೆ, ಅಂಚೆ, ಹಣಚೆ, ಕುಚ್ಚೆ, ಪಚ್ಚೆ ಎಂತಲೂ ಕರೆಯುವುದುಂಟು.

ತೆಲುಗು ಜಾನಪದ ಗೀತೆಯೊಂದರಲ್ಲಿ ಚತುರೆಯಾದ ಹುಡುಗಿಯೊಬ್ಬಳು ತನ್ನ ಪ್ರೇಮಿಯನ್ನು ಸೀತೆಯ ಹೆಜ್ಜೆಗಳನ್ನು, ರಾಮನ ಬಾಣಗಳನ್ನು ನಾಲ್ಕುವರೆ ಆಣೆಕಟ್ಟು ತೊಡೆಯ ಮೇಲೆ ಹಚ್ಚೆ ಹಾಕಿಸಿಕೊಳ್ಳುವಂತೆ ಕೇಳುತ್ತಾಳೆ. ಇದರಿಂದ ಹಚ್ಚೆ ಎಷ್ಟು ಮಹತ್ವ ಪಡೆದಿತ್ತೆಂದು ತಿಳಿದುಬರುತ್ತದೆ.

"ಈ ಕಸುಬನ್ನು ಕೊರವರು, ಗೊಂದಲಿಗರು ಕಿಳ್ಳೇಕ್ಯಾತರು, ವಡ್ಡರು, ಬೇಡರು, ಮುಂತಾದವರು ನಿರ್ವಹಿಸುವುದನ್ನು ಕಾಣಬಹುದು."[೨೨] ಮಸಿಯನ್ನು ಬರೆಯುವ ಇಂಕು, ಅರಿಷಿಣ, ಔಡಲ ಎಣ್ಣೆಯನ್ನು ಬೆರಸಿ ಕೆಲವರು ಹಳದಿ ಮಿಶ್ರಿತ ಹಸಿರು ಬಣ್ಣವನ್ನು ತಯಾರಿಸಿದರೆ ಇನ್ನು ಕೆಲವರು ಕಾಡಿಗೆ, ಚಿಮಣಿ ಎಣ್ಣೆಯ ದೀಪದಿಂದ ಸಂಗ್ರಹವಾದ ಕಪ್ಪುಕುಡಿ, ತೊಂಡಿ ತೊಪ್ಪಲು, ಕಾಡಿಗೆಗರುವಿನ ರಸದಲ್ಲಿ ಕಾಡಿಗೆ ಬೆರೆಸಿ ಮೂರು ದಿವಸ ಕುಂಡದಲ್ಲಿ ನೆನೆ ಸುಡುತ್ತಾರೆ. ಮೂರು ಸೂಜಿ, ಆರು ಸೂಜಿಗಳನ್ನು ಕೂಡಿಸಿ ದಾರದಿಂದ ಬಿಗಿಯಾಗಿ ಸುತ್ತಿ ಕಟ್ಟಿದ ಸೂಜಿಗಳನ್ನು ತೆಗೆದುಕೊಂಡು ಆ ಬಣ್ಣದಲ್ಲಿ ಅದ್ದಿ ಚುಚ್ಚುತ್ತಾ ವಿವಿಧ ವಿನ್ಯಾಸಗಳನ್ನು ತಯಾರಿಸುತ್ತಾರೆ. ಪೂರ್ವದಲ್ಲಿ ಹಚ್ಚೆ ಹಾಕಲು ಸೂಜಿ, ಹಕ್ಕಿಯಪುಕ್ಕ, ಕೋಳಿಯ ಕೊಕ್ಕು, ಮುಳ್ಳಂದಿಯ ಮುಳ್ಳು, ಐದಾರು ಸೂಜಿಯ ಕಟ್ಟು, ಡಬ್ಬಣದಂತಹ ಪರಿಕರ ಬಳಸುತ್ತಾರೆ.



[illegible]

‘ಹಚ್ಚೆ ಹಾಕಿಸಿಕೊಳ್ಳದ ಹೆಂಗಸರಿಲ್ಲ ಪಂಚೆಕಟ್ಟದ ಗಂಡಸರಿಲ್ಲ’ ಎಂಬ ನಾಣ್ಣುಡಿಯಂತೆ ಪ್ರತಿಯೊಂದು ಸಮುದಾಯದಲ್ಲೂ ಹಚ್ಚೆ ಹಾಕಿಸಿ ಕೊಳ್ಳುವುದು ಒಂದು ಸಾಂಪ್ರದಾಯವಾಗಿ ಉಳಿದುಕೊಂಡು ಬಂದಿದೆ. ಅದೇ ರೀತಿ ಹಗಲುವೇಷಗಾರರು ಹಚ್ಚೆ ಪ್ರಿಯರಾಗಿದ್ದು ಅವರು ಹಾಕಿಸಿಕೊಳ್ಳುತ್ತಿದ್ದ ಹಚ್ಚೆ ವಿನ್ಯಾಸಗಳನ್ನು ಕೆಳಗೆ ವಿವರಿಸಲಾಗಿದೆ. ಹಣೆಯ ಮೇಲೆ ಅರ್ಧಚಂದ್ರ ಕೆಲವರು ಬರಿ ಚುಕ್ಕೆ ಇಟ್ಟು ಕೊಳ್ಳುತ್ತಾರೆ. ಗಲ್ಲಕ್ಕೆ ಒಂದು ಚುಕ್ಕಿ, ಕೆನ್ನಗೆ ಒಂದು ಚುಕ್ಕಿ, ಕೆನ್ನಗೆ ಒಂದು ಚುಕ್ಕೆ ಕಣ್ಣು ಹುಬ್ಬುಗಳ ಎರಡೂ ಬದಿ ಅಂದರೆ ಬರಿಗಣ್ಣಿನ ಸ್ಥಾನದಲ್ಲಿ ಚುಕ್ಕಿಗಳು ಇಲ್ಲವೆ ಹಕ್ಕಿಗಳ ಕಾಲ ಬೆರಳಿನ ಗುರುತು ಹೊಂದಿದ ಚಿತ್ರಗಳಿರುತ್ತವೆ. ಮುಂಗೈ ಹೆಬ್ಬೆರಳ ಮೇಲೆ ಮೂರು ಒಲೆಯ ಗಂಡು ಹಾಕಿಸಿಕೊಳ್ಳುತ್ತಾರೆ. ಕೈ ಹೆಬ್ಬೆರಳಿನ ಭಾಗದಲ್ಲಿ ಚೇಳಿನ ಚಿತ್ರ ರಟ್ಟೆಯ ಭಾಗದಲ್ಲಿ ಸೀತೆಯ ಕಣ್ಣು, ಸೀತೆಯ ಸೆರಗು ಮುಂಗೈಯ ಮೇಲೆ ರಥ, ಕಮಲದ ಹೂ, ರಾಮನ ತೊಟ್ಟಿಲು ಹದ್ದು ಸರ್ಪವನ್ನು ಒಯ್ಯುವ ದೃಶ್ಯ, ನಾಗರಹಾವು, ಬಾಸಿಂಗ, ಸೂರ್ಯ, ಚಂದ್ರ, ಬಳ್ಳಿ, ಜೋಗಿ ಜಡೆ, ರಂಗೋಲಿ ಹಾಕಿಸಿಕೊಳ್ಳುತ್ತಾರೆ.

ಕೆಲವು ಗಂಡು ಮಕ್ಕಳೂ ಸಹ ಹಚ್ಚೆ ಹಾಕಿಸಿಕೊಂಡಿರುವುದು ಕಂಡುಬರುತ್ತದೆ. ಎದೆಯ ಭಾಗದಲ್ಲಿ, ರಟ್ಟೆಯ ಮೇಲೆ, ಮುಂಗೈಯ ಭಾಗದಲ್ಲಿ, ಬೆನ್ನು, ತೊಡೆ ಭಾಗಗಳಲ್ಲಿ ಹಾಕಿಸಿಕೊಂಡಿದ್ದಾರೆ. ಪ್ರಿಯರ ಹೆಸರು, ತ್ರಿಶೂಲ, ಖಡ್ಗ, ಸ್ವಸ್ತಿಕ್ ಗುರುತು, ಶಂಖ, ನಕ್ಷತ್ರ, ನವಿಲು, ಗಿಳಿ, ಗಧೆ, ಆಂಜನೆಯ ಇನ್ನು ಮುಂತಾದ ಚಿತ್ರಗಳು ಹಾಕಿಸಿಕೊಂಡಿರುವುದು ಕಂಡುಬರುತ್ತದೆ.

ಹಚ್ಚೆ ಬೊಟ್ಟು ದೇಹದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ ಆರೋಗ್ಯ ಕೂಡ ವೃದ್ಧಿಸುತ್ತದೆ ಎಂದು ಹೇಳುತ್ತಾರೆ. ಕಣ್ಣುನೋವು, ಕೀಲು ನೋವು, ಮೊಳಕಾಲು ನೋವು ಕಳೆಯುತ್ತದೆ, ಅಲ್ಲದೆ ಚೇಳಿನ ಚಿತ್ರ ಹಾಕಿಸಿ ಕೊಂಡವರಿಗೆ ಚೇಳು ಕಡಿಯುವುದಿಲ್ಲ. ಹಾವಿನ ಚಿತ್ರ ಹಾಕಿಸಿಕೊಳ್ಳುವುದರಿಂದ ಹಾವು ಕಡಿಯುವುದಿಲ್ಲವೆಂದು ನಂಬಿದ್ದಾರೆ. ಮತ್ತು ಹಚ್ಚೆ ಹಾಕಿಸಿಕೊಂಡ ಕೈಯಿಂದ ಅಡುಗೆ ಮಾಡಿದರೆ ಕೆಡುವುದಿಲ್ಲವೆಂದು ಹಾಗೂ ಹಳಸುವುದಿಲ್ಲವೆಂದು ತಿಳಿದಿದ್ದಾರೆ. ದೇವರ ಹೆಸರು, ಹಾಗೂ ದೇವರ ಚಿತ್ರ, ದೇವರ ಚಿನ್ಹೆ ಹಾಕಿಸಿಕೊಂಡರೆ ದೇವರು ತಮ್ಮನ್ನು ರಕ್ಷಿಸುತ್ತಾನೆಂದು ಭಾವಿಸಿದ್ದಾರೆ. ಅವಶ್ಯವಾಗಿ ಮದುವೆಯಾಗುವುದಕ್ಕಿಂತ ಮೊದಲು ತಪ್ಪದೇ ಸಮುದಾಯದ ಎಲ್ಲಾ ಹೆಂಗಸರು ಹಚ್ಚೆ ಹಾಕಿಸಿಕೊಳ್ಳುತ್ತಾರೆ.

ಈ ಹಚ್ಚೆಯನ್ನು ಸೋದರ ಮಾವ, ಸೋದರ ಅತ್ತೆ, ಅಜ್ಜ, ಅಜ್ಜಿ ಹಾಕಿಸುತ್ತಾರೆ. ಕೆಲವು ಸಲ ಗೆಳೆಯರು ಹಣ ಕೊಟ್ಟು ಹಾಕಿಸುತ್ತಾರೆ. ಇಂದಿಗೂ ಇವರಲ್ಲಿ ಒಂದು ಕಲೆಯಾಗಿ ಧಾರ್ಮಿಕ ಮನೋಭಾವನೆಯಾಗಿ, ನಾವು ಸತ್ತಾಗ ಹಚ್ಚೆಯೊಂದೆ ನಮ್ಮೊಂದಿಗೆ ಬರುವುದೆಂದು, ಹಚ್ಚೆ ಇಲ್ಲದಿದ್ದರೆ ದೇವರು ನಮ್ಮನ್ನು ಸ್ವರ್ಗಕ್ಕೆ ಕರೆದುಕೊಳ್ಳುವುದಿಲ್ಲ ಎನ್ನುವ ಮನೋಭಾವನೆ ಹೊಂದಿದವರಾಗಿದ್ದಾರೆ.

ಈ ಕಲೆ ನಮ್ಮ ಭಾರತದಲ್ಲಿಯಲ್ಲದೆ ಇನ್ನು ಹಲವಾರು ವಿದೇಶಗಳಲ್ಲಿಯೂ ಸಹ ಬೆಳೆದು ಬರುತ್ತಿರುವುದನ್ನು ಗುರುತಿಸಬಹುದು.

೭.೬. ದೇವರು ಧರ್ಮ

ಧರ್ಮ ಇದು ಎಲ್ಲರಿಗೂ ಕಂಡು ಕಂಡರಿಯದ ಭಾವನೆ. ಎಲ್ಲಾ ಬಗೆಯ ಸಮಾಜ ಜೀವನದ ಅಡಿಗಲ್ಲು. ಆದಿವಾಸಿ ಹಾಗೂ ಆಧುನಿಕ ಸಮಾಜಗಳಲ್ಲಿ ಅದರ ಆವಿಷ್ಕಾರ ವೈವಿಧ್ಯ ರೀತಿಯಲ್ಲಿ ಉಂಟಾಗಿದೆ. ಒಂದು ರೀತಿಯಲ್ಲಿ ಸಮಾಜದ ಅಸ್ತಿತ್ವ ಧರ್ಮದ ಮೇಲೆ ನಿಂತಿದೆ. ಇದರ ಪೋಷಣೆ ಮಾನವ ಸಮಾಜದಲ್ಲಿ ಶತ ಶತಮಾನಗಳಿಂದ ಮುಂದುವರಿಯುತ್ತಲೇ ಬಂದಿದೆ. ಧರ್ಮ ಎಲ್ಲೆಡೆಯಲ್ಲಿಯೂ ಸಮೂಹ ನಡವಳಿಕೆಗೆ ಸಂಬಂಧಪಟ್ಟಿದೆ. ನಂಬಿಕೆ ಇದರ ಅಡಿಪಾಯವಾಗಿದೆ.

ಧರ್ಮದ ವಿವೇಚನೆಯಲ್ಲಿ ಬರುವ ಇನ್ನೊಂದು ಮುಖ್ಯ ಅಂಶವೆಂದರೆ ಪ್ರಕೃತಿ ದೈವದ ಸಂಬಂಧ. ಹಗಲುವೇಷಗಾರರಲ್ಲಿ ಮನೆದೇವತೆ ಮತ್ತು ಕುಲದೇವತೆಯರು ಆದಿಶಕ್ತಿಯಾಗಿದ್ದಾಳೆ. ಪ್ರಾಚೀನ ಮಾನವ ಸಂತಾನದ ಸೃಷ್ಟಿಗೆ ಹೆಣ್ಣೆ ಕಾರಣಳೆಂದು ತಿಳಿದುಕೊಂಡುದರ ಪರಿಣಾಮ ತಾಯಿಯೇ ದೇವರೆಂಬ ಭಾವನೆ ಬಂದಿರುವ ಸಾಧ್ಯತೆ ಇದೆ. ಹೆಣ್ಣಿನ ಹೊಟ್ಟೆಯಲ್ಲಿ ಕೂಸು ಹೊರಬರುವುದನ್ನು, ಭೂಮಿಯ ಒಡಲಲ್ಲಿ ಮರ, ಗಿಡ, ಸಸಿ, ಪ್ರಕೃತಿಯಲ್ಲಿ ಪಶು, ಪಕ್ಷಿ, ಜಂತು ಇವುಗಳು ಹುಟ್ಟುವುದನ್ನು ನೋಡಿ ಪ್ರಕೃತಿಯಲ್ಲಿನ ಮರಗಿಡಗಳನ್ನು ಮಾತೃ ದೇವತೆಯ ಸ್ಥಾನಕ್ಕೆ ಏರಿಸಿ ಪೂಜಿಸ ತೊಡಗಿದಂತೆ ಭಾಸವಾಗುತ್ತದೆ.

ಇನ್ನೊಂದು ಅರ್ಥದಲ್ಲಿ ಇವರ ಕಲ್ಪನೆಯಂತೆ, ದೇವರು, ಅಲೌಕಿಕ, ಅಭೌತಿಕ, ಅತೀಂದ್ರಿಯ ವಸ್ತುವಾಗಲಿ, ಚೈತನ್ಯವಾಗಲಿ ಅಲ್ಲ. ತಮ್ಮ ಜೊತೆಗಿದ್ದು, ತಮಗೆ ಸಾಕಷ್ಟು ಉಪಕಾರ ಮಾಡಿದ ಹಿರಿಯರೇ ದೇವರು ಎಂದು ಈ ಸಮುದಾಯವು ಬಲವಾಗಿ ನಂಬಿದವರಾಗಿದ್ದಾರೆ. ಇದರ ಇರುವಿಕೆಯನ್ನು ಇವರಲ್ಲಿ ಯಾರೇ ಸಾಯಲಿ ಅವರಿಗೆ ಇಷ್ಟವಾದ ಆಹಾರವನ್ನು ನೀಡಿ ಅವರಿಗೆ ತೃಪ್ತಿ ಪಡಿಸಿ ದೇವರ ಹತ್ತಿರ ಹೋಗು ಎಂದು ಹೇಳುವುದು. ಇವರ ಆಚಾರದಲ್ಲಿ ಅದು ಅಮೂರ್ತ ಕಲ್ಪನೆಯಲ್ಲ. ಒಳಿತು ಕೆಡುಕುಗಳಿಗಿರುವ ಅಂತರ, ವ್ಯಕ್ತಿಯ ಸುತ್ತ ಬೇರೆ ಬೇರೆ ಕಲ್ಪನೆಗಳು, ಕಥೆಗಳು ಕವಲೊಡೆಯುತ್ತವೆ. ಪ್ರಪಂಚದ ಎಲ್ಲಾ ಮಾನವ ಸಮಾಜಗಳಲ್ಲೂ ಧರ್ಮ ನೀತಿಗಳಿಗಿರುವ ಸಂಬಂಧ ಇದೇ ರೀತಿಯದು. ಇನ್ನೊಂದು ಅರ್ಥದಲ್ಲಿ ಇದನ್ನು ಪ್ರೇತಾರಾಧನೆ ಎಂದು ಕೂಡ ಕರೆಯಬಹುದು.

ಈ ಎಲ್ಲಾ ಅಂಶಗಳನ್ನು ಅನುಕರಿಸಿ ಹಗಲುವೇಷಗಾರರಲ್ಲಿ ಕಂಡುಬರುವ ದೈವ ಆರಾಧನೆಯನ್ನು ಪ್ರಧಾನವಾಗಿ ದೇವತಾರಾಧನೆ ಮತ್ತು ಭೂತಾಲರಾದನೆ ಎಂದು

ಆರಾಧನೆಗಳು

ಅ. ದೇವತಾರಾಧನೆ

೧. ಮಾತೃ ದೇವತೆಗಳು
೨. ಕುಲ ದೇವತೆಗಳು
೩. ಶೈವ, ವೈಷ್ಣವ ದೇವತೆಗಳು
೪. ಮುಸ್ಲಿಂ ದೇವರ ಆಚರಣೆ

ಬ. ಪ್ರೇತಾರಾಧನೆ

೧. ಭೂತಾರಾಧನೆ
೨. ಶಕುನಗಳು

೬. ೧. ದೇವತಾರಾಧನೆ : ಈ ಸಮುದಾಯದ ಧಾರ್ಮಿಕ ಭಾವನೆಯಲ್ಲಿ 'ಕುಲದೈವ' (Totem)ದ ಪಾತ್ರ ಬಹುಮುಖ್ಯವಾಗಿದೆ. ಇದಕ್ಕೆ ಕಾರಣ ಈ ಜನರಲ್ಲಿ ಕಂಡುಬರುವ ಅಪಾರ ನಂಬಿಕೆ ಇವರಲ್ಲಿ ಇಂತಹ ನಂಬಿಕೆಯನ್ನು ಗುರುತಿಸಿ ಕುಲದೇವತೆಗಳನ್ನು ಮಾತೃದೇವತೆ, ಕುಲದೇವತೆ, ಶಿಷ್ಟದೇವತೆ, ಮುಸ್ಲಿಂ ದೇವರು ಎಂದು ವಿಭಾಗಿಸಬಹುದು.

೧.೧. ಮಾತೃ ದೇವತೆ : ಎಲ್ಲಾ ದೇವತೆಗಳಲ್ಲಿ ಮೊದಲನೆಯ ದೇವರು ತಾಯಿ ದೇವತೆ. ಆ ದೇವರನ್ನು ಆರಾಧಿಸುವುದೇ ಮಾತೃ ಆರಾಧನೆ. ಸ್ತ್ರೀ ಶಕ್ತಿ ಸ್ವರೂಪಿಣಿ ಎನ್ನುವ ಭಾವನೆ ಈ ಶಕ್ತಿ ಪೂಜೆಗೆ ಆಧಾರವಾಗಿದೆ. ಸ್ತ್ರೀ ಶಕ್ತಿ ಕಾಳಿ, ಚಂಡಿ ಚಾಮುಂಡಿ ಭೈರವಿ ಮೊದಲಾದ ಹೆಸರುಗಳಿಂದ ಆರಾಧಿಸುತ್ತಿದ್ದರು. ಕಾಲ ಕ್ರಮೇಣ ವಿವಿಧ ಹೆಸರುಗಳಿಂದ ಕರೆಯತೊಡಗಿದ್ದಾರೆ. ದೆವ್ವವನ್ನು ಓಡಿಸುವ ದೇವರು, ಸಂತಾನವನ್ನು ದಯಪಾಲಿಸುವ ದೇವತೆಗಳು, ರೋಗ ನಿವಾರಿಸುವ ದೇವತೆ ಎಂದು ಅನೇಕ ವಿಧವಾಗಿ ಆರಾಧಿಸುತ್ತಿದ್ದಾರೆ. ಮಾರೆಮ್ಮ, ಸುಂಕ್ಲಮ್ಮ, ಜಂಬಲಮ್ಮ, ಎಲ್ಲಮ್ಮ, ಪೋಷಮ್ಮ, ಮೈಸಮ್ಮ ಮುಂತಾದ ಹೆಸರುಗಳಲ್ಲಿ ದೇವತಾರಾಧನೆ ಮಾಡುವುದು ರೂಢಿಯಲ್ಲಿದೆ.

ಪೂರ್ವದಲ್ಲಿ ಗದ್ವಾಲದಲ್ಲಿ ಚಿನ್ನ ಬುಚ್ಚಮ್ಮ, ಪೆದ್ದ ಬುಚ್ಚಮ್ಮ ಎಂಬ ಹೆಸರಿನ ದೇವರ ಜಾತ್ರೆಯಲ್ಲಿ ಸಮುದಾಯದ ಜನರೆಲ್ಲ ಒಂದೆಡೆ ಸೇರಿ ಬೇಟೆಮಾಡಿ ಸಾಮೂಹಿಕ ಭೋಜನ ಏರ್ಪಡಿಸುತ್ತಿದ್ದರು. ಮದುವೆಗಳನ್ನು ವ್ಯವಸ್ಥೆಗೊಳಿಸುತ್ತಿದ್ದರು. ಸಾಲ ಕೊಡುವುದು ತೆಗೆದುಕೊಳ್ಳುವುದು, ಮದುವೆಗೆ ನಿಶ್ಚಯ, ಗುಂಪು ಕಟ್ಟುವುದು, ತೊರೆಯುವುದು ಎಲ್ಲ ರೀತಿಯ ಶುಭಕಾರ್ಯ ವ್ಯವಹಾರಕ್ಕೆ ಈ ಜಾತ್ರೆ ವೇದಿಕೆಯಾಗುತ್ತಿತ್ತು. ಕ್ರಮೇಣ ಈ ಸಮುದಾಯದವರು ಅನ್ಯ ಪ್ರದೇಶಗಳಿಗೆ ಚದುರಿದಂತೆ ತಮಗೆ ಸಮೀಪವಿರುವ ಹಲವಾರು ಕಟ್ಟೆಗಳನ್ನು ಸ್ಥಾಪಿಸಿಕೊಂಡು ವರ್ಷದಲ್ಲಿ ಒಮ್ಮೆ ಇಲ್ಲವೇ ಎರಡು ವರ್ಷಕ್ಕೆ ಒಮ್ಮೆ ವಿಶೇಷ ಸಂದರ್ಭಗಳಲ್ಲಿ ಸೇರಿ ತಮ್ಮ ಆಚರಣೆಗಳೆಲ್ಲವನ್ನು ನೆರವೇರಿಸುತ್ತಾರೆ. ಈಗ ಚದುರಿ ಆಚರಿಸುವ ಪ್ರದೇಶಗಳೆಂದರೆ ಆಂಧ್ರ ಪ್ರದೇಶದಲ್ಲಿ ಗದ್ವಾಲ, ಶ್ರೀ ರಂಗಾಪುರ, ಮೆಹಬೂಬ್‌ನಗರ, ಗುಂತಕಲ್ಲು ಮಸ್ತಾನಯ್ಯ, ಕಲ್ಲೂರು, ಚನ್ನಂದಾಡ ಮಾರೆಮ್ಮ, ಗೊಲ್ಕಂಡ, ಎಮ್ಮಿಗನೂರು, ಮಂತ್ರಾಲಯ, ಬಳ್ಳಾರಿ ಜಿಲ್ಲೆಯಲ್ಲಿ ಬೊಮ್ಮನಹಾಳು, ತಾವರಗೆರೆ, ಕುದುರೆಮೂತಿ, ಬಳ್ಳಾರಿಯ ನ್ಯಾಯಸ್ಥಾನದ ಕಟ್ಟೆಗಳನ್ನು ಮಾಡಿಕೊಂಡು ಅಲ್ಲಿ ತಮ್ಮ ದೇವತೆಗಳ ಆಚರಣೆಗಳನ್ನು ಆಚರಿಸುವುದು ಕಂಡುಬರುತ್ತಿದೆ.

೧.೨. ಜಂಬಲಮ್ಮ : ಈಕೆ ಭಂಡಾರ ಭರಣಿಯಲ್ಲಿರುತ್ತಾಳೆಂದು ನಂಬಿದ್ದಾರೆ. ಈಕೆಯ ಕೇಂದ್ರಸ್ಥಾನ ಎನಕಾಪಲ್ಲಿ, ಕರ್ನೂಲು ಜಿಲ್ಲೆ ಈ ಪ್ರದೇಶಕ್ಕೆ ವರ್ಷದಲ್ಲಿ ಒಮ್ಮೆ ಹೋಗಿ ಪೂಜೆ ಸಲ್ಲಿಸಿ ಭಂಡಾರ ಕೊಟ್ಟು ಬರುತ್ತಾರೆ.

ಜಂಬಲಮ್ಮ ಇವರಿಗೆ ಅತಿಪ್ರೀಯ ದೈವ, ಇವಳನ್ನು ಹೆಂಡ, ಸರಾಯಿಯ ರೂಪದಲ್ಲಿ ಕಾಣುತ್ತಾರೆ. ಮತ್ತು ಮದುವೆ ಮುಂತಾದ ಸಂದರ್ಭಗಳಲ್ಲಿ ಈಕೆಗೆ ವಿಶೇಷ ಪೂಜೆ ಸಲ್ಲುತ್ತದೆ.

ಮದುವೆಯ ಮುಂಚೆ ಒಂದು ಮಂಗಳವಾರ ಜಂಬೆಯ ಗಿಡಕ್ಕೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಈ ಪೂಜೆಯನ್ನು ಯಾರು ನೋಡುವ ಹಾಗಿಲ್ಲ. ರಾತ್ರಿ ಎಲ್ಲರೂ ಮಲಗಿರುವಾಗ ಅಥವಾ ಬೆಳಗಿನ ಜಾವ ಪೂಜೆ ಮಾಡುತ್ತಾರೆ. ಹಾವಿನ ಹುತ್ತದ ಮಣ್ಣನ್ನು ತಂದು ಒಂದು ಗೊಂಬೆಯನ್ನು ಮಾಡಿ, ಜಿಂಬೆಯ ಗಿಡದ ಮುಂದೆ ನಾಲ್ಕು ಕಟ್ಟಿಗೆ ಹೂತು ಅದಕ್ಕೆ ಮಾವಿನ ಎಲೆ, ಬಾಳೆಯೆಲೆಯ ತಳಿರು ಕಟ್ಟಿ ಕಟ್ಟಿಗೆಗಳಿಗೆ ಸುಣ್ಣ, ಕೆಮ್ಮಣ್ಣು ಹಚ್ಚಿ, ಹುತ್ತದ ಮಣ್ಣಿನ ಬೊಂಬೆಯನ್ನು ಜಂಬೆಯ ಗಿಡದ ಮುಂದೆ ಕಟ್ಟಿಗೆ ಹೂತು ಅಂದರ ಹಾಕಿದ ಜಾಗದಲ್ಲಿಟ್ಟು ಅದರ ಮುಂದೆ ಗಂಡ ದೀಪ ಮಾಡಿ ಅದರಲ್ಲಿ ತುಪ್ಪದ ಹಾಕಿ ದೀಪ ಹೊತ್ತಿಸುತ್ತಾರೆ. ಆ ಗೊಂಬೆಗೆ ಹರಿಷಿಣ, ಕುಂಕುಮ ಹಚ್ಚಿ, ಬೆತ್ತಲೆಯಲ್ಲಿ ಪೂಜೆ ಸಲ್ಲಿಸಿ, ಊದುಬತ್ತಿ ಹಚ್ಚಿ, ಕಾಯಿ ಒಡೆದು ನಂತರ ಅವರು ಶಕ್ತ್ಯಾನುಸಾರ ಎರಡು ಬೇಟೆ ತಂದು, ಆ ಗೊಂಬೆಯ ಮುಂದೆ ಬಲಿಕೊಡುತ್ತಾರೆ. ಬಳಿಕ ಒಂದು ಕಾಲನ್ನು ಕಡಿದು, ಅಡ್ಡಲಾಗಿ ಬಾಯಿಯಲ್ಲಿ ಸಿಕ್ಕಿಸಿ ಆ ಗೊಂಬೆಯ ಮುಂದಿಡುತ್ತಾರೆ. ಅದರ ಕೊಬ್ಬು ತೆಗೆದು ಗಂಡಾದೀಪದಲ್ಲಿ ಹಾಕಿ ಉರಿಸುತ್ತಾರೆ. ಆಮೇಲೆ ಅಡುಗೆ ಮಾಡಿ ತಮ್ಮ ಬಂಧು ಬಳಗದವರಿಗೆಲ್ಲ ಊಟ ಹಾಕಿಸುವರು. ಇದು ಜಂಬಲಮ್ಮಳ ಪೂಜೆ, ಬರಿಬತ್ತಲ ಜಂಬಲಮ್ಮ ಎಂದು ಕೂಡ ಕರೆಯುತ್ತಾರೆ.

೧.೩. **ಸುಂಕ್ಲಮ್ಮ** : ಸುಂಕ್ಲಮ್ಮ ಹಗಲುವೇಷದವರ ಮನೆ ದೇವತೆಯಾಗಿದ್ದಾಳೆ. ಅದೇ ಜಂಬೆ ಗಿಡದ ಕೆಳಗೆ ನಾಲ್ಕು ಕಟ್ಟಿಗೆ ಹೂತು ಅದಕ್ಕೆ ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಆ ಊಳಿದ ಕಟ್ಟಿಗೆಗಳಿಗೆ ಸುಣ್ಣ ಕೆಮ್ಮಣ್ಣು ಹಚ್ಚಿ ತೋರಣದ ಒಳಗೆ ಒಂದು ಹೊಸ ಮುಗಿಯಲ್ಲಿ ಬೆಲ್ಲದ ನೀರು ಹಾಕಿ ಮೇಲೆ ತುಂಬಿದ ಕಾಯಿಯನ್ನು ಅದರಲ್ಲಿ ಇಡುತ್ತಾರೆ. ಈ ಮೊದಲು ಅಂದರೆ ಪೂರ್ವದಲ್ಲಿ ಹಿಂದೆ 'ಮುಗಿ'ಯಲ್ಲಿ ಹೆಂಡವನ್ನು ತುಂಬಿಡುವುದು ರೂಢಿಯಲ್ಲಿತ್ತು. ಹೆಂಡ ಈಗ ದೊರಕದಿರುವ ಕಾರಣ ಬೆಲ್ಲದ ನೀರು ಹಾಕುತ್ತಿದ್ದಾರೆ. ಗೋಧಿ ಹಿಟ್ಟಿನಿಂದ ಗಂಡಾ ದೀಪಮಾಡಿ ಮೊದಲು ಅದರಲ್ಲಿ ತುಪ್ಪ ಹಾಕಿ ದೀಪ ಮುಡಿಸುತ್ತಾರೆ. ನಂತರ ಆ ಕುಂಡಕ್ಕೆ ವಿಭೂತಿ, ಕುಂಕುಮ, ಅರಿಷಿಣ ಹಚ್ಚಿ ಕಾಯಿಯ ಮೇಲೆ ಒಂದು ಕುಬಸದ ಕಂಕಣ ಹಾಕಿ, ತಲೆಯ ಮೇಲೊಂದು 'ಸೂಸುಗ' ಹಾಕಿ ಪೂಜೆ ಸಲ್ಲಿಸಿ ಊದುಬತ್ತಿ ಹಚ್ಚಿ, ಕಾಯಿ ಒಡೆದ ಬಳಿಕ ಸುಂಕ್ಲಮ್ಮಳಿಗೆ ಒಂದು ಬೇಟೆ ಕಡಿಯುವರು. ನಂತರ ಒಂದು ಕಾಲು ಕಡಿದು ಅದರ ಬಾಯಲ್ಲಿ ಇಟ್ಟು ಅದರ ಎದುರಿಗೆ ಇಡುವರು. ಕೊಬ್ಬು ತೆಗೆದು ಗಂಡಾದೀಪದಲ್ಲಿ ಹಾಕಿ ಉರಿಸುವರು. ಬೇಟೆಯನ್ನು ಅಡುಗೆ ಮಾಡಿ ಸುಂಕ್ಲಮ್ಮನಿಗೆ ಎಡೆ ಇಟ್ಟು ನಂತರ ಎಲ್ಲರೂ ಊಟಮಾಡುವರು.

ಕೆಲವರು ಸುಂಕ್ಲಮ್ಮ ಕುಂಕುಮ ಡಬ್ಬಿಯಲ್ಲಿರುತ್ತಾಳೆಂದು ನಂಬಿದ್ದಾರೆ. ಈಕೆಯ ಕೇಂದ್ರಸ್ಥಾನ ಕರ್ನೂಲ ಜಿಲ್ಲಾ ನಾಗಲಾಪುರ ಎಂದು ತಿಳಿದುಬರುತ್ತಾರೆ.

೬.೧.೪ **ಪೋಶಮ್ಮ** : ಈ ದೇವತೆಯ ಆರಾಧನೆ ಆಂಧ್ರ ಪ್ರದೇಶದಲ್ಲಿ ಕಂಡುಬರುತ್ತದೆ. ಕರ್ನಾಟಕದಲ್ಲಿ ಪೋಶಮ್ಮನಿಗೆ ಬದಲಾಗಿ ಮಾರೆಮ್ಮ ಸುಂಕ್ಲಮ್ಮ ಎಂದು ಕರೆಯುವುದು ಹೆಚ್ಚು.

ಇಲ್ಲವೇ ಕಾಲರಾ ಮಾರೆಮ್ಮ ಎಂದು ಆರಾಧಿಸಿದಂತೆ ಮೈಮೇಲೆ ದೊಡ್ಡ ದೊಡ್ಡ ಪ್ರಮಾಣದಲ್ಲಿ ಗುಳ್ಳೆ ಎದ್ದರೆ ತಟ್ಟಮ್ಮ ಇಲ್ಲವೇ 'ಆಟ ಪಾಲಮ್ಮ' ಎಂದು ಕರೆಯುತ್ತಾರೆ. ಸಣ್ಣ ಪ್ರಮಾಣದಲ್ಲಿ ಅಲ್ಲೊಂದು ಇಲ್ಲೊಂದು ಗುಳ್ಳೆ ಕಾಣಿಸಿಕೊಂಡರೆ 'ಮುತ್ಯಾಲಮ್ಮ' ಎಂದು ದಟ್ಟವಾಗಿ ತೀವ್ರತರವಾಗಿ ಗುಳ್ಳೆ ಕಾಣಿಸಿಕೊಂಡರೆ 'ನಲ್ಲಪೋಶಮ್ಮ' ಎಂದು ಅಮ್ಮ ಇಲ್ಲವೆ 'ತಲ್ಲಿ' ಎಂದೂ ಸಹ ಕರೆಯುತ್ತಾರೆ.

ಪೋಶಮ್ಮ ಎಂದು ಆಚರಿಸುವ ಈ ಉತ್ಸವವು ಮಂಗಳವಾರ ಮತ್ತು ಶುಕ್ರವಾರಗಳೆಂದು ನೆರವೇರಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಇದು ಸಮುದಾಯದ ಜನರೆಲ್ಲರು ಸೇರಿ ಆಚರಿಸುವ ಸಾಮೂಹಿಕ ಆಚರಣೆಯಾಗಿದೆ. ತಮ್ಮ ಬಿಡಾರಗಳ ಒಂದು ಪಕ್ಕದಲ್ಲಿ ಅಂಬ್ರೆ ಗಿಡದ ತಪ್ಪಲಿನಿಂದಲೋ, ಸೀತಾಫಲ ಗಿಡದ ಕೊಂಬೆಗಳಿಂದಲೋ ಸಣ್ಣ ಗುಡಿ ಕಟ್ಟುತ್ತಾರೆ. ಪ್ರತಿಯೊಬ್ಬರ ಬಿಡಾರಗಳಲ್ಲಿ ಮನೆದೇವರೆಂದು ಫಲಕಗಳಿರುತ್ತವೆ ಇವುಗಳನ್ನು ದೇವರಿಗಾಗಿಯೇ ಮೀಸಲಿರಿಸಿದ ಒಂದು ಜೋಳಿಗೆಯಲ್ಲಿ ಇಟ್ಟು ಬಿಡಾರದ ಒಂದು ಪಕ್ಕದಲ್ಲಿ ಕಟ್ಟಿರುತ್ತಾರೆ. ಎಲ್ಲರೂ ಆ ಫಲಕಗಳನ್ನು ತಂದು ತಾವು ನಿರ್ಮಿಸಿದ ಗುಡಿಯಲ್ಲಿ ಇಟ್ಟು ಅರಿಷಿಣ, ಕುಂಕುಮದಿಂದ ಬೊಟ್ಟು ಇಡುತ್ತಾರೆ. ಒಂದು ನೀರು ತುಂಬಿದ ಹೊಸ ಗಡಿಗೆಗೆ ಅರಿಷಿಣ, ಕುಂಕುಮ ಹಚ್ಚಿ ಗಡಿಗೆಯ ಬಾಯಿಗೆ ಬೇವಿನ ತಪ್ಪಲು ಇಟ್ಟು, ಮೇಲೆ ಎಣ್ಣೆಯ ದೀಪ ಉರಿಸುತ್ತಾರೆ. ಈ ಕೊಡವನ್ನು ಒತ್ತು ಹೆಂಗಸರು ಬರುತ್ತಾರೆ. ಆಗ ಗಂಡಸರು ಡಿಂಕಿ, ಮದ್ದಳೆ, ಹಾರ್ಮೋನಿಯಂ, ತಂಬೂರಿಯನ್ನು ಬಾರಿಸುತ್ತಾ ಬುರ್ರ ಕಥೆಗಳನ್ನು ಹೇಳಿದಂತೆ ದೇವರ ಸ್ತುತಿಗಳನ್ನು ಹೇಳುತ್ತಾರೆ. ಹೀಗೆ ಗುಡಿಯ ಹತ್ತಿರ ಕರೆತರುತ್ತಾರೆ.

ಕುಲದ ಹಿರಿಯ ಪೂಜಾರಿಯ ಸ್ಥಾನದಲ್ಲಿದ್ದು ಪೋಶಮ್ಮಳಿಗೆ ಎಡೆ ಸಮರ್ಪಿಸುತ್ತಾನೆ. ಮನೆಯಲ್ಲಿ ದೇವರಿಗಾಗಲಿ ಅಥವಾ ಭೂತಕ್ಕಾಗಲಿ ಬಲಿಜಂತುಗಳ ಅವಯವಗಳನ್ನು, ಅನ್ನವನ್ನು ಒಂದು ಕಡೆ ರಾಶಿ ಹಾಕುವುದನ್ನು ಎಡೆ ಎನ್ನುತ್ತಾರೆ. ಮೇಕೆ ಅಥವಾ ಕುರಿ ಇದ್ದರೆ ಬಲಿ ಕೊಡುತ್ತಾರೆ. ಪೂಜೆ ಮಾಡಿದ ಮೇಲೆ ಮನೆಯಲ್ಲಿರುವ ದೇವರಿಗೂ ಕಾಯಿ ಒಡೆದು, ಕೋಳಿ ಬಲಿಕೊಡುತ್ತಾರೆ. ಪೂಜೆ ಆದ ಮೇಲೆ ತಮ್ಮ ತಮ್ಮ ದೇವರ ಫಲಕಗಳನ್ನು ತೆಗೆದುಕೊಂಡು ಹೋಗಿ ಅವರವರ ಬಿಡಾರಗಳಲ್ಲಿ ಭದ್ರಪಡಿಸಿ ಕೊಳ್ಳುತ್ತಾರೆ. ವರ್ಷಕ್ಕೊಂದುಸಾರಿಯಾದರೂ ಅವಳನ್ನು ತೃಪ್ತಿ ಪಡಿಸಬೇಕು. ಇಲ್ಲದಿದ್ದರೆ ನಮ್ಮನ್ನು ನಾನಾ ಯಾತನೆಗೆ ಗುರಿಪಡಿಸುತ್ತಾಳೆಂದು, ಸಾಯಿಸುತ್ತಾಳೆಂದು ನಂಬಿರುತ್ತಾರೆ.

೬.೧.೫ ಎಲ್ಲಮ್ಮ : ಹಗಲುವೇಷಾಗರರು ಎಲ್ಲಮ್ಮನನ್ನು ಪೂಜಿಸುತ್ತಾರೆ. ತೂರ್ಪಟೆ, ಕಡಮಂಚಿ, ಕಲ್ಲೆಂ, ಪಸ್ತಂ, ಸದುಲ ಇನ್ನು ಕೆಲವು ಗೋತ್ರದವರಿಗೆ ಪ್ರಧಾನ ದೇವತೆ ಎಲ್ಲಮ್ಮ ಹಾಗೂ ಮನೆದೇವರು ಹೌದು.

ಎಲ್ಲಮ್ಮನ ಪೂಜೆ ಮಾಡುವವರು ಎಲ್ಲಮ್ಮನ ಬೆಳ್ಳಿ ಮೂರ್ತಿಯನ್ನು ದೇವರ ಜೋಳಿಗೆಯಲ್ಲಿ ಇಟ್ಟುಪಡಿಸಿಕೊಂಡಿರುತ್ತಾರೆ. ಬೇವಿನಗಿಡವನ್ನು ಮತ್ತು ಹಾವಿನ ಹುತ್ತವನ್ನು ಎಲ್ಲಮ್ಮ ಎಂದು ಪೂಜಿಸುತ್ತಾರೆ. ಈ ಪೂಜೆಯನ್ನು ವರ್ಷಕ್ಕೆ ಒಂದು ಸಾರಿ ನೆರವೇರಿಸುತ್ತಾರೆ.

ಇವರು ಎಲ್ಲಮ್ಮದೇವತೆಯನ್ನು ಇಲ್ಲವೇ ಬಲಿಕೊಟ್ಟು ಆರಾಧಿಸುವುದು. ಎರಡು ಬಲಿಕೊಡದೆ ಆರಾಧಿಸುವುದುಂಟು ಕೆಲವರ ಮನೆದೇವತೆ ಎಲ್ಲಮ್ಮಳಿಗೆ 'ಬಾಪನಿಂಟಿ ಎಲ್ಲಮ್ಮ' ಎಂದು ಕರೆಯುತ್ತಾರೆ. ಇವಳಿಗೆ ಬಲಿ ಇರುವುದಿಲ್ಲ. ತೆಂಗಿನಕಾಯಿ, ಬೆಲ್ಲ, ಅನ್ನ ಎಡೆಕೊಟ್ಟು ಪೂಜಿಸುತ್ತಾರೆ. ಮಧು ಮಾಂಸಗಳಿಲ್ಲದೆ ಇವಳನ್ನು ಪೂಜಿಸುವುದರಿಂದ 'ಬಾಪನಿಂಟಿ ಎಲ್ಲಮ್ಮ' ಎನ್ನುವ ಹೆಸರು ಬಂದಿದೆ.

ಬಲಿಯ ವಿಧಾನದಿಂದ ಆಚರಿಸುವ ಎಲ್ಲಮ್ಮನನ್ನು 'ರಾಯಿಕಂಟೆ' ಎಲ್ಲಮ್ಮ ಎನ್ನುವರು. ಈ ದೇವತೆಗೆ ಕುರಿ ಅಥವಾ ಮೇಕೆ ಬೇಟೆ ಮಾಡುತ್ತಾರೆ. ಮತ್ತು ಹೆಂಡವನ್ನು ಸಹ ಸಮರ್ಪಿಸುತ್ತಾರೆ.

೬. ಕುಲದೇವತೆಗಳು

ಪ್ರಕೃತಿಯಲ್ಲಿನ ಸಸ್ಯ ಹಾಗೂ ಪ್ರಾಣಿವರ್ಗಗಳ ಅನೇಕ ಜೀವಿಗಳು 'ಕುಲದೇವತಾ' ಸ್ವರೂಪವೆಂದು ಪೂಜಿಸಲ್ಪಡುವವು. ಯಾವ ಜೀವಿವನ್ನು ಕುಲದೇವತೆ ಎಂದು ಆರಾಧಿಸುವರೋ, ಆ ಜೀವಿಯ ಬಗೆಗೆ ಭಯ ಮತ್ತು ಪೂಜ್ಯಭಾವನೆ ಆದಿವಾಸಿಗಳಲ್ಲಿ ಕಂಡುಬರುವುದು. ಕುಲದೇವತೆ ದೈವ ಶಕ್ತಿಯ ಸಂಕೇತ.

ಹೀಗೆ ಈ ಸಮುದಾಯದವರು ಪ್ರಕೃತಿಯಲ್ಲಿನ ಅನೇಕ ಪ್ರಾಣಿ ಮತ್ತು ಸಸ್ಯಗಳನ್ನು ಕುಲದೇವತೆಗಳೆಂದು ಪೂಜಿಸುವುದು ಕಂಡುಬರುತ್ತದೆ. ಅದಕ್ಕೆ ಕುರುಹು ಕುಲದೇವತಾ ಸಂಕೇತವುಳ್ಳ ಜೀವಿಗಳನ್ನು ಕೊಲ್ಲುವುದನ್ನು, ಹಾಗೂ ಭಂಜಿಸುವುದನ್ನು ನಿಷೇಧಿಸಿದ್ದಾರೆ. ಹಾಗೂ ಕುಲದೇವತಾ ಪದ್ಧತಿಯ ಆಧಾರದ ಮೇಲೆ ಸ್ವಗೋತ್ರ ವಿವಾಹ ಪದ್ಧತಿಯ ನಿಷೇಧಿಸುವುದು, ಭಿನ್ನ ಗೋತ್ರ ವಿವಾಹ ಪದ್ಧತಿ ಆಚರಣೆಯಲ್ಲಿರುವುದು ಇನ್ನಷ್ಟು ಪುಷ್ಟಿ ಒದಗಿಸುತ್ತದೆ.

ಹಗಲುವೇಷಗಾರರು ಕುಲದೇವತೆಗಳೆನಿಸಿಕೊಂಡ ಬೇವಿನ ಕಟ್ಟಿಗೆಯನ್ನು ಉರಿಸುವುದಿಲ್ಲ. ಜಂಬೆಗಿಡದ ಕಟ್ಟಿಗೆಯನ್ನು ಸಹ ಒಲೆಯಲ್ಲಿ ಉರುವುಲಾಗಿ ಬಳಸುವುದಿಲ್ಲ. ಇವುಗಳನ್ನು ದೇವರೆಂದು ಪೂಜಿಸುತ್ತಿದ್ದಾರೆ. ಸಿರಿವಾಟಿ ಗೋತ್ರದವರು ಕುಲದೇವತೆಯಾಗಿ ಆಮೆಯನ್ನು, ರೇವಲ್ಲೋಳ್ಳು ಗೋತ್ರದವರು ಹಂದಿಯನ್ನು ಕುಲದೇವತೆಯಾಗಿ ಪೂಜಿಸುತ್ತಾರೆ. ಅದೇ ರೀತಿ ಪಸ್ತಂ ಮತ್ತು ತೂರ್ಪಟಿ ಗೋತ್ರದವರು ಎಲ್ಲಮ್ಮನನ್ನು ಯಾರಿಗೂ ಕಾಣದಂತೆ ಬಿಡಾರದಲ್ಲಿ ದಿಗಂಬರವಾಗಿ ಪೂಜಿಸುತ್ತಾರೆ. ಹೀಗೆ ಇವರಲ್ಲಿ ಕುಲದೇವತೆಯ ರೂಪದಲ್ಲಿ ಏಕನಾದ ಕಾಯಿ ಗಂಗಾ ನದಿ, ವಿಭೂತಿ, ಪಂಗನಾಮ, ವೀಳ್ಯೆದೆಲೆ, ನವಿಲುಗರೆ, ನಾಮ, ಅರಿಷಿಣ ಬೊಟ್ಟು ಮುಂತಾದವುಗಳನ್ನು ಪೂಜಿಸುವುದು ಕಂಡುಬರುತ್ತದೆ.

೬.೩ ಶೈವ ವೈಷ್ಣವ ದೇವತೆಗಳ ಪೂಜೆ

ಮಾತ್ರ ದೇವತೆ, ಕುಲದೇವತೆಗಳನ್ನಲ್ಲದೆ ಇತರೆ ಮುಖ್ಯ ದೇವರಾದ ಆಂಜನೇಯಸ್ವಾಮಿಯನ್ನು ಸಹ ಈ ಸಮುದಾಯದವರು ಬಹಳ ಮಂದಿ ಪೂಜಿಸುತ್ತಾರೆ. ಆಂಜನೇಯನಿಗೆ ನಡೆದುಕೊಳ್ಳುವವರು. ಶ್ರೀಶೈಲ ಮಲ್ಲಿಕಾರ್ಜುನನ್ನು ಬಹಳ ಅಭಿಮಾನದಿಂದ ತಮ್ಮ ಕುಲಗುರುವೆಂದು ಹೇಳಿಕೊಳ್ಳುತ್ತಾರೆ. ಇವರ ಶೈವ ಭಕ್ತಿಗೆ ಈತನೇ ಪ್ರೇರಕ, ಪೋಷಕ ಎಂದು ನಂಬಿದ್ದಾರೆ. ಕೆಲವೇ ವರ್ಷಗಳ ಹಿಂದೆ ಶ್ರೀಶೈಲ

[illegible]

[illegible]

[illegible]

[illegible]

ಮಲ್ಲಿಕಾರ್ಜುನನಿಗೆ ಸಂಬಂಧಿಸಿದ ನಮ್ಮ ಗುರುಗಳು ಆನೆಯ ಮೇಲೆ ಬಂದು ಎರಡು ಜೋಳಿಗೆ ಹಾಕಿಕೊಂಡು ನಮ್ಮ ಕುಲದವರೇ ಆದ ಯಡವಲ್ಲಿ ಮತ್ತು ಸಿರಸ್ಯಾಲ ಗೋತ್ರದವರು ಅವರು ಬಂದಾಗಿನಿಂದ ವಾಪಸ್ಸು ಹೋಗುವವರೆಗೂ ಅವರಿಗೆ ತಮ್ಮ ಸಮುದಾಯದವರಿಂದ ಹಣ ವಸೂಲಿ ಮಾಡಿಕೊಟ್ಟು ತಾವು ಒಂದೊಂದು ಭಾಗ ಪಡೆಯುತ್ತಿದ್ದರೆಂದು ಹೇಳುತ್ತಾರೆ. ಈಗ ಅವರು ಬರುವುದು ಬಿಟ್ಟಿದ್ದಾರೆ. ಆದರೆ ನಾವು ಆ ದೇವರನ್ನು ಮರೆತಿಲ್ಲ. ಇಂದಿನ ಕುಲ ದೈವದ ಪಂಚಾಯಿತಿಯಲ್ಲಿ ಮದುವೆಯಲ್ಲಿ ಮೊದಲ ತಾಂಬೂಲ ಆ ದೇವರಿಗೆ ಅರ್ಪಿಸುತ್ತೇವೆ. ಮತ್ತು ಮುಡುಪು ಕೊಡುತ್ತೇವೆ ಎಂದು ಹೇಳುತ್ತಾರೆ. ಅಲ್ಲದೆ ಮಂಜುನಾಥನನ್ನು ಸಹ ಪೂಜಿಸುತ್ತಾರೆ.

ವೈಷ್ಣವ ಧರ್ಮದ ಗುರು ರಾಘವೇಂದ್ರ, ವೆಂಕಟೇಶ್ವರ, ನರಸಿಂಹಸ್ವಾಮಿ ಶೈವಗಳನ್ನು ಸಹ ಪೂಜಿಸುತ್ತಾರೆ. ಇವರು ಹೇಳುವ ಬುರ್ರಾ ಕಥೆಯಲ್ಲಿಯೂ ಸಹ ಕೆಲವು ವೈಷ್ಣವ ಧರ್ಮವನ್ನು ಎತ್ತರಿಸಿ ಹೇಳಿದರೆ, ಕೆಲವು ಶೈವ ಧರ್ಮವನ್ನು ಎತ್ತಿ ಹೇಳುತ್ತವೆ.

೬.೪. ಮುಸ್ಲಿಂ ದೇವರುಗಳು

ಹಿಂದು ದೇವತೆಗಳನ್ನಲ್ಲದೆ ಇವರು ಮುಸ್ಲಿಂ ಧಾರ್ಮಿಕ ಕೇಂದ್ರವಾದ ನಡೆದುಕೊಳ್ಳುವುದು ಹಾಗೂ ದರ್ಗಾ, ಒಳಗಾಗಿ ಪೀರ್ಲ ದೇವರುಗಳನ್ನು ಸಹ ಪೂಜಿಸುತ್ತಾರೆ. ಕೆಲವರು ಈ ದೇವರ ಪ್ರಭಾವಕ್ಕೆ ಒಳಗಾಗಿ ಮುಸ್ಲಿಂ ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ. ಕ್ಷೇತ್ರಕಾರ್ಯ ಸಂಬಂಧಪಟ್ಟಂತೆ ಕುದುರೆಮೂತಿಯ ಹುಸೇನ ಭಾಷಾ ಮತ್ತು ಗುಂತಕಲ್ಲು ಮಸ್ತಾನಯ್ಯ ಮುಖ್ಯವಾಗುತ್ತಾರೆ.


ಶ್ರೀಶೈಲದ ಪಟ್ಟಿ ಧರಿಸಿರುವ ಯಡವಲ್ಲಿ ರಾಮಣ್ಣ

'ಕುದುರೆಮೂತಿ'ಯಲ್ಲಿ ಪ್ರತಿವರ್ಷ 'ಮೊಹರಂ' ನಡೆಯುತ್ತದೆ. ಆದರೆ ಹಗಲುವೇಷಗಾರರರು ಎರಡು ವರ್ಷಕ್ಕೊಮ್ಮೆ ಅಲ್ಲಿ ಸೇರುತ್ತಾರೆ. ಇದನ್ನೇ ಅವರು ಕುಲದ ಹಬ್ಬ, ಉತ್ಸವ, ಜಾತ್ರೆ ಎಂದು ನಂಬಿದ್ದಾರೆ. ಜಾತ್ರೆ ಆರಂಭವಾಗುವುದಕ್ಕೆ ೧೫ ದಿನಗಳು ಮುಂಚಿತವಾಗಿಯೇ ಇವರು ಕ್ಷೇತ್ರವನ್ನು ಸೇರಿ ಬಿಡಾರಗಳನ್ನು ಹಾಕಿಕೊಳ್ಳುತ್ತಾರೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ನಾಲ್ಕು ರಾಜ್ಯದಲ್ಲಿನ ಹಗಲುವೇಷಗಾರರೆಲ್ಲ ಬಂದು ಸೇರುತ್ತಾರೆ. ಮೊಹರಂ ತಿಂಗಳಂದು ಚಂದ್ರ ದರ್ಶನಮಾಡಿ ಅಲಾವಿ ತೆಗೆಯುವುದಕ್ಕೆ ಗುದ್ದಲಿ ಹಾಕಿದ ಕೂಡಲೇ ಭಿಕ್ಷೆ ಬೇಡುವುದನ್ನು ನಿಲ್ಲಿಸುವರು. ಪೀರಲ ದೇವರು ಕುಳಿತ ಐದನೆಯ ದಿನ ಅಂದರೆ ಕತ್ತಲ ರಾತ್ರಿಯ ದಿನ ಮುಂಜಾನೆ 'ಕಂದೂರಿ' ಎಂದು ಮಾಡುವರು.

[illegible]



[illegible]

ಕಂದೂರಿ ಮಾಡುವವರ ಮನೆಯಲ್ಲಿ ಒಬ್ಬ ಲಾಡಿ ಧರಿಸಿರುತ್ತಾನೆ. ಕತ್ತಲ ರಾತ್ರಿಯ ದಿನ ಮುಂಜಾನೆ ತಮ್ಮ ಬಿಡಾರವನ್ನು ಸಾರಿಸಿಕೊಂಡು ಎಲ್ಲರೂ ಸ್ನಾನ ಮಾಡಿ ಮುಂಜಾನೆ ಹನ್ನೊಂದು ಗಂಟೆಗೆ ತಮ್ಮ ಸಾಂಪ್ರದಾಯಿಕ ವಾದ್ಯಗಳಾದ ಡಪ್ಪು ಗುಮ್ಮಟ, ಪಿಯಾನು, ತಬಲ, ತಂಬೂರಿ ಹಿಡಿದು ದೇವರ ಪದಗಳನ್ನು ಹಾಡುತ್ತಾ ಮುಂದೆ ಈ ಸಮುದಾಯದ ತಳವಾರ ನೆನಸಿಕೊಂಡ ಯಡವಲ್ಲಿ ಗೋತ್ರದವರು ತನ್ನ ಕುಲದ ಸಾಂಪ್ರದಾಯಿಕ ಉಡುಗೆಯಲ್ಲಿ ಅಂದರೆ ಕೈಯಲ್ಲಿ ಒಂದು ಅಂಚಿನ ಬಡಿಗೆ, ಕಾಲಲ್ಲಿ ಕಡಗ, ಕೊರಳಲ್ಲಿ ಶ್ರೀಶೈಲಮಠದಿಂದ ಕೊಟ್ಟ ಜವಾನ ಪಟ್ಟಿ ಧರಿಸಿಕೊಂಡಿರುತ್ತಾನೆ. ಇನ್ನುಳಿದ ಕುಲಸ್ಥರೆಲ್ಲಾ ಕೆಂಪು ಸಕ್ಕರೆ ಎಣ್ಣೆ, ಊದುಬತ್ತಿ ಗಂಧ ತೆಗೆದುಕೊಂಡು ಮಸೀದಿಗೆ ತೆರಳುವರು. ಹರಕೆ ಕಟ್ಟಿಕೊಂಡ ಕೆಲವರು ಮಡಿ ಬಟ್ಟೆಯೊಂದಿಗೆ ಊರ ಹಿಂದೆ ಬೀಡು ಬಿಟ್ಟಿರುವ ಜಾಗದಿಂದ ಜಾತ್ರೆಯೆಂದು ಹುಸೇನ್‌ಭಾಷಾನ ಅಲಾವಿ ಕುಣಿಸುತ್ತಾ ತಿರುಗಿ ಗುಡಿ ಪ್ರವೇಶಿಸಿ ಸಕ್ಕರೆ ಹೂವು, ಊದುಬತ್ತಿ, ದೀಪ, ಮುಡಿಸಲು ಎಣ್ಣೆ, ಹೊಸಬಟ್ಟೆ ಅರ್ಪಿಸುವರು.

ಹರಕೆ ಒಪ್ಪಿಸಿದ ಬಳಿಕ ತಮ್ಮ ತಮ್ಮ ವಿಚಾರಗಳಿಗೆ ತೆರಳುವರು. ಪೂಜೆ ಸಲ್ಲಿಸಿ ವಾಪಸ್ಸು ಬಿಡಾರಗಳಿಗೆ ಬರುವಾಗ ಒಬ್ಬ ಮುಲ್ಲಾನನ್ನು ಕರೆತರುತ್ತಾರೆ. ಕಂದೂರಿ ಮಾಡುವವರ ಬಿಡಾರಗಳಿಗೆ ಹೋಗಿ ಅವರ ಬಿಡಾರದ ಮುಂದೆ ಮೇಕೆ, ಕುರಿ, ಹೋತ, ಟಗರು ಇವೆರಡರಲ್ಲಿ ಒಂದನ್ನು ಊರಿನ ಮಸೀದಿಯ ಕಡೆ ಮುಖಮಾಡಿ ಮಂತ್ರ ಹೇಳುತ್ತಾ ಮುಲ್ಲಾನು ಚೂರಿ ಹಾಕುವನು. ಬಲಿಕೊಟ್ಟ ಪ್ರಾಣಿಯ ರಕ್ತ ಅವಯುವಗಳು ನಾಯಿ, ನರಿ ಮುಟ್ಟಬಾರದೆಂದು ಒಂದು ಕುಣಿ ತೊಡಿ, ಅದರಲ್ಲಿ ರಕ್ತ ಹಾಕಿ ಮರಳು ಮುಚ್ಚುತ್ತಾರೆ. ಹೀಗೆ ತಂದೂರಿ ಮಾಡುವವರೆಲ್ಲಾ ಬಲಿಕೊಟ್ಟ ಪ್ರಾಣಿಯ, ಮಾಂಸವನ್ನೆಲ್ಲಾ ಕಡಿದು ಸಿದ್ಧಗೊಳಿಸುತ್ತಾರೆ.

ಹೀಗೆ ಸಿದ್ಧಗೊಳಿಸಿದ ಮಾಂಸವನ್ನು ದೇವರಿಗೆ ಬೇರೆ ಬಿಡಾರದ ಒಳಗಡೆ ಹೊಸಗಡಿಗೆಯಲ್ಲಿ ಬೇಯಿಸುತ್ತಾರೆ. ಈ ಅಡುಗೆ ಬೇಯಿಸುವಾಗ ಯಾರ ಹತ್ತಿರ ಮಾತನಾಡುವುದಿಲ್ಲ. ಹೊರಗಡೆ ಪ್ರತ್ಯೇಕ ಅಡುಗೆ ಸಿದ್ಧಪಡಿಸುತ್ತಾರೆ. ದೇವರ ಮೀಸಲು ಅಡುಗೆ ತಯಾರಾದ ಬಳಿಕ ಬಿಡಾರದ ಹಿಂಭಾಗದಲ್ಲಿ ಒಂದು ಗದ್ದುಗೆ ಹಾಕಿ, ಸಾರಿಸಿ ರಂಗೋಲಿ ಹಾಕಿರುತ್ತಾರೆ. ಅದರ ಮೇಲೆ ತಮ್ಮ ಚೀಲದಲ್ಲಿರುವ ದೇವರನ್ನು ಇಟ್ಟು ಮುಂದೆ ಮೀಸಲು ಅಡುಗೆಯ ತಯಾರಾದ ಗಡಿಗೆಗಳನ್ನು ಇಡುವರು. ಇನ್ನೊಂದು ಮಡಕೆಯಲ್ಲಿ ಬೆಲ್ಲದ ನೀರನ್ನು ತುಂಬಿ, ಆ ಗಡಿಗೆಗಳ ಹತ್ತಿರ ಇಡುವರು. ಗಡಿಗೆ ಮತ್ತು ಮಗಿಗಳಿಗೆ ಕೆಂಪು ಲಾಡಿ ಹಾಕುವರು. ಪೂಜೆಗೆ ಸಿದ್ಧವಾದ ಮೇಲೆ ಮುಲ್ಲಾನನ್ನು ಕರೆಯಿಸುವರು. ಮುಲ್ಲಾನು ಗದ್ದುಗೆಯ ಬಲಭಾಗದಲ್ಲಿ ಕುಳಿತು ಮಂತ್ರ ಒದಿಸುವನು. ಗದ್ದುಗೆ ಎದುರಿಗೆ ಸಮೀಪದಲ್ಲಿ ಚಿಕ್ಕ ಕುಣಿ ತೆಗೆದು ಬೆಂಕಿ ಹಾಕಿ ಅದರಲ್ಲಿ ಊದಿನಕಡ್ಡಿ ಹಾಗೂ ಲೋಭಾನವನ್ನು ಮಂತ್ರ ಮುಗಿಯುವವರೆಗೂ ಹಾಕುತ್ತಾರೆ. ಪೂಜೆ ಮುಗಿದ ಮೇಲೆ ಮುಲ್ಲಾ ಆಶೀರ್ವಾದ ನೀಡಿ ಕಾಣಿಕೆ ಪಡೆದು ಹೊರಟು ಹೋಗುವನು. ಮಾಂಸದ ಅಡುಗೆಯನ್ನು ಎಡೆಯ ರೂಪದಲ್ಲಿ ಮಸೀದಿಗೆ ಕೊಟ್ಟು ಕಳುಹಿಸುವರು.

ದೇವರ ಹೆಸರಿನಲ್ಲಿ ಉಪವಾಸ ಕೈಗೊಂಡವರು ಬೆಲ್ಲದ ನೀರನ್ನು ತೀರ್ಥದ ರೂಪದಲ್ಲಿ ಕುಡಿದು, ಮೀಸಲು ಅಡುಗೆಯನ್ನು ಪ್ರಸಾದರೂಪದಲ್ಲಿ ಸ್ವೀಕರಿಸುವರು. ತಮ್ಮ ಸಂಬಂಧಿ ಗೋತ್ರದವರಿಗೆ ಬಿಟ್ಟು ಬೇರೆಯವರಿಗೆ ಈ ಬೆಲ್ಲದ ನೀರು, ಮೀಸಲು ಅಡುಗೆಯ ಪ್ರಸಾದ ಕೊಡುವುದಿಲ್ಲ. ಆದರೆ ಹೊರಗಡೆ ಮಾಡಿದ ಮಾಂಸಹಾರವನ್ನು ಕುಲದವರಿಗೆಲ್ಲರಿಗೂ ಊಟಮಾಡಿಸಿ, ಹೆಂಡ ಸರಾಯಿ ಕುಡಿಸುವರು.

“ಮರುದಿನ ಮೊಹರಂ ಕೊನೆಯ ದಿನ ಬೆಳಿಗ್ಗೆ ಮುಂಜಾನೆ ದೇವರು ಎದ್ದಾಗ ತಮ್ಮ ಬಿಡಾರದ ಹತ್ತಿರ ಇರುವ ಗುಡಿಗೆ ಕಾಯಿ ಎಣ್ಣೆ ಕೊಡಲು ದೇವರು ಬಂದಿರುತ್ತಾರೆ. ಅಷ್ಟರೊಳಗೆ ಈ ಸಮುದಾಯದ ಕೆಲವರು ಸ್ನಾನಮಾಡಿ ಮಡಿಯಲ್ಲಿ ಹೋಗಿ ಆ ದೇವರ ಗುಡಿಯ ಮುಂದೆ ಬೋರಲ ಮಲಗುತ್ತಾರೆ. ದೇವರು ಹೊತ್ತುಕೊಂಡವರು ಅವರನ್ನು ತುಳಿದುಕೊಳ್ಳುತ್ತಾ ಹೋಗುವರು. ಇನ್ನೂ ಕೆಲವರು ಬೆಲ್ಲ ಮಂಡಾಳು ಊದಿನಕಡ್ಡಿ ಕಾಣಿಕೆ ನೀಡಿ ಕೈಮುಗಿಯುವರು ಅಲ್ಲಿಗೆ ಮುಂಜಾನೆಯ ಕಾರ್ಯಕ್ರಮ ಮುಕ್ತಾಯವಾಯಿತು. ಅಷ್ಟರಲ್ಲಿ ಇವರ ನ್ಯಾಯಗಳು ಬಯಲಿಗೆ ಬಂದು ಪಂಚಾಯಿತಿಗಳಿಗೆ ಬಂದಿರುತ್ತವೆ. ಅಷ್ಟೊತ್ತಿನಿಂದ ಇವರ ನ್ಯಾಯ ಪಂಚಾಯಿತಿಗಳು ನಡೆಯುತ್ತವೆ. ಕೆಲವರು ಅಂಗಡಿಗಳಿಗೆ ಹೋಗಿ ಬಳೆ ಹಾಕಿಸಿಕೊಂಡು ಜಾತ್ರೆಯಲ್ಲಿ ಹೋಗಿ ಬರುತ್ತಾರೆ. ಸಾಯಂಕಾಲ ದೇವರು ಹೋಗುವಾಗ ಒಂದು ದೇವರನ್ನು ನೋಡಿ ಕೈ ಮುಗಿದು ಹೋಗುತ್ತಾರೆ. ಅಲ್ಲಿಂದ ಸತತವಾಗಿ ಎರಡು ಮೂರು ದಿನ ನ್ಯಾಯ ಪಂಚಾಯಿತಿಗಳು ನಡೆಯುತ್ತವೆ.”[೨೩] ಇದನ್ನು ಮುಗಿಸಿಕೊಂಡು ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ. ಹೀಗೆ ಹಿಂದೂ ದೇವತೆಗಳ ಜೊತೆಗೆ ಮುಸ್ಲಿಂ ದೇವರುಗಳನ್ನು ಆರಾಧಿಸುವುದರ ಮೂಲಕ ತಮ್ಮಲ್ಲಿ ಸರ್ವ ಧರ್ಮ ಸಮನ್ವಯತೆಯನ್ನು ಕಾಪಾಡಿಕೊಂಡು ಬಂಧಿದ್ದಾರೆ.

ಬ. ಪ್ರೇತಾರಾಧನೆ ಅಥವಾ ಭೂತಾರಾಧನೆ

“ಸತ್ತ ದೇಹದಿಂದ ಬಿಡುಗಡೆಯಾದ ಜೀವವು ಪುನರ್ಜನ್ಮವನ್ನು ತಾಳದೆ ಬೇರೆ ಲೋಕಕ್ಕೂ ಹೋಗದೆ ಇಲ್ಲಿಯೇ ಅಲೆದಾಡುತ್ತಿರುತ್ತವೆ ಎಂಬ ನಂಬಿಕೆ ಜೀವಾರೋಪವಾದಗ ಹೀಗೆ ಬಿಡುಗಡೆಯಾದ ಆತ್ಮಗಳು ತಮ್ಮ ವಿಶಿಷ್ಟ ಶಕ್ತಿಯಿಂದಾಗಿ ತಮಗೆ ಬೇಕಾದ ಆಕಾರ ಮತ್ತು ಗಾತ್ರಗಳನ್ನು ಪಡೆದು ಅಥವಾ ಯಾರನ್ನಾದರೂ ಹಿಡಿದುಕೊಂಡು ತಮ್ಮ ಆಸೆಗಳನ್ನು ಪೂರೈಸಿಕೊಳ್ಳಬಲ್ಲವು”[೨೪] ಎಂಬ ನಂಬಿಕೆ ಈ ಸಮುದಾಯದವರಿಗೆ ಸಾಮಾನ್ಯ. ಇಂತಹ ಆತ್ಮಗಳಿಗೆ ದೆವ್ವ, ಭೂತ, ಪ್ರೇತ, ಪಿಶಾಚಿ ಎಂದು ಕರೆಯುತ್ತಾರೆ.

ಮರಣ ಹೊಂದಿದ ವ್ಯಕ್ತಿಯ ಆತ್ಮ ತಿರುಗಿ ಬಂದು, ಮತ್ತೆ ಮನೆಯಲ್ಲಿ ಸೇರಿ ದೆವ್ವವಾಗುತ್ತದೆ. ಹೀಗೆ ಬಂದರೆ ಬಿಡಾರವನ್ನು ಸುಟ್ಟು ಹಾಕುವರು. ಇಲ್ಲವೆ ಊರಿನಿಂದ ಬೇರೆ ಊರಿಗೆ ಹೋಗುತ್ತಾರೆ. ದೆವ್ವ ಹಿಡಿಯಿತು ಎಂದು ತಿಳಿದರೆ ಏತಕ್ಕಾಗಿ ಬಂದಿದ್ದೀರಿ ಎಂದು ಕೇಳಿ ತೃಪ್ತಿ ಪಡಿಸುತ್ತಾರೆ. ಇಲ್ಲವೇ ಭೂತ ಬಿಡಿಸುವ ವೈದ್ಯರಿಂದ ದೈವ್ವವನ್ನು ಕೊಲ್ಲಿಸುತ್ತಾರೆ. ಇಲ್ಲವೆ ಅವುಗಳನ್ನು ಪೂಜಿಸುವುದು ಕಂಡುಬರುತ್ತದೆ. ಸಣ್ಣ ವಯಸ್ಸಿನಲ್ಲಿ ಸತ್ತವರನ್ನು, ಕೊಲೆಯಾದವರನ್ನು, ರೋಗಿಷ್ಟರನ್ನು, ಬಾಣಂತಿ

ಮತ್ತು ತೊನ್ನು ಇದ್ದವರು ಸತ್ತರೆ ದೆವ್ವವಾಗುತ್ತಾರೆಂದು ಭಾವಿಸಿದ್ದಾರೆ. ಆದಕಾರಣ ಇಂತಹ ವ್ಯಕ್ತಿಗಳು ಸತ್ತ ಸಂದರ್ಭದಲ್ಲಿ ಶವವನ್ನು ಒಯ್ಯುವುದಕ್ಕೆ ಮೊದಲು ಕುಲದ ಹಿರಿಯ ಶವದ ಕಣ್ಣಲ್ಲಿ ಸೂಜಿ ಚುಚ್ಚುತ್ತಾರೆ. ಕೆಲವು ಸಾರಿ ಕೇರು ಕಾಯಿ ಸುಣ್ಣ ಕಲಿಸಿ ಕಣ್ಣಿನಲ್ಲಿಡುತ್ತಾರೆ. ಹೀಗೆ ಇಡುವುದರಿಂದ ಸತ್ತವರು ದೆವ್ವವಾಗುವುದಿಲ್ಲವೆಂದು ನಂಬಿದ್ದಾರೆ.

ಬಿಡಾರದ ಸುತ್ತಮುತ್ತಲಿನವರಿಗೆ ಯಾರಿಗಾದರೂ ಸ್ವಪ್ನದಲ್ಲಿ ಕಂಡು ನನಗೆ ಹಸಿವೆಯಾಗಿದೆ, ಒಂದು ಮುದ್ದೆ ನೀಡು ಎಂದು ಕೇಳಿದರೆ, ಕುತ್ತಿಗೆ ಇಸುಕಿದಂತಾದರೆ, ಕೈ ಹಿಡಿದು ಎಳೆದಂತಾದರೆ ಸತ್ತ ವ್ಯಕ್ತಿ ದೆವ್ವವಾಗಿದ್ದಾನೆಂದು ನಿಶ್ಚಯಿಸಿಕೊಳ್ಳುತ್ತಾರೆ. ಕೆಲವೊಂದು ಸಾರಿ ಸತ್ತು ಹೋದ ವ್ಯಕ್ತಿ ಕಂಡಂತೆ, ಮಾತನಾಡಿಸಿದಂತೆ, ನಿನ್ನ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದಂತಾದರೆ ಕುಲದ ಹಿರಿಯನಿಗೆ ಪಿರ್ಯಾದಿ ಸಲ್ಲಿಸುತ್ತಾರೆ. ಕೆಲವು ಸಾರಿ ಹೊಟ್ಟೆ ನೋವು ಬರುತ್ತದೆ. ಎದೆ ಹಿಡಿದಂತಾಗುತ್ತದೆ. ಒಂದೊಂದು ಸಲ ಮನಸ್ಸು ಸ್ಥಿಮಿತದಲ್ಲಿ ಇಲ್ಲದಂತೆ ಹುಚ್ಚುಚ್ಚಾಗಿ ಮಾತನಾಡುವುದು ಬೇರೆ ಬೇರೆ ಭಾಷೆಯಲ್ಲೂ ಸಹ ಮಾತನಾಡುತ್ತಾರೆ. ಅಂತಹ ಸಂದರ್ಭದಲ್ಲಿ ಕುಲದ ಹಿರಿಯ ಯಾವ ಕುಟುಂಬದ ವ್ಯಕ್ತಿ ಭೂತವಾಗಿರುತ್ತಾನೋ, ಆ ಮನೆಯ ವ್ಯಕ್ತಿಯನ್ನು ಕರೆಯಿಸಿ ಶಾಂತಿ ಮಾಡಿಸುವಂತೆ ಹೇಳುತ್ತಾನೆ. ಆತನೂ ಕುಲದ ಹಿರಿಯರನ್ನೆಲ್ಲಾ ಸೇರಿಸಿ ಶಕುನ ನೋಡಿ ದೆವ್ವ ಯಾರದೆಂದು ತಿಳಿದುಕೊಳ್ಳುತ್ತಾರೆ.

ಶಕುನವೆಂದರೆ ಭಾದಿಸುತ್ತಿರುವ ಮನುಷ್ಯನಿಗೆ ದೆವ್ವವೋ, ದೇವರೋ ಎಂದು ತಿಳಿದುಕೊಳ್ಳುವುದಕ್ಕೆ, ದೆವ್ವ ಅಥವಾ ದೇವರ ಹತ್ತಿರ ಮುಖಾಮುಖಿಯಾಗಿ ಮಾತನಾಡಿ ಅಭಿಪ್ರಾಯ ತಿಳಿದುಕೊಳ್ಳುವುದನ್ನು ಶಕುನ ಎಂದು ಕರೆಯುತ್ತಾರೆ. ಈ ಶಕುನವನ್ನು ಪ್ರತಿಷ್ಠೆಯ ಪ್ರತಿಕ್ರಿಯೆಯಾಗಿ ಆಚರಿಸುತ್ತಾರೆ. ಮೂರು ರೀತಿಯ ಶಕುನಗಳನ್ನು ಕುರಿತು ವಿವರಿಸಲಾಗಿದೆ.

ಶಕುನ ೧

ಭೂತ, ಪ್ರೇತದಿಂದ ಭಾದಿಸುವವರ ಬಿಡಾರದ ಮುಂದೆ, ಗಜ ಸ್ಥಳದಲ್ಲಿ ಸಗಣಿಯಿಂದ ಸಾರಿಸಿ ಆ ಸ್ಥಳದಲ್ಲಿ ಸ್ವಲ್ಪ ಜೋಳ ಹಾಕಿ ಅದರ ಮೇಲೆ ನೀರು ತುಂಬಿದ ಹಿತ್ತಾಳೆ ಚಂಬನ್ನು ಇಡುತ್ತಾರೆ. ಈ ಸಮುದಾಯದ ಒಬ್ಬ ಯಜಮಾನ ಮುಖ ತೊಳೆದು ಅರಿಷಿಣ, ಕುಂಕುಮ ಹಚ್ಚಿ ಪೂಜಿಸಿದ ಬಳಿಕ, ಒಬ್ಬ ಕುಲಸ್ಥನು ಆ ಚಂಬಿನ ಕಂಠದ ಮೇಲೆ ಕಾಲಿಟ್ಟು ತುದಿಗಾಲಲ್ಲಿ ಕುಳಿತು. ಎರಡು ಕೈಗಳನ್ನು ಆ ಕಡೆ ಈ ಕಡೆ ನೆಲಕ್ಕೆ ಊರಿಸುವರು. ಆಗ ಒಬ್ಬ ಯಜಮಾನ ಆತನನ್ನು ಉದ್ದೇಶಿಸಿ ನೀನು ದೇವತೆಯೋ? ದೆವ್ವವೋ? ಹೇಳು ತಾಯಿ ಈ ಬಾಲಕನನ್ನು ಏಕೆ ಕಾಡುತ್ತೀ? ನಿನಗೆ ಏನೇನು ಬೇಕೋ ಅದು ತೆಗೆದುಕೊಂಡು ಹೋಗುವಿಯಂತೆ. ನೀನು ದೇವತೆಯಾದರೆ ಗಿರ್ರನೆ ಎಡಗಡೆ ತಿರುಗು. ದೆವ್ವವಾದರೆ ಗಿರ್ರನೆ ಬಲಗಡೆ ತಿರುಗು ಎಂದು ಕೇಳಿ ಕೊಳ್ಳುತ್ತಾನೆ. ಕುಲದ ಯಜಮಾನ ಕೇಳಿದಂತೆ ಎಡಗಡೆ ತಿರುಗಿದರೆ ದೇವರೆಂದು ಬಲಗಡೆ ತಿರುಗಿದರೆ ದೆವ್ವವೆಂದು ನಿರ್ಧರಿಸುತ್ತಾರೆ. ತಿರುಗದಂತೆ ತಟಸ್ಥವಾಗಿ ನಿಂತರೆ ಶರೀರದಲ್ಲಿ ರೋಗವಿದೆ ಎಂದು ನಂಬುತ್ತಾರೆ. ಆದರೆ ಯಾವ ಕಡೆಯಾದರೂ ಒಂದು ಕಡೆ ತಿರುಗುವುದು ಸಾಧಾರಣ.

ತಿರುಗುವುದರಿಂದ ದೇವತೆ ಎಂದು ತಿಳಿದರೆ ಅಮ್ಮ! ತಾಯಿ! ಎಲ್ಲಮ್ಮನಾ? ಸುಂಕ್ಲಮ್ಮನಾ? ಜಂಬಲಮ್ಮನಾ? ಎಲ್ಲಮ್ಮ ಆದರೆ ಎಡಗಡೆ ತಿರುಗು ಜಂಬಲಮ್ಮ ಆದರೆ ಬಲಗಡೆ ತಿರುಗು ಎಂದು ಕೇಳುತ್ತಾನೆ. ಎತ್ತಲೂ ತಿರಗದೆ ಇದ್ದರೆ ಮತ್ತೆ ಇಬ್ಬರು ದೇವರುಗಳ ಹೆಸರುಗಳನ್ನು ಹೇಳುತ್ತಾನೆ. ಅಷ್ಟರಲ್ಲಿ ಮನೆಯವನು ಅಮ್ಮ ನಿನಗೆ ಕೊಡುತ್ತೇನೆಂದು ಮುಡುಪು"೨೫ ಕಟ್ಟಿದ್ದೆ. ಕೈಯಲ್ಲಿ ಹಣವಿಲ್ಲದ ಕಾರಣ ಬರಲಾಗಲಿಲ್ಲ. ನನ್ನದು ತಪ್ಪಾಗಿದೆ ಎಂದು ದವಡೆಗೆ ಬಡಿದುಕೊಳ್ಳುತ್ತಾನೆ. ಅದಕ್ಕಾಗಿ ಕೋಪಗೊಂಡಿರುವೆಯಾ ತಾಯಿ ತಪ್ಪೋ ಒಪ್ಪೋ ಈಗ ಕೊಡುತ್ತೇನೆ ಎಂದು ಕೈಮುಗಿಯುತ್ತಾನೆ. ಆಗ ಕುಲದ ಯಜಮಾನ ತಾಯಿ ನಿಮ್ಮ ಮನುಷ್ಯನಿಗೆ ಚೆನ್ನಾಗಿ ಆಗಲಿ ಕೋಳಿಯೊ, ಜೋಡು ಕಾಯಿಯೊ ಮುಡುಪು ಸಲ್ಲಿಸುತ್ತಕೇನೆ. ಒಪ್ಪಿಕೋ ಎಂದು ಕೇಳಿಕೊಳ್ಳುತ್ತಾನೆ. ಆ ಮನುಷ್ಯ ಎರಡು ದಿನದಲ್ಲಿ ಎದ್ದು ಕುಳಿತುಕೊಳ್ಳುತ್ತಾನೆ. ಆಗ ನಿನ್ನ ಮಾಯೆ ತೋರಿಸಿದಿನೋಡು ತಾಯಿ ಎಂದು, ಒಪ್ಪಿಕೊಂಡ ಪ್ರಕಾರ ಕೋಳಿ, ಕುರಿ, ಬಲಿಕೊಟ್ಟು ಪೂಜಿಸಿ ತೃಪ್ತಿಪಡಿಸುತ್ತಾರೆ.

ದೇವತೆ ಆಗದೆ ದೆವ್ವವಾಗಿದ್ದರೆ, ಪ್ರತಿಸಾರಿ ಎರಡು ಹೆಸರು ಹೇಳಿ ತಿರುಗು ಎಂದು ಹೇಳುತ್ತಾರೆ. ಸಾಧಾರಣವಾಗಿ ಸ್ವಲ್ಪ ದಿನದ ಹಿಂದೆ ಸತ್ತಂತಹ ವ್ಯಕ್ತಿಯ ಹೆಸರೇ ಸೂಚಿಸುತ್ತದೆ. ಅನುಮಾನವಿದ್ದು ಸತ್ತವರ ಹೆಸರುಗಳನ್ನೆಲ್ಲಾ ಹೇಳುತ್ತಾರೆ. ಎಷ್ಟು ದೆವ್ವ ಹಿಡಿದಿರುತ್ತದೆಯೇ ಅಷ್ಟು ಬಲಿಕೊಡಬೇಕಾಗುತ್ತದೆ. ಹೆಂಡ, ಸರಾಯಿ ಕುಡಿಸಿ ದೇವರು ದೆವ್ವವನ್ನು ತೃಪ್ತಿಪಡಿಸುತ್ತಾರೆ.

ಶಕುನ ೨

ಅಕ್ಕಿಯನ್ನು ರಾಶಿ ಹಾಕಿ ಅದರ ಮೇಲೆ ತುಂಬಿದ ಕೊಡ ಅಥವಾ ಗಡಿಗೆ ಇಡುತ್ತಾರೆ ಅದಕ್ಕೆ ಅರಿಷಿಣ, ಕುಂಕುಮ ಹಚ್ಚಿ, ಪೂಜೆ ಸಲ್ಲಿಸಿ ಕೈ ಮುಗಿಯುತ್ತಾರೆ. ಇಬ್ಬರು ಕುಲಸ್ಥರು ಆ ಗಡಿಗೆಯನ್ನು ಆ ಕಡೆ ಈ ಕಡೆ ಅದಿಮಿಟ್ಟು ಬಗ್ಗಿ ನಿಂತುಕೊಳ್ಳುತ್ತಾರೆ. ಮೊದಲಿನ ಹಾಗೆ ಕುಲದ ಹಿರಿಯ ಎಡಗಡೆ, ಬಲಗಡೆ ತಿರುಗು ಎಂದು ಹೇಳುತ್ತಾರೆ. ದೇವರಾದರೆ ಎಡಗಡೆ ದೆವ್ವವಾದರೆ ಬಲಗಡೆ ಆಮೇಲೆ ದೆವ್ವವೇ ಆಗಿದ್ದಾರೆ ಯಾರು ಎಂದು ಹೆಸರುಗಳನ್ನು ಹೇಳುವುದು, ದೇವರಾದರೆ ಯಾವ ದೇವರೆಂದು ಹೇಳಿ ಈ ಕಡೆ ಆ ಕಡೆ ತಿರುಗು ಎಂದು ಹೇಳುವುದು. ಉಳಿದಿದ್ದು ಮೊದಲಿನಂತೆ ಮುಡುಪು ಅಥವಾ ಅವುಗಳ ಕೋರಿಕೆಯನ್ನು ಪೂರೈಸುವರು.

ಶಕುನ ೩

ಒಬ್ಬ ಕುಲಸ್ಥನ ಕೈಯಲ್ಲಿ ಬೂದಿ ಹಾಕುತ್ತಾರೆ. ದೆವ್ವ, ದೇವರೋ ಹಿಡಿದವರ ತಲೆಯಲ್ಲಿಂದ ಒಂದು ಹೇನು ತೆಗೆದು ಆ ಬೂದಿಯಲ್ಲಿ ಹಾಕುವರು. ಆಗ ಬೂದಿಯಿಂದ ಹೇನು ಹೊರಗೆ ಬರುವ ದಿಕ್ಕನ್ನು ನೋಡಿ ನಿರ್ಣಯಿಸುತ್ತಾರೆ. ದೇವತೆಯಾದರೆ ಎಡಗಡೆ ನಡೆಯಬೆಕು. ದೆವ್ವವಾದರೆ ಬಲಗಡೆಗೆ ನಡೆಯಬೇಕು ಎಂಬ ನಿರೀಕ್ಷೆಯನ್ನೆ ಜವಾಬಾಗಿ ತೆಗೆದುಕೊಳ್ಳುತ್ತಾರೆ. ಮತ್ತೊಂದು ಪ್ರಶ್ನೆಯನ್ನು ಹಾಕಿ ಆ ಹೇನನ್ನು ಬೂದಿಯಲ್ಲಿ ಬಿಟ್ಟು ಹೊರಗೆ ಬರುವುದನ್ನೇ ನೋಡುತ್ತಾರೆ. ಆ ಶಕುನದಿಂದ ದೆವ್ವವೆಂದು

ತಿಳಿದರೆ, ಹಿಡಿಯುವುದಕ್ಕೆ ಕಾರಣವೇನೆಂದು ಕೇಳುತ್ತಾರೆ. ತನಗೆ ಅನ್ಯಾಯ ಮಾಡಿದ್ದಾನೆಂದು, ತನ್ನ ಶತ್ರುವಾದುದಕ್ಕೆ ಆತನ ಮೇಲೆ ಸೇಡು ತೀರಿಸಿಕೊಳ್ಳಲು ಹಿಡಿದಿದ್ದೇನೆಂದು ಸಾಯಿಸಿಕೊಂಡೇ ಹೋಗುತ್ತೇನೆಂದು ದೆವ್ವ ಅಭಿಪ್ರಾಯ ಪಡುತ್ತದೆಂದು ಶಕುನದಿಂದ ತಿಳಿಯುತ್ತಾರೆ. ಹೀಗೆ ತಿಳಿದ ಮೇಲೆ ಏನು ಬೇಕೋ ಕೇಳಿ ಶಾಂತಿ ಮಾಡಿಸುತ್ತಾರೆ. ಬೇಟೆ ಕೇಳಿದರೆ ಬೇಟೆಯನ್ನು, ಸಿಹಿ ಊಟ ಕೇಳಿದರೆ ಸಿಹಿ ಊಟವನ್ನು ಉಣಬಡಿಸಿ, ಪೂಜೆ ಸಲ್ಲಿಸಿ ಆಮೇಲೆ ಎಲ್ಲರೂ ಊಟಮಾಡುವರು.

ಭೂತಕ್ಕೆ ಆಹಾರ ಹಾಕುವ ಪದ್ಧತಿ

ಊರು ಬಿಟ್ಟು ಹೊರಗಡೆ ಒಂದು ಪ್ರಸಕ್ತವಾದ ಸ್ಥಳವನ್ನು ಆಯ್ದುಕೊಂಡು ಕೋಳಿ, ಮೇಕೆ, ಕುರಿ, ಹಂದಿ ಇವುಗಳಲ್ಲಿ ಬಲಿ ಕೇಳಿದ ಪ್ರಾಣಿಯನ್ನು ಒಂದೋ ಅಥವಾ ಎರಡನ್ನು ತಂದು, ಹೊಸ ಗಡಿಗೆಯನ್ನು, ಮತ್ತು ಬೇಕಾದ ಅಡುಗೆಯ ಪರಿಕರಗಳನ್ನು ತೆಗೆದುಕೊಂಡು ಆ ಸ್ಥಳಕ್ಕೆ ಬರುತ್ತಾರೆ. ಸಾಮಾನ್ಯವಾಗಿ ಕೆರೆ ಅಥವಾ ಬಾವಿಯ ಪಕ್ಕದ ಸ್ಥಳವನ್ನೇ ಆಯ್ಕೆಮಾಡಿಕೊಳ್ಳುವರು. "ಸೀತಾಫಲ ಗಿಡದ ತಪ್ಪಲಿನಿಂದಲೋ, ಅಮರೇ ಗಿಡದ ತಪ್ಪಲಿನಿಂದಲೋ ಇವು ಸಿಗದಿದ್ದರೆ ಬೇವಿನ ಗಿಡದ ಕೊಂಬೆ ತಂದು ಅದರಿಂದ ದೆವ್ವಕ್ಕೆ ಸಣ್ಣ ಗುಡಿ ಕಟ್ಟಿ ದೀಪ ಮುಡಿಸುತ್ತಾರೆ. ನೆಲದ ಮೇಲೆ ಅರಿಷಿಣ, ಕುಂಕುಮದಿಂದ ಬೊಟ್ಟು ಇಟ್ಟು, ಊದುಬತ್ತಿ ಹಚ್ಚಿ ಅಲ್ಲಿ ಪ್ರಾಣಿಯನ್ನು ಬಲಿಕೊಟ್ಟು ತೆಂಗಿನಕಾಯಿ ಒಡೆಯುತ್ತಾರೆ. ನಿಂಬೆ ಹಣ್ಣನ್ನು ಕತ್ತರಿಸಿ ಇಟ್ಟು ಅನ್ನವನ್ನು ರಾಶಿ ಹಾಕಿ ಎಡೆಮಾಡುತ್ತಾರೆ." ಬೇಯಿಸಿದ ಮಾಂಸದಲ್ಲಿ ಮುಖ್ಯ ಅವಯವಗಳನ್ನು ಎಡೆ ಅರ್ಪಿಸುತ್ತಾರೆ. ಇಂತಹ ದೇವತೆ ಅಥವಾ ದೆವ್ವಗಳಿಗೆ ಪ್ರಿಯವಾದ ಪಾನೀಯಗಳಾದ ಹೆಂಡ, ಸರಾಯಿ ಇಡುತ್ತಾರೆ. ಗಂಡು ದೆವ್ವವಾದರೆ ಬೀಡಿಯನ್ನು ಹಚ್ಚಿ ಮಣ್ಣಿನಲ್ಲಿ ನಿಲ್ಲಿಸುತ್ತಾರೆ. ಹೆಣ್ಣು ದೆವ್ವವಾದರೆ ಎಲೆ ಅಡಿಕೆ ಇಡುತ್ತಾರೆ."[೨೬]

ಎಡೆ ಸಿದ್ಧವಾದ ಮೇಲೆ ದೆವ್ವ ಹಿಡಿದವನಿಂದ ಕೈಮುಗಿಸುತ್ತಾರೆ. ನೀನು ಕೇಳಿದಂತೆ ಇಟ್ಟಿದ್ದೇವೆ. ಚೆನ್ನಾಗಿ ತಿಂದು ತೃಪ್ತಿ ಹೊಂದಿ ಹೋಗಿಬಿಡು ನನ್ನನ್ನು ಈ ಬಂಧನದಿಂದ ಮುಕ್ತಿಗೊಳಿಸು ಎಂದು ಕೇಳಿದನಂತರ ದೆವ್ವ ಹಿಡಿದವರಿಗೆ ಎಡೆ ಆಹಾರ ತಿನ್ನಿಸುತ್ತಾರೆ. ಹಾಗೂ ಕುಟುಂಬದವರೆಲ್ಲಾ ಊಟ ಮಾಡುತ್ತಾರೆ. ನಂತರ ಬಂದ ಕುಲಸ್ಥರೆಲ್ಲಾ ಊಟ ಮಾಡುತ್ತಾರೆ. ಉಳಿದಿದ್ದು ಮನೆಗೆ ಒಯ್ಯುವ ಹಾಗಿಲ್ಲ ಒಯ್ದರೆ ಹಿಂದೆ ಬರುತ್ತದೆಂಬ ನಂಬುಕೆ ಇದೆ. ಮಾಡಿದ ಆಹಾರ ಉಳಿಯದಂತೆ ಎಲ್ಲರನ್ನು ಕರೆದು ಊಟ ಬಡಿಸುತ್ತಾರೆ. ಊಟ ಮಾಡಿದ ಮೇಲೆ ಎಲ್ಲರೂ ಸ್ವಲ್ಪ ದೂರ ಹೋಗಿ ನಿಂತುಕೊಂಡು, ಕುಲದ ಹಿರಿಯ ಹಿಂದಕ್ಕೆ ತಿರುಗಿ ದಾರಿಗೆ ಅಡ್ಡವಾಗಿ ಮುಳ್ಳಿನ ಬೇಲಿಯನ್ನು ಹಾಕುತ್ತಾನೆ. ಹೀಗೆ ಹಾಕುವುದರಿಂದ ದೆವ್ವಕ್ಕೆ ದಾರಿ ತಪ್ಪಿ ವಾಪಾಸ್ ಬರುವುದಿಲ್ಲ ಎಂದು ನಂಬುತ್ತಾರೆ. ಇದಲ್ಲದೆ ಅವರು ನಿಂತಲ್ಲಿ ಒಂದು ಕೊಬ್ಬರಿ ಬಟ್ಟಲನ್ನು ಹೊಡೆದು ಸಣ್ಣ ಸಣ್ಣ ತುಂಡುಮಾಡಿ ಎಲ್ಲರೂ ತಿಂದು ಹೋಗಬೇಕು. ಹೀಗೆ ಮಾಡುವುದರಿಂದ ದೆವ್ವ ಅವರ ಹಿಂದೆ ಬರುವುದಿಲ್ಲ. ಅಲ್ಲಿಂದ ನೇರವಾಗಿ ಸರಾಯಿ ಅಂಗಡಿಗೆ ಹೋಗಿ ಎಲ್ಲರೂ ಸಾರಾಯಿ ಕುಡಿಯುತ್ತಾರೆ. ಆ ಖರ್ಚು ಕೂಡ ದೆವ್ವ ಬಡಿದವರದೇ ಆಗಿರುತ್ತದೆ. ಅಷ್ಟರಲ್ಲಿ ಅವನ ದೆವ್ವ ಬಿಟ್ಟು ಹೋಗಿರುತ್ತದೆ ಎಂದು ಭಾವಿಸುತ್ತಾರೆ.

[illegible]

[illegible]

[illegible]

[illegible]

ಭೂತವನ್ನು ಕೊಲ್ಲಿಸುವ ವಿಧಾನಗಳು

ಅಂಜನ ಹಾಕಿಸಿ ನೋಡಿ ಸಾಯಿಸುವುದು, ಭೂತ ವೈದ್ಯನಿಂದ ಕೊಲ್ಲಿಸುವುದು, ಅಂಜನ ಹಾಕಿ ನೋಡುವವನು ಕಾಡಿಗೆ ಎಣ್ಣೆ ಕಲಸಿ ಅಂಗೈಗೆ ಹಚ್ಚಿಕೊಂಡು ನೋಡಿದರೆ, ಅಂಜನ ಜೂರ್ಣವನ್ನು ಒಂದು ಎಲೆಗೆ ಅಂಟಿಸಿ ಅಥವಾ ಒಂದು ತುಂಬಿದ ಕೊಡದಲ್ಲಿ ಹಚ್ಚಿ ಚಿಕ್ಕ ಮಕ್ಕಳಿಂದ ಕೆಲವರು ನೋಡಿಸುತ್ತಾರೆ. ನೋಡಿದ ಮಕ್ಕಳು ದೆವ್ವ ಆದವನು ಇಷ್ಟು ದಪ್ಪಗಿದ್ದಾನೆ, ಮೀಸೆ ಬಿಟ್ಟಿದ್ದಾನೆ, ನಿಂತಾದ್ದಾನೆ, ಅವರು ಏನು ಮಾಡುತ್ತಿರುತ್ತಾನೆ ಎಂಬ ಸುಳಿವು ನೀಡುತ್ತಾರೆ. ಅದೆಲ್ಲಾ ಈ ಅಂಜನದಲ್ಲಿ ಕಾಣಿಸುವುದಾಗಿ ಹೇಳುತ್ತಾರೆ.

ಭೂತವೈದ್ಯನು ಒಬ್ಬೊಬ್ಬರು ಒಂದೊಂದು ವಿಧವಾಗಿ ಭೂತಗಳನ್ನು ಕೊಲ್ಲಿಸುತ್ತಾರೆ. ಕೆಲವರು ಭೂತವನ್ನು ಹಿಡಿದುಕೊಂಡು ಬಂದು ಹೊಸ ಗಡಿಗೆಯಲ್ಲಿ ಇರಿಸುತ್ತಾರೆ. ಅದರಲ್ಲಿ ಗೋದಿಹಿಟ್ಟು, ನೀರುಹಾಕಿ ಮುಚ್ಚಳ ಗಟ್ಟಿಯಾಗಿ ಮುಚ್ಚಿ ಮೇಲೆ ಒಂದು ಬಟ್ಟೆ ಕಟ್ಟಿ ಅದನ್ನು ಚೆನ್ನಾಗಿ ಕಾಯಿಸಿ ಬೆಂದಮೇಲೆ ಅದನ್ನು ಮಸೆದು ಸಾಯಿಸುತ್ತಾರೆ.

ಇನ್ನೂ ಕೆಲವರು ಕೋಳಿಯ ಹುಂಜವನ್ನು ಬಲಿಕೊಟ್ಟು ಅದರ ಕಂಠದಲ್ಲಿರುವ ಸರವನ್ನು ತೆಗೆದು ಅದರಲ್ಲಿ ಭೂತವನ್ನು ಇಳಿಸಿ, ಸಣ್ಣ ಮಣ್ಣಿನ ಗಡಿಗೆಯಲ್ಲಿ ಹಾಕಿ, ಗಡಿಗೆಯ ಗಟ್ಟಿಯಾಗಿ ಕಟ್ಟಿ, ಬೆಂಕಿಯಲ್ಲಿ ಬೇಯಿಸಿ ಸುಟ್ಟು ಹಾಕುತ್ತಾರೆ.

ಒಬ್ಬ ಭೂತವೈದ್ಯನು ಭೂತವನ್ನು ಸೀಸದಲ್ಲಿ ಇಳಿಸಿ, ಊರಿಂದ ದೂರ ತೆಗೆದುಕೊಂಡು ಹೋಗಿ ಭೂಮಿಯಲ್ಲಿ ಹೂತು ಹಾಕಿಸುತ್ತಾನೆ. ಕೆಲವರು ದೆವ್ವವನ್ನು ದೇವರೆಂದು ತಿಳಿದುಕೊಂಡು ಅವರನ್ನು ಶಾಂತಿಪಡಿಸುವ ಪದ್ಧತಿಯಿದೆ. ಈ ಪದ್ಧತಿ ಪೂರ್ವದ ಈಜಿಪ್ತ್ ನಾಗರಿಕತೆಯನ್ನು ನೆನಪಿಗೆ ತರುತ್ತದೆ.

ಇನ್ನು ಕೆಲವರು ದೆವ್ವವನ್ನು ಕೊಲ್ಲಿಸಲು ಕೆಲಸ ಮಾಡುವ ಒಬ್ಬ ಮಾಂತ್ರಿಕ ಇರುತ್ತಾನೆ. ಈತನು ಸುಡುಗಾಡಿನಲ್ಲಿ ಹೋಗಿ ಕೊಂದು ಬರುತ್ತಾನೆಂದು ಹೇಳುತ್ತಾರೆ. ಭೂತ ಬಿಡಿಸುವ ವೈದ್ಯರಿದ್ದಾರೆ. ಕೆಲವರು ಅಂಜನ ಹಾಕಿ ನೋಡಿ ದೆವ್ವ ಅಥವಾ ದೇವರೆಂದು ತಿಳಿದುಕೊಂಡು ಅವರನ್ನು ಶಾಂತಿಪಡಿಸುವ ಪದ್ಧತಿ ಇದೆ. ಈ ಪದ್ಧತಿಯೂ ಸಹ ಪೂರ್ವದ ಈಜಿಪ್ಟ್ ನಾಗರಿಕತೆಯನ್ನು ನೆನಪಿಗೆ ತರುತ್ತದೆ.

ಹಗಲುವೇಷಗಾರರು ತಾವು ಜೀವನದಲ್ಲಿ ಎಂತಹ ಬವಣೆಗಳನ್ನು ಅನುಭವಿಸುತ್ತಿದ್ದರೂ ಕಟ್ಟಿಕೊಂಡ ಹರಕೆಯನ್ನು ಮಾತ್ರ ತಪ್ಪದೇ ತೀರಿಸುತ್ತಾರೆ. ಆ ಸಮಯಕ್ಕೆ ತಮ್ಮಲ್ಲಿ ಹಣ ಇಲ್ಲದಿದ್ದರೆ ಸಾಲವನ್ನಾದರು ಮಾಡಿ ತೃಪ್ತಿಪಡಿಸುತ್ತಾರೆ. ಆದರೆ ಎಲ್ಲರೂ ಆಚರಿಸುವಂತೆ ಯುಗಾದಿ, ದಸರಾ ಮತ್ತು ಸಂಕ್ರಾಂತಿ ಹಬ್ಬಗಳನ್ನು ಆಚರಿಸುವುದು ಕಂಡುಬರುವುದಿಲ್ಲ.

'ಕಂಡ ದೇವರಿಗೆ ಕೈ ಮುಗಿಯುವಾತನೇ ಭಕ್ತ' ಎನ್ನುವ ರೀತಿಯಲ್ಲಿ ನೀರ ಕಂಡಲ್ಲಿ ಮುಳುಗುವರು, ಕಂಡ ದೇವರಿಗೆ ಕೈಮುಗಿಯುವರು. ಆದರೆ ತಮ್ಮ ಕಷ್ಟ ನಿಷ್ಠುರಗಳು ಮಾತ್ರ ಇಂದಿಗೂ ತೀರಿಲ್ಲ.

ಇವರು ಆ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನವನ್ನು ಸಹ ಮಾಡಿಲ್ಲ. ಏಕೆಂದರೆ ಇಷ್ಟು ದಿನಗಳು ಸ್ವಚ್ಛಂದವಾದ ಬದುಕನ್ನು ಬದುಕಿದ್ದಾರೆ. ಮೊದಲೆಲ್ಲಾ ವೇಷಗಾರಿಕೆಗೆ ರಾಜ ಮರ್ಯಾದೆಯಿತ್ತು ಅದನ್ನೇ ನಂಬಿದ ಇವರು ಮುಂದಿನ ದಿನಕ್ಕೆ ಬಚ್ಚಿಡುವುದುನ್ನು ಕಲಿಯದೇ ಅಂದಿನದನ್ನು ಅಂದೇ ಕುಡಿದು ತಿಂದು ಖಾಲಿ ಮಾಡಿದರು. ಆದರೆ ಇಂದು ಆಧುನಿಕ ಮಾಧ್ಯಮಗಳಿಂದ ಇವರ ಕಲೆ ಮೂಲೆ ಗುಂಪಾಗುತ್ತಿದೆ. ಬಹುಶಃ ಇಂದು ಇವರಿಗೆ ಜೀವನದ ಸಮಸ್ಯೆ ದಟ್ಟವಾಗಿ ಕಾಡುತ್ತಿದೆ. ಆದುದರಿಂದ ಪರ್ಯಾಯ ಬದುಕಿಗಾಗಿ ತಡಕಾಡುತ್ತಿದ್ದಾರೆ. ಇಲ್ಲಿಯವರೆಗೆ ಸರ್ಕಾರವು ಯೋಜಿಸಿರುವ ಯಾವ ಅಭಿವೃದ್ಧಿ ಕಾರ್ಯಕ್ರಮಗಳು ಇವರನ್ನು ತಲುಪಿಲ್ಲ. ಇವರಿಗೆ ಮೀಸಲಾತಿ ನೀಡಿದರೂ, ಇಷ್ಟು ದಿನ ತಾವು ಯಾವ ಪಂಗಡಕ್ಕೆ ಸೇರುತ್ತೇವೆ ಎಂಬುದು ತಿಳಿದಿಲ್ಲ ಎನ್ನುತ್ತಾರೆ. ಇವರಿಗೆ ಇದ್ದ ಮೀಸಲಾತಿಯನ್ನು ಇತರೆ ಮುಂದುವರೆದ ಪಂಗಡಗಳು ಪಡೆದುಕೊಂಡಿರುವುದು ವಾಸ್ತವ ಸಂಗತಿಯಾಗಿದೆ. ಇನ್ನು ಮುಂದೆಯಾದರೂ ಈ ಸಮುದಾಯಕ್ಕೆ ಸಾಮಾಜಿಕನ್ಯಾಯ ದೊರೆತು ಇತರೆ ಸಮುದಾಯಗಳಂತೆ ಪ್ರಮುಖ ವಾಹಿನಿಗೆ ಸೇರಿಕೊಳ್ಳಬೇಕಾದ ಅನಿವಾರ್ಯತೆ ಇದೆ.

೭.೬. ವೈದ್ಯ

ಮನುಷ್ಯನಿಗೆ ಎಲ್ಲದಕ್ಕಿಂತಲೂ ಮುಖ್ಯವಾದದ್ದು ಆರೋಗ್ಯ. ಅದಕ್ಕಾಗಿಯೇ ಆರೋಗ್ಯವೇ ಮಹಾಭಾಗ್ಯ ಎನ್ನುವ ಗಾದೆಮಾತು ಹುಟ್ಟಿಕೊಂಡಿದೆ. ರೋಗಭಾದೆಯನ್ನು ತಾಳಲಾರದ ವ್ಯಕ್ತಿ ಈ ಮಾತನ್ನು ಹೇಳಿರುವ ಸಾಧ್ಯತೆ ಇದೆ. ಪೂರ್ವಕಾಲದಿಂದಲೂ ಪೂರ್ವಕಾಲದಿಂದಲೂ ಔಷಧಿಯ ಮೂಲಕ ಗುಣಪಡಿಸುತ್ತಾ ಬಂದಿದ್ದಾರೆ. ರೋಗ ಹುಟ್ಟಿದಾಗಲೇ ನಿವಾರಣೋಪಾಯಗಳನ್ನು ಮನುಷ್ಯ ಕಂಡುಕೊಂಡಿದ್ದಾನೆ. ಪ್ರಾಚೀನ ಕಾಲದಿಂದಲೂ ಹಲವಾರು ಕಾವ್ಯ ಕೃತಿಗಳಲ್ಲಿ ಆಯುರ್ವೇದ ಗ್ರಂಥಗಳಲ್ಲಿ ಇಂತಹ ಔಷಧಿಗಳ ಬಗ್ಗೆ ಪ್ರಸ್ತಾಪ ಬಂದಿದೆ. ಮಾನವನು ನಿರ್ವಹಿಸುವ ಹಲವಾರು ವೃತ್ತಿಗಳಲ್ಲಿ ವೈದ್ಯ ವೃತ್ತಿ ಬಹಳ ಪವಿತ್ರವಾದುದು. ಜಾನಪದ ವಿಜ್ಞಾನಿಗಳು ಜಾನಪದ ವೈದ್ಯವನ್ನು ಆಚಾರ ಮತ್ತು ಸಂಪ್ರದಾಯದಲ್ಲಿ ಸೇರಿಸಿದ್ದಾರೆ.

ಡಿ.ಸಿ. ಜಾರ್ವಿನ್ 'Follk Medicine' ಎನ್ನುವ ಗ್ರಂಥದಲ್ಲಿ ಜಾನಪದ ವೈದ್ಯವನ್ನು ಈ ರೀತಿಯಾಗಿ ವಿಂಗಡಿಸಿದ್ದಾರೆ.

ಜಾನಪದ ವೈದ್ಯ

ಪ್ರಕೃತಿ ವೈದ್ಯ 'ಮಂತ್ರತಂತ್ರ ವೈದ್ಯ'

ವೃಕ್ಷ ಸಂಬಂಧ ವೈದ್ಯ ಪ್ರಾಣಿ ಸಂಬಂಧ ವೈದ್ಯ ಖನಿಜ ಸಂಬಂಧ ವೈದ್ಯ

೧.ಅ. ಪ್ರಕೃತಿ ವೈದ್ಯ : ಇದರಲ್ಲಿ ಕಾಯಿ, ಎಲೆ, ಚಕ್ಕೆ, ಬೀಜ, ಕೊಂಬೆ, ಮಿಡಿ, ತೊಗಟೆ, ಬೀಜ, ಗಿಡದ ಹಾಲು, ಮೊದಲಾದವು ಈ ವೈದ್ಯದಲ್ಲಿ ಸೇರುತ್ತವೆ.

ಬ. ಪ್ರಾಣಿ ಸಂಬಂಧ ವೈದ್ಯ : ಇದರಲ್ಲಿ ಪ್ರಾಣಿಗಳ ಮಾಂಸ, ಜೀರ್ಣಾಶಯ, ರಸಗ್ರಂಥಿಗಳು, ದಂತ ಮೂಳೆ, ಕೊಬ್ಬು ಮೊದಲಾದವು ಚಿಕಿತ್ಸೆಗೆ ಬಳಸಲ್ಪಡುತ್ತವೆ.

ಕ. ಖನಿಜ ಸಂಬಂಧ ವೈದ್ಯ : ಲವಣ, ಸುಣ್ಣ, ಕರ್ಪೂರ, ಸುವರ್ಣ ಸಿಂಧೂರ, ಅಬ್ರಕ, ಶಿಲಾಜಿತ್ತು, ಪಾಮಹೂ, ಕುಂಕುಮದ ಹೂ, ಆನದಂ ಭೈರವಿ, ಗಂಧಶಿಲೆ, ಲೋಕನಾಥಂ, ಜರಾಂಕುಶಂ, ನೀರು ಸಾಮ್ರಾಣಿ ಮೊದಲಾದ ವಸ್ತುಗಳು, ವೈದ್ಯಕ್ಕೆ ಉಪಯೋಗಿಸುತ್ತಾರೆ.

ಕೆಲವು ರೋಗಗಳು ಅವುಗಳಿಗೆ ವೇಷಗಾರರ ವೈದ್ಯ

ಇದರಲ್ಲಿ ಅನೇಕ ವ್ಯಾದಿಗಳಿಗೆ ಭಿನ್ನವಿಭಿನ್ನವಾದ ಔಷಧಿ ವಿಧವಿಧವಾದ ಚೂರ್ಣ ಇವರ ವ್ಯವಹಾರದಲ್ಲಿದೆ. ಇವುಗಳನ್ನು ವೈದ್ಯ ವೃತ್ತಿಯಲ್ಲಿರುವವರು ಕೊಡುವವುಗಳಲ್ಲದೆ, ಅವರೇ ತಯಾರಿಸಿಕೊಳ್ಳುವ ಜಾನಪದ ವೈದ್ಯವನ್ನು ಕೂಡ ಇಲ್ಲಿ ಕೊಡಲಾಗಿದೆ. ಈ ವ್ಯವಸ್ಥೆ ಪುರಾತನದಿಂದಲೂ ಜಾರಿಯಲ್ಲಿರುವುದನ್ನು ಕಾಣಬಹುದು.

ಕಜ್ಜಿ : ಬೇವಿನತಪ್ಪಲು, ಸೀತಾಫಲ ಬೀಜ ಸಣ್ಣಗೆ ಕುಟ್ಟಿ ಶರೀರಕ್ಕೆ ಹಚ್ಚುತ್ತಿದ್ದರೆ ಕಜ್ಜಿ ಕಡಿಮೆಯಾಗುತ್ತದೆ.

ಇಸವಿ : ಬಾರೆಯ ಮುಳ್ಳಿನಿಂದಾಗಲಿ, ನೆಲ್ಲಿನ ಕಾಳಿನಿಂದಾಗಲಿ ಅದರ ಸುತ್ತಲೂ ದುಂಡಗೆ ರಕ್ತ ಬರುವಂತೆ ಕೆದರಬೇಕು. ಅದು ಬೆಳೆಯದಂತೆ ಕಡಿಮೆ ಕಡಿಮೆಯಾಗುತ್ತಾ ಹೋಗುತ್ತದೆ.

ಪೈತ್ಯ : ಬಿಲ್ವಪತ್ರೆ, ಮತ್ತು ಜೀರಿಗೆ ಎರಡನ್ನು ಸೇರಿಸಿ ಜಜ್ಜಿ ತಿನ್ನಬೇಕು. ಇಲ್ಲವೇ ಹುಣಿಸೇಹಣ್ಣು ಜೀರಿಗೆ ಕರಿದು ನೀರಿನಲ್ಲಿ ಕರಿಸಿ ಕುಡಿಯಬೇಕು. ಅಥವಾ ನಿಂಬೆರಸ, ಜೇನುತುಪ್ಪ ಕರಿಸಿ ತಿಂದರೆ ಪೈತ್ಯ ಕಡಿಮೆಯಾಗುತ್ತದೆ.

ಹಲ್ಲುನೋವು : ಔಡಲ ಗಿಡದ ಹಾಲು ಹಲ್ಲಿಗೆ ಹಚ್ಚಬೇಕು. ಇಲ್ಲವೆ, ಉತ್ತರಾಣಿಕಡ್ಡಿ, ಬೇವಿನಕಡ್ಡಿ, ತುಂಬೆಗಿಡದ ಕಡ್ಡಿ ಇವುಗಳಲ್ಲಿ ಒಂದರಿಂದ ದಿನಾಲು ಹಲ್ಲು ತಿಕ್ಕಿದರೂ ಕಡಿಮೆಯಾಗುತ್ತದೆ. ಅಥವಾ ನಿಂಬೆ ಉಪ್ಪನ್ನು ನೀರಿನಲ್ಲಿ ಕುದಿಸಿ ಹತ್ತಿಗೆ ತೋಯಿಸಿ ಹಲ್ಲಿಗೆ ಇಡಬೇಕು. ನಂತರ ಹತ್ತಿಯಿಂದ ಒರೆಸಿದರೆ ಹುಳ ಸತ್ತು ಹೊರಗೆ ಬರುತ್ತದೆ.

ಪಾರ್ಶ್ವ ತಲೆನೋವು : ಮಸಾಲೆ ಚಕ್ಕೆ, ಗೋರಿಂಟ ಆಕು, ಬಿಳಿಮೆಣಸು, ಶುಂಠಿ, ಒಂಟಿ ಬೆಳ್ಳುಳ್ಳಿ ಎಲ್ಲಾವನ್ನು ಕರಿಸಿ ನೀರಿನಲ್ಲಿ ಕುದಿಸಿ ಅದರ ರಸವನ್ನು ಕುಡಿಯಬೇಕು.

ಮಲಬದ್ಧತೆ : ಸೀಗೆಕಾಯಿ ಎಲೆ, ಕೋತುಂಬರಿ ಬೀಜ, ಕರಿಬೇವಿನ ಎಲೆ ಕುದಿಸಿ ಕಷಾಯ ಮಾಡಿ ಕುಡಿಯಬೇಕು. ಇಲ್ಲವೇ ಹುಣಿಸೇ ಚಿಗುರು ಮಾಡಿ ತಿನ್ನುವುದು ಅಥವಾ, ಅಡವಿ ಜೀರಿಗೆ ಜಜ್ಜಿ ತಿನ್ನಬೇಕು.

ಹಾವು ಕಡಿತ : ದುಷ್ಪಪಾಲ, ನಾಗಮುಷ್ಟಿ, ನಾಗಮಲ್ಲೆ ಹರಿದು ಹೊಟ್ಟೆಯಲ್ಲಿ ಕೊಡಬೇಕು. ಕಣ್ಣಲ್ಲಿ ಇಡಬೇಕು, ಕಡಿದ ಭಾಗದಲ್ಲಿ ಇಟ್ಟು ಕಟ್ಟಬೇಕು. ಹೊಟ್ಟೆಗೆ ಆಹಾರ, ನೀರು ಕೊಡಬಾರದು, ರಾತ್ರಿ ನಿದ್ರೆ ಮಾಡಬಾರದು.

ನಾಯಿಕಡಿತ : ಹಿಪ್ಪೆ ಚಕ್ಕೆ ಪುಡಿಮಾಡಿ ಕೊಡುತ್ತಾರೆ. ಹಂದಿರಕ್ತದಲ್ಲಿ ಮೆಣಸಿನ ಪುಡಿ ಕಲಯಿಸಿ ನುಂಗಿಸುತ್ತಾರೆ. ಹಂದಿಮಾಂಸದ ಅಡುಗೆ ಮಾಡಿಕೊಂಡು ತಿನ್ನುತ್ತಾರೆ.

ಹುಚ್ಚುನಾಯಿ ಕಡಿತ : ತೊಗರಿ ಗಿಡದಲ್ಲಿ ಹುಳು ಗೂಡು ಕಟ್ಟಿರುತ್ತದೆ. ಕರಿಯಾಗಿದ್ದು ಕೆಂಪು ಮಚ್ಚೆಗಳಿರುತ್ತವೆ, ಅಂತಹ ಹುಳುಗಳನ್ನು ತಂದು ಒಣಗಿಸಿ ಪುಡಿಮಾಡಿ ಕೊಂಡಿರುತ್ತಾರೆ. ಅದನ್ನು ಮುಸರೆ ನೀರಿನಲ್ಲಿ ಇರುವೆ ತಲೆಯಷ್ಟು ಕೊಡಬೇಕು. ಅದನ್ನು ತಿಂದ ಮೇಲೆ ಅಂಬಲಿ ಮಜ್ಜಿಗೆ ಊಟ ಮಾಡಿಸಬೇಕು.

ಇರುಳುಗಣ್ಣು : ಮೇಕೆಯ ಹೃದಯವನ್ನು ಕಟ್ಟಿಗೆಗೆ ಚುಚ್ಚಿ ಸುಟ್ಟು ಅದನ್ನು ತೆಗೆದು ಬಿಳಿ ಮೆಣಸಿನ ಪುಡಿ, ಪೊಡಪತ್ರ ಎಲೆಯ ರಸವನ್ನು ತುಂಬಿ ಮತ್ತೆ ಕಾಯಿಸಿ ಮೂರು ಹೊತ್ತು ಒಂದೊಂದು ತುಂಡುಕೊಡಬೇಕು.

ನಂಜು : ತಾಂಬೇಲಿ, ಉಡ, ಕರಿಯಕೋಳಿ ಇವುಗಳ ಹೊಟ್ಟೆಯಲ್ಲಿರುವ ವಿಷದ ಗುಡ್ಡೆಯನ್ನು ನುಂಗಬೇಕು. ಇಲ್ಲವೇ ಕರಿಯ ಜೀರಿಗೆಯ ಪುಡಿಮಾಡಿ ತಿನ್ನಿಸಬೇಕು. ಅಥವಾ ಅಡವಿ ತೊಂಡೆಕಾಯಿ, ಸಣ್ಣ ಇಂಗಳಕಾಯಿ ಸೇರಿಸಿ ಕುಟ್ಟಿ ಪ್ರತಿದಿನ ಕೊಡಬೇಕು.

ಗಡ್ಡೆ-ಬಾವು : ಕೊಂಡ್ರಿಗಾಡು ಮೂಳೆ ಮತ್ತು ಜಿಂಕೆಯ ಕೊಂಬನ್ನು ಗಂಧ ತೇದಂತೆ ತೇದು ಗಡ್ಡೆಗೆ, ಬಾವುಗಳಿಗೆ ಹಚ್ಚಿದರೆ ಕಡಿಮೆಯಾಗುತ್ತದೆ. ಆಲದ ಗಿಡದ ಹಾಲು, ಹತ್ತೆಣ್ಣು ಗಿಡದ ಹಾಲು ಹಚ್ಚಿದರೂ ಕಡಿಮೆಯಾಗುತ್ತದೆ.

ಹೊಟ್ಟೆನೋವು : ಬಾಣಂತಿಯರಿಗೆ ಹೊಟ್ಟೆ ನೋವು ಬಂದರೆ ತಾಂಬೇಲಿಯ ಚಿಪ್ಪು, ಕೊಂಡ್ರಿಗಾಡನ ಮೂಳೆ, ಜಿಂಕೆಯ ಕೊಂಬು ಗಂಧದಂತೆ ತೇದು ಹೊಟ್ಟೆಯಲ್ಲಿ ಕೊಡಬೇಕು. ಸಣ್ಣ ಹುಡುಗರಾದರೆ ಜಿಂಕೆಯ ಜೀರ್ಣನಾಳ ಒಣಗಿಸಿ ಮೊಲೆಯ ಹಾಲಿನಲ್ಲಿ ಕಲಸಿ ಕೊಡಬೇಕು.

ಕುಷ್ಠರೋಗ : ನಾಗರಹಾವಿನ ತಲೆಯನ್ನು ತೆಗೆದು ಬಿಸಾಕಿ ಉಳಿದುದನ್ನು ಪಲ್ಯಮಾಡಿ ತಿನ್ನಿಸಬೇಕು. ಆ ಸಮಯದಲ್ಲಿ ಅಡವಿ ಇಲಿ, ಉಡ, ಅಡವಿಬೆಕ್ಕು ತಿನ್ನಬಾರದು. ಉಡ, ಮುಂಗಿಸಿ, ಕುಂದಲಿ, ನರಿ ತಿನ್ನಬಹುದು.

ಅಜೀರ್ಣ : ಸಣ್ಣ ಚೆನ್ನಂಗಿ ಎಲೆಯಿಂದ ಚಟ್ನಿಮಾಡಿ ತಿಂದರೆ ಜೀರ್ಣಶಕ್ತಿ ಬೆಳೆಯುತ್ತದೆ. ಅಲುಬಿಸ ಸೊಪ್ಪು, ಕೊತುಂಬರಿ ಬೀಜ, ನೆನಸಿ ಕುದಿಸಿ ಕಷಾಯ ಮಾಡಿ ಕುಡಿಸಬೇಕು.

ಮೂತ್ರ ಉರಿಗೆ : ವಟ್ಟಿ ಬೇರು, ಜೀರಿಗೆ ಕುಟ್ಟಿ ಕಷಾಯ ಮಾಡಿ ಕುಡಿಯಬೇಕು. ಉತ್ತುತ್ತಿ ಬೀಜ ತಿಂದರೂ ಮೂತ್ರ ಉರಿ ತಗ್ಗುತ್ತದೆ.

ಅಂಟುರೋಗಗಳು (ಲೈಂಗಿಕವ್ಯಾದಿ) : ಅವರೆಕಾಳು ಗುಗ್ಗರಿ ಈಚಲು ಹೆಂಡ ಕುಡಿದರೆ ಈ ರೋಗ ವಾಸಿಯಾಗುತ್ತದೆ. ನನ್ನಾರಿ ಬೇರು (ಜೆರ್ರಿಪೋತು) ಅಕ್ಕಿ ತೊಳೆದ ನೀರಿನಲ್ಲಿ ನೆನೆಸಿ ಇಟ್ಟರೆ ನೀರು ಕೆಂಪಾಗುತ್ತದೆ. ಅದರಲ್ಲಿ ಯಾಲಕ್ಕಿ, ಲವಂಗ, ಜೀರಿಗೆ ಮೊಳಕೆ ಬಂದಿರುತ್ತವೆ. ರಸಕರ್ಪೂರ ಕಲಸಿ ಕುಟ್ಟಿ ಈಚಲು ಹೆಂಡದಲ್ಲಿ ನೆನೆಯಿಟ್ಟು ತರುವಾಯ ದಿನಕ್ಕೆ ಎರಡು ಸಾರಿ ಕೊಡಬೇಕು. ಪ್ರತಿದಿನ ರೊಟ್ಟಿ ಮಾತ್ರ ತಿನ್ನಬೇಕು.

ಬೇದಿ ಆಗುವಂತೆ ಮಾಡುವುದಕ್ಕೆ : ಮಾಪಾಳ ಬೀಜ ಸಗಣಿಯಲ್ಲಿ ಮುಚ್ಚಿಟ್ಟು ಆಮೇಲೆ ಬೆಂಕಿಯಲ್ಲಿ ಹಾಕಿ ಸುಟ್ಟು ನೀರಿನಲ್ಲಿ ತೇದು ತಿನ್ನಬೇಕು.

ಬೇಧಿ ಕಡಿಮೆಯಾಗುವುದಕ್ಕೆ : ಜಿಬ್ಬಣ್ಣು ತಿಂದರೆ ಬೇಧಿ ನಿಲ್ಲುತ್ತದೆ.

ರಕ್ತ ಬೇಧಿ ಕಡಿಮೆಯಾಗುವುದಕ್ಕೆ : ಜಿಬ್ಬಣ್ಣಿನ ಗಿಡದ ಚಕ್ಕೆ ಕುಟ್ಟಿ ರಸ ತೆಗೆದು ಕುಡಿಯಬೇಕು. ಇಲ್ಲವೆ ಎಳೆಯ ದಾಳಿಂಬೆಕಾಯಿ ಒಣಗಿಸಿ ಪುಡಿಮಾಡಿ ತಿನ್ನಬೇಕು.

ಸಣ್ಣ ಮಕ್ಕಳಿಗೆ ಬೇಧಿ ಹಿಡಿದರೆ : ಮಗುವಿನ ತಾಯಿ ಮಾವಿನಕಾಯಿಯನ್ನು ಬೆಂಕಿಯಲ್ಲಿ ಸುಟ್ಟು ಇಸುಕಿ ಜೀರಿಗೆ ಕಲಿಸಿ ತಿನ್ನಬೇಕು.

ವಾಯಿ, ತಲೆ ಸುತ್ತುವುದು : ಕಾಕಿಮಾಂಸ ಮತ್ತು ಮೆಣಸು ಒಂಟಿ ಬೆಳ್ಳುಳ್ಳಿ ಕೂಡಿಸಿ ತಿನ್ನಬೇಕು.

ಕೆಮ್ಮು : ತುಂಬೆ ಚಕ್ಕೆಯನ್ನು ದವಡೆಯಲ್ಲಿಟ್ಟುಕೊಂಡು ರಸವನ್ನು ನುಂಗುತ್ತಾ ಇರಬೇಕು. ಇಲ್ಲವೆ, ಅಜ್ವಾನ ಪುಡಿ ಮಾಡಿ ನೀರಿನಲ್ಲಿ ಕುದಿಸಿ ಕುಡಿಯಬೇಕು. ಅಥವಾ ಬಿಳಿ ಎಕ್ಕೆ ಹೂ, ಮಸಾಲೆ ಹೂ ಒಣಗಿಸಿ ಕುಟ್ಟಿ ಅದರ ಪುಡಿಯನ್ನು ದಿನಕ್ಕೆ ಎರಡು ಸಾರಿ ತಿನ್ನಬೇಕು.

ನಾಯಿಕೆಮ್ಮು : ಕಾಣಿಗೆ ಗಿಡದ ಕಾಯಿ ಸೀಳಿ ಹಾರಮಾಡಿ ಹಾಕುವರು. ಇಲ್ಲವೇ ಮಲ್ಲಿಗೆ ಗಿಡದ ಎಲೆ ಹಾರ ಮಾಡಿ ಹಾಕುವುದುಂಟು. ಅಥವಾ ಕತಾಳಿ ನಾರನ್ನು ಲಾಡಿ ಮಾಡಿ ಕೊರಳಲ್ಲಿ ಹಾಕುವರು. ಮತ್ತು ಕೇರನ್ನು ಕುತ್ತಿಗೆಯ ಕೆಳಭಾಗದ ತಗ್ಗಿನಲ್ಲಿ ಇಡುತ್ತಾರೆ. ಬಹಳ ಇದ್ದರೆ ಕಿರುನಾಲಿಗೆಗೆ ಇಡುತ್ತಾರೆ.

ಬಾಣಂತಿರೋಗ : ಹಿರೇಬೇವಿನಗಿಡ, ಒಡವಿನ ಗಿಡ ಇವುಗಳಲ್ಲಿ ಒಂದರ ಚಕ್ಕೆಯನ್ನು ಮೋಡಿ, ಹಿಪ್ಪಲಿ, ಕುಟ್ಟಿ ರಸ ತೆಗೆದು ದಿನಕ್ಕೆ ಮೂರು ಸಲ ಕುಡಿಸಬೇಕು. ಪತ್ಯ ಸಪ್ಪನೆಯ ಅನ್ನ ಕೊಡಬೇಕು. ತಣ್ಣನೆಯ ನೀರು ತಗಲದಂತೆ ಇರಬೇಕು.

ಊದುರೋಗ : ಹಿರೇಬೇವಿನ ಗಿಡ, ವಡವಿನ ಗಿಡದ ಚಕ್ಕೆ ಇವುಗಳಲ್ಲಿ ಒಂದು ಚಕ್ಕೆ, ಮೋಡಿ, ಹಿಪ್ಪಲಿಯಲ್ಲಿ ಕಲಿಸಿ ದಿನಕ್ಕೆ ಮೂರು ಸಲ ತಿನ್ನಿಸಬೇಕು. ಮೂರು ಸಲ ಈ ಗಿಡ ತಿಂದರೆ ಏಳುಸಾರಿ ಉಪ್ಪಿಲ್ಲದ ಅನ್ನ ಊಟ ಮಾಡಬೇಕು.

ಅಂಗಾಲು ಉರಿ : ಅವರೆ ಗಿಡದ ಬೇರು ಒಣಗಿಸಿ ಪುಡಿಮಾಡಿ ತಿನ್ನಬೇಕು.

ಮೇಹರೋಗ : ತೊಂಡೆ ಬೇರಿನ ಗಡ್ಡೆ ಚೂರ್ಣಮಾಡಿ ತಿಂದರೆ ಕಡಿಮೆಯಾಗುತ್ತದೆ.

ಸಣ್ಣ ಹುಡುಗರಿಗೆ ಉಸಿರು ಕಟ್ಟಿದರೆ : ಮೂರು ದಿನದವರೆಗೆ ಕತ್ತೆ ಹಾಲು ಕುಡಿಸಬೇಕು.

ಸಣ್ಣ ಹುಡುಗರಿಗೆ ಅರಿ ಆಗುವುದು : ಬಿಲ್ವಪತ್ರೆ, ಲವಂಗ ಕಲಿಸಿ ಪುಡಿಮಾಡಿ ತಿನ್ನಿಸಬೇಕು.

ಗುಳ್ಳೆಗಾಯಗಳಾದರೆ : ಬಾರಿಗೆ ಮೀನು, ತಲೆಯ ಕೂದಲು ಸುಟ್ಟುಪುಡಿಮಾಡಿ ಮಸಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಕೋಳಿ ಪುಕ್ಕದಿಂದ ಹಚ್ಚಬೇಕು.

ಕೆಂಪು ಸೆರಗು (ರಕ್ತ ಹರಿಯುವುದು) : ಜಂಬೆ ಗಿಡದ ಚಕ್ಕೆ ಕುಟ್ಟಿ ನೀರಿನಲ್ಲಿ ಕುದುಸಿ ಮೂರು ಹೊತ್ತು ಕುಡಿದರೆ ಕಡಿಮೆಯಾಗುತ್ತದೆ. ಇಲ್ಲವೆ ಕೆಂಪು ಗುರುಗುಂಜಿ ಗಡ್ಡೆ ಬೇರು, ಮೋಡಿ, ಕುಟ್ಟಿ, ನೀರಿನಲ್ಲಿ ಕುದಿಸಿ ಕುಡಿಯಬೇಕು.

ಬಿಳಿ ಸೆರಗು : ಬಿಳಿಯ ಗುಲಗಂಜಿ ಬೇರು, ಮೋಡಿ, ಕಲಿಸಿ ಕುಟ್ಟಿ ಅದರ ರಸ ಕುದಿಸಿ ಕುಡಿಯಬೇಕು.

ಬಾಣಂತಿಗೆ ಹಾಲು ಬೀಳುವುದಕ್ಕೆ : ಬಾರಿಗೆ ಮೀನಿನ ಸಾರು ಏಡಿಸಾರನ್ನು, ಮೆಣಸಿನಪುಡಿ ಹಾಕಿ ಮಾಡಿ ಕೊಡಬೇಕು.

ನೆಗಡಿ : ಮೆಣಸು ಹಾಕಿದ ಏಡಿಸಾರು ಊಟಮಾಡಬೇಕು.

ಹೊಡೆತಗಳಿಗೆ : ಹೊಡೆದಾಟಗಳಲ್ಲಿ ಚೆನ್ನಾಗಿ ಒದೆತಿಂದವರಿಗೆ, ಮೇಕೆ ಹಾಲಿನಲ್ಲಿ ಜಾಜಿಕಾಯಿ, ಜಾಪತ್ರಿ, ಮೆಣಸು, ಬೆಳ್ಳುಳ್ಳಿ ಇವೆಲ್ಲಾ ಕಲಸಿ ಹಂದಿಮಾಂಸದಲ್ಲಿ ತಿಂದರೆ ಕಡಿಮೆಯಾಗುತ್ತದೆ. ಇಲ್ಲವೇ ಕುರಿ, ಮೇಕೆಯ ಮಾಂಸ, ಕರಿಕೋಳಿಯ ಮಾಂಸ ಮತ್ತು ಗೋದಿ ರೊಟ್ಟಿ ತಿನ್ನಬೇಕು. ಅಥವಾ ಬಿಳಿಯ ತುಂಬೆ ಚಕ್ಕೆ, ಹಿಪ್ಪಲಿ, ಸರಾಯಿ ಕಾಯಿಸಿ ಕುಡಿಯಬೇಕು.


ಗಾಯಗಳಿಗೆ : ರಕ್ತಮಂಡಲದ ಎಲೆ ತಂದು ಗಾಯಕ್ಕೆ ಕಟ್ಟಿದರೆ ಎಷ್ಟೇ ದೊಡ್ಡದಾಗಿದ್ದರೂ ಗುಣವಾಗುತ್ತವೆ.

ಇಲಿ ಕಚ್ಚಿದರೆ : ಶುಂಠಿ, ಮೆಣಸು ಹಾಕಿ ಬೆಕ್ಕಿನ ಮಾಂಸದಲ್ಲಿ ತಿನ್ನಬೇಕು.

ಚೇಳು ಕಚ್ಚಿದರೆ : ಬಿಳಿಯ ನೆಲ್ಲಿಯಕಾಯಿ ಪುಡಿಮಾಡಿ ಕಡಿದ ಭಾಗದಲ್ಲಿ ಹಚ್ಚುವುದು. ಅಥವಾ ಉಡುವಿನ ಕೊಬ್ಬು ತೆಗೆದು ಕಡಿದ ಜಾಗದಲ್ಲಿ ಇಟ್ಟು ಕಾವು ಕೊಡಬೇಕು.

ಕೊಬ್ಬು ವೈದ್ಯ : ನಡುವು ಹಿಡಿಯುವದಕ್ಕೆ ನರ ಹಿಡಿದುಕೊಳ್ಳುವುದು, ಮೊಳಕಾಲು ಹಿಡಿದು ಕೊಳ್ಳುವುದು, ಬೆನ್ನು ಹಿಡಿದುಕೊಳ್ಳುವುದು ಇದಕ್ಕೆ ಉಡದ ಕೊಬ್ಬು ಅಥವಾ ಹಂದಿಯ ಕೊಬ್ಬನ್ನು ತೆಗೆದು ಹಿಡಿದ ಜಾಗದಲ್ಲಿ ಹಚ್ಚಿ ಚೆನ್ನಾಗಿ ಉಜ್ಜುತ್ತಾರೆ. ಹಂದಿ ಕೊಬ್ಬಿನಿಂದ ದೀಪ ಮುಡಿಸಿದರೆ ಅವರ ಹತ್ತಿರ ಕಾಲರಾ ಬರುವುದಿಲ್ಲವೆಂದು ಹೇಳುತ್ತಾರೆ.

శ్రీ లక్ష్మీ గణేశ మహా యంత్ర రాజము




[illegible]

యంత్ర ప్రభావము

[illegible]

శ్రీ లక్ష్మీ గణపతి యంత్రము



లక్ష్మీ గణపతి యంత్ర ప్రతిష్ఠాపనము

[illegible]

సిద్ధి: [illegible] వల్లక్ష్మి [illegible]

వల్లక్ష్మి [illegible]

చి. గణపతి ప్రతిమ [illegible] పంచగవ్యములతో శుద్ధి చే

సి 40 [illegible] దానిపై నూతన వస్త్రము పరచి 5 [illegible]

[illegible] కలశము స్థాపించి యంత్ర [illegible] యం

త్రము ప్రతిష్ఠాపించి [illegible]

జపము — ఓం హ్రీం శ్రీం లక్ష్మీగణపతి మహా మంత్రస్య గణక ఋషిః నిచృద్గాయత్రీ

ఛందః - మహాగణపతి దేవతా గం బీజం శ్రీ లక్ష్మీగణపతయే [illegible]

కీలకం మమ శ్రీలక్ష్మీ

ಜೀಡಿ ವೈದ್ಯ : ಕಾಲಿಗೆ ಮುಳ್ಳು ಮುರಿದು ನಂಜಾದರೆ, ಕೀಲುನೋವು ಬಂದರೆ, ಕಾಲಿನ ಸಂದಿನಲ್ಲಿ ಚಲ್ತರೆ, ಇಂತಹವುಗಳಿಗೆ ಜೀಡಿ ಇಟ್ಟು ಕಾಯಿಸುತ್ತಾರೆ. ಕೆಮ್ಮು ಆದರೆ ಕುತ್ತಿಗೆಯ ಕೆಳಗೆ ಜೀಡಿ ಹಚ್ಚುತ್ತಾರೆ. ಕಾಲರಾ ಇದ್ದ ಸಮಯದಲ್ಲಿ ಜೀಡಿ ಬೊಟ್ಟು ಹಣೆಗೆ ಇಟ್ಟುಕೊಂಡರೆ ಕಾಲರಾ ಬರುವುದಿಲ್ಲವೆಂದು ಹೇಳುತ್ತಾರೆ.

ಅಗ್ನಿವೈದ್ಯ : ಮಕ್ಕಳು ಹುಟ್ಟಿದ ಸಮಯದಲ್ಲಿ ಸೂಜಿ ಕಾಯಿಸಿ ಸುಡುವುದರಿಂದ ಜೀರ್ಣಶಕ್ತಿ ಹೆಚ್ಚುತ್ತದೆ. ಊದುರೋಗ, ನಂಜು ಇಂತಹ ರೋಗಗಳನ್ನು ಗುಣಪಡಿಸುತ್ತದೆ ಎಂದು ಹೇಳುತ್ತಾರೆ.

ಮೇಲೆ ಹೇಳಿದ ವೈದ್ಯ ಪದ್ಧತಿಗಳು ಹಗಲುವೇಷಗಾರರಲ್ಲಿ ವೈದ್ಯದಂತೆ ಭೂತ ವೈದ್ಯವನ್ನು ಸಹ ಮಾಡುತ್ತಾರೆ. ಈ ಎಲ್ಲಾ ವೈದ್ಯಗಳನ್ನು ನೋಡಿದರೆ ಹಗಲುವೇಷಗಾರರಿಗೆ ವೈದ್ಯರ ಅನುಭವ ಅಪಾರವಾಗಿದೆ. ಇಂತಹ ವೈದ್ಯಗಳು ಸಹ ಈ ಸಮುದಾಯದ ಸಂಸ್ಕೃತಿಯನ್ನು ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಇದಲ್ಲದೆ ಯಂತ್ರಗಳನ್ನು ಸಹ ಬರೆಯುತ್ತಾರೆ. ಆಂಧ್ರಪ್ರದೇಶದ ಪಾರ್ವತಿನಗರದಲ್ಲಿ ಕೊಂಡಪಲ್ಲಿ ವೀರಭದ್ರಪ್ಪ ಎನ್ನುವವರು ಇಡೀ ಆಂಧ್ರಪ್ರದೇಶದಲ್ಲಿಯೇ ಹೆಸರುವಾಸಿಯಾಗಿದ್ದಾರೆ. ಇವರು ಹಲವಾರು ಸಮಸ್ಯೆಗಳಿಗೆ ಹಲವಾರು ರೀತಿಯ ಯಂತ್ರಗಳನ್ನು ಬರೆಯುತ್ತಾರೆ. ಅದರಲ್ಲಿ ಕೆಲವನ್ನು ಸಾರಾಂಶ ಸಹಿತ ನೀಡಲಾಗಿದೆ.

೭.೭. ನಂಬಿಕೆ ಮತ್ತು ನಿಷೇಧಗಳು

ಹಗಲುವೇಷಗಾರರು ಧಾರ್ಮಿಕ ಮತ್ತು ಅಂಧಶ್ರದ್ಧೆಯ ಮನೋಭಾವವುಳ್ಳವರು. ಯಾವುದೇ ಕೆಲಸವನ್ನು ಮಾಡಬೇಕಾದರೂ, ಶಕುನಗಳನ್ನು ವಿಶೇಷವಾಗಿ ಗಮನಿಸುತ್ತಾರೆ ಶಕುನಗಳು ಒಳ್ಳೆಯವೂ ಆಗಿರಬಹುದು ಕೆಟ್ಟವು ಆಗಿರಬಹುದು. ಭವಿಷ್ಯದ-ಅಜ್ಞಾತದ-ಮುನ್ಸೂಚನೆಗಳೆಂದು ಶಕುನಗಳನ್ನು ವ್ಯಾಖ್ಯಾನಿಸಲಾಗುತ್ತದೆ; ಭವಿಷ್ಯದಲ್ಲಿ ತಮಗೇನು ಕಾದಿದೆ ಎಂಬುದರ ಬಗೆಗೆ ಕಲ್ಪಿಸಿಕೊಳ್ಳುವುದು ಸಾಮಾನ್ಯರ ಸಹಜ ಪ್ರವೃತ್ತಿ. ಭವಿಷ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಬಲ್ಲದ್ದು, ಅತಿಮಾನುಷ ಜ್ಞಾನ; ಇಂಥ ನಂಬಿಕೆ, ಮೂಢನಂಬಿಕೆಗಳು ಭಾರತದಾದ್ಯಂತ ಹಬ್ಬಿವೆ.

ಸಂಪ್ರದಾಯವನ್ನು ಕುರಿತಂತೆ Standanrd Dictionary of folklore ಕೃತಿಯಲ್ಲಿ ಈ ರೀತಿ ವಿವರಗಳು ದೊರೆಯುತ್ತವೆ. Traditional Pattern of human Action accepted by a group. indudual habit is not included costoms is what fold do: belief is why they think they do it"[೭೭] ಸಂಪ್ರದಾಯವೆಂಬುದು ವೈಯಕ್ತಿಕವಾದುದಲ್ಲ; ಸಾಮೂಹಿಕವಾದದು. ಜನರು ಏನು ಮಾಡುತ್ತಾರೆಂಬುದನ್ನು ತಿಳಿಸುವುದೇ ಸಂಪ್ರದಾಯ; ಅದನ್ನು ಏಕೆ ಅನುಷ್ಠಾನಕ್ಕೆ ತರಬೇಕೆಂದು ತಿಳಿದಿದ್ದಾರೋ ಅದೇ ನಂಬಿಕೆ.

ಮನುಷ್ಯನ ಬದುಕು ಮತ್ತು ನಂಬಿಕೆಗಳು ಒಂದನ್ನೊಂದು ತಬ್ಬಿ ನಿಂತಿವೆ. ಪ್ರಾಚೀನ ಆದಿ ಮಾನವನಿಂದ ಹಿಡಿದು ಆಧುನಿಕ ಮಾನವನ ಜೀವನದ ರೀತಿಯ ತನಕ ನಂಬಿಕೆಗಳು ವಿಲೀನವಾಗಿವೆ. ಈ ಪರಂಪರೆ ಎಲ್ಲ ಸಮುದಾಯಗಳಲ್ಲಿ ಕಂಡುಬರುತ್ತದೆಯಾದರೂ ಕುಲದಿಂದ ಕುಲಕ್ಕೆ ಸಮುದಾಯದಿಂದ ಸಮುದಾಯಕ್ಕೆ ಆಚರಣೆಗಳು ಭಿನ್ನವಾಗಿರುತ್ತವೆ. "ಆಚರಣೆಯಲ್ಲಿ ಅಡಕಗೊಂಡ ಜನಪದ ಸಮಾಜ ಸಮುದಾಯದ ನಡವಳಿಕೆ, ನೈತಿಕತೆಯ ಆಂತರಿಕ ಧ್ವನಿ ಅವರನ್ನು ಬಂದಿಸಿದ ಅಮೂರ್ತ ಮಾದರಿಗಳು"[೨೮] ಎಂಬ ವಾಕ್ಯವನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ.

"ನಂಬಿಕೆಗಳು ಹಾಗೂ ಶಕುನಗಳು ಒಂದೇನಾಣ್ಯದ ಎರಡು ಮುಖಗಳು. ಒಂದಕ್ಕೊಂದು ಪೂರಕವಾಗಿರುತ್ತವೆ. ನಂಬಿಕೆಗೆ ಶ್ರದ್ಧೆ ಕಾರಣವಾದರೆ, ಶಕುನಗಳಿಗೆ ಭಯ ಭೀತಿ ಕಾರಣವಾಗಿರುತ್ತದೆ. ನಂಬಿಕೆಯಲ್ಲಿ ವಿಶೇಷವಾಗಿ ಶುಭದ ಹಾರೈಕೆ ಕಂಡುಬಂದರೆ, ಶಕುನಗಳಲ್ಲಿ ಶುಭ ಅಶುಭಗಳ ಲೆಕ್ಕಾಚಾರವಿರುತ್ತದೆ."[೨೯] ಹೀಗೆ ವೇಷಗಾರರಲ್ಲಿ ನಂಬಿಕೆ, ಶಕುನಗಳು ಮಾನಸಿಕ ಹಾಗೂ ಸಾಮಾಜಿಕ ಸಂತೃಪ್ತಿಯನ್ನು ತಂದುಕೊಡುತ್ತದೆಂದು ನಂಬಿ ಬದುಕುತ್ತಿದ್ದಾರೆ. ಇಂಥ ನಂಬಿಕೆಗಳನ್ನು ಸ್ಥೂಲವಾಗಿ ಈ ಕೆಳಗಿನಂತೆ ವಿಂಗಡಿಸಿ ದಾಖಲಿಸಲಾಗಿದೆ.

೭.೭.೧ ಅಂಗಾಗ ಸಂಬಂಧ ನಂಬಿಕೆಗಳು

೧. ಹೆಣ್ಣಿಗೆ ಎಡಗಣ್ಣು, ಗಂಡಿಗೆ ಬಲಗಣ್ಣು ಮೆಳ್ಳಗಣ್ಣು ಇದ್ದರೆ ಒಳ್ಳೆಯದು.
೨. ಆನೆಕಿವಿ, ಅಥವಾ ಕರಡಿಕಾಲು ಇದ್ದವರು ಅದೃಷ್ಟವಂತವರು.
೩. ಆಕಾರಕ್ಕಿಂತಲೂ ತಲೆ ದೊಡ್ಡದಿದ್ದರೆ ಒಳ್ಳೆಯದು.
೪. ಗಂಡಿಗೆ ಬಲಗಡೆ, ಹೆಣ್ಣಿಗೆ ಎಡಗಡೆ ಕರಿಯ ಮಚ್ಚೆ ಇದ್ದರೆ ಒಳ್ಳೆಯದು.
೫. ಗಂಡಿಗೆ ಬಲಗಾಲು ಬಲಗೈಗೆ, ಹೆಣ್ಣಿಗೆ ಎಡಕಾಲು ಎಡಗೈಗೆ ಆರು ಬೆರಳಿದ್ದರೆ ಒಳ್ಳೆಯದು.
೬. ನಾಲಿಗೆಗೆ ಕರಿಯ ಮಚ್ಚೆ ಇದ್ದವರ ಮಾತು ಸತ್ಯವಾಗುತ್ತವೆ.
೭. ಹೆಣ್ಣಿಗೆ ಎಡಭಾಗದ ಅಂಗಗಳು ಗಂಡಿಗೆ ಬಲಭಾಗದ ಅಂಗಗಳು ಅದುರಿದರೆ ಒಳ್ಳೆಯದು ಇವುಗಳಿಗೆಲ್ಲಾ ವಿರುದ್ಧವಾಗಿದ್ದರೆ ಅಶುಭ ಸೂಚನೆಗಳೆಂದು ತಿಳಿಯಬೇಕು.

೭.೭.೨. ಪ್ರಯಾಣಕ್ಕೆ ಸಂಬಂಧಿಸಿದ ಶಕುನಗಳು

ಅಶುಭ

೧. ಪ್ರಯಾಣಕ್ಕೆ ಹೋಗುವಾಗ ಮೊಲ ಅಡ್ಡ ಬರಬಾರದು.
೨. ಹಾವು ಅಡ್ಡ ಬರಬಾರದು.
೩. ಕಟ್ಟಿಗೆ ಹೊರೆ ಎದುರಾಗಬಾರದು.
೪. ಗುದ್ದಲಿ, ಸಲಿಕೆ ಎದುರಾಗಬಾರದು.
೫. ಒಂಟಿ ಬ್ರಾಹ್ಮಣ ಎದುರಾಗಬಾರದು.
೬. ಕ್ಷೌರಿಕನು ಎದುರಾಗಬಾರದು.

೭. ವಿಧವೆ ಎದುರಾಗಬಾರದು.

೮. ಕುಂಬಾರನ ಹೊಸಗಡಿಗೆ ಎದುರಾಗಬಾರದು.

೯. ಹೆಣ್ಣು ನೋಡಲು ಹೋದಾಗ ಮನೆಯ ಬಾಗಿಲು ಹಾಕಿರಬಾರದು.

೧೦. ಮನೆಯಲ್ಲಿ ಕಸಗುಡಿಸುತಕ್ಕಿದ್ದರೆ ಅಶುಭ.

೧೧. ಕನ್ಯೆಯು ಮುಟ್ಟಾಗಿ ಕುಳಿತಿದ್ದರೆ ಅಶುಭ.

೧೨. ತುಂಬಿದ ಚಂಬು ಕೈಜಾರಿ ಬಿದ್ದರೆ ಅಶುಭ.

೧೩. ಉಣ್ಣೋ ತುತ್ತು ಕೈ ಜಾರಿ ಬಿದ್ದರೆ ಅಶುಭ.

೧೪. ವಿಭೂತಿ ಉಂಡೆ ಕೈ ಜಾರಿ ಬಿದ್ದು ಹೋಡೆದು ಹೋದರೆ ಅಶುಭ.

೧೫. ದೇವರ ಮುಂದಿನ ದೀಪ ಹಾರಿ ಹೋದರೆ ಅಶುಭ.

೧೬. ಬೆಕ್ಕು ಅಡ್ಡ ಬರಬಾರದು.

ಶುಭ

೧. ಹೊಸ ಮೊರ ಎದುರಾದರೆ ಒಳ್ಳೆಯದು.

೨. ಕಾಗೆ ಕೂತು ಕೂಗಿದರೆ ಒಳ್ಳೆಯದು.

೩. ನರಿಮುಖ ನೋಡಿದರೆ ಒಳ್ಳೆಯದು.

೪. ಹೆಣ್ಣು ಕೊಡ ಹೊತ್ತು ಎದುರಾದರೆ ಶುಭ.

೫. ಗರ್ಭಿಣಿ ಸ್ತ್ರೀ ಎದುರಾದರೆ ಒಳ್ಳೆಯದು.

೬. ಸನ್ಯಾಸಿ ಎದುರಾದರೆ ಒಳ್ಳೆಯದು.

೭. ಬುತ್ತಿ ಗಂಟು ಹೊತ್ತವರು ಎದುರಾದರೆ ಒಳ್ಳೆಯದು.

೮. ಹೂವಿನಬುಟ್ಟಿ ಎದುರಾದರೆ ಒಳ್ಳೆಯದು.

೯. ಕಣಿ ಹೇಳುವ ಕೊರವಂಜಿ ಎದುರಾದರೆ ಒಳ್ಳೆಯದು.

೭.೭.೩. ಊಟ ಮಾಡುವಾಗ ಸುತ್ತ ಹೆಣೆದುಕೊಂಡಿರುವ ನಂಬಿಕೆಗಳು

೧. ಊಟ ಮಾಡುವ ತುತ್ತು ಕೆಳಗೆ ಬಿಳಬಾರದು.

೨. ಹಾಲು ಅನ್ನ ಉಂಡಮೇಲೆ ಅನ್ನ ಊಟಮಾಡಬಾರದು.

೩. ಊಟ ಮಾಡುವಾಗ ಕೈ ನೆಕ್ಕಬಾರದು.

೪. ಊಟಮಾಡುವಾಗ, ಉಂಡಮೇಲೆ ಮೇಲೂ ಮೈಮುರಿಯಬಾರದು.

೫. ಊಟ ಮಾಡಿದ ತಕ್ಷಣ ಬರ್ಹಿದೆಸೆಗೆ ಹೋಗಬಾರದು.

೬. ಕಾಲು ಚಾಚಿಕೊಂಡು ಊಟ ಮಾಡಬಾರದು.

೭. ತುದಿಗಾಲಲ್ಲಿ ಕುಳಿತು ಊಟ ಮಾಡಬಾರದು.

೮. ಕಾಲುಗಳನ್ನು ಹಿಂದಕ್ಕೆ ಮಡಚಿಕೊಂಡು ಊಟ ಮಾಡಬಾರದು.

೭.೭.೪. ಮಲಗುವ ಸಂಬಂಧ ನಂಬಿಕೆಗಳು

೧. ಉತ್ತರಕ್ಕೆ ತಲೆಮಾಡಿ ಮಲಗಬಾರದು.

೨. ಸಾಯಂಕಾಲ ಮಲಗಿದರೆ ಬೀಗರು ಬರುತ್ತಾರೆ.

೩. ಪೂರ್ವದಿಕ್ಕಿಗೆ ಕಾಲು ಚಾಚಬಾರದು.

೪. ಕನಸ್ಸಿನಲ್ಲಿ ಯಾರು ಸತ್ತಿರುತ್ತಾರೆಯೋ ಅವರ ಆಯಸ್ಸು ಹೆಚ್ಚಾಗುತ್ತದೆ.

೫. ಕನಸಿನಲ್ಲಿ ಮದುವೆ ನಡೆಯಬಾರದು.

೬. ಕನಸ್ಸಿನಲ್ಲಿ ಹಾವು ಹಿಂಬಾಲಿಸಿಕೊಂಡು ಬಂದರೆ ಅಥವಾ ಕಡಿದರೆ ಒಳ್ಳೆಯದು.

೭. ಕನಸ್ಸಿನಲ್ಲಿ ಬಟ್ಟೆ ಸುಡಬಾರದು.

೮. ಕನಸಿನಲ್ಲಿ ಮನೆ ಬೀಳಬಾರದು.

೭.೭.೫. ಇತರ ನಂಬಿಕೆಗಳು

೧. ಮದುವೆ ನಡೆದ ಐದನೆಯ ದಿನಕ್ಕೆ ಬಿಡಾರದ ಸ್ಥಳ ಬದಲಾಯಿಸಬೇಕು.

೨. ಮದುವಣಿಗನ ಕೈಯಲ್ಲಿ ನಿಂಬೆಹಣ್ಣು ಸಿಕ್ಕಿಸಿದ ಕತ್ತಿ ಕೊಡಬೇಕು.

೩. ಹೆರಿಗೆಯಾದ ಐದನೆಯ ದಿನಕ್ಕೆ ಬಿಡಾರ ಅಥವಾ ಬಿಡಾರವನ್ನು ಬದಲಾಯಿಸಬೇಕು.

೪. ಯಾರಾದರೂ ಸತ್ತರೆ, ದೀರ್ಘಕಾಲ ಬೇನೆ, ಬೇಸರಿಗೆ ಬಂದರೆ ಐದನೆಯ ದಿನಕ್ಕೆ ಬಿಡಾರ ಜಾಗ ಬದಲಾಯಿಸಬೇಕು.

೫. ಕಾಗೆ, ಕೆಟ್ಟ ಹಕ್ಕಿ ಬಿಡಾರದಲ್ಲಿ ಆ ಕಡೆಯಿಂದ ಈ ಕಡೆಗೆ ತೂರಿ ಹೋದರೆ ಬಿಡಾರದ ಜಾಗ ಬದಲಾಯಿಸಬೇಕು.

೬. ಬಾಣಂತಿ, ಋತುಮತಿಯಾದ ಹುಡುಗಿ ಐದನೆಯ ದಿನದವರೆಗೆ ಅಡುಗೆ, ಸಾಮಾನು ಮುಟ್ಟಬಾರದು.

೭. ಖಾಲಿ ತೊಟ್ಟಿಲು ತೂಗಬಾರದು.

೮. ಬಾಣಂತಿ ಕಾಲುಚಾಚಿ ಕುಳಿತರಬೇಕಾದರೆ ದಾಟಬಾರದು.

೯. ಮಲಗಿದ ಕೂಸನ್ನು ದಾಟಬಾರದು.

೧೦. ಮಲಗಿದ ಮಕ್ಕಳಿಗೆ ಮುದ್ದು ಕೊಡಬಾರದು.

೧೧. ರಾತ್ರಿ ಮನುಷ್ಯರ ತಲೆಗೆ ಹೊಡೆಯಬಾರದು.

೧೨. ಆದಿತ್ಯವಾರ ಋತುಮತಿಯಾದ ಹುಡುಗಿಯನ್ನು ಕಣ್ಣುಕಟ್ಟಿ ಅಡವಿಯಲ್ಲಿ ಬಿಟ್ಟು ಬರಬೇಕು.

೧೩. ವಿಧವೆ ಮಂಗಳ ಕಾರ್ಯದಲ್ಲಿ ಬರಬಾರದು.

೧೪. ಹೆಣಕ್ಕೆ ಸ್ನಾನ ಮಾಡಿಸುವಾಗ ಎಡಗೈಯಿಂದ ಮೊದಲು ನೀರು ಹಾಕಬೇಕು.

೧೫. ಹೆಣ ಹೊತ್ತುಕೊಂಡು ಹೋಗುವಾಗ ಸುಡುಗಾಡು ಪಕ್ಕದಲ್ಲಿ ಸ್ವಲ್ಪ ಹೊತ್ತು ಇಳಿಸಬೇಕು.

೧೬. ಹೆಣವನ್ನು ಉತ್ತರಾಬಿಮುಖವಾಗಿ ಹೂಳಬೇಕು.

೧೭. ಬುತ್ತಿಯನ್ನು ಒಯ್ಯಬೇಕಾದರೆ ಯಾರು ಮುಟ್ಟಿಸಿಕೊಳ್ಳುವ ಹಾಗಿಲ್ಲ.

೧೮. ಮಾತನಾಡುವಾಗ ಹಲ್ಲಿ ನುಡಿದರೆ ಅಥವಾ ಗಂಟೆ ಶಬ್ದ ಬಂದರೆ ಸತ್ಯವಾಗುತ್ತದೆ.

೧೯. ಹಲ್ಲಿಯು ದೇಹದ ಎಡಭಾಗದಿಂದ ಮೇಲಕ್ಕೆ ಏರಬಾರದು.

೨೦. 'ಕಾಗೆ ಕೂಟ'[೩೦] ನೋಡಬಾರದು.

೨೧. ಕಾಗೆ ಮನುಷ್ಯರನ್ನು ಮುಟ್ಟಿಸಬಾರದು

೨೨. ಹಾವುಗಳ ತಳಕೆ ನೋಡಬಾರದು.

೨೩. ಒಲೆ ಒದರಿದರೆ ಬೀಗರು ಬರುತ್ತಾರೆ.

೨೪. ಮದುವೆಗೆ ಹೋದವರು ಬೇಟೆ ಕೊಯ್ಯುವುದು ನೋಡಿಕೊಂಡೇ ಬರಬೇಕು.

೨೫. ರಾತ್ರಿ ಹೊತ್ತಿನಲ್ಲಿ ವೇಷ ಧರಿಸಬಾರದು.

೨೬. ಹೆಣ್ಣು ಮಕ್ಕಳು ವೇಷ ಧರಿಸಬಾರದು.

೨೭. ಬೆಕ್ಕು ಮುಖ ತೊಳೆದರೆ ಆದಿನ ನೆಂಟರು ಬರುತ್ತಾರೆ.

೨೮. ಹಂದಿ ಬಿಡಾರದ ಒಳಗೆ ನುಗ್ಗಿದರೆ ಲಕ್ಷ್ಮಿ ಬಂದಂತೆ[೩೧].

೨೯. ನಾಗರಹಾವು ಜೋಪಡಿಯ ಮುಂದಿನ ಭಾಗದಿಂದ ಹಿಂದಿನ ಭಾಗಕ್ಕೆ ಹಾಯ್ದುಹೋದರೆ ಒಳ್ಳೆಯದು

೩೦. ಮಲಗಿದ ನಾಯಿ ಕಿವಿ ಜಾಡಿಸಿಕೊಂಡು ಓಟಕ್ಕಿಟ್ಟರೆ, ಅಂದುಕೊಂಡ ಕೆಲಸ ಖಚಿತವಾಗಿಯೂ ಆಗುತ್ತದೆ.

೩೧. ಪಕ್ಷಿಗಳ ಮಲಮೂತ್ರ ಮೈ ಮೇಲೆ ಬಿದ್ದರೆ ಕೇಡು.

೩೨. ಊಟಮಾಡುವಾಗ ಬಿಕ್ಕಳಿಕೆ ಬಂದರೆ ಯಾರೋ ನೆನಸುತ್ತಾರೆ ಎಂದು ಅರ್ಥ.

೩೩. ಬೇವಿನಕಟ್ಟಿಗೆ ಉರುವಲಾಗಿ ಬಳಸಬಾರದು (ಎಲ್ಲಮ್ಮ ಮನೆದೇವತೆ)

೩೪. ಜಂಬೆ ಕಟ್ಟಿಗೆ ಉರುವಲಾಗಿ ಬಳಸಬಾರದು (ಜಂಬಲಮ್ಮ ಕುಲದೇವತೆ)

ಹೀಗೆ ಇವರ ಜೀವನದಲ್ಲಿ ಸಂಪ್ರದಾಯಗಳು ಅತಿಪ್ರಾಮುಖ್ಯತೆಯನ್ನು ಪಡೆಯುತ್ತವೆ. ಇಂತಹ ಸಂಪ್ರದಾಯಗಳಂತಹ ಸಂದರ್ಭದಲ್ಲಿ ಇತರರನ್ನು ಅಷ್ಟು ಸುಲಭವಾಗಿ ಪಕ್ಕಕ್ಕೆ ಬಿಟ್ಟುಕೊಳ್ಳುವುದಿಲ್ಲ. ಎಲ್ಲರಂತೆ ಇವರಲ್ಲಿಯೂ ಸಂಪ್ರದಾಯಗಳು ಇವರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಆದ್ದರಿಂದ ಈ ಅಧ್ಯಯನಗಳು ಬಹುಪ್ರಾಮುಖ್ಯತೆಯನ್ನು ಪಡೆಯುತ್ತವೆ.

ಅಡಿಟಿಪ್ಪಣಿಗಳು

೧. ಜಾನಪದ ಅಧ್ಯಯನ ಸಂಪ್ರದಾಯಗಳು ಮತ್ತು ಹಬ್ಬಗಳು, ದೇ ಜವರೇಗೌಡ, ಡಿ.ವಿ.ಕೆ.ಮೂರ್ತಿ ಪ್ರಕಾಶನ ಮೈಸೂರು ೧೯೭೮, ಪುಟ: ೩೧೮

೨. ಅಭಿಜ್ಞ ಡಾ.ಸಾ.ಶಿ.ಮರುಳಯ್ಯ ಅಭಿನಂದನಾ ಗ್ರಂಥ, ಸಂಪಾದನೆ ಹೆಚ್.ಜೆ. ಲಕ್ಕಪ್ಪಗೌಡ, ಪುಟ: ೫೮೬ ೨೦೦೧

೩. ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಪಿ.ಕೆ. ಖಂಡೋಬಾ, ವಿ. ತೇಜಸಿಂಗ್ ರಾಠೋಡ್ ಮೆಮೇರಿಯಲ್ ಟ್ರಸ್ಟ್ ಗುಲ್ಬರ್ಗಾ, ಪುಟ: ೧೧೪, ೧೯೯೧

೪. ಬಾಲ ಸಂಗಯ್ಯನ ವಚನಗಳು ವಚನ ಸಂಖ್ಯೆ: ೧೧, ೧೨, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೫. ಬುಡಿಗೆ ಜಂಗಾಲು ಭಾಷೆ ಸಾಹಿತ್ಯ ಸಾಂಸ್ಕೃತಿ ಕಂಶಾಲ ಪರಿಶೀಲನ ಡಾ. ಎಸ್.ಆರ್. ವೆಂಕಟೇಶಂ, ದಿವ್ಯ ದೀಪ್ತಿ ಪ್ರಚುರಣಾಲ ಹೈದರಾಬಾದು ೧೯೯೫, ಪುಟ: ೧೩೬

೬. ಜಂಬಲಮ್ಮ ಸುಂಕಲಮ್ಮ ಪಾರ್ವತಿನಗರ ಪ್ರದ್ಯುಟೂರು ತಾಲೂಕ

೭. ಹಗಲುವೇಷದವರ ಸಂಸ್ಕೃತಿ ಯಳನಾಡ ಆಂಜಿನೆಪ್ಪ, ಕ.ಸಾ.ಅ. ನೃಪತುಂಗ ರಸ್ತೆ, ಬೆಂಗಳೂರು, ೧೯೯೨, ಪುಟ: ೫೮,

೮. ಬಿಂಗುಸಿಕಲ್ಲು : ಬಯಲು ಹೊಲದಲ್ಲಿ ಬಿದ್ದಿರುವ ದುಂಡನೆಯ ಕಲ್ಲು

೯. ಹಂಗುನೂಲು : ಹತ್ತಿಯಿಂದ ಮಾಡಿದ ಹಾರ

೧೦. ಕರ್ನಾಟಕದಲ್ಲಿ ವೇಷಗಾರರು, ಒಂದು ಸಾಂಸ್ಕೃತಿಕ ಅಧ್ಯಯನ ಬಿ.ಎಂ. ಹೊಸಮನಿ ಪಿಎಚ್.ಡಿ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೩, ಪುಟ: ೩೦೮

೧೧. ಅದೇ......................ಪುಟ: ೨೧೦

೧೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ.ಹೆಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು, ಪುಟ: ४೫೬, ೧೯೬೮

೧೩. ಬುಡಿಗೆ ಜಂಗಾಲು, ಭಾಷೆ ಸಾಹಿತ್ಯ ಸಂಸ್ಕೃತಿಕಾಂಶಾಲ ಪರಿಶೀಲನ ಡಾ.ಎನ್.ಆರ್. ವೆಂಕಟೇಶ್ ದಿವ್ಯ ದೀಪ್ತಿ ಪ್ರಚುರಣಾಲ, ಹೈದರಾಬಾದು ೧೯೯೫, ಪುಟ: ೧೬೦, ೧೬೧

೧೪. ಭಾರತದಲ್ಲಿ ವಿವಾಹ ಮತ್ತು ಕುಟುಂಬ ಅನು: ಮಹೇಶ್ವರಪ್ಪ, ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೮, ಪುಟ: ೧೪೮, ೧೫೨

೧೫. ಹಗಲುವೇಷದವರ ಸಂಸ್ಕೃತಿ, ಯಳವಾಡ ಅಂಜಿನೆಪ್ಪ, ಕನ್ನಡ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು ೧೯೯೩, ಪುಟ: ೬೨

೧೬. ಅದೇ......................ಪುಟ: ೬೩

೧೭. ದೂಪಂ ಜಂಬಲಮ್ಮ ಪಾರ್ವತಿ ನಗರ ಪ್ರದ್ದುಟೂರು ತಾಲೂಕು ದಿ. ೯.೧೨.೨೦೦೧

೧೮. ಗಂಡಾದೀಪ : ದೊಡ್ಡದೀಪ ದಿನ್ನ ಜಂಬರದ ಕಾರ್ಯದಲ್ಲಿ ಉಪಯೋಗಿಸುತ್ತಾರೆ.

೧೯. ಆಂಧ್ರಪ್ರದೇಶ ಜಾನಪದ ಬಿ. ರಾಮರಾಜು ಪುಟ: ೩೯

೨೦. ಹಗಲುವೇಷದವರ ಸಂಸ್ಕೃತಿ, ಯಳನಾಡ ಅಂಜನೆಪ್ಪ, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು ೧೯೯೩, ಪುಟ: ೬೯, ೭೦

೨೧. Base, Tribal lines in India, Nirmala Kumar, Natioinal Book trust India New Delhi, 1971, page No: 68

೨೨. ಹಣಚೆ ಬಟ್ಟಿನ ಕೈ ಎ.ಕೆ. ರಾಮೇಶ್ವರ, ಕವಿರಾಜಮಾರ್ಗ ಪ್ರಕಾಶನ, ಮಾತೋಶ್ರಿ ಗೋದುತಾಯಿನಗರ ಗುಲ್ಬರ್ಗಾ ೧೯೮೪, ಪುಟ: ೫೯

೨೩. ಮುಸ್ಲಿಮ ದೇವರ ಆಚರಣೆಗಳನ್ನು 'ಕುದುರೆ ಮೂತೆ'ಯಲ್ಲಿ ೨, ೩, ४-४-೨೦೦೧ರಂದು ಭಾಗವಹಿಸಿ ಆಚರಣೆಯನ್ನು ವೀಕ್ಷಿಸಿದ್ದೇವೆ.

೨೪. ಡಾ. ಎಸ್.ಜಿ. ಮಹದೇವಪ್ಪ, ಧಾರ್ಮಿಕ ನಂಬಿಕೆಗಳು ಮತ್ತು ಧಾರ್ಮಿಕ ವಿಶ್ಲೇಷಣೆ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ ೧೯೯೫ ಪುಟ ೩೬

೨೫. ಮುಡುಪು : ದೇವರಿಗೆ ಕಾಣಿಕೆ ನೀಡುತ್ತೇನೆಂದು ಮನದಲ್ಲಿ ನೆನೆದುಕೊಂಡು ದಿನಾಲು ಸ್ವಲ್ಪ ದೇವರಿಗೋಸ್ಕರ ಕೂಡಿಸಿಟ್ಟ ಹಣವನ್ನು ಮುಡುಪು ಎಂದು ಕರೆಯುತ್ತಾರೆ

೨೬. ಡಾ. ಎಸ್.ಆರ್. ವೆಂಕಟೇಶಂ, ಬುಡಿಗೆ ಜಂಗಾಲು ಭಾಷೆ ಸಾಹಿತ್ಯ ಸಾಂಸ್ಕೃತಿಕಾಂಶಾಲ ಪರಿಶೀಲನೆ, ದಿವ್ಯ ದೀಪ್ತಿ ಪ್ರಚುರಣಾಲ, ಹೈದರಾಬಾದು, ೧೯೯೫, ಪುಟ: ೨೧೯

೨೭. Standard Dictionary Folklore Mythology and Legend Vol II Page: 1143

೨೮. ಡಾ. ದೇವೆಂದ್ರಕುಮಾರ ಹಕಾರಿ, ಆಚರಣೆಗಳು ಮತ್ತು ಉಗ್ರ ಆಚರಣೆಗಳು, ಜಾನಪದ ಗಂಗೋತ್ರಿ, ಸಂ ೪, ಕ.ಜಾ. ಅ ಬೆಂಗಳೂರು, ೧೯೯೬, ಪುಟ: ೬೫

೨೯. ಡಾ. ಎಲ್ಲಪ್ಪ ಕೆ.ಕೆ.ಪುರ, ದೊಕ್ಕಲು ಮಕ್ಕಳು ಒಂದು ಅಧ್ಯಯನ, ಶ್ರೀದುರ್ಗ ಪ್ರಕಾಶನ, ೧೯೯೭, ಪುಟ: ೧೩೫

೩೦. ಹಂದಿ : ಮನೆಯಲ್ಲಿ ನುಗ್ಗಿದರೆ ಅದನ್ನು ಅಲ್ಲಿಯೇ ಒಡೆದು ಸಾಯಿ ಮನೆಯಲ್ಲಿಯೇ ಊಳಬೇಕು. ಹಾಗಾದರೆ ಲಕ್ಷ್ಮಿ ಒಲಿದಂತೆ.

೩೧. ಕಾಗೆಕೂಟ : ನೋಡಿದರೆ ಸತ್ತ ಸುದ್ದಿಯನ್ನು ಬೀಗರಿಗೆ ತಿಳುಹಿಸಿ ಬೀಗರೆಲ್ಲರು ಅಳುತ್ತಾ ಬಂದರೆ ಅವರ ಕಂಠಕ ಹಿಂದೆ ಆದಂತೆ ಎಂದು ಹೇಳುತ್ತಾರೆ.

¤ ¤ ¤ ¤ ¤

ಅಧ್ಯಾಯ ೮

ವೃತ್ತಿ ಮತ್ತು ಕುಲಕಸುಬು

೮.೧. ವೇಷಗಾರಿಕೆ

೮.೨. ಬೇಟೆ

೮.೩. ಸಣ್ಣ ಕೈಗಾರಿಕೆ

೮.೪. ಗೃಹ ಕೈಗಾರಿಕೆ

೮.೫. ಭಿಕ್ಷೆ

೮.೬. ವ್ಯಾಪಾರ

ಜೀವನ ವಿಧಾನ

ಹಗಲುವೇಷಾಗರರ ಆಹಾರ ಮತ್ತು ಪಾನೀಯಗಳು :

ಆದಿಯಲ್ಲಿ ಮಾನವ ಆಹಾರಕ್ಕಾಗಿ ಬೇಟೆಯನ್ನೇ ಅವಲಂಬಿಸಿದ್ದನು. ಅಂದಿನಿಂದ ಇಂದಿನದವರೆಗೆ ಈ ಲಕ್ಷಣ ಮಾನವ ಸಮಾಜದಲ್ಲಿ ಇಂದಿಗೂ ಕೆಲವು ಜನಸಮುದಾಯಗಳಲ್ಲಿ ಮುಂದುವರಿಯುತ್ತಿರುವುದನ್ನು ಕಾಣುತ್ತೇವೆ. ಗುಡ್ಡಗಾಡುಗಳಲ್ಲಿ ಕಾಡುಪ್ರಾಣಿಗಳನ್ನು ಬೇಟೆಯಾಡಿ ಜೀವಿಸಿದ ಈ ಜನ ಈಗ ಸಸ್ಯಹಾರಕ್ಕೆ ಬದಲಾಗಿದ್ದಾರೆ. ಇಂದು ಇವರ ಪ್ರಧಾನ ಆಹಾರ ಜೋಳ, ಸಜ್ಜೆ, ರಾಗಿ, ಭತ್ತ ಮುಂತಾದವು, ಜೊತೆಗೆ ಮಾಂಸಹಾರವು ರೂಢಿಯಲ್ಲಿದೆ.

ಹಗಲುವೇಷಗಾರರು ಕಾಡಿನಲ್ಲಿ ವಾಸಿಸುವ ಸಮಯದಲ್ಲಿ ತನಗೆ ಸಿಕ್ಕ ನಾರು ಬೇರು, ಗೆಡ್ಡೆ, ಗೆಣಸು, ಹಣ್ಣು-ಕಾಯಿ, ಪ್ರಾಣಿ, ಪಕ್ಷಿ, ಕಾಳು, ಕಡ್ಡಿಯನ್ನು ತಿಂದು ರೂಢಿಸಿಕೊಂಡಿದ್ದಾರೆ. ಬದುಕಿಗೆ ಯಾವ ಗುರಿಯನ್ನು ಕಾಣದ ಇವರು ಅಂದಿನಿಂದ ಇಂದಿನವರೆಗೆ ಆಹಾರಕ್ಕಾಗಿ ಪಾನಕ್ಕಾಗಿ ನಿತ್ಯವೂ ಹೋರಾಟಮಾಡುತ್ತಲೇ ಬಂದಿರುವುದು.

೮.೧. ಆಹಾರ :

ಇವರು ಬೆಳಿಗ್ಗೆ ಅಡುಗೆ ಮಾಡಿಕೊಳ್ಳುವುದಿಲ್ಲ. ಬೆಳಕು ಹರಿಯುವುದು ಒಂದೇ ತಡ ಭಿಕ್ಷಾಟನೆಗೆ ಹೊರಡುತ್ತಾರೆ. ಆದುದರಿಂದ ಊರಲ್ಲಿ ಭಿಕ್ಷೆ ದೊರಕಿದ್ದೇ ಊಟ ಮಾಡುತ್ತಾರೆ. ಸಾಯಂಕಾಲ ಮಾತ್ರ ತಮ್ಮ ಭಿಕ್ಷೆಯಲ್ಲಿ ಎಷ್ಟು ಆಹಾರ ಉಳಿದಿದೆಯೋ ನೋಡಿಕೊಂಡು ಅಡುಗೆ ಮಾಡಿಕೊಳ್ಳುತ್ತಾರೆ. ಇವರು ಅನ್ನ ಮಾಡಿಕೊಳ್ಳುವುದು ಬಹಳ ಕಡಿಮೆ ಏಕೆಂದರೆ ಅಕ್ಕಿ ಸಿಗುವುದು ಕಡಿಮೆಯಾಗಿದ್ದರಿಂದ ಪೂರ್ವದಲ್ಲಿ ನುಚ್ಚಿನ ಅನ್ನ ಇಲ್ಲವೆ ಮುದ್ದೆ, ಕಟಂಬಲಿ ಮಾಡಿಕೊಳ್ಳುವುದು ರೂಢಿಯಲ್ಲಿದೆ. ಅಲ್ಲದೆ ಜೋಳ, ಸಜ್ಜೆ, ರಾಗಿ, ರೊಟ್ಟಿಯನ್ನು ಸಹ ಮಾಡಿಕೊಳ್ಳುತ್ತಾರೆ. ಆದರೆ ಅಂಬಲಿ ಮಾಡಿಕೊಳ್ಳುವುದು ಹೆಚ್ಚು ಕಂಡುಬರುತ್ತದೆ. ಏಕೆಂದರೆ ಅಂಬಲಿಯಿಂದ ಸಣ್ಣ ಮಕ್ಕಳು, ಮುದಿಯರ ಹೊಟ್ಟೆ ತುಂಬುತ್ತದೆ, ಎನ್ನುವ ಉದ್ದೇಶವಿದೆ. ಅದಕ್ಕಾಗಿ ರೊಟ್ಟಿ, ಮಾಡಿಕೊಳ್ಳುವುದಕ್ಕಿಂತ ಅಂಬಲಿ ಕಾಯಿಸಿಕೊಳ್ಳಲು ಹೆಚ್ಚು, ಇಷ್ಟ

ಪಡುತ್ತಾರೆ. ಆದರೆ ಇಂದು ಕಾಲಾನುಗುಣವಾಗಿ ಆಹಾರದಲ್ಲಿ ಕೆಲವು ಬದಲಾವಣೆ ಮಾಡಿಕೊಂಡಿದ್ದಾರೆ. ರೊಟ್ಟಿಗಿಂತಲೂ ಅನ್ನವನ್ನೇ ಇಂದು ಇಷ್ಟಪಡುತ್ತಿದ್ದಾರೆ.

ಹಗಲುವೇಷಗಾರರು ಕಾಡಿನಲ್ಲಿ ಮುಕ್ತವಾಗಿ ದೊರಕುವ ಹಲವಾರು ಕಾಯಿಪಲ್ಯಗಳನ್ನು ತಿಂದು ಬದುಕಿದ್ದಾರೆ. ಇವರು ಬೇಟೆಗೆ ಕಾಡು-ಮೇಡು, ಹಳ್ಳ-ಕೊಳ್ಳಗಳಲ್ಲಿ ಅಲೆಯುತ್ತಿರುವಾಗ ತಮಗೆ ರುಚಿಯೆನಿಸಿದ ಪಲ್ಯಗಳನ್ನೆಲ್ಲಾ ತಂದು ಬೇಯಿಸಿಕೊಂಡು ತಿಂದಿದ್ದಾರೆ. ಪುಂಡಿ ಪಲ್ಯವೆಂದರೆ ಇವರಿಗೆ ಬಹಳ ಇಷ್ಟ. ಕೆರೆ ಕುಂಟೆಗಳ ದಂಡೆಯಲ್ಲಿ ಮತ್ತು ನೀರಿನ ಮೇಲೆ ಬೆಳೆಯುವ ಅರಿವೆ ಪಲ್ಯಯನ್ನು ಉಪಯೋಗಿಸುತ್ತಾರೆ. ಸಭಾಕ್ಷಿಪಲ್ಯೆ, ನುಗ್ಗೆ ಸೋಪ್ಪು, ಸಕುವಂತ ಪಲ್ಯ, ಮೆಂತೇ ಪಲ್ಯ, ಉಳಬಸೆಲೆ, ರಾಜಗಿರಿ, ಬಡಬಡಕ, ತಿರುಗುಸಾಲೆ, ಪನಕನಪಲ್ಯ, ತೊಂಡೆಸೊಪ್ಪು, ಕುಸುಬೆ ಗಿಡದ ಎಲೆ, ಮುಂತಾದ ಸೊಪ್ಪುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಂಡಿದ್ದಾರೆ.

ಹಲವು ಜಾತಿಯ ಗಿಡದ ಬಳ್ಳಿಯ ಸೊಪ್ಪಲ್ಲದೆ ಹಲವು ಗಿಡದ ಹೂ ಚಿಗುರುಗಳನ್ನು ಸಹ ಅಡುಗೆಯಲ್ಲಿ ಬಳಸಿಕೊಂಡು ತಿಂದಿದ್ದಾರೆ. ಅದರಲ್ಲಿ ಉಣಿಸೆ ಚಿಗುರು ಮತ್ತು ಹೂ ಬಹಳ ಪ್ರಿಯವಾದ ಆಹಾರ ಉಣಿಸೆಗಿಡದ ಎಲೆಯ ಚಿಗುರು ಬಿಟ್ಟಾಗಿನಿಂದ ಕಾಯಿ ಆಗುವವರೆಗ ಉಣಿಸೆಯ ಚಿಗುರು, ಹೂವು ಬಳಸಿಕೊಳ್ಳುತ್ತಲೆ ಇರುತ್ತೇವೆ ಎಂದು ಹೇಳುತ್ತಾರೆ. ಪಲ್ಯವಾಗಿ ಬೇಯಿಸಿ ತಿನ್ನುವುದಲ್ಲದೆ ಹಲವಾರು ಕಾಯಿಪಲ್ಯಗಳನ್ನು ಹಾಗೆಯೇ ಕಿತ್ತು ಹಸಿಯದನ್ನು ತಿಂದು ಬದುಕಿದ್ದಾರೆ.

ಕೆಲವು ಕಾಯಿಗಳನ್ನು ಪಲ್ಯಯಂತೆ ಬೇಯಿಸಿಕೊಂಡು ತಿನ್ನುತ್ತಾರೆ. ನುಗ್ಗೆಕಾಯಿ, ನಲ್ಲಿಕಾಯಿ, ತೊಂಡೆಕಾಯಿ, ಬುಡುಮೆಕಾಯಿ, ಸೌತೆಕಾಯಿ, ಗೆಡ್ಡೆ ಗೆಣಸು, ಕಾರ್ಚಿಕನ ಕಾಯಿ ಮುಂತಾದವುಗಳನ್ನು ಬಳಸಿದ್ದಾರೆ. ಇವು ಅಲ್ಲದೆ ಸೋರೆಕಾಯಿ, ಹೀರೇಕಾಯಿ, ಬದನೆಕಾಯಿ, ಬೆಂಡೆಕಾಯಿ, ಕುಂಬಳಕಾಯಿ, ತುಪ್ಪರೆಕಾಯಿಗಳನ್ನು ಸಹ ಇವರ ಜೀವನಾಧರವಾಗಿವೆ.

ಕಾಡಿನಲ್ಲಿ ಬೆಳೆಯುವ ಹಣ್ಣುಗಳಾದ ಎಲಚಿಹಣ್ಣು, ಈಚಲುಹಣ್ಣು, ತಾಳೆಹಣ್ಣು, ನೀಲದ ಹಣ್ಣು, ಹತ್ತಿಹಣ್ಣು, ಬಾರೆಹಣ್ಣು, ಕಾರೆಹಣ್ಣು, ಕವಳೆಹಣ್ಣು, ತುಪ್ಪದಹಣ್ಣು, ತೊಂಡೆಹಣ್ಣು ಪಾಪಸ್ಸಿಹಣ್ಣು, ಬೆಕ್ಕಿನ ತೊಂಡೆಹಣ್ಣು ಮಾವಿನಹಣ್ಣು, ಚಳ್ಳೆಣ್ಣು, ಪಾರ್ಲಹಣ್ಣು ಮುಂತಾದ ಕಾಡು ಜಾತಿಗೆ ಸೇರಿದ ಹಣ್ಣುಗಳನ್ನು ತಿನ್ನುತ್ತಾರೆ.

ಹಾಗೆಯೇ ಕಾಡಿನಲ್ಲಿ ಅಲೆಯುತ್ತಿರುವಾಗ ಬಾಯಿಗೆ ರುಚಿ ಸಿಕ್ಕ ಗಡ್ಡೆಗಳನ್ನು ತಿಂದು ಬದುಕಿದ್ದಾರೆ. ಭೂಚಕ್ರದಗಡ್ಡೆ, ಕನ್ಯಾಕುಮಾರಿ, ಪಿಲ್ಲಿಪಿಸಿರಿಗಡ್ಡೆ, ಸಿಹಿಉಣಿಸೆ ಕಾಯಿ, ಸೀತಾಫಲ, ರಾಮಫಲ, ಕರುಬೂಸ, ಕಲ್ಲಂಗಡೆ ಮುಂತಾದ ಗಡ್ಡೆಗಳನ್ನು ರೂಢಿಸಿಕೊಂಡಿದ್ದರು.

ಕೆಮ್ಮು ಆದಾಗ ಕುಪ್ಪಗಿನ ತೊಪ್ಪಲನ್ನು ತಿಂದರೆ ಕೆಮ್ಮು ಹೋಗುತ್ತದೆಂದು ದಾರಿಯಲ್ಲಿ ಹೋಗುವಾಗ ಕಂಡರೆ ಹಾಗೆಯೇ ತಿಂದು ಬಿಡುತ್ತಾರೆ. ಅದೇ ರೀತಿ ಬೇಟೆಗೆ ಹೋದಾಗ ಇನ್ನು ಬೆಳೆದು

ನಿಂತಿರುವ ಸಜ್ಜೆಯ ವಡೆ ಕಿತ್ತಿಕೊಂಡು ತಿನ್ನುತ್ತಾರೆ. ತೆನೆ ಬಿಟ್ಟ ಕಾಳು ಆಗಿ ಹಾಲು ತುಂಬಿದ್ದರೆ ಜೋಳ, ಸಜ್ಜೆ, ರಾಗಿ, ಮುಸಿಕಿನ ಜೋಳ, ನವಣೆ ಮುಂತಾದ ತೆನೆಗಳನ್ನು ಕಿತ್ತುತಂದು ಸುಟ್ಟು ಅದರಲ್ಲಿರುವ ಕಾಳು ಉದುರಿಸಿಕೊಂಡು ತಿನ್ನುತ್ತಾರೆ. ಇವು ಬಹಳ ರಸಭರಿತವಾಗಿ ಮತ್ತು ರುಚಿಯಾಗಿರುತ್ತವೆ ಎಂದು ಹೇಳುತ್ತಾರೆ.

ಹಗಲುವೇಷಗಾರರಿಗೆ ಬೇಟೆ ಬಹಳ ಇಷ್ಟವಾದದ್ದು. ಇವರು ವೇಷವನ್ನೇ ಹಾಕಲಿ ಯಾವುದೇ ವೃತ್ತಿಯನ್ನು ಮಾಡಲಿ, ಮನೆಗೆ ಬಂದಾಗ ಬೇಟೆಗೆ ಹೋಗುವುದು ಇವರಲ್ಲಿ ಸರ್ವಸಾಧಾರಣವಾಗಿ ಬೆಳೆದು ಬಂದಿದೆ. ಪ್ರತಿದಿನ ಯಾವುದೋ ಒಂದು ಅಡವಿ ಪ್ರಾಣಿಯನ್ನು ಹಿಡಿದು ತಂದು ತಿನ್ನದಿದ್ದರೆ ಇವರಿಗೆ ಸಮಯ ಹೋಗುವುದಿಲ್ಲ. ದೊಡ್ಡ ದೊಡ್ಡ ಪ್ರಾಣಿ ಸಿಗಿದದ್ದರೂ ಅಂದು ಉಡುವು, ಇಲಿಗಳು, ಮೀನು, ಏಡಿ ಯಾವುದಾದರೂ ಇರಲೇಬೇಕು ಎನ್ನುತ್ತಾರೆ.

ಈ ಕೆಳಗಿನ ತೆಲುಗು ಬೇಟೆ ಪದದಲ್ಲಿ ಇವರು ಬೇಟೆಯಾಡುವ ಪ್ರಾಣಿಗಳನ್ನು ಹೆಸರಿಸಿದ್ದಾರೆ. ಈ ಪದವು ಆಂಧ್ರಪ್ರದೇಶದಲ್ಲಿ ಪ್ರಚಾರದಲ್ಲಿದೆ

ಪಲ್ಲವಿ : ಅಶ್ಕೋಟಿಕಿ ಎಂತ ಬಾದರಾ! ಓ ಕಾರಿಕಾ!
ಶಿಕಾರಂಟೆ ಸಿಂತಲೇದುರಾ! ಬಿಕಾರಿಗಾ! ‖ ಅ ‖

ಕಾಲ್ವಲೋನಿ ಚಿನ್ನ ಚೇಪ - ಮಡುಗುಲೋನಿ ಪೆದ್ದಚೇಪ
ಗವ್ವಿಲೋನಿ ಎಂಡ್ರಕಾಯ - ತೊವ್ವಿ ತೊವ್ವಿ ಪೆಡ್ತೆ ಗೂಡ ‖ ಅ ‖
ತುಕ್ಕ ತೀಸಿ ಉದ್ರಗೊಟ್ಟಿ - ಲೊಟ್ಟಿ ದೀಸಿ ಲಟ್ಟೆ ಲೇಸಿ
ಎಲ್ಕಪೆಂಟ ತೊವ್ವುಕುನ್ನ - ಏಮಿಜಾಲದಯ್ಯ ನೀಕು ‖ ಅ ‖
ಚೆಟ್ಟುಮೀದ ತೋಡ್ಸಿಗಾಡು - ಪುಟ್ಟಲೋನಿ ವಲೆಂಗಾಡು
ಗಟ್ಟು ಗವ್ವಿಲೋನಿ ಎಂಟ್ವ - ಪಟ್ಟುಕುನ್ನ ಸಾಲದಯ್ಯೆ ‖ ಅ ‖
ತೆಟ್ಟುಮೀದ ಉಡುಂ ಬಟ್ಟೆ - ಬಾಯ್ನ ಕುರುಂಗಾನಿ ಗೊಟ್ಟೆ
ನರ್ಸಿಗಾಡು ಬೂತಾಕಾಶ್ಕಂ - ನಾನಾ ಜಂತೂಲದಿನ್ನ ‖ ಅ ‖
ನೀಳ್ಳಲೋನ ಬುಡಮುಂಕ - ಪೋದಲೋನಿ ಲಾವಂಕ
ತೋರ್ರಲೋನಿ ಗೋರಿಂಕ - ಪ್ರತಿ ಪಿಟ್ಟಾ ನೀದಿಂಕ ‖ ಅ ‖
ಮೆತ್ತೆ ಕಾಶ್ಕಂ ಲೇಕುನ್ನ - ಕೊಕ್ಕಿಡಿಗಾಡು ಚಿಕ್ಕುಕುನ್ನ
ಮಂಡಿಗಾಡು ಮ್ಯಾಸಾಲು - ಉಂಡೆನು ಉನ್ನಾಯಿ ನೀಕು ‖ ಅ ‖
ಕೊಂಡ ಗವ್ವಿ ನೀಕು ಬಂಗ್ಲ - ಉರಲೆ ನೀಕುನ್ನ ಸಿರುಲು
ವಲಲೆ ನಿ ಸಂಪದುಲು - ವದಲವುಗಾ ನೀ ವೇಟಲು ‖ ಅ ‖

ಅಶ್ಕೋಟಿ = ಮಾಂಸ, ಕಾರಿಗಾ - ಬುಡಿಗೆ ಜಂಗಮಾ, ಶಿಕಾರಿ = ಬೇಟೆ, ಎಂಟ್ವ - ಮುಂಗಿಸಿ, ತೊಡ್ಸಿಗಾಡು - ಉಡುವು, ನರ್ಸಿಗಾಡು - ನರಿ, ಬೂತಕಾಶ್ಕಂ - ಅಡವಿಬೆಕ್ಕು (ಕರಿಯ), ಮತ್ತೆಕಾಶ್ಕಂ-ಊರಬೆಕ್ಕು, ಕೊಕ್ಕಿಡಿಗಾಡು - ಕೋಳಿ, ಮಂಡಿಗಾಡು - ಹಂದಿ, ಮ್ಯಾಸಾಲು = ಮೇಕೆಗಳು.

ಈ ಮೇಲಿನ 'ಬೇಟೆಯ ಪದ'ದಲ್ಲಿ ಮಾಂಸದ ಮೇಲೆ ತುಂಬಾ ಪ್ರೀತಿ ಇದೆ. ಶಿಕಾರಿ ಅಂದ್ರೆ ನಮಗೆ ನೀರು ಕುಡಿದಷ್ಟು ಸುಲಭ. ಯಾವ ಪ್ರಾಣಿಯನ್ನು ಯಾವ ರೀತಿ ಬಂಧಿಸಬೇಕು ಎನ್ನುವ ಚಾತುರ್ಯ ನಮ್ಮಲ್ಲಿದೆ. ಯಾವ ಯಾವ ಪ್ರಾಣಿ ಎಲ್ಲೆಲ್ಲಿ ವಾಸಿವಾಗಿರುತ್ತವೆ. ಹೇಗೆ ಅದನ್ನು ಹಿಡಿಯಬೇಕು ಎನ್ನುವುದು ಚೆನ್ನಾಗಿ ಬಲ್ಲವರಾಗಿದ್ದೇವೆ ನಾವು ಬುಡಗ ಜಂಗಮರು ಎಂದು ಅರ್ಥೈಸುತ್ತದೆ. ಈ ಪದದಲ್ಲಿ ಬೇಟೆಯ ಪ್ರಾಣಿಗಳ ಹೆಸರುಗಳನ್ನು ಮರಗು ಭಾಷೆಯಲ್ಲಿಯೇ ಹೇಳಿರುವುದು ವಿಶೇಷ.

ಇವರು ತಿನ್ನುವ ಪ್ರಾಣಿಗಳು ಹಲವಾರು, ಕಣ್ಣಿಗೆ ಕಂಡ ಸಣ್ಣ ಸಣ್ಣ ಪ್ರಾಣಿಪಕ್ಷಿಗಳನ್ನು ತಿಂದಿದ್ದಾರೆ. ಅಂತಹ ಪ್ರಾಣಿ, ಪಕ್ಷಿಗಳ ಪಟ್ಟಿ ಈ ಕೆಳಗಿನಂತಿವೆ.

೮.೧.೨ ಪ್ರಾಣಿಗಳು

ಉಡುವು : ಇಲಿ, ಬೆಕ್ಕು, ಮುಂಗಿಸಿ, ನರಿ, ಹಂದಿ, ಮೊಲ, ಚೀರು ನಾಯಿ, ಏಡಿ, ಮೀನು, ಆಮೆ, ಜಿಂಕೆ, ಮೇಕೆ, ದನ, ಮುಂತಾದ ಪ್ರಾಣಿಗೆಳನ್ನು ತಿನ್ನುತ್ತಾರೆ.

೮.೧.೩ ಪಕ್ಷಿಗಳು

ಗೋರಿಂಕ, ಗಿಳಿ, ಕೋಗಿಲೆ, ಕರಿಯ ಮತ್ತು ಬಿಳಿಯ ಪಾರಿವಾಳ, ಕಾರೆ ಕಂಕಣ್ಣ, ಲಾವಂಕ, ಮರಕುಟಿಗನ ಹಕ್ಕಿ, ಗೂಬೆ, ನೀರು ಕೋಳಿ, ಅಡವಿಕೋಳಿ, ಬುರಲಿ, ಅಡವಿ ಬಾತು, ಕೊಕ್ಕರೆ, ಬೆಳವ, ಹದ್ದು ಮುಂತಾದ ಪ್ರಾಣಿಗಳನ್ನು ತಿನ್ನುತ್ತಾರೆ. ವೃತ್ತಿ ಮತ್ತು ಪ್ರವೃತ್ತಿಯ ಸಮ್ಮಿಳನವೇ ಈ ಬೇಟೆ ಎಂದು ಹೇಳಬಹುದು.

೮.೧.೪. ಇವರ ಕೆಲವು ಆಹಾರ ವಿಧಾನಗಳು :

ಗಂಡುಕಾರ : ಒಣ ಮೆಣಸಿನಕಾಯಿ, ಉಪ್ಪು ಸೇರಿಸಿ ಅರೆದ ಕಾರ

ಕಾರ : ಹಸಮೆಣಸಿನಕಾಯಿಯಲ್ಲಿ, ಉಣಿಸೆಹಣ್ಣು, ಉಪ್ಪು, ಹಾಕಿ ಪುಡಿ ಮಾಡಿದರೆ ಅದೇ ತೊಕ್ಕು ಅಥವಾ ಕಾರ ಎಂದು ಕರೆಯುತ್ತಾರೆ. ಊಟದಲ್ಲಿ ಮೇಲೋಗರವಾಗಿ ಬಳಸುತ್ತಾರೆ.

ಹಿಟ್ಟಿನಸಾರು : ಮಾಂಸದ, ಮೀನು ಬೇಯಿಸುವಾಗ ಹುಣಿಸೆ ಹಣ್ಣನ್ನು ಚೆನ್ನಾಗಿ ಕಿವುಚಿ ಆ ನೀರನ್ನು ಅದರಲ್ಲಿ ಹಾಕಿ ಉಪ್ಪು, ಕಾರ, ಜೋಳದ ಹಿಟ್ಟು ಅಥವಾ ನುಚ್ಚಿನ ಹಿಟ್ಟು ಹಾಕಿ ಕಲಿಸಿ ಬೇಯಿಸುತ್ತಾರೆ ಇದನ್ನು ತೆಲುಗಿನಲ್ಲಿ ಪಿಂಡಿಚಾರು ಕನ್ನಡದಲ್ಲಿ ಹಿಟ್ಟಿನಸಾರು ಅನ್ನುತ್ತಾರೆ.

ಒಣಗಿಸಿದ ಮಾಂಸವನ್ನು ಹಂದಿಯ ಬೇಟೆ ಸಿಕ್ಕಾಗ ಅದರ ಮಾಂಸವನ್ನು ತೆಗೆದು ಚೆನ್ನಾಗಿ ಬಿಸಿಲಿಗೆ ಒಣಗಿಸಿ ಒಂದು ಕಡೆ ತೆಗೆದಿಟ್ಟುಕೊಂಡಿರುತ್ತಾರೆ. ಮೊದಲು ಒಣಗಿಸುವಾಗ ಉಪ್ಪು, ಅರಿಷಿಣ ಪುಡಿ ಹಾಕಿ ಕಲಿಸಿ ಒಣಗಿಸಿರುತ್ತಾರೆ. ಹೀಗೆ ಒಣಗಿಸಿದ ಮಾಂಸವನ್ನು ತಮಗೆ ಬೇಟೆ ಸಿಗದಿದ್ದಾಗ ಇದನ್ನು ಸಾರಿನಲ್ಲಿ ಬೇಯಿಸಿ ನಂಜಿಕೊಳ್ಳಲು ಬಳಸುತ್ತಾರೆ.

ಎಣ್ಣೆ ಪದಾರ್ಥ : ಕಾಯಿಪಲ್ಯಗಳಲ್ಲಿ ಎಣ್ಣೆಯ ಬದಲಾಗಿ ಹಂದಿಯ ಕೊಬ್ಬು ಬಳಸುತ್ತಾರೆ. ಹಂದಿಯ ಬೇಟೆ ಸಿಕ್ಕಾಗ ಅದರ ದೇಹದಲ್ಲಿರುವ ಕೊಬ್ಬನ್ನು ತೆಗೆದು ಶೇಖರಿಸಿಕೊಂಡು ಅಡುಗೆ ಎಣ್ಣೆಯ ಬದಲಿಗೆ ಬಳಸುತ್ತಾರೆ.

ಬೇಟೆಯಲ್ಲಿ ಆಹಾರ ತಯಾರಿಸಿಕೊಳ್ಳುವುದು : ಜೂನ್, ಜುಲೈ ಎರಡು ತಿಂಗಳು ಮಳೆಗಾಲದಲ್ಲಿ ಸಾಮಾನ್ಯವಾಗಿ ವೇಷ ಧರಿಸುವುದಿಲ್ಲ. ಅಂತಹ ಸಮಯದಲ್ಲಿ ನಾಲ್ಕು ಅಥವಾ ಐದು ಜನರು ಕಲಿಸಿ ಬೇಟೆಗೆ ಹೋಗುತ್ತಾರೆ. ಅಂತಹ ಸಮಯದಲ್ಲಿ ಮಳೆ ಬಂದು ತಗ್ಗು, ಹೊಂಡ, ಕೆರೆಗಳು ತುಂಬಿಕೊಂಡಿರುತ್ತವೆ. ಅಂತಹ ಹೊಂಡಗಳನ್ನು ಬಲೆಯಿಂದ ಸೋಸುತ್ತಾರೆ. ಅಂತಹ ಸಮಯದಲ್ಲಿ ದಿನಕ್ಕೆ ಇಪ್ಪತ್ತರಿಂದ ಐವತ್ತರವರೆಗೆ ಆಮೆಗಳು ಸಿಗುತ್ತವೆ ಎಂದು ಹೇಳುತ್ತಾರೆ. ಸಿಕ್ಕ ಆಮೆಗಳನ್ನು ಸುಟ್ಟು ಮೇಲಿನ ಚಿಪ್ಪನ್ನು ಕಿತ್ತಿಕೊಂಡು ಅದನ್ನೇ ಪಾತ್ರೆ ಮಾಡಿಕೊಂಡು ಅದರಲ್ಲಿ ಮೊದಲೆ ಒಯ್ದು ಉಪ್ಪು ಕಾರ ಕಲಿಸಿ ತಿನ್ನುತ್ತಾರೆ. ಏಡಿ, ನರಿ, ಮೊದಲಾದ ಪ್ರಾಣಿಗಳು ಜಾಸ್ತಿ ಸಿಕ್ಕ ಸಂದರ್ಭಗಳಲ್ಲಿ ಅಲ್ಲಿಯೇ ಸುಟ್ಟುಕೊಳ್ಳುವುದು, ತಿನ್ನುವುದು, ತಿನ್ನುವುದಕ್ಕೆ ಮೊದಲು ಸ್ವಲ್ಪ ಭೂತಾಯಿಗೆ ನೈವೇದ್ಯ ಹಾಕುತ್ತಾರೆ.

ಈ ಸಮುದಾಯದವರು ಸಣ್ಣ ಸಣ್ಣ ಪ್ರಾಣಿಗಳನ್ನು ಸುಟ್ಟುಕೊಂಡು ತಿನ್ನುವುದೆಂದರೆ ಬಹಳ ಇಷ್ಟವಂತೆ, ಇಲಿಗಳು, ಉಡುವು, ಪಕ್ಷಿಗಳು, ಮೀನುಗಳು, ಏಡಿ ಮೊದಲಾದವುಗಳನ್ನು ಬೆಂಕಿಯಲ್ಲಿ ಸುಟ್ಟುಕೊಂಡು ಸಾರಾಯಿ, ಹೆಂಡ ಕುಡಿಯುವಾಗ ನಂಬಿಕೆ ಮಾಡಿಕೊಂಡು ತಿನ್ನುವುದು ಸಾಮಾನ್ಯವಾದ ವಿಚಾರ. ಇವರಿಗೆ ಬೇಟೆಯಲ್ಲಿ ತಂದ ಪ್ರಾಣಿಗಳನ್ನು ಮೇಲೋಗರವಾಗಿ ಉಪಯೋಗಿಸುವುದೇ ಹೆಚ್ಚು. ಮುಖ್ಯ ಆಹಾರ ಜೋಳದ ಮುದ್ದೆ, ರಾಗಿ ಅಥವಾ ಸಜ್ಜೆಯ ರೊಟ್ಟಿ, ಅನ್ನ ಮುಂತಾದವುಗಳನ್ನು ಹೆಚ್ಚು ಬಳಸುತ್ತಾರೆ.

ಊಟ ಮಾಡುವ ವಿಧಾನ : ಊಟ ಮಾಡುವ ವಿಧಾನ ಹಲವಾರು ಸಮುದಾಯಗಳಲ್ಲಿ ಒಂದೊಂದು ರೀತಿಯಾಗಿರುತ್ತದೆ. ಇವರು ತಮ್ಮ ಗುಡಾರದ ಮುಂದೆ ಹೊತ್ತು ಮುಳುಗಿದ ತಕ್ಷಣ ಪ್ರಾತಃ ಕಾಲದಲ್ಲಿ ಎಲ್ಲರೂ ತುದಿಗಾಲಲ್ಲಿ ಸುತ್ತಲೂ ಕುಳಿತು ಊಟ ಮಾಡುತ್ತಾರೆ. ತಟ್ಟೆ ಅಥವಾ ಮುಚ್ಚಳಗಳನ್ನು ಕೈಯಲ್ಲಿ ಹಿಡಿದುಕೊಂಡು ಇಲ್ಲವೆ ತೆಂಗಿನ ಚಿಪ್ಪನ್ನು ಬೋರಲು ಹಾಕಿಕೊಂಡು ಅದರ ಮೇಲೆ ತಟ್ಟೆ, ಮುಚ್ಚಳು ಇಟ್ಟುಕೊಂಡು ಊಟ ಮಾಡುತ್ತಾರೆ. ಇಂದು ಆಧುನಿಕತೆಯ ಪ್ರಭಾವದಿಂದ ಕೆಲವು ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

೮.೧.೫. ಪಾನೀಯುಗಳು : ಇವರಿಗೆ ಆಹಾರ ತಿನ್ನುವುದು ಎಷ್ಟು ಮುಖ್ಯವೋ ಮಧ್ಯ ಪಾನೀಯವೂ ಅಷ್ಟೇ ಪ್ರಾಮುಖ್ಯತೆಯನ್ನು ಪಡದಿದೆ. ಆರ್ಯರ ಸೋಮರಸದಿಂದ ಪ್ರಾರಂಭವಾದ ಈ ಮಧ್ಯಪಾನ ಅಂದಿನಿಂದ ಇಂದಿನವರೆಗೂ ಒಂದಲ್ಲ ಒಂದು ರೀತಿಯಲ್ಲಿ ಬೆಳೆಯುತ್ತಲೇ ಬಂದಿದೆ. ಗ್ರಾಮದೇವತೆ, ಭೂತ ವೈದ್ಯದಂತಹುಗಳಿಗೆ ಮಧ್ಯಪಾನ ತಪ್ಪದೇ ಇರುತ್ತದೆ. ಅಲೆಮಾರಿ ಸಮುದಾಯದವರಾದ ಇವರು ಮೊದಲು ಕಾಡಿನಲ್ಲಿ ಈಚಲು ಹೆಂಡವನ್ನು ಕುಡಿದು ಅದನ್ನು ಅಭ್ಯಾಸವಾಗಿಸಿಕೊಂಡು ಇಂದು

ಈಚಲಗಿಡಿದ ಹೆಂಡ ಸಿಗದ ಕಾರಣ, ಕಳ್ಳಬಟ್ಟಿ ಸಾರಾಯಿ ಮತ್ತು ಸಾರಾಯಿಯಂತಹ ಮಧ್ಯಗಳಿಗೆ ಬೆರೆತುಕೊಂಡು ಕುಡಿಯುವುದು ಇವರ ಸಂಪ್ರದಾಯಗಳಲ್ಲಿ ಒಂದಾಗಿದೆ. ಮಧ್ಯಪಾನ ವೇಷಗಾರರಿಗೆ ಅತ್ಯಂತ ಪ್ರಿಯವಾದದ್ದು, ಇವರಲ್ಲಿ ಕುಡಿಯುವುದಕ್ಕೆ ವಯಸ್ಸು ಮತ್ತು ಲಿಂಗ ಬೇದವಿಲ್ಲವೆಂದು ನೋಡಿದ ತಕ್ಷಣ ತಿಳಿಯುತ್ತದೆ. ಈ ಹೆಂಡ ಮತ್ತು ಸಾರಾಯಿಯನ್ನು ಜಂಬಲಮ್ಮ ಎಂದು ಪೂಜಿಸುತ್ತಾರೆ.

ಪ್ರಾಚೀನ ಕಾಲದಲ್ಲಿ ಅಡವಿಯಲ್ಲಿ ವಾಸಮಾಡುವಾಗ ಈಚಲಹೆಂಡ, ತಾಳೆಯಹೆಂಡ ಕುಡಿದ ಇವರಿಗೆ ಇಂದು ಅಂತಹ ನೈಸರ್ಗಿಕ ಮಧ್ಯ ಸಿಗದೆ ಭಟ್ಟಸರಾಯಿ ಸಾರಾಯಿಗೆ ಮಾರು ಹೋಗಿದ್ದಾರೆ. ಇವರ ಧಾರ್ಮಿಕ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಕುಡಿಯುವುದೇ ಒಂದು ಸಂಪ್ರದಾಯವಾಗಿ ಬಿಟ್ಟಿದೆ. ಮಗು ಹುಟ್ಟಿದಾಗ ಪುರುಡುವಿನ ದಿನ ಬಾಣಂತಿ, ಸೂಲಗಿತ್ತಿ, ಕುಲ ಪ್ರಮುಖರು, ಎಲ್ಲರಿಗೂ ಕುಡಿಸುವ ಪರಿಪಾಠ ಹಾಗೆಯೇ ಬೆಳೆದುಕೊಂಡು ಬಂದುಬಿಟ್ಟಿದೆ. ಋತುಮತಿಯಾದ ಐದನೆಯ ದಿನದಲ್ಲಿ ತಮ್ಮ ಸಮುದಾಯದ ಮುಖಂಡರಿಗೆಲ್ಲಾ ಕುಡಿಸುವ ಪದ್ಧತಿ ಇದೆ. ಮದುವೆಯಂತೂ ಈ ಮಧ್ಯಪಾನವಿಲ್ಲದೆ ನಡೆಯುವುದೇ ಇಲ್ಲ. ಕೆಲವು ಸಂದರ್ಭಗಳಲ್ಲಿ ಚೆನ್ನಾಗಿ ಕುಡಿದು ಜಗಳವಾಡಿ ಸಂಬಂಧ ಹರಿದುಕೊಂಡು ಹೋದ ಪ್ರಸಂಗಗಳೂ ಇವೆ. ಈ ಬೀಗರಿಗೆ ಅವರು ಕುಡಿಸುವುದು, ಅವರಿಗೆ ಈ ಬೀಗರು ಕುಡಿಸುವುದು ಹೀಗೆ ಮದುವೆಯಲ್ಲಿ ಮಧ್ಯ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮದುವೆಯಲ್ಲಿ ಕಲಿಕುಂಡದಲ್ಲಿ ಪೂರ್ವದಲ್ಲಿ ಈಚಲು ಹೆಂಡ ತುಂಬುತ್ತಿದ್ದರಂತೆ ಈಗ ಸಿಗದೇ ಇರುವುದರಿಂದ ಅಕ್ಕಿ ತೊಳೆದ ನೀರು ಹಾಕುತ್ತಾರೆ. ಮರಣದ ಸಂದರ್ಭದಲ್ಲಿಯೂ ಹೆಣ ಕುಣಿಗೆ ಇಟ್ಟು ಬಂದ ಮೇಲೆ ಕುಣಿಗೆ ಹೋದವರೆಲ್ಲಾ ಕೂಡಿ ಸರಾಯಿ ಅಂಗಡಿಗೆ ಹೋಗಿ ಕುಡಿದು ಬರುತ್ತಾರೆ. ಇದು ಕೂಡ ಒಂದು ಸಂಪ್ರದಾಯ ಹೀಗೆ ಈ ಸಮುದಾಯದವರು ಹೆಂಡ ಸರಾಯಿಯನ್ನು ಮನೆ ದೇವರೆಂದು ತಿಳಿದಿದ್ದಾರೆ.

ತಮ್ಮ ಕುಲ ಜಾತ್ರೆ ಮಹೋತ್ಸವದ ಸಂದರ್ಭಗಳಲ್ಲಿ ಕಡ್ಡಾಯವಾಗಿ ಕುಡಿಯುತ್ತಾರೆ. ಬೀಗರು ಒಬ್ಬರಿಗೊಬ್ಬರು ಕಲೆತುಕೊಂಡಾಗ ಕುಡಿಯುವ ಮರ್ಯಾದೆ ತಪ್ಪದೇ ಇರುತ್ತದೆ. ಎಡಬಿಡದೆ ನಡೆಯುತ್ತಿರುವ ಇವರ ಕುಲಪಂಚಾಯತಿಗಳಲ್ಲಿ ಹೆಂಡದ ಗಡಿಗೆ, ಸಾರಾಯಿ ಬಾಟಲಿಗಳನ್ನು ತರಿಸಿಕೊಂಡು ಕುಲಸ್ಥರೆಲ್ಲರೂ ಕುಡಿಯುತ್ತಾರೆ. ತಪ್ಪು ಮಾಡಿದವರಿಗೆ ಕುಲ ಶಿಕ್ಷೆಯ ರೂಪದಲ್ಲಿ ಈ ರೀತಿಯಾಗಿ ಮಧ್ಯ ಮಾಂಸಮಾಡಿಕೊಳ್ಳುವುದು ಇವರ ಕುಲಾಚಾರವಾಗಿದೆ. ಕೆಲವರಿಗೆ ಸಾಯಂಕಾಲವಾದ ತಕ್ಷಣ ಕುಡಿಯುವುದು ಒಂದು ದಿನಚರಿಯಾಗಿದೆ.

ಕೆಲವರು ಎಲೆ ಅಡಿಕೆ ತಿನ್ನುತ್ತಾರೆ. ಕೆಲವರು ಬೀಡಿ ಸಿಗರೇಟು ಚಿಲುಮೆ ಸೇದುತ್ತಾರೆ. ಹೆಂಗಸರು ನಸ್ಯ ತಿಕ್ಕುವುದು ಕಂಡುಬರುತ್ತದೆ. ಇನ್ನೂ ಕೆಲವರು ತಂಬಾಕು ತಿನ್ನುತ್ತಾರೆ. ಮನೆಯಲ್ಲಿ ಚಹಾ ಮಾಡುವುದಿಲ್ಲ. ಬದಲಾಗಿ ಹೋಟೆಲ್‌ನಲ್ಲಿಯೇ ಪ್ರತಿಯೊಂದು ಮರ್ಯಾದೆಗಳು ನಡೆಯುವುದು ಹೆಚ್ಚು. ಇವರ ಸಂಬಂಧಿಕರು ಬಂದರೂ ಸಾರಾಯಿ, ಕಾಫಿ ಹೋಟೆಲ್‌ಗಳಿಗೆ ಹೋಗಿ ಕುಡಿಸಿಕೊಡು ಬರುವ ಸಂಪ್ರದಾಯವಿದೆ.

[illegible]

ಈ ರೀತಿಯಾಗಿರುವ ಇವರ ಆಹಾರದ ಅಭ್ಯಾಸ ಪರಿಶೀಲಿಸಿದರೆ ಇವರು ಹೆಚ್ಚು ರೊಟ್ಟಿ, ಮುದ್ದೆಯನ್ನು ಇಷ್ಟ ಪಡುವುದು, ಬೇಟೆಯ ಮಾಂಸವಿಲ್ಲದೆ ಊಟ ಮಾಡುವುದಿಲ್ಲ ಎನ್ನುವುದು. ಹೆಂಡ ಸಾರಾಯಿಯನ್ನು ಕುಡಿಯುವುದು ಇವರು ಬೇಟೆಯಾಡುವ ರೀತಿ ಇನ್ನು ಇವರಲ್ಲಿರುವ ಆದಿ ಮಾನವನ ಲಕ್ಷಣಗಳು ಗುರುತಿಗೆ ತರುತ್ತವೆ.

೮.೨ ವಸತಿ

ಸದಾ ಅಲೆಯುವ ಪ್ರವೃತ್ತಿಯವರಾದ ವೇಷಗಾರರು ತಮ್ಮ ಜೀವನದ ಬಹುಪಾಲು ಭಾಗವನ್ನು ಇದರಲ್ಲಿಯೇ ಕಳೆದಿದ್ದಾರೆ. ಕಲಾಪ್ರದರ್ಶನವೇ ದೇವರು. ಕಲಾಪೋಷಕರಾದಂತಹ ಜನರೇ ಇವರ ಆಸ್ತಿ. ಅಂತಹ ನೆಲೆಯಲ್ಲಿ ಬದುಕಿದ ಇವರಿಗೆ ಒಂದು ಸ್ಥಿರವಾದ ನೆಲೆಯೆಂಬುದೇ ಇಲ್ಲ. ಆದ್ದರಿಂದ ಇವರು ಪ್ರದೇಶದಿಂದ ಪ್ರದೇಶಕ್ಕೆ, ಊರಿಂದ ಊರಿಗೆ ಧನ ಕರುಗಳ ಮೇಲೆ ಕುದುರೆಗಳ ಮೇಲೆ ತಮ್ಮ ತಮ್ಮ ಸಾಮಾನು ಸರಂಜಾಮುಗಳನ್ನು ಹೇರಿಕೊಂಡು ಹೋಗಿ ಊರ ಮುಂದಿನ ಗುಡಿಗಳಲ್ಲಿ ಇಲ್ಲವೆ ಊರ ಹಿಂದಿರುವ ಖಾಲಿ ಮೈದಾನಗಳಲ್ಲಿ, ಬೇರಾವುದೋ ಒಳ್ಳೆಯ ಪ್ರಸಕ್ತ ಜಾಗ ಸಿಕ್ಕರೆ ನೀರಿಸೌಲಭ್ಯವಿದ್ದರೆ ಊರ ಹೊರಗಡೆಯೇ ಇವರು ವಾಸಿಸುವುದು ಹೆಚ್ಚು ಕಂಡುಬರುತ್ತದೆ. ಇವರು ದೇವಸ್ಥಾನದ ಹತ್ತಿರ ವಾಸ್ತವ್ಯ ಹೂಡುವುದಿಲ್ಲ. ಏಕೆಂದರೆ ಮಡಿ ಮೈಲಿಗೆಯೆಂದು ಸಾರ್ವಜನಿಕರು ದೂಷಿಸುತ್ತಾರೆಂದು ತಮ್ಮ ಸೂಕ್ಷ್ಮಮತಿ ತಮ್ಮಲ್ಲಿ ಇಟ್ಟುಕೊಂಡಿರುತ್ತಾರೆ.

ಹಗಲುವೇಷಗಾರರು ತಾವು ವಾಸ ಮಾಡುವ ಜೋಪಡಿಯನ್ನು ಜೋಪಡಿ, ಕೌದಿ ಗುಡಿಸಲು, ಡೇರಾ, ಡೈರಿ ಎಂದು ಕರ್ನಾಟಕದಲ್ಲಿ ಕರೆದರೆ ಆಂಧ್ರಪ್ರದೇಶದಲ್ಲಿ 'ಬಿರಾಡು' ಎಂದು ಕರೆಯುತ್ತಾರೆ. 'ಬಿರಾಡು' ಎನ್ನುವ ಪದ 'ಬಿಡಾರ' ದಿಂದ ಬಂದಿದೆ ಎಂದು ಹೇಳಬಹುದು. ಗುಡಾರು, ಬಿರಾಡು, ಬಿಡಾರು ಮೂರು ಪದಗಳು ಸಮಾನಾರ್ಥಕ ಪದಗಳಾಗಿ ವಾಸಿಸುವಸ್ಥಳ ಎನ್ನುವ ಅರ್ಥವನ್ನು ಕೊಡುತ್ತವೆ.



ಬಿಡಾರದ ಒಳಚಿತ್ರ

ಇವರ ಮನೆಗಳು ಸಾಮಾನ್ಯವಾಗಿ ಊರಿಗೆ ದೂರದಲ್ಲಿಯೇ ಇರುತ್ತದೆ. ಇವರು ಥರಥರದ ವೇಷಭೂಷಣ ಹಾಕಿದರೂ ಇವರ ಕುಲ ಮಾತ್ರ ಒಂದೆ. ಆದುದರಿಂದ ಇವರು ಕುಲಸ್ಥರೆಲ್ಲಾ ಸೇರಿ



ಒಂದೇ ಜಾಗದಲ್ಲಿ ಸಾಮೂಹಿಕವಾಗಿ ಜೀವಿಸುತ್ತಾರೆ. ಅರ್ಧಚಂದ್ರಾಕಾರದಲ್ಲಿರುವ ಸಣ್ಣ ಸಣ್ಣ ಮೂರು ‘ವಂಕರ್ಲು’[೨] ಗುಡಿಸಲು ಇವರವು. ಇವರು ಗ್ರಾಮೀಣ ಜೀವನಕ್ಕೆ ದೂರವಾಗಿರಲು ಇಷ್ಟಪಡುತ್ತಾರೆ. ಅದಕ್ಕಾಗಿಯೇ ಸಮಾಜಕ್ಕೆ ದೂರವಾಗಿ ಬಿಡಾರದಲ್ಲಿ, ತಮ್ಮದೇ ಆದ ಕೆಲವು ಲಕ್ಷಣಗಳಿಂದ ಜೀವನ ಸಾಗಿಸುತ್ತಿದ್ದಾರೆ.

ಜಾನಪದ ವೃತ್ತಿ ಕಲೆಯನ್ನು ಪದರ್ಶಿಸುತ್ತಾ ಊರೂರು ತಿರುಗುತ್ತಾ ಜೀವಿಸುತ್ತಾರಾದ್ದರಿಂದ ಇವರ ಗುಡಾರಗಳು ಸುಲಭವಾಗಿ ನಿರ್ಮಿಸುವುದಕ್ಕೆ ಸುಲಭವಾಗಿ ಬಿಚ್ಚಿ ಸುಲಭವಾಗಿ ಹೊತ್ತುಕೊಂಡು ಹೋಗಲು ಅನುಕೂಲವಾಗುವಂತೆ ಇರುತ್ತವೆ.

ಇವರ ಬಿಡಾರಕ್ಕೆ ಮೂಲಾಧಾರವಾಗಿ ಮೂರು ವಂಕರ್ಲು, ‘ವಂಕರ್ಲು’ ಅಂದರೆ ಅರ್ಧಚಂದ್ರಾಕೃತಿಯಾಗಿ ತಿರುಗಿದ ಕಟ್ಟಿಗೆ. ಇವು ಬಿದುರಿನವು ಆಗಿರಬಹುದು ಇಲ್ಲವೆ ಕಾಡಿನಲ್ಲಿ ಹಿಡಿ ದಪ್ಪ, ಎಂಟಡಿ ಉದ್ದವಿರುವ ಕಟ್ಟಿಗೆಯನ್ನು ಕಡಿದುಕೊಂಡುಬಂದು ಬಗ್ಗಿಸಿ ಒಣಗಿಸುತ್ತಾರೆ. ನಂತರ ಅದರ ಚರ್ಮ ಸುಲಿದು ಬಿಡುತ್ತಾರೆ. ಅರ್ಧಚಂದ್ರಾಕೃತಿಯಾಗಿ ಬಗ್ಗಿಸಿದ ಈ ಕಟ್ಟಿಗೆಗಳನ್ನು ‘ವಂಕರ್ಲು’ ಎಂದು ಕರೆಯುತ್ತಾರೆ. ಆ ಎಂಟಡಿ ಇರುವ ಕಟ್ಟಿಗೆಗಳನ್ನು ಒಂದರ ಹಿಂದೆ ಒಂದುಮೂರು ನೆಟ್ಟುಅಗ್ಗದಿಂದ ಕಟ್ಟುತ್ತಾರೆ. ಐದು ಅಡಿ ಎತ್ತರವಿರುವಂತೆ ಕಟ್ಟುತ್ತಾರೆ. ಪ್ರತಿ ಕಟ್ಟಿಗೆ ಅಥವಾ ಸೀಳಿದ ಬಿದಿರು ೧೦ ಬೇಕಾಗುತ್ತವೆ. ಮೂರು ಬಾಗಿದ ವಂಕರ್ಲು ಕಟ್ಟಿಗೆಗೆ ಅಡ್ಡ ಕಟ್ಟುತ್ತಾರೆ. ಒಂದಕ್ಕೊಂದು ಕೂಡಿಸಿ ಹಗ್ಗ ಅಥವಾ ನಾರಿನಿಂದ ಗಟ್ಟಿಯಾಗಿ ಕಟ್ಟುತ್ತಾರೆ. ಇವುಗಳನ್ನು ಬಲ್ಲೋಲು ಎಂದು ಕರೆಯುತ್ತಾರೆ. ಬಲವಾದ ಕೋಲು ಬಲ್ಲೋಲು ಆಗಿದೆ.

ವಂಕರ್ಲು ಕಟ್ಟಿಗೆ, ಬಲ್ಲೋಲ ಕಟ್ಟಿಗೆ ಕಟ್ಟಿದ ತರುವಾಯ ‘ಶಿವ್ವಕಟ್ಟಿಗೆ’ ಎಂದು ಇವು ಮೂರು ಬೇಕಾಗುತ್ತದೆ. ಸಣ್ಣಗೆ, ಉದ್ದವಾಗಿರುವ ಕೊಂಬೆ ಇವು ವಂಕರ್ಲು ಕಟ್ಟಿಗೆಯ ಹಾಗೆಯೇ ಇವುಗಳನ್ನು ಸಹ ಬಗ್ಗಿಸಿ ಬಿಸಿಲಿನಲ್ಲಿ ಒಣಗಿಸಿರುತ್ತಾರೆ. ಇವು ಹಿಂದಿನಿಂದ ಮುಂದಕ್ಕೆ ಬರುವ ಹಾಗೆ ಕಟ್ಟುತ್ತಾರೆ. ಈ ಹಿಂದಿನ ಭಾಗಕ್ಕೆ ‘ಮಾಡು’ ಎಂದು ಕರೆಯುತ್ತಾರೆ. ಹಿಂದಿನ ಭಾಗ ಬಲೆಯ ಹಾಗೆ ತಯಾರಾಗುತ್ತದೆ. ತಯಾರದ ಅದರ ಮೇಲೆ ಸುಳಿಯಿಂದ ಎಡಗಡೆ ಬಾಗಿದ ಭಾಗಕ್ಕೆ ಒಂದು ಚಾಪೆ ಬಲಭಾಗಕ್ಕೆ ಬಾಗಿದ ಕಡೆಗೊಂದು ಈಚಲು ಚಾಪೆಯನ್ನು ಹಾಕುತ್ತಾರೆ. ಈ ಕಡೆ ಆ ಕಡೆ ಸುತ್ತಲು ಹಾಕುತ್ತಾರೆ. ಇಳಿಜಾರಾಗಿ ಮಳೆ ಬಂದರೂ ನೀರು ಇಳಿಯದಂತೆ ಮೇಲೆ ಚಾಪೆಗಳಿಗೆ ಒಂದಕ್ಕೊಂದು ಕಟ್ಟುತ್ತಾರೆ. ಒಂದೊಂದು ವಂಕರ್ಲುಗೆ ಮೂರು ಮೂರು ಜಾಗದಲ್ಲಿ ಕಟ್ಟಿ ಗಾಳಿಗೆ ಏಳದಂತೆ ಮಾಡುತ್ತಾರೆ. ಈ ಬಿಡಾರಗಳು ಪೂರ್ವಕ್ಕೆ ಮತ್ತು ಉತ್ತರಕ್ಕೆ ಮುಖ ಮಾಡುವುದು ಹೆಚ್ಚು. ಹೀಗೆ ಮಾಡುವುದರಿಂದ ಬಿಸಿಲು, ಗಾಳಿ, ಮಣ್ಣು ತೂರಬಾರದೆಂದು ಎಚ್ಚರಿಕೆ ವಹಿಸುತ್ತಾರೆ. ಮಳೆಗಾಲದಲ್ಲಿ ಸುತ್ತಲೂ ಸಣ್ಣ ಕಾಲುವೆ ಮಾಡುತ್ತಾರೆ. ಮೇಲಿನಿಂದ ಇಳಿದ ನೀರು ಒಳಗೆ ಬರಬಾರದೆಂದು ಹೀಗೆ ಮಾಡುತ್ತಾರೆ. ಇವರ ಗುಡಾರದ ಪ್ರತಿಯೊಂದು ಭಾಗಕ್ಕೂ, ಸಾಮಾನಿಗೂ ಇವರು ತಮ್ಮದೇ ಆದಂತಹ ಹೆಸರುಗಳ ಇಟ್ಟುಕೊಂಡಿದ್ದಾರೆ.

ಈ ರೀತಿಯ ಗುಡಾರಗಳು ಕರ್ನಾಟಕದಲ್ಲಿ ಕಡಿಮೆ ಆಂಧ್ರಪ್ರದೇಶದಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತವೆ. ಅಲ್ಲಿ ಹೇರಳವಾಗಿ ಸಿಗುವ ಈಚಲು ಗಿಡದಿಂದ ಇವರಿಗೆ ಈ ಕೆಲಸ ಸುಲಭವಾಗಿದೆ. ಇವರ ಕುಲ ಗೋತ್ರದ ಹೆಸರೇ ಒಂದು 'ಬಲ್ಗೋಲ' ಎಂದಿದೆ.

ಕರ್ನಾಟಕದಲ್ಲಿ ರಚಿಸುವ ಬಿಡಾರಗಳ ರೀತಿಯಲ್ಲಿ ಸ್ವಲ್ಪ ಬದಲಾವಣೆ ಕಂಡುಬರುತ್ತವೆ. ನಾಲ್ಕು ಬಿದಿರು ಬಂಗು. ನಾಲ್ಕು ಕಬ್ಬಿಣದ ಸಲಾಕೆ ಇಲ್ಲವೆ ಕಟ್ಟಿಗೆಯ ಗೂಟಗಳು ೨೦ ರಿಂದ ೩೦ ಸೀಳಿದ ಸಣ್ಣ ಸಣ್ಣ ಬಿದಿರುಗಳು. ಬರಲು ಕಟ್ಟಿಗೆಗಳೂ ನಡೆಯುತ್ತವೆ. ಬಿದಿರು ಸಿಗದಿದ್ದ ಸಮಯದಲ್ಲಿ, ಕಟ್ಟಲು ನಾರಿನ ಇಲ್ಲವೆ ನೂಲಿನ ದಪ್ಪನೆಯ ಹಗ್ಗ ಮೇಲೊಂದು ಕೌದಿ ಇವುಗಳಿದ್ದರೆ ಗುಡಾರ ತಕ್ಷಣ ತಯಾರು. ಬಿಡಾರದ ವಿಶಾಲತೆ ಸುತ್ತಳತೆ ಐದು ಮೊಳ ಇರುತ್ತದೆ. ಕೆಲವರು ಆರು ಅಡಿ ಉದ್ದ ಹತ್ತು ಅಡಿ ಅಗಲ ಇಷ್ಟೇ ಇರಬೇಕೆಂದಿಲ್ಲ. ಅವರ ಬಿದಿರಿನ ಅಳತೆಗೆ ತಕ್ಕಂತೆ ತಮ್ಮ ಗುಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ.

ಇನ್ನೊಂದು ರೀತಿಯ ಬಿಡಾರದ ನಿರ್ಮಾಣ ಹೇಗೆಂದರೆ, ತಮಗೆ ಬೇಕಾದ ಅಳತೆಯಲ್ಲಿ ನಾಲ್ಕು ಮೂಲೆಗೆ ನಾಲ್ಕು ಕಬ್ಬಿಣದ ಇಲ್ಲವೆ ಕಟ್ಟಿಗೆಯ ಗೂಟ ಬಡಿದು ಮುಂಭಾಗ, ಹಿಂಭಾಗ, ಮಧ್ಯದ ಸ್ಥಳದ ಅಂಚಿಗೆ ಸುಮಾರು ಐದರಿಂದ ಆರು ಅಡಿ ಉದ್ದವಿರುವ ಎರಡು ಬಿದಿರುಗಳನ್ನು ನಿಲ್ಲಿಸಿ ಅವುಗಳಿಗೆ ಸಮಾನಾಂತರವಾಗಿ ಇನ್ನೊಂದು ಬಿದಿರುಗಳವನ್ನಿಟ್ಟು ಬಿಗಿಯಾಗಿ ಕಟ್ಟಿ ಆ ಚೀಚೆ ಬಿದಿರು ಬರಲುಗ ಗಳಗನ್ನಿಟ್ಟು ಜೋಡಿಸಿ ಬಿಗಿದು ಕೊಲ್ಲಾರಿಯಾಕಾರ ಮಾಡಿ ಮೇಲೆ ಕೌದಿ ಅಥವಾ ಇತ್ತೀಚಿಗೆ ರಸಗೊಬ್ಬರದ ಪ್ಲಾಸ್ಟಿಕ್ ಚೀಲಗಳಿಂದ ಹೊಲಿದ ತಾಟನ್ನು ಹಾಕಿ ಅದರ ಮೇಲೆ ಕತ್ತರಿಯಾಕಾರದಲ್ಲಿ ಹಗ್ಗ ಬಿಗಿದು ಡೇರೆ ತಯಾರಿಸುವರು. ಗಾಳಿಯ ಹೊಡೆತದಿಂದ ತಪ್ಪಿಸಿಕೊಳ್ಳಲು ಬಿಡಾರದ ಎತ್ತರವನ್ನು ಕಡಿಮೆ ಮಾಡಿರುತ್ತಾರೆ. ಬಿಡಾರದ ರೀತಿ ಅರ್ಧ ವೃತ್ತಾಕಾರವಾಗಿರುತ್ತದೆ. ಮಳೆಗಾಲ ಚಳಿಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಡೇರಿಯ ಹಿಂದೆ ಮುಂದೆ ಕೌದಿ ಮುಚ್ಚಣಿಕೆ ಮಾಡಿಕೊಂಡಿರುವರು. ಅವುಗಳಿಗೆ ಮುಂದಿನ ಭಾಗದ ಮುಚ್ಚಣಿಕೆಯನ್ನು ಮುಂದಿನ ಮಾಡು ಹಿಂದೆ ಮಚ್ಚಲು ಉಪಯೋಗಿಸುವ ಮುಚ್ಚಣಿಕೆಗೆ ಹಿಂದಿನ ಮಾಡು ಎಂದು ಕರೆಯುತ್ತಾರೆ. ಮಳೆ ಬಂದಾಗ ಹೊರಗಿನ ನೀರು ಕೌದಿಯಿಂದ ಇಳಿದು ನೀರು ಒಳಗಡೆಬಾರದಿರಲೆಂದು ಸುತ್ತಲೂ ಸಣ್ಣ ಒಡ್ಡು ನಿರ್ಮಿಸುವರು. ಹೀಗೆ ಹಗಲುವೇಷಗಾರರು ಗಾಳಿ ಮಳೆ ಚಳಿಯಿಂದ ರಕ್ಷಿಸಿಕೊಳ್ಳಲು ಡೇರಿಯನ್ನು ಕಟ್ಟಿಕೊಂಡು ರಕ್ಷಣೆ ಪಡೆಯುತ್ತಾರೆ. ಇವರ ಬಿಡಾರಗಳು ಮುಂದಿನಿಂದ ನೋಡಿದರೆ ಅರ್ಧಚಂದ್ರಾಕೃತಿಯಲ್ಲಿ ಹಿಂದಿನಿಂದ ನೋಡಿದರೆ ಕನಕಗಿರಿ ಬೆಟ್ಟದ ಹಾಗೆ ಕಾಣುತ್ತವೆ ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಸ್ವಂತ ಊರುಗಳಲ್ಲಿದ್ದರೂ ಇವರು ಬಿಡಾರಗಳಲ್ಲಿಯೇ ವಾಸಿಸುತ್ತಾರೆ. ಆದರೆ ಇತ್ತೀಚಿಗೆ ಕೆಲವರಿಗೆ ಜನತಾ ಮನೆಗಳ ಸೌಲಭ್ಯ ದೊರಕಿವೆ. ಅನಿವಾರ್ಯವಾಗಿ ಅಂತಹ ಊರಗಳನ್ನೇ ತಮ್ಮ ಊರುಗಳೆಂದು ಹೇಳಿಕೊಳ್ಳಲು ಕಾರಣವಾಗಿದೆ. ಒಂದು ವರ್ಷದಲ್ಲಿ ಎಂಟು ಹತ್ತು ತಿಂಗಳು ಅಲೆಮಾರಿಗಳಾಗಿಯೇ ಕಾಲ

ಕಳೆಯುತ್ತಾರೆ. ವೇಷ ಪ್ರದರ್ಶನಕ್ಕಾಗಿ ಒಂದೊಂದು ಊರಲ್ಲಿ ಹದಿನೈದರಿಂದ ಇಪ್ಪತ್ತು ದಿನಕಾಲ ಉಳಿಯುತ್ತಾರೆ. ಈ ಅವಧಿಯಲ್ಲಿ ಉಳಿದುಕೊಳ್ಳಲು ಬಿಡಾರಗಳನ್ನು ನಿರ್ಮಿಸಿಕೊಳ್ಳುತ್ತಾರೆ.

ಮದುವೆಯಾಗಿ ಮಗ ಸೊಸೆ ಇದ್ದರೆ ಇಲ್ಲವೆ ಮಗಳು ಅಳಿಯ ಇದ್ದರೆ ಅಂತಹವರಿಗೆ ಬೇರೆ ಬಿಡಾರವಿರುತ್ತದೆ. ಒಬ್ಬ ತಂದೆಗೆ ಎಷ್ಟು ಕುಟುಂಬಗಳಿರುತ್ತಾವೆಯೇ ಅಷ್ಟು ಬಿಡಾರಗಳು ಒಂದೇ ಗುಂಪಿನಲ್ಲಿರುತ್ತವೆ. ಒಳಗಡೆ ಹಾಸಿಕೊಳ್ಳಲು ಮೊದಲು ಈಚಲು ಚಾಪೆ ಉಪಯೋಗಿಸುತ್ತಿದ್ದರು. ಈಗ ಈಚಲುಗರಿಗಳು ಸಿಗುವುದಿಲ್ಲ. ಆದ್ದರಿಂದ ರಸಾಯನಿಕ ಗೊಬ್ಬರಗಳ ಪ್ಲಾಸ್ಟಿಕ್ ಚೀಲಗಳನ್ನು ಬಿಚ್ಚಿ ಒಂದಕ್ಕೊಂದು ಹೊಲಿದು ತಟ್ಟುಗಳಾಗಿ ತಯಾರಿಸಿಕೊಂಡು ಬಿಡಾರದ ಮೇಲೆ ಹಾಕಲು ಬಹು ಉಪಯೋಗಿಯಾಗಿ ಹೆಚ್ಚು ಬಳಕೆಯಾಗುವುದನ್ನು ಕಾಣಬಹುದಾಗಿದೆ. ರಾತ್ರಿ ಬೆಳಕಿಗೆ ಚಿಮಣಿ ಬುಡ್ಡಿಗಳನ್ನು ಅಥವಾ ಲಾಟೀನುಗಳನ್ನು ಬಳಸುತ್ತಾರೆ. ಪ್ರತಿ ಬಿಡಾರದ ಬಾಗಿಲಿಗೆ ಹೊಂದಿಕೊಂಡೇ ಹೊರಗೆ ಎಡಭಾಗಕ್ಕೆ ಮೂರು ಕಲ್ಲುಗಳನ್ನಿಟ್ಟು ಅಡುಗೆ ಮಾಡಲು ಒಲೆ ತಯಾರಿಸಿಕೊಂಡಿರುತ್ತಾರೆ.

ಡೇರಿಯ ಒಳಗಡೆ ಹಿಂಭಾಗದಲ್ಲಿ ನಾಲ್ಕು ಕಾಲುಗಳುಳ್ಳ "ಪಲ್ಲಂಗ"[೩] ಇಟ್ಟಿರುತ್ತಾರೆ. ಇದು ಎಲ್ಲರಲ್ಲಿಯೂ ಇಲ್ಲ ಕೆಲವರಲ್ಲಿ ಮಾತ್ರ ಕಂಡುಬರುತ್ತದೆ. ಇದರ ಮೇಲೆ ವೇಷಗಾರಿಕೆಯ ಪರಿಕರಗಳು, ಬಟ್ಟೆಗಳು, ಹಾಸಿಗೆ, ಹೊದಿಕೆ ಮುಂತಾದವುಗಳನ್ನು ಇಡಲು ಉಪಯೋಗಿಸುತ್ತಾರೆ. ಈ ಪಲ್ಲಂಗವನ್ನು ಜಾಗದ ಉಳಿತಾಯಕ್ಕು ಮತ್ತು ಉಳ ಉಪ್ಪುಡಿಯಿಂದ ರಕ್ಷಿಸಲು ಒಳ್ಳೆಯ ಉಪಾಯವಾಗಿದೆ. ಬಿಡಾರದ ಹಿಂಭಾಗದ ಗಳಕ್ಕೆ ದೇವರ ಫೋಟೋ, ಕಾಯಿ, ಕುಂಕುಮ, ವಿಭೂತಿ ಕಟ್ಟಿರುವರು. ಅಡುಗೆ ಮಾಡುವ ಪರಿಕರಗಳೆಲ್ಲಾ ಒಳಗಡೆ ಒಟ್ಟಿಕೊಂಡಿರುತ್ತಾರೆ. ಕುಡಿಯುವ ನೀರು ಸಹ ಒಳಗಡೆ ಇಟ್ಟುಕೊಂಡಿರುತ್ತಾರೆ. ಹೆಣ್ಣು ಮಕ್ಕಳು ಸಾಮಾನ್ಯವಾಗಿ ರಾತ್ರಿ ಬೆಳಗ್ಗೆ ಎರಡು ಬಿಡಾರಗಳ ನಡುವಿನ ಜಾಗದಲ್ಲಿ ಸ್ನಾನ ಮಾಡುತ್ತಾರೆ.

ಇವರು ಸಾಮಾನ್ಯವಾಗಿ ಊರ ಹೊರವಲಯಗಳಲ್ಲಿ ವಾಸಮಾಡುವುದರಿಂದ ಮಲಮೂತ್ರ ವಿಸರ್ಜನ ಬಿಡಾರಕ್ಕೆ ಸ್ವಲ್ಪ ದೂರದ ಪ್ರದೇಶವನ್ನು ಬಳಸುವರು. ನಗರ ಪಟ್ಟಣದಲ್ಲಿಯಾದರೆ ಮಲಮೂತ್ರ ವಿಸರ್ಜನೆ ಇವರಿಗೊಂದು ದೊಡ್ಡ ಸಮಸ್ಯೆ. ಇಂತಹ ಪ್ರದೇಶಗಳಲ್ಲಿ ಇವರು ಸಾಮಾನ್ಯವಾಗಿ ಬಿಡಾರಗಳನ್ನು ಹಾಕಿಕೊಂಡಿರುವ ಶಾಲಾ ಮೈದಾನದಲ್ಲಿ ಇಲ್ಲವೆ ಪಕ್ಕದ ಬಯಲು ಪ್ರದೇಶಗಳನ್ನು ಬಳಸುತ್ತಾರೆ. ಸಾಮಾನ್ಯವಾಗಿ ರಾತ್ರಿ, ಬೆಳಿಗ್ಗೆ ಮುಂಜಾನೆಯೇ ಕ್ರಿಯಾಕರ್ಮಗಳನ್ನು ಮಾಡಿ ಮುಗಿಸುತ್ತಾರೆ.

ಬಿಡಾರದ ಪಾವಿತ್ರತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ, ಋತುಮತಿಯಾದ ಸಮಯದಲ್ಲಿ, ಹೆರಿಗೆಯಾದಾಗ, ಮದುವೆಯಾದಾಗ, ಸಾವು ಸಂಭವಿಸಿದಾಗ ಐದನೆಯ ದಿನಕ್ಕೆ ಸೂತಕ ಕಳೆಯಲು ಬಿಡಾರ ಅಥವಾ ಬಿಡಾರದ ಜಾಗ ಬದಲಾಯಿಸುತ್ತಾರೆ. ಕಾಗೆ, ಗೂಬೆ, ಕೆಟ್ಟ ಹಕ್ಕಿ, ಹೊಲೆ, ಮಾದಿಗರು ಬಿಡಾರವನ್ನು ಪ್ರವೇಶಿಸುವಂತಿಲ್ಲ ಅಂತಹ ಅಪವಿತ್ರತೆ ನಡೆದ ಸಂದರ್ಭಗಳಲ್ಲಿ ಜೋಪಡಿಯ ಜಾಗವನ್ನು ಬದಲಾಯಿಸುತ್ತಾರೆ. ಒಬ್ಬ ವ್ಯಕ್ತಿ ಕುಟುಂಬದಲ್ಲಿ ದೀರ್ಘ ಕಾಯಿಲೆ ಬಿದ್ದಾಗಲೂ ಬಿಡಾರದ ಜಾಗ

[illegible]

ಬದಲಾಯಿಸುತ್ತಾರೆ. ಹೀಗೆ ಬಿಡಾರದ ಜಾಗ ಬದಲಾಯಿಸಿದರೆ ಬಿಡದ ಶನಿ ಅಥವಾ ದೋಷ ಪರಿಹಾರವಾಗುವುದೆಂದು ಇವರ ನಂಬಿಕೆ.

ಹಸು ಕುರಿ ಮೇಕೆಗಳಿದ್ದರೆ ಅವನ್ನು ಬಿಡಾರದ ಮುಂಭಾಗದಲ್ಲಿ ಹತ್ತಿಪ್ಪತ್ತು ಅಡಿ ದೂರದಲ್ಲಿ ಗೂಟಗಳನ್ನು ನೆಟ್ಟು ಕಣ್ಣಿ ಕಟ್ಟುತ್ತಾರೆ. ಕೋಳಿಗಳಿದ್ದರೆ ಮುಂಭಾಗದಲ್ಲಿ ಪುಟ್ಟಿಯಲ್ಲಿ ಮುಚ್ಚಿಡುತ್ತಾರೆ. ಇತ್ತೀಚಿಗೆ ಈ ಹಗಲುವೇಷಗಾರರು ಬಸ್ಸುಗಳಲ್ಲಿ ಪ್ರಯಾಣಮಾಡುವುದರಿಂದ, ಹಸು, ಕುರಿ, ಮೇಕೆ, ಕುದುರೆಗಳನ್ನು ಸಾಕುವುದು ಕಡಿಮೆ ಮಾಡಿದ್ದಾರೆ. ಯಾರಾದರೂ ಇನಾಮೆಂದು ಹಸು ಕರು ಏನಾದರೂ ಕೊಟ್ಟರೆ ಅಲ್ಲೇ ಮಾರಿ ಹೋಗಿಬಿಡುತ್ತಾರೆ. ಕುರಿ, ಮೇಕೆಯೆಂದರೆ ಕೊಯ್ದು ತಿನ್ನುತ್ತಾರೆ. ಮೊದಲೆಲ್ಲಾ ಸಾಮಾನುಗಳನ್ನು ಹೊತ್ತುಕೊಂಡು ಹೋಗಲು ಸುಮಾರು ೧೦ ಅಡಿಯ ಬಿದಿರಿಗೆ ಎರಡು ಅಂಚಿನಲ್ಲಿ ಕೌದಿಯ ಮೂಟೆ ಇಲ್ಲವೆ ಪಾತ್ರೆಯ ಸಾಮಾನುಗಳನ್ನು ತುಂಬಿ ಹೊತ್ತುಕೊಂಡು ಹೋಗುತ್ತಿದ್ದರು. ಇವರು ಇದನ್ನು 'ಕಾವಡಿ' ಎಂದು ಕರೆಯುತ್ತಾರೆ. ಈಗಲೂ ಸಹ ರಬ್ಬರ್ ಕೊಡ ಮಾರಲು ಈ ಸಾಧನವನ್ನು ಬಳಸುವುದು ಕಂಡುಬರುತ್ತದೆ.

ಬಳ್ಳಾರಿ ಮತ್ತು ಆಂಧ್ರ ಗಡಿಭಾಗದಲ್ಲಿ ಹಲವಾರು ವೇಷಗಾರರಿಗೆ ಮನೆಗಳಿಲ್ಲದೆ ಇಂದಿಗೂ ಬಿಡಾರದಲ್ಲಿಯೇ ಬದುಕುತ್ತಿದ್ದಾರೆ. ಇಂದು ಕೆಲವು ಮುಖಂಡರ ಸಹಾಯದಿಂದ ಇಂತಹ ಎಲ್ಲಾ ಸಮುದಾಯದವರು ಸೇರಿ 'ಬಿಡಾರ ನಿವಾಸಿಗಳ ಸಂಘ' ಎಂದು ಮಾಡಿಕೊಂಡು ಹೋರಾಟ ನಡೆಸುತ್ತಿದ್ದಾರೆ.

೮.೩. ಉಡುಗೆ ತೊಡುಗೆಗಳು

ಭೂಮಿಯ ಮೇಲೆ ಪ್ರತಿಯೊಂದು ಜೀವಿಯೂ ದಿಗಂಬರತ್ವದಿಂದಲೇ ಜನ್ಮಪಡೆಯುವುದು ಪ್ರಕೃತಿಯ ನಿಯಮ. ಆದಿಮಾ ಸ್ಥಿತಿಯಲ್ಲಿಯೂ ಮಾನವ ಬಹಳ ಕಾಲ ದಿಗಂಬರನಾಗಿಯೇ ಕಾಲ ಕಳೆದ. ಬುದ್ಧಿ ಬೆಳೆದಂತೆ ಗಿಡ ಮರದ ಬಳ್ಳಿಗಳಿಂದ, ಮೃಗದ ಚರ್ಮದಿಂದ ಮೈ ಮುಚ್ಚಿಕೊಳ್ಳುವುದನ್ನು ಕಲಿತು ನಾಗರೀಕನಾಗಲಾರಂಭಿಸಿದ. ಇಂದಿಗೂ ಸಹ ಅನೇಕ ಪ್ರಾಣಿಗಳಿಗೂ, ಪಕ್ಷಿಗಳಿಗೂ, ಸ್ವಚ್ಛಂದ ಬದುಕೇ ಅಭ್ಯಾಸವಾಯಿತು. ಮನುಷ್ಯ ಮಾತ್ರ ಉಡುಗೆಯಲ್ಲಿ ವಿಶಿಷ್ಟತೆಯನ್ನು ತಳೆದಿದ್ದಾನೆ. ಅದಕ್ಕೆ ಮನುಷ್ಯ ಬುದ್ಧಿಜೀವಿ ಎನಿಸಿಕೊಂಡಿದ್ದಾನೆ.

"ಒಂದು ಸಮುದಾಯದ ಸಾಂಸ್ಕೃತಿಕ ಸ್ವರೂಪವನ್ನರಿಯಲು ಭೇದ ಪ್ರಭೇದಗಳನ್ನು ಗುರುತಿಸಲು ವೇಷ-ಭೂಷಣಗಳು ನೆರವಾಗುತ್ತವೆ. ಅದರ ಮೂಲ ಅವಶ್ಯಕತೆಗಳಿಗೆ ಹಾಗೂ ಅದರ ಮೂಲ ಸ್ವರೂಪದ ರಚನೆಗಳಿಗೆ ಅವು ಸಂಕೇತವಾಗುತ್ತವೆ. ಅವು ಕಣ್ಣಿಗೆ ಬೀಳುತ್ತಿದ್ದಂತೆ ಎಲ್ಲಿಯವು, ಯಾರವು ಎಂದು ಸುಲಭವಾಗಿ ಗುರುತಿಸಬಹುದು. ಅವು ಗುಂಪೊಳಗಿನ ಸಂಬಂಧ ಸಾಮರಸ್ಯವನ್ನು ಕಾಪಾಡುವ ಸಾಮಾಜಿಕ ನಿಯಮಗಳೂ ಆಗಿವೆ. ಅಂದ ಮೇಲೆ ಅವುಗಳಿಗೆ ಸಾಮಾಜಿಕ ಮೌಲ್ಯಗಳ ಸ್ಥಾನವಿದ್ದು, ಸಾಮಾಜಿಕ ಕ್ರಿಯೆಗಳಲ್ಲಿ ಪ್ರಧಾನ ಪಾತ್ರವಹಿಸುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ವಯಸ್ಸು ಲಿಂಗ ವೃತ್ತಿ ಸಂದರ್ಭ

ಪರಿಸರ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಉಡುಗೆ ತೊಡುಗೆಗಳು ನಿರ್ಧರಿಸುತ್ತವೆಂದು ಧಾರಾಳವಾಗಿ ಹೇಳಬಹುದು.''[೪] ಈ ಹಗಲುವೇಷಗಾರರನ್ನು ನೋಡಿದ ತಕ್ಷಣ ಇವರ ಉಡುಪು. ತಲೆಯ ಕೂದಲು ನೋಡಿದ ತಕ್ಷಣ ಗುರುತಿಸಬಹುದು. ಗಂಡಸರ ಮತ್ತು ಹೆಂಗಸರು ಉಡುಪುಗಳು ಬಹುಮಾನವಾಗಿ ಅಥವಾ ಭಿಕ್ಷೆಯಿಂದ ಪಡೆದ ಹಳೆಬಟ್ಟೆಗಳಾಗಿರುವುದರಿಂದ (Second hand) ವಿವಿಧ ರೀತಿಯ ಸಂಸ್ಕೃತಿಯೂ ಇವರ ಉಡುಪಿನಲ್ಲಿ ಅಡಗಿರುತ್ತದೆ. ಮತ್ತು ವೈವಿಧ್ಯತೆಯಿಂದ ಕೂಡಿರುತ್ತದೆ.

ಸ್ತ್ರೀ ಪುರುಷರ ವ್ಯತ್ಯಾಸ ಸಣ್ಣ ದೊಡ್ಡ ವ್ಯತ್ಯಾಸ, ಕುಲ ವ್ಯತ್ಯಾಸಗಳು, ಪ್ರಾದೇಶಿಕ ಬೇಧಗಳು, ಕಾಲಾನುಗುಣವಾದ ಬದಲಾವಣೆ, ಈ ಬಟ್ಟೆ ಧರಿಸುವುದನ್ನು ಗಮನಿಸಿ ಗುರುತಿಸಬಹುದು. ಹಾಗೆ ಆಭರಣ ಧರಿಸುವುದನ್ನು ಗಮನಿಸಿಯೂ ವಿಭಿನ್ನತೆಯನ್ನು ಗುರುತಿಸಬಹುದು. ಧರಿಸಿದ ಬಟ್ಟೆ ನೋಡಿ ಸ್ತ್ರೀಯರೇ, ಪುರಷರೇ, ವಯಸ್ಸು ಎಷ್ಟು ಅವರ ಪ್ರದೇಶವಾವುದು, ಅವರ ಜಾತಿ ಯಾವುದು ಇನ್ನು ಮುಂತಾದ ಅಂಶಗಳನ್ನು ಗುರುತಿಸಬಹುದು.

"ಹಗಲುವೇಷಗಾರರ ಬಹುಪಾಲು ಜನರು ಕಪ್ಪು ಬಣ್ಣದವರು ಕೆಲವರು ಎಣ್ಣೆಗೆಂಪಿನವರು ಆದರೆ ಬಹಳ ಕೆಂಪಾಗಿರುವವರು ವಿರಳ. ಬಳ್ಳಾರಿ ಮತ್ತು ಆಂಧ್ರ ಗಡಿಭಾಗದಲ್ಲಿ ವಾಸಿಸುವ ಮಂದಿ ಕಪ್ಪಗಿರುವುದು ಹೆಚ್ಚಾಗಿ ಕಂಡುಬರುತ್ತದೆ. ಅತಿಯಾದ ಬಿಸಿಲು ಇದಕ್ಕೆ ಕಾರಣವಿರಬಹುದು. ಭೌಗೋಳಿಕ ಅಂಶಕ್ಕೂ ಮಾನವನ ಬೆಳವಣಿಗೆಗೂ ಅವಿನಾಭಾವ ಸಂಬಂಧವನ್ನು ಗುರುತಿಸುತ್ತದೆ.

ಬಹುತೇಕ ಈ ಸಮುದಾಯದವರು ಧರ್ಮ ಭಿಕ್ಷೆಯಲ್ಲಿ ಪಡೆದ ಬಟ್ಟೆಗಳನ್ನೇ ತೊಡುವುದರಿಂದ ಹಲವಾರು ಅಭಿರುಚಿಯ ಬಟ್ಟೆಗಳು ಕೊಟ್ಟಿರುತ್ತಾರೆ. ಆದರೆ ಇವರ ಅಳತೆಗೆ ಸರಿಯಾದದ್ದು ಸಿಗುವುದು ಬಹಳ ಅಪರೂಪ. ಸ್ವಲ್ಪ ದೊಡ್ಡದಾದರು ಇರುತ್ತದೆ. ಸ್ವಲ್ಪ ಚಿಕ್ಕದಾದರೂ ಇರುತ್ತದೆ. ನಾವು ಇದುವರೆಗೂ ಮದುವೆಯ ಸಂದರ್ಭದಲ್ಲಿ ಬಿಟ್ಟು ಬೇರೆ ಸಮಯದಲ್ಲಿ ಬಟ್ಟೆಕೊಂಡಿಲ್ಲ ಎಂದು ಹೇಳುತ್ತಾರೆ. ಆದರೆ ಇತ್ತೀಚಿಗೆ ಈ ವೃತ್ತಿ ತೊರೆದವರು ಅನಿವಾರ್ಯವಾಗಿ ತಮ್ಮ ಅಭಿರುಚಿಗೆ ತಕ್ಕಂತೆ ಬಟ್ಟೆಯನ್ನು ಕೊಂಡುಕೊಳ್ಳುತ್ತಾರೆ. ಅದೇ ರೀತಿ ಅನೇಕ ಹಿರಿಯರು ನಾವು ಇಂದಿನವರೆಗೂ ಹೊಸ ಬಟ್ಟೆಯನ್ನೇ ಕೊಂಡು ತೊಟ್ಟಿಲ್ಲ ಎನ್ನುವವರೂ ಇದ್ದಾರೆ.



ಆಭರಣ ಧರಿಸಿರುವ ವೃದ್ಧೆ

ಇವರಲ್ಲಿ ವಯಸ್ಸಾದ ಹಿರಿಯ ಗಂಡಸರು ದಡಿಪಂಚೆ ಕಚ್ಚೆ ಹಾಕಿ ಮೇಲೊಂದು ಮೋಟು ತೋಳಿನ ಅಂಗಿ ತೊಟ್ಟು, ಅದರ ಮೇಲೊಂದು

[illegible]



[illegible]

ತೋಳಿಲ್ಲದ್ದೋ ಅಥವಾ ತುಂಬಾ ತೋಳಿನದೋ ಕೋಟು ಧರಿಸುತ್ತಾರೆ. ತಲೆಯ ಮೇಲೆ ರುಮಾಲು ಧರಿಸುತ್ತಾರೆ. ತಲೆಯ ಕೊಳೆ ಹತ್ತಿ ಹೊಲಸಾಗುತ್ತದೆ ಎಂದು ಕೆಂಪು ಅರಿಷಿಣ ರುಮಾಲು ಹೆಚ್ಚು ಧರಿಸುತ್ತಾರೆ. ಕೆಲವರು ಬಿಳಿಯವು ಸಹ ಧರಿಸುತ್ತಾರೆ. ರುಮಾಲು ಇಲ್ಲದಿದ್ದರೆ ಹೆಗಲ ಮೇಲೆ ಒಂದು ವಲ್ಲಿ ಹಾಕಿಕೊಂಡಿರುತ್ತಾರೆ. ಯಡವಲ್ಲಿಯವರಾದರೆ ಕಾಲಲ್ಲಿ ಕಡಗ ಧರಿಸುತ್ತಾರೆ. ಕೈಯಲ್ಲಿ ಒಂದು ಅಂಚಿನ ಬಡಿಗೆ ಹಿಡಿದಿರುತ್ತಾರೆ. ಮೇಲೆ ಕೋಟು ಮಾತ್ರ ಸಾಮಾನ್ಯವಾಗಿ ಹಗಲುವೇಷಗಾರರ ವಯಸ್ಸಾದ ವ್ಯಕ್ತಿಗಳೆಲ್ಲಾ ಧರಿಸುತ್ತಾರೆ. ಇದನ್ನು ಅವರು ಘನತೆ, ಗಂಭೀರ ಗೌರವದ ಪ್ರತೀಕವೆಂದು ತಿಳಿದಿದ್ದಾರೆ. ಹಣೆಯಲ್ಲಿ ವಿಭೂತಿ, ಗಂಧ, ಕುಂಕುಮ, ಕೊರಳಲ್ಲಿ ರುದ್ರಾಕ್ಷಿ ಸರ, ಕಿವಿಯ ಕೆಳಗಡೆ ಗೋಪಿ ಚಂದನವನ್ನು ತಪ್ಪದೇ ಧರಿಸುವರು. ಕೆಲವರು ರುದ್ರಾಕ್ಷಿಗೆ ಬೆಳ್ಳಿಯ ಕವಚ ತುಂಬಿಸಿ ಅದನ್ನು ಕೊರಳಲ್ಲಿ ಹಾಕಿಕೊಂಡಿದ್ದಾರೆ. ಕಾಲಲ್ಲಿ ಮೂರು ಬಾರಿನ ಜೋಡು ಮೆಟ್ಟುತ್ತಾರೆ.

ಯುವಕರು ಹದಿನಾಲ್ಕು ವರ್ಷದವರೆಗೆ ಕೆಳಗಡೆ ಚೆಡ್ಡಿ ಮೇಲೆ ಅರ್ಧ ತೋಳಿನ ಅಂಗಿಯೋ, ತುಂಬ ತೋಳಿನ ಅಂಗಿಯೋ ಧರಿಸುತ್ತಾರೆ. ಈ ಹುಡುಗರ ಅಂಗಿ ಸಾಮಾನ್ಯವಾಗಿ ಸ್ವಲ್ಪ ದೊಡ್ಡವಾದರೂ ಇರುತ್ತವೆ. ಸ್ವಲ್ಪ ಚಿಕ್ಕವಾದರೂ ಆಗಿರುತ್ತವೆ. ಒಳ್ಳೊಳ್ಳೆಯ ಬಟ್ಟೆಗಳೆಲ್ಲಾ ದೊಡ್ಡವರು ಆರಿಸಿಕೊಂಡು ಇಂತಹವು ಚಿಕ್ಕ ಮಕ್ಕಳಿಗೆ ಕೊಡುವುದರಿಂದ ಹೀಗಿರುತ್ತವೆ. ಹದಿನಾಲ್ಕು ವರ್ಷದ ಮೇಲಿನ ಯುವಕರು ಲುಂಗಿ ಅಥವಾ ನೆಹರು ಜುಬ್ಬಾ, ತಲೆಗೆ ವಲ್ಲಿ ಇಲ್ಲವೆ ಮಫಲರ್ ಸುತ್ತಿಕೊಂಡಿರುವರು. ಗಂಡಸರೆಲ್ಲರೂ ಸಾಮಾನ್ಯವಾಗಿ ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಯಲ್ಲಿ ವಿಭೂತಿ, ಗಂಧ, ಗೋಪಿಚಂದನ ಧರಿಸುವರು. ಎಲ್ಲಾ ಯುವಕರು ಕೂದಲು ಉದ್ದಕ್ಕೆ ಬೆಳೆಸಿರುತ್ತಾರೆ. ಏಕೆಂದರೆ ಹೆಣ್ಣು ಪಾತ್ರ ಧರಿಸಲಿಕ್ಕೆ, ಯಾವುದೇ ಪಾತ್ರಕ್ಕೊ ಉಪಯೋಗವಾಗುತ್ತದೆಂದು. ವೇಷವಿಲ್ಲದ ಬೇರೆ ಸಮಯದಲ್ಲಿ ಕೂದಲನ್ನೆಲ್ಲಾ ಮಡಚಿಕೊಂಡು ತಲೆಗೆ ವಲ್ಲಿ ಸುತ್ತಿಕೊಳ್ಳುತ್ತಾರೆ. ಈ ಸಮುದಾಯದಲ್ಲಿ ಕೂದಲಿಗೆ ವಿಶೇಷ ಮಹತ್ವವಿದೆ. ಮತ್ತು ಶ್ರದ್ಧೆಯಿಂದ ಬೆಳೆಸುತ್ತಾರೆ. ಈ ಕೂದಲು ವೇಷಗಾರರ ಗುರುತಿಸುವಿಕೆಯ ಸಂಕೇತವೆಂದು ತಿಳಿದಿದ್ದಾರೆ. ವಿಶೇಷ ಸಂದರ್ಭಗಳಾದ ಕುಲಸ್ಥರ ಮದುವೆ, ಕುಲ ಪಂಚಾಯಿತಿ, ಗ್ರಾಮಾಂತರ ಹೋಗುವ ಸಮಯದಲ್ಲಿ, ಹೆಣ್ಣು ನೋಡಲು ಹೋಗುವಾಗ, ಈ ಸಮುದಾಯದ ವಿಶೇಷ ಉತ್ಸವ ಜಾತ್ರೆಯ ಸಂದರ್ಭಗಳಲ್ಲಿ ಬಿಳಿಯ ಪಂಜೆ, ಅರ್ಧ ತೋಳಿನ ಅಥವಾ ತುಂಬು ತೋಳಿನ ಅಂಗಿ ಭಿಕ್ಷೆಯಲ್ಲಿ ಒಳ್ಳೆಯ ಬಟ್ಟೆಗಳು ಬಂದರೆ ಅವುಗಳಲ್ಲಿ ಒಳ್ಳೆಯವು ಆಯ್ದು ತೆಗೆದಿಟ್ಟುಕೊಂಡಿರುತ್ತಾರೆ. ಅಂತಹವುಗಳನ್ನು ತೊಡುತ್ತಾರೆ. ಬಹಳ ಯುವಕರು ಇತ್ತೀಚಿಗೆ ಕೈಯಲ್ಲಿ ವಾಚುಗಳನ್ನು ಕಟ್ಟುತ್ತಿದ್ದಾರೆ. ನಾಗರಿಕತೆಯ ಪ್ರಭಾವದಿಂದ ಬಹಳಷ್ಟು ಯುವಕರು ಪ್ಯಾಂಟು ಸಹ ತೊಡುತ್ತಿದ್ದಾರೆ.

ಹೆಣ್ಣು ಮಕ್ಕಳು ಸಾಮಾನ್ಯವಾಗಿ ನೂಲಿನ ಸೀರೆ, ನೂಲಿನ ಕುಪ್ಪಸತೊಡುತ್ತಾರೆ. ಇವರು ಹೆಚ್ಚು ದಟ್ಟವಾದ ಕೆಂಪು ಬಟ್ಟೆ, ಹಸಿರು ಬಟ್ಟೆಗಳನ್ನೇ ಹೆಚ್ಚು ಇಷ್ಟ ಪಡುತ್ತಾರೆ. ಇವರು ಹಣಕಾಸಿನ ವಿಷಯದಲ್ಲಿ ದುರ್ಬಲರಾಗಿರುವುದರಿಂದ ಕಡಿಮೆ ಬೆಲೆಯ ಹತ್ತಿನೂಲಿನ ಬಟ್ಟೆಗಳಾಗಿರುತ್ತವೆ.

ಯುವತಿಯರಾದರೆ ಪಾಲಿಸ್ಟರ್ ಮತ್ತು ಸಿಲ್ಕ್ ಸೀರೆ ಇಲ್ಲವೆ ಪೈಟ, ಲಂಗ, ಕುಪ್ಪುಸ ಉಡುವರು. ಬಹುತೇಕವಾಗಿ ಈ ಉಡುಗೆಗಳು ಊರಲ್ಲಿ ನಾಗರಿಕರಿಂದ ಕೇಳಿ ಪಡೆದವುಗಳೇ ಆಗಿರುತ್ತವೆ. ಅನಿವಾರ್ಯ ಸಂದರ್ಭಗಳಲ್ಲಿ ಕಡಿಮೆ ಬೆಲೆಯವುಗಳನ್ನು ಕೊಂಡುಕೊಳ್ಳುತ್ತಾರೆ. ಅದು ಇತ್ತೀಚಿಗೆ ಪ್ರಾರಂಭವಾಗಿದೆ ಎಂದು ಹೇಳುತ್ತಾರೆ. ಚಿಕ್ಕ ಮಕ್ಕಳಾದರೆ ಸರಿಯಾದ ಅಳತೆಯ ಬಟ್ಟೆಗಳು ಸಿಗಿದಿದ್ದಾಗ ದೊಡ್ಡವರ ಅಂಗಿ, ಜುಬ್ಬ, ಕೋಟುಗಳನ್ನೇ ಹಾಕಿಕೊಂಡು ನೆಲದ ಮೇಲೆಲ್ಲಾ ಕಸ ಬಳಿಯುತ್ತಾ, ಅಡ್ಡಾಡುತ್ತಿರುತ್ತವೆ.

ಇವರ ತೊಡುಗೆ ಬಹಳ ಸಾಮಾನ್ಯವಾದವು. ಗಂಡಸರು ಧರಿಸುವ ಆಭರಣಗಳಲ್ಲಿ ರಾಗಿ, ಬೆಳ್ಳಿಯ ಉಂಗುರುಗಳು, ಎಡಗೈಗೆ ರಾಗಿಯಿಂದ ತಯಾರಿಸಿದ ಮುಂಗೈ ಕಡಗ ಹಾಕಿಕೊಳ್ಳುತ್ತಾರೆ. ಗಂಡಸರು ಕೆಲವರು ಕಿವಿಗಳಿಗೆ ರಿಂಗುಗಳನ್ನು ಹಾಕಿಕೊಳ್ಳುತ್ತಾರೆ. ಅವುಗಳನ್ನು 'ಪೋಗಲು' ಎನ್ನುವರು. ಕುತ್ತಿಗೆಗೆ ಕಡಗದ ರೀತಿಯವುಗಳನ್ನು ಹಾಕುತ್ತಾರೆ. ಅವು ಬೆಳ್ಳಿಯವು ಅಥವಾ ರಾಗಿಯುವ ಇರುತ್ತವೆ. ಇದನ್ನು 'ಮೆಡಿಕಂಠಿ' ಕುತ್ತಿಗೆ ಸರ ಎಂದು ಕರೆಯುತ್ತಾರೆ. ಮುಂಗೈಗೆ ಮತ್ತು ಮುಂಗಾಲಿಗೆ ಧರಿಸುವ ಕಡಗವನ್ನು 'ಕಡೆಂ' ಎಂದು ಕರೆಯುತ್ತಾರೆ. ಭೀಮ, ಆಂಜನೇಯ, ಈಶ್ವರನ ಪಾತ್ರ ಧರಿಸುವವರು. ಕಡಗವನ್ನು ಬಲಿಗಾಲಿಗೆ ಧರಿಸುತಾರೆ. ಇವು ಬೆಳ್ಳಿಯವು ಆಗಿರುತ್ತವೆ. ಯಾರೋ ಕೆಲವರು ಕೈ ಉಂಗುರ ಮತ್ತು ಕಿವಿಯಲ್ಲಿನ ರಿಂಗು ಬಂಗಾರದವು ಹಾಕಿರುವವರು ಕಾಣ ಸಿಗುತ್ತಾರೆ. ಈಗಿನ ಸಂದರ್ಭದಲ್ಲಿ ಇಂತಹ ಸಂಪ್ರದಾಯಗಳೆಲ್ಲಾ ಬದಲಾಗುತ್ತಿದೆ.

ಮದುವೆಯಾದ ಹೆಣ್ಣು ಮಕ್ಕಳ ಕೊರಳಲ್ಲಿ ಬಂಗಾರದ ತಾಳಿಗೆ ಕರಿಮಣಿ ಪೋಣಿಸಿರುತ್ತಾರೆ. ಮೂಗಿಗೆ ಮೂಗು ಬೊಟ್ಟು, ಗಾಡಿನತ್ತು, ಕಿವಿಯಲ್ಲಿ ಹರಳಿನ ಬೆಂಡೋಲೆ, ಬುಗಡಿ ಕಡ್ಡಿ, ಕೊರಳಲ್ಲಿ ವಿವಿಧ ಮಣಿಯ ಸರಗಳು, ಮುತ್ತಿನಸರ, ಕಾಲಲ್ಲಿ ಕಾಲುಂಗರ ನಡುವಲ್ಲಿ ಬೆಳ್ಳಿಯ ಡಾಬು, ಯುವತಿಯರು ಕಾಲಲ್ಲಿ ಕಡಗ, ಚೈನು ವಯಸ್ಸಾದ ಹೆಣ್ಣು ಮಕ್ಕಳು ತೋಳಲ್ಲಿ ಬೆಳ್ಳಿಯ ತೋಳು ಬಂದಿ ಧರಿಸುತ್ತಾರೆ. ಕೈಯಲ್ಲಿ ಕಡಗ, ಗಾಜಿನ ಬಳೆ, ಸಾಮಾನ್ಯವಾಗಿ ವಯಸ್ಸಾದ ಹೆಂಗಸರು ಹಾಕುವ ಆಭರಣವೆಲ್ಲಾ ನಕಲಿ ಬಂಗಾರದವುಗಳಾಗಿರುತ್ತವೆ. ಯಾರೋ ಕೆಲವರಲ್ಲಿ ಕುಡಿಯುವ ಚಟ ಕಡಿಮೆ ಇರುವವರು. ಮಕ್ಕಳಿಗೆ ಬಂಗಾರದ ಒಡವೆಗಳನ್ನ ಮಾಡಿಸಿ ಹಾಕುತ್ತಾದರೆ. ಮುದುಕಿಯರು ಹಣೆಯಲ್ಲಿ ಕುಂಕುಮ ಧರಿಸುತ್ತಾರೆ. ತಲೆಯಲ್ಲಿಯ ಕೂದಲನ್ನು ತುರುಬು ಕಟ್ಟಿಕೊಳ್ಳುತ್ತಾರೆ. ಯುವತಿಯರು ಉದ್ದನೆಯ ಜಡೆ ಕಟ್ಟಿಕೊಂಡು, ಹಣೆಯಲ್ಲಿ ಟಿಕ್ಕಲಿ, ಪೌಡರ್ ಹಚ್ಚಿಕೊಳ್ಳುವರು. ಮದುವೆಯಾದವರು ಕಾಲು ಬೆರಳುಗಳಿಗೆ ಪಿಲ್ಲಿಗಳನ್ನು ಧರಿಸುತ್ತಾರೆ. ಬಹುತೇಕ ತಾಳಿಯೊಂದನ್ನುಳಿದ ಆಭರಣಗಳು ಬೆಳ್ಳಿಯವು. ಒಡವೆಗಳನ್ನು ಧರಿಸುವುದರಲ್ಲಿ ಇವರಿಗೆ ಒಂದು ರೀತಿಯ ನಿರಾಸಕ್ತಿ. ಈ ಸಮುದಾಯದ ಹೆಂಗಸರು ಊರಿನಲ್ಲಿ ಭಿಕ್ಷೆಗೆ ಹೋದಾಗ ಬೇರೆ ರೀತಿಯಾಗಿರುತ್ತಾರೆ. ಬಿಡಾರ ಮುಂದೆ ಬೇರೆ ರೀತಿಯಾಗಿರುವುದು ಅತ್ಯಂತ ಸೂಕ್ಷ್ಮಮತಿಯಿಂದ ನೋಡಿದರೆ ತಿಳಿಯುತ್ತದೆ. ಇತ್ತೀಚಿಗೆ ಈ ವೇಷಗಾರಿಕೆ ವೃತ್ತಿಯನ್ನು ತೊರೆದು ಹಲವಾರು ವೃತ್ತಿಗಳಿಗೆ ಬದಲಾಗಿದ್ದಾರೆ. ಕೆಲವರು ಪಾತ್ರೆ ಸಾಮಾನುಗಳನ್ನು ಮಾರುತ್ತಾರೆ.

ಹೆಂಗಸರೂ ವ್ಯಾಪಾರಕ್ಕೆಂದು ಪುಟ್ಟಿಯಲ್ಲಿ ಸಾಮಾನು ತುಂಬಿಕೊಂಡು ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಇವರ ಹೆಣ್ಣು ಮಕ್ಕಳು ಹೆಚ್ಚು ಅಲಂಕರಿಸಿಕೊಂಡು ಹೋಗುವುದಿಲ್ಲ. ಏಕೆಂದರೆ ಗಂಡಸರ ದೃಷ್ಟಿ ಕೆಟ್ಟದ್ದು ಮನೆಯಲ್ಲಿ ಸಾಮಾನು ಖರೀದಿಸುತ್ತೇನೆಂದು ಕರೆದು ಏನಾದರೂ ಮಾಡಿ ಯಾರೆಂದು ಹೆಚ್ಚು ಅಲಂಕರಿಸಿಕೊಳ್ಳುವುದಿಲ್ಲವೆಂದು ಹೇಳುತ್ತಾರೆ.

ಯುವಕರು ಹಾಗು ಮಧ್ಯ ವಯಸ್ಸಿನವರು ಬಹಳಷ್ಟು ಜನ ತಲೆಯ ಕೂದಲನ್ನು ಕುತ್ತಿಗೆಯ ಕೆಳಮಟ್ಟದವರೆಗೆ ಬಿಟ್ಟಿರುತ್ತಾರೆ. ಇದನ್ನು ಗಿರ್ದಾ ಎನ್ನುತ್ತಾರೆ. ಪೌರಾಣಿಕ ವೇಷಗಳಿಗೆ ಮತ್ತು ಹೆಣ್ಣು ವೇಷ ಧರಿಸುವಾಗ ಈ 'ಗಿರ್ದಾ' ಸಹ ಸಹಕಾರಿಯಾಗುತ್ತದೆಂದು, ದಿನಾಲು ಕೂದಲಿಗೆ ಕೊಬ್ಬರಿ ಎಣ್ಣೆ ಹಚ್ಚುತ್ತಾರೆ. ಮುಖ ಎರಡು ಅಥವಾ ಮೂರು ದಿನಕ್ಕೆ ಒಂದು ಸಾರಿ ಕ್ಷೌರ ಮಾಡಿಕೊಳ್ಳುತ್ತಾರೆ. ಕೆಲವರು ಗಡ್ಡ ಮೀಸೆ ಎರಡು ಬೋಳಿಸುತ್ತಾರೆ. ಕೆಲವರು ಗಡ್ಡ ಮಾತ್ರ ಬೋಳಿಸಿಕೊಳ್ಳುತ್ತಾರೆ.

ವಿಧವೆ ಹೆಂಗಸರ ಎರಡೂ ಕೈಯಲ್ಲಿ ಬಳೆ ಇರುವುದಿಲ್ಲ. ಬಳೆಯ ಬದಲಾಗಿ ಕಡಗಗಳಿರುತ್ತವೆ. ಹಣೆಯಲ್ಲಿ ವಿಭೂತಿ ಧರಿಸುವುದಿಲ್ಲ.

೮.೪. ಹಗಲುವೇಷಗಾರರ ವೃತ್ತಿ ಮತ್ತು ಕುಲಕಸುಬು

ಮಾನವ ಸಮುದಾಯದ ಆರ್ಥಿಕ ಬದುಕನ್ನು ರೂಪಿಸಿದ ಹಲವಾರು ಅಂಶಗಳಲ್ಲಿ ಜೀವನ ವೃತ್ತಿಯೂ ಒಂದು, ಪ್ರಮುಖವಾದ ಅಂಶ. ವೃತ್ತಿಗೆ ಮಾನವನ ಇತಿಹಾಸದಷ್ಟು ಪ್ರಾಚೀನತೆ ಇದೆ. ವ್ಯಕ್ತಿಯ ಜೀವನಾಧಾರ ವೃತ್ತಿ. ವೃತ್ತಿಯಿಲ್ಲದೆ ಬಾಳುವುದು, ಬದುಕುವುದು ಮಾನವನಿಗೆ ಕಷ್ಟ ಸಾಧ್ಯ. ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಕೊಳ್ಳುವುದು ಅವನಿಗೆ ಅನಿವಾರ್ಯ ಮತ್ತು ಅಗತ್ಯವೆನಿಸಿದ್ದಿತು.

"ಪ್ರಾಚೀನರ ಬದುಕು ತುಂಬಾ ಸೀಮಿತವಾದುದು; ಹಸಿವೆ, ನಿದ್ರೆ, ಮೈಥುನಗಳಿಗೆ ಪರಿಮಿತವಾದುದು. ಮೊದ ಮೊದಲು ಇವರ ವೃತ್ತಿಗಳು ಜೀವನಾವಶ್ಯಕ ವಸ್ತು ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿದ್ದು, ಹೆಚ್ಚು ನೈಸರ್ಗಿಕ (Natural) ವೆನಿಸಿದ್ದವು. ಆದುದರಿಂದ ಮಾನವನ ಆರಂಭದ ವೃತ್ತಿಗಳನ್ನು ನೈಸರ್ಗಿಕ ವೃತ್ತಿ (ಬೇಟೆ ಇತ್ಯಾದಿ)ಗಳೆಂದು ಕರೆಯಬಹುದು. ಕಾಲ ಕ್ರಮೇಣ ಮಾನವನ ಭೌತಿಕ, ಭೌದ್ಧಿಕ, ಮಾನಸಿಕ ವಿಕಾಸವಾದಂತೆ ವೃತ್ತಿಗಳೂ ವಿಕಾಸಗೊಂಡವು. ಆಗ ನೈಸರ್ಗಿಕ ವೃತ್ತಿಗಳೊಂದಿಗೆ ಸಾಮಾಜಿಕ ವೃತ್ತಿಗಳೂ ಬೆಳೆದು ಬರುವಂತಾಯಿತು." ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವಾಗ ಸ್ವರೂಪ, ಸ್ವಭಾಗಳಲ್ಲಿ ಕೆಲವೊಂದು ವ್ಯತ್ಯಾಸಗಳನ್ನು ಪಡೆದಿರಬಹುದು. ಆರಂಭದಲ್ಲಿ ಈ ವೃತ್ತಿಗಳೆಲ್ಲ ಅನುವಂಶಿಕವಾಗಿದ್ದವು.

ಪ್ರಸ್ತುತ ಈ ಸಂದರ್ಭದಲ್ಲಿ ಆಧುನಿಕತೆ, ತಂತ್ರಜ್ಞಾನ ಮತ್ತು ಕೈಗಾರಿಕೆಗಳು ಹೆಚ್ಚಾಗಿ ಪರಂಪರಾಗತ ಕಸುಬುಗಳೆಲ್ಲ ಮೂಲೆ ಗುಂಪಾಗುತ್ತಿದ್ದರೂ ಕೆಲವು ಸಮುದಾಯಗಳಲ್ಲಿ ಮಾತ್ರ ಸಂಪ್ರದಾಯಿಕ ವೃತ್ತಿಗಳು ಇನ್ನೂ ಹಾಗೆ ಉಳಿದುಕೊಂಡು ಬರುತ್ತಿವೆ ಎನ್ನುವ ವಿಷಯ ಸಮಾಜ ವಿಜ್ಞಾನಿಗಳಿಗೆ ಬಹುಮುಖ್ಯವಾಗುತ್ತವೆ.

ಹಗಲುವೇಷಗಾರರ ಕಸಬುಗಳು ಮತ್ತು ವೃತ್ತಿಗಳು ಇದರಿಂದೇನು ಹೊರತಾಗಿಲ್ಲ. “ಪ್ರಾಥಮಿಕ ಅವಶ್ಯಕತೆಗಳನ್ನು ಕಸುಬು ಪೂರೈಸಿದರೆ ಬದುಕಿಗೆ ಪೂರಕವಾದದ್ದನ್ನು ಉಪಕಸುಬುಗಳು ಪೂರೈಸುತ್ತವೆ.”[೬] ಎಂದು ಹೇಳಬಹುದು.

ಬಳ್ಳಾರಿ ಮತ್ತು ಆಂಧ್ರಗಡಿ ಭಾಗದಲ್ಲಿ ವಾಸಿಸುತ್ತಿರುವ ಹಗಲುವೇಷಗಾರರ ಮುಖ್ಯ ಕಸಬುಗಳೆಂದರೆ ವೇಷ ಹಾಕಿ ಪ್ರೇಕ್ಷರನ್ನು ಮನರಂಜಿಸಿ ಭಿಕ್ಷೆ ಬೇಡುವುದು. ಇವರಿಗೆ ಸಂಪ್ರದಾಯವಾಗಿ ಬರುವ ಮತ್ತೊಂದು ವೃತ್ತಿ ಬೇಟೆ. ಪ್ಲಾಸ್ಟಿಕ್ ಕೊಡ ಮಾರುವುದು, ಪ್ಲಾಸ್ಟಿಕ್ ಸಾಮಾನು ಮಾರುವುದು, ಸಿಲ್ವರ್ ಮತ್ತು ಸ್ಟೀಲ್ ಸಾಮಾನು ಮಾರುವುದು, ಚಾಪೆ ಹೆಣೆಯುವುದು, ಬಲೆ ನೇಯುವುದು, ಕೌದಿ ಹೊಲಿಯುವುದು, ವೇಷಗಳಿಗೆ ಬೇಕಾಗುವ ಪರಿಕರಗಳನ್ನು ತಯಾರಿಸಿಕೊಳ್ಳುವುದು, ಬೇಟೆ ಸಾಮಾನು ತಯಾರಿಸಿಕೊಳ್ಳುವುದು, ಮುಂತಾದವುಗಳನ್ನು ಉಪಕಸುಬುಗಳಾಗಿ ಮಾಡುತ್ತಾರೆ.

೮.೪.೧. ವೇಷಗಾರಿಕೆ

ಇವರಲ್ಲಿ ಗಂಡಸರ ಪ್ರಮುಖ ಕೆಲಸ ವೇಷ ಹಾಕುವುದು. ಬೆಳಿಗ್ಗೆ ಸೂರ್ಯೋದಯಕ್ಕೆ ಸರಿಯಾಗಿ ಬೆಳಗಿನ ಕ್ರಿಯಾಕರ್ಮಗಳನ್ನು ಮುಗಿಸಿಕೊಂಡು ಬಂದು ರಾತ್ರಿ ಉಳಿದ ಅನ್ನವನ್ನು ಉಂಡು ವೇಷ ಹಾಕಿಕೊಂಡರೆ ಮತ್ತೆ ವೇಷ ಅಳಿಸಿಕೊಳ್ಳುವವರೆಗೆ ಯಾವುದೇ ಕಾರಣಕ್ಕೂ ಮಧ್ಯದಲ್ಲಿ ಊಟ ತಿಂಡಿ ತಿನ್ನುವುದಿಲ್ಲ. ಮುಖಕ್ಕೆ ಬಣ್ಣ ಹಚ್ಚಿಕೊಂಡು ಮಧ್ಯಾಹ್ನದವರೆಗೆ ಊರಿನಲ್ಲಿ ಪ್ರದರ್ಶನ ನೀಡುತ್ತಾರೆ. ಇವರು ದಿನಾಲು ಭಿಕ್ಷೆಯನ್ನು ತೆಗೆದುಕೊಳ್ಳುವುದಿಲ್ಲ. ಒಂದು ಊರಿನಲ್ಲಿ ಹತ್ತು ಹದಿನೈದು ದಿನ ವೇಷ ಹಾಕಿ ಆಮೇಲೆ ಊರುಗಳಲ್ಲಿ ಪುಸ್ತಕಗಳಲ್ಲಿ ಹೆಸರು ಬರೆಯುತ್ತಾ ಪಟ್ಟಿಮಾಡಿ ವಸೂಲಿ ಮಾಡುತ್ತಾ ಹೋಗುತ್ತಾರೆ. ಹಣವಿದ್ದವರು ಹಣ ಕೊಡುತ್ತಾರೆ. ಕಾಳು ಇದ್ದವರು ಕಾಳು ಕೊಡುತ್ತಾರೆ. ಕೆಲವರು ಹಳೆ ಬಟ್ಟೆಗಳನ್ನು, ದಾನವಾಗಿ ಕೊಡುತ್ತಾರೆ.

ಪೂರ್ವದಲ್ಲಿ ನಿಂತ ಜಾಗದಲ್ಲಿಯೇ ಕೈಯಲ್ಲಿದ್ದ ಬಂಗಾರದ ಅಥವಾ ಬೆಳ್ಳಿಯ ಉಂಗುರ, ಕಡಗ, ಸರ ಕೊಟ್ಟ ಸಂದರ್ಭಗಳು, ಕೆಲವು ಸಾರಿ ಹೊಲಗಳು, ಮನೆಯ ಜಾಗಗಳು ಕೊಟ್ಟ ಸಂದರ್ಭಗಳೂ ಉಂಟು. ಇವರಿಗೆ ಆಸ್ತಿಯ ಆಸೆ ಇಲ್ಲದಿದ್ದಲ್ಲಿ, “ಇಂದಿನ ಚಿಂತೆ ಇಂದಲ್ಲದೆ ನಾಳೆಯ ಚಿಂತೆ ಯಮಗೇಕಯ್ಯ” ಎನ್ನುವ ರೀತಿ ದಾನವಾಗಿ ಪಡೆದ ಆಸ್ಥಿಗಳನ್ನು ಅದೇ ಊರಿನವರಿಗೆ ಮಾರಿ ಹೋದ ಪ್ರಸಂಗಗಳು ಎಷ್ಟೋ ಇವೆ. ಕೆಲವರು ಆಕಳು, ಕರು, ಮೇಕೆಮರಿ, ಕುರಿಮರಿ ಕೊಟ್ಟರೆ ಅವುಗಳನ್ನು ಅಲ್ಲಿಯೇ ಚೂರಿ ಹಾಕಿ ತಿಂದು ಹಾಳು ಮಾಡಿಕೊಂಡಿದ್ದಾರೆ. ಹೀಗೆ ಅಂದು ಇವರಿಗೆ ಸ್ಥಿರ ಆಸ್ಥಿಯ ಆಸೆ ಇದ್ದಿಲ್ಲ. ಎಷ್ಟೇ ಹಣ ಬಂದರೂ ಕುಡಿದು, ತಿಂದು ದುಂದು ವೆಚ್ಚಮಾಡುತ್ತಾ ತಮ್ಮ ಅಮೂಲ್ಯವಾದ ಕಲೆಯನ್ನು ಬೆಳೆಸಿಕೊಂಡು ಬಂದಿದ್ದಾರೆ.

ಇವರಿಗೆ ಜನರೇ ಆಸ್ತಿ. ಅವರ ನಂಬಿಕೆಯೇ ಇವರ ಆಸ್ತಿ. ಇಂದು ವೈಜ್ಞಾನಿಕ ಉಪಗ್ರಹಗಳಿಂದ

ವಿವಿಧ ರೀತಿಯ ಸಾರ್ವಜನಿಕ ಮನರಂಜನೆ ಮಾಧ್ಯಮಗಳು ಬಂದು ಈ ಜನರ ನಂಬಿಕೆಯನ್ನು ಹುಸಿಗೊಳಿಸುತ್ತಿವೆ. ಈ ನಂಬಿಕೆಗಳು ಕೈಜಾರುತ್ತಿರುವ ಇಂತಹ ಸಂದರ್ಭದಲ್ಲಿ ಪರ್ಯಾಯವಾಗಿ ಬೇರೆ ಬದುಕನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯವಾಗಿದೆ. ಈ ಹಿಂದೆ ದೂರದರ್ಶನ, ಕಂಪ್ಯೂಟರ್‌ನಂತಹ ಮಾಧ್ಯಮಗಳು ಬರುವುದಕ್ಕಿಂತ ಮೊದಲು ಸಕಲ ರಾಜ ಮರ್ಯಾದೆಗಳನ್ನು ಊರುಗಳಲ್ಲಿ ಕೊಟ್ಟಿರುತ್ತಾರೆ. ಆದರೆ ಇಂದು ಅವರೆ ಈ ಕಲೆಯನ್ನು, ಕಲೆಗಾರರನ್ನು ತುಚ್ಛವಾಗಿ ಕಾಣಹತ್ತಿರುವುದು ದೊಡ್ಡ ವಿಪರ್ಯಾಸವಾಗಿ ಈ ವೇಷಗಾರರಿಗೆ ದಾರಿ ಕಾಣದಂತಾಗಿದೆ. ಮುಂದಿನ ಬದುಕಿಗೆ ಯಾವ ಮಾರ್ಗವನ್ನು ಹಿಡಯಬೇಕು? ಈ ವೇಷಗಾರಿಕೆಯನ್ನು ಬಿಡಬೇಕೋ, ಮುಂದುವರಿಸಬೇಕೋ? ಎಂಬ ಪ್ರಶ್ನೆ ಬಲವಾಗಿ ಕಾಡುತ್ತಿದೆ. ಕೆಲವರಂತೂ ಅನಿವಾರ್ಯವಾಗಿ ಕಡಿಮೆ ಬಂಡವಾಳದ ಪರ್ಯಾಯ ವೃತ್ತಿಗಳನ್ನು ಆರಿಸಿಕೊಳ್ಳುತ್ತಿದ್ದಾರೆ.

ಹಗಲುವೇಷಗಾರರು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಕೆಲವು ನಿಯಮಗಳಿವೆ. ಹಕ್ಕುಪತ್ರದಲ್ಲಿರುವಂತೆಯೇ ತಮ್ಮ ಕ್ಷೇತ್ರದಲ್ಲಿ ಭಿಕ್ಷೆಯನ್ನು ಬೇಡಿಕೊಳ್ಳುತ್ತಾರೆ. ಪರಂಪರೆಯಿಂದ ತಮ್ಮ ಜೊತೆಯಲ್ಲಿಯೇ ಇರುವ ಈ ಹಕ್ಕು ಪತ್ರಗಳೇ ಇವರ ಭಿಕ್ಷಾಟನೆಯ ದಾಖಲೆಯನ್ನು ಬಿಚ್ಚಿ ಹೇಳುತ್ತವೆ. ಇವೇ ಇವರ ಆಸ್ತಿಗಳು. ಅಣ್ಣ-ತಮ್ಮಂದಿರು, ತಂದೆ-ಮಕ್ಕಳು ಒಡೆದು ಭಾಗಗಳಾದಂತೆಲ್ಲಾ ಒಪ್ಪಂದಕ್ಕೆ ತಕ್ಕಂತೆ ತಮ್ಮ-ತಮ್ಮ ಕ್ಷೇತ್ರದಲ್ಲಿಯ ಗ್ರಾಮಗಳನ್ನು ಹೊಸ ಪತ್ರಗಳಲ್ಲಿ ಬರೆಯಿಸಿಕೊಳ್ಳುತ್ತಾರೆ. ಕೆಲವೊಂದು ಸಲ ಒಬ್ಬರ ಕ್ಷೇತ್ರಗಳಿಗೆ ಒಬ್ಬರು ಹೋಗಿ ಜಗಳವಾಡಿ ನ್ಯಾಯಪಂಚಾಯಿತಿಗೆ ಬಂದ ಸಂದರ್ಭಗಳೂ ಇವೆ.

ಈ ಸಮುದಾಯದಲ್ಲಿಯೇ ಕೆಲವರು ತಂಬೂರಿ ದುಮುಕಿ, ಹಿಡಿದು ಬುರ್ರ ಕಥೆಯನ್ನು ಹಾಡುತ್ತಾ ಭಿಕ್ಷೆ ಬೇಡುತ್ತಾರೆ. ಇವರು ಮನೆಯ ಮುಂದೆ ಸ್ವಲ್ಪ ಹೇಳಿ ಭಿಕ್ಷೆ ಪಡೆದ ನಂತರ ಮುಂದಿನ ಮನೆಗೆ ಹೋಗುತ್ತಾರೆ. ಇವರು ಭಿಕ್ಷೆಯಲ್ಲಿ ಯಾವುದೇ ರೀತಿಯ ದವಸ-ಧಾನ್ಯ ಕೊಟ್ಟರೆ ಪಡೆಯುತ್ತಾರೆ. ಹಣ ಕೊಟ್ಟರೆ ಪಡೆಯುತ್ತಾರೆ. ಕೆಲವು ಹೆಂಗಸರಿದ್ದರೆ ಅನ್ನ, ಸಾರು, ರೊಟ್ಟಿ, ಪಲ್ಯ, ಏನಿದ್ದರೂ ನೀಡಿಸಿಕೊಂಡು ಹೋಗುತ್ತಾರೆ. ಇವರ ಜೋಳಿಗೆ ಚೌಕಾಕಾರವಾಗಿದ್ದು ಅದರಲ್ಲಿ ನಾಲ್ಕೈದು ಭಾಗಗಳಿದ್ದು ಒಂದರಲ್ಲಿ ಅನ್ನ, ಸಾರ, ಇನ್ನುಳಿದವುಗಳಲ್ಲಿ ವಿವಿಧ ರೀತಿಯ ಧಾನ್ಯಗಳನ್ನು ಹಾಕಿಸಿಕೊಳ್ಳಲು ಅನುಕೂಲವಾಗಿರುತ್ತದೆ. ಇನ್ನು ಜನರ ಆಮಂತ್ರಣದ ಮೇರೆಗೆ ಜಾತ್ರೆ, ಉತ್ಸವ, ಹಬ್ಬ, ಹರಿದಿನಗಳಲ್ಲಿ ವಿಶೇಷ ಕಾರ್ಯಗಳಿರುವ ಸಂದರ್ಭಗಳಲ್ಲಿಯೂ ಇವರನ್ನು ಆಮಂತ್ರಿಸಿ ಕಥೆ ಹೇಳಿಸಿಕೊಂಡು ಅವರ ಖುಷಿಗೆ ತಕ್ಕಂತೆ ವಿರಾಳಕೊಟ್ಟು ಕಳುಹಿಸುತ್ತಾರೆ. ಇಂದು ವಿಶೇಷವಾಗಿ ಇವರನ್ನು ಚುನಾವಣಾ ಪ್ರಚಾರಕ್ಕೆ ತಮ್ಮ ಪಕ್ಷದ ಹಾಡುಗಳನ್ನು ಬರೆಯಿಸಿ ಇವರಿಗೆ ತರಬೇತಿ ನೀಡಿ ಇವರನ್ನು ಹಳ್ಳಿ ಹಳ್ಳಿಗಳಲ್ಲಿ ಹಾಡಿಸಿಕೊಳ್ಳುತ್ತಾ ದುಡಿಸಿಕೊಂಡು ತಮ್ಮ ಪ್ರಚಾರವನ್ನು ಗಿಟ್ಟಿಸಿಕೊಳ್ಳುವವರಿದ್ದಾರೆ. ಕೆಲವು ಸಲ ಸರಕಾರದವರೂ ಸಹ ಸಾಕ್ಷರತಾ ಆಂದೋಲನ, ಕುಟುಂಬ ಕಲ್ಯಾಣದಂತಹ ಯೋಜನೆಗಳ ಪ್ರಚಾರಕ್ಕೆ ಇವರನ್ನು ಬಳಸಿಕೊಂಡ ಸಂದರ್ಭಗಳೂ ಇವೆ.

೮.೫. ಭಿಕ್ಷೆ



ಭಿಕ್ಷೆ ಬೇಡುತ್ತಿರುವ ವೃದ್ಧೆ

ಜನರಿಗೆ ಮನರಂಜನೆಯನ್ನು ನೀಡಿ ಅದಕ್ಕೆ ಪ್ರತಿಫಲವಾಗಿ ಪಡೆಯುವ ನಿರಾಳವೇ ಭಿಕ್ಷೆ. ವೇಷಗಾರರ ಹೆಂಗಸರು ಸಹ ಬಹಳ ಕಷ್ಟ ಜೀವಿಗಳು. ಮಕ್ಕಳ ಲಾಲನೆ-ಪಾಲನೆಯ ಜೊತೆಗೆ ಪುಳ್ಳೆ-ಪುಸಿಗೆಯಂತಹ ಉರುವಲು ತಂದು ತುರ್ತು ಸಂದರ್ಭಗಳಲ್ಲಿ ಅಡುಗೆ ಮಾಡುತ್ತಾರೆ. ಮತ್ತು ಅಕ್ಕಪಕ್ಕದ ಹಳ್ಳಿಗಳಲ್ಲಿ ಸುತ್ತಾಡಿ ಭಿಕ್ಷೆ ಬೇಡುವುದು ಅವರ ಪ್ರಮುಖ ಕೆಲಸ. ಇವರು ಭಿಕ್ಷೆಗೆ ಹೋಗುವುದು ಸಾಮಾನ್ಯವಾಗಿ ಬೆಳಗಿನ ಜಾವದಲ್ಲಿಯೇ. ಗಂಡಸರು ಎದ್ದು ತಯಾರಾಗಿ ಕಲಾ ಪ್ರದರ್ಶನಕ್ಕೆ ಹೊರಡುವ ಪೂರ್ವದಲ್ಲಿಯೇ ಹೆಂಗಸರು ಭಿಕ್ಷೆಗೆ ಹೋಗುತ್ತಾರೆ. ಚಿಕ್ಕ ಮಕ್ಕಳಿದ್ದರೆ ಒಂದು ಬಟ್ಟೆಯಲ್ಲಿ ಕಂಕುಳದಲ್ಲಿ ಕಟ್ಟಿಕೊಂಡು ಇನ್ನೊಂದು ಕಂಕುಳದಲ್ಲಿ ಜೋಳಿಗೆ ಹಾಕಿಕೊಂಡು ಬಾರಿಸಲು ಕೈಯಲ್ಲಿ ಡಕ್ಕೆ (ದಮ್ಮಡಿ) ಅಥವಾ ಕೈಪೆಟ ಇನ್ನೊಂದು ಕೈಯಲ್ಲಿ ನಾಯಿಗಳ ಕಾಟ ತಪ್ಪಿಸಿಕೊಳ್ಳಲು ಕಟ್ಟಿಗೆ ಅಥವಾ ಬಡಿಗೆ ಹಿಡಿದುಕೊಂಡು ಹೋಗುವರು.

೮.೫.೧. ಧಾರ್ಮಿಕ ಭಿಕ್ಷೆ : ಕೆಲವು ಹೆಂಗಸರು ಸಂಪ್ರದಾಯಿಕ ಕಾವ್ಯಗಳಾದ ಗಂಗಮ್ಮ ಗೌರಮ್ಮನ ಮೂರ್ತಿಗಳನ್ನು ಒಯ್ದು ಮನೆ ಮನೆಗೆ ಗಂಗಮ್ಮ-ಗೌರಮ್ಮನ ಕಥೆಯನ್ನು ಹಾಡುತ್ತಾ ಭಿಕ್ಷೆ ಬೇಡುತ್ತಾರೆ. ಕೆಲವರು ಡಕ್ಕೆ ಗುಮ್ಮಟ ಹಿಡಿದು ಬಾರಿಸುತ್ತಾ ವಚನ, ತ್ರಿಪದಿ ಜನಪದ ಹಾಡುಗಳನ್ನು ಹೇಳುತ್ತಾ ಭಿಕ್ಷೆ ಬೇಡುವರು. ದೊರೆಯುವ ಭಿಕ್ಷೆ ಕಾಳು, ಕಡಿ, ಹಣ, ಹಳೆಯ ಬಟ್ಟೆಯ ರೂಪದಲ್ಲಿರುತ್ತದೆ. ಈ ಕಥೆ ಮತ್ತು ಹಾಡುಗಳು ಧಾರ್ಮಿಕ ಭಾವನೆಯಿಂದ ಒಳಗೊಂಡಿರುತ್ತಾದ್ದರಿಂದ ಇಂತಹ ಭಿಕ್ಷೆಯನ್ನು ಧಾರ್ಮಿಕ ಭಿಕ್ಷೆ ಎಂದು ಕರೆಯಬಹುದು. ಇವರು ಮೇಲಿಂದ ಮೇಲೆ ಅವೇ ಹಳ್ಳಿಗಳಿಗೆ ಭಿಕ್ಷೆಕ್ಕೆ ಹೋಗುವುದರಿಂದ ಜನರಿಗೆ ಪರಿಚಯವಾಗಿ ಸಲುಗೆಯಿಂದ ಮಾತನಾಡಿಸಿ ತಮಗೆ ಅವಶ್ಯವಿರುವ ಜೀವನಾವಶ್ಯಕ ವಸ್ತುಗಳನ್ನು ಕೇಳಿ ಪಡೆಯುವ ಚಾಣಾಕ್ಷತನ ಈ ವೇಷಗಾರರ ಹೆಣ್ಣು ಮಕ್ಕಳಿಗೆ ಇದೆ. ಆದುದರಿಂದ ಇವರು ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದು ವಿರಳ.

ಇವರು ಭಿಕ್ಷಕ್ಕೆ ಹೋಗುವಾಗ ಜೋಡಿ-ಜೋಡಿಯಾಗಿ ಹೋಗುವುದು ಸಾಮಾನ್ಯ. ಊರಿನಲ್ಲಿ ಒಬ್ಬರು ಒಂದು ಭಾಗದಿಂದ ಭಿಕ್ಷೆ ಬೇಡುತ್ತಾ, ಬಂದರೆ ಇನ್ನೊಬ್ಬರು ಇನ್ನೊಂದು ಭಾಗದಿಂದ ಭಿಕ್ಷೆ



[illegible]

ಬೇಡುತ್ತಾ, ಬರುತ್ತಾರೆ. ಎಲ್ಲಾ ಊರು ಮುಗಿದ ಮೇಲೆ ಬೇರೆ ಊರಿಗೆ ಹೋಗಿದ್ದರೆ, ಒಂದೆಡೆ ಕುಳಿತು ಊಟಮಾಡಿ, ಉಳಿದಿದ್ದನ್ನು ಕಟ್ಟಿಕೊಂಡು ಮನೆಗೆ ಮರಳುವರು. ಭಿಕ್ಷೆಯಲ್ಲಿ ಸಿಕ್ಕ ಆಹಾರ ಪದಾರ್ಥಗಳನ್ನು ಭಿಕ್ಷೆಗೆ ಹೋಗದಿರುವವರಿಗೂ ಹಂಚಿಕೊಡುತ್ತಾರೆ. ಇದ್ದುದರಲ್ಲಿಯೇ ಬಹಳ ಸಹಕಾರದ ಜೀವನ ನಡೆಸುತ್ತಾರೆ. ಒಬ್ಬರು ಇಲ್ಲದಾಗ ಒಬ್ಬರಿಗೆ ಒಬ್ಬರು ಸಹಾಯವಾಗುತ್ತಾರೆ. ಇವರಲ್ಲಿ ಹೆಣ್ಣು ಮಕ್ಕಳು ವೇಷ ಹಾಕುವ ಹಾಗಿಲ್ಲ. ಹಾಗೇನಾದರೂ ಕುಲ ಕಟ್ಟಳೆ ಮೀರಿ ವೇಷ ಧರಿಸಿದರೆ ಅಂತಹವರಿಗೆ ದಂಡ ಮತ್ತು ಶಿಕ್ಷೆಯನ್ನು ವಿಧಿಸುತ್ತಾರೆ.

ತಿಳುವಳಿಕೆಗೆ ಬಂದ ಚಿಕ್ಕ ಗಂಡು ಮತ್ತು ಹೆಣ್ಣುಮಕ್ಕಳು ಕೂಡ ಭಿಕ್ಷೆಗೆ ಹೋಗುವುದುಂಟು. ಚಿಕ್ಕ ಗಂಡು ಮಕ್ಕಳು ತಂದೆಯ ಜೊತೆ ಊರಾಡಲು ಹೋದರೆ, ಚಿಕ್ಕ ಹೆಣ್ಣು ಮಕ್ಕಳು ತಾಯಿಯ ಜೊತೆ ಭಿಕ್ಷೆಗೆ ಹೋಗುವರು. ಕೆಲವು ಸಲ ಸ್ವತಂತ್ರವಾಗಿ ಡಕ್ಕೆ ಅಥವಾ "ಕೈಪೇಟೆ"[೭] ಹಿಡಿದು ಸಮೀಪದ ಪಟ್ಟಣದ ಬಸ್ಸು ನಿಲ್ದಾಣದಲ್ಲಿ ಬೀದಿಯ ಅಂಗಡಿಗಳ ಮುಂದೆ ತುಣುಕು ತುಣುಕಾದ ಹಾಡಿನ ಭಾಗಗಳನ್ನು ಹಾಡುತ್ತಾ ಭಿಕ್ಷೆ ಬೇಡುವರು. ಅಲೆದಾಡಿ ಭಿಕ್ಷೆ ಬೇಡುವ ಈ ಮಕ್ಕಳು ಚುರುಕಾಗಿ, ತುಂಬಾ ಚೂಟಿಯಾಗಿ ಮಾತನಾಡಿ ಅವರಿಂದ ದುಡ್ಡು ಪಡೆಯುವವರೆಗೂ ಕಾಡಿ, ಬೇಡಿ, ಅವರ ಮನ ಕರಗುವಂತೆ ನಟನೆ ಮಾಡಿ ಭಿಕ್ಷೆ ಪಡೆಯುತ್ತಾರೆ."[೮] ಪಟ್ಟಣದ ಬಸ್ಸು ನಿಲ್ದಾಣದಲ್ಲಿ, ಮುಖ್ಯ ರಸ್ತೆಗಳಲ್ಲಿ, ಮುಖ್ಯ ತಿರುವುಗಳಲ್ಲಿ ದೇವಸ್ಥಾನಗಳ ಹತ್ತಿರ ಅಡ್ಡಾಡಿ ಭಿಕ್ಷೆ ಎತ್ತುತ್ತಾರೆ. ಹಂಪಿಯಲ್ಲಿಯಂತೂ ವಿದೇಶಿಯರಿಗೆ ಈ ಮಕ್ಕಳು ಅಚ್ಚುಮೆಚ್ಚು. ಈ ಮಕ್ಕಳು ಈಶ್ವರನ ವೇಷ, ಕೃಷ್ಣನ ವೇಷ, ಭೀಮನ ವೇಷ, ಮತ್ತು ಆಂಜನೇಯನ ವೇಷವನ್ನು ಹಾಕಿಕೊಡಿರುವ ಇವರ ಪಕ್ಕದಲ್ಲಿ ಛಾಯಚಿತ್ರ ತೆಗೆದುಕೊಂಡು ಅವರಿಗೆ ತಮ್ಮ ಸಂತೋಷಕ್ಕೆ ತಕ್ಕಂತೆ ಹಣ ಕೊಟ್ಟು ಹೋಗುತ್ತಾರೆ. ಈ ಮಕ್ಕಳು ತಮಗೆ ಬೇಕಾದಷ್ಟು ಖರ್ಚುಮಾಡಿ ಅಳಿದುಳಿದ ಅಷ್ಟಿಷ್ಟು ತಂದೆ ತಾಯಿಗಳಿಗೆ ತಂದುಕೊಡುತ್ತಾರೆ. ಹೀಗೆ ಇವರ ದಿನ ಭಿಕ್ಷೆ ನಡೆಯುತ್ತಿರುತ್ತದೆ.

೮.೬. 'ಬೇಟೆ' (ಶಿಕಾರಿ)

ಮನುಷ್ಯ ಹಸಿವೆಯನ್ನು ನೀಗಿಸಿಕೊಳ್ಳಲು ಅಥವಾ ಜೀವನ ನಿರ್ವಹಣೆಗೆ ಎರಡು ವೃತ್ತಿಗಳನ್ನು ಕೈಗೊಂಡ ಕಾಡಿನಲ್ಲಿ ಗಡ್ಡೆ ಗೆಣಸು ಅಗೆದು ತಿನ್ನುವುದು; ಮತ್ತು ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನು ಆಹಾರವಾಗಿ ಬಳಸುವುದು. ಈ ಎರಡೂ ವೃತ್ತಿಗಳು ಆಹಾರ ಸಂಗ್ರಹಣೆಯ ಮುಖ್ಯ ಕಸುಬುಗಳು. ಮಾನವನ ಸಾಮಾಜಿಕ, ಸಂಸ್ಕೃತಿಯಲ್ಲಿಯ ಬದಲಾಣೆಯು ನಾನಾ ಕಾರಣಗಳಿಂದಾಗಿ ಬೇಟೆಯು ಜನ ಜೀವನದಿಂದ ಕಣ್ಮರೆಯಾಗುತ್ತಿದೆ.

"ಬೇಟೆಯಲ್ಲಿ ಯಾವಾಗಲೂ ಪ್ರಬಲ ವರ್ಗ ಜಯಿಸುತ್ತದೆ. ದುರ್ಬಲ ವರ್ಗ ಸೋತು ಸಾಯುತ್ತದೆ. ಈ ಕ್ರಿಯೆ ಜೀವ ಜಗತ್ತಿನ ಎಲ್ಲಾ ಜಲಚರ, ಕ್ರಿಮಿ ಕೀಟ, ಪಕ್ಷಿಗಳಿಂದ ತೊಡಗಿ ಕಾಡಿನ ಕ್ರೂರ ಪ್ರಾಣಿಗಳಿಂದ ಬೆಳೆದು ಮಾನವನರೆಗೂ ಬಂದಿದೆ."[೯]

ಈ ವೇಷಗಾರರು ಎರಡು ರೀತಿಯಲ್ಲಿ ಬೆಳೆದಿದ್ದಾರೆ. ಒಂದು ವೇಷಗಾರಿಕೆ ಪ್ರಧಾನವೃತ್ತಿ. ಬೇಟೆಗಾರಿಕೆ ಉಪವೃತ್ತಿ. ವೇಷಗಾರಿಕೆಯ ಮಿಗಿತ ಸಮಯವನ್ನು ಬೇಟೆಗಾರಿಕೆಗೆ ಉಪಯೋಗಿಸಿಕೊಂಡಿದ್ದಾರೆ. ಇವರಿಗೆ ವ್ಯಾಪಾರದ ದೃಷ್ಟಿಯ ಬೇಟೆಯಲ್ಲ ಜೀವನಾಧಾರಿತ ಬೇಟೆ ಇವರು ಬೇಟೆಯನ್ನು ತಮ್ಮ ಭಾಷೆಯಲ್ಲಿ 'ಶಿಕಾರಿ' ಎಂದು ಕರೆಯುತ್ತಾರೆ. ಈ ಬುಡಕಟ್ಟಿನಲ್ಲಿ ಬೇಟೆ ಪ್ರಧಾನವಾಗಿ ಅಲ್ಲದಿದ್ದರೂ ಸಂಪ್ರದಾಯಿಕ ಕ್ರಮವಾಗಿ ದೈವದ ಆಚರಣೆಯಾಗಿ, ಬಾಯಿ ರುಚಿಯ ಆಹಾರವಾಗಿ ಕಂಡಿದೆಲ್ಲವನ್ನು ಬೇಟೆಯಾಡದೆ ತಮ್ಮ ಆಹಾರಕ್ಕಾಗಿ ಬಳಕೆಯಾಗುವ ಪ್ರಾಣಿ, ಪಕ್ಷಿಗಳನ್ನು ಮಾತ್ರ ಬೇಟೆಯಾಡುತ್ತಾ ಬಂದಿದ್ದಾರೆ.

ಬೇಟೆಯಲ್ಲಿ ಅತಿಮುಖ್ಯವಾಗಿ ಬೇಕಾಗಿರುವುದು ತಂತ್ರ, ಬುದ್ಧಿಶಕ್ತಿ, ಧೈರ್ಯ ಸಾಲದು, ಆಯಾಯ ಪ್ರಾಣಿ ಪಕ್ಷಿಗಳ ಗಾತ್ರ, ಸ್ವಭಾವಕ್ಕನುಗುಣವಾಗಿ ಉಪಾಯಗಳನ್ನು ಬಳಸಿ ಬೇಟೆಯನ್ನು ವಶಪಡಿಸಿಕೊಳ್ಳುವುದು ಮುಖ್ಯ. ಅಂತಹ ಉಪಾಯಗಳನ್ನು ಬಳಿಸಿ ಸಾಧನಗಳನ್ನು ರೂಢಿಸಿಕೊಂಡು ಬೇಟೆಯಾಡುತ್ತಾ ಬಂದ ಹಲವಾರು ಬುಡಕಟ್ಟುಗಳಲ್ಲಿ ಹಗಲುವೇಷಗಾರರು ಒಬ್ಬರು.

ಇವರು ಬೇಟೆಯಾಡುವ ಪ್ರಾಣಿಗಳನ್ನು ತಮ್ಮ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ. ಮತ್ತು ಹೇಗೆ ಬೇಟೆಯಾಡುತ್ತಾರೆಂದು ಇಲ್ಲಿ ವಿವರಿಸಲಾಗಿದೆ.

೮.೬.೧. ಕೌಜು ಬೇಟೆ : ಕೋಳಿಯ ಜಾತಿಗೆ ಸೇರಿದ ಪಕ್ಷಿ. ಇವರ ಭಾಷೆಯಲ್ಲಿ ಕಾಜಾಮು ಎಂದು ಕರೆಯುತ್ತಾರೆ. ಇವರು ಮೊದಲು ಒಂದು ಗೌಜಿಗನ ಹಕ್ಕಿ ಅಥವಾ ಕೌಜು ಎಂದು ಕರೆಯುವ ಈ ಪಕ್ಷಿಯನ್ನು ಹಿಡಿದು ಪಳಗಿಸುತ್ತಾರೆ. ನಂತರ ಒಂದು ಪಂಜರದಲ್ಲಿಟ್ಟು ಅದನ್ನು ಕಾಡಿನಲ್ಲಿ ಇತರ ಪ್ರಾಣಿಗಳು ವಾಸಿಸುವ ಸ್ಥಳದಲ್ಲಿ ಈ ಪಂಜರವನ್ನು ಬಿಟ್ಟು, ಆ ಪಂಜರದ ಪಕ್ಕದಲ್ಲಿ 'ಪಾಜಿ' ಒಂದು ಅಡಿ ಎತ್ತರ ಎರಡು ಅಡಿ ಉದ್ದ ಬಿದಿರಿನಿಂದ ತಯಾರಿಸಿದ ಚೌಕಟ್ಟುಗಳ ನಡುವೆ ಕಣ್ಣಿಯನ್ನು ಅಳವಡಿಸಿರುತ್ತಾರೆ. ಈ ಒಂದೊಂದು ಚೌಕಟ್ಟಿನಲ್ಲಿ ನಾಲ್ಕು ಕಣ್ಣಿಗಳಿದ್ದು ಒಂದೊಂದು ಕಣ್ಣಿಗೆ ಒಂದೊಂದು ಉರುಲು ಹೊಂದಿಸಿರುತ್ತಾರೆ. ಇಂತಹ ಹತ್ತು ಹದಿನೈದು ಚೌಕಟ್ಟು ಕೂಡಿಸಿ ಒಂದು ಪಾಜಿ ಮಾಡಿರುತ್ತಾರೆ. ಈ ಬೇಟೆಯನ್ನು ಸ್ಥಳ ಬದಲಾಯಿಸಿ ಬದಲಾಯಿಸಿ ಹಿಡಿಯುತ್ತಾರೆ. ಏಕೆಂದರೆ ಅದೇ ಜಾತಿಯ ಪಕ್ಷಿಗಳು ಗುರುತು ಹಿಡಿಯುತ್ತವೆ ಎನ್ನುವ ಕಾರಣಕ್ಕೆ. ಇದನ್ನು ಸುಲಭವಾಗಿ ಮಡಿಸಬಹುದು. ಮಡಿಸಿದಾಗ ಪೆಟ್ಟಿಗೆಯಂತೆ ಕಾಣುತ್ತದೆ. ಪಳಗಿದ ಕೌಜುಗವನ್ನು ಮರೆಯಲ್ಲಿಟ್ಟು ತಾವು ಕುಳಿತು ಸಿಳ್ಳು ಹಾಕುವಂತೆ ಪ್ರೇರೇಪಿಸುತ್ತಾರೆ. ಸಾಕಿದ ಕೌಜುಗ ಕೂಗುತ್ತದೆ. ಈ ಕೂಗನ್ನು ಕೇಳಿದ ಕಾಡಿನ ಕೌಜುಗಗಳು ಯಾರೋ ಶತ್ರುಗಳು ಬಂದಿರಬಹುದೆಂದು ಬಂದು ಇದರ ಹತ್ತಿರ ಕಾದಾಡಲು ಹೋರಾಡಲು ಹೋಗಿ ಪಾಜಿಯಲ್ಲಿ ಸಿಕ್ಕಿ ಬೀಳುತ್ತವೆ. ಅದನ್ನೇ ನಿರೀಕ್ಷಿಸುತ್ತಿರುವ ಬೇಟೆಗಾರ ಹಿಡಿದುಕೊಳ್ಳುತ್ತಾನೆ. ಈ ಬೇಟೆಯನ್ನು ನಿಪುಣ ಬೇಟೆಗಾರರು ಮಾತ್ರ ಮಾಡಬಲ್ಲರು. ಇಂತಹ ಬೇಟೆಗೆ ಒಬ್ಬನಿದ್ದರೆ ಸಾಕು.

೮.೬.೨. ಅಡವಿ ಚಿಕ್ಕು ಬೇಟೆ : ಇದನ್ನು ಅವರ ಭಾಷೆಯಲ್ಲಿ ಮಾಸಕಾಚಿಕಮು ಎಂದು ಕರೆಯುತ್ತಾರೆ.

ಈ ಜಾತಿಯ ಬೆಕ್ಕು ಕಪ್ಪಾಗಿರುತ್ತದೆ. ಇದು ಬಹಳ ಚುರುಕಾದದ್ದು. ಇದನ್ನು ಗ್ರಹಕ್ಕೆ ಹೋಲಿಸುತ್ತಾರೆ ಇವರು. ಅದು ಒಂದು ಸಾರಿ ಹಾರಿದರೆ ಕುದರೆ ಜಿಗದಷ್ಟು ಮುಂದೆ ಹೋಗುತ್ತದೆ. ಅದರ ಹೆಜ್ಜೆ ಗುರುತು ಹಿಡಿದು ಅದು ಈಗ, ನಿನ್ನೆ, ಮುಂಜಾನೆ ಯಾವಾಗ ಹೋಗಿದೆಯೆಂದು ಗುರುತು ಹಿಡಿದು ಅದನ್ನು ಸೂಕ್ಷ್ಮವಾಗಿ ಗುರುತಿಸಿ ಮರೆಮಾಚಿ ಹಿಡಿಯಬೇಕು. ಇವುಗಳನ್ನು ನಾಯಿಗಳಿಂದ ಎಲ್ಲರೂ ಗಾಬರಿ ಎಬ್ಬಿಸಿ, ಬಲೆಯಲ್ಲಿ ಬೀಳುವಂತೆ ಮಾಡುವರು. ಹೊಡೆಯುವುದು, ತಿವಿಯುವುದರ ಮುಖಾಂತರ ಹಿಡಿಯುತ್ತಾರೆ.

ಈ ಬೆಕ್ಕುಗಳಲ್ಲಿ ಇನ್ನು ಹಲವಾರು ರೀತಿಯಲ್ಲಿವೆ. ಅವುಗಳನ್ನು ತೆಲುಗಿನಲ್ಲಿ ಜಂಗಪಿಲ್ಲಿ, ಬುಡ್ಡಪಿಲ್ಲಿ, ಮಾರಾಪಿಲ್ಲಿ, ಮೋಲಪಿಲ್ಲಿ, ಪೆಂಟಪಿಲ್ಲಿ, ಭೂತಪಿಲ್ಲಿ, ದೇವಂಗನಂ ಪಿಲ್ಲಿ, ಮಂಟಪಿಲ್ಲಿ ಮೊದಲಾದ ವಿಧಗಳಲ್ಲಿ ಕಂಡುಕೊಂಡಿದ್ದಾರೆ. ಮಂಟಪಿಲ್ಲಿ ಎನ್ನುವ ಜಾತಿಗೆ ಸೇರಿರುವ ಕಾಡು ಬೆಕ್ಕು ಸಾಕು ಬೆಕ್ಕಿಗಿಂತ ಎತ್ತರ ಹಾಗೂ ಉದ್ದ ಇದರ ಬಾಯಿ ಮತ್ತು ಅಂಗಾಲುಗಳು ಕೆಂಪಾಗಿರುತ್ತವೆ. ಮರದ ಪೊಟರಿನಲ್ಲಿ ವಾಸಮಾಡುತ್ತದೆ. ಇದು ಕಬ್ಬು ಸಣ್ಣ ಸಣ್ಣ ಹೇಡಿ, ಕಪ್ಪೆ ಮುಂತಾದವುಗಳನ್ನು ತಿನ್ನುತ್ತವೆ.

೮.೬.೩. ಆಮೆ ಬೇಟೆ : ಇವರು ಆಮೆಯನ್ನು 'ಕುರಂಗಾಡು' ಎಂದು ಕರೆಯುತ್ತಾರೆ. ಆಮೆ ಬೇಟೆಯಾನ್ನು ಇವರು ಹಲವು ವಿಧಗಳಲ್ಲಿ ಹಿಡಿಯುತ್ತಾರೆ. ಇದನ್ನು ರೋಟಿಗಾಣ, ಚೆರವುದೇವುಟ, ಪಡವು ಶಿಕಾರಿ, ಕೋಪು ಶಿಕಾರಿ, ನೀಟಿ ಬುಗ್ಗುಲ ಶಿಕಾರಿ, ಜಾಡ ಶಿಕಾರಿ ಇಷ್ಟು ರೀತಿಯಲ್ಲಿ ಹಿಡಿಯುತ್ತಾರೆ. ಇವರ ಬಲೆಯ ಹೆಸರುಗಳೆಲ್ಲಾ ತೆಲುಗಿನಲ್ಲಿರುವುದು ವಿಶೇಷ.

೮.೬.೩.೧. ದೋಟಿಗಾಲಂ : ಉದ್ದವಾದ ಕೋಲಿಗೆ ಉದ್ದಾವಾದ ದಾರ ಅಥವಾ ಗಾಳ ಕಟ್ಟಿ ಹಸಿ ಕೊಂಬೆಗಳಿಂದ ಕಟ್ಟಿದ ತಡಿಕೆ ಅಡ್ಡ ಹಿಡಿದು ಬಾವಿಯಲ್ಲಿದ್ದ ಆಮೆ ತಪ್ಪಿಸಿಕೊಳ್ಳದಂತೆ ಸ್ಥಳದಲ್ಲಿ ಕುಳಿತು ಆಮೆ ನೀರಿನಿಂದ ಮೇಲೆ ತೇಲಿದಾಕ್ಷಣ ಹಿಂದೆಯೇ ನೀರಿನಲ್ಲಿ ಮುಳುಗಿ ಹಿಡಿಯುತ್ತಾರೆ. ಇದನ್ನು ದೋಚಿಗಾಲಂ ಎಂದು ಕರೆಯುತ್ತಾರೆ.

೮.೬.೩.೨. ಕೆರೆಯಲ್ಲಿ ಬಲೆ ಎಳೆದು ಆಮೆ ಹಿಡಿಯುವುದನ್ನು ಚಿರುವು ದೇವುಟ ಎನ್ನುತ್ತಾರೆ.

೮.೬.೩.೩. ಕೆರೆ, ಹಗರಿ ನದಿಯಲ್ಲಿ ಹೊಂಡದಲ್ಲಿನ ನೀರು ಹೊರಗೆ ಚೆಲ್ಲಿ ಒಂದು ದೊಡ್ಡ ಬಿದಿರು ಕಟ್ಟಿಗೆಯ ಮುಖಾಂತರ ಕೆಸರಿನೊಳಕ್ಕೆ ಅಥವಾ ಉಸುಕಿನಲ್ಲಿ ತಿವಿಯುತ್ತಾರೆ. ಅಕ್ಕಪಕ್ಕದಲ್ಲಿ ಜಾಗ ಬದಲಾಯಿಸುತ್ತಾ ತಿವಿಯುತ್ತಾ ಹೋಗುತ್ತಾರೆ. ಆಮೆ ಇದ್ದ ಜಾಗದಲ್ಲಿ ಕಟ್ಟಿಗೆ ಒಳಗೆ ಹೋಗುವುದಿಲ್ಲ ಗಟ್ಟಿಯಾಗಿರುತ್ತದೆ. ಅದನ್ನು ಗುರುತಿಸಿ ಎತ್ತಿಕೊಳ್ಳುತ್ತಾರೆ. ಇದು ಒಂದು ರೀತಿಯದು.

೮.೬.೩.೪. ನೀರಿನ ಝುಂಡಿನಲ್ಲಿ ಆಮೆ ಚಲಿಸಿದಾಗ ಅದರ ಸ್ಪರ್ಶದಿಂದ ಕಸ, ಕಡ್ಡಿ, ಆಪು, ಗಲುಗು ಅಲ್ಲಾಡಿದಾಗ ಆಮೆಯ ಇರುಪಿಕೆಯನ್ನು ಸೂಕ್ಷ್ಮವಾಗಿ ಗುರುತಿಸಿ ಹಿಡಿಯುವರು.

೮.೬.೩.೫. ನೀರು ಗುಳ್ಳೆ ಶಿಕಾರಿ : ನೀರನ್ನು ಕಟ್ಟಿಗೆಯಿಂದ ಬಡಿದು ಅಲ್ಲೋಲ, ಕಲ್ಲೋಲ ಮಾಡಿದಾಗ ಆಮೆ ತಳಭಾಗಕ್ಕೆ ಹೋಗಿ ಕುಳಿತು ಕೊಳ್ಳುತ್ತದೆ. ಆಗಲೇ ಅದು ಇರುವ ಕಡೆ ನೀರಿನ ಗುಡ್ಡೆಗಳು ಮೇಲಕ್ಕೆ ಬರುತ್ತಿರುತ್ತವೆ. ಅದನ್ನು ಪತ್ತೆ ಹಚ್ಚಿ ತಳಭಾಗಕ್ಕೆ ಮುಳುಗಿ ಆಮೆಯನ್ನು ಎತ್ತಿಕೊಳ್ಳುವುದು. ಇದನ್ನು 'ನೀರು' 'ಗುಳ್ಳೆ ಸಿಕಾರಿ' ಎಂದು ಕರೆಯುತ್ತಾರೆ.

೮.೬.೩.೬ ಜಾಡುಶಿಕಾರಿ : ಆಮೆಯು ಬಿಸಿಲು ಕಾಲದಲ್ಲಿ ಗಿಡಗಂಟೆಗಳ ಪಕ್ಕದಲ್ಲಿ ವಾಸವಾಗಿರುತ್ತವೆ. ಕೆರೆ, ಕಾಲುವೆ ಒಣಗಿ ಅವು ಅಡ್ಡಾಡಿದಾಗ ಅವುಗಳ ಹೆಜ್ಜೆ ಗುರುತುಗಳನ್ನು ಗುರುತಿಸಿ ಅವುಗಳನ್ನು ಹಿಡಿಯುವುದಕ್ಕೆ 'ಜಾಡು ಶಿಕಾರಿ' ಎಂದು ಕರೆಯುತ್ತಾರೆ.

೮.೬.೪. ಅಳಿಲು ಬೇಟೆ : ಅವರ ಭಾಷೆಯಲ್ಲಿ ಇದನ್ನು ತೋಡ್ಸಿಗಾಡು ಎಂದು ಕರೆಯುತ್ತಾರೆ. ಮರದ ಮೇಲೆ ವಾಸಮಾಡುವ ಬಾಚಿ ಹಲ್ಲುಳ್ಳ ಪ್ರಾಣಿ ವರ್ಗಕ್ಕೆ ಸೇರಿದ ಪೊರೆ ಬಾಲದ ಒಂದು ಸಣ್ಣ ಪ್ರಾಣಿ. ಬೆನ್ನಿನ ಮೇಲೆ ಬಂಗಾರು ವರ್ಣದ ಮೂರುಗೆರೆಗಳಿವೆ. ಇವುಗಳನ್ನು ಶ್ರೀರಾಮಚಂದ್ರನು ಕೊಟ್ಟನೆಂದು ಹೇಳುತ್ತಾರೆ. ಶ್ರೀರಾಮನು ಸಮುದ್ರಕ್ಕೆ ಸೇತುವೆ ಕಟ್ಟುವಾಗ ಮೈಗೆ ಉಸುಕನ್ನು ಅಂಟಿಸಿಕೊಂಡು ಉಸಿಕನಲ್ಲಿ ಹೊರಳಾಡಿ ಸೇತುವೆ ನಿರ್ಮಾಣಕ್ಕೆ ಸಹಾಯ ಮಾಡುತ್ತಿತ್ತಂತೆ. ಇದರ ಸೇವೆಗೆ ಮೆಚ್ಚಿ ಶ್ರೀರಾಮ ಮೈ ಸವರಿದನಂತೆ ಶ್ರೀರಾಮ. ಅದರ ಮೈ ಮೇಲೆ ಬಂಗಾರ ವರ್ಣದ ಗೆರೆ ಬಂದವಂತೆ ಎಂದು ದಂಥಕತೆ ಹೇಳುತ್ತಾರೆ. ಇದನ್ನು ಇಣಚಿ ಎಂತಲೂ ಕರೆಯುತ್ತಾರೆ.

ಈ ಪ್ರಾಣಿಯನ್ನು ಹೇಗೆ ಹಿಡಿಯುತ್ತಾರೆಂದರೆ ಇದನ್ನು ಕುದುರೆ ಬಾಲದ ಕೂದಲಿನಿಂದ ತಯಾರಿಸಿದ ಕಣ್ಣಿ, ಉರುಲು, ಉಚ್ಚಲು ಅನ್ನು ಮರದ ಬುಡಕ್ಕೆ ಕಟ್ಟಿ ಮರದಲ್ಲಿರುವ ಅಳಿಲನ್ನು ಕಲ್ಲಿನಿಂದ ಹೊಡೆದು ಇಳಿಯುವಂತೆ ಮಾಡಿ ಉರುಲಿನಲ್ಲಿ ಸಿಕ್ಕಿ ಬೀಳುವಂತೆ ಮಾಡುತ್ತಾರೆ. ಇಂತಹ ಉರುಲಿನಲ್ಲಿ ಸಿಕ್ಕ ಬೇಟೆ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಚಾಟರಿ ಬಿಲ್ಲಿನಿಂದಲೂ ಹೊಡೆದು ಉರಳಿಸುತ್ತಾರೆ. ಕೆಲವು ಸಲ ಬೋನಿನಿಂದಲೂ ಹಿಡಿಯುತ್ತಾರೆ. ಬಲೆಯ ಸಹಾಯದಿಂದಲೂ ಈ ಪ್ರಾಣಿಯನ್ನು ಹಿಡಿಯುತ್ತಾರೆ.

೮.೬.೫. ಮುಂಗುಲಿ : ಹಗಲುವೇಷಗಾರರು ಈ ಪ್ರಾಣಿಯನ್ನು ತಮ್ಮ ಭಾಷೆಯಲ್ಲಿ 'ಎಂಟುವ' ಎಂದು ಕರೆಯುತ್ತಾರೆ. ಕಬ್ಬಿಣ ತಂತಿಯಿಂದ ನೇಯ್ದ ಬೋನಿನಲ್ಲಿ ಒಳಗಡೆ, ಮೀನು ಏಡಿಯ ತುಣುಕುಗಳನ್ನು ಹಾಕಿ ಮತ್ತು ಸುತ್ತಲು ಮನುಷ್ಯರ ವಾಸನೆಯನ್ನು ಗುರುತಿಸದಂತೆ ಮೀನಿನ ನೀರನ್ನು ಚಿಮುಕಿಸಿ ವಾಸನೆಯನ್ನು ಹಿಡಿದು ಸೀದಾ ಅಲ್ಲಿಗೆ ಬರುವಂತೆ ಮಾಡುತ್ತಾರೆ. ಬೋನಿನಲ್ಲಿರುವ ಆಹಾರವನ್ನು ತಿನ್ನಲು ಹೋದಾಗ ಅದು ಮುಚ್ಚಿಕೊಳ್ಳುತ್ತದೆ. ಇದನ್ನೆ ಇನ್ನೊಂದು ರೀತಿಯಲ್ಲಿಯೂ ಬೇಟೆಯಾಡುತ್ತಾರೆ. ಹತ್ತು ಹದಿನೈದು ಸೆಂ.ಮಿ. ಉದ್ದವಿರುವ ಸಣ್ಣ ಕಟ್ಟಿಗೆಗಳನ್ನು ಬಡಿದು ಅವುಗಳಿಗೆ ಉರುಲು ಕಟ್ಟುತ್ತಾರೆ. ಮುಂಗುಸಿ ಅಡ್ಡಾಡುವ ತನ್ನ ಪೊಟರು, ತೂತು ಅಥವಾ ಗವಿಯ ಮುಂದೆ ಓಗೆ ಮಾಡುವುದರಿಂದ ಮುಂಗುಸಿ ತಿಳಿಯದಂತೆ ಅಡ್ಡಾಡುವಾಗ ಉರುಲಿನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ಇನ್ನು ಮೀಟು ಬೇಟೆ ಊದ್ರು ಬೇಟೆ, ಹಾಗೂ ಬಲೆಗಳಿಂದಲೂ ಈ ಪ್ರಾಣಿಯನ್ನು ಹಿಡಿಯುತ್ತಾರೆ.

೮.೬.೬. ಉಡದ ಬೇಟೆ : ಹಲ್ಲಿ ಆಕಾರದಲ್ಲಿರುವ ಒಂದು ದೊಡ್ಡ ಸರೀಸೃಪ ವರ್ಗಕ್ಕೆ ಸೇರಿದ ಪ್ರಾಣಿ. ಪಕ್ಷಿಗಳ ಮೊಟ್ಟೆ ಹುಳುಹುಪ್ಪಡಿ ತಿಂದು ಬದುಕುತ್ತದೆ. ಇವರು ಉಡವನ್ನು 'ತಲೆಂಗಾಡು' ಎಂದು ತಮ್ಮ ಭಾಷೆಯಲ್ಲಿ ಕರೆಯುತ್ತಾರೆ. ಇವು ಸಾಮಾನ್ಯವಾಗಿ ಹುತ್ತದಲ್ಲಿ, ಗವಿಯಲ್ಲಿ, ಬಂಡೆಯ ಸಂದುಗಳಲಿ, ದೊಡ್ಡ ದೊಡ್ಡ ಬಕ್ಕೆಗಳಲ್ಲಿ ವಾಸಮಾಡುತ್ತವೆ. ಉಡ ಕಣ್ಣಿಗೆ ಬಿದ್ದರೆ ಹಿಂಬಾಲಿಸಿ ಹಿಡಿಯುವರು. ಇಲ್ಲವೆ ನಾಯಿಗಳನ್ನು ಬಿಟ್ಟು ಹಿಡಿಸುವರು. ಇದರ ಹೆಜ್ಜೆ ನೋಡಿ ಗುರುತು ಹಿಡಿಯುತ್ತಾರೆ. ಇದು ಅಡ್ಡಾಡುವಾಗ ಇದರ ಹೊಟ್ಟೆ ನೆಲವನ್ನು ಬಳಿದುಕೊಳ್ಳುತ್ತಾ ಹೋಗುವುದು ಅದರ ಹೆಜ್ಜೆ ಜಾಡು ನೋಡಿ ಇದೇ ಸಮಯದಲ್ಲಿ ಅಡ್ಡಾಡಿದೆ ಎಂದು ಗುರುತಿಸುತ್ತಾರೆ. ಉರುಲು ಹಾಕಿಯೂ ಬಂದಿಸುತ್ತಾರೆ.

೮.೬.೬.೧ ಶಿವ್ವಯಾಟ : ಇನ್ನೊಂದು ರೀತಿಯಲ್ಲಿಯೂ ಈ ಪ್ರಾಣಿಯನ್ನು ಬೇಟೆಯಾಡುತ್ತಾರೆ. ಅದು ಹೇಗೆಂದರೆ ಒಂದು ಉದ್ದವಾದ ಕೋಲಿನ ಕೊನೆಗೆ ಉರುಲನ್ನು ಕಟ್ಟಿರುತ್ತಾರೆ. ಅವು ಇರುವ ಜಾಗಗಳನ್ನು ಗುರುತಿಸಿ ಅವುಗಳ ವಾಸಸ್ಥಾನದಿಂದ ಹೊರಗೆ ಬರುವಲ್ಲಿ ಅದನ್ನು ಇಳಿಬಿಡುತ್ತಾರೆ. ಇಲ್ಲವೆ ಮರಗಳಿಗೆ ಕಟ್ಟುತ್ತಾರೆ. ಅದು ಹೊರಗೆ ಬಂದ ತಕ್ಷಣ ತಲೆಗೆ ಉರುಲು ಹಾಕಿಕೊಳ್ಳುತ್ತದೆ. ಇದನ್ನು ಅವರು 'ಶಿವ್ವಯಾಟ' ಎಂದು ಕರೆಯುತ್ತಾರೆ.

೮.೬.೭. ಹಂದಿ (ಕಾಡು ಹಂದಿ) : ಇವರ ಭಾಷೆಯಲ್ಲಿ 'ಮೆಕ್ಕಂ' ಎಂದು ಕರೆಯುತ್ತಾರೆ. ಇದರ ಬೇಟೆಗೆ ಬೇಟಾಗಾರರ ಗುಂಪು ಶ್ವಾನಗಳ ಗುಂಪು ತುಂಬಾ ಅವಶ್ಯಕ. ರೈತನ ಬೆಳೆಯನ್ನು ಹಾಳು ಮಾಡುವ ಪ್ರಾಣಿ. ಇಂತಹ ಬೇಟೆಗೆ ರೈತರನ್ನು ಸಹ ತೊಡಗಿಸಿಕೊಳ್ಳುತ್ತಾರೆ. ಏಕೆಂದರೆ ಹೆಣ್ಣು ಹಂದಿಯಾದರೆ ಮರಿ ಹಾಕಿದ ನಂತರ ಬೇಟೆಯಾಡುವಾಗ ತುಂಬಾ ಎಚ್ಚರ ವಹಿಸಬೆಕು. ಅರೆಪೆಟ್ಟಾದರೆ ಬೇಟೆಗಾರನ ಜೀವಕ್ಕೆ ಆಪತ್ತು. ಗಂಡು ಹಂದಿಯಾದರೆ ಹುಲಿ,ಚಿರತೆಗಳು ಸಹ ಹೆದರುತ್ತವೆ. ಇದಕ್ಕೆ ಕೋರೆಹಲ್ಲುಗಳು ಬಂದಿರುತ್ತವೆ. ಅಪಾಯ ಬಂದಾಗ ಈ ಕೋರೆ ಹಲ್ಲುಗಳಿಂದ ಶತ್ರುಗಳನ್ನು ತಿವಿದು ಬಿಡುತ್ತದೆ. ಈ ಪ್ರಾಣಿ ಮನುಷ್ಯನ ಮೇಲೆ ಬಂದರೆ ನೇರವಾಗಿ ಓಡಬಾರದಂತೆ ಹಾವು ಹೋದಂತೆ ಹೋಗಬೇಕು ಇಲ್ಲವೆ ಮರ ಹತ್ತಬೇಕೆಂದು ಹೇಳುತ್ತಾರೆ.



ಬೇಟೆಗಾಗಿ ಬಲೆ ಒಡ್ಡಿರುವುದು

ಈ ಹಂದಿಗಳು ತಂಗುವ ತಾಣವರಿತು, ಅವು ಹೋಗುವ, ಬರುವ ದಾರಿಯನ್ನು ಗುರುತಿಸಿ ನಾಲ್ಕಾರು ಬಲೆಗಳನ್ನು ಒಂದಕ್ಕೊಂದು ಜೋಡಿಸಿ ಕಟ್ಟಿಗೆಯ ಸಹಾಯದಿಂದ ಕಟ್ಟುತ್ತಾರೆ. ಇನ್ನೊಂದು ಕಡೆಯಿಂದ ಬೇಟೆ ನಾಯಿಗಳನ್ನು ಬಿಟ್ಟುಕೊಂಡ ದೊಣ್ಣೆಯಿಂದ ಪೊಟರೆ, ಗಿಡಗಳನ್ನು ಬಡಿಯುತ್ತಾ ಒರೇ

ಪೆಟ್ಟುಕೋರಾ ವಚ್ಚಾ ಎಂದು ಹೇಳುತ್ತಾ, ಅರಚುತ್ತಾ ನಾಯಿಗಳಿಗೆ ಹುರಿದುಂಬಿಸುತ್ತಾ ಆ ಮಲಗಿರುವ ಬೇಟೆಯ ಪ್ರಾಣಿಗಳಿಗೆ ಗಾಬರಿ ಬೀರುವಂತೆ ಮಾಡುತ್ತಾರೆ. ಅವುಗಳಿಗೆ ಗಾಬರಿ ಬಂದು ಎತ್ತ ಹೋಗಬೇಕೆಂದು ದಿಕ್ಕು ತೋಚದೆ ಬಲೆಯಲ್ಲಿ ಬಂದು ಬಿದ್ದುಬಿಡುತ್ತವೆ. ಪ್ರಾಣಿಯು ಬಿದ್ದ ತಕ್ಷಣ ನಿಲ್ಲಿಸಿದ ಬಲೆಯ ಕೋಲುಗಳು ಬೀಳುತ್ತವೆ. ಬಲೆ ಪ್ರಾಣಿಯನ್ನು ಸುತ್ತುತ್ತದೆ. ರಕ್ಷಣೆಯಲ್ಲಿದ್ದ ಬೇಟೆಗಾರರು ತಕ್ಷಣ, ದೊಣ್ಣೆ, ಬರ್ಜಿ, ಗೊಂಡರ ಕೊಡಲಿ, ಅಂಚಿನ ಬಡಿಗೆಯಿಂದ ಹೊಡೆದು ಕೊಲ್ಲುತ್ತಾರೆ. ಈ ಹಂದಿಗಳು ಹೆಚ್ಚು ಗುಂಪು ಗುಂಪಾಗಿ ವಾಸಿಸುವುದು ಹೆಚ್ಚು ಒಂದೊಂದು ಸಲ ಎರಡು ಮೂರು ಬೇಟೆ ಒಂದೇ ಸಲ ಬಿದ್ದ ಸಂದರ್ಭಗಳೂ ಇವೆ ಎಂದು ಹೇಳುತ್ತಾರೆ. ಇಂತಹ ಬೇಟೆಯಲ್ಲಿ ಕೆಲವು ಸಲ ಮೊಲ, ಮುಂಗಲಿ, ನರಿ, ಕೂಡ ಬಂದು ಬೀಳುತ್ತವೆ.

೮.೬.೮. ಮುಳ್ಳುಹಂದಿ : ಏದು ಎಂದು ಕರೆಯುತ್ತಾರೆ. ಇದರ ಮೈತುಂಬಾ ಮುಳ್ಳುಗಳಿರುತ್ತವೆ. ಇದರ ಒಂದೊಂದು ಮುಳ್ಳು ಒಂದು ಬಾಕುವಿಗೆ ಸಮಾನ. ಅದು ಬಿಟ್ಟ ಮುಳ್ಳು ಕಾಲಿನ ಮೀನಗಂಡಕ್ಕೆ ಬಡಿಯಿತೆಂದರೆ ಕಾಲಲ್ಲಿ ತೂರಿ ಹೋಗುವಷ್ಟು ಶಕ್ತಿ ಆ ಮುಳ್ಳಿಗೆ ಇರುತ್ತದೆ. ಇದರಲ್ಲಿ ಕಪ್ಪು, ಹಳದಿ, ಮುಳ್ಳುಹಂದಿಗಳಿವೆ. ಇವು ಸಾಮಾನ್ಯವಾಗಿ ದಟ್ಟವಾದ ಗವಿಯಲ್ಲಿ ವಾಸಮಾಡುತ್ತವೆ.

ಇವುಗಳನ್ನು ಬೆಂಕಿ ಹಾಕಿ ಬೇಟೆ ಮಾಡುತ್ತಾರೆ. ಇದನ್ನು ಬೆಂಕಿ ಬೇಟೆ ಎಂದು ಕರೆಯುತ್ತಾರೆ. ಮೊದಲ ಬಿಲಗಳನ್ನೆಲ್ಲಾ ಗುರುತಿಸಿ ಎಲ್ಲವನ್ನು ಮುಚ್ಚಿ ಒಂದು ಗುಹೆಗೆ ಕಸ, ಸೌದೆ, ಕಡ್ಡಿ ಹಾಕಿ ಗುಹೆಯ ಒಳಗೆ ಹೊಗೆ ಹೋಗುವಂತೆ ಮಾಡುತ್ತಾರೆ. ಹೊಗೆಯ ಘಾಟಿಗೆ ಹೊರಬಂದ ಹಂದಿಗಳನ್ನು ತಲೆಯ ಮೇಲೆ ಒಂದು ಬಿಲ್ಲೆಯಾಕಾರವಿರುತ್ತದೆ. ಆ ಜಾಗಕ್ಕೆ ನೋಡಿ ಹೊಡೆದರೆ ಒಂದೇ ಏಟಿಗೆ ಸಾಯುತ್ತದೆ. ಅದು ಹೊರಗೆ ಬಂದಾಗ ಏನಾದರೂ ಹಿಂದೆ ಹೋದರೆ ಮುಗಿಯಿತು. ತನ್ನಮೈ ಜಾಡಿಸಿ ಮುಳ್ಳು ಬಿಟ್ಟುಬಿಡುತ್ತದೆ. ಅದಕ್ಕಾಗಿ ಏನಿದ್ದರೂ ಮುಂದಿನಿಂದಲೇ ಉಷಾರಾಗಿ ಹೊಡೆಯಬೇಕು.

೮.೬.೯. ಪುನಗು ಬೆಕ್ಕು : ಇವರು ತಮ್ಮ ಭಾಷೆಯಲ್ಲಿ 'ಪುನುಗಾಶಿಗಂ' ಎಂದು ಕರೆಯುತ್ತಾರೆ. ಒಂದು ಬಗೆಯ ಸುಗಂಧ ದ್ರವ್ಯ ಸೂಸುವ ಕಾಡು ಬೆಕ್ಕು, ಇದನ್ನು ಕಸ್ತೂರಿ ಮೃಗವೆಂತಲೂ ಕರೆಯುತ್ತಾರೆ. ಪುನಗು ಬೆಕ್ಕಿನ ಕತ್ತರಿಸಿ, ಒಣಗಿಸಿದ ಯೋನಿಯ ಭಾಗವನ್ನು ಔಷಧಿಗೆ ಬಳಸುತ್ತಾರೆ. ಇದು ಹೆಚ್ಚು ಮರದ ಪೊಟರೆ, ಮುಳ್ಳು ಕಂಠಿನ ಪೊದೆಯಲ್ಲಿ ಹೆಚ್ಚು ವಾಸಿಸುತ್ತದೆ. ಇದಕ್ಕೆ ಬಲೆ ಹಾಕಿ ಗಾಬರಿ ಎಬ್ಬಿಸಿ ಬಲೆಯಲ್ಲಿ ಬೀಳುವಂತೆ ಮಾಡುತ್ತಾರೆ. ಇಲ್ಲವೆ ನಾಯಿಯನ್ನು ಬಿಟ್ಟು ಹಿಡಿಯಿಸುತ್ತಾರೆ.

೮.೬.೧೦. ಏಡಿ ಬೇಟೆ : ಇದನ್ನು ಅವರು 'ಕರಗೋಟಿಗಾಡು' ಎಂದು ಕರೆಯುತ್ತಾರೆ. ಈ ಏಡಿಯಲ್ಲಿ ಕಲ್ಲೇಡಿ ಹಾವೇಡಿ ಎಂದು ಹಲವಾರು ಜಾತಿಯ ಏಡಿಗಳಿವೆ. ಕಲ್ಲೇಡಿ ದೊಡ್ಡ ದೊಡ್ಡ ನದಿಸಾಗರಗಳಲ್ಲಿ ವಾಸ ಮಾಡುತ್ತವೆ. ಇವು ಕಲ್ಲು ಸಂದಿಗಳಲ್ಲಿ ಹೆಚ್ಚಾಗಿ ವಾಸಿಸುತ್ತವೆ. ಈ ಏಡಿ ಒಂದು ಬಗೆ ಕಲ್ಲಿನಂತೆ ಗಟ್ಟಿಯಾದ ಒಡುಗಳನ್ನು ಹೊಂದಿರುವ ದೊಡ್ಡ ಏಡಿ. ಇವನ್ನು ಕಪ್ಪೆಗೋಲಿನಿಂದ ಹಿಡಿಯುತ್ತಾರೆ. ಒಂದು ಕಟ್ಟಿಗೆಗೆ ಮುಂದೆ ಒಂದು ದಾರಕ್ಕೆ ಗಳಕಟ್ಟಿ, ಅದಕ್ಕೆ ಕಪ್ಪೆಯನ್ನು ಸುಚ್ಚಿರುತ್ತಾರೆ. ಅದನ್ನು

ಏಡಿ ಇರುವ ಜಾಗಕ್ಕೆ ಹಾಕಿದರೆ ಕಪ್ಪೆಯನ್ನು ಹಿಡಿದು ತಿನ್ನಲು ಹೋಗಿ ಗಳಕ್ಕೆ ಸಿಕ್ಕಿಕೊಳ್ಳುತ್ತದೆ. ಆಗ ಆ ದಾರವನ್ನು ಮೇಲೆ ಎಳೆದುಕೊಂಡು ಬಿಡಿಸಿಕೊಳ್ಳುವುದು.

ಇನ್ನು ಚಿಕ್ಕಿ ಚಿಕ್ಕ ಏಡಿಗಳು ಮಳೆಗಾಲದಲ್ಲಿ ಗದ್ದೆಗಳಲ್ಲಿ ಹೇರಳವಾಗಿ ಸಿಗುತ್ತವೆ. ಇದರ ಶರೀರ ಮೃದುವಾಗಿರುತ್ತದೆ. ಇವುಗಳನ್ನು ಕೈಯಿಂದಲೇ ಹಿಡಿಯುತ್ತಾರೆ. ಇವುಗಳನ್ನು ಹಿಡಿದು ಹಿಂಡಿದರೆ ಹಾಲಿನಂತಹ ರಸ ಬರುತ್ತದೆ. ಈ ಏಡಿಗಳಿಂದ ಚಟ್ನಿ, ಕರಿದ ಅಡುಗೆ ಏಡಿ ಖಾದ್ಯಗಳನ್ನು ಮಾಡುತ್ತಾರೆ.

೮.೬.೧೧ ನರಿ ಬೇಟೆ : 'ನಡಿಸಿಗಾಡು' ಎಂದು ಕರೆಯುತ್ತಾರೆ. ಇವುಗಳ ಬೇಟೆಗೆ ಹತ್ತು ಹದಿನೈದು ಮಂದಿ ಎಂಟರಿಂದ ಹತ್ತು ಬೇಟೆನಾಯಿಗಳು ಬೇಕಾಗುತ್ತವೆ. ನರಿ ಬಹಳ ಉಪಾಯದ ಪ್ರಾಣಿ ಇದನ್ನು ಹಿಡಿಯಬೇಕೆಂದರೆ ಅದಕ್ಕಿಂತಲೂ ಒಂದು ಬುದ್ಧಿ ಜಾಸ್ತಿ ಇರಬೇಕು. ಬೇಟೆಗಾರನಿಗೆ ಈ ಪ್ರಾಣಿಗಳು ಅಡ್ಡಾಡಿದ ಜಾಗಗಳನ್ನು ಹೆಜ್ಜೆಗಳ ಸಹಾಯದಿಂದ ಗುರುತಿಸಿ ಅವು ಎಲ್ಲಿ ಹೆಚ್ಚಾಗಿ ಅಡಾಡುತ್ತವೆಯೇ ಆದಾರಿಯಲ್ಲಿ ಬಲೆ ಹಾಕಿ ಆಮೇಲೆ ಪೊದೆಗಳಲ್ಲಿ ಮಲಗಿದ ನರಿಗಳನ್ನು ನಾಯಿಗಳ ಸಹಾಯದಿಂದ ಎಬ್ಬಿಸಬೇಕು. ಇಷ್ಟೆಲ್ಲಾ 'ಎದುರುಗಾಳಿ'ಯಲ್ಲಿಯೇ ನಡೆಯಬೇಕು. ಗಾಳಿಯ ಮಾರ್ಗದಲ್ಲಿ ಹೋದರೆ ವಾಸನೆಯನ್ನು ಗುರುತಿಸಿ ಓಡಿಬಿಡುತ್ತವೆ. ಜಾಗೃತವಾಗಿ ಅವುಗಳನ್ನು ಬಲೆಗಳ ಕಡೆಗ ಹೋಗುವಂತೆ ಅಟ್ಟಿಸಿಕೊಂಡು ಬಂದರೆ ಬಲೆಯಲ್ಲಿ ಬಂದು ಬೀಳುತ್ತವೆ. ರಕ್ಷಣೆಯಲ್ಲಿದ್ದ ಬೇಟೆಗಾರರು ತಕ್ಷಣ ಹೊಡೆದುಕೊಲ್ಲುತ್ತಾರೆ. ಇಲ್ಲವೇ ಅವು ಅಡ್ಡಾಡುವ ಜಾಗದಲ್ಲಿ ಕತ್ತರಿಯನ್ನು ಹಾಕುತ್ತಾರೆ.

೮.೬.೧೨ ಮೊಸಳೆ ಬೇಟೆ : ಪಿಠಕ ಮೊಸಳೆ, ಬಾರಪ ಮೊಸಳೆ, ಪಂಕ ಮೊಸಳೆ ಎಂದು ಮೂರು ಜಾತಿಯಲ್ಲಿರುತ್ತವೆ. ಪೀಠಕ ಮೊಸಳೆ ಪಂಕಮೊಸಳೆ ಅಕಸ್ಮಾತ್ತಾಗಿ ಮನುಷ್ಯ ಸಿಕ್ಕರೆ ನಾಯಿಕಚ್ಚಿದಂತೆ ಕಚ್ಚುತ್ತದೆ. ಆದರೆ ಬಾರಪ ಮೊಸುಳೆ ಮನುಷ್ಯರನ್ನು ತಿಂದುಬಿಡುತ್ತದೆ. ಇವು ದೊಡ್ಡ ದೊಡ್ಡ ನೀರಿನ "ಮೊಡಗು"[೧೦]ಗಳಲ್ಲಿ ವಾಸಮಾಡುತ್ತವೆ. ಇಂತಹ ನೀರಿನ ಮೊಡುಗುಗಳಲ್ಲಿ ಬಲೆಯನ್ನು ಎಸೆಯುತ್ತಾರೆ. ಬಲೆಯಲ್ಲಿ ಕಬ್ಬಿಣದ ಉರುಳು ಇರುತ್ತವೆ. ಆಗಲೇ ಅದು ಉರುಳು ಬಿದ್ದಾಗ ಬಲೆ ಅಲುಗಾಡುತ್ತದೆ. ಆಗ ಬಲೆಯನ್ನು ನಿಧಾನವಾಗಿ ಹೊರಗಡೆ ಎಳೆಯುತ್ತಾ ಸುತ್ತಿಗೆಯಿಂದ ತಲೆಯ ಮೇಲೆ ಒಂದು ಪಟ್ಟಿಯಾಕರವಿರುತ್ತದೆ. ಸೀದಾ ಅಲ್ಲಿಯೇ ಹೊಡೆಯಬೇಕು ಮತ್ತೆ ಸ್ವಲ್ಪ ಹೊತ್ತು ಸುಧಾರಿಸಿಕೊಂಡು ನಿಧಾನವಾಗಿ ಬಲೆಯನ್ನು ಇನ್ನು ಸ್ವಲ್ಪ ಮುಂದಕ್ಕೆ ಎಳೆದುಕೊಂಡು ಮತ್ತೆ ಸುತ್ತಿಗೆಯಿಂದ ತಲೆಯ ಮೇಲೆ ಹೊಡೆಯಬೇಕು. ಇಲ್ಲವಾದರೆ ಮನುಷ್ಯ, ಬಲೆ ಎರಡನ್ನು ಎಳೆದುಕೊಂಡು ಹೋಗಿಬಿಡುತ್ತದೆ. ಹೀಗೆ ಇಂತಹ ಕಷ್ಟಕರವಾದ ಬೇಟೆ ಹೆಚ್ಚಾಗಿ ಆಡುವುದಿಲ್ಲ. ಇಂದು ಸರಕಾರದ ನಿರ್ಬಂಧವಿದೆ ಎಂದು ಹೇಳುತ್ತಾರೆ.

೮.೬.೧೩. ಮೊಲದ ಬೇಟೆ : ಸೀಮಿ ಕುಂದೇಳ್ಳು, ಬುರ್ರ ಕುಂದೇಳ್ಳು ಎಂದು ಕರೆಯುತ್ತಾರೆ. ಈ ಪ್ರಾಣಿಯ ಬೇಟೆಯಲ್ಲಿ ಸುಮಾರು ೮ ೧೦ ಜನರಿದ್ದು ಬಲೆ ಮತ್ತು ನಾಯಿ ಬಳಸಿಕೊಂಡು ಹಿಡಿಯುತ್ತಾರೆ. ಇವು ಹೆಚ್ಚು ಹೊಲ ಹಳ್ಳಗಳ ದಡದ ಬದುವಿನಲ್ಲಿ ಹೆಚ್ಚು ವಾಸವಾಗಿರುತ್ತವೆ. ಈ ಬೇಟೆಗೆ ಬಳಸುವ

ಬಲೆ ೪.೫ ಮೂರು ಉದ್ದ ಎರಡುವರೆ ಮೊಳ ಅಗಲವಿರುತ್ತದೆ. ಅದನ್ನು ನೂಲಿನ ದಾರದಿಂದ ಇಲ್ಲವೆ ನುಣುಪಾದ ನಾರಿನಿಂದ ಮಾಡಿರುತ್ತಾರೆ. ಮೊದಲು ಮೊಲಗಳು ಇಲ್ಲಿ ಇವೆಯೇ ಇಲ್ಲವೆಂದು ಹೆಜ್ಜೆಯ ಮತ್ತು ಧ್ವನಿಯ ಮುಖಾಂತರ ಗುರುತಿಸಿ ಅವು ಅಡ್ಡಾಡುವ ದಾರಿಗೆ ಆ ಕಡೆ ಈ ಕಡೆ ಒಂದು ಚಡಿ ಬಡಿದು ಅದಕ್ಕೆ ಬಲೆಯನ್ನು ಕಟ್ಟಿ ಮಧ್ಯೆ ಬಲೆಯು ಸೆಟೆದು ನಿಲ್ಲುವಂತೆ ಎರಡು ನಿಲುವು ಕಟ್ಟಿಗೆಗಳನ್ನು ಸುಮ್ಮನೆ ನಿಲ್ಲಿಸುತ್ತಾರೆ. ಬಲೆಯ ಹಿಂದೆ ಕೆಲವು ಬೇಟಾಗರರು ಕೈಯಲ್ಲಿ ದೊಣ್ಣೆ ಹಿಡಿದು ಕಾದು ಕುಳಿತಿರುತ್ತಾರೆ. ಕೆಲವು ಬೇಟೆಗಾರರು ನಾಯಿಗಳನ್ನು ಒಡೆದುಕೊಂಡು ಪೆಟ್ಟುಕೋ ರಾ ಪೆಟ್ಟು ಕೋ ರಾ ವಚ್ಚಾ... ವಚ್ಚಾ ಎಂದು ಹುರಿದುಂಬಿಸಿದಂತೆಲ್ಲಾ ನಾಯಿ ಪೊದೆಗಳನ್ನೆಲ್ಲಾ ಮೂಸಿ ನೋಡುತ್ತಾ ಹುಡುಕಾಡುತ್ತಾ ಮಲಗಿದ ಮೊಲಗಳನ್ನು ಗಾಬರಿ ಎಬ್ಬಿಸಿ ಬಲೆಯ ಕಡೆಗೆ ಓಡಿಸುತ್ತವೆ. ಬೇಟೆಗಾರರು ಸಹ ಪೊದೆಗಳಲ್ಲಿ ದೊಣ್ಣೆಯಿಂದ ಹೊಡೆದು ಗಾಬರಿಗೊಳಿಸಿ ಬಲೆಯ ಕಡೆಗೆ ನುಗ್ಗುವಂತೆ ಮಾಡಿ ಬಲೆಯಲ್ಲಿ ಬೀಳಿಸುತ್ತಾರೆ. ಸುತ್ತ ಮುತ್ತ ಇದ್ದವರು ಹಿಡಿದು ಕಾಲುಕಟ್ಟಿ ಒಯ್ಯುತ್ತಾರೆ. ತಪ್ಪಿಸಿಕೊಂಡು ಹೋದರೆ ಬಡಿಗೆಯಿಂದ ಬಡೆದು ಸಾಯಿಸುತ್ತಾರೆ. ಇಲ್ಲವೆ ನಾಯಿಯನ್ನು ಚೂ... ಬಿಟ್ಟು ಹಿಡಿಯಿಸುತ್ತಾರೆ.

ಒಬ್ಬರು ಇಬ್ಬರು ಸಹ ಈ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. ಇವು ಹೆಚ್ಚು ರಾತ್ರಿಯೆಲ್ಲಾ ಮೇವಾಡಿ ಹಗಲೆಲ್ಲಾ ನಿದ್ದೆ ಮಾಡುತ್ತಾ ಕುಳಿತಿರುತ್ತವೆ. ಹಗಲಿನಲ್ಲಿ ಅಲೆದಾಡುವುದಿಲ್ಲ. ಹೀಗೆ ನಿದ್ದೆ ಮಾಡುತ್ತಾ ಇರಬೇಕಾದರೆ ಹಿಂದಿನಿಂದ ಬಂದು ಬಡಿಗೆಯಿಂದ ತಲೆಯ ಮೇಲೆ ಹೊಡೆದು ಸಾಯಿಸುತ್ತಾರೆ. ಮುಂಗಾರಿನ ಮಳೆಯಲ್ಲಿ ಯಾರೂ ಓಡಾಡದ ಬೆಳಗಿನ ಜಾವದಲ್ಲಿ ಹೋಗಿ ಮೊಲಗಳು ಓಡಾಡಿದ ಹೆಜ್ಜೆಗಳು ಹಸಿ ನೆಲದಲ್ಲಿ ಮೂಡಿರುತ್ತವೆ. ಅವುಗಳನ್ನು ಗುರುತಿಸಿ ತೂಕಡಿಸುವ ಅವುಗಳನ್ನು ಹೊಡೆದು ಸಾಯಿಸಿ ತರುತ್ತಾರೆ. ಇನ್ನು ಬ್ಯಾಟರಿ ಬೇಟೆ ಎಂದು ಇತ್ತೀಚಿನಲ್ಲಿ ಅದನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

೮.೬.೧೪. ಚೀರು ನಾಯಿ : ಸೀಳುನಾಯಿ ಎಂದು ಕರೆಯಿಸಿಕೊಳ್ಳುವ ಒಂದು ಜಾತಿಯ ಕಾಡುನಾಯಿ. ಸದಾಕಾಲ ಗುಂಪಿನಲ್ಲಿರುತ್ತದೆ. ಬೇಟೆಯಾಡಿ ಪ್ರಾಣಿಯನ್ನು ಕೊಲ್ಲುತ್ತದೆ. ಜೀವಂತವಿರುವಾಗಲೇ ಪ್ರಾಣಿಗಳ ಹೊಟ್ಟೆಯನ್ನು ಬಗೆದು ಕರುಳನ್ನು ಎಳೆದು ತಿನ್ನುತ್ತದೆ. ಇವು ಸಾಮಾನ್ಯವಾಗಿ ಜಿಂಕೆ, ಕುರಿ, ಕಾಡುಕೋಣ, ಎಮ್ಮೆ ಕಾಡು ದನ ಇತ್ಯಾದಿಗಳನ್ನು ಬೇಟೆಯಾಡಿ ತಿನ್ನುತ್ತವೆ. ಇಲ್ಲದಿದ್ದರೆ ನೀರಿನಲ್ಲಿರುವ ಮೀನುಗಳನ್ನು ತಿನ್ನುತ್ತದೆ. ಇದು ಹೆಚ್ಚಾಗಿ ನೀರಿನ ಪಕ್ಕದ ಗುಹೆಗಳಲ್ಲಿ ವಾಸಮಾಡುತ್ತದೆ. ಇದರ ಒಂದು ದೌರ್ಬಲ್ಯ ಅಂದರೆ ಒಂದು ಸಲ ಎಲ್ಲಿ ಮಲ ವಿಸರ್ಜನೆ ಮಾಡಿರುತ್ತದೆ. ಮತ್ತೆ ಅದೇ ಜಾಗದಲ್ಲಿ ಬಂದು ಮಲ ವಿಸರ್ಜನೆ ಮಾಡಿ ಅದರಲ್ಲಿ ಒರಳಾಡಿ ಹೋಗಿ ನೀರಿನಲ್ಲಿ ಬೀಳುತ್ತದೆ. ಬೇಟೆಗಾರರಾದ ಇವರು ಈ ಪ್ರಾಣಿ ಕಕ್ಕಸ್ಸು ಮಾಡಿದ ಪ್ರದೇಶವನ್ನು ಗುರುತಿಸಿ ಅದರ ಬರುವಿಕೆಯನ್ನ ಕಾಯ್ದುಕುಳಿತಿರುತ್ತಾರೆ. ಬಂದ ತಕ್ಷಣ ನಾಯಿಗಳಿಂದ ಆಕ್ರಮಿಸಿ ಬಡಿಗೆಗಳಿಂದ ತಲೆಗೆ ಹೊಡೆದು ಸಾಯಿಸುತ್ತಾರೆಂದು ಹೇಳುತ್ತಾರೆ. ಇದರ ಚರ್ಮಕ್ಕೆ ಬಹಳ ಬೆಲೆಯಿದೆ. ಇಷ್ಟು ದಿನ ನಮಗೆ ಗೊತ್ತಿದ್ದಿಲ್ಲ ಸ್ವಾಮಿ. ಈಗ ಹತ್ತು ವರ್ಷಗಳ ಹಿಂದೆ ತಿಳಿಯಿತು. ಈಗ ಈ ಪ್ರಾಣಿಗಳ ವಾಸ ಇಲ್ಲವಾಗಿದೆ. ಇದು ಕಪ್ಪುಬಾಲ ಹಾಗೂ ಕೆಂಪು ಮೈಬಣ್ಣ ಹೊಂದಿರುತ್ತದೆ ಎಂದು ಹೇಳುತ್ತಾರೆ.

೮.೬.೧೫. ಮೀನು ಬೇಟೆ : ಇವರ ಭಾಷೆಯಲ್ಲಿ ‘ಕಾಚಾಲು’ ಎಂದು ಕರೆಯುತ್ತಾರೆ. ಇವುಗಳನ್ನು ಹಿಡಿಯಲು ಎರಡು ಮೂರು ರೀತಿಯ ಬಲೆಗಳನ್ನು ಬಳಸುತ್ತಾರೆ. ನೀರಿನ ಆಳ, ಹರಿಯುವ ವೇಗ, ಮೀನಿನ ಚಲನವಲನಗಳನ್ನು ಗಮನದಲ್ಲಿರಿಸಿಕೊಂಡು ಬಲೆಗಳನ್ನು ಸಿದ್ಧಪಡಿಸಿಕೊಂಡಿರುತ್ತಾರೆ.

೮.೬.೧೫.೧ ಬೀಸು ಬಲೆ : ಈ ಬಲೆಯಿಂದ ನಿಂತ ನೀರಿನ ಕೊಳ, ಹೊಂಡ, ಕೆರೆಗಳಲ್ಲಿ ಈ ಬಲೆಯಿಂದ ಮೀನಿನ ಬೇಟೆಯಾಡುವರು. ಇದಕ್ಕೆ ಒಬ್ಬ ಬೇಟೆಗಾರನೇ ಸಾಕು. ನೀರಿನ ದಡದಲ್ಲಿ ನಿಂತು ಮೀನಿನ ಜಾಡನ್ನು ಗುರುತಿಸಿ ಬಲೆ ಬೀಸಿ, ಸೆಳೆದು ಮೀನು ಹಿಡಿಯುವರು. ಬೀಸಿದಾಗ ಅಗಲವಾಗಿ ಹರಡಿ ಎಳೆಯುವಾಗ ಕುಗ್ಗಿ ತನ್ನ ಮಡಿಲಲ್ಲಿ ಸಿಕ್ಕ ಮೀನುಗಳನ್ನು ತರುತ್ತದೆ. ಇದು ಬೀಸು ಬಲೆಯ ತಂತ್ರ.

೮.೬.೧೫.೨. ಮೂಲಿಬಲಿ : ಈ ಬಲೆಗೆ ಇಬ್ಬರು ಮೂವರು ಬೇಟೆಗಾರರು ಬೇಕಾಗುತ್ತದೆ. ಇದನ್ನು ನೀರು ಹರಿಯುವ ಪ್ರದೇಶದಲ್ಲಿ ಬಳಸುತ್ತಾರೆ. ಸುತ್ತಲೂ ಹಗ್ಗದ ದಾರದಿಂದ ಕೂಡಿರುತ್ತದೆ. ಬಲೆಯ ಬಾಯಿ ಅಗಲವಾಗಿದ್ದು ಕೊನೆಯಲ್ಲಿ ಚೂಪಾಗಿ ಮೂಲಿಯಿಂದ ಕೂಡಿರುತ್ತದೆ. ಇದನ್ನು ಹರಿಯುವ ನೀರಿಗೆ ಎದುರಾಗಿ ಇಬ್ಬರು ಬಲೆಯ ಬಾಯಿಯನ್ನು ಅಗಲಿಸಿ ಹಿಡಿದಿರುವಾಗ ಎದುರಿನಲ್ಲಿ ಇನ್ನೊಬ್ಬ ವ್ಯಕ್ತಿ ಮೀನುಗಳನ್ನು ಓಡಿಸಿಕೊಂಡು ಬಂದು ಬಲೆಯಲ್ಲಿ ಅಟ್ಟಿಸುತ್ತಾನೆ. ಆಮೇಲೆ ದಡಕ್ಕೆ ಎಳೆದು ತಂದು ಮೀನುಗಳನ್ನು ಬಿಡಿಸಿಕೊಳ್ಳುವರು.

೮.೬.೧೬. ಜಿಂಕೆ ಬೇಟೆ : ಜಿಂಕೆ ಮತ್ತು ಸಾರಂಗ ಇವು ಅಷ್ಟು ಸುಲಭವಾಗಿ ಬಲೆಗೆ ಬೀಳುವುದಿಲ್ಲ. ತೀರಾ ಸೂಕ್ಷ್ಮವಾದ ಪ್ರಾಣಿ ಅವು ಮೇಯುತ್ತಿರುವ ಸ್ಥಳದಿಂದ ದೂರಕ್ಕೆ ಉರುಲುಗಳನ್ನು ಜೋಡಿಸಿರುತ್ತಾರೆ. ಜಿಂಕೆಗಳು ಮನುಷ್ಯನ ವಾಸನೆಯನ್ನು ಹಿಡಿಯುತ್ತವೆ. ಆದ್ದರಿಂದ ಅವು ಮೇಯುವಾಗ ಗಾಳಿಯ ದಿಕ್ಕನ್ನು ಅರಿತು ಜಿಂಕೆಗಳ ಮೇಲಿಂದ ಗಾಳಿ ಬೀಸುವ ದಿಕ್ಕಿಗೆ ಇದಿರಾಗಿ ಈ ಉಳ್ಳಗಳನ್ನು ಜೋಡಿಸಿ ಅನಂತರ ಅವುಗಳಿಗೆ ಕಾಣದಂತೆ ದೂರದಿಂದ ಜಿಂಕೆಯ ಮೇಲ್ಭಾಗಕ್ಕೆ ಬಂದು ಸುಳಿದಾಡಿದರೆ ಗಾಳಿಯಲ್ಲಿ ವಾಸನೆ ಅರಿತು ಮನುಷ್ಯನ ಸುಳಿವನ್ನು ನೋಡಿ ಓಡಲು ಆರಂಭಿಸುತ್ತವೆ. ಈ ಬೇಟೆಗಾರರು ಹಲವಾರು ಜನ ಹೋಗಿ ಅಲ್ಲಲ್ಲಿ ನಿಂತು ಕಾಣಿಸಿಕೊಂಡು ಜಿಂಕೆಗಳು ಕಣ್ಣಿಗಳು ಒಡ್ಡಿರುವಲ್ಲಿಯೇ ಹೋಗುವಂತೆ ನೋಡಿಕೊಳ್ಳುತ್ತಾರೆ. ಅವು ಓಡುವಾಗ ಅಲ್ಲಿ ಸಿಕ್ಕಿಸಿರುವ ಕಣ್ಣಿ ಅಥವಾ ಉಳ್ಳದಲ್ಲಿ ಕಾಲು ಸಿಕ್ಕಿಕೊಂಡು ಬೀಳುತ್ತವೆ.

೮.೬.೧೭. ಇಲಿ ಬೇಟೆ : ಇದನ್ನು ಅವರ ಭಾಷೆಯಲ್ಲಿ ‘ಉಗ್ನಾಸಿ ಗಾಡು’ ಎಂದು ಕರೆಯುತ್ತಾರೆ.

೮.೬.೧೭.೧. ತುವ್ವಿ ಪೆಟ್ಟಟಂ : ಇಲಿಗಳು ಇರುವ ದೊಡ್ಡ ದೊಡ್ಡ “ಪೆಂಟ”ಗಳನ್ನು ಗುರುತಿಸುತ್ತಾರೆ. ಈ ದೊಡ್ಡ ದೋರಿನ ಸುತ್ತಾ ಅಲ್ಲಲ್ಲಿ ಚಿಕ್ಕ ಚಿಕ್ಕ ಬಿಲಗಳು ಇರುತ್ತವೆ. ಒಂದು ಗಡಿಗೆಯನ್ನು ತೆಗೆದುಕೊಂಡು ಅದಕ್ಕೆ ತಳದಲ್ಲಿ ಒಂದು ಸಣ್ಣ ರಂಧ್ರ ಮಾಡಿ, ಅದರಲ್ಲಿ ಒಣಗಿದ ಎಲೆ ಕಸಕಡ್ಡಿ, ಒತ್ತೊತ್ತಿ ತುಂಬಿ, ಒಂದು ದೊಡ್ಡ ಪೆಂಟ ಬಿಟ್ಟು ಇನ್ನುಳಿದವೆಲ್ಲವನ್ನು ಮುಚ್ಚಿ, ದೊಡ್ಡ ಪೆಂಟಕ್ಕೆ

ಗಡಿಗೆಗೆ ಬೆಂಕಿ ಹಚ್ಚಿ ಅದರ ತಳಭಾಗವನ್ನು ಅದರ ಬಾಯಿಗೆ ಹಚ್ಚಿ ದಟ್ಟವಾದ ಹೊಗೆ ಬಿಲದೊಳಕ್ಕೆ ಹೋಗುವಂತೆ ಮಾಡುತ್ತಾರೆ. ಇಲಿಗಳು ಹೊಗೆಯಿಂದ ಉಸಿರುಕಟ್ಟಿ ಸತ್ತು ಹೋಗುತ್ತವೆ. ನಂತರ ಬಿಲವನ್ನು ಅಗೆದು ಸತ್ತಿರುವ ಇಲಿಗಳು ತೆಗೆಯುತ್ತಾರೆ. ಕೆಲವು ಸಲ ಹೊಗೆಯನ್ನು ತಾಳಲಾರದೆ ಹೊರ ನುಗ್ಗಿದ ಇಲಿಗಳನ್ನು ಬಡಿಗೆ ಏಟಿಗೆ ಬಲಿಯಾಗುತ್ತವೆ. ಬಡಿಗೆಗೆ ತಪ್ಪಿಸಿಕೊಂಡರೆ ನಾಯಿಗೆ ಬಲಿಯಾಗುತ್ತವೆ. ಇಲ್ಲವೇ ಹೊಗೆ ಇಲ್ಲದೆ ಬಿಲಗಳನ್ನು ಅಗೆದು ನಾಯಿಗಳ ಸಹಾಯದಿಂದ ಹಿಡಿಯುತ್ತಾರೆ. ಇದನ್ನು ಅವರು 'ತುವ್ವಿ ಪಟ್ಟಟಂ' ಎಂದು ಕರೆಯುತ್ತಾರೆ.

ಈ ವೇಷಗಾರರು ಹೀಗೆ ಹಲವಾರು ತಂತ್ರಗಳನ್ನು ಬಳಸಿ ಹಲವಾರು ರೀತಿಯ ಬೇಟೆಯಾಡುತ್ತಾರೆ. ಇಲ್ಲಿ ಬೇಟೆಯ ನಾಯಿಯ ಪಾತ್ರವೂ ಅಷ್ಟೇ ಮುಖ್ಯವಾಗಿದೆ. ಇವು ಪ್ರಾಣಿಗಳ ಗುರುತು, ಸುಳಿವು, ವಾಸನೆಯ ಜಾಡು ಹಿಡಿದು ಬೇಟೆಯನ್ನು ತೋರಿಸುತ್ತವೆ. ಆ ಮೂಲಕ ಬೇಟೆಯು ಸುಲಭಗೊಳಿಸುತ್ತವೆ. ಆದ್ದರಿಂದ ಅದರ ನಾಯಕ ಬರದಿದ್ದರೂ ಬೇಟೆ ನಾಯಿಗಳಿಗೂ ಒಂದು ಭಾಗವನ್ನು ಮತ್ತು ಬಲೆಗಳಿಗೂ ಭಾಗ ತೆಗೆದು ಆಮೇಲೆ ಬೇಟೆಗಾರರು ಪಾಲು ಹಾಕಿಕೊಳ್ಳುತ್ತಾ, ಇದು ಇವರ ಬೇಟೆಯ ಪದ್ಧತಿ.

೮.೨. ಗೃಹ ಕೈಗಾರಿಕೆಗಳು

ಈದಿನ ಎಷ್ಟೋ ರೀತಿಯ ಗೃಹಕೈಗಾರಿಕೆಗಳು ಬಹಳಷ್ಟು ಜನರ ಹೊಟ್ಟೆ ಹೊರೆಯುವ ವೃತ್ತಿಯಾಗಿವೆ. ಇಂತಹ ಗೃಹಕೈಗಾರಿಕೆಗಳು ಹೇಳುವುದಕ್ಕೆ ಕೂಡ ಸಮಯವಿಲ್ಲದಂತಹ ಕೈಕೆಲಸಗಳು ಎಷ್ಟೋ ಇವೆ. ಈ ಹಗಲುವೇಷಗಾರರು ಸಹ ಗೃಹ ಕೈಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಅಂತಹವುಗಳೆಂದರೆ ಚಾಪೆ ಎಣೆಯುವುದು, ಭಿಕ್ಷಾಟನೆಯ ಪರಿಕರಗಳನ್ನು ತಯಾರಿಸಿಕೊಳ್ಳುವುದು, ವೇಷ ಪರಿಕರಗಳನ್ನು ತಯಾರಿಸಿಕೊಳ್ಳುವುದು, ವಾದ್ಯ ಪರಿಕರಗಳನ್ನು ಸರಿ ಪಡಿಸಿಕೊಳ್ಳುವುದು, ಬೇಟೆಯ ಪರಿಕರಗಳನ್ನು ತಯಾರಿಸಿಕೊಳ್ಳುವುದು, ಕೌದಿ ಹೊಲಿಯುವುದು ಮುಂತಾದ ಕೆಲಸಗಳನ್ನು ಇವರು ಮಾಡುತ್ತಾರೆ.

೮.೨.೧. ಚಾಪೆ ಎಣೆಯುವುದು : ಇವರ ಕೈ ಕೆಲಸದಲ್ಲಿ ಮುಖ್ಯವಾದಂತಹದು ಚಾಪೆ ಎಣೆಯುವುದು, ಇವರ ಸಮುದಾಯದಲ್ಲಿ ಯಾರೇ ವೇಷ ಹಾಕಿ ಬದುಕಲಿ, ಎಲ್ಲರೂ ಚಾಪೆ ಎಣೆಯುತ್ತಿದ್ದರು. ಇದು ಸ್ತ್ರೀ ಪುರುಷರು ಕೂಡಿಯೇ ನಿರ್ವಹಿಸುತ್ತಿದ್ದರು. ಮುಖ್ಯವಾಗಿ ಚಾಪೆ ಎಣೆಯುವುದಕ್ಕೆ ಈಚಲು ರಂಬೆ ಬೇಕು. ಕಾಡುಗುಡ್ಡಗಳಿಗೆ ಹೋಗಿ ಈಚಲು ಕೊಂಬೆ ತರಬೇಕು. ಕೆಲವು ಪ್ರಾಂತ್ಯಗಳಲ್ಲಿ ಭೂ ಸ್ವಾದೀನದಾರರು ಈಚಲು ಕೊಂಬೆಯನ್ನು ಕತ್ತರಿಸಿಕೊಳ್ಳಲು ಬಿಡುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಅವರ ಕಣ್ಣು ಮುಚ್ಚಿ ಕೊಯ್ದುಕೊಂಡು ಬರದೇ ಬಿಡುತ್ತಿರಲಿಲ್ಲ. ಕೊಯ್ದುಕೊಂಡು ಬಂದ ರಂಬೆಯಿಂದ ಎರಡು ಕಡೆ ಇರುವ ಎಲೆಗಳನ್ನು ಕಡೆಗೆ ಕಿತ್ತಿ ರಂಬೆಯಿಂದ ಬೇರ್ಪಡಿಸುತ್ತಾರೆ. ಎಣೆಯಲು ಬರದಂತಹ ಸಣ್ಣ ಸಣ್ಣ ಎಲೆಗಳನ್ನು ಸುರಳಿ ಸುತ್ತಿ ಪೀಪಿ ಮಾಡಿ ಊರಲ್ಲಿ ಭಿಕ್ಷೆಗೆ ಹೋದಾಗ ಹೆಣ್ಣು ಮಕ್ಕಳು, ಮಕ್ಕಳ ಕೈಯಲ್ಲಿ ಕೊಡುತ್ತಿದ್ದರು. ಆ ಮಕ್ಕಳು ಒಗ್ಗಿನಿಂದ ಮನೆಯಲ್ಲಿ ಕಾಳು ತಂದು ನೀಡುತ್ತಿದ್ದರು.

ಇದು ಒಂದು ತಂತ್ರ ಇವರದು. ಎಲೆ ಎಲೆಯಾಗಿ ತೆಗೆದವುಗಳನ್ನು ಒಣಗಿಸಿ ನಂತರ ಅವುಗಳನ್ನು ಒಂದು ಎಲೆಯಲ್ಲಿ ಎರಡು ಭಾಗಮಾಡಿ ಸೀಳಿಸಿ ಎರಡು ಎಲೆ ಮಾಡಿ ಅವುಗಳನ್ನೆಲ್ಲಾ ಕಲಗಾ ಪುಲಗ ಕಲಸಿ ಹೀಗೆ ಕಲಸಿದ ಎಲೆಗಳಿಗೆ ನೀರು ಚಿಮುಕಿಸಿ ಅವುಗಳನ್ನು ಕಟ್ಟು...ಕಟ್ಟು ಕಟ್ಟಿ ಪಕ್ಕದಲ್ಲಿಟ್ಟುಕೊಂಡು ಎಣೆಯುವುದು ಪ್ರಾರಂಭಿಸುತ್ತಾರೆ. ಗಂಡಸರು ಸಹ ಪಟ್ಟಿಗಳನ್ನು ಎಣೆಯುತ್ತಾರೆ. ಆದರೂ ಸ್ತ್ರೀಯರೇ ಎಣೆಯುವುದು ಹೆಚ್ಚು. ಕೆಲವೊಂದು ಸಲ ಹೆಂಗಸರು ಭಿಕ್ಷೆ ಬೇಡುತ್ತಾ ಹಾಗೆ ಎಣೆಯುತ್ತಿರುತ್ತಾರೆ.

ಎಲೆಗಳನ್ನು ತೆಗೆದುಕೊಂಡು ಎಡಗಡೆ ವಾಲುವ ಹಾಗೆ ಆರು ಎಲೆ ಬಲಗಡೆಗೆ ವಾಲುವ ಹಾಗೆ ಆರು ಎಲೆ. ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ತಿರುಗುವುದಕ್ಕೆ ಒಂದು ಎಲೆ ಇರುತ್ತದೆ. ಏಳು ಎಲೆಗಳ ಪಕ್ಕದಲ್ಲಿದ್ದ ಮೊದಲನೆಯ ಎಲೆಯನ್ನು ಮಡಚಿ ತಿರುವುತ್ತಾರೆ. ಈ ಎಲೆ ತಿರುಗಿದ ಮೇಲೆ ಈ ಕಡೆ ಆರು ಇದ್ದವು ಏಳು ಆಗುತ್ತವೆ. ಮತ್ತು ಈ ಏಳು ಎಲೆಯಲ್ಲಿ ಮೊದಲನೆಯ ಎಲೆಯನ್ನು ಈ ಕಡೆಗೆ ಮಡಚುತ್ತಾರೆ. ಪ್ರತಿ ಸಾರಿ ಹೊಸ ಎಲೆ ಜೋಡಿಸಿ ಮೇಲಿಂದ ಮದ್ಯಕ್ಕೆ ಎಲೆ ತಿರುವಿಕೊಳ್ಳುತ್ತಾರೆ. ಹೀಗೆ ಪಟ್ಟಿ ಎಣೆಯುತ್ತಾ ಹೋಗುತ್ತಾರೆ. ಎಣೆದ ಪಟ್ಟಿಯನ್ನು ಗುಂಡಾಗಿ ಸುರುಳಿಸುತ್ತುರೆ. ಇದನ್ನು ತೆಲುಗಿನಲ್ಲಿ ಪಟ್ಟೆ ಚುಟ್ಟ ಎನ್ನುತ್ತಾರೆ. ಇದರ ಅರ್ಥ ಪಟ್ಟಿಯ ಸುಳಿ ಚಾಪೆಗೆ ಸಾಕಾಗುವಷ್ಟು ಪಟ್ಟಿಯ ಸುಳಿ ತಯಾರಾದ ಮೇಲೆ ಸುತ್ತ ಮೂರು ಅಡಿ ಚೌಕಾಕಾರವಾಗಿ ತಯಾರಿಸುತ್ತಾರೆ. ಒಂದರ ಪಕ್ಕದಲ್ಲಿ ಒಂದು ಜೋಡಿಸಿ ಎಣೆಯುತ್ತಾರೆ. ಎರಡು ಪಟ್ಟಿಗಳ ಅಂಚಿನಲ್ಲಿ ಇರುವ ಎಲೆಯ ಮಡುಪಿನ ಸಂದಿನಲ್ಲಿ ತೂರಿಸುತ್ತಾ ಎರಡು ಪಟ್ಟಿಗಳನ್ನು ಸಂದಿಸುವಂತೆ ಮಾಡುತ್ತಾರೆ. ಹೀಗೆ ಒಂದರ ಪಕ್ಕದಲ್ಲೊಂದು ೩೦ ಪಟ್ಟಿಗಳನ್ನು ಸೇರಿಸಿದ ಮೇಲೆ ಒಂದು ಚಾಪೆ ತಯಾರಾಗುತ್ತದೆ. ಹೀಗೆ ತಯಾರಿಸಿದ ಚಾಪೆಗಳನ್ನು ಊರುಗಳಲ್ಲಿ ಮಾರಿಕೊಂಡು ಅವರಿಂದ ದವಸ ಧಾನ್ಯಗಳನ್ನೊ ಅಥವಾ ಹಣವನ್ನೋ ಪಡೆಯುತ್ತಾರೆ.

ಪೂರ್ವದಲ್ಲಿ ಇವರು ತಮ್ಮ ಗುಡಿಸಲು ಮೇಲೆಯೂ ಇವೇ ಚಾಪೆಗಳನ್ನು ಹಾಕುತ್ತಿದ್ದರಂತೆ. ಇಂದು ಈಚಲು ಗಿಡಗಳ ಕೊಂಬೆ ಸಿಗುವುದು ಕಷ್ಟಕರವಾಗಿರುವುದರಿಂದ, ನಮಗೆ ಅವಶ್ಯವಾದಾಗ ಮಾತ್ರ ನಮ್ಮ ಬಳಕೆಗೆ ಎಣೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ.

೮.೭.೨. ಭಿಕ್ಷಾಟನೆಯ ಪರಿಕರಗಳು : ಭಿಕ್ಷೆ ಶೇಖರಿಸುವುದಕ್ಕೆ ಜೋಳಿಗೆ ಬೇಕಾಗುತ್ತವೆ. ಇವರಿಗೆ ಅವಶ್ಯವಾದ ಜೋಳಿಗೆಗಳನ್ನು ಇವರೇ ಒಲಿದುಕೊಳ್ಳುತ್ತಾರೆ. ಜೋಳಿಗೆಗಳಲ್ಲಿ ದೇವರ ಜೋಳಿಗೆ, ದೊಡ್ಡ ಜೋಳಿಗೆ, ಊರಲ್ಲಿ ಹೋಗುವ ಜೋಳಿಗೆ, ಅಶ್ವ ಚೀಲ ಮೊದಲಾದವು ಇರುತ್ತವೆ. ಈ ಜೋಳಿಗೆಗಳು ನಾಲ್ಕು ಮೂಲೆ ಚೌಕಾಕಾರವಾಗಿ ಮತ್ತು ನಾಲ್ಕು ಮಡಪು ಅಂದರೆ ನಾಲ್ಕು ಭಾಗದ ಚೀಲಗಳನ್ನು ಹೊಂದಿರುತ್ತದೆ. ಇವುಗಳನ್ನು ಹೇಗೆ ತಯಾರಿಸುತ್ತಾರೆಂದರೆ, ಹಳೆಯ ಬಟ್ಟೆಗಳು ಗಟ್ಟಿ ಇರುವ ಭಾಗವನ್ನು ಹರಿದುಕೊಂಡು ದೊಡ್ಡ ದಾರ, ದೊಡ್ಡ ಸೂಜಿಯಿಂದ ಒಂದಕ್ಕೊಂದು ಕೂಡಿಸಿ ತಮಗೆ ಬೇಕಾದ ತರ ತರದಲ್ಲಿ ಒಲಿದುಕೊಳ್ಳುತ್ತಾರೆ. ನಂತರ ಒಂದು ಇಂಚಿನ ಪಕ್ಕದಲ್ಲಿ ನೆಟ್ಟಗೆ ಸಾಲಾಗಿ ದಾರದ

ಹೊಲಿಗೆಗಳನ್ನು ಹಾಕುತ್ತಾರೆ. ಹೀಗೆ ಒಲಿದ ಬಟ್ಟೆ ಒಂದಕ್ಕೊಂದು ಕೂಡಿ ಗಟ್ಟಿಯಾಗಿ ಬಹಳ ಬಾಳಿಕೆ ಬರುತ್ತದೆ. ಮತ್ತು ಬಾರವನ್ನು ತಿಳಿಸುತ್ತದೆ.

೮.೭.೩. ವೇಷ ಪರಿಕರಗಳು : ವಿವಿಧ ರೀತಿಯ ಕಥಾ ಪರಧಿಗಳನ್ನೊಳಗೊಂಡ ವೇಷಗಳನ್ನು ಹಾಕುವ ಈ ಹಗಲುವೇಷಗಾರರು ತಮ್ಮ ವೇಷ ಭೂಷಣಗಳಿಗೆ ಬೇಕಾದ ಮತ್ತು ಉಪಯೋಗಿಸುವ ವಸ್ತು ಸಾಮಗ್ರಿಗಳನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಕಿರೀಟಗಳು, ಭುಜ ಕಿರೀಟಗಳು, ಹಾರಗಳು, ಮಣಿಕಂಠಗಳು, ಗಧೆ, ಬಣ್ಣ, ಉಡುಪು, ಆಯುಧ, ಕಾಲಿಗೆ ಕಟ್ಟುವ ಗೆಜ್ಜೆಗಳನ್ನು ಮೊದಲಾದವುಗಳನ್ನು ಸ್ವಯಂ ಆಗಿ ತಾವೇ ತಯಾರು ಮಾಡಿಕೊಳ್ಳುತ್ತಾರೆ.

ಹಿಂದಿನ ಕಾಲದಲ್ಲಿ ಈಗಿನಂತೆ ಅಂಗಡಿಯಲ್ಲಿ ಬಣ್ಣಗಳು ಸಿಗದಿದ್ದ ಕಾಲದಲ್ಲಿ ಇವರ ಪೂರ್ವಿಕರು ಕೃಷ್ಣ, ಗೋದಾವರಿ ಮುಂತಾದ ನದಿಗಳಲ್ಲಿ ಸಿಗುವ ಬಣ್ಣ ಬಣ್ಣದ ಕಲ್ಲುಗಳನ್ನು ಆರಿಸಿ ತೆಗೆದು ಅವುಗಳನ್ನು ಚೀಲದಲ್ಲಿ ತುಂಬಿ ಹಸುಗಳ ಇಲ್ಲವೇ ಕುದುರೆಗಳ ಮೇಲೆ ಹೇರಿ ತರುತ್ತಿದ್ದರು.[೨] ಯಾವ ಬಣ್ಣ ಬೇಕೋ ಆ ಬಣ್ಣದ ಕಲ್ಲನ್ನು ನೀರಿನಲ್ಲಿ ತೇದು ಆ ಪೇಸ್ಟ್‌ನ್ನು ಮುಖಕ್ಕೆ ಹಚ್ಚಿಕೊ ಳ್ಳುತ್ತಿದ್ದರು. ಕಪ್ಪು ಬಣ್ಣಕ್ಕೆ ಇದ್ದಿಲನ್ನು ಬಳಸುತ್ತಿದ್ದರು. ಕುದುರೆಯ ಬಾಲದ ಕೂದಲಿನಿಂದ ಗಡ್ಡ, ಕುರಿಯ ತುಪ್ಪಳದಿಂದ ಮೀಸೆ ತಯಾರಿಸಿಕೊಂಡು ದಾರದಿಂದ ಕಟ್ಟಿಕೊಳ್ಳುತ್ತಿದ್ದರು. ಈಗಿನಂತೆ ಸೆಲ್ಯುಷನ್, ಪೆವಿಕ್ಯುಕ್ ಅಥವಾ ಸ್ಟಿಕ್ಕರು ಯಾವವೂ ಇರಲಿಲ್ಲ. ಆದುದರಿಂದ ಈ ಕೊರತೆಯನ್ನು ಅವರೇ ತುಂಬಿಕೊಳ್ಳುತ್ತಿದ್ದರು.

ಕಿರೀಟ, ಆಭರಣಗಳನ್ನು ಇವರೇ ತಯಾರಿಸಿಕೊಳ್ಳುತ್ತಿದ್ದರು. ತೆಳುವಾದ ತಗಡನ್ನು ಕಿರೀಟ ಹೇಗೆ ಬೇಕೋ ಹಾಗೆ ಅವರ ವಿಶಾಲಕ್ಕೆ ತಕ್ಕಂತೆ ಕತ್ತರಿಸಿ ಅದಕ್ಕೆ ಆಕರ್ಷಕವಾಗುವಂತೆ ಸಿಲ್ವರ್‌ಪೇಂಟ್, ಮಿಂಚಿನ ಪುಡಿ, ಬಣ್ಣ ಬಣ್ಣದ ಬಿಲ್ಲೆಗಳನ್ನು ಸುತ್ತಲು ಅಂಟಿಸಿ ಅದರ ಮೇಲೆ ತುದಿಯಲ್ಲಿ ನವಿಲಿನ ಪುಕ್ಕಳ ಇಲ್ಲವೆ ಬೆಳ್ಳಕ್ಕಿಯ ಪುಕ್ಕಗಳಿಗೆ ಬಣ್ಣ ಲೇಪಿಸಿ ಕಟ್ಟಿರುತ್ತಾರೆ. ಇದನ್ನು ಕಿರೀಟ ಎಂದು ಕರೆಯುತ್ತಾರೆ. ಇದನ್ನು ತಲೆಯಲ್ಲಿ ಇಟ್ಟು ಕೊಳ್ಳುತ್ತಾರೆ. ಅದೇ ರೀತಿ ತಗಡನ್ನು ತಮಗೆ ಬೇಕಾದ ಆಭರಣದ ರೀತಿಯಲ್ಲಿ ಕತ್ತರಿಸಿ ಅದಕ್ಕೆ ಥರ ಥರದ ಬಣ್ಣ ಹಾಕಿ ಸುತ್ತಲೂ ಸಣ್ಣ ಸಣ್ಣ ಮಣಿಗಳನ್ನು ಪೋಣಿಸಿ ಸುತ್ತಲೂ ಕಟ್ಟಿ ಹಾರಗಳನ್ನಾಗಿ ತಯಾರಿಸಿಕೊಳ್ಳುತ್ತಾರೆ. ತೋಳುಗಳಿಗೆ ತೋಳುಬಂಧಿ, ನಡುವಿಗೆ ನಡುವು ಪಟ್ಟಿ, ಮಣಿಕಟ್ಟು ಮುಂತಾದವುಗಳನ್ನು ತಯಾರಿಸಿಕೊಳ್ಳುತ್ತಾರೆ. ಪೌರಾಣಿಕ ಪಾತ್ರಗಳಿಗೆ ಗಧೆ ಬೇಕೇ ಬೇಕು. ಈ ಗಧೆ ಕೈಯಲ್ಲಿ ಹಗುರವಾಗಿರಲೆಂದು ಮತ್ತು ಸಾಗಿಸಲು ಸುಲಭವಾಗಿರಲೆಂದು ಎರಡುವರೆ ಅಡಿಯ ಬಿದಿರುಗೆ ಸ್ಟೀಲಿನ ಬಟ್ಟಲುಗಳನ್ನು ವಿವಿಧ ಅಳತೆಯವುಗಳು ಅಂದಕ್ಕೆ ತಕ್ಕಂತೆ ಜೋಡಿಸಿ ಅವುಗಳಿಗೆ ತೂತು ಹಾಕಿ ಮಧ್ಯ ಒಂದು ಸಲಾಕೆಯನ್ನು ಹಾಕಿರುತ್ತಾರೆ. ಮೊದಲು ದೊಡ್ಡ ಬಟ್ಟಲನ್ನು ಬೋರಲು ಹಾಕಿ ಪೆರಿಸಿ ಅದರ ಮೇಲೆ ಚಿಕ್ಕ ಚಿಕ್ಕ ಬಟ್ಟಲಗಳನ್ನು ಹಾಕಿ ಪೆರಿಸಿ ಕಂಬಿಯ ಕೊನೆಗಿರುವ ತ್ರೆಡ್ಡಿಗೆ ನಟ್ಟನ್ನು ತಿರುವಿ ಭದ್ರಮಾಡಿದಾಗ ಒಳ್ಳೆಯ ಚಿತ್ತಾಕರ್ಷಕವಾಗಿ ಕಾಣುವ ಹಗುರವಾದ ಗಧೆಯುಂಟಾಗುತ್ತದೆ. ಬೇಕೆನಿಸಿದಾಗ ಬಟ್ಟಲುಗಳನ್ನು ಬಿಚ್ಚಿ ತೆಗೆಯಬಹುದು.

೮.೭.೩.೧. ವಾದ್ಯ ಪರಿಕರಗಳು : ಬುರ್ರ ಕಥೆಗಳನ್ನು ಹಾಡಲು ಉಪಯೋಗಿಸುವ ಮುಖ್ಯ ವಾದ್ಯವೆಂದರೆ ಡಿಂಕಿ ಪೂರ್ವದಲ್ಲಿ ಇವು ಮಣ್ಣಿನವು ಇರುತ್ತಿದ್ದವು. ಈಗಲೂ ಕೆಲವು ಇವೆ. ಇವುಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಕುಂಬಾರನಿಗೆ ಹೇಳಿ ಮಣ್ಣಿನಿಂದ ಒಂದ ಸಣ್ಣ ಕೊಡದಂತೆ ಮಾಡಿ ಎರಡೂ ಕಡೆಗೆ ಬಾಯಿ ಬಿಡಿಸುತ್ತಾರೆ. ಒಂದು ಕಡೆ ಸ್ವಲ್ಪ ದೊಡ್ಡದಿರುತ್ತದೆ. ಒಂದು ಕಡೆ ಸ್ವಲ್ಪ ಚಿಕ್ಕದಿರುತ್ತದೆ. ಬಾಯಿ ದೊಡ್ಡದಿದ್ದ ಭಾಗ ಬಲಭಾಗಕ್ಕೆ ಇರುತ್ತದೆ. ಹೀಗೆ ಕುಂಬಾರನಿಗೆ ಹೇಳಿ ತಯಾರಿಸಿಕೊಂಡು ಬರುತ್ತಾರೆ. ಒಂದು ಬಲಗಡೆ ಭಾಗಕ್ಕೆ ಉಡದ ಚರ್ಮ ಇಲ್ಲವೆ ಆಡಿನ ಚರ್ಮ ಬಿಗಿದುಕೊಳ್ಳುತ್ತಾರೆ. ಹೀಗೆ ಬಿಗಿದ ವಾದ್ಯವನ್ನು ಕೊರಳಲ್ಲಿ ಹಾಕಿಕೊಳ್ಳುವಂತೆ ಮಾಡುತ್ತಾರೆ. ಇದನ್ನು ಇವರು ಡಿಂಕಿ, ಗುಮ್ಮಟ್ಟೆ ಎಂದು ಕರೆಯುತ್ತಾರೆ. ನಮ್ಮ ವಿದ್ವಾಂಸರು ಇದನ್ನು ಬುಡಗೆ ಎಂದು ಕರೆಯುತ್ತಾರೆ. ಕೆಲವು ಬಿಂದಿಗೆ ಇತ್ತಾಳಿಯುವುಗಳನ್ನು ತಂದು ತರುವಾಯ ಚರ್ಮವನ್ನು ಬಿಗಿದುಕೊಳ್ಳುತ್ತಾರೆ.

ಸೋರೆ ಕಾಯಿಯನ್ನು ತೆಗೆದುಕೊಂಡು ಅದಕ್ಕೆ ಒಂದು ಉದ್ದವಾದ ಸುಮಾರು ಎರಡುವರೆ ಅಡಿ ಇರವ ಬಿದಿರನ್ನು ಜೋಡಿಸಿ, ಏಕ ತಾರೆಯನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಇನ್ನೂ ಇವರ ವೇಷಗಳಿಗೆ ಬೇಕಾಗುವ ಅಥವಾ ಉಪಯೋಗಿಸುವ, ಗಂಟೆ, ಶಂಖ, ತಬಲ, ಹಾರ್ಮೋನಿಯಂ ಮೊದಲಾದವುಗಳನ್ನು ಖರೀದಿಸಿಕೊಳ್ಳುತ್ತಾರೆ. ಕೆಲವು ದಿನ ಉಪಯೋಗಿಸಿ ಕೆಟ್ಟು ಹೋಗಿದ್ದರೆ ಅಂತಹವುಗಳನ್ನು ಇವರೇ ರಿಪೇರಿ ಮಾಡಿಕೊಳ್ಳುತ್ತಾರೆ.

೮.೭.೪. ಬೇಟೆ ಪರಿಕರಗಳು : ಬೇಟೆಗೆ ಸಂಬಂಧಿಸಿದ ಅನೇಕ ಪರಿಕರಗಳನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಪಕ್ಷಿಗಳು, ಉಡುವುಗಳಿಗೆ ಹಾಕುವ ಉರ್ಲು ಅಥವಾ ಉಚ್ಚಲನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಕುದುರೆಯ ಬಾಲದ ಕೂದಲಿನಿಂದ ತಯಾರುಮಾಡುತ್ತಾರೆ. ಉಡುವುಗಳಿಗೆ ಹಾಕುವ ಕಡಗದ ಬಲೆ, ಮುಂಗಸಿಗೆ ಇಡುವ ಗೂಡುಗಳನ್ನು ಮೊದಲಾದವುಗಳ ಉರಲನ್ನು ಕುದುರೆಯ ಬಾಲದ ಕೂದಲಿನಿಂದ ತಯಾರಿಸುತ್ತಾರೆ. ಸಣ್ಣ ಸಣ್ಣ ಪ್ರಾಣಿಗಳನ್ನು ಹಿಡಿಯಲು ಬೋನುಗಳನ್ನು ತಯಾರಿಸುತ್ತಾರೆ. ಬಿದಿರು ಕಟ್ಟಿಗೆಯಿಂದ ಮೀಟುಗಳನ್ನು ತಯಾರಿಸಿಕೊಂಡು, ಬಿದಿರು ಕಟ್ಟಿಗೆಯನ್ನು ಸಣ್ಣಗೆ ಸೀಳಿ ಕೌಜು ಹಿಡಿಯುವುದಕ್ಕೆ ಪಾಜಿ ತಯಾರುಮಾಡುತ್ತಾರೆ.

ಅನೇಕ ರೀತಿಯ ಬಲೆಗಳನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಉಡವು ಇಲಿ, ಮುಂಗಲಿ, ಮೊದಲಾದವುಗಳನ್ನು ಹಿಡಿಯಲು ಅವಶ್ಯಕವಾದ ದೊಡ್ಡ ಬಲೆಗಳು, ಮೀನುಗಳನ್ನು ಹಿಡಿಯಲು ಮೀನು ಬಲೆಗಳು ತಾವೇ ನಾರಿನಿಂದ ಅಥವಾ ವೈರಿನಿಂದ ಎಣೆದುಕೊಳ್ಳುತ್ತಾರೆ.

ಇಲಿಗಳನ್ನು ತೊಡಲು, ಉಡುವು, ಮುಂಗಸಿಯ ಗುಹೆಗಳನ್ನು ಅಗೆಯಲು ಭೂಮಿಯಲ್ಲಿನ ತೂತು, ಒಕ್ಕೆಗಳನ್ನು ತಿವಿಯುವುದಕ್ಕೆ, ಕಮ್ಮಾರರ ಹತ್ತಿರ ಎರಡು ಅಡಿ ಬಿದಿರಿಗೆ ಮುಂದೆ, ಹಿಂದೆ ಸೂಜಾಗಿರುವ ಕಬ್ಬಿಣದ ಕಡಗಗಳನ್ನು ಮಾಡಿಸಿ ಹಾಕಿಸಿಕೊಂಡು ಬರುತ್ತಾರೆ. ಕೆದರುವುದಕ್ಕೆ ಅನುಕೂಲವಾಗಿರುವಂತೆ ಮುಂದೆ ಚೂಪಾಗಿ ಇರುತ್ತದೆ. ಇದನ್ನು 'ಕರ್ರಕಟ್ಟೆ' ಎಂದು ಕರೆಯುತ್ತಾರೆ. ಹೀಗೆ ವಿವಿಧ ರೀತಿಯ ಬೇಟೆಗೆ ಬೇಕಾದ ಸಾಮಾನುಗಳನ್ನು ತಯಾರಿಸಿಕೊಳ್ಳುತ್ತಾರೆ.

೮.೭.೫. ಕೌದಿ ಒಲಿಯುವುದು : ಹಳೆಯ ಸೀರೆ ಮತ್ತು ಹಳೆಯ ಬಟ್ಟೆಗಳಿಂದ ಕೌದಿಯನ್ನು ಒಲಿದು ಕೊಳ್ಳುತ್ತಾರೆ. ಇದನ್ನು ಹೇಗೆ ಒಲಿಯುತ್ತಾರೆಂದರೆ ಹಳೆಯ ಸೀರೆಯನ್ನು ಒಂದರ ಪಕ್ಕದಲ್ಲಿ ಒಂದು ಹಾಸಿ ಅಂಟಿಸುತ್ತಾರೆ. ಆಮೇಲೆ ಎರಡು ಮಡಪು ಮಡಿಸಿ ನಾಲ್ಕು ಮಳ ಉದ್ದ ೫ ಮಳ ಅಥವಾ ಏಳು ಮಳ ಅಗಲ ಇರುವಂತೆ ಮಡಿಚಿ ಸೀರೆ ಅರಿದ ಭಾಗಕ್ಕೆ ತುಂಡು ಬಟ್ಟೆಗಳನ್ನು ತೇಪೆ ಹಾಕಿ ಒಂದು ಇಂಚು ಬಿಟ್ಟು ಬಂದು ಇಂಚಿಗೆ ಸಾಲಾಗಿ ನೇರವಾಗಿ ದಾರವನ್ನು ಒಲಿಯುತ್ತಾರೆ. ಈ ಕೌದಿಯು ಚಳಿಗಾಲದಲ್ಲಿ ಬೆಚ್ಚಗೆ ಬಿಸಿಲುಕಾಲದಲ್ಲಿ ತಂಪು ಎಂದು ಹೇಳುತ್ತಾರೆ. ಇದರಲ್ಲಿ ಇದ್ದ ಸುಖ ಬೇರೆ ರಗ್ಗು ಗುಡಾರಗಳಲ್ಲಿ ಇಲ್ಲವೆಂದು ಹೇಳುತ್ತಾರೆ. ಈ ಕೌದಿ ಹೊಲಿಯುವುದು ಕೂಡ ಒಂದು ಕಲೆಯಾಗಿದೆ. ಇವರು ತಮ್ಮ ಮನೆ ಬಳಕೆಗೆ ಮಾತ್ರ ಒಲಿದುಕೊಳ್ಳುತ್ತಾರೆ. ಬೇರೆಯವರಿಗೆ ಒಲಿದುಕೊಡುವುದಿಲ್ಲ.

೮.೮. ಸಣ್ಣ ಕೈಗಾರಿಕೆ : ಇಂದು ಆಧುನಿಕತೆಯ ಪ್ರಭಾವದಿಂದ ನಾಯಿಕೊಡೆಯಂತೆ ಹಲವಾರು ಸಣ್ಣ ಪುಟ್ಟ ಕೈಗಾರಿಕೆ ಹುಟ್ಟಿಕೊಂಡಿವೆ. ಇಂತಹ ಸಣ್ಣ ಕೈಗಾರಿಕೆಗೆ ಈ ವೇಷಗಾರರ ಸಮುದಾಯದ ಕೆಲವೇ ಜನ ಮಾರು ಹೋಗಿದ್ದಾರೆ. ಮತ್ತು ಯಶಸ್ವಿಯೂ ಆಗಿದ್ದಾರೆ. ತಮ್ಮ ಸಮುದಾಯದ ಜನಕ್ಕೆ ತಾವೇ ದಾರಿದೀಪವಾಗಿದ್ದಾರೆ.

ಈ ಸಮುದಾಯದ ಕೆಲವು ಜನರು ನಿರ್ವಹಿಸುವ ಕೈಗಾರಿಕೆಯೆಂದರೆ ರಬ್ಬರ್ ಕೊಡ ತಯಾರಿಕೆ, ಈ ಕೈಗಾರಿಕೆ ಈ ಸಮುದಾಯದ ಜನಗಳಿಗೆ ಬಹಳ ಸಹಕಾರಿಯಾಗಿದೆ. ಈ ಸಮುದಾಯದ ವ್ಯಕ್ತಿಗಳೇ ಆದವರು ಹೊಸಪೇಟೆ, ಬಳ್ಳಾರಿ, ಗುಂತಕಲ್, ಕರ್ನೂಲ್, ಗಂಗಾವತಿಗಳಲ್ಲಿ ಹಳೆಯ ರಬ್ಬರ್ ಕೊಡ ಕರಗಿಸಿ ಹೊಸ ರಬ್ಬರ್ ಕೊಡ ತಯಾರಿಸುವ ಮತ್ತು ಸಿಲ್ವರ್ ಯಂತ್ರಗಳನ್ನು ಹಾಕಿದ್ದಾರೆ. ಇವರು ತಯಾರಿಸಿದ ರಬ್ಬರ್ ಕೊಡಗಳನ್ನು ಇವರ ಸಮುದಾಯದವರಿಗೇ ಕೊಡುತ್ತಾರೆ. ಈ ಸಮುದಾಯದ ನಿರುದ್ಯೋಗಿ ಹೆಣ್ಣುಮಕ್ಕಳು, ಗಂಡಸರು ಕೊಡಗಳನ್ನು ತೆಗೆದುಕೊಂಡು ಒಂದು ಕಟ್ಟಿಗೆಗೆ ಹಿಂದೆ ಮುಂದೆ ಕಟ್ಟಿಕೊಂಡು ಪಟ್ಟಣ ಹಳ್ಳಿಗಳಿಗೆ ಹೋಗಿ ಮಾರಾಟ ಮಾಡುತ್ತಾರೆ. ಹೊಡೆದ ರಬ್ಬರ್ ಕೊಡಗಳನ್ನು ಕಡಿಮೆ ಬೆಲೆಯಲ್ಲಿ ತರುತ್ತಾರೆ. ಹೀಗೆ ವ್ಯಾಪಾರ ಮಾಡಿಕೊಂಡು ಬಂದು ಕೈಗಾರಿಕಾ ಮಾಲಿಕನಿಗೆ ಹಳೆಯ ಕೊಡಗಳನ್ನು ಅವರಿಗೆ ಕೊಟ್ಟು, ಮೊದಲು ಕೊಡ ಕೊಟ್ಟ ದರದಲ್ಲಿ ಮುರಿದು ಉಳಿದ ಹಣವನ್ನು ವ್ಯಾಪಾರ ಮುಗಿದ ಮೇಲೆ ಸಾಯಂಕಾಲ ತಂದುಕೊಡುತ್ತಾರೆ. ಹೀಗೆ ಈ ಸಮುದಾಯದ ಜನ ಬಂಡವಾಳ ಇಲ್ಲದೆ ಇರುವ ಈ ಉದ್ಯೋಗವನ್ನು ಬಹಳ ಜನ ಮಾಡುತ್ತಾರೆ. ಬಳ್ಳಾರಿ ಮತ್ತು ಆಂಧ್ರ ಗಡಿಭಾಗದಲ್ಲಿ ಇದೇ ಉದ್ಯೋಗವೇ ಹೆಚ್ಚು ಕಂಡುಬರುತ್ತದೆ. ಇಂದು ವೇಷಗಾರಿಕೆಗೆ ಬೆಲೆ ಸಿಗದೇ ಇರುವ ಸಂದರ್ಭದಲ್ಲಿ ಅನಿವಾರ್ಯವಾಗಿ ಇಂತಹ ಪರ್ಯಾಯ ಉದ್ಯೋಗಗಳಿಗೆ ಬದಲಾಗದೇ ವಿಧಿ ಇಲ್ಲ ಎಂದು ಹೇಳುತ್ತಾರೆ.

೮.೯. ಕೂಲಿ : ಕೆಲವು ಜನರು ಇತ್ತೀಚಿಗೆ ಬೆರಳಣಿಕೆಯಷ್ಟು ಜನರು ಶಾಶ್ವತವಾದ ವಸತಿಗಳನ್ನು ಮಾಡಿಕೊಂಡಿದ್ದಾರೆ. ಅಂತಹವರು ನಿರಂತರವಾಗಿ ಒಂದೇ ಊರಲ್ಲಿ ಭಿಕ್ಷೆ ಬೇಡುವುದು ಸರಿ ಕಾಣುವುದಿಲ್ಲವೆಂದು ಕೆಲವು ಹೆಣ್ಣು ಮಕ್ಕಳು, ಮತ್ತು ಗಂಡು ಮಕ್ಕಳು ಶ್ರೀಮಂತರ ಹೊಲದಲ್ಲಿ ಕೆಲಸ

ಮಾಡುವ ವೃತ್ತಿಯವರೂ ಅಲ್ಲಲ್ಲಿ ಕಾಣ ಸಿಗುತ್ತಾರೆ. ಇಂತಹವರ ಜೀವನ ಬಹಳ ಚಿಂತಾಜನಕವಾಗಿದೆ.

೮.೧೦. ವ್ಯಾಪಾರ : ಬದುಕಿನ ಬಿಕ್ಕಟ್ಟನ್ನು ಎದುರಿಸಿ, ಆಧುನಿಕತೆಯ ಅಲೆಗೆ ತತ್ತರಿಸಿ ಹೋಗಿರುವ ಹಗಲುವೇಷಗಾರರು ಮರ್ಯಾದೆಯುತವಾಗಿ ಜೀವನ ನಡೆಸಲು ಒಂದು ಶಾಸ್ವತ ನೆಲೆ ಕಾಣದೆ ಅಂತರ್ ಪಿಶಾಚಿಗಳಂತೆ ಅಲೆಯುವ ಕಾಲ ನಮಗೆ ಬಂದೊದಗಿದೆ ಎಂದು ಕೊರಗುತ್ತಾರೆ. ಈ ಕೊರಗಿನ ಅಲ್ಪ ತೃಪ್ತಿಗೋಸ್ಕರ ಬಂಡವಾಳವಿಲ್ಲದ ಹಲವು ಹೊಸ ವೃತ್ತಿಗಳಿಗೆ ಮಾರು ಹೋಗಲು ಹೆಣಗಾಡುತ್ತಿದ್ದಾರೆ. ಅಂತಹ ಈ ಹೆಣಗಾಟದಲ್ಲಿ ವ್ಯಾಪಾರವೂ ಒಂದು.

ಹಳೆಯ ಸಂಪ್ರದಾಯಿಕ ಕಲೆಯಾದ ವೇಷಗಾರಿಕೆಯ ವೃತ್ತಿಯನ್ನು ತೊರೆಯಲಾಗದೆ, ಹೊಟ್ಟೆ, ಬಟ್ಟೆ, ಶಾಶ್ವತ, ನೆಲೆಯು ಸಿಗಲಾರದ ಸಂಕಟ ಒಂದು ಕಡೆ. ಅಲ್ಪ ತೃಪ್ತಿಯನ್ನು ನೀಗಿಸಿಕೊಳ್ಳಲು ಉಪವೃತ್ತಿಯಾಗಿ ಕೈಗೊಂಡಂತಹ ವ್ಯಾಪಾರದಲ್ಲಿ ಪ್ಲಾಸ್ಟಿಕ್ ಸಾಮಾನುಗಳ ವ್ಯಾಪಾರ ಮತ್ತು ಸಿಲ್ವರ್ ಮತ್ತು ಸ್ಟೀಲ್ ಪಾತ್ರೆಗಳ ಮಾರಾಟ ಇತ್ತೀಚಿನ ದಿನಗಳಿಂದ ಆರಂಭಿಸಿದ್ದಾರೆ.

೮.೧೦.೧. ಪ್ಲಾಸ್ಟಿಕ್ ಸಾಮಾನು ಮಾರುವುದು : ಇತ್ತೀಚಿಗೆ ವೈಜ್ಞಾನಿಕ ಕ್ರಾಂತಿಯಿಂದ ಹಲವಾರು ಚಿಕ್ಕ ಪುಟ್ಟ, ಕೈಗಾರಿಕೆಗಳು ನಾಯಿ ಕೊಡೆಯಂತೆ ಹುಟ್ಟಿಕೊಳ್ಳುವುದರಿಂದ ಮಾರುಕಟ್ಟೆಗಳಲ್ಲಿ ಪೈಪೋಟಿ ಹೆಚ್ಚಾಗಿ ನಿರುದ್ಯೋಗಿಗಳಿಗೆ ಯಾವುದೇ ಬಂಡವಾಳವಿಲ್ಲದೆ ಸಾಮಾನುಗಳನ್ನು ಮಾರಾಟಕ್ಕೆ ಕೊಟ್ಟ ನಂತರ ಮಾರಾಟವಾದ ಮೇಲೆ ಅವರ ಸ್ಥಳಗಳಿಗೆ ಇವರೇ ಹೋಗಿ ಹಣವನ್ನು ವಸೂಲಿ ಮಾಡಿಕೊಂಡುಬರುವ ಪರಿಪಾಠ ಬೆಳೆಯುತ್ತಿದೆ. ಇಂತಹ ವ್ಯಾಪಾರ ಈ ಹಗಲುವೇಷಗಾರರಿಗೆ ಇಂದು ಉಪಯೋಗವಾಗುತ್ತಿವೆ. ಹಲವಾರು ಜನರು ಇಂತಹ ಪ್ಲಾಸ್ಟಿಕ್ ಕೈಗಾರಿಕೆಗಳವರ ಹತ್ತಿರ ಹೋಗಿ ಯಾರಾದರು ಪರಿಚಯವಿದ್ದವರ ಹೆಸರು ಹೇಳಿ ಅತ್ಯಂತ ಕಡಿಮೆ ಬೆಲೆಯ ಪ್ಲಾಸ್ಟಿಕ್ ಸಾಮಾನುಗಳನ್ನು ತೆಗೆದುಕೊಂಡು ಊರುಗಳಲ್ಲಿ ಪುಟ್ಟಿಗೆ, ಅಥವಾ ಚೀಲಗಳಿಗೆ ಹಾಕಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಓಣಿ ಓಣಿಯಲ್ಲಿ ಕೂಗುತ್ತಾ ತಿರುಗಾಡುತ್ತಾರೆ. ಬೇಕಿದ್ದವರು ಕರೆದು ತೆಗೆದುಕೊಳ್ಳುತ್ತಾರೆ. ಇವರ ವ್ಯಾಪಾರ ತಂತ್ರದ ಮೇಲೆಯೇ ನಡೆಯುವಂತಹದ್ದು. ಇವರು ಮೊದಲು ಸಾಮಾನು ಎಷ್ಟಕ್ಕೆ ಮಾರಾಟ ಮಾಡಬೇಕು, ಎಂದುಕೊಂಡಿರು ತ್ತಾರೆಯೋ ಅದರ ದುಪ್ಪಟ್ಟು ಬೆಲೆ ಹೇಳಬೇಕು. ಆಗ ಜನ ಅರ್ಧ ಬೆಲೆಗೆ ಬರುತ್ತಾರೆ. ನಾವು ನ್ಯಾಯವಾದ ಬೆಲೆ ಹೇಳಿದರೆ ಜನರು ಮತ್ತೆ ಅದರಲ್ಲಿ ಅರ್ಧ ಬೆಲೆಗೆ ಕೇಳುತ್ತಾರೆ. ಅದೊಂದು ರೋಗ ಜನರಿಗೆ, ಅದೇ ಮಾರುಕಟ್ಟೆಯ



ಪ್ಲಾಸ್ಟಿಕ್‌ಕೊಡ ಕಾಯುತ್ತಿರುವ ಮಹಿಳೆ

ಅಲಂಕಾರ ಕೋಣೆಯಲ್ಲಿ ಅವರು ಹೇಳಿದ ಬೆಲೆಗೆ ಸುಮ್ಮನೆ ತರುತ್ತಾರೆ. ಅಲ್ಲಿ ಅವರಿಗೆ ಅದು ಮರ್ಯಾದೆಯ ಪ್ರಶ್ನೆಯಾಗಿರುತ್ತದೆ. ಅದೇ ಅವರ ಮನೆ ಮುಂದೆ ಹೋದರೆ ಬಹಳ ಕೀಳಾಗಿ ಕಾಣುವುದು ಸಹಜ. ಇಂತಹವೆಲ್ಲವನ್ನು ನಿಭಾಯಿಸಿ ವ್ಯಾಪಾರ ಮಾಡುವುದೆಂದರೆ ಸುಲಭದ ಮಾತಲ್ಲ.

ಇವರು ಪಟ್ಟಣಗಳಲ್ಲಿ, ನಗರಗಳಲ್ಲಿ ಊರಹಿಂದೆ ಜೋಪಡಿಗಳನ್ನು ಹಾಕಿಕೊಂಡು ಒಳಗಡೆಯೆಲ್ಲಾ ಸಾಮಾನು ಇಟ್ಟುಕೊಂಡು ಹೊರಗೆ ಮಲಗುತ್ತಾರೆ. ಬೆಳಕು ಹರಿದ ತಕ್ಷಣ ಅಡುಗೆ ಮಾಡಿಕೊಂಡು ಊಟಮಾಡಿ ಅಲ್ಲಿದ್ದ ಸಾಮಾನುಗಳೆಲ್ಲಾ ತಲೆಯ ಮೇಲೆ ಇಟ್ಟುಕೊಂಡು ಪಕ್ಕದ ಹಳ್ಳಿಗಳಿಗೆ ಬಸ್ಸಿನಲ್ಲಿಯೋ, ಕಾಲು ಪ್ರಯಮಾಣವೋ ಮಾಡಿ ವ್ಯಾಪಾರ ಮಾಡಿಕೊಂಡು ಬರುತ್ತಾರೆ.

ಹೆಂಗಸರು ಪುಟ್ಟಿಯಲ್ಲಿ ಕುಂಕುಮ, ಪೌಡರ್, ಸ್ನೋ, ಸಣ್ಣ ಸಣ್ಣ ಪ್ಲಾಸ್ಟಿಕ್ ಸಾಮಾನು ವ್ಯಾಪಾರ ಮಾಡುವರು. ಇವರು ಸಹ ಹಳ್ಳಿ ಹಳ್ಳಿಗಳಲ್ಲಿ ಸುತ್ತಿ, ಇಲ್ಲವೆ ಅದೇ ಊರಿನ ಓಣಿ ಓಣಿಗಳಲ್ಲಿ ಸುತ್ತಿ ವ್ಯಾಪಾರ ಮಾಡುತ್ತಾರೆ. ವ್ಯಾಪಾರಕ್ಕೆ ಹೋದಾಗ ಹೆಂಗಸರು ಅಲಂಕರಿಸಿಕೊಂಡು ಹೋಗುವುದಿಲ್ಲ. ಏಕೆಂದರೆ ಕಾಮುಕರು ಸಾಮಾನು ಖರೀದಿಸುತ್ತೇವೆಂದು ಮನೆಯಲ್ಲಿ ಕರೆದು ಬಾಗಿಲು ಹಾಕಿಕೊಂಡ ಪ್ರಸಂಗಗಳು ಎಷ್ಟೋ ನಡೆದಿವೆಯೆಂದು ಹೇಳುತ್ತಾರೆ. ಆದಕಾರಣ ವ್ಯಾಪಾರಕ್ಕೆ ಮನೆಯ ಒಳಗಡೆ ಹೋಗುವುದಿಲ್ಲ ಏನಿದ್ದರೂ ಬಾಗಿಲಿನ ಹೊರಗೆ ಪುಟ್ಟಿ ಇಳಿಸಿ ವ್ಯಾಪಾರ ಮಾಡುತ್ತೇವೆ ಎಂದು ಹೇಳುತ್ತಾರೆ.

ನಗರದಲ್ಲಿ ಸಾಮಾನು ಕೊಟ್ಟ ವ್ಯಕ್ತಿಯು ಎರಡು ದಿನಕ್ಕೋ ಮೂರು ದಿನಕ್ಕೋ ಅವರ ಜೋಪಡಿಗಳಿಗೆ ಹೋಗಿ ಹಣ ಸಂಗ್ರಹಿಸಿಕೊಳ್ಳುತ್ತಾರೆ. ಇವರು ಸಹ ವ್ಯಾಪಾರವಾದಂತೆಲ್ಲಾ ಸಂಗ್ರಹವಾದಷ್ಟು ಹಣ ಅವರಿಗೆ ಕೊಟ್ಟು ಬಿಡುತ್ತಾರೆ. ಏಕೆಂದರೆ ಇವರು ವ್ಯಾಪಾರ ಮಾಡುವವರು ಹೇಗಾದರೂ ದುಡ್ಡು ಇರುತ್ತವೆಂದು ಕಳ್ಳರು ಬರುವುದು ಹೆಚ್ಚು. ಅದಕ್ಕಾಗಿ ಎಂದಿನ ಸಂಗ್ರಹ ಅಂದೆ ಕೊಡಲು ಪ್ರಯತ್ನಿಸುತ್ತಾರೆ. ಇವರು ಗುಂಪು ಗುಂಪಾಗಿ ವಾಸಮಾಡಿ ಮುಂಜಾನೆ ಬೇರೆ ಬೇರೆ ಊರುಗಳಿಗೆ ವ್ಯಾಪಾರಕ್ಕೆ ಹೋಗುತ್ತಾರೆ.

೮.೧೦.೨. ಸ್ಟೀಲ್ ಮತ್ತು ಸಿಲ್ವರ್ ಪಾತ್ರೆಗಳ ಮಾರಾಟ : ಪ್ಲಾಸ್ಟಿಕ್ ವ್ಯಾಪಾರದಂತೆ ಸ್ಟೀಲ್ ವ್ಯಾಪಾರವು ಅಷ್ಟೆ, ಅಂಗಡಿಯವರಿಂದ ಉದ್ರಿ ಸಾಮಾನುಗಳನ್ನು ಖರೀದಿಸಿ ವ್ಯಾಪಾರಮಾಡಿ ತೀರಿಸುತ್ತಾರೆ. ಇದು ಕೂಡ ಇವರಿಗೆ ಲಾಭವನ್ನು ಕೊಡುವಂತಹ ಉದ್ಯೋಗವಾಗಿದೆ. ಈ ಉದ್ಯೋಗಗಳು ಸೀಜನ್‌ಗಳಲ್ಲಿ ಮಾತ್ರ ಮಾಡುತ್ತಾರೆ. ಉಳಿದ ಸಮಯಗಳಲ್ಲಿ ಕೆಲವರು ಅಲ್ಪ ಸ್ವಲ್ಪ ತುಂಡು ಭೂಮಿಗಳಿದ್ದು ಮಾಡಿಕೊಳ್ಳುವವರೂ ಇದ್ದಾರೆ. ಇಂತಹ ಉದ್ಯೋಗದಲ್ಲಿರುವವರು ಹೆಚ್ಚು ಇಲ್ಲವಾದರೂ ಅಲ್ಲಲ್ಲಿ ಕಾಣುತ್ತಿರುವುದನ್ನು ಗಮನಿಸಬಹುದು. ಹೀಗೆ ಹಲವಾರು ವ್ಯಾಪಾರಗಳಲ್ಲಿ ಎಣಗುತ್ತಿದ್ದಾರೆಂದು ಹೇಳಬಹುದು. ಹೀಗೆ ವೇಷಗಾರಿಕೆಯ ಜೊತೆಗೆ ಇಂತಹ ವೃತ್ತಿಗಳನ್ನು ನಿರ್ವಹಿಸುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ಬುಡ್ಗ ಜಂಗಂವಾಣಿ ರಚನೆ ನಿದಾನ ಕವಿ ವೆಂಕಟೇಶಂ, ೧೯೮೯

೨. ವಂಕರ್ರು ಅರ್ಧಚಂದ್ರಾಕೃತಿಯಲ್ಲಿ ಬಾಗಿಸಿದ ಕಟ್ಟಿಗೆ

೩. ಜಾನಪದ ಉಪಯುಕ್ತ ಕಲೆಗಳು (ಜಾನಪದವಾಹಿನಿ) ದೇ ಜವರೇಗೌಡ, ಪುಟ: ೫೪

೪ ಪಲ್ಲಂಗ ಬಿಡಾರದ ಹಿಂದೆ ಬಂದು ಮೂಲೆಯಲ್ಲಿ ಇಟ್ಟಿರುತ್ತಾರೆ. ಇದು ಮಂಚದ ರೀತಿ ಇರುತ್ತದೆ. ಅದರ ಮೇಲೆ ಸಾಮಾನು ಇಡಲು ಉಪಯೋಗಿಸುತ್ತಾರೆ.

೫. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಬಿ.ಆರ್. ಹಿರೇಮಠ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೬, ಪುಟ: ೬

೬. ಹಗಲುವೇಷದವರ ಸಂಸ್ಕೃತಿ, ಯಳನಾಡ ಅಂಜಿನಪ್ಪ, ಕ.ಸಾ.ಅ. ನೃಪತುಂಗ ರಸ್ತೆ, ಬೆಂಗಳೂರು, ೧೯೯೩, ಪುಟ: ೩೩

೭. ಕೈಪೇಟ ಎರಡು ಇಂಚಿನ ಕಟ್ಟಿಗೆಯ ಅಥವಾ ತಗಡಿನ ಕಟ್ಟಿಗೆಗೆ ಉಡದ ಚರ್ಮ ಹಚ್ಚಿದ ಒಂದು ವಾದ್ಯ

೮. ಕರ್ನಾಟಕದಲ್ಲಿ ವೇಷಗಾರರು ಬಿ.ಎಂ. ಹೊಸಮನಿ, ಪಿಎಚ್.ಡಿ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೯೩, ಪುಟ: ೧೦೨

೯. ಬೇಟೆ, ಸ.ಚಿ.ರಮೇಶ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪುಟ: ೧

೧೦. ಮೊಡಗು : ಆಳವಾದ ಕುಣಿ, ನೀರು ಅಲ್ಲೆ ಸುತ್ತುತ್ತಾ ಇರುತ್ತವೆ. ಮೊಸುಳೆ ಅಂತಹ ಪ್ರದೇಶಗಳಲ್ಲಿ ವಾಸಿಸುವುದು ಹೆಚ್ಚು

೧೧. ಪೆಂಟ : ಇಲಿಗಳು ವಾಸಮಾಡುವ ದೊಡ್ಡ ಬಿಲ

೧೨. ಹಗಲುವೇಷದವರ ಸಂಸ್ಕೃತಿ ಯಳನಾಡ ಅಂಜಿನಪ್ಪ, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೩, ಪುಟ: ೭೨

¤ ¤ ¤ ¤ ¤

ಅಧ್ಯಾಯ ೯

ಉಪಸಂಹಾರ

ಉಪಸಂಹಾರ

ಮಾನವ ಉಳಿದೆಲ್ಲಾ ಜೀವರಾಶಿಗಳಿಗಿಂತ ಭಿನ್ನ ಕಾರಣ ಅವನಲ್ಲಿರುವ ವಿಜ್ಞಾನ ಮತ್ತು ವಿಚಾರವಂತಿಕೆ. ಆದುದರಿಂದ ಮಾನವ ಸಮಾಜ ಕಾಲ ಕಾಲಕ್ಕೆ ಗತಿಶೀಲವಾಗಿದೆ. ಅಲ್ಲದೆ ಸಂಕೀರ್ಣ ರಚನೆಯನ್ನು ಹೊಂದಿ, ಪರಿವರ್ತನಶೀಲವೂ ಆಗಿ, ಇಂದು ವೈಜ್ಞಾನಿಕ ಯುಗವನ್ನು ದಾಟಿ ಉಪಗ್ರಹ ಯುಗಕ್ಕೆ ತಲುಪಿದ್ದಾನೆ. ಇಷ್ಟೆಲ್ಲಾ ಜ್ಞಾನವಂತನಾಗಿ ಬೆಳೆದರೂ ಎಲ್ಲಾ ಮಾನವ ಕುಲ ಒಂದೇ ರೀತಿಯಾದ ಬದುಕನ್ನು ಹೊಂದಿಲ್ಲ. ಕಾರಣ ಅವರಿಗೆ ಲಭ್ಯವಾದ ಸೌಲತ್ತುಗಳು ಅದೇ ರೀತಿ ಮಾನವ ಸಮುದಾಯಗಳೂ ತಮಗೆ ದೊರೆತ ಅನುಕೂಲಗಳನ್ನು ಬಳಸಿಕೊಂಡು ತಮ್ಮ ತಮ್ಮ ಬೆಳವಣಿಗೆಯನ್ನು ಮುಂದುವರಿಸಿಕೊಂಡು ಬಂದಿವೆ. ಈ ಹಿನ್ನೆಲೆಯಲ್ಲಿ ಅನೇಕ ಸಮುದಾಯಗಳು ಯಾವುದೇ ಬೆಳವಣಿಗೆಯನ್ನು ಕಾಣದೆ ಹಿಂದುಳಿಯಬೇಕಾಯಿತು. ಹಗಲುವೇಷಗಾರರು ಸಹ ಇಂತಹ ಯಾವುದೇ ಬೆಳವಣಿಗೆಯನ್ನು ಕಾಣದೆ ಹಿಂದುಳಿದ ಸಮುದಾಯದವರಾಗಿದ್ದಾರೆ. ಅನೇಕ ಬುಡಕಟ್ಟುಗಳು ಹಲವಾರು ಸಂದರ್ಭಗಳಲ್ಲಿ ಸಾಮಾಜಿಕ ಶೋಷಣೆಗೆ ಒಳಗಾಗುತ್ತಲೇ ಇವೆ.

ಈ ಸಮುದಾಯದ ಆಚಾರ, ವಿಚಾರ, ಸಂಸ್ಕೃತಿ, ಧರ್ಮ, ಕುಟುಂಬ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಮೌಲ್ಯಗಳು ನೀತಿ ಮುಂತಾದ ಎಲ್ಲಾ ಬಗೆಯ ಅಂಶಗಳನ್ನೊಳಗೊಂಡ ಬಳ್ಳಾರಿ ಮತ್ತು ಆಂಧ್ರಗಡಿಭಾಗದಲ್ಲಿ ಬೆಳೆದು ಬಂದಿರುವ ಸಾಮಾಜಿಕ ಜೀವನವನ್ನು ಕುರಿತು ವಿವೇಚನೆ ಮಾಡಲಾಗಿದೆ. ಈ ಸಮುದಾಯವು ಸಮಾಜವಿಜ್ಞಾನ ಮತ್ತು ತಾಂತ್ರಿಕ ಮುನ್ನಡೆಯಲ್ಲಿ ಬಹಳ ಹಿಂದುಳಿದಿದೆ. ಅಂತೆಯೇ ಅಲ್ಲಿಯ ಜನಜೀವನವೂ ಸರಳ ರೀತಿಯ ಜೀವನೋಪಕರಣಗಳ ಉಪಯುಕ್ತತೆಯ ಆಧಾರದ ಮೇಲೆ ರೂಪಿತವಾಗಿದೆ. ಇವರ ಸಂಸ್ಕೃತಿಯನ್ನು ಕಟ್ಟಿಕೊಡುವ ಮತ್ತು ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಇದಾಗಿದೆ.

ಕೂಳಿಗಾಗಿ ಕೋಟಿ ವಿದ್ಯೆ ಎನ್ನುವಂತೆ ಮಾನವ ತನ್ನ ಆಹಾರಕ್ಕಾಗಿ ಏನೇನನ್ನೆಲ್ಲಾ ಶ್ರಮ ಪಡುತ್ತಿದ್ದಾನೆ. ಎಲ್ಲಾ ಮಾನವರು ವಿಧವಿಧವಾಗಿ ದುಡಿಯುವ ಶ್ರಮವೆಲ್ಲವೂ ಕೂಳಿಗಾಗಿಯೇ ಎನ್ನುವುದು

[illegible]

[illegible]

[illegible]

[illegible]

ಸರ್ವ ವಿಧಿತ. ಈ ಸಮುದಾಯವೂ ಸಹ ಇಷ್ಟೆಲ್ಲಾ ವೇಷಗಾರಿಕೆಯ ಕಲೆ ಮತ್ತು ಬುರ್ರಕಥೆಗಳನ್ನು ಹೇಳುವುದು ಅದಕ್ಕಾಗಿಯೇ. ಇವರಲ್ಲಿ ಅಂತರ್ಗತವಾಗಿ ಬಂದಿರುವ ಈ ಕಲೆಗಳು ಇಡೀ ಭಾರತೀಯ ಸಮಗ್ರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಒಂದೊಂದು ವೇಷವೂ ಒಂದೊಂದು ಬುರ್ರಕಥೆಗಳೂ ಒಂದು ಮಹಾಕಾವ್ಯ ನೀಡಬಹುದಾದ ತೃಪ್ತಿ ಸಮಾಜಕರಲ್ಲಿ ಈ ಕಲೆ ನೀಡುತ್ತವೆ. ಭಾರತೀಯ ಸಂಸ್ಕೃತಿಯ ಮೌಲ್ಯಗಳು, ಮಾನವೀಯ ಮೌಲ್ಯಗಳು, ಸಮಾಜಿಕ ಸಂಬಂಧಗಳು, ಇತಿಹಾಸ ಮತ್ತು ಪೌರಾಣಿಕ, ಸಮಾಜದ ವಿಷಯಗಳ ಬಗ್ಗೆ ಇವರಿಗೆ ಇರುವ ಪ್ರೀತಿ ಅನನ್ಯವಾದದ್ದು. ಇವರ ವೇಷಗಳ ಮುಖ್ಯ ಉದ್ದೇಶ ಮನೋರಂಜನೆಯ ಮೂಲಕ ಸಮಾಜದ ಹುಳುಕನ್ನು ತಿದ್ದುವ ಕೆಲಸ ಪ್ರತಿಯೊಂದು ವೇಷ, ಪ್ರತಿಯೊಂದು ಬುರ್ರಕಥೆಯು ಇದೇ ಫಲಿತವನ್ನು ನೀಡುತ್ತವೆ. ಪೌರಾಣಿಕ, ಚಾರಿತ್ರಿಕ ವಿಷಯಗಳು ಇವರ ಕಥೆಗಳಾಗುತ್ತವಲ್ಲದೆ, ಸಮಾಜದಲ್ಲಿ ಕಂಡ ವ್ಯಕ್ತಿಗಳ ಚಿತ್ರಣವೂ ಕೂಡ ಇವರಿಗೆ ಕಥೆಗಳಾಗಿವೆ. ಪರಂಪರಾಗತವಾಗಿ ಬಂದಿರುವ ಇವರ ವೇಷಗಾರಿಕೆಯ ಕಲೆಗಳನ್ನು ಸಮಗ್ರವಾಗಿ ವೀಡೀಯೋದಲ್ಲಿ ಸೆರೆ ಹಿಡಿಯಬೇಕಾದ ಅವಶ್ಯಕತೆ ಇದೆ. ಇವರಲ್ಲಿ ೬೦ಕ್ಕೂ ಹೆಚ್ಚು ಬುರ್ರಕಥೆಗಳು ಪ್ರಚಲಿತದಲ್ಲಿದ್ದು ಅವೆಲ್ಲವೂ ಒಂದೊಂದು ಮಹಾಕಾವ್ಯಗಳಾಗುತ್ತವೆ. ಅವೆಲ್ಲವನ್ನು ಸಂಗ್ರಹಿಸಬೇಕಾದ ಅಗತ್ಯತೆಯನ್ನು ಇಲ್ಲಿ ಮನಗೂಡಿದೆ.

ಈ ಹಗಲುವೇಷಗಾರರ ಕುರಿತು ಇದುವರೆಗೂ ನಡೆದಿರುವ ಪರಿಚಯಾತ್ಮಕ ವಿಷಯವನ್ನು ಗಮನದಲ್ಲಿರಿಸಿಕೊಂಡು ಹೆಚ್ಚಿನ ಹಾಗೂ ಮೌಲಿಕ ವಿಚಾರಗಳನ್ನು ವಿವೇಚಿಸಲಾಗಿದೆ. ಇವರ ಪರಂಪರೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಸಮಾಜ ಸಂಸ್ಕೃತಿಯ ಚಿತ್ರಣವನ್ನು ಕೊಡಲಾಗಿದೆ. ಮತ್ತು ಸಾಮಾಜಿಕ ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ವಿವರಣೆ ನೀಡಲಾಗಿದೆ.

ಈ ಸಮುದಾಯವು ತೆಲುಗು, ಕನ್ನಡ ಮಾತನಾಡುತ್ತಿದ್ದು ಇವರಲ್ಲಿಯೇ ಒಂದು ಅಂತರಿಕ ಭಾಷೆಯೊಂದಿದೆ ಅದನ್ನು ಇವರು ಮರುಗು ಭಾಷೆ ಎಂದು ಕರೆಯುತ್ತಾರೆ. ಈ ಭಾಷೆಗಳನ್ನು ಪರಿಚಾಯತ್ಮಕತೆಯ ಜೊತೆಗೆ ವಿವರಿಸಲಾಗಿದೆ.

ಇವರಲ್ಲಿ ವಿಶಿಷ್ಟವಾಗಿರುವಂತಹ ನ್ಯಾಯಪದ್ಧತಿಯನ್ನು ನೀಡಲಾಗಿದೆ. ಇವರಲ್ಲಿ ನ್ಯಾಯ ವಿಭಾಗವು ಹಲವು ರೀತಿಯಲ್ಲಿ ಒಳಗೊಂಡಿದ್ದು ಇಂದಿಗೂ ಸಹ ಇವರು ಕೋರ್ಟು ಕಛೇರಿಗೆ ಹೋಗುವುದಿಲ್ಲ. ತಮ್ಮ ಸಮುದಾಯದಲ್ಲಿಯೇ ಪಂಚಾಯಿತಿ ಹೂಡಿ ಬಗೆಹರಿಸಿಕೊಳ್ಳುತ್ತಾರೆ. ಇವರಲ್ಲಿ ನ್ಯಾಯಪಂಚಾಯಿತಿ, ಕಳ್ಳ ಪಂಚಾಯಿತಿ, ಕಡ್ಡಿ ಪಂಚಾಯಿತಿ ಇನ್ನು ಮುಂತಾದವುಗಳನ್ನು ಯಥಾವತ್ತಾದ ಅಧ್ಯಯನದ ತಿರುಳನ್ನು ನೀಡಲಾಗಿದೆ.

ಇವರ ಜೀವನೋಪಾಯಕ್ಕೆ ವೇಷಗಾರಿಕೆಯೇ ಮುಖ್ಯ ವೃತ್ತಿಯಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಇವರ ಕಲೆಗೆ ಸರಿಯಾದ ಬೆಲೆ ಸಿಗದೆ ಇನ್ನು ಬೇರೆ ರೀತಿಯ ಪರ್ಯಾಯ ವ್ಯವಸ್ಥೆಗಾಗಿ ತಡಕಾಡುತ್ತಿದ್ದಾರೆ. ಸಂಪ್ರದಾಯದಿಂದಲೂ ಬಂದಂತಹ ಇನ್ನೊಂದು ಸಂಪ್ರದಾಯಿಕ ಶೈಲಿಯ ಬೇಟೆಯು ಸಹ ಇವರಲ್ಲಿ

ರೂಢಿಯಲ್ಲಿದೆ. ಕಾಡಿನಲ್ಲಿ ವಾಸಿಸುವ ಹಲವಾರು ಪ್ರಾಣಿಪಕ್ಷಿಗಳನ್ನು ಇವರ ಭಾಷೆಯಲ್ಲಿ ಏನೆಂದು ಕರೆಯುತ್ತಾರೆ. ಮತ್ತು ಯಾವ ರೀತಿಯಲ್ಲಿ ಬೇಟೆಯಾಡುತ್ತಾರೆ ಎಂದು ಹೇಳಲಾಗಿದೆ. ಇಂದು ಅನಿವಾರ್ಯವಾಗಿ ಕೈಗೊಂಡ ಸಣ್ಣ ಕೈಗಾರಿಕೆ ತಮಗೆ ಬೇಕಾದ ಮನೆಸಾಮಾನು ಕೌದಿ, ಜೋಳಿಗೆ, ಬೇಟೆಯ ಪರಿಕರಗಳು ತಾವೇ ತಯಾರಿಸಿಕೊಳ್ಳುತ್ತಿದ್ದರು. ಈ ಕುರಿತು ಕೆಲವು ಅಂಶಗಳನ್ನು ಈ ಅಧ್ಯಯದ ಮೂಲಕ ಕಂಡುಕೊಳ್ಳಲಾಗಿದೆ.

ಈ ಅಧ್ಯಯನಕ್ಕೆ ಆರಿಸಿಕೊಂಡ ಭೌಗೋಳಿಕ ಹಿನ್ನೆಲೆಯನ್ನು ನೀಡಲಾಗಿದೆ. ಅಲ್ಲದೆ ಈ ಪ್ರದೇಶಗಳಿಗೆ ಇರುವ ಅವಿನಾಭಾವ ಸಂಬಂಧವನ್ನು ತಿಳಿಸಲಾಗಿದೆ. ಈ ಸಮುದಾಯದ ಪ್ರಸಾರ ಯಾವ ರೀತಿ ಆಯಿತು. ಇವರಿಗೆ ಮತ್ತು ಸುಡುಗಾಡು ಸಿದ್ಧರಿಗೆ ಸಾಮ್ಯತೆಯನ್ನು ಗುರುತಿಸಲಾಗಿದೆ. ಹಗಲುವೇಷಗಾರರ ಬಳಿಗಳನ್ನು ಗುರುತಿಸಲಾಗಿದೆ. ಇವರಲ್ಲಿ ೧೫೯ ಬಳಿಗಳಿದ್ದು ಈ ಬಳಿಗಳಿಗೆ ಇರುವ ಪ್ರದೇಶ, ಪ್ರಕೃತಿ, ಪ್ರಾಣಿ ಇನ್ನು ಮುಂತಾದ ಸಂಬಂಧಗಳನ್ನು ಗುರ್ಧುತಿಸಲಾಗಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಈ ನಾಲ್ಕು ಪ್ರದೇಶಗಳ ತೌಲನಿಕ ಅಧ್ಯಯನ ನಡೆಸಿದರೆ ಇನ್ನು ಹೆಚ್ಚಿನ ಬಳಿಗಳು ಕಾಣಸಿಕ್ಕು ಇನ್ನು ಹೆಚ್ಚಿನ ಬೆಳಕು ಚೆಲ್ಲುತ್ತದೆ.

ಇವರು ಹೆಚ್ಚಾಗಿ ಊರು, ನಗರದ ಹೊರವಲಯಗಳಲ್ಲಿ, ಗುಡ್ಡಗಾಡಿನ ಬದಿಯಲ್ಲಿ ಬಿಡಾರಗಳನ್ನು ಹಾಕಿಕೊಂಡು ವಾಸಮಾಡುತ್ತಾರೆ. ಇತ್ತೀಚಿಗೆ ಸರಕಾರದ ಯೋಜನೆಗಳಲ್ಲಿ ಕೆಲವರಿಗೆ ಮನೆಗಳ ವ್ಯವಸ್ಥೆ ದೊರಕಿವೆ. ಇನ್ನು ಹಲವಾರು ಕುಟುಂಬಗಳಿಗೆ ದೊರಕುವ ಅವಶ್ಯಕತೆಯನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಅವಿಭಕ್ತಿ ಕುಟುಂಬ ಪದ್ಧತಿ ಇವರಲ್ಲಿ ಜಾರಿಯಲ್ಲಿದೆ. ಪಿತೃವಿಗೇ ಮೊದಲ ಸ್ಥಾನ. ಇವರಲ್ಲಿ ಗಂಡಿಗೆ ಇರುವಷ್ಟೇ ಸ್ಥಾನ ಹೆಣ್ಣಿಗೂ ಇದೆ. ಗಂಡಿಗೆ ಸಮಪ್ರಮಾಣದಲ್ಲಿ ಹೆಣ್ಣು ಸಹ ದುಡಿಯುತ್ತಾಳೆ. ಗಂಡು ವೇಷಗಾರಿಕೆಯಿಂದ ದುಡಿದರೆ ಹೆಣ್ಣು ಭಿಕ್ಷೆಗಾರಿಕೆಯಿಂದ ದುಡಿಯುತ್ತಾಳೆ. ಎಲ್ಲಾ ಮುಂದುವರೆದ ಜನಾಂಗಗಳಲ್ಲಿ ವರದಕ್ಷಿಣೆ ಪದ್ಧತಿ ಇದ್ದರೆ ಇವರಲ್ಲಿ ವಧುದಕ್ಷಿಣೆ ಪದ್ಧತಿ ಪೂರ್ವದಿಂದ ಇಂದಿನವರೆಗೆ ಅದೇ ವ್ಯವಸ್ಥೆ ಆಚರಣೆಯಲ್ಲಿದೆ. ಇದನ್ನು ತೆರ ಎಂದು ಕರೆಯುತ್ತಾರೆ. ಬಳಿಗಳು ತಂದೆಯಿಂದ ಮಗನಿಗೆ ಬರುತ್ತವೆ. ಇವರಲ್ಲಿ ಮರುವಿವಾಹ ಪದ್ಧತಿ ಇದೆ. ವಿವಾಹ ವಿಚ್ಛೇದನ ವ್ಯವಸ್ಥೆಯೂ ಇದೆ. ದ್ವಿಪತ್ನಿತ್ವ ಇವರ ಜಾತಿಯಲ್ಲಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಇವರ ಬಗ್ಗೆ ಪ್ರಚಾರದಲ್ಲಿರುವ ಐತಿಹಾಸಿಕ, ಪೌರಾಣಿಕವಾಗಿ ಪ್ರಚಾರದಲ್ಲಿರುವ ಘಟನೆ ಮತ್ತು ಈ ಸಮುದಾಯ ಹುಟ್ಟಿದ ಬಗ್ಗೆ ದಂತಕಥೆ, ಶಾಸನ ಸಮೀಕ್ಷೆ, ಸಾಹಿತ್ಯ ಸಮೀಕ್ಷೆಯನ್ನು ಮಾಡಲಾಗಿದೆ.

ಇವರ ಆಚರಣೆಗೆ ಸಂಬಂಧಿಸಿದಂತೆ ಈ ಸಮುದಾಯದಲ್ಲಿ ಆಚರಣೆಯಲ್ಲಿರುವ ಜನನ, ಋತುಮತಿ,

ವಿವಾಹಗಳಂತಹ ಸಂದರ್ಭದಲ್ಲಿ ಆಚರಿಸುವ ಆಚರಣೆ, ಧಾರ್ಮಿಕ ಆಚರಣೆಗಳು, ವೈದ್ಯ ಪದ್ಧತಿ, ನಂಬಿಕೆ ನಿಷೇಧಗಳನ್ನು ಕಟ್ಟಿಕೊಡಲಾಗಿದೆ.

ಇವರಲ್ಲಿ ದೇವರ ವಿಚಾರಕ್ಕೆ ಬಂದಾಗ ಪ್ರಕೃತಿಯೇ ಇವರಿಗೆ ದೇವರಾಗಿದೆ. ಜಂಬೆ ಗಿಡವನ್ನು ಜಂಬಲಮ್ಮ ಎಂದು ಬೇವಿನಗಿಡವನ್ನು ಯಲ್ಲಮ್ಮ ಎಂದು ಪೂಜಿಸುತ್ತಾರೆ. ಇವರು ಸತ್ತ ತಮ್ಮ ಹಿರಿಯರನ್ನು ಪೂಜಿಸುತ್ತಾರೆ. ಪ್ರೇತಾರಾಧನೆ ಮಾಡುತ್ತಾರೆ. ಶ್ರೈಶೈಲ ಮಲ್ಲಿಕಾರ್ಜುನನ್ನು ಪೂಜಿಸುತ್ತಾರೆ. ರಾಘುವೇಂದ್ರನನ್ನು ಪೂಜಿಸುತ್ತಾರೆ. ಪೀರಲದೇವರನ್ನು ಪ್ರೀತಿಸುತ್ತಾರೆ. ಹೀಗೆ ಇವರಲ್ಲಿ ಸರ್ವಧರ್ಮ ಸಮನ್ವಯ ದೃಷ್ಟಿ ಇದೆ. ಕೆಲವರು ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಯನ್ನು ದೇವರೆಂದು ಪೂಜಿಸುತ್ತಾರೆ. ಯಾವ ಪ್ರಾಣಿಯನ್ನು ಮನೆದೇವರಾಗಿ ಹೊಂದಿರುತ್ತಾರೋ, ಅಂತಹ ಪ್ರಾಣಿಗಳನ್ನು ಕೊಲ್ಲುವುದಿಲ್ಲ ಮತ್ತು ಭಕ್ಷಿಸುವುದಿಲ್ಲ. ಇವರು ಹಾವಿನ ಹುತ್ತವನ್ನು ಪೂಜಿಸುತ್ತಾರೆ. ಈ ಎಲ್ಲಾ ವ್ಯವಸ್ಥೆ ನೋಡಿದರೆ ಇವರು ದ್ರಾವಿಡ ಮೂಲದವರು ಎಂದು ಮಾನವಕುಲ ಶಾಸ್ತ್ರ ಮತ್ತು ಸಮಾಜಶಾಸ್ತ್ರಜ್ಞರ ಅಧ್ಯಯನದ ಪ್ರಕಾರ ತಿಳಿಯುತ್ತದೆ.

ತೆಲುಗು ಇವರ ಮುಖ್ಯ ಭಾಷೆಯಾಗಿದ್ದು ಕನ್ನಡ, ಮರಾಠಿ, ತಮಿಳು ಭಾಷೆಗಳನ್ನು ಕೂಡ ಹೃದ್ಗತ ಮಾಡಿಕೊಂಡಿದ್ದಾರೆ. ತಮ್ಮ ಬಿಡಾರದಲ್ಲಿ ತೆಲುಗು ಮಾತನಾಡಿದರೆ ಹೊರಗಡೆ ಬಂದಾಗ ಯಾವ ಪ್ರದೇಶಗಳಲ್ಲಿರುತ್ತಾರೇ ಆ ಭಾಷೆ ಮಾತನಾಡುತ್ತಾರೆ. ಯಾವ ಪ್ರದೇಶದಲ್ಲಿ ಹೊಂದಿಕೊಳ್ಳುತ್ತಾರೆಯೋ ಆ ಭಾಷೆಯನ್ನು ಸುಲಭವಾಗಿ ಕಲಿಯಬಲ್ಲವರಾಗಿದ್ದಾರೆ. ಇದು ಇವರಿಗೆ ರೂಢಿಯಾಗಿ ಬಂದಿದೆ.

ಮುಖ್ಯವಾಗಿ ಈ ಸಮುದಾಯವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿದ್ದಾರೆ. ಹಲವಾರು ವಿದ್ಯಾರ್ಥಿಗಳು ಇವರ ಹೆಸರಿನಲ್ಲಿ ಜಾತಿಪ್ರಮಾಣ ಪತ್ರಗಳು ನೀಡಲು ನಿರಾಕರಿಸಿದ್ದರಿಂದ ಬಹಳಷ್ಟು ಜನರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇವರ ಕಲಾಪೋಷಣೆಗೆ, ಕಾಲಸಾಮಗ್ರಿಗಳು, ಬಸ್ ಮತ್ತು ರೈಲುಗಳಲ್ಲಿ ಉಚಿತ ಪ್ರಮಾಣ ವ್ಯವಸ್ಥೆ, ವೃದ್ಧಾಪ್ಯವೇತನ ನೀಡುವುದರ ಮುಖಾಂತರ ಈ ಕಲೆಯನ್ನು ಗೌರವಿಸಬೇಕಾಗಿದೆ. ಇಂದು ರೇಡಿಯೋ, ಟೆಲಿವಿಜನ್, ಕಂಪ್ಯೂಟರ್ ಸಿನಿಮಾದಂತಹ ಅತ್ಯಾಧುನಿಕ ಮಾಧ್ಯಮಗಳ ಪ್ರವೇಶದಿಂದ ಇವರ ಕಲಾ ಪ್ರಕಾರ ಇಂದು ನಶಿಸಿಹೋಗುತ್ತದೆ. ಇಂತಹ ಕಲೆಗಳನ್ನು ಸಾಮಾಜಿಕರು ಪೋಷಣೆ ಮಾಡುವುದರ ಮುಖಾಂತರ ಉಳಿಸಿಕೊಳ್ಳಬಹುದು.

¤ ¤ ¤ ¤ ¤

ಅನುಬಂಧ

ಪರಮಾರ್ಶನಗ್ರಂಥ
ಹಾಡುಗಳು
ಅರ್ಥಕೋಶ
ಗಾದೆಮಾತುಗಳು
ಒಡಪುಗಳು
ವಕ್ತೃವಿವರ
ವ್ಯಕ್ತಿ ಪರಿಚಯ
ಛಾಯಚಿತ್ರಗಳು

ಪರಾಮರ್ಶನ ಗ್ರಂಥಗಳು

೧. ಅಕ್ಕಮಹಾದೇವಿ, ಬುಡಕಟ್ಟು ನ್ಯಾಯ, ಪ್ರಸಾರಾಂಗ ಮೈಸೂರು ವಿ.ವಿ ೧೯೮೪

೨. ಅರ್ವಿಯಾಯಸ್ ಸುಂದರಂ, ಆಂಧ್ರಪ್ರದೇಶದ ಜಾನಪದ, ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ಹೊಸದೆಹಲಿ, ೧೯೭೮

೩. ಆರಾಧ್ಯ ಬಿ೧೦ ಎಂ, ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ, ಅಪ್ಪು ಪ್ರಕಾಶನ, ರಾಜಾಜಿ ನಗರ, ಬೆಂಗಳೂರು, ೧೯೮೫

೪. ಎಲ್ಲಪ್ಪ ಕೆ ಕೆ , ದೊಕ್ಕಲು ಮಕ್ಕಳು ಒಂದು ಅಧ್ಯಯನ, ಶ್ರೀ ದುರ್ಗಾಪ್ರಸಾಶನ, ಕೆ.ಕೆ. ಪುರ ರಾಂಪುರ, ೧೯೯೭

೫. ಕರೀಂಖಾನ್ ಕೆ ಎಸ್, ಕರ್ನಾಟಕ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೮೯

೬. ಕಲಬುರ್ಗಿ ಎಂ ಎಂ, ಬಸವಣ್ಣನವರ ಟೀಕಿನ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯

೭. ಕಲಬುರ್ಗಿ ಎಂ. ಜಾನಪದ ದರ್ಶನ ಭಾಗ ೬ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೮. ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಕರ್ನಾಟಕ ಭಾರತ ಕಥಾಮಂಜರಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೯. ಖಂಡೋಬಾ ಪಿ ಕೆ, ಕರ್ನಾಟಕದಲ್ಲಿ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್ ಗುಲಬರ್ಗಾ ೧೯೯೧

೧೦. ತಿಪ್ಪೇರುದ್ರಸ್ವಾಮಿ ಹೆಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ ಕೃಷ್ಣಮೂರ್ತಿಪುರಂ ಮೈಸೂರು, ೧೯೬೮

೧೧. ಜವರೇಗೌಡ, ಜಾನಪದ ಅಧ್ಯಯನ ಸಂಪ್ರದಾಯಗಳು ಮತ್ತು ಹಬ್ಬಗಳು, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೭೮

೧೨. ದಾಸನೂರು ಕೂಸಣ್ಣ, ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ಮೈಸೂರು, ೧೯೯೮

೧೩. ನಾಗೇಗೌಡ ಹೆಚ್ ಎಲ್, ಜಾನಪದ ಜಗತ್ತು ವಿಶೇಷ, ಸಂಚಿಕೆ ಸಂಪುಟ ೯, ಸಂಚಿಕೆ ೫ ಮತ್ತು ೬, ಕರ್ನಾಟಕ ಜಾನಪದ ಟ್ರಸ್ಟ್ಂ ರಿ ಬೆಂಗಳೂರು ೧೯೯೮

೧೪. ನಾಯಕ ಜಿ.ಹೆಚ್, ಕವಿರಾಜಮಾರ್ಗ ಶತಮಾನದ ಕನ್ನಡ ಸಾಹಿತ್ಯ ರಾಘವೇಂದ್ರ ಪ್ರಕಾಶನ, ಅಂಕೋಲಾ ೨೦೦೦

೧೫. ನರಸಿಂಹಾಚಾರ್ ಡಿ ಎಲ್, ವಡ್ಡಾರಾಧನೆ, ಶಾರದಾ ಮಂದಿರ, ಮೈಸೂರು ೧೯೭೦

೧೬. ಪ್ರಭಾಕರ್ ಎ ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦

೧೭. ಹಳೆಕಟ್ಟೆ ಫ ಗು, ಹರಿಹರನ ರಗಳೆಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೩

೧೮. ಹಿರೇಮಠ ಬಿ ಆರ್, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೩

೨೦. ಭಾನುಮತಿ ವೈ ಸಿ, ಮಲೆನಾಡ ಶೈವ ಒಕ್ಕಲಿಗರು ಜನಪದೀಯ ಅಧ್ಯಯನ, ಕೇಶವ ಪ್ರಕಾಶನ, ಮೈಸೂರು

೨೧. ಮರಳ ಸಿದ್ದಪ್ಪ ಕೆ, ವಚನ ಕಮ್ಮಟ, ಪ್ರಾಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೯

೨೨. ಮರಿಯಪ್ಪ ಭಟ್ಟ ಎ ಮತ್ತು ಗೋಪಾಲ್‌ರಾವ್ ಎಂ, ವರ್ಧಮಾನ ಪುರಾಣ, ಪ್ರಕಾಶನ ತೃಡಿತ

೨೩. ಮಹದೇವಯ್ಯ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೪. ಮಹೇಶ್ವರಪ್ಪ, ಭಾರತದಲ್ಲಿ ವಿವಾಹ ಮತ್ತು ಕುಟುಂಬ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮

೨೫. ಮರಿಯಪ್ಪ ಭಟ್ಟ ಎಂ, **ಸಂಕ್ಷಿಪ್ತ ಕನ್ನಡ ನಿಘಂಟು**, ಕನ್ನಡ ಸಾಹಿತ್ಯ ಪರಿಷತ್ ಚಾಮರಾಜಪೇಟೆ, ಬೆಂಗಳೂರು, ೧೯೭೫

೨೬. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪೆ, ೧೯೯೯

೨೭. ಯಳನಾಡ ಅಂಜಿನಪ್ಪ, **ಹಗಲುವೇಷದವರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨೮. ರಂಜಾನ್ ದರ್ಗಾ, **ನೆಲ್ಸನ್ ಮಂಡೇಲಾ**, ಬೆಂಗಳೂರು ವಿಶ್ವವಿದ್ಯಾಲಯ, ೧೯೯೦

೨೯. ರಾಮೇಶ್ವರ ಎ ಕೆ, **ಹಣಚಿ ಬಟ್ಟಿನ ಕೈ**, ಕವಿರಾಜ ಪ್ರಕಾಶನ ಮತೋಶ್ರೀ ಗೋದುತಾಯಿ, ಗುಲ್ಬರ್ಗಾ, ೧೯೮೪

೩೦. ಲಕ್ಕಪ್ಪಗೌಡ ಎಚ್ ಜೆ, **ಡಾ ಸಾ ಶಿ ಅಬಿಜ್ಞಮರುಳಯ್ಯ ಅಭಿನಂದನ ಗ್ರಂಥ**

೩೧. ವೆಂಕಟಗಿರಿ ದಳವಾಯಿ, ಬಳ್ಳಾರಿ ಜಿಲ್ಲೆಯ **ಸಮಕಾಲೀನ ಕಾವ್ಯ**, ಗೌತಮ ಪ್ರಕಾಶನ, ಬಳ್ಳಾರಿ, ೧೯೯೭

೩೨. ಶಾಮಶಾಸ್ತ್ರಿ ಆರ್, **ಕಂಠೀರವ ನರಸರಾಜ ವಿಜಯ**, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ ಮೈಸೂರು, ೧೯೭೧

೩೩. **ಶಾಮಶಾಸ್ತ್ರಿ, ಧರ್ಮಾಮೃತಂ**, ಮೈಸೂರು ವಿ.ವಿ. ಮೈಸೂರು, ೧೯೨೬

೩೪. ಸೀತರಾಮ್‌ಜಾಗಿರದಾರ್ ಲೇ., **ಕಬ್ಬಿನಹಾಲು**, ಶ್ರೀ ಶಂಕರಗೌಡರ ಅಭಿನಂದನಾ ಗ್ರಂಥ,

೩೫. ಸೀತಾರಾಮಯ್ಯ ಎಂ ವಿ, **ಕವಿರಾಜಮಾರ್ಗ**, ಕರ್ನಾಟಕ ಸಂಘ ಸಹಕಾರಿ ಸೈನ್ಸ್ ಮತ್ತು ಆರ್ಟ್ಸ್ ಕಾಲೇಜು, ಬೆಂಗಳೂರು, ೧೯೬೮

೩೬. ಸುಂಕಾಪುರ ಎಂ ಎಸ್,ಲೇ ಎಂ ಎಂ ಕಲಬುರ್ಗಿ, **ಜನಪದ ಸಾಹಿತ್ಯ ದರ್ಶನ ಭಾಗ ೬**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೩೭. ಸುಂಕಾಪುರ ಎಂ ಎಸ್, **ಸಕಲ ಪುರಾತನರ ವಚನಗಳು**, ಸಂ. ೨, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ, ೧೯೭೬

೩೮. ಹಿರೇಮಠ್ ಆರ್ ಸಿ, **ಚನ್ನಬಸಣ್ಣನವರ ವಚನಗಳು**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧

೩೯. ಹಿರೇಮಠ್ ಆರ್ ಸಿ, **ಬಸವಣ್ಣನವರ ವಚನಗಳು**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

೪೦. ಹಿರೇಮಠ್ ಆರ್ ಸಿ, **ಸಂಕೀರ್ಣ ವಚನ ಸಂಪುಟ ೮**, ಜನಪ್ರೀಯ ಆವೃತ್ತಿ

೪೧. ಹೊಸಮನಿ ಬಿ ಎಂ, **ಕರ್ನಾಟಕದಲ್ಲಿ ವೇಷಗಾರರು ಒಂದು ಸಾಂಸ್ಕೃತಿಕ ಅಧ್ಯಯನ**, ಪಿಎಚ್.ಡಿ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩

ನಿಘಂಟು ಮತ್ತು ಗ್ಯಾಸೆಟಿಯರ್‌ಗಳು

೧. ಕನ್ನಡ ಕಸ್ತೂರಿ ಅರ್ಥ ಕೋಶ, ಸಂಕೇಶ್ವರ ಪ್ರಕಾಶನ, ಗದಗ

೨. ಜನಪದ ಗಂಗೋತ್ರಿ, ಸಂಚಿಕೆ ೪, ಜೂನ್, **ಆಚರಣೆ ಮತ್ತು ಉಗ್ರ ಆಚರಣೆಗಳು**, ದೇವೇಂದ್ರಕುಮಾರ್ ಹಕಾರಿ ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು, ೧೯೯೬

೩. ಜನಪದ ಗಂಗೋತ್ರಿ, ಸಂಪುಟ ೯, ಸಂ ಲಕ್ಕಪ್ಪಗೌಡ ಎಚ್ ಜೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಕ ಬೆಂಗಳೂರು, ೧೯೯೭

೪. ಪ್ರಬುದ್ಧ ಕರ್ನಾಟಕ, ಡಾ ಎಂ ಚಿದಾನಂದ ಮೂರ್ತಿ, ಸಂ ೫೫,

೫. ಕನ್ನಡ ಜಾನಪದ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಲಕ್ಕಪ್ಪಗೌಡ .ಎಚ್.ಜೆ, ಪ್ರ.ಸಂ. ಕರ್ನಾಟಕ ಬುಡಕಟ್ಟುಗಳು ಸಂ-೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮

೭. ಕನ್ನಡ ಕನ್ನಡ ನಿಘಂಟು ಮೂರನೇ ಸಂಪುಟ, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು

೮. ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧, ೧೯೮೪

೯. ಬ್ರೌಣ್ಯ ಇಂಗ್ಲೀಷ್, ತೆಲುಗು ನಿಘಂಟು, ಪೊಟ್ಟಿ ಶ್ರೀರಾಮುಲು, ತೆಲುಗು ವಿ.ವಿ. ಹೈದ್ರಾಬಾದ್, ೧೯೯೭

೧೧. ಅಚ್ಚಗನ್ನಡ ನುಡಿಕೋಶ, ಪುಸ್ತಕ ಪ್ರಕಾಶನ, ಮೈಸೂರು, ೧೯೯೩

1. Budga Jangam Surrvey of Karnataka, preliminary Date of Budga Jangama, Dr. K.M. Metry, Projest Report kannad University, 2001

2. Gazetter of India, Mysore State

3. Karntaka State Gazetteer

4. The Encyclopaedic District Gazetteers of India, Vol-1, (List of Scheduled Castes and Scheduled Tribes-Orders Act- 1976), Karnataka State, 1997

5. The Encyclopaedic District Gazetteers of India, Vol-2, (List of Scheduled Castes and Scheduled Tribes-Orders Act- 1976), Kerala & Tamil nadu State, 1997

6. Kittel F (Rev) Kannada English Dicitonary, Mangalore, Bashion and Trat, Dipository, 1894

7. Stand Dictionary of Foklore, mythopology and Legend, Vol-II

English Books

1. Abbe J.A. dubois, Hindug Manners, Customs and Ceremonies, Oxford Univer sity press Bombay, 1990

2. Crooke.W, The Tribes and Castes of the North Western India, Vol-16 (i) (iii) (iv) Cosmo Publications, 1987

3. Elvin Verrier, The Religion of Indian Tribe, Oxford University press, Bombay, 1981

4. Enthoven R.E, The Tribes: and Castes of Bombay, Vol-ii, Asian Educational Services, New Delhi, 1992

5. Hawanur L.G. Karnataka Backward Classess Commission Report, Government Press, Banglore 1975

6. Hayavadana Rao C.(Ed), Mysore Gazeter, B.R. Publishers corporation, New Delhi, 1929

7. Nanjundayya .H.V. and Iyer A.L.K. The Mysore Tribes and Castes, Vol.iii, Mysore University, 1930

8. Nirmal Kumar Bose, Tribal life in India, National Book Trust, New Delhi, 1971

9. Nimal Kumar Bose, Cultural AnthroPology, Asia Publishing House, New Delhi, 1961

10. Nirmal Kumar Bose, Some Indian Tribes, National Book Trust, New Delhi, 1972

11. Perumal A.N, Folk Arts of the Tamils, International instiitute of Tamil Studies, Taramani, Madras, 1983

12. Raghunathgi, The Indian Antiquary A Journal of Oriental Research "Bombay Beggers and Criers--1933

13. Suryanath Kamath, Gazetter of India, Govt. of Karnataka (Belgaum District), 1987

14. Singh .K.S, The Seheduled Tribes, (People of India Series), vol-ii Oxford Uni versity Press Delhi-1993

15. Singh K.S, India's Communities, A-G. Vol-IV, Oxford University Press, Delhi, 1998

16. Editor: Thurstom & Rangachar K:, Caste and Tribes of Southern India, (Seven Volume) Asian Educational Services, New Delhi, 1909

17. Editor: Thurston, Ethongraphic notes in Southern India, Government press Ma dras, 1906

ನಿಯತಕಾಲಿಕೆಗಳು

೧. ಇಂಡಿಯನ್ ಎಕ್ಸ್‌ಪ್ರೆಸ್, ಇಂಗ್ಲಿಷ್ ದಿನಪತ್ರಿಕೆ, ೨೯.೧೧.೧೯೯೭

೨. ಡೆಕ್ಕನ್ ಹೆರಾಲ್ಡ್, ಇಂಗ್ಲಿಷ್ ದಿನಪತ್ರಿಕೆ, ೧೬.೧೦.೧೯೯೩

೩. ಜನಪದ ಗಂಗೋತ್ರಿ, ಸಂಚಿಕೆ ೪, ಜೂನ್ ಆಚರಣೆ ಮತ್ತು ಉಗ್ರ ಆಚರಣೆಗಳು, ಕರ್ನಾಟಕ ಜನಪದ ಆಕಾಡೆಮಿ

೪. ಜಾನಪದ ಗಂಗೋತ್ರಿ, ಸಂಪುಟ ೯, ಕರ್ನಾಟಕ ಜಾನಪದ ಮತ್ತು ಅಕಾಡೆಮಿ, ಬೆಂಗಳೂರು, ೧೯೯೭

೫. ಪ್ರಬುದ್ಧ ಕರ್ನಾಟಕ, ಡಾ. ಎಂ. ಚಿದಾನಂದಮೂರ್ತಿ, ಸಂಪುಟ ೫೫

೬. ವಾರ್ತಾ ತೆಲುಗು ದಿನಪತ್ರಿಕೆ, ೩೦.೧.೨೦೦೦

ತೆಲುಗು ಗ್ರಂಥಗಳು

೧. ಆರಚೇತಿಲೋ ಆಂಧ್ರಪ್ರದೇಶ, ಎ.ಪಿ. ವಿಜ್ಞಾನನಿಧಿ, ವಿಕ್ಟರಿ ಪಬ್ಲಿಷರ್ಸ್, ೨೦೦೦

೨. ಆಧುನಿಕ ಆಂಧ್ರದೇಶದ ಚರಿತ್ರೆ, ತೆಲುಗು ಅಕಾಡೆಮಿ, ಹೈದ್ರಾಬಾದ್, ೧೯೮೨

೩. ತೆಲುಗು ಜಾನಪದ ಗೇಯ ಸಾಹಿತ್ಯಂ, ರಾಮರಾಜು, ಬಿರುದುರಾಜು, ಜಾನಪದ ವಿಜ್ಞಾನ, ಪ್ರಚುರಣಲು, ಹೈದ್ರಾಬಾದ್, ೧೯೯೦

೪. ಪಗಟಿ ವೇಷಾಲು ವಾಟಿ ಪ್ರಾಚೀನತೆ, ಸಂಕಲನಮು ವಿಭೂತಿ ಭವಾನಿ ಲಿಂಗಂ, ಪೋಟ್ಟಿ ಶ್ರೀರಾಮುಲು ತೆಲುಗು ವಿ.ವಿ. ಹೈದ್ರಾಬಾದ್, ೧೯೯೯

೫. ಆಂಧ್ರನಾಟಕ ರಂಗ ಚರಿತ್ರೆ, ಮಿಕ್ಕಿಲಿನೇನಿ ರಾಧಾಕೃಷ್ಣಮೂರ್ತಿ, ರೇಣುಕ ಗ್ರಂಥಮಾಲೆ, ಮದ್ರಾಸ್, ೧೯೬೯

೬. ಬುಡಿಗೆ ಜಂಗಾಲು; ಭಾಷಾ-ಸಾಹಿತ್ಯ ಸಾಂಸ್ಕೃತಿಕಾಂಶಾಲ ಪರಿಶೀಲನೆ ತೆಲುಗು, ಡಾ ಎಸ್ ಆರ್ ವೆಂಕಟೇಶಂ, ದಿವ್ಯ ದೀಪ್ತಿ ಪ್ರಚುರಣಲು ಹೈದ್ರಾಬಾದ್, ೧೯೯೫

ಹಾಡುಗಳು

೧

ನಲಗುಪಾಟ

ನಲಗಿಡವೇ ಪದ್ಮವಳ್ಳಿ
ಕಲ್ಯಾಣರವಣುಡು ಕಾಚಿಉನ್ನಾಡು, ನಿಲಚಿ ಉನ್ನಾಡು ೧
ಹತ್ತಾರು ಪನ್ನೀರು. ಹಮರೀಣ ಗಂಧಮು
ತಚ್ಚಿಯುನ್ನಾರು ಭಾಮ, ನಿಲಚಿಯುನ್ನಾರು ೨
ಚಂಗಾವಿ ಚೀರಾಲು ರಂಗೈನ ರವಿಕಾಲು
ತಚ್ಚಿಯುನ್ನಾರು ಭಾಮ, ನಿಲಚಿಯುನ್ನಾರು ೩
ಮುಕ್ಕಕು ಮುತ್ಯಂಪು ಮುಕ್ಕೇರ ಮೆರಯೊಗ
ಮುದ್ದು ಪದ್ಮಾವಳ್ಳಿ ಮೋಹನಕಾರಡು ೪

೨

ಅಲಕಲು ಪಾಟ (ನಲಗು ಪಾಟ)

ಶ್ರೀರಾಮ ಚಂದ್ರುಡು ಭಾಮ ಸೀತತೋ ಕೂಡಿ
ಚಂಡ್ಲಾಡಿ ಪೋರಾ... ಪೂಲ ಚಂಡ್ಲಾಡಿ ರಾವಯ್ಯ ‖ ಶ್ರೀರಾಮಚಂದ್ರೂಡಾ ‖
ಹತ್ತಾರು ಪನ್ನೀರು ಹಗರು ಶ್ರೀಗಂಧಮು
ತೆಚ್ಚಿಯುನ್ನಾರು ನಿಲಚಿಯುನ್ನಾರು ‖ ಪೂಲ ‖ ಚಂಡ್ಲಾಡರಾವಯ್ಯ ‖
ಕೌಶಲ್ಯ ವರಪುತ್ರ
ದಶರಥ ತನಯುಡಾ
ಭಾಮ ಸೀತತೋ ಕೂಡಿ
ಚಂಡ್ಲಾಡಿ ಪೋರಾ... ‖ ಪೂಲ ಚಂಡ್ಲಾಡ ರಾವಯ್ಯ ‖
ಮೂಲ ವೇದಮು ದಾಚಿ
ರಾಕ್ಷಸಿ ಫಲ ಮಣಸಿ
ಭಾಮ ಸೀತತೋ ಕೂಡಿ ಚಂಡ್ಲಾಡಿ ಪೋರಾ
ಚಂಡಾಡ ರಾವಯ್ಯ ಶ್ರೀರಾಮಚಂದ್ರುಡು ಭಾಮಸೀತತೋಕೂಡಿ ‖ ಪೂಲ ಚಂಡ್ಲಾಡ ಪೋರಾ ‖
ಜನಕ ನಲ್ಲುಡು ರಾವಾ
ದಶರಥ ತನಯುಡಾ
ಭಾಮ ಸೀತತೋ ಕೂಡಿ ‖ ಪೂಲ ಚಂಡ್ಲಾಡ ಪೋರಾ ‖
ಚಂಡ್ಲಾಡ ರಾವಯ್ಯ ಶ್ರೀರಾಮಚಂದ್ರುಡು
ಭಾಮ ಸೀತತೊ ಕೂಡಿ ‖ ಪೂಲ ಚಂಡ್ಲಾಡ ಪೋರಾ ‖

೩

ಗಲ್ಲುಮನಿ ಕಾಳ್ಳ ಗೆಜ್ಜೆಲಾನ್ನಯ ಬ್ರೊಯ
ಕಳಹಂಸ ನಡುಕಾತೊ ಕಲಿಗೆ ಎಕ್ಕಡಿಕೇ

ಜಡಲೋನ ಗಂಗಾನಿ ಧರಿಯಿಂಚಿನ ಯಡನಟ್ಟಿ
ಜಡನು ದಾಚಿನ ಶಂಭೋ ಶಿವನ ಸನ್ನಿದಿಕಿ... ಮಂಗಳಂ ಮಂಗಳಂ
ಶ್ರೀಗೌರುನೀಕು ಮಂಗಳಂ ಮಂಗಳಂ ೧
ಚಿರುನವ್ವು ಮುಖಮುಕು ಕಲಗಲ್ಲು ಕುಂಕುಮ
ಈ ವೇಳ ಕರುಣತೊ ಕಾಂತ ಯಕ್ಕಡಿಕೇ
ಮಂಡಲ ಮೇಲೆ ಶಿವುನಿ ಸನ್ನಿದಿಕಿ ಮಂಗಳಂ ಮಂಗಳಂ
ಶ್ರೀಗೌರು ನೀಕು ಮಂಗಳಂ ಮಂಗಳಂ ೨
ನುಪ್ಪಿ ಪಾಪೆಟಬಟ್ಟು ರತ್ನಾಕಿರೀಟಮು
ಅಂದಮುಪ್ಪುಟು ಚೀರ ಸಾಂಭಯಕ್ಕಡಿಕೇ...?
ಈಶ್ವರುಡಾ ವೈನಟ್ಟಿ ಜಗಮುಲೇನೇ ಶಿವುನಿ ಸನ್ನಿಧಿಕಿ ಮಂಗಳಂ
ಶ್ರೀಗೌರಾ ನೀಕು ಮಂಗಳಂ ಮಂಗಳಂ ೩
ಚಂಗಾಯಿ ಚೀರಲು ಶೃಂಗಾಲು ಜಾರಂಗ
ಚಂದ್ರುಡ್ನಿ ಶಿರಮಂದು ಧರಿಂಚಿನಾಯೆಟ್ಲು
ಬಂಗಾರಿ ವೆನ್ನಲ ಪ್ರತಮಾ ಯಕ್ಕಡಿಕೇ ಮಂಗಳಂ ಮಂಗಳಂ
ಶ್ರೀಗೌರಾ ನೀಕು ಮಂಗಳಂ ಮಂಗಳಂ ೪
ಅಭಯ ಹಸ್ತಮುಕಾರ ಕಂಕಣಮಲು ಮಿರಾಯ
ರೈಖಾ ತಿಚ್ಚಿನ ಲೇಕ ಮಾಟ ಯಕ್ಕಡಿಕೇ...
ಕಂಠಡ ತಾಳಕಿ ತಾಂಟಕಿ ನಿಲುಚಿನ
ಕಡು ಜೋಗಿ ಶಿವನ ಸನ್ನಿಧಿಕಿ ಮಂಗಳಂ ಮಂಗಳಂ
ಶ್ರೀಗೌರು ನೀಕು ಮಂಗಳಂ ಮಂಗಳಂ.......................................೫
ಆಂಗೋಳ್ಕ ಮನಮುದ್ದು ಟುಂಗರು ಮೂಲ ಮಿರಯ
ವರಗು ನಿಲಚಿನ ವನಿತಾಯಕ್ಕಡಿಕೇ...?
ನತಟನ ವಿಭೂತಿ ಜಾತಿ ಶ್ರೀಗಂಧಮು
ನಂದಿ ವಾಹನಮೆಕ್ಕೀ ಸುಂದರನಿ ಸನ್ನಿಧಿಕಿ ಮಂಗಳಂ ಮಂಗಳಂ
ಶ್ರೀಗೌರು ನೀಕು ಮಂಗಳಂ ಮಂಗಳಂ.......................................೬
ಸನ್ನಂಪು ನಡುಮುಕು ಬಿಲ್ಪ ಲೊಡ್ಯಾನಮು
ಚನ್ನದಂಡಮುದಾರ ಸಕಿಯಾ ಯಕ್ಕಡಿಕೇ...?
ಕಣ್ಣುಲು ಮೂಡ್ಯಾನ ಅಚಟ ಪದಿ ಭುಜಮುಲು
ಐದು ಮುಖಮುಲಾ ಅರ್ಧನಾರೀಶ್ವರ ಸನ್ನಿಧಿಕಿ ಮಂಗಳಂ ಮಂಗಳಂ
ಶ್ರೀಗೌರು ನೀಕು ಮಂಗಳಂ ಮಂಗಳಂ.......................................೭
ಥಳ ಥಳ ಮುನರತ್ನ ಥಾಟಂಕ ಮುನ ಮೆರಯ
ಈ ವೇಳ ಕರಣಾತೋ ಕಾಂತ ಮೆಕ್ಕಡಿಕೇ
ಈಶ್ವರ ವೈನಟ್ಟಿ ಜಗಮು ಲೇನೇ ಶಿವುನಿ ಸನ್ನಿಧಿಕಿ ಮಂಗಳಂ
ಶ್ರೀಗೌರು ನೀಕು ಮಂಗಳಂ ಮಂಗಳಂ

ಹಾಡು ೪

ಕುಲಮು ಪುಟ್ಟಿನಪ್ಪುಡೇ ಗಾನೀ
ಪುಟ್ಟಿಂದಿ ಸ್ತ್ರೀ ಕುಲಮು
ಪುಟ್ಟಿನಪ್ಪುಡೆ ಗಾನಿ ಪೂರುಟ್ಲೊ ಏಮಂದು
ಅಣ್ಣಾ ಬಳರಾಮ ನಕ್ಕಿಚ್ಚಿ ಲೇದುವೆ ಪೂರುಟ್ನ ಏಮಂದು
ನ್ಯಾಯಾಮು ತಪ್ಪುಕುಂಡ ನಾಮೇನ ಗೊಡಲನಿ
ನಾಕಿಚ್ಚಿ ಸೊಗನಂಪನ್ನ
ಅಣ್ಣಾ ಬಳರಾಮ ನಕ್ಕಿಚ್ಚಿ ಸೊಗನಂಪನ್ನ.................................೧
ಉಂಡ ವಿಲ್ಲುದುಲ ಲೇಲ ರಾಜ್ಯಮುಲೇದು
ನೀಕೈನ ನೇನಿವ್ವನು, ಚೆಲ್ಲಲಾ ಸಭದ್ರಮ್ಮಾ ನೀಕೈನ ನೇನಿವ್ವನು
ಉಂಡ ವೀಲು ಲೇಖ ವೇಲ ರಾಜ್ಯಮುಲೇಖ ಮುಂದೆಟ್ಲ ನನ್ನಿಸ್ತಿರಿ
ಅಣ್ಣಾ ಬಳರಾಮ ಮುಂದೆಟ್ಲ ನನ್ನಿಚ್ಚಿರಿ.....................................೨
ವಿಷ್ಣು ಈಶ್ವರ ಚೇತ ಕೃಷ್ಣ ಮಹಿಮಲ ಚೇತ
ದೋಷಿಟ್ಲೊ ನನ ಪೆಟತೀರಿ...
ಚೆಲ್ಲಲಾ ಸುಭದ್ರಮ್ಮಾ ದೋಷಿಟ್ಲು ನನ ಪೆಟತೀರಿ...
ನ್ಯಾಯಮು ತಪ್ಪಕುಂಡ ನಾಮೇನ ಗೋಡಲನಿ
ನಾಕಿಚ್ಚಿ ಸೊಗನಂಪನ್ನ
ಅಣ್ಣಾ ಬಳರಾಮ ನಾ ಕಿಚ್ಚಿ ಸೊಂಗನಪನ್ನ
ಮೀ ಇಂಟಿ ಮೊಗವಾರು ಅಡವಿ ಸಂಚುಲಮ್ಮ
ಮೀ ಇಂಟಿ ಮೊಗವಾರು ಕೊಂಡ ಸಂಚುಲೈರಿ
ಮೀಕೈನ ನೇನಿವ್ವನು...........?
ಮಾ ಇಂಟಿ ಮೊಗವಾರು ಅಡವಿ ಸಂಚುಲೈತೆ
ಮಾ ಇಂಟಿ ಮೊಗವಾರು ಕೊಂಡ ಸಂಚುಲೈತೆ
ಮುಂದೆಟ್ಲ ನನ್ನಿಸ್ತಿರಿ..
ವಿಷ್ಣು ಈಶ್ವರ ಚೇತ ಕೃಷ್ಣ ಮಹಿಮಲ ಚೇತ
ದೋಷಿಟ್ಲ ನನ್ನ ಪೆಟತಿವಿ
ಚೆಲ್ಲಲಾ ಸುಭದ್ರಮ್ಮಾ ದೋಷಿಟ್ಲ ನಿನು ಪೆಟುತಿನಿ
ಕಟ್ಟಾ ಚೇರಲು ಲೇವು ಪೆಟ್ಟ ಚುಮ್ಮಲು ಲೇವು
ಕಟ್ಟಾ ಚೀರಲು ಲೇಕ ಪೆಟ್ಟ ಚುಮ್ಮಲು ಲೇಕ
ಮುಂದೆಟ್ಲ ನನ್ನಿಸ್ತಿರಿ...?......................................
ವಿಷ್ಣು ಈಶ್ವರ ಚೇತ ಕೃಷ್ಣ ಮಹಿಮಲ ಚೇತ
ದೋಷಿಟ್ಲ ನನ್ನ ಪೆಟತಿವಿ
ಚೆಲ್ಲಲಾ ಸುಭದ್ರಮ್ಮ ದೋಷಿಟ್ಲ ನಿನು ಪೆಟುತಿನಿ
ನ್ಯಾಯಮ ತಪ್ಪುಕುಂಡ

ನಾಮೇನ ಗೊಡಲನಿ ನಾ ಕಿಚ್ಚಿ ಸೊಗನಂಪನ್ನ
ದಂಡ್ಯಾನ ಚೀರಲುನ್ನಾಯಿ ಕಟ್ಟುಕೊನಿ ಪೋವಮ್ಮ
ಪೆಟ್ಟೆಲ್ಲೊ ಚಮುಲುನ್ನಿ ಪೆಟ್ಟುಕುನಿ ಪೋವಮ್ಮ
ಶಶಿರೇಖನಿ ನೇನಿವ್ವನು
ಚೆಲ್ಲಲಾ ಸುಭದ್ರಮ್ಮ ಇಚ್ಚೇದೆ ಲೇದಳ್ಳಮ್ಮಾ
ತಪ್ಪುಕುಂಡ ನಾಮೇನ ಗೊಡಲನಿ ನಾಕಿಚ್ಚಿ ಸೊಗ ನಂಪನ್ನ
ನ್ಯಾಯಮು ತಪ್ಪುಕುಂಡಾ

ಹಾಡು ೫ ನಲಗುಪಾಟ

ರಾವೆರಾ ನಲುಗುಕು ರತನಂಪು ಪೀಠ ಪೈ
ರಾವೆಳ್ಳ ಗಾನ ಲೋಲ... ರಾಧ ಲೋಲ ೧
ಅತ್ತಾರು ಪನ್ನೀರು ಅಮರೀನ ಗಂಧಮು
ಚಿಲಗಾ ರಿಂಚದು ರಾ...ರಾ...
ಮಲ್ಲೇಲು ಮಗ್ಗಲು ಮರವೀರ ಜಾಜಲು
ಪಾನುಪು ಪರಿಸೀಮುರಾ... ರಾವೇರಾ ನಲಗುಕು..................೨
ಅಂದರಿಲೋ ನಿನ್ನಿ ವೆಲ್ಲೂರೂ... ಕೂಡುಕಾ
ಅಲ್ಲರಿ ಚೇಸೇವು ರಾ... ರಾವೇರಾ ನಲುಗುಕು....................೩
ಕಳವೇಣು ಲಂದರು ಕಾಚುಕುನುನ್ನಾರು
ಕಾದನಕು ಮನಚಾರು... ಕುಸುಮಾಕು ಕುಂದರ
ಮಗವಾಳ್ಳು ಎವ್ವರು ಲೇದಾರಾ... ರಾವೇರಾ ನಲುಗುಕು.................೪

ಹಾಡು ೬ ಅಲಕುಪಾಟ

ಮುತ್ತ್ಯಂ ಲೋನಿ ಐಬೋಧ್ಯಮಲೋನ
ಆಟಕೋಟ ಮುಲೋನ ಐಬೋಧ್ಯಮುಲೋನ
ಅಂದಮ್ಮೆನ ಗರಡಿಲೋ ಸಾಧನ ಜೇಸಿ
ಅಲೋನೊಚ್ಚು ಚಮಟಾತೋ ಮಾನ
ಸಿತಾರಾಮುಲ ಮಾಟ ಸೀತಂಪರಾಯ
ಸೀತಾರಾಮುಲ ಮಾಟ ವಿಘ್ನನಂಪರಾಯೆ
ತೆಲ್ಲಾರಿ ಕನುಲಕು ತಿಚ್ಚ್ಯಾದಿ ರರತುಂಬೆ
ಆ...ರಾಮ ಕನ್ನೂಲು ಕೊಚ್ಚಾರ ರದರಂಗು
ತನಚೇತುಲುನ್ನಾಟಿ ಪುಷ್ಪಾಲ ಬಂತಿ
ಪುವ್ವಲು ಭಂತಿತೋ ಪೂಲತೋಟ ವೇಸ್ಯಾ
ಮಾರ್ಜಾಲ ಸೀತಮ್ಮ ಮುದ್ರಾಲೇಚಿಂದಾ
ಪೀಟಾಡಿ ಲಕ್ಷ್ಮನ್ನ ವೇಗಾನ್ನಿವಚ್ಚೆ
ಜಾತಾರೆ ಭೂಜಾತ ಮಹದೇವಿ ಸೀತ
ದಾಹಾಮು ಅಬುತುಂದಿ ನೀರಿವ್ವವಮ್ಮ

ಆ ಮಾಟ ದಿವಿಗಾನೆ ಆರಾಮು ಚಿಲಕ
ವಿಹನೇಮಿ ರತ್ತಿಗಾವಿವರಿಂಚರಯ್ಯಾ
ಪಾದಾಲು ಮುಗುಣಿಕಿವಾದ ಮೊಚ್ಚಿಂದಿ
ಚಿನ್ನೀಯಾ ಬನ್ನಿಯಾ ಕನ್ನಾಯ್ಯನಾನ
ಅಲುಮಾ ರಮನಗಿರಿಲೋ ಪಿನಿಚೇ ಸೇರೆವರು
ಸೀತಾ ಅಲುಕುಲು ಮೀರು ತೀರ್ಚೆಸ್ತಿ ಚಿಲುಕಾ
ಯಿ ಗುಜ್ಜಾರಿ ಕಾಳಕು ಗಜ್ಜಾಲು ಇಂಪು
ಎರಚೀಟಿ ತಿಕ್ಕಲು ವೆಂಡಿ ಇತಪಿಂಪು
ಮಕ್ಕಾಕು ಬಂಗಾರಿ ಕೋಟಾಮೆ ಇಂಪು
ಮಿರುಗೋಟಿ ದಾವಲು ಕೂಡು ಕೊಟ್ಟಿಂಪು
ಕೇಡು ಕೊಟ್ಟಿನ ಶೇನು ಕೊರ್‍ರಂ ಕೊಟ್ಟಿಂಪು

ಅರ್ಥಕೋಶ

ಗುಂಜಪ್ಪ : ವಳ್ಳು

ಅಂಬಲಿ : ನಿಶ್ಚಿತಾರ್ಥದ ದಿನ ಕನ್ಯೆಯನ್ನು ಅಂಬಲಿಗೆ ಹೋಲಿಸುತ್ತಾರೆ.

ಬಿರಾಡು : ಹಗಲುವೇಷಗಾರರ ಗುಡಾರ

ಪಿಲ್ಲಿಸು ತೋಲ್ಕವಣಂ : ಹುಡುಗಿಯನ್ನು ಕರೆದುಕೊಳ್ಳುವುದು ತಾಯಿಯ ಮನೆಯಿಂದ ಸೊಸೆಯಾಗಿ ಯಂಡ ಕುಡಿಸಿ ಮನೆಗೆ ಕರೆದುಕೊಂಡು ಹೋಗುವುದು

ಸೋಬಾನ ಬಂತಿ : ಸೋಬನದ ದಿನ ವಧುವಿನ ಪಕ್ಷದವರಿಗೆ ಕೊಡುವ ಕಾಣಿಕೆ

ರೂಪಾಪವಲು ಪೆದ್ದ : ಹೆಂಡತಿಯನ್ನು ಬಿಡುಗಡೆ ಮಾಡಿಕೊಳ್ಳುವುದು

ನ್ಯಾಯಗಾಳ್ಳು : ಕುಲಪಂಚಾಯಿತಿಯ ತೀರ್ಮಾನಸ್ಥರು

ಗುಡಿಕೊಟ್ಟು : ದೇವರು ಮೇಲೆ ಪ್ರಮಾಣ ಮಾಡು

ಬಾಣಿ : ಕುಲಪಂಚಾಯಿತಿಯಲ್ಲಿ ಸಾಕ್ಷಿಗಳು ಇಲ್ಲದಿದ್ದಾಗ ಒಂದು ವಾರ ಸಮಯ ಕೊಡುತ್ತಾರೆ. ಆ ಸಮಯದಲ್ಲಿ ಯಾರಿಗೆ ಕೇಡು ಆಗುತ್ತದೆಯೋ ಅವರದೇ ತಪ್ಪೆಂದು ಭಾವಿಸುವುದು ಅದನ್ನು ಬಾಣಿ ಕಟ್ಟುವುದು ಎಂದು ಕರೆಯುತ್ತಾರೆ.

ಸಾಟುವ : ಉದಾಹರಣೆಯಾಗಿ ಹೇಳುವ ಕಥೆ

ನೋಟೊಟ್ಲಂ : ಬೈದದಕ್ಕಾಗಿ ತಪ್ಪುದಂಡ ಕೊಡುವುದು

ಮೀಇಂಟ್ಲ ಅಂಬಲಿ : (ನಿಮ್ಮ ಮನೆಯ ಅಂಬಲಿ) : ಮದುವೆಯಾಗದ ಹುಡುಗಿ

ದೇವುನಿ ಜೋಲೆ : ದೇವರ ಜೋಳಿಗೆ

ಬಾಪನಿಂಟಿ ಎಲ್ಲಮ್ಮ : ಬಲಿ ಇಲ್ಲದೆ ಶಾಖಾಹಾರದಿಂದ ಪೂಜಿಸುವ ಎಲ್ಲಮ್ಮ

ಬರಿಬತ್ತಲ ಎಲ್ಲಮ್ಮ : ನಗ್ನಾಶರೀರದಿಂದ ನಮಸ್ಕರಿಸುವ ಎಲ್ಲಮ್ಮ

ತೆಗೆದು ಹಾಕುವುದು : ತನ್ನ ಪೀಡೆ ತೊಲಗಲೆಂದು, ಗಾಳಿ ಸೋಕಿದ್ದು ಹೋಗಲೆಂದು ಮಂತ್ರಿಸಿ ಎಡೆಯನ್ನು ತೆಗೆದುಹಾಕುವುದು

ಕೊಲ್ಲು : ಮನೆಯ ಮುಂದೆ ಬಾಣಂತಿ ಸ್ನಾನ ಮಾಡಲು ಎರಡು ಮೀಟರ್ ವ್ಯಾಸದಲ್ಲಿ ಏರ್ಪಡಿಸಿದ ದುಂಡನೆಯ ಕಾಲುವೆಯ ಮಧ್ಯಭಾಗ

ಪುರುಡು : ಪ್ರಸವ ಜರಿಗಿದ ೩ನೇ ದಿನ ಮಾಡುವ ನಾಮಕರಣ ಸಂಪ್ರದಾಯ

ಲಿಂಗಗಳು : ಪುರುಡುದಿನ ಪೂಜಿಸುವುದಕ್ಕೆ ಕುಂಕುಮ, ಅರಿಷಿಣ ಬೊಟ್ಟು ಇಟ್ಟು ಸಣ್ಣ ಸಣ್ಣ ಬಿಂಗಣ್ಣಕಲ್ಲು ಮತ್ತು ಬೆಳ್ಳುಳ್ಳಿಯ ಹಾರ

ಇಡೆಂ : ನಿಶ್ಚಿತಾರ್ಥ

ಕಲ್ಲುಪೋಯಿಂಚು : ನಿಶ್ಚಿತಾರ್ಥ

ಪುಲ್ಲವಿರುಪು : (ಕಡ್ಡಿಮುರಿಯುವುದು) ಉಭಯರು ಯಾವುದೇ ತಗದಾ ಇಲ್ಲವೆಂದು ಕುಲದ ಹಿರಿಯರ ಮುಂದೆ ಕಡ್ಡಿಮುರಿದು ತಿಳಿಸುವುದು

ಬುರ್ರಕಾಯಂತ (ಬುಡಿಮೆ ಕಾಯಿಯಷ್ಟು) : ಹೆಣ್ಣನ್ನು ನಿಶ್ಚಿತಾರ್ಥದ ದಿನ ಬುಡುಮೆ ಕಾಯಿಗೆ ಹೋಲಿಸುವುದು

ಚೆಯ್ಯಿಸಾಕ್ಷಿ (ಕೈಸಾಕ್ಷಿ) : ನಿಶ್ಚಿತಾರ್ಥದ ದಿನ ಮದುವೆಯದಿನ ವಿಭಿನ್ನವಾದ ಗೋತ್ರಗಳಿರುವವರ ಐವರು ಕುಲಸ್ಥರ ಕೈಯ ಕೈಹಾಕಿ ವರನ ತಂದೆ ತನ್ನ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುತ್ತೇನೆಂದು ಹೇಳುವುದು

ಕಲ್ಲು ಕಲುಪು ಕೋವಟಂ: ಮದುವೆಯ ದಿನ ನಿರ್ಣಯಿಸಿಕೊಂಡ ಮೇಲೆ ಎಲ್ಲರು ಕಲಿಸಿಕುಡಿಯುವುದು ಒಪ್ಪಂದ ಮಾಡಿಕೊಳ್ಳುವುದು

ತಿಕ್ಕಟೆ : ಮೂರು ಕಟ್ಟಿಗೆಗಳನ್ನು ಭೂಮಿಯ ಮೇಲೆ ನಿಲ್ಲಿಸಿ, ಅವುಗಳ ಮೆಲೆ ಚಾಪೆ ಹಾಕಿ, ಕಟ್ಟಿದ ಸಣ್ಣ ಬಿಡಾರ

ಚಾಪಮೀದಮಾಟ (ಚಾಪೆಯ ಮೇಲೆ ಮಾತು) :ಮದುವೆಯ ದಿನ ಕುಲದ ಹಿರಿಯರ ಮುಂದೆ ತಮ್ಮ ಆಶ್ವಾಸನೆಗಳನ್ನು ಕೊಡವ ನಿಬಂಧನೆ

ದಾಪುಡ ಚೀರರಿ : (ಬಚ್ಚಿಟ್ಟುಸೀರೆ) ಬಚ್ಚಿಟ್ಟ ಜರತಾರಿ, ಸೀರೆ, ಮದುವೆ ಸೀರೆ

ಚುಟ್ಟಾಲ ಬಂತಿ : ಮದುವೆಯು ಜರುಗಿದ ಎರಡನೆಯ ದಿನ ವರನ ತಂದೆ ತಾಯಿಗಳ ಮರ್ಯಾದೆಗೆ, ಅವರ ಸಮೀಪದ ಬಂಧುಗಳಿಗೆ ಕೊಡುವ ಕಾಣಿಕೆ

ಮ್ಯಾರ (ಮ್ಯಾರೆ) : ಒಪ್ಪಂದದ ಪ್ರಕಾರ ವರ ಅತ್ತೆ ಮಾಂವದಿರಿಗೆ ಸೇವೆಗಳು ಮಾಡುತ್ತಾ ಅವರ ಹಿಂದೆಯೇ ಇದ್ದು ಜೀವಿಸುವುದು

ಪೂಟ : ವಧುವರಿಗೆ ಮಧ್ಯವರ್ತಿಯಾದ ಮನುಷ್ಯ ಹಿಂದೆ ಇದ್ದು ಜೀವಿಸುವುದು

ದಿಗಟ : ಇಳಿದುಕೊಳ್ಳುವುದು ಒಂದು ಊರಿನಿಂದ ಇನ್ನೊಂದು ಊರಿಗೆ ಬಂದು ಗುಡಾರ ಹಾಕಿಕೊಂಡು ಇರುವುದು

ಪಂಚಾಯಿತಿ ಕುಲಸ್ಥರ ಮುಖಾಂತರ ವಾದವಿವಾದ ಬಗೆಹರಿಸಿಕೊಳ್ಳುವುದು

ಪುಲ್ಲ ಪುಡಕ : ವಾದಿಪ್ರತಿವಾದಿಗಳು ಕುಲಸ್ಥರಿಗೆ ಕೊಡುವ ಮುಚ್ಚಳಿಕೆ

ಗಾದೆಮಾತುಗಳು

೧. ಒಬ್ಬ ಜಂಗಮ ಶತಮೂರ್ಖ

೨. ಜಾತಿ ಕೆಟ್ಟವನ್ನು ಜಂಗಮ

೩. ನೇಕಾರನಿಗೆ ಜಂಗಮನಿಗೆ ಸಂಬಂಧ ಕುದುರುತ್ತದೆಯೇ...?

೪. ನಾಯಿ ಬೊಗಳಿದರೆ ಜಂಗಮ ಪ್ರತಿಷ್ಠೆ ಹೋಗುತ್ತದೆಯೇ...?

೬. ಅಪ್ಪ ದಾಸಯ್ಯನಿಗೆ ನೀಡಿದರೆ ಅಮ್ಮ ಜಂಗಾಲರಿಗೆ ನೀಡಿದ್ಲಂತೆ

೭. ಮನೆ ಸುಡುತ್ತದೆ ಜಂಗಮ ಅಂದರೆ ನನ್ನ ಜೋಳಿಗೆ ನನ್ನ ಬಟ್ಲ ನನ್ನ ಹತ್ತಿರ ಇದ್ದಾವೆ ಎಂದ್ನಂತೆ

೮. ಜಗಳ ಹೇಗೆ ಬರುತ್ತದೆ ಜಂಗಮಯ್ಯ ಅಂದ್ರೆ, ಭಿಕ್ಷೆ ನೀಡೇ ಹುಚ್ಚು ಮುಂಡೆ

೯. ಜಂಗಮನಿಗೆ ಮಕ್ಕಳು ಹುಟ್ಟಿದರೆ ಊರಿನವರೆಲ್ಲಾ ಬಾಯಿ ಬಾಯಿ ಬಡೆದುಕೊಂಡರಂತೆ

೧೦. ತಾಯಿಯವರು ತಂದೆಯವರು ಜಂಗಮರನ್ನು ಹಿಡಿದುಕೊಂಡು ಬಹಳ ಹೊತ್ತು ಅತ್ರಂತೆ
೧೧. ಊರಾಡುವ ಜಂಗಮ ಅಮ್ಮನಿಗೆ ಮನೆ ಕಟ್ಟಿಸಿಕೊಟ್ಟಂತೆ
೧೨. ಕೊಂಡ ಊರು ಜಂಗಮ ಆಮೇಲೆ ಸನ್ಯಾಸಿ
೧೩. ಪಿಚ್ಚ ಗುಂಟರು ಪದ ಹಾಡಿದರೆ ದೆವ್ವ ಹೋಗಿ ಬಾಯಿಯಲ್ಲಿ ಬಿತ್ತಂತೆ
೧೪. ಆದಾಯ ಭಾಗವತನಿಗೆ ಬೈಗಳು ಅಗಸರಿಗೆ, ಅಜಾಮನಿಗೆ
೧೫. ಒಂದು ದಿನದ ಬಯಲಾಟಕ್ಕೆ ಗಡ್ಡಮೀಸೆ ಬೋಳಿಸಿಕೊಂಡಂತೆ
೧೬. ಭಾರ ಹೊತ್ತುಕೊಂಡರೆ ಭಾಗವತ ಚೆನ್ನಾಗಿರುತ್ತದೆ
೧೭. ಬೇಡಿ ತಿನ್ನುವವನಿಗೆ ಅರವತ್ತು ಊರು
೧೮. ಹಿಡಿ ಅನ್ನಕ್ಕಾಗಿ ಭೂಮಿಯೆಲ್ಲಾ ಹುಡುಕಿದಂತೆ
೧೯. ತಲೆ ಸುಡದೆ ಜೋಳಿಗೆ ತುಂಬುವುದಿಲ್ಲ
೨೦. ವೇಷ ಇದ್ದರೇನೆ ಗ್ರಾಸ
೨೧. ಹೊಟ್ಟೆ ಹೊರೆಯುವುದಕ್ಕೆ ಯಾವ ಕೆಲಸ ಮಾಡಿದರೂ ತಪ್ಪಲ್ಲ
೨೨. ನಾಳೆಬಾ ಬಾರೆಣ್ಣು ಕೊಡುತ್ತೇನೆ, ನಾಡದಬಾ ಬಿಲ್ವಪತ್ರೆಕಾಯಿ ಕೊಡುತ್ತೇನೆ
೨೩. ತಾನು ತೋಡಿದ ಕುಣಿಯಲ್ಲಿ ತಾನೆ ಬಿದ್ದಂತೆ
೨೪. ಹಿಂದೆ ಕುಣಿ ಮುಂದೆ ಬಾವಿ
೨೫. ನಾಗರಹಾವು ಕಡಿಯುತ್ತದೆ, ಹಸಿರು ಹಾವು ನೆಕ್ಕಿ ಸಾಯಿಸುತ್ತದೆ.
೨೬. ಸಾಸಿವೆಯಷ್ಟು ವಿಶ್ವಾಸವಿದ್ದರೆ ಹಿರೇಕಾಯಿಯಷ್ಟು ದೆವ್ವ ಓಡಿಹೋಗುತ್ತದೆಯಂತೆ
೨೭. ಕುಂತರೆ ಕೂಳು, ನಿಂತರೆ ಪರದೇಸಿ
೨೮. ಸತ್ತ ಕೂಸನ್ನು ಕೆಕುಳದಲ್ಲಿ ಹಾಕಿಕೊಂಡು-ಬದುಕಿದ ಕೂಸನ್ನು ಬಾವಿಯಲ್ಲಿ ಹಾಕಿದಂತೆ
೨೯. ಚೀ ಅಂದರೆ ಚಿತ್ತಾಪುರದ ನಾಯಿ ಬಾಯಿಗೆ ಬಿತ್ತಂತೆ
೩೦. ಜಂಗಮನ ಹಿಂದೆ ಜಾತಿ ಎಣಿಸಬಾರದು
೩೧. ಬಚ್ಚಿಟ್ಟು ಬಚ್ಚಿಟ್ಟು ದೆವ್ವದ ಪಾಲು ಮಾಡಿದಾಂಗ
೩೨. ಸತ್ಯ-ಸತ್ಯವೇ ಸುಳ್ಳು-ಸುಳ್ಳೇ
೩೩. ನೀನು ಹಾಡುವುದಕ್ಕೆ ನಾನು ಕೇಳುವುದಕ್ಕೆ ಸರಿಹೋಗುತ್ತದೆ.
೩೪. ಹತ್ತುಮಂದಿ ಕುಳಿತಲ್ಲಿ ಪರಮಾತ್ಮ ಇರುತ್ತಾನೆ.
೩೫. ಹಾಡುವ ಮುಖಕ್ಕೆ ಏಳುಬಾಸಿಂಗ
೩೬. ಕರೆದು ಹೆಣ್ಣು ಕೊಟ್ಟರೆ ಅಳಿಯ ಓಡಿ ಓಡಿ ಹೋದನಂತೆ
೩೭. ಪೋಶಮ್ಮ ಆಹಾರ ಹಾಕಿದ್ರ ಮೈಸಮ್ಮ ಮಾಯ ಮಾಡಿದಾಂಗ
೩೮. ರಸೀದಿ ತಪ್ಪಿದರೆ ಮಸೀದಿ
೩೯. ದೆಂಗಿಕೊಂಡು ತಿನ್ನೋನ್ಗೆ ದೇವರು ವರಕೋಡೋದು

ಒಡಪುಗಳು

೧. ಮನೆಗೊಬ್ಬ ದೊಡ್ಡ ಮನುಷ್ಯ - ವಳ್ಳು (ಗುಂಜಪ್ಪ)
೨. ಭೂಮಿಯಲ್ಲಿಯೇ ಮಾಯಾ ಕಲ್ಪಲೋಕ - ಇಲಿ

೩. ಬಾಯಿಯಲ್ಲಿ ಬಂಗಾರದ ಬಿಲ್ಲೆ - ತಾಂಬೇಲಿ

೪. ಒಡೆದರೆ ಅರಚುತ್ತದೆ ಒಡೆಯದಿದ್ದರೆ ಮುಚ್ಚಿಕೊಳ್ಳುತ್ತದೆ ನೀರಿನ ಮೇಲಿನ ಪಾಚಿ

೫. ಹತ್ತು ಪಕ್ಕೆಲುಬು, ಒಂದು ಬೆನ್ನು ಮೂಳೆ, ಮೂರು ಕೀಲು ಐದು ಹೊದಿಕೆ - ವೇಷಗಾರರ ಬಿಡಾರ

೬. ಅಂಗಡಿಗೆ ಹೋಗ್ತಾರೆ ಎಲ್ಲಾ ತರತಾರೆ ಒಂದು ತರೋದಿಲ್ಲ - ಬೆಂಕಿ

೭. ಕರೆ ಎತ್ತು ಮಲಗಿದರೆ ಬಿಳಿ ಎತ್ತು ಎದ್ದೇಳುತ್ತದೆ - ಬೂದಿ, ಬೆಂಕಿ

೮. ಮಲಗಿ ಏಳ್ತಾರೆ ತೊಳೆದುಕೊಡು ನೋಡ್ತಾರೆ - ಕನ್ನಡಿ

೯. ಒಡೆಯುವ, ಮಾರೆಪ್ಪ ಕುಂಡೆ ದೇಕಪ್ಪ - ಚಲಿಕೆ

೧೦. ನೆಟ್ಟಗಿರೋ ಮರಕ್ಕೆ ಮೇಲೆ ಸಿಪ್ಪೆ ಇಲ್ಲ - ಹಾರೆ

ಆಭರಣಗಳ ಕುರಿತಾದ ಒಡಪುಗಳು

೧೨. ಜಣ ಜಣ ತಾಳ ಕತ್ತಳೊಳಗಿನ ತಾಳ

ಹೊರಗಿ ಬಂದ್ರೆ - ಬಹುರೂಪಿಗಳ ಬಾಧೆ - ಕಾಲು ಕಡಿಗ

೧೩. ಒತ್ತೊತ್ತಿ ಇಟ್ಟರೆ ಅತ್ತತ್ತು ಕರಿತಾಳ

ಸಾಕು ಆದ ಮೇಲೆ ಸಂತೋಷ ಪಡ್ತಾಳ - ಬಳೆ ಹಾಕಿಸಿಕೊಳ್ಳುವಾಗ

ವಾದ್ಯಗಳ ಕುರಿತು ಒಡಪುಗಳು

೧೪. ಹೊಟ್ಟೆಯಲ್ಲಿ ಮೂರೇ ಕರಳು

ಕೈತಗಲಿದ್ರೆ ಅರಚುತ್ತದೆ - ತಂಬೂರಿ, ವೀಣೆಯ ತಂತಿ

೧೫. ಬೆರಳು ಸುತ್ತಿಕೊಂಡು

ತಲೆಗೆ ಬಡಿದುಕೊಂಡು ಅವು ಅರಚಿದರೆ ಎಲ್ಲರಿಗೂ ಸಂತೋಷ - (ಗಗ್ಗರಿ)

೧೬. ಕಂಚಿನ ಧ್ವನಿ

ಜಣ್ಣ ಎನ್ನು - ತಾಳಗಳು

೧೭. ಸಮುದ್ರದಲ್ಲಿ ಹುಟ್ಟಿ

ಸಮುದ್ರದಲ್ಲಿಯೇ ಬೆಳೆದು

ಊರಲ್ಲಿ ಬಂದು ಅರಚುವುದು - ಶಂಖ

ಪ್ರಕೃತಿ ಸಂಬಂಧಿ

೧೮. ಅಂತ್ಯವಿಲ್ಲದ ಮರಕ್ಕೆ ಅರವತ್ತು ಟೊಂಗೆ

ಟೊಂಗೆ ಟೊಂಗೆಗೆ ಕೋಟಿಗಟ್ಟಲೆ ಹೂ

ಹೂ ಅರಳಲು ಎರಡೇ ಕಾಯಿ - ಸೂರ್ಯಚಂದ್ರ

ವೃಕ್ಷ ಸಂತತಿ

೧೯. ಅಡವಿಯಲ್ಲಿ ಹುಟ್ಟಿ - ಅಡವಿಯಲ್ಲಿ ಬೆಳೆದು

ನಮ್ಮನೆಯಲ್ಲಿ ಬಂದು ತೈತಕಲಾಡಿತಿ - ಈಚಲುಕೊಂಬೆ

೨೦. ನಿಂತರೆ ನೀರು ಕುಡಿಯೋದಿಲ್ಲ
ಬಗ್ಗಿದರೆ ಮೇವು ತಿನ್ನೋದಿಲ್ಲ
ಮಲಗಿದರೆ ನಿದ್ದೆ ಮಾಡೋದಿಲ್ಲ
ಹಿಂಡಿದರೆ ಗಡಿಗೆ ತುಂಬ ಹಾಲು ಕೊಡುತ್ತದೆ - ಈಚಲುಗಿಡ

ವೃತ್ತಿ ಸಂಬಂಧಿ

೨೧. ಸಣ್ಣವನಿದ್ದಾಗಿನಿಂದ ದೊಡ್ಡವನಾಗುವವರೆಗೆ ಹೇಗೆ ಬೆಳೆಸಿದರೆ
ಹಾಗೆ ಬೆಳೆಯುತ್ತಾನೆ. (ಕುಂಬಾರನ ಚಕ್ರದಲ್ಲಿರುವ ಗಡಿಗೆ)
೨೨. ಗುಡ್ಡದ ಕೆಳಗೆ ಗೂನಿಯವನು ಹೋದ - ಅಗಸ
೨೩. ಬಿಳಿಯ ಕಲ್ಲುಗಳ ನಡುವೆ ಹಂದಿ ಹೊರಳಾಡಿತು - ಶರೀರದ ಅವಯುವಗಳು ನಾಲಿಗೆ
೨೪. ಒಂದು ಸೀಸದಲ್ಲಿ ಮೂರುಬಣ್ಣ - ಕಣ್ಣುಗುಡ್ಡೆ
೨೫. ಸರಸರ ಊರಿಗೆ ಹೋಗುವವರು ಯಾರಮ್ಮ
ದಿಬ್ಬ ಹತ್ತಿ ನೋಡುವವರು ಯಾರಮ್ಮ
ಎಲೆಯನ್ನು ಇಳಿಸುವವರು ಯಾರಮ್ಮ
ಅರ್ಥವನ್ನು ಹೇಳುವವರು ಯಾರಮ್ಮ - ಕಾಲು, ಕಣ್ಣು, ಕೈ, ತುಟಿ, ಬಾಯಿ
೨೬. ಆಳವಾದ ಬಾವಿಯಲ್ಲಿ
ಅಳ್ಳಕಿನ ಬೆಲ್ಲ - ಕಿವಿಯಲ್ಲಿಯ ಕೂಕಣಿ
೨೭. ಬಟ್ಟೆಯನ್ನು ತಿಂದು ಬುತ್ತಿ ಬಿಸಾಕ್ತಾರೆ - ಕೋಳಿಯ ಜೀರ್ಣಾಂಗ

ವಕ್ತೃ ವಿವರಗಳು

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಸ್ಥಳ
೧	ಮಸ್ತಾನಮ್ಮ	೫೪	ಬುರ್ರಕಥೆ	ರಾಜೇಶ್ವರಿನಗರ, ಬಳ್ಳಾರಿ
೨	ಜಂಬಣ್ಣ	೬೦	ಬಾಲಸಂತ	ರಾಜೇಶ್ವರಿನಗರ, ಬಳ್ಳಾರಿ
೩	ಗಿಡ್ಡಮ್ಮ	೫೮	ಬುರ್ರಕಥೆ	ರಾಜೇಶ್ವರಿನಗರ, ಬಳ್ಳಾರಿ
೪	ಮಾರೆಪ್ಪ	೬೫	ವ್ಯಾಪಾರ	ರಾಜೇಶ್ವರಿನಗರ, ಬಳ್ಳಾರಿ
೫	ಬಲರಾಮಯ್ಯ	೬೫	ಪ್ಲಾಸ್ಟಿಕ್ ಪ್ಯಾಕ್ಟರಿ	ರಾಜೇಶ್ವರಿನಗರ, ಬಳ್ಳಾರಿ
೬	ಶಿರುವಾಟಿ ಗೌರಮ್ಮ	೮೦	ಭಿಕ್ಷೆ	ರಾಜೇಶ್ವರಿನಗರ, ಬಳ್ಳಾರಿ
೭	ಮಾರೆಪ್ಪ	೪೫	ಪ್ಲಾಸ್ಟಿಕ್ ಪ್ಯಾಕ್ಟರಿ	ಹೊಸಪೇಟೆ
೮	ಶಂಕ್ರಪ್ಪ	೬೫	ವೇಷ	ಹೊಸಪೇಟೆ
೯	ಶ್ರೀನಿವಾಸ್	೪೫	ಎಸ್.ಡಬ್ಲ್ಯು.ಐ	ಗುಂಡ್ಲಕೆರ, ಹೊಸಪೇಟೆ ತಾ
೧೦	ಮಾರೆಮ್ಮ	೮೫	ವೃದ್ಧೆ	ಗುಂಡ್ಲಕೆರ, ಹೊಸಪೇಟೆ ತಾ
೧೧	ಶಿವಲಿಂಗಪ್ಪ	೮೯	ವೃದ್ಧೆ	ಆಗಲೂರು, ಹೊಸಳ್ಳಿ, ಸಿರುಗುಪ್ಪ ತಾ,
೧೨	ಸಣ್ಣ ರಾಮಣ್ಣ	೪೫	ವೇಷ	ಹೊಸಳ್ಳಿ ಸಿರುಗುಪ್ಪ ತಾ
೧೩	ಚಿನ್ನಪ್ಪ	೪೮	ವೇಷ	ಹೊಸಳ್ಳಿ ಸಿರುಗುಪ್ಪ ತಾ
೧೪	ಶಂಕ್ರಯ್ಯ	೩೦	ವೇಷ	ಹೊಸಳ್ಳಿ ಸಿರುಗುಪ್ಪ ತಾ
೧೫	ನಾಗಭೂಷಣ	೫೬	ವೇಷ	ದರೋಜಿ ಸಂಡೂರು ತಾಲೂಕು
೧೬	ದರೋಜಿ ಈರಮ್ಮ	೬೫	ಬುರ್ರಕಥೆ	ದರೋಜಿ ಸಂಡೂರು ತಾಲೂಕು
೧೭	ನಾಗಮ್ಮ	೫೦	ಬುರ್ರಕಥೆ	ದರೋಜಿ ಸಂಡೂರು ತಾಲೂಕು
೧೮	ರಾಮುಡು ವಿ	೩೦	ಇನ್ಸೂರೆನ್ಸ್(LIC)	ದರೋಜಿ ಸಂಡೂರು ತಾಲೂಕು
೧೯	ಜಯರಾಮ್	೫೭	ವೇಷ	ತೆಕ್ಕಲಕೋಟೆ, ಸಿರುಗಪ್ಪ ತಾ
೨೦	ಎಲ್ಲಪ್ಪ	೨೦	ವೇಷ	ಪೋತಾಳು, ಕನಕ ಸಿದ್ಧಾಪುರ
೨೧	ಮಾರೆಮ್ಮ	೭೦	ಭಿಕ್ಷೆ	ಹೊಸಳ್ಳಿ, ಸಿರುಗುಪ್ಪ ತಾ
೨೨	ರಾಮಚಂದ್ರಪ್ಪ	೩೫	ವೇಷ	ಹೊಸಳ್ಳಿ, ಸಿರುಗುಪ್ಪ ತಾ
೨೩	ವಿಭೂತಿ ಯಲ್ಲಪ್ಪ	೬೦	ವೇಷ	ಸಿರುಗುಪ್ಪ
೨೪	ಯಲ್ಲಮ್ಮ	೫೮	ಬುರ್ರಕಥೆ	ಮಾನ್ವಿ
೨೫	ಗುರುಮೂರ್ತಿ	೪೮	ಪ್ಲಾಸ್ಟಿಕ್‌ವ್ಯಾಪಾರ	ಮಾನ್ವಿ
೨೬	ಅಯ್ಯಪ್ಪ	೫೦	ವೇಷ	ಮಾನ್ವಿ
೨೭	ಮಾರೇಶ್	೫೪	ವೇಷ	ಪೊನ್ನಾಳು, ಚಳ್ಳಕೆರೆ ತಾ
೨೮	ಮಾರೆಪ್ಪ	೪೭	ಪ್ಲಾಸ್ಟಿಕ್ ಪ್ಯಾಕ್ಟರಿ	ಗಂಗಾವತಿ
೨೯	ಬಸವರಾಜ್	೫೦	ವ್ಯಾಪಾರ	ಕೊಪ್ಪಳ
೩೦	ರಂಗಪ್ಪ	೬೦	ವೇಷ	ಕುಟುಗಿನಹಳ್ಳಿ

೩೧	ರಾಮಣ್ಣ	೫೭	ವೇಷ	ಹನುಮನಹಳ್ಳಿ, ಸಂಡೂರು ತಾ
೩೨	ಯಲ್ಲಪ್ಪ	೫೪	ವೇಷ	ಹಗರಿಬೊಮ್ಮನಹಳ್ಳಿ
೩೩	ಚಿನ್ನಪ್ಪ	೫೮	ವೇಷ	ನಾಣಾಪುರ, ಕೂಡ್ಲಿಗಿ ತಾ
೩೪	ಬಸವರಾಜ್	೪೭	ವೇಷ	ಹಡಗಲಿ
೩೫	ಜಂಬಣ್ಣ	೫೦	ವೇಷ	ಸಿದ್ಧಾಪುರ, ಮೊಳಕಾಲ್ಮುರು ತಾ
೩೬	ಶಂಕ್ರಪ್ಪ	೪೭	ವೇಷ	ಹಳೇಕೋಟೆ, ಸಿರುಗುಪ್ಪ ತಾ
೩೭	ಸಾಯಪ್ಪ	೫೩	ವೇಷ	ಸಿರಗೇರಿ, ಸಿರುಗುಪ್ಪ ತಾ
೩೮	ಗಿಡ್ನಪ್ಪ	೬೭	ವೇಷ	ಕುರುಗೋಡು ಬಳ್ಳಾರಿ ತಾ
೩೯	ನಾರಯಣಪ್ಪ	೫೭	ವೇಷ	ಬಲಕುಂದಿ, ಸಿರುಗುಪ್ಪ ತಾ
೪೦	ಚನ್ನವೀರ	೫೭	ವೇಷ	ಎಲೆರಾಂಪುರ, ಮೊಳಕಾಲ್ಮುರು ತಾ
೪೧	ದೂಪಂಶಾಸ್ತ್ರಿ	೬೦	ಸಂಗೀತ ನಿರ್ದೇಶಕ	ಕೂಡ್ಲಿಗಿ
೪೨	ದೂಪಂ ಲಿಂಗಪ್ಪ	೫೭	ವೇಷ	ಚೋರುನೂರು, ಸಂಡೂರು ತಾ
೪೩	ಹುಸೇನಪ್ಪ		ವೇಷ	ಕುದುರೆಮೂತಿ, ಯಲಬುರ್ಗಾ ತಾ
೪೪	ದೂಪಂ ಜಂಬಲಮ್ಮ	೬೪	ಮನೆಗೆಲಸ	ಪಾರ್ವತಿನಗರ, ಕಡಪ ಜಿ
೪೫	ಕೊಂಡಪಲ್ಲಿ ರತ್ನಮ್ಮ	೭೦	ಮನೆಗೆಲಸ	ಪಾರ್ವತಿನಗರ, ಕಡಪ ಜಿ
೪೬	ಕೊಂಡಪಲ್ಲಿ ವೀರಭದ್ರಯ್ಯ	೬೦	ಅಧ್ಯಕ್ಷರು ಕಲಾ ಸಂಘ	ರಾಯಲಸೀಮಕಲಾ, ಪಾರ್ವತಿನಗರ, ಕಡಪ
೪೭	ಕೊಂಡಪಲ್ಲಿ ಶೇಷಗಿರಿ	೪೦	ವ್ಯಾಪಾರ	ವ್ಯಾಪಾರ ಪಾರ್ವತಿನಗರ, ಕಡಪ ಜಿ
೪೮	ಯಡವಲ್ಲಿ ಜಯಕೃಷ್ಣ	೪೫	ಕೀರ್ತನೆ	ಮೈದಕೂರು ಕಡಪ ಜಿ
೪೯	ಯಡವಲ್ಲಿ ಪ್ರಭಾಕರ	೩೫	ವೇಷ	ಮೈದಕೂರು ಕಡಪ ಜಿ
೫೦	ಮೇತಿ ಚಂದ್ರಶೇಖರರಾವ್	೪೦	ವೇಷ	ಮೈದಕೂರು ಕಡಪ ಜಿ
೫೧	ಯಡವಲ್ಲಿ ವಿಶ್ವನಾಥ	೭೦	ವೇಷ	ಮೈದಕೂರು ಕಡಪ ಜಿ
೫೨	ರಾಮು	೪೦	ವೇಷ	ಬಲಗೇರಿ
೫೩	ತಾಟಿಕೊಂಡ ಪುಲ್ಲಯ್ಯ	೫೦	ಬುರ್ರಕಥೆ	ಪ್ರದಟೂರು, ದೊರಸಾನಿಪಲ್ಲಿ, ಕಡಪ ಜಿ
೫೪	ಪ್ರಸಾದ್	೪೮	ವ್ಯಾಪಾರ	ಪ್ರದಟೂರು, ದೊರಸಾನಿಪಲ್ಲಿ,ಕಡಪ ಜಿ
೫೫	ಶಂಕ್ರಮ್ಮ	೬೮	ಬುರ್ರ	ಪ್ರದಟೂರು, ದೊರಸಾನಿಪಲ್ಲಿ, ಕಡಪ ಜಿ
೫೬	ಸೂರ್ಯನಾರಾಯಣಪ್ಪ	೫೦	ನ್ಯಾಯಗಾರ	ಕುದುರೆಮೂತಿಯಲ್ಲಿ ನಡೆದ ನ್ಯಾಯ ಪಂಚಾಯಿತಿಯ ಮುಖ್ಯಸ್ಥರು
೫೭	ರಾಮಯ್ಯ	೫೫	ನ್ಯಾಯಗಾರ	ಕುದುರೆಮೂತಿಯಲ್ಲಿ ನಡೆದ ನ್ಯಾಯ ಪಂಚಾಯಿತಿಯ ಮುಖ್ಯಸ್ಥರು
೫೮	ಶರಣಪ್ಪ	೫೩	ನ್ಯಾಯಗಾರ	ಕುದುರೆಮೂತಿಯಲ್ಲಿ ನಡೆದ ನ್ಯಾಯ ಪಂಚಾಯಿತಿಯ ಮುಖ್ಯಸ್ಥರು
೫೯	ಸುಂಕಮ್ಮ	೪೦	ವೃದ್ದೆ	ದರೋಜಿ ಸಂಡೂರು ತಾಲೂಕು

ವ್ಯಕ್ತಿ ಪರಿಚಯ

೧. ಸಣ್ಣ ರಾಮಣ್ಣ

ವೇಷಗಾರರ ರುದ್ರಾಕ್ಷಲ ಸಣ್ಣ ರಾಮಣ್ಣ ಇವರ ಸ್ಥಳ ವೆಂಕಟಾಪುರ್‌ಕ್ಯಾಂಪ್. ಹೊಸಪೇಟೆ ತಾಲೂಕು ಇವರು ವೇಷ ಧರಿಸಿದರೆಂದರೆ ಜನರು ನಿಂತು ನೋಡುತ್ತಿದ್ದರು. ಇವರು ಹಲವಾರು ವೇಷಗಳನ್ನು ಧರಿಸುತ್ತಿದ್ದ ವೇಷಗಳೆಂದರೆ ಬಸ್ಮಾಸುರ, ರಾವಣಾಸುರ, ನುಂದೋಪ, ಭೀಮ, ಆಂಜನೇಯ, ಪರಮೇಶ್ವರ, ಕಳ್ಳನ ವೇಷ ಇನ್ನು ಮುಂತಾದ ವೇಷಗಳನ್ನು ಧರಿಸುತ್ತಿದ್ದರು.

ಈತನ ವೇಷಗಾರಿಕಾ ಕಲೆಯನ್ನು ಗುರುತಿಸಿದ ಕರ್ನಾಟಕ ಸರಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

೨. ದರೋಜಿ ಈರಮ್ಮ

ಸಂಡೂರು ತಾಲೂಕಿನ ಹಳೆಯ ದರೋಜಿಯ ಬುರ್ರಕಥಾ ಹಾಡುಗಾರ್ತಿ ದರೋಜಿ ಈರಮ್ಮ ಇವರು ಹೇಳುವ ಕಥೆಗಳು ಅದ್ವಿತೀಯವಾದವು. ಈಕೆ ಅಕ್ಷರ ಕಲಿಯದಿದ್ದರೂ ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಕಥೆಗಳನ್ನು ಹೇಳಬಲ್ಲವಳಾಗಿದ್ದಾಳೆ.



ಈಗ ಇವರಿಗೆ ೬೩ ವರ್ಷಗಳು ತುಂಬಿದರೂ ಹಾಡಲು ನಿಂತಳೆಂದರೆ ಕಂಚಿನ ಕಂಠದ ಧ್ವನಿ ರಂಗೇರುತ್ತದೆ. ಇವಳ ಒಡಲಲ್ಲಿ ಕುಮಾರರಾಮ, ಕೃಷ್ಣಗೊಲ್ಲರಕಾವ್ಯ, ಆದೋನಿ ಲಕ್ಷ್ಮಮ್ಮ, ಕಿತ್ತೂರು ರಾಣಿ ಚೆನ್ನಮ್ಮ, ಮಾರವಾಡಿ ಸೇಠಿ, ಸಾಸ್ವಿ ಚೆನ್ನಮ್ಮ, ಜೈಸಿಂಗರಾಜ, ಬಾಲನಾಗಮ್ಮ, ಬೊಬ್ಬಲಿ ನಾಗರೆಡ್ಡಿ, ರೇಣುಕ ಎಲ್ಲಮ್ಮ ಈ ಕಥೆಗಳ ಮೂಲಕ ರಾಮಾಯಣ, ಮಹಾಭಾರತ, ಇತಿಹಾಸ, ಚರಿತ್ರೆ, ಸಂಸ್ಕೃತಿ, ಜೀವನಚರಿತ್ರೆ ಇವುಗಳನ್ನು ಉಳಿಸಿ ಬೆಳೆಸಿ ನಾಡಿನ ಆಸ್ತಿಯಾಗಿದ್ದಾರೆ. ಈಗಾಗಲೇ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಇನ್ನು ಜಾನಪದಶ್ರೀ, ಕರ್ನಾಟಕ ರತ್ನ ಪ್ರಶಸ್ತಿಗೂ ಇವರಿಗೆ ಅರ್ಹತೆಯಿದೆ.

ಇವಳಿಗೆ ತಮ್ಮ ಕಲಾಜನಾಂಗದ ಬಗ್ಗೆ ಬಹಳ ಕಳಕಳಿ ಇದೆ. ಈ ಪ್ರಶಸ್ತಿಯಿಂದ ನಿನಗೆ ಏನು ಎನ್ನಿಸುತ್ತದೆ ಎಂದು ಕೇಳಿದರೆ, ಈ ಪ್ರಶಸ್ತಿ ನನ್ನ ಮತ್ತು ನಮ್ಮ ಜನರ ಕಲೆಯನ್ನು ಉಳಿಸಿಬೆಳೆಸಬಲ್ಲುದೇ ಮತ್ತು ನನಗೆ ನಮ್ಮಂತಹ ಕಲೆಗಾರರಿಗೆ ಒಂದ್ಹೊತ್ತು ಊಟ ಹಾಕಬಲ್ಲುದೇ ಎಂದು ಹೇಳುತ್ತಾಳೆ.

೩. ಸಂಕಲ್ಲೋಳು ಪ್ರತಾಪ್

ಸಂಕಲ್ಲೋಳ್ಳು ಪ್ರತಾಪ್ ಇವರು ಮುಳ್ಳಲ್ಲಿ ಹುಟ್ಟಿದ ಅಪರೂಪವಾಗಿ ಅರಳಿದ ಕಲಾಕುಸುಮ. ಗುಲಾಬಿಯಂತೆ ಅರಳಿ ನಾಡಿಗೆ ಒಳ್ಳೆಯ ಕಲೆಯನ್ನು ನೀಡುವಂತಹ ಕಲೆಗಾರರಾಗಿದ್ದಾರೆ. ಇವರು ಮೂಲ ಸಿರುಗುಪ್ಪ, ತೆಕ್ಕಲಕೋಟೆಯಿಂದ ವಲಸೆ ಹೋಗಿ ಬೆಳಗಾವಿ ಜಿಲ್ಲೆ ಅನಗೋಳದಲ್ಲಿ ವಾಸವಾಗಿದ್ದಾರೆ.

ಇವರ ಸಮುದಾಯದಲ್ಲಿ ಪ್ರಥಮ ಚಿತ್ರಕಲಾ ಕಲಾವಿದರಾಗಿದ್ದಾರೆ. ಡಿ.ಎಂ.ಸಿ, ಎ.ಎಂ, ಜಿ.ಡಿ ಚಿತ್ರಕಲಾ ಪದವಿ ಪರೀಕ್ಷೆಯಲ್ಲಿ ಮೂರು ವರ್ಷ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಈಗ ಉಮಾ ಕಲಾಮಂದಿರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ರಾಷ್ಟ್ರೀಯ ಮಟ್ಟದ ಟಿ.ಎಸ್. ಮೆಹ್ತಾ ಪ್ರಶಸ್ತಿ, ಅಂತರಾಷ್ಟ್ರೀಯ ಮಟ್ಟದ, ದ ಬೆಟರ್ ಸ್ಟೇಟಸ್ ಆಪ್ ಟಿ.ಪಿ. ಅಕ್ಕಿ ರಾಜ್ಯಮಟ್ಟದ ಪುರಸ್ಕಾರವು ಇವರಿಗೆ ದೊರೆತಿದೆ.

ಕರ್ನಾಟಕ ಸರ್ಕಾರದ ಪಠ್ಯಪುಸ್ತಕಗಳಿಗೆ ರಕ್ಷಾಪುಟ ವಿನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಹಿತ್ಯ ಸಮ್ಮೇಳನಗಳಲ್ಲಿ ಪುಸ್ತಕಗಳಿಗೆ, ಸಂಪಾದಕೀಯ ಮಂಡಳಿಗಳಿಗೆ ವಿನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಬೆಳಗಾವಿ, ಬೆಂಗಳೂರು, ಧಾರವಾಡ, ಅಥಣಿಗಳಲ್ಲಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ.


ಛಾಯಾಚಿತ್ರಗಳು



ಭಸ್ಮಾಸುರನ ವೇಷದಲ್ಲಿ ಸಣ್ಣರಾಮಣ್ಣ



ಬಾಯಲ್ಲಿ ಕತ್ತಿ ಸುಚ್ಚಿಕೊಂಡಿರುವ ಬೇತಾಳನ ವೇಷ



ರಾಜಕೀಯ ನಾಯಕರೊಂದಿಗೆ ವೇಷಗಾರರು